
ನನ್ನ ಸಮಕಾಲೀನರು

ಮೋ. ಕ. ಗಾಂಧೀ

ಂಧೀ ಸ್ಮಾರಕ ನಿಧಿ
ಕರ್ನಾಟಕ ಶಾಖೆ
೧೯೭೦



“ ಮಾ ವಿದ್ವಿಷಾವಹೈ ”

(ಡಿ. ಆರ್. ಡಿ. ವಾಡಿಯಾ ಕೃಪೆಯಿಂ

ಗಾಂಧೀ ಗ್ರಂಥಮಾಲೆ–೧೪

ನನ್ನ ಸಮಕಾಲೀನರು

ಮೋ. ಕ. ಗಾಂಧೀ

ಗಾಂಧೀ ಸ್ಮಾರಕ ನಿಧಿ
ಕರ್ನಾಟಕ ಶಾಖೆ
೧೯೬೦

ಪ್ರಕಾಶಕರು :
ಗಾಂಧೀ ಸ್ಮಾರಕ ನಿಧಿಯ ಕರ್ನಾಟಕ ಶಾಖೆಯ ಪರವಾಗಿ
ಎಂ. ಯಾಮುನಾಚಾರ್ಯ, ಪ್ರಧಾನ ಸಂಪಾದಕರು,
ಗಾಂಧೀ ಗ್ರಂಥಮಾಲೆಯ ಸಂಪಾದಕ ಮಂಡಲಿ
೧೬೨, ರಮಾವಿಲಾಸ ರಸ್ತೆ,
ಮೈಸೂರು.

(ನವಜೀವನ ಟ್ರಸ್ಟ್, ಅಹಮದಾಬಾದ್-ಇವರ ಅನುಮತಿಯ ಕೃಪೆಯಿಂದ.)

ಬೆಲೆ :

ಸಾಧಾರಣ ಪ್ರತಿ : ರೂ. ೨-೨೫
ಉತ್ತಮ ಪ್ರತಿ : ರೂ. ೩

ಮುದ್ರಕರು :
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಮೈಸೂರು.

Works of Gandhiji in Kannada : 13

NANNA SAMAKĀLĪNARU

(My Contemporaries)

M. K. Gandhi

GANDHI SMARAKA NIDHI
KARNATAKA SHAKHA
1960

Price : **Ord. Edn : Rs. 2-25**
Calico **Edn : Rs. 3**

PUBLISHER'S NOTE

We are presenting to our readers the Thirteenth Volume of our series entitled 'NANNA SAMAKĀLĪNARU'—'My Contemporaries.' It consists of two parts.

The first part deals with the personal impressions that Gandhiji was able to form of his numerous contemporaries—men and women of India and abroad—with whom he had contacts both in private and public life.

A great many of the selections included in the book are Obituaries that Gandhiji contributed to the columns of *Young India* and *Harijan*, as and when duty called on him to do so as a friend, national worker and kindred spirit. Some of them are speeches that he delivered on relevant occasions. There are also here references that he has made to some individuals yet living, which were intended to introduce them to the reader or audience as the situation demanded.

The sketches are unique in themselves in as much as they reflect the transparent sincerity and truthfulness of Gandhiji as well as the proportion and the balance of judgment, unprejudiced and untainted by personal likes and dislikes. They are thus remarkably objective in their assessment of persons. They have the perennial Gandhian touch about them, unparalleled and unsurpassed for their courtesy, gentleness and magnanimity. They serve as model pen-pictures which can well rouse the envy of any literary artist.

Part two deals with a few incidents relating to the lives of Gandhiji and some of his contemporaries as co-workers in the National cause. They throw a flood of light on the intimacy and the steadfastness which governed their mutual relationship, rendered radiant by the imperishable silken thread of Gandhiji's own charming personality.

It is hoped that the two parts put together will give the reader an illuminating picture of Gandhiji's personality, mind and thought.

The translation into Kannada is done by Sri Priyavrata, Editor, Kannada ' Bhoodan ' Weekly.

The beauty and the uselfulness of the volume are enhanced by the ' Perspective ' contributed to it by Sri K. Sampathgiri Rao, a member of the Editorial Committee, himself a contemporary of Gandhiji besides being an educationist of renown and a veteran Gandhian Scholar. He has also contributed a brief note to this volume introducing some of the personalities, to whom reference is made in the course of the book.

M. YAMUNACHARYA
Chief Editor,
Works of Gandhiji in Kannada,
Mysore - 1

Published by Chief Editor, Works of Gandhiji in Kannada, 162, Ramavilasa Road, Mysore, for Gandhi Smarak Nidhi, Karnataka Shakha.

ಕನ್ನಡದಲ್ಲಿ ಗಾಂಧೀ ಗ್ರಂಥಗಳು

ವಿಶ್ವದ ಎಲ್ಲ ಭಾಷೆಗಳಲ್ಲಿಯೂ ಗಾಂಧೀಜೀಯವರ ವಿಚಾರಗಳ ಪ್ರಚಾರ ಮಾಡುವುದು ಗಾಂಧೀ ಸ್ಮಾರಕ ನಿಧಿಯ ಮುಖ್ಯ ಉದ್ದೇಶಗಳಲ್ಲಿ ಒಂದು. ಕರ್ನಾಟಕಕ್ಕೆ ಹಾಗೂ ಕನ್ನಡಿಗರಿಗೆ ಅತೀವ ಮಹತ್ವದ ಗಾಂಧೀ ವಿಚಾರಗಳ ಪರಿಚಯ ಮಾಡಿಕೊಡುವುದು ಈಗ ಕೈಗೊಂಡ ಈ ಯೋಜನೆಯ ಗುರಿಯಾಗಿದೆ.

ಕರ್ನಾಟಕದ ಹಲವಾರು ಸಾಹಿತಿಗಳು, ಲೇಖಕರು, ಗಾಂಧೀಜೀಯವರ ಬರಹಗಳಲ್ಲಿ ಕೆಲವನ್ನು ಆಗಲೇ ಅನುವಾದಿಸಿ ಪ್ರಕಟಿಸಿದ್ದಾರೆ. ಸಾಧ್ಯವಾದಷ್ಟು ಈಗಲೇ ಪ್ರಕಟವಾಗಿರುವ ಅನುವಾದಗಳನ್ನು ಆವಶ್ಯಕವಿದ್ದಲ್ಲಿ ಪರಿಷ್ಕರಿಸಿ ಅವುಗಳನ್ನು ಈ ಗಾಂಧೀ ಗ್ರಂಥಮಾಲೆಯಲ್ಲಿ ಪೋಣಿಸುವ ಪ್ರಯತ್ನ ನಡೆದಿದೆ. ಗಾಂಧೀಜೀಯವರ ಮುಖ್ಯ ಹಾಗೂ ವಿವಿಧ ವಿಚಾರಗಳ ಪರಿಚಯವನ್ನು ಮಾಡಿಕೊಡಲು ಸುಮಾರು ಇಪ್ಪತ್ತು ಸಂಪುಟಗಳು ಸಿದ್ಧವಾಗುತ್ತಲಿವೆ.

ಗಾಂಧೀಜೀಯವರ ಎಲ್ಲ ಬರಹಗಳನ್ನು ಸಂಪೂರ್ಣವಾಗಿ ಅನುವಾದಿಸುವುದು ನಮ್ಮ ಉದ್ದೇಶವಲ್ಲ. ಈ ನಮ್ಮ ಯೋಜನೆಯ ಉದ್ದೇಶ ಗಾಂಧೀಜೀಯವರ ಪ್ರಧಾನವಾದ ಅಭಿಪ್ರಾಯಗಳನ್ನು ಸಮಂಜಸವಾದ ರೀತಿಯಲ್ಲಿ ಕೂಡಿಸಿ ಮುಖ್ಯವಾದ ಶೀರ್ಷಿಕೆಗಳ ಅಡಿಯಲ್ಲಿ ಅವನ್ನು ಅಳವಡಿಸಿ ಕನ್ನಡಿಸಿ ಪ್ರಕಟಮಾಡುವುದಾಗಿದೆ. ಗಾಂಧೀಜೀ ಪುಸ್ತಕರೂಪವಾಗಿಯೇ ಬರೆದ ಗ್ರಂಥಗಳನ್ನು ಅವು ಇರುವಂತೆ ಅಥವಾ ಆವಶ್ಯಕವಾದರೆ ಸಂಗ್ರಹಿಸಿ ಅನುವಾದ ಮಾಡಲಾಗುತ್ತದೆ. ಮತ್ತೆ ಕೆಲವು ಗ್ರಂಥಗಳು ಗಾಂಧೀಜೀ ಅವರ ಅಭಿಪ್ರಾಯಗಳನ್ನು 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳಿಂದ ಆಯ್ದ ಲೇಖನಗಳ ಸಂಕಲನಗಳಾಗಿವೆ. ಸಂಕಲನವು ಸ್ವಲ್ಪ ನಿಧಾನವಾದ ಕೆಲಸ; ಕಷ್ಟವಾದ ಕೆಲಸವೂ ಹೌದು. ಎಷ್ಟು ಪ್ರಯತ್ನ ಮಾಡಿದರೂ ವಿಷಯಪ್ರತಿಪಾದನೆಯ ಪುನರಾವರ್ತನೆಯನ್ನು ತಪ್ಪಿಸುವುದು ಕಷ್ಟ. ನಮ್ಮ ಅನುವಾದಕರು ಕರ್ನಾಟಕದ ನುರಿತ

ಸಾಹಿತಿಗಳು ಮತ್ತು ಗಾಂಧೀ ಮಾರ್ಗದಲ್ಲಿ ಶ್ರದ್ಧೆಯುಳ್ಳವರು. ಆದಷ್ಟು ಸಮರ್ಪಕವಾಗಿ ಭಾಷಾಂತರ ಕೆಲಸವನ್ನು ಮಾಡುತ್ತಿದ್ದಾರೆ. ಗಾಂಧೀಜೀಯವರ ಸರಳ ಮತ್ತು ರಸವತ್ತಾದ ಬರಹಗಳನ್ನು ಭಾಷಾಂತರಿಸುವುದು ಎಷ್ಟು ಕಷ್ಟವೆಂಬುದನ್ನು ಹೇಳಬೇಕಾಗಿಲ್ಲ. ಆದರೂ ಈ ಅನುವಾದಕರು ಗಾಂಧೀಜೀಯವರ ಮನೋಗತವನ್ನು ಅರಿತವರು ಆಗಿರುವುದರಿಂದ ಈ ಅನುವಾದಗಳು ಜನಪ್ರಿಯವಾಗಬಲ್ಲವೆಂದು ಆಶಿಸಲಾಗಿದೆ.

ಈ ಸಂಪಾದಕ ಸಮಿತಿಯಿಂದ ಪ್ರಕಟಿಸಲ್ಪಡುವ ಗ್ರಂಥಗಳು ಬಹಳ ಸುಲಭ ಬೆಲೆಗೆ ಪಾಠಕರ ಕೈಸೇರಬೇಕೆಂಬ ಉದ್ದೇಶದಿಂದ ಸಾಮಾನ್ಯ ಪ್ರತಿಯ ಬೆಲೆ ಅತಿ ಕಡಿಮೆ ಇಡಲಾಗಿದೆ. ಇದರೊಡನೆ ಉತ್ತಮ ಪ್ರತಿಯೂ ಸಹ ಮಾರಾಟಕ್ಕೆ ಇರುವುದಲ್ಲದೆ ಅದರ ಬೆಲೆಯೂ ಕೂಡ ಬಹಳ ಹೆಚ್ಚು ಇಡಲಾಗಿಲ್ಲ.

ಈ ಗ್ರಂಥಮಾಲೆ ಕನ್ನಡನಾಡಿನ ಜನಕ್ಕೆ ಗಾಂಧೀಸಾಹಿತ್ಯವನ್ನು ಒದಗಿಸಿಕೊಡುವ ಕೆಲಸದಲ್ಲಿ ಕೃತಕೃತ್ಯತೆಯನ್ನು ಪಡೆಯಬಲ್ಲದೆಂದು ಭಾವಿಸಲಾಗಿದೆ. ಗಾಂಧೀಜೀಯವರ ಆಧ್ಯಾತ್ಮಿಕ, ಧಾರ್ಮಿಕ, ಸಮಾಜಿಕ, ಆರ್ಥಿಕ, ರಾಜಕೀಯ ಅಭಿಪ್ರಾಯಗಳು ಈ ಗ್ರಂಥಗಳ ಮೂಲಕ ಜನಸಾಮಾನ್ಯರಲ್ಲಿ ಹರಡಲಿ, ಸಕಲ ಜನರಿಗೆ ಸ್ಫೂರ್ತಿಕೊಟ್ಟು ನವಚೈತನ್ಯವನ್ನು ತುಂಬಲಿ ಎಂದು ಹಾರೈಸಿ ಈ ಗ್ರಂಥಗಳನ್ನು ಜನತಾಜನಾರ್ದನನಿಗೆ ಅರ್ಪಿಸುತಿರುವೆ.

ಗಾಂಧೀ ಸ್ಮಾರಕ ನಿಧಿ
ರಾಜಘಾಟ, ದಿಲ್ಲಿ
೭–೫–೧೯೫೮

ರಂಗನಾಥ ದಿವಾಕರ
ಅಧ್ಯಕ್ಷರು

ನಿವೇದನ

(ಗಾಂಧೀಜೀಯ ಮಾತುಗಳಲ್ಲಿ)

ಅನುವಾದಕರು : '**ಕುವೆಂಪು**'

ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆಂದೂ ನನ್ನ ನಂಬಿಕೆ. ಅದು ಇನ್ನೂ ನನಗೆ ಸಿದ್ಧಿಸಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸತ್ಯದ ಸಮ್ಯಕ್ ದರ್ಶನವೇ ಆತ್ಮ ಸಾಕ್ಷಾತ್ಕಾರ; ಅದೇ ಜೀವನದ ಅಂತಿಮ ಗುರಿ. ಅಂದರೆ ಪರಿಪೂರ್ಣತೆಯ ಸಿದ್ಧಿ. ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ. ಆ ಅರಿವು ನನಗೆ ದುಃಖ ತರುವಷ್ಟೂ ಇದೆ. ಆ ಅರಿವೇ ನನ್ನ ಶಕ್ತಿಯ ಸರ್ವಮೂಲ; ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವ ಬಲ. ೧

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಸತ್ಯವಾಗಿ, ಅತ್ಯಂತ ಅಹಿಂಸಕವಾಗಿ ನಡೆಯಬೇಕೆಂದು ಹೋರಾಡುತ್ತಿದ್ದರೂ, ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ ನಾನು ಒಂದು ಸಾಮಾನ್ಯ ಚೇತನ. ಆ ಯಾತ್ರೆಯೇನೋ ಕ್ಲೇಶಕರವೇ; ಆದರೆ ಆ ಯಾತನೆಯಲ್ಲಿಯೂ ನನಗೆ ಒಂದು ಆನಂದವಿದೆ. ಏರುವ ಒಡೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ. ೨

ದಾರಿ ನನಗೆ ಗೊತ್ತು. ಅದು ನೇರ ಮತ್ತು ಇಕ್ಕಟ್ಟು–ಕತ್ತಿಯ ಅಲಗಿನಂತೆ. ಅದರ ಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ. ಜಾರಿದಾಗಲೆಲ್ಲಾ ಕಣ್ಣೀರಿಡುತ್ತೇನೆ. 'ನ ಮೇ ಭಕ್ತಃ ಪ್ರಣಶ್ಯತಿ' ಎಂಬ ದೇವರ ವಚನದಲ್ಲಿ ನನಗೆ ದೃಢವಾದ ನಂಬಿಕೆಯಿದೆ. ಆದ್ದರಿಂದ ನನ್ನ ದೌರ್ಬಲ್ಯದ ಪರಿಣಾಮವಾಗಿ ಸಾವಿರ ಬಾರಿ ಸೋತರೂ ನಾನೆಂದಿಗೂ ಶ್ರದ್ಧೆಗೆಡುವುದಿಲ್ಲ. ಪ್ರತಿಯಾಗಿ, ಇಂದಲ್ಲ ನಾಳೆ, ಸ್ವತಃ ಸಿದ್ಧವಾಗಿ

ಕೈಗೂಡಲೇಬೇಕಾಗಿರುವ ಇಂದ್ರಿಯಜಯ ಲಭಿಸಿದಂದು, ಬೆಳಕನ್ನು ಕಂಡೇ ಕಾಣುತ್ತೇನೆಂಬುದು ನನ್ನ ವಿಶ್ವಾಸ. [೩]

ಏಕೆಂದರೆ ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುವುದು ನನ್ನ ವಿಶ್ವಾಸ. ಆತ ಪ್ರೇಮಸ್ವರೂಪಿ ; ಆತನೇ ಪರಮಶ್ರೇಯಸ್ಸು. [೪]

ಬಾಲ್ಯದಿಂದಲೂ ನಾನೊಬ್ಬ ಸತ್ಯಾರಾಧಕ ಎಂಬುದು ನನ್ನ ವಿಶ್ವಾಸ. ಅದು ನನ್ನ ಅಂತ್ಯದ ಸಹಜಪ್ರವೃತ್ತಿ. ಉಪಾಸನಾಪೂರ್ವಕವಾದ ಶೋಧನೆಯಿಂದ ಭಗವಂತನೇ ಸತ್ಯ ಎಂಬ ರೂಢಿಯ ನಂಬಿಕೆಯ ಬದಲು ಸತ್ಯವೇ ಭಗವಂತ ಎಂಬ ಸೂತ್ರ ನನಗೆ ಸ್ಫುರಣವಾಯಿತು. ಭಗವಂತನನ್ನು ಪ್ರತ್ಯಕ್ಷವೋ ಎಂಬಂತೆ ಕಾಣಲು ಈ ಸೂತ್ರದಿಂದ ನನಗೆ ಸಾಧ್ಯವಾಗಿದೆ. ನನ್ನ ಚೇತನಸಮಸ್ತವನ್ನೂ ಆತ ವ್ಯಾಪಿಸಿದ್ದಾನೆ, ಎಂಬುದು ನನ್ನ ಅನುಭವ. [೫]

ಭಗವಂತನ ಪ್ರತ್ಯಕ್ಷ ದರ್ಶನದ ಹಂಬಲ ನನ್ನದು. ಭಗವಂತನೇ ಸತ್ಯ ಎಂಬುದನ್ನು ನಾನು ಬಲ್ಲೆ. ನನ್ನ ಪಾಲಿಗೆ ಭಗವಂತನನ್ನು ಕಾಣಲು ಇರುವ ಒಂದೇ ಒಂದು ನಿಶ್ಚಿತ ಮಾರ್ಗವೆಂದರೆ ಅಹಿಂಸೆ, ಪ್ರೇಮ. [೬]

ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ : 'ನನ್ನ ಮೂಲಕವೇ ಅದು ಸಿದ್ಧ' ಎಂದು. ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ : 'ನನ್ನ ಮೂಲಕವೇ ಅದರ ಸಿದ್ಧಿ.' [೭]

ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ನಾನು ಅದಕ್ಕಾಗಿಯೇ ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೆ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲದು, ಭಾರತದ ಬಿಡುಗಡೆಗಾಗಿ ನಾನು ದುಡಿಯುತ್ತಿದ್ದೇನೆ; ಏಕೆಂದರೆ ಭಾರತದಲ್ಲಿ ಬದುಕಿ ಅದರ ಸಂಸ್ಕೃತಿಯನ್ನು ಪಡೆದಿರುವುದರಿಂದ ಅದರ ಸೇವೆಗೆ ನಾನು ಅತ್ಯಂತ ಅರ್ಹ ಎಂಬುದನ್ನು ನನ್ನ ಸೇವೆಯ ಮೊದಲು ಹಕ್ಕು ಭಾರತದ್ದು ಎಂಬುದನ್ನು ನನ್ನ ಸ್ವದೇಶೀ

ನನಗೆ ಕಲಿಸಿದೆ. ನನ್ನ ದೇಶಭಕ್ತಿ ಭಾರತಕ್ಕೆ ಮಾತ್ರ ಮೀಸಲಾದುದಲ್ಲ. ಬೇರೆ ಯಾವ ರಾಷ್ಟ್ರದ ಹಿತಕ್ಕೂ ಧಕ್ಕೆಯೊದಗಬಾರದು ಎಂಬುದಷ್ಟೇ ಅಲ್ಲ; ಸಕಲ ರಾಷ್ಟ್ರಗಳಿಗೂ, ಆ ಪದದ ಸಂಪೂರ್ಣಾರ್ಥದಲ್ಲಿ, ಸರ್ವಲಾಭ ಒದಗಬೇಕು ಎಂಬುದೇ ನನ್ನ ಮಾತಿನ ಆಶಯ. ನಾನು ಸಂಕಲ್ಪಿಸುವ ಭಾರತದ ಸ್ವಾತಂತ್ರ್ಯ ಎಂದೆಂದೂ ಲೋಕಹಿತಕಂಟಕವಾಗಲಾರದು.೮

ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸೃಷ್ಟಿಯಲ್ಲಿ ಕ್ಷುದ್ರತಮವಾದುದನ್ನೂ ತನ್ನಂತೆ ಪ್ರೀತಿಸುವುದು ಸಾಧ್ಯವಾಗಲೇಬೇಕು. ಆ ಹಂಬಲವನ್ನು ತುಂಬಿಕೊಂಡವನು ಜೀವನದ ಯಾವ ಕ್ಷೇತ್ರದಿಂದಲೂ ವಿಮುಖನಾಗಲು ಸಾಧ್ಯವಿಲ್ಲ. ನನ್ನ ಸತ್ಯಶ್ರದ್ಧೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ ಎಳೆದುತಂದಿರುವುದು ಈ ಕಾರಣ ದಿಂದಲೇ. ಅಧ್ಯಾತ್ಮಕ್ಕೂ ರಾಜಕೀಯಕ್ಕೂ ಏನೂ ಸಂಬಂಧವಿಲ್ಲ ಎನ್ನು ವವರಿಗೆ ಅಧ್ಯಾತ್ಮ ಎಂದರೇನು ಎಂಬುದೇ ತಿಳಿಯದೆಂದು ಸ್ವಲ್ಪವೂ ಅಳುಕದೆ, ಆದರೆ ವಿನೀತನಾಗಿ ನಾನು ಹೇಳಬಲ್ಲೆ.೯

ಆತ್ಮಶ್ರೀ ವಿದೂರವಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯ ವಾದ ಕಲಂಕ. ರಾಜಕೀಯ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೋ ಅದು ಅಧ್ಯಾತ್ಮ ಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಣ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೋ ಭಗವಂತನೆಂದರೂ ಒಂದೇ, ಸತ್ಯವೆಂದರೂ ಒಂದೇ. ಭಗವಂತನು ಅಸತ್ಯದ ಮೂರ್ತಿಯೆಂದೂ ಹಿಂಸೆಯ ಮೂರ್ತಿಯೆಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯ ದಲ್ಲಿಯೂ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ: ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ–ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ. ಸತ್ಯವನ್ನು ಬಲಿ ಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊಂದು ವುದೇ ಹೆಚ್ಚು ಲೇಸೆಂಬುದು ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ

ಸಮಾಜ ಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ರಾಜಕೀಯ ಕಾರ್ಯವು ಪರಿಗಣಿತವಾಗಲೇಬೇಕು.

ಮಾನವನ ಮನಸ್ಸಾಗಲಿ ಸಮಾಜವಾಗಲಿ ರಾಜಕೀಯ, ಸಮಾಜಿಕ, ಧಾರ್ಮಿಕ ಎಂಬ ಪ್ರತ್ಯೇಕ ವಿಭಾಗಗಳಾಗಿ ವಿಂಗಡಣೆಯಾಗಿಲ್ಲ ಎಂಬುದು ನನ್ನ ವಿಶ್ವಾಸ. ಅವುಗಳ ನಡುವೆ ಪ್ರತಿಕ್ರಿಯೆ ಇದ್ದೇ ತೀರುತ್ತದೆ. ೧೦

ಆತ್ಮಶ್ರೀ ನಿಯಮಕ್ಕೆ ತನ್ನದೇ ಆದ ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ. ಬದಲು, ಅದು ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕವಾಗಿ ಮಾತ್ರವೇ ವ್ಯಕ್ತಗೊಳ್ಳುತ್ತದೆ. ಹೀಗೆ ಅದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳ ಮೇಲೂ ಪರಿಣಾಮವನ್ನು ಉಂಟುಮಾಡುತ್ತದೆ. ೧೧

ಮಾನವ ಜೀವಿತದ ಪರಮೋದ್ದೇಶ ಭಗವತ್‌ಸಾಕ್ಷಾತ್ಕಾರ. ಅವನ ಕರ್ಮಕ್ರಿಯೆಗಳೇನೇ ಇರಲಿ, ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲವೂ ಈ ಈಶ್ವರಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಿರಬೇಕು. ಮಾನವ ಸೇವೆಯು ಈ ಸಾಧನೆಯ ಪ್ರಪ್ರಥಮ ಅನಿವಾರ್ಯಾಂಗವಾಗುತ್ತದೆ- ಏಕೆಂದರೆ ಇಷ್ಟೇ : ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೇ ಆತನನ್ನು ಕಂಡು ಅದರಲ್ಲಿಯೇ ಒಂದಾಗಿರುವುದು. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ. ನಾನು ಈ ಸರ್ವದ ಒಂದು ಅಂಶ. ಇತರರನ್ನು ಉಳಿದು ನಾನೊಬ್ಬನೇ ಅದನ್ನು ಪಡೆಯಲಾರೆ. ೧೨

ಈಶ ಸೇವೆ ಅರ್ಥಾತ್ ಮಾನವ ಸೇವೆಯೇ ನನ್ನ ಧರ್ಮ, ನಿಷ್ಕಾಮ ಸೇವೆಯಿಂದ ಸೇವೆ ಸಲ್ಲಿಸುವುದೆಂದರೆ ಇತರರಿಗೆ ನಾವು ಉಪಕಾರಮಾಡಿದ್ದಕ್ಕಿಂತ ನಮ್ಮ ಸಾಲವನ್ನು ನಾವು ತೀರಿಸಿಕೊಂಡು ಕೃತಕೃತ್ಯರಾದಂತೆ. ನಮ್ಮ ಹೊಣೆಯನ್ನು ನಾವೇ ಇಳಿಸಿಕೊಂಡು ನಮ್ಮ ಕರ್ತವ್ಯವನ್ನು ಪರಿಪಾಲಿಸಲುವುದರ ಮೂಲಕ ನಮಗೆ ನಾವೇ ಉಪಕಾರ ಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಒಳ್ಳೆಯವರೆನಿಸಿಕೊಂಡವರು ಮಾತ್ರವಲ್ಲ, ನಾವೆಲ್ಲರೂ ನಮ್ಮ ಸರ್ವ-

ಸಂಪತ್ತನ್ನೂ ಸರ್ವರಿಗಾಗಿ ವಿನಿಯೋಗಿಸಲು ಬದ್ಧರು. ಮೃಗಗಳಿಗಿಂತ ಮಾನವ ಭಿನ್ನ ಎಂದು ತೋರುವುದು ತ್ಯಾಗಧರ್ಮ ಒಂದರಿಂದಲೇ.೧೩

ಮನುಷ್ಯ ಎಷ್ಟರಮಟ್ಟಿಗೆ ಪರಾರ್ಥಕ್ಕಾಗಿ ಶ್ರಮಿಸುತ್ತಾನೆಯೊ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ. ೧೪

ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಲೆಳಸುವುದು ಕೇವಲ ಮಾನವಜೀವಿಗಳೊಂದಿಗೆ ಮಾತ್ರವಲ್ಲ ಸಮಸ್ತ ಜೀವರಾಶಿಯೊಂದಿಗೆ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ. ನಿಮ್ಮನ್ನು ಚಕಿತಗೊಳಿಸಬಹುದಾದ ಈ ಬಯಕೆಗೆ—ನೆಲದ ಮೇಲೆ ಹರಿದಾಡುವ ಕ್ರಿಮಿಕ್ರೀಟಗಳೊಂದಿಗೂ ತಾದಾತ್ಮ್ಯವನ್ನು ಸಾಧಿಸಬೇಕೆನ್ನುವ ಬಯಕೆಗೆ—ಕಾರಣವಿಷ್ಟೆ : ನಾವೆಲ್ಲರೂ ಒಬ್ಬನೇ ಭಗವಂತನಿಂದ ಬಂದವರು ಎಂದು ಹೇಳುತ್ತೇವಲ್ಲ; ಹಾಗಿರುವುದರಿಂದ ಯಾವುದೇ ರೂಪದಲ್ಲಿ ಗೋಚರಿಸಿದರೂ ಮೂಲತಃ ಎಲ್ಲ ಜೀವರಾಶಿಯೂ ಒಂದೇ. ೧೫

ಭಗವಂತನ ಕೇವಲ ಅಖಂಡತೆಯನ್ನು ನಾನು ನಂಬುತ್ತೇನೆ; ಆದುದ ರಿಂದಲೇ ಜನತೆಯ ಅಖಂಡತೆಯಲ್ಲೂ ನನಗೆ ಶ್ರದ್ಧೆಯಿರುವುದು· ಒಬ್ಬನು ಮಾತ್ರ ಅಧ್ಯಾತ್ಮಲಾಭ ಪಡೆದು ಅವನ ಸುತ್ತಣ ಜನರು ತೊಳಲುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ. ಅದ್ವೈತದಲ್ಲಿ ನನಗೆ ಶ್ರದ್ಧೆಯಿದೆ. ತತ್ತ್ವಶಃ ಮಾನವನ ಅಖಂಡತೆಯಲ್ಲಿ, ಹಾಗೆ ನೋಡಿದರೆ ಜೀವಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವುಂಟು. ಆದುದರಿಂದಲೇ ಒಂದು ವ್ಯಕ್ತಿಗೆ ಅಧ್ಯಾತ್ಮಲಾಭವಾದರೆ ಇಡಿಯ ವಿಶ್ವಕ್ಕೆ ಆ ಲಾಭ ಒದಗುತ್ತದೆ. ಒಂದು ವ್ಯಕ್ತಿ ಪತನ ಹೊಂದಿದರೆ ಅಷ್ಟರ ಮಟ್ಟಿಗೆ ಇಡಿಯ ವಿಶ್ವದ ಪತನವೇ ಆಗುತ್ತದೆ ಎಂದು ನಾನು ಭಾವಿಸಿರುವುದು.೧೬

ಈ ಪೃಥ್ವಿಯ ನಶ್ವರ ಸಾಮ್ರಾಜ್ಯದ ಬಯಕೆ ನನಗಿಲ್ಲ. ಮೋಕ್ಷರೂಪ ವಾದ ಅಮರ ಸಾಮ್ರಾಜ್ಯಕ್ಕಾಗಿ ನಾನು ಶ್ರಮಿಸಿದ್ದೇನೆ. ನನ್ನ ಧ್ಯೇಯ ಸಾಧನೆಗಾಗಿ ನಾನು ಗುಹಾನಿವಾಸಿಯಾಗಬೇಕಾಗಿಲ್ಲ. ೧೭

ದೇಶದ, ತನ್ಮೂಲಕ ಮಾನವತೆಯ ಸೇವೆಗಾಗಿ ಎಡಬಿಡದೆ ದುಡಿಯು ವುದೇ ನನ್ನ ಮೋಕ್ಷಪಥ. ಜೀವಸಮಸ್ತದೊಂದಿಗೆ ಅನನ್ಯತೆಯನ್ನು ಸಾಧಿಸು ವುದೇ ನನ್ನ ಬಯಕೆ. ೧೮

ಯಾವ ನೂತನ ಸಿದ್ಧಾಂತಗಳನ್ನೂ ನಾನು ಮಂಡಿಸಿಲ್ಲ. ಅದರ ಬದಲು ಪುರಾತನ ಸಿದ್ಧಾಂತಗಳ ಪುನರ್ನಿರೂಪಣೆಯ ಪ್ರಯತ್ನವೇ ನನ್ನದು. ಅದು ಎಷ್ಟರ ಮಟ್ಟಿಗೆ ಸರಿಯಾಗಿ ಸಾಗಿದೆಯೋ ಹೇಳಲಾರೆ. ಆದರೆ ಅದು ನನ್ನ ಪ್ರಾಮಾಣಿಕವಾದ ನಂಬಿಕೆಯನ್ನು ಪ್ರತಿನಿಧಿಸುತ್ತದೆ. ೧೯

ಗಾಂಧೀಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ; ಅಷ್ಟೆ. ಸತ್ಯ-ಅಹಿಂಸೆ-ಈ ಭಾವಗಳು ಪರ್ವತಗಳಷ್ಟೇ ಪುರಾತನವಾದವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೆ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ ; ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ. ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ-ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ. ೨೦

ನಿಮ್ಮ ಮುಂದೆ ಉದ್ಭವಿಸಿರುವ ಸಮಸ್ಯೆಗಳನ್ನು ನನ್ನ ಹೇಳಿಕೆಗೆ ಅನುಸಾರವಾಗಿ ಎದುರಿಸಬೇಕೆಂಬುದೇ ನನ್ನ ಇಚ್ಛೆ. ಹೀಗೆ ಸತ್ಯ-ಅಹಿಂಸೆಗಳಲ್ಲಿ ನನ್ನ ಶ್ರದ್ಧೆ ವರ್ಧಿಸುತ್ತಲೇ ಇದೆ. ನನ್ನ ಜೀವನದಲ್ಲಿ ಅವುಗಳನ್ನು ಅನುಸರಿಸುತ್ತ ಹೋದಂತೆ ನಾನು ಕೂಡ ಪ್ರತಿಕ್ಷಣವೂ ಬೆಳೆಯುತ್ತಲೇ ಇದ್ದೇನೆ. ಅವುಗಳಲ್ಲಿ ನನಗೆ ಹೊಸ ಅರ್ಥ ಸ್ಫುರಿಸುತ್ತಿದೆ. ದಿನದಿನವೂ ಅವುಗಳನ್ನು ಹೊಸ ಹೊಸ ಬೆಳಕಿನಲ್ಲಿ ಕಂಡು ಹೊಸ ಹೊಸ ಅರ್ಥಗಳನ್ನೂ ಅರಿಯುತ್ತಿದ್ದೇನೆ. ನನ್ನ ಜತೆಜತೆಗೆ ನೀವೂ ಕೂಡ ಬೆಳೆಯಬೇಕು. ನನ್ನ ಅನಂತರ ಏನಾಗುತ್ತದೆ ಎಂಬುದನ್ನು ತಿಳಿಯುವ ಚಿಂತೆ ನನಗಿರಕೂಡದು. ಆದುದರಿಂದ ನನ್ನನ್ನು ಮರೆತುಬಿಡಿ. ನೀವು ಭದ್ರವಾಗಿ ಅಂಟಿಕೊಳ್ಳಬೇಕಾದುದು ನನ್ನ ಹೆಸರಿಗಲ್ಲ, ತತ್ತ್ವಗಳಿಗೆ. ಅದರ ಅಳತೆಗೋಲಿನಿಂದ ನಿಮ್ಮ ಒಂದೊಂದು ಚಟುವಟಿಕೆಯನ್ನೂ ಅಳೆದು ಉದ್ಭವಿಸಬಹುದಾದ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ. ೨೧

ನಿಲ್ಲುವುದು ನನ್ನ ಕೃತಿಯೇ ಹೊರತು, ನನ್ನ ಮಾತೂ ಅಲ್ಲ, ಬರಹವೂ ಅಲ್ಲ. ಇತ್ತೀಚೆಗೆ ನಾನು ಈ ಮಾತನ್ನು ಅನೇಕ ಸಲ ಹೇಳಿದ್ದೇನೆ. ಸಕಲ ಶಾಸ್ತ್ರಗಳೂ ಒಂದು ವೇಳೆ ವಿನಾಶ ಹೊಂದುವುದಾದರೂ ಹಿಂದೂ ಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು; ಆದರೆ ಅದನ್ನು ಅನುಷ್ಠಾನಕ್ಕೆ ತರಲು ಯಾರೊಬ್ಬರೂ ಇರದಿದ್ದರೆ ಆ ಒಂದು ಮಂತ್ರವೂ ನಿರರ್ಥಕ. ಅದರಂತೆಯೆ ನನ್ನ ಮಾತು, ಬರಹಗಳು ಸತ್ಯ. ಅಹಿಂಸೆಯ ಮಹಾತತ್ತ್ವಗಳನ್ನು ರಕ್ತಗತಮಾಡಿಕೊಳ್ಳಲು ನಿಮಗೆ ನೆರವು ನೀಡಿರುವಷ್ಟರಮಟ್ಟಿಗೆ ಮಾತ್ರ ಉಪಯುಕ್ತ. ಅವುಗಳನ್ನು ನೀವು ಹಾಗೆ ರಕ್ತಗತ ಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ. ಒಬ್ಬ ಸತ್ಯಾಗ್ರಹಿಯಾಗಿ ನಾನು ಈ ಒಂದೊಂದು ಮಾತನ್ನೂ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. ೨೨

ಗಾಂಧೀಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶಹೊಂದಲಿ. ಸತ್ಯ-ಅಹಿಂಸೆಗಳು ಅಜರಾಮರ. ಆದರೆ ಗಾಂಧೀಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶ ಯೋಗ್ಯವೇ ನಿಜ. ತಾನು ಗಾಂಧೀಯ ಅನುಯಾಯಿ ಎಂದು ಯಾರೊಬ್ಬನೂ ಹೇಳದಿರಲಿ. ನಾನು ನನ್ನನ್ನು ಅನುಸರಿಸಿದರೆ ಸಾಕು. ಅದರಲ್ಲೂ ನಾನು ಎಂತಹ ಅಸಮರ್ಪಕ ಅನುಯಾಯಿ ಎಂಬುದನ್ನು ನಾನು ಬಲ್ಲೆ; ಯಾವ ತತ್ತ್ವಗಳಿಗಾಗಿ ನಾನು ನಿಂತಿದ್ದೇನೆಯೊ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ. ನೀವು ಅನುಯಾಯಿಗಳಲ್ಲ; ಸಹವಿದ್ಯಾರ್ಥಿಗಳು, ಸಹಯಾತ್ರಿಕರು, ಸಹ-ಅನ್ವೇಷಕರು, ಸಹ-ಉದ್ಯೋಗಿಗಳು. ೨೩

ಸತ್ಯ–ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ತ್ವಗಳನ್ನಾಗಿ ಮಾಡಿಕೊಂಡರೆ ಸಾಲದು; ಸಮಾಜ ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಹೇಗೇ ಆಗಲಿ ಅದಂತೂ ನನ್ನ ಕನಸು. ನನ್ನ ಬದುಕೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೇ, ನನ್ನ ಸಾವೂ ಅದರಲ್ಲಿಯೆ. ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತದೆ. ಆತ್ಮದ ಸ್ವರೂಪವೇ ಅಹಿಂಸೆ ; ಆದುದರಿಂದಲೇ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ

ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ. ೨೪

ನಮ್ಮ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ—ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನೂ ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯಪಥ ಇಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ. ಸತ್ಯವನ್ನು ಕೈಬಿಡ ಬಲ್ಲವನು ತನ್ನ ದೇಶವನ್ನೂ ಕೈಬಿಡಬಲ್ಲ, ಆಪ್ತೇಷ್ಟರನ್ನೂ ಕೈಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆ ಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮ ಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.

ನನ್ನದು ಧರ್ಮಮಾರ್ಗ, ನಾವು ಧರ್ಮಿಗಳು, ಆದುದರಿಂದ ಉಳಿದ ವರಿಗೆ ನಾವು ಶ್ರೇಷ್ಠರು ಎಂಬ ಅಹಂಭಾವ ನಮ್ಮನ್ನು ಆಕ್ರಮಿಸುವ ಭಯ ಯಾವಾಗಲೂ ಇದ್ದೇ ಇದೆ. ಇತರರಿಂದ ನಾನು ನಿರೀಕ್ಷಿಸುವಂತೆ ಸ್ವವಿಮರ್ಶೆಯಲ್ಲಿ ಸತ್ಯದಂತೆಯೇ ನಿಷ್ಠುರವಾಗಿರಲು ನಾನು ಪ್ರಯತ್ನಿಸು ತ್ತೇನೆ. ೨೫

'ಗಾಂಧೀತತ್ತ್ವ' ಎಂದು ಯಾವುದನ್ನು ಕರೆಯುತ್ತಾರೋ ಅದನ್ನು, ಅದರ ಪ್ರಸಾರವಿಧಾನಗಳನ್ನು ವಿಚಾರಿಸೋಣ. ಸತ್ಯ–ಅಹಿಂಸೆಗಳನ್ನು ಕುರಿತು ಪುಸ್ತಕಗಳನ್ನು ಬರೆಯುವುದಕ್ಕಿಂದ ಹೆಚ್ಚಿನ ಪ್ರಮಾಣದಲ್ಲಿ ಸತ್ಯ–ಅಹಿಂಸೆಗಳ ಪ್ರಸಾರ ಸಾಧ್ಯ. ಅವುಗಳನ್ನು ಅನುಷ್ಠಾನಕ್ಕೆ ತಂದರೆ ಅನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ. ಪುಸ್ತಕ ಮತ್ತು ಪತ್ರಿಕೆಗಳ ಪ್ರಕಟಣೆ ಅನಗತ್ಯ ಎಂದು ನಾನು ಹೇಳುತ್ತಿಲ್ಲ. ಅವು ಅನಿವಾರ್ಯವೇನಲ್ಲ ಎಂದಷ್ಟೆ ನನ್ನ ಅಭಿಪ್ರಾಯ. ನಾವು ಸತ್ಯ–ಅಹಿಂಸೆಗಳ ನಿಜವಾದ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾಗಿ ಬೇಕಾದ ಬುದ್ಧಿಶಕ್ತಿ ಯನ್ನು ಭಗವಂತನೇ ನಮಗೆ ದಯಪಾಲಿಸುತ್ತಾನೆ. ಪ್ರತಿಪಕ್ಷದ ದೃಷ್ಟಿ ಕೋನವನ್ನು ಅರ್ಥಮಾಡಿಕೊಳ್ಳುವ ಇಚ್ಛೆ ಅಂತಹ ಶ್ರದ್ಧೆಯ ಪೂರ್ವಾಂಗ

ಯಥಾದರ್ಶನ

ವ್ಯಕ್ತಿಗಳನ್ನು ಕುರಿತು ಬರೆಯುವ ರೇಖಾಚಿತ್ರಗಳನ್ನೊಳಗೊಂಡ ಲಘು ಪ್ರಬಂಧಗಳು ಆಧುನಿಕ ಸಾಹಿತ್ಯದಲ್ಲಿ ಜನಪ್ರಿಯವಾದ ಒಂದು ವಿಶೇಷ ರೀತಿಯ ಲೇಖನ. ಚಿತ್ರಕಾರನು ಕೆಲವೇ ರೇಖೆಗಳಿಂದ ಒಂದು ವ್ಯಕ್ತಿಯ ಚಿತ್ರವನ್ನು ನಿರ್ಮಾಣ ಮಾಡುವಂತೆ, ಲೇಖಕನೂ ಕೆಲವೇ ವಾಕ್ಯಗಳಲ್ಲಿ ವ್ಯಕ್ತಿಯ ವಿಶಿಷ್ಟಗುಣಗಳನ್ನು ಎತ್ತಿ ತೋರಿಸಿ ಆ ವ್ಯಕ್ತಿಯನ್ನು ನಮ್ಮ ಕಣ್ಣಿನ ಮುಂದೆ ತಂದು ನಿಲ್ಲಿಸುವನು. ಇದರಲ್ಲಿ ಸಾಹಿತಿಯ ಮನೋಧರ್ಮವೂ ಎದ್ದು ಕಾಣುವುದು. ಆ ವ್ಯಕ್ತಿಯನ್ನು ಸಾಹಿತಿಯ ಅಂತರಂಗದ ಮೂಲಕ ನಾವು ನೋಡುವಂತಾಗುವುದು. ಉತ್ತಮ ರೇಖಾ ಚಿತ್ರವು-ಚಿತ್ರವಾಗಲಿ, ಲೇಖನವಾಗಲಿ-ಒಂದು ವಿಶಿಷ್ಟ ಕಲಾಕೃತಿಯೇ ಹೌದು.

ಗಾಂಧೀಜೀ ತಮ್ಮ ಸಮಕಾಲೀನರನ್ನು ಕುರಿತು ಬರೆದ ಲಘು ಪ್ರಬಂಧಗಳೂ, ಸಣ್ಣ ಟಿಪ್ಪಣಿಗಳೂ ಇಂತಹ ಉತ್ತಮ ಕಲಾಕೃತಿಗಳಾಗಿ ಪರಿಣಮಿಸಿವೆ. ಆದರೆ ಗಾಂಧೀಜೀ ಅವು ಕಲಾಕೃತಿಗಳಾಗಬೇಕೆಂಬ ಸಾಹಿತ್ಯ ದೃಷ್ಟಿಯಿಂದ ಬರೆಯಲಿಲ್ಲ. ಸಾಹಿತ್ಯವನ್ನು ಜೀವನದ ಒಂದು ವೃತ್ತಿ ಯನ್ನಾಗಿ ಅವರು ಪರಿಗಣಿಸಿರಲಿಲ್ಲ. ಅವರು ತಮ್ಮ ಧ್ಯೇಯ ಪ್ರಸಾರಣೆ ನಡೆಸಿದರು. ಪತ್ರಿಕೋದ್ಯಮ ನಡೆಸಿದರು. ವಾರ ವಾರವೂ ಲೇಖನಗಳನ್ನು ಬರೆದು ಮುಗಿಸುವುದು ಅವರ ಕರ್ತವ್ಯವಾಗಿತ್ತು. ಇದನ್ನು ನಿರ್ವಹಿಸುವಾಗ ತಮ್ಮ ಸಮಕಾಲೀನರನ್ನು ಕುರಿತು ಸಂದರ್ಭಕ್ಕನುಗುಣವಾಗಿ ಬರೆದವು ಕೆಲವು; ಕಣ್ಮರೆಯಾದವರ ವಿಷಯದಲ್ಲಿ ಅವರು ಅರ್ಪಿಸಿದ ಬಾಷ್ಪಾಂಜಲಿ ಹಲವು; ಮತ್ತೆ ಯಾವುದೋ ಒಂದು ವಿಶೇಷ ಸಂಗತಿಯನ್ನೋ ಘಟನೆ ಯನ್ನೋ ವಿಮರ್ಶಿಸುತ್ತ ಪ್ರಾಸಂಗಿಕವಾಗಿ ವ್ಯಕ್ತಿಗಳನ್ನು ಕುರಿತು ಅವರು ಬರೆದ ಮಾತುಗಳು ಕೆಲವು. ಆದರೆ ಪರಿಣಾಮದಲ್ಲಿ ಅವು ನುರಿತ ಸಾಹಿತಿ ಉದ್ದೇಶ ಪೂರ್ವಕವಾಗಿ ರಚಿಸುವ ಕಲಾಕೃತಿಗಳ ಮಟ್ಟಕ್ಕೇರುವಷ್ಟು ಹೃದ ಯಂಗಮವೂ ಸ್ವಾರಸ್ಯವೂ ಆಗಿವೆ.

ಗಾಂಧೀಜೀ ಎಷ್ಟು ಮಿತಭಾಷಿಗಳಾಗಿದ್ದರೋ ಅಷ್ಟೇ ಮಿತಲೇಖಕರೂ ಆಗಿದ್ದರು. ತಮ್ಮ ಬರೆಹವನ್ನು ಪದೇ ಪದೇ ತಿದ್ದಿ ಆದಷ್ಟು ಕಡಮೆ ಶಬ್ದಗಳನ್ನು ಉಪಯೋಗಿಸುವುದೇ ಅವರ ಅಭ್ಯಾಸವಾಗಿತ್ತು. ಇದು ಅವರ ಸಂಯಮದ ಒಂದು ನಿದರ್ಶನ; ಬರೆಯುವ ಪ್ರತಿಯೊಂದು ಶಬ್ದ-ಸೂಕ್ತವೂ, ಸಾರ್ಥಕವೂ, ಸತ್ಯಗರ್ಭಿತವೂ ಆಗಿರಬೇಕೆಂದು ಅವರು ಪ್ರಯತ್ನ ಮಾಡಿದರು. ಈ ರೇಖಾ ಚಿತ್ರಗಳು ಉತ್ತಮ ಕೃತಿಗಳಾದುದಕ್ಕೆ ಈ ಶಬ್ದ ಮಿತಿ ಒಂದು ಕಾರಣವೆನ್ನಬಹುದು.

ಈ ಗ್ರಂಥದಲ್ಲಿ ಗಾಂಧೀಜೀ ತಮ್ಮ ಕುಟುಂಬಕ್ಕೆ ಸೇರಿದವರ ಬಗೆಗೆ ಹಾಗೂ ನಿಕಟ ವರ್ತಿಗಳಾದವರ ಬಗೆಗೆ ಬರೆದ ಕೆಲವು ಲೇಖನಗಳಿವೆ. ಅವರನ್ನು ವಿರೋಧಿಸುತ್ತಿದ್ದವರ ಬಗೆಗೂ ಬರೆದ ಲೇಖನಗಳಿವೆ. ಭಾರತ ದೇಶದ ಮತ್ತು ಅನ್ಯದೇಶಗಳ ಪ್ರಸಿದ್ಧರಾದ ವ್ಯಕ್ತಿಗಳನ್ನು ಕುರಿತು ಬರೆದ ಕೆಲವು ಲೇಖನಗಳಿವೆ. ಅಂತೆಯೇ ಪ್ರಸಿದ್ಧರಲ್ಲದ ಸಾಮಾನ್ಯ ಕಾರ್ಯಕರ್ತರ ಬಗೆಗೂ ಬರೆದ ಕೆಲವು ಲೇಖನಗಳಿವೆ. ಇವುಗಳಲ್ಲಿ ಗಾಂಧೀಜೀಯ ಸಮದರ್ಶನವನ್ನು ಕಾಣಬಹುದು. ಸಮಾನವಾದ ಆಕ್ಕರೆಯಿಂದಲೂ ಸಹೃದಯತೆಯಿಂದಲೂ ಎಲ್ಲರನ್ನು ಕುರಿತೂ ಬರೆದಿದ್ದಾರೆ. ಯಾರ ವಿಷಯದಲ್ಲಿಯೂ ದ್ವೇಷವನ್ನು ಸಾಧಿಸಬಾರದೆಂದು ಗಾಂಧೀಜೀ ಬಗೆದಿದ್ದರು. ವ್ಯಕ್ತಿಯ ದೋಷದ ವಿಚಾರದಲ್ಲಿ ಅಸಹನೆಯೇ ಹೊರತು ವ್ಯಕ್ತಿಯ ವಿಚಾರದಲ್ಲಿ ಅಲ್ಲ. ಇತರರು ಅವರನ್ನು ಶತ್ರುವೆಂದು ಭಾವಿಸಿದರೂ ಗಾಂಧೀಜೀ ಯಾರನ್ನೂ ಶತ್ರುವೆಂದು ಭಾವಿಸಿರಲಿಲ್ಲ. 'ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ' ಎಂಬ ಗೀತಾವಾಕ್ಯವು ಅವರಿಗೆ ಅನ್ವಯಿಸುವಂತಹುದಾಗಿತ್ತು. ಅವರು 'ಅಜಾತಶತ್ರು' ಗಳಾಗಿದ್ದರು. ಈ ಪರಮ ಸಹಿಷ್ಣುತೆಗೂ, ಗುಣೈಕ ಪಕ್ಷಪಾತಕ್ಕೂ ಈ ಲೇಖನಗಳು ಉತ್ತಮ ನಿದರ್ಶನಗಳಾಗಿವೆ. 'ಸತ್ಯಂ ಬ್ರೂಯತ್, ಪ್ರಿಯಂ ಬ್ರೂಯತ್' ಎನ್ನುವ ಪ್ರಾಚೀನ ಕಾಲದ ಆದೇಶವನ್ನು ಗಾಂಧೀಜೀ ಪಾಲಿಸಿದ ಬಗೆ ನಮ್ಮ ಮನನಕ್ಕೆ ಯೋಗ್ಯವಾಗಿದೆ.

ಗಾಂಧೀಜೀ ಸತ್ಯನಿಷ್ಠರು, ವ್ರತಜೀವಿಗಳು, ಸಾಧಕವರೇಣ್ಯರು. ಆದರೆ ಪ್ರಾಪಂಚಿಕ ವ್ಯವಹಾರಗಳೊಂದಿಗೆ ಬೆರೆತೇ ತಮ್ಮ ಧ್ಯೇಯವನ್ನು

ಸಾಧಿಸಿದರು. ಅವರು ನಿವೃತ್ತಿ ಮಾರ್ಗವನ್ನು ಅನುಸರಿಸಲಿಲ್ಲ. ಪ್ರವೃತ್ತಿಯಲ್ಲಿಯೇ ನಿವೃತ್ತಿಯನ್ನು ಕಂಡುಕೊಂಡರು. ಸಮಾಜದ ಮಧ್ಯೆ ಜೀವಿಸುತ್ತ, ಅನೇಕ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿ ಆಧ್ಯಾತ್ಮಿಕ ಸಾಧನೆಯನ್ನೂ ಮುಂದುವರಿಸುವುದು ಅತಿ ಕಠಿಣವಾದ ಮಾರ್ಗ. ಧ್ಯೇಯ ಸಾಧನೆಗಾಗಿ ಜೀವನವನ್ನು ನಡೆಸುವವರು ಕೆಲವರ ಮೈತ್ರಿಯನ್ನೂ, ಹಲವರ ವಿರೋಧವನ್ನೋ ಔದಾಸೀನ್ಯವನ್ನೋ ಅನುಭವಿಸಬೇಕಾಗುತ್ತದೆ. ಗಾಂಧೀಜೀಯವರ ಜೀವನ ಪ್ರಕ್ಷುಬ್ಧ ವಾತಾವರಣಮಯವಾಗಿದ್ದರೂ ಅವರು ಶಾಂತಚಿತ್ತರಾಗಿರುತ್ತಿದ್ದರು; ಸ್ಥಿತಪ್ರಜ್ಞರಾಗಲು ಸಾತತ್ಯಯೋಗ ನಡೆಸಿದರು.

ಅನೇಕ ವೇಳೆ ಸುತ್ತಮುತ್ತಲಿನವರೊಂದಿಗೂ ಘರ್ಷಣೆಗಳು ಆಗುತ್ತಿದ್ದುವು. ಆದರೂ ಅವರು ತಮ್ಮ ಗುರಿಯನ್ನು ಮರೆಯದೆ, ಮನಗೆಡದೆ, ಧೀರವೃತ್ತಿಯಿಂದ ಮುಂದೆ ಸಾಗುತ್ತಿದ್ದರು. ಅಹಿಂಸಾವ್ರತಪಾಲಕರಾಗಿ ಘರ್ಷಣೆಗಳ ನಿವಾರಣೆಗೆ ಯತ್ನಿಸುತ್ತಿದ್ದರು. ಇದೊಂದು ಅವರ ಜೀವನ ಕಲೆಯೆಂದೇ ಹೇಳಬೇಕು. ಅವರು ಈ ಜೀವನಕಲೆಯನ್ನು ಸ್ವತಃ ಅನುಷ್ಠಾನ ಮಾಡಿ ಇತರರಿಗೆ ಮಾರ್ಗದರ್ಶಕರಾದರು. ಅವರ ಜೀವನ ನಮ್ರತೆಯ ಹಾಗೂ ಸಹೃದಯತೆಯ ಪ್ರತೀಕವಾಗಿ ಇದ್ದುದರಿಂದ, ಅಸಾಧಾರಣ ಪ್ರಭಾವವನ್ನು ಬೀರಿದರು. ತಮ್ಮ ಸಮಕಾಲೀನರೊಂದಿಗೆ ಅವರು ವ್ಯವಹರಿಸಿದ ರೀತಿ ಅವರ ಸಮಚಿತ್ತಕ್ಕೂ ಅವರ ಜೀವನ ಕಲೆಗೂ ಉತ್ತಮ ನಿದರ್ಶನವಾಗಿದೆ. ಈ ದೃಷ್ಟಿಯಿಂದಲೂ ಈ ಲೇಖನ ಸಂಗ್ರಹ ನಮ್ಮ ಶ್ರದ್ಧಾಪೂರ್ವಕ ಅಧ್ಯಯನಕ್ಕೆ ಯೋಗ್ಯವಾಗಿದೆ.

14–4–61

ಕೆ. ಸಂಪದ್ಗಿರಿರಾವ್.
ಸದಸ್ಯ, ಸಂಪಾದಕೀಯ ಮಂಡಲಿ,
ಗಾಂಧೀ ಗ್ರಂಥಮಾಲೆ.

ಸಂಪಾದಕೀಯ

"ನನ್ನ ಸಮಕಾಲೀನರು' ಎಂಬ ಹೆಸರಿನ ನಮ್ಮ ಗ್ರಂಥಮಾಲೆಯ ಹದಿಮೂರನೆಯ ಸಂಪುಟವನ್ನು ಇದೀಗ ವಾಚಕರಿಗೆ ಸಮರ್ಪಿಸುತ್ತಿದ್ದೇವೆ. ಈ ಸಂಪುಟ ಎರಡು ಭಾಗಗಳಿಂದ ಕೂಡಿದೆ.

ಗಾಂಧೀಜೀಯವರ ವಿಸ್ತಾರವಾದ ಬಾಳಿನಲ್ಲಿ ಅವರ ಸಮಕಾಲೀನ ರಾಗಿ ಅಸಂಖ್ಯ ಭಾರತೀಯರೂ, ವಿದೇಶೀಯರೂ ಸಂಸರ್ಗ ಹೊಂದಿದ್ದರು. ಇವರಲ್ಲಿ ಬಹುಮಂದಿಯೊಡನೆ ಆತ್ಮೀಯವಾಗಿಯೂ ಸಾರ್ವಜನಿಕ ಜೀವನದ ಲ್ಲಿಯೂ ಸಂಬಂಧ ಹೊಂದಿದ್ದರು ಗಾಂಧೀಜೀ. ಇವರುಗಳ ಬಗೆಗೆ ಸಂದ ರ್ಭೋಚಿತವಾಗಿ ಅವರು ಆಡಿದ, ಬರೆದ, ನುಡಿಚಿತ್ರಗಳನ್ನು ಮೊದಲನೆಯ ಭಾಗದಲ್ಲಿ ಕಾಣಬಹುದು. ಕೆಲವು, ಮೃತಪಟ್ಟವರ ಸಂಕ್ಷಿಪ್ತ ಜೀವನದ ಚಿತ್ರವಾದರೆ ಮತ್ತೆ ಕೆಲವು, ಆಯಾ ವ್ಯಕ್ತಿಗಳನ್ನು ಯಾವುದೋ ಪ್ರಮುಖ ಸಂದರ್ಭದಲ್ಲಿ ಪರಿಚಯ ಮಾಡಿಕೊಟ್ಟ ಲೇಖನಗಳೋ ಭಾಷಣಗಳೋ ಆಗಿವೆ. ಗೆಳೆಯನಾಗಿ, ರಾಷ್ಟ್ರೀಯ ಕಾರ್ಯಕರ್ತನಾಗಿ, ಸಾದೃಶ್ಯ ಮನೋ ಭಾವವುಳ್ಳವನಾಗಿ ಪವಿತ್ರ ಕರ್ತವ್ಯ ನಿರ್ವಹಿಸಬೇಕಾದ ದೃಷ್ಟಿಯಿಂದ ಅವರು ವ್ಯಕ್ತಪಡಿಸಿದ ಭಾವ ಮೌಕ್ತಿಕಗಳು ಇವು.

ಈ ನುಡಿಚಿತ್ರಗಳು ವೈಶಿಷ್ಟ್ಯದಿಂದ ಕೂಡಿವೆ; ಇವು ಗಾಂಧೀಜೀ ಯವರ ಸ್ಫಟಿಕದಂತೆ ಸ್ಪಷ್ಟವಾದ ವಿಶ್ವಾಸವನ್ನೂ ಸತ್ಯಸಂಧತೆಯನ್ನೂ ಎತ್ತಿ ತೋರಿಸುವುವಲ್ಲದೆ ಯಾವ ಬಗೆಯ ರಾಗದ್ವೇಷಗಳಿಗೂ ಗುರಿಯಾಗದೆ ಮುಕ್ತಬುದ್ಧಿಯಿಂದ ಚಿತ್ರಿಸುವ ಸಮತಾ ಮನೋವೃತ್ತಿಯನ್ನೂ ವ್ಯಕ್ತ ಪಡಿಸುತ್ತವೆ; ಅಪೂರ್ವ ವಾಸ್ತವಿಕತೆಯಿಂದ ಕೂಡಿವೆ; ಗಾಂಧೀಜೀಯವರ ಎಲ್ಲ ಕೃತಿಗಳಲ್ಲಿ ಕಂಡುಬರುವ ಎಣೆಯಿಲ್ಲದ ಗೌರವ ಬುದ್ಧಿ, ಮೃದುತ್ವ, ಹೃದಯ ವೈಶಾಲ್ಯ ಇವುಗಳಿಂದ ಕೂಡಿವೆ; ಆದರ್ಶ ನುಡಿಚಿತ್ರಗಳಾಗಿ ಕಂಗೊಳಿಸುತ್ತ ಎಂಥ ಸಾಹಿತ್ಯ ಕಲೆಗಾರನಲ್ಲೂ ಈರ್ಷ್ಯ ಜನಕವಾಗಿವೆ.

ಎರಡನೆಯ ಭಾಗದಲ್ಲಿ ಗಾಂಧೀಜೀ ತಮ್ಮ ಸಹಕಾರ್ಯಕರ್ತ ರೊಡನೆ ವರ್ತಿಸುವಾಗ ಸಂಭವಿಸಿದ ಕೆಲವಾರು ಸಂಗತಿಗಳನ್ನೂ–ಘಟನೆ

ಗಳನ್ನೂ ಕಾಣಬಹುದು. ಈ ಸಂಗತಿಗಳು ಗಾಂಧೀಜೀಯವರ ಮೋಹಕ ವ್ಯಕ್ತಿತ್ವವನ್ನೂ ಅವರು ಕಾರ್ಯಕರ್ತರೊಡನೆ ಹೊಂದಿದ್ದ ದೃಢ ಸಂಬಂಧ ವನ್ನೂ ವಿಶೇಷ ಬೆಳಕಿನಲ್ಲಿ ತೋರಿಸುತ್ತವೆ; ಪರಸ್ಪರ ಸಂಬಂಧ ಎಷ್ಟು ಗಾಢ ಎಂಬುದನ್ನು ತೋರಿಸುತ್ತವೆ.

ಈ ಎರಡೂ ಭಾಗಗಳು ಒಟ್ಟುಸೇರಿ ಗಾಂಧೀಜೀಯವರ ವ್ಯಕ್ತಿತ್ವ, ಮನೋರಂಗ, ಭಾವಸಂಪತ್ತು ಇವುಗಳ ಸಮಗ್ರ ದೇದೀಪ್ಯ ಚಿತ್ರವನ್ನು ಒದಗಿಸುವುದೆಂದು ನೆಚ್ಚಲಾಗಿದೆ.

ಅನುವಾದ ಕಾರ್ಯ ಕನ್ನಡ "ಭೂದಾನ" ವಾರಪತ್ರಿಕೆಯ ಸಂಪಾದಕ ಶ್ರೀ ಪ್ರಿಯವ್ರತರದು.

ಈ ಸಂಪುಟಕ್ಕೆ 'ಯಥಾದರ್ಶನ'ವನ್ನು ಬರೆದುಕೊಟ್ಟವರು ಶ್ರೀ ಕೆ. ಸಂಪದ್ಗಿರಿರಾಯರು. ಶ್ರೀಯುತರು ಸ್ವತಃ ಗಾಂಧೀಜೀಯವರ ಸಮಕಾಲೀನ ರಾಗಿದ್ದುದಲ್ಲದೆ, ಶಿಕ್ಷಣವೇತ್ತರೆಂದೂ ಗಾಂಧೀ ವಿಚಾರಧಾರೆಯ ಪಂಡಿತ ರೆಂದೂ ಖ್ಯಾತರಾಗಿರುವರು. ಇವರು ನಮ್ಮ ಸಂಪಾದಕೀಯ ಮಂಡಲಿಯ ಸದಸ್ಯರೂ ಆಗಿದ್ದಾರೆ.

ಮುದ್ರಣ ಭಾರವನ್ನು ಹೊತ್ತವರು ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಅವರು. ಮುಖ ಚಿತ್ರ ಮತ್ತು ಇತರ ಚಿತ್ರಗಳನ್ನು ತೆಂಡುಲ್ಕರರ 'ಮಹಾತ್ಮಾ' ಗ್ರಂಥದಿಂದ ತೆಗೆದುಕೊಳ್ಳಲಾಗಿದೆ.

ಈ ಎಲ್ಲ ಮಹನೀಯರಿಗೂ ಸಂಪಾದಕೀಯ ಮಂಡಲಿಯ ಕೃತಜ್ಞತೆ ಗಳು ಸಲ್ಲುತ್ತವೆ.

ಎಂ. ಯಾಮುನಾಚಾರ್ಯ
ಪ್ರಧಾನ ಸಂಪಾದಕ, ಗಾಂಧೀ ಗ್ರಂಥಮಾಲೆ.

ಪರಿವಿಡಿ

ಭಾಗ-೧ ವ್ಯಕ್ತಿ ಚಿತ್ರಗಳು	೧-೨೪೧
ಭಾಗ-೨ ಕೆಲವು ಸಂಗತಿಗಳು	೨೪೨-೩೧೨
ಪರಿಶಿಷ್ಟ—ಟಿಪ್ಪಣಿ	೩೧೩-೩೨೨
ವಿಷಯಮೂಲಸೂಚಿ	೩೨೫-೩೩೪

ನನ್ನ ಸಮಕಾಲೀನರು

ಭಾಗ ೧

ನನ್ನ ಸಮಕಾಲೀನರು

ಹಕೀಮ್ ಅಜ್ಮಲ್ ಖಾನ್

ಹಕೀಮ್ ಸಾಹೇಬ್ ಅಜಮಲ್ ಖಾನರ ನಿಧನದಿಂದ ಅತ್ಯಂತ ಪ್ರಾಮಾಣಿಕರಾದ ದೇಶ ಸೇವಕರಲ್ಲೊಬ್ಬರು ಕಣ್ಮರೆ ಆದಂತಾಯಿತು. ಹಕೀಮ್ ಸಾಹೇಬರದು ಬಹುಮುಖ ವ್ಯಕ್ತಿತ್ವ. ಅವರು ಬಡವ-ಬಲ್ಲಿದ ಭೇದವೆಣಿಸದೆ ಎಲ್ಲರಿಗೂ ವೈದ್ಯಕೀಯ ಸೇವೆ ಸಲ್ಲಿಸುವಂಥ ಸಮರ್ಥ ವೈದ್ಯ ರಾಗಿದ್ದುದಲ್ಲದೆ 'ಆಸ್ಥಾನಿಕ ದೇಶಭಕ್ತ'ರೂ (Courtier Patriot) ಆಗಿದ್ದರು. ಅವರ ಒಡನಾಟ ರಾಜ-ಮಹಾರಾಜರುಗಳೊಡನೆಯೇ ನಡೆ ದಿದ್ದರೂ, ಅವರು ಶುದ್ಧ ಪ್ರಜಾವಾದಿಗಳಾಗಿದ್ದರು. ಅವರು ಎಷ್ಟು ದೊಡ್ಡ ಮುಸಲ್ಮಾನರಾಗಿದ್ದರೋ ಅಷ್ಟೇ ದೊಡ್ಡ ಭಾರತೀಯರೂ ಆಗಿದ್ದರು. ಹಿಂದೂ ಮುಸಲ್ಮಾನರಿಬ್ಬರಲ್ಲೂ ಅವರಿಗೆ ಒಂದೇ ರೀತಿಯಾದ ಪ್ರೇಮವಿತ್ತು. ಹಾಗೆಯೇ ಹಿಂದೂ-ಮುಸಲ್ಮಾನರಿಬ್ಬರಿಗೂ ಅವರಲ್ಲಿ ಒಂದೇ ಸಮನಾದ ಪ್ರೀತಿ-ಗೌರವವಿತ್ತು. ಹಿಂದೂ-ಮುಸ್ಲಿಮ್ ಐಕ್ಯತೆ ಅವರ ಜೀವದ ಉಸಿರೇ ಆಗಿತ್ತು. ನಮ್ಮ ಜಗಳಗಳ ಕಾರಣದಿಂದ ಅವರ ಕೊನೆಯ ದಿನಗಳು ಸ್ವಲ್ಪ ಕ್ಲೇಶಕರವೇ ಆದವು; ಆದರೂ ತಮ್ಮ ದೇಶ ಹಾಗೂ ದೇಶಬಾಂಧವರಲ್ಲಿ ಅವರಿಗಿದ್ದ ವಿಶ್ವಾಸ ಅಳಿಯಲಿಲ್ಲ. ಕೊನೆಗೆ ಎರಡೂ ಕೋಮುಗಳವರು ಕೂಡಿಯೇ ಬಾಳಬೇಕಾಗುವುದೆಂಬ ಅಂಶ ಅವರಿಗೆ ಮನವರಿಕೆಯಾಗಿತ್ತು. ಆ ದೃಢ ವಿಶ್ವಾಸವನ್ನು ಇರಿಸಿಕೊಂಡಿದ್ದ ಅವರು ಐಕ್ಯತೆಗಾಗಿ ಪ್ರಯತ್ನಿಸು ವುದನ್ನು ನಿಲ್ಲಿಸಲೇ ಇಲ್ಲ. ವಿಚಾರ ಮಾಡಲು ಸ್ವಲ್ಪ ಸಮಯ ತೆಗೆದು ಕೊಂಡರಾದರೂ, ಕೊನೆಗೆ ಅವರು ಅಸಹಕಾರ ಆಂದೋಲನದಲ್ಲಿ ಧುಮ್ಮಿ ಕ್ಕಿದರು. ಆಗ ತಮಗೆ ಅತ್ಯಂತ ಪ್ರಿಯವಾಗಿದ್ದ ಹಾಗೂ ತಮ್ಮ ಮಹೋತ್ತಮ ಕೃತಿ ಎನಿಸಿದ್ದ ತಿಬ್ಬಿ ಕಾಲೇಜನ್ನು ಗಂಡಾಂತರಕ್ಕೆ ಗುರಿಮಾಡುವುದಕ್ಕೂ ಅವರು ಹಿಂತೆಗೆಯಲಿಲ್ಲ. ಆ ಕಾಲೇಜಿನ ಮೇಲೆ ಅವರಿಗೆ ಎಷ್ಟೊಂದು ಅನ್ಯ

ರಾಗ ಇದ್ದಿತೆಂಬುದನ್ನು ಹಕೀಮರ ಪರಿಚಯ ಒಳಿತಾಗಿ ಇದ್ದವರು ಮಾತ್ರವೇ ಊಹಿಸಬಲ್ಲರು. ಹಕೀಮರ ನಿಧನದಿಂದಾಗಿ ಬುದ್ಧಿವಂತರೂ, ಸ್ಥಿರಚಿತ್ತರೂ ಆದ ಸಹೋದ್ಯೋಗಿಯೊಬ್ಬರನ್ನು ಮಾತ್ರವೇ ಅಲ್ಲ, ವಿಷಮ ಪ್ರಸಂಗಗಳಲ್ಲಿ ಯಾರನ್ನು ನೆಚ್ಚಿಕೊಂಡು ಇರಬಹುದಾಗಿತ್ತೋ ಅಂಥ ಮಿತ್ರರೊಬ್ಬರನ್ನು ನಾನು ಕಳೆದುಕೊಂಡಿದ್ದೇನೆ. ಹಿಂದೂ ಮುಸ್ಲಿಮ್ ಐಕ್ಯತೆಯ ವಿಷಯದಲ್ಲಿ ಅವರು ನನಗೆ ಮಾರ್ಗದರ್ಶಕರಾಗಿದ್ದರು. ಅವರಲ್ಲಿ ವಿವೇಚನಾಶಕ್ತಿ ಗಾಂಭೀರ್ಯ ಹಾಗೂ ಮನುಷ್ಯ-ಸ್ವಭಾವದ ಜ್ಞಾನ ಒಳಿತಾಗಿ ಇದ್ದುದರಿಂದ, ಅವರು ಕೈಗೊಳ್ಳುತ್ತಿದ್ದ ತೀರ್ಮಾನಗಳು ಬಹಳ ಮಾಡಿ ಸರಿಯಾಗಿಯೇ ಇರುತ್ತಿದ್ದವು. ಅಂಥ ಮನುಷ್ಯರಿಗೆ ಸಾವೇ ಇಲ್ಲ. ಅವರ ಪಾರ್ಥಿವ ಶರೀರ ಈಗ ಇರದಿದ್ದರೂ, ಅವರ ಆತ್ಮ-ಸ್ಫೂರ್ತಿ ಸದಾ ನಮ್ಮೊಂದಿಗೆ ಇದ್ದೇ ಇರುವುದು. ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕೆಂದು ಈಗಲೂ ಅದು ನಮಗೆ ಕರೆಕೊಡುತ್ತಿದೆ. ಎಲ್ಲಿಯವರೆಗೆ ನಾವು ನಿಜವಾದ ಹಿಂದೂ-ಮುಸ್ಲಿಮ್ ಐಕ್ಯತೆಯನ್ನು ಸಾಧಿಸುವುದಿಲ್ಲವೋ, ಅಲ್ಲಿಯವರೆಗೆ ಅವರ ನೆನಪನ್ನು ಚಿರಸ್ಥಾಯಿಯಾಗಿಸಲು ನಾವು ನಿರ್ಮಾಣ ಮಾಡಬಹುದಾದ ಯಾವುದೇ ಸ್ಮಾರಕ ಪರಿಪೂರ್ಣವೆಂದೆನಿಸಿಕೊಳ್ಳುವುದಿಲ್ಲ. ಅವರು ಬದುಕಿದ್ದಾಗ ನಾವು ಯಾವ ಕಾರ್ಯವನ್ನು ಮಾಡಲಾರದೆ ಹೋದೆವೋ, ಅದನ್ನು ಅವರ ಮರಣದ ನಂತರವಾದರೂ ಮಾಡುವ ಶಕ್ತಿಯನ್ನು ಭಗವಂತ ನಮಗೆ ಅನುಗ್ರಹಿಸಲಿ.

ಹಕೀಮರು ಕೇವಲ ಕನಸು ಕಾಣುವವರಾಗಿರಲಿಲ್ಲ. ತಮ್ಮ ಕನಸು ನನಸಾಗಿಯೇ ತೀರುವುದೆಂಬ ವಿಶ್ವಾಸ ಅವರಿಗಿತ್ತು. ತಿಬ್ಬಿ ಕಾಲೇಜಿನ ಮೂಲಕ ತಮ್ಮ ದೇಶೀಯ ಚಿಕಿತ್ಸೆಯ ಕನಸನ್ನು ನನಸುಮಾಡಿಕೊಂಡಂತೆಯೇ ಜಾಮಿಯಾ ಮಿಲಿಯಾದ ಮೂಲಕ ತಮ್ಮ ರಾಜಕೀಯ ಕನಸನ್ನು ಆಂಶಿಕವಾಗಿಯಾದರೂ ನನಸುಮಾಡಿಕೊಳ್ಳಲು ಅವರು ಪ್ರಯತ್ನಿಸಿದರು. ಜಾಮಿಯಾ ಉತ್ಕ್ರಮಣಾವಸ್ಥೆಯಲ್ಲಿದ್ದಾಗ ಹಕೀಮರು ಬಹುತೇಕ ಏಕಾಕಿಯಾಗಿಯೇ ಅದನ್ನು ಅಲೀಘರದಿಂದ ದಿಲ್ಲಿಗೆ ಸಾಗಿಸುವ ಪೂರ್ಣ ಜವಾಬುದಾರಿಯನ್ನು ಹೊತ್ತುಕೊಂಡರು. ಜಾಮಿಯಾವನ್ನು ಸ್ಥಳಾಂತರಿಸಿದುದರಿಂದ ಅವರ ತಾಪತ್ರಯವೂ ಹೆಚ್ಚಿತು. ಅಲ್ಲಿಂದ ಮುಂದೆ ಜಾಮಿಯಾದ

ಆರ್ಥಿಕಸ್ಥಿರತೆಯ ಹೊಣೆ ವಿಶೇಷವಾಗಿ ತಮ್ಮದೇ ಆಗುವುದೆಂಬುದನ್ನು ಅವರು ಕಂಡುಕೊಂಡರು. ಹಣವನ್ನು ತಮ್ಮ ಕಿಸೆಯಿಂದಲೇ ಕೊಡಲಿ, ಅಥವಾ ತಮ್ಮ ಮಿತ್ರರಿಂದ ಚಂದಾ ಕೊಡಿಸಲಿ-ಅಂತು ಜಾಮಿಯಾಕ್ಕೆ ಧನ ಸಹಾಯ ಒದಗಿಸುವ ಮುಖ್ಯ ವ್ಯಕ್ತಿ ಅವರೇ ಆದರು. ಜಾಮಿಯಾ ಮಿಲಿಯಾದ ಆರ್ಥಿಕ ಸ್ಥಿತಿಯನ್ನು ಸುಭದ್ರ ಗೊಳಿಸುವುದೇ ಈಗ ದೇಶ ತತ್ಕ್ಷಣವೇ ನಿರ್ಮಾಣ ಮಾಡಬಹುದಾದ ಅನಿವಾರ್ಯ ಸ್ಮಾರಕ.೧

ಪ್ರಾಯಶಃ ೧೯೧೫ ರಲ್ಲಿ ಇರಬೇಕು—ದಿಲ್ಲಿಗೆ ಹೋದಾಗ ಹಕೀಮ್ ಸಾಹೇಬರನ್ನೂ, ಡಾ. ಅನ್ಸಾರಿ ಅವರನ್ನೂ ಭೆಟ್ಟಿಯಾಗಿದ್ದೆ. 'ದಿಲ್ಲಿಯ ಬಾದಶಹರು ಆಂಗ್ಲೇಯರಲ್ಲ; ಈ ಹಕೀಮರುಗಳೇ'—ಎಂದು ಆಗ ನನಗೆ ತಿಳಿಸಲಾಯಿತು. ಡಾ. ಅನ್ಸಾರಿ ಅವರಂತೂ ಒಳ್ಳೆ ಸಂಭಾವಿತರು, ಬಹು ದೊಡ್ಡ ಶಸ್ತ್ರವೈದ್ಯರು. ಅವರಿಗೂ ಹಕೀಮ್ ಸಾಹೇಬರ ಪರಿಚಯವಿತ್ತು. ಅವರಲ್ಲಿ (ಹಕೀಮ್ ಸಾಹೇಬರು) ಬಹಳ ಗೌರವವೂ ಇತ್ತು. ಹಕೀಮ ಸಾಹೇಬರೂ ಮುಸಲ್ಮಾನರೇ ಇದ್ದು, ದೊಡ್ಡ ವಿದ್ವಾಂಸರೂ ಹಕೀಮರೂ ಆಗಿದ್ದರು. ಯುನಾನಿ ಹಕೀಮರಾಗಿದ್ದರೂ, ಸ್ವಲ್ಪ ಆಯುರ್ವೇದದ ಅಭ್ಯಾಸವನ್ನೂ ಮಾಡಿದ್ದರು. ಹಿಂದೂಗಳೇನು, ಮುಸಲ್ಮಾನರೇನು, ಧನಿಕರೇನು, ದರಿದ್ರರೇನು, ಸಹಸ್ರ ಸಹಸ್ರ ಸಂಖ್ಯೆಯಲ್ಲಿ, ಅವರ ಬಳಿಗೆ ಬರುತ್ತಿದ್ದರು. ಅವರಿಗೆ ದಿನವೊಂದಕ್ಕೆ ಸಾವಿರ ರೂಪಾಯಿ ಶುಲ್ಕ ಸಿಕ್ಕುತ್ತಿತ್ತು. ಆದರೆ, ನಾನು ಹಕೀಮ ಸಾಹೇಬರನ್ನು ಅರ್ಥಮಾಡಿಕೊಂಡಿರುವ ಮಟ್ಟಿಗೆ ಅವರಿಗೆ ಹಣದ ಗೀಳು ಇರಲಿಲ್ಲ. ಸರ್ವರ ಸೇವೆಯ ಸಾಧನವಾಗಿತ್ತು, ಅವರ ವೃತ್ತಿ. ಅವರು ಬಾದಶಹರಂತೆಯೇ ಇದ್ದರು. ಅವರ ತಂದೆ–ತಾತಂದಿರು ವಾಸಿಸುತ್ತಿದ್ದುದು ಚೀಣದಲ್ಲಿ. ಚೀಣೀ ಮುಸಲ್ಮಾನರಾದರೂ, ಅವರು ಬಹಳ ಸಭ್ಯರು—ಗೌರವಾನ್ವಿತರು. ನನ್ನ ಬಳಿಗೆ ಬರುತ್ತಿದ್ದ ಎಲ್ಲ ಹಿಂದೂಗಳನ್ನೂ 'ಇಲ್ಲಿ ನಿಮ್ಮ ಸರದಾರರು ಯಾರು? ಶ್ರದ್ಧಾನಂದರೆ?' ಎಂಬುದಾಗಿ ನಾನು ಪ್ರಶ್ನಿಸುತ್ತಿದ್ದೆ. ಶ್ರದ್ಧಾನಂದರೂ ದಿಲ್ಲಿಯಲ್ಲಿ ಶ್ರೇಷ್ಠವಾದ ಕೆಲಸ ಮಾಡುತ್ತಿದ್ದುದು ದಿಟ. ಆದರೂ, ದಿಲ್ಲಿಯ ಬಾದಶಹರೆನಿಸಿದ್ದುದು ಹಕೀಮ ಸಾಹೇಬರೇ ಹೊರತು,

ಶ್ರದ್ಧಾನಂದರಲ್ಲ. ಅವರು ಹಿಂದೂಗಳ, ಮುಸಲ್ಮಾನರ ಎಲ್ಲರ ಸೇವೆಯನ್ನೂ ಮಾಡುತ್ತಿದ್ದುದೇ ಅದಕ್ಕೆ ಕಾರಣ. ಇದು ೧೯೧೫ ರ ಮಾತು. ಅಲ್ಲಿಂದ ಮುಂದೆ ಅವರೊಡನೆ ನನ್ನ ಸಂಬಂಧ ಬಹಳವಾಗಿ ಬೆಳೆಯಿತು. ಅವರನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಂಡೆ.[೨]

ನಿನ್ನೆ ಅಜಮಲ್ ಖಾನ್ ಸಾಹೇಬರ ವಾರ್ಷಿಕ ತಿಥಿ. ಅವರು ಭಾರತದ ಹಿಂದೂಗಳು, ಮುಸಲ್ಮಾನರು, ಸಿಕ್ಕರು, ಪಾರಸಿಗಳು, ಯೆಹೂದ್ಯರೂ—ಎಲ್ಲರಿಗೂ ಪ್ರಿಯರಾಗಿದ್ದ ವ್ಯಕ್ತಿ. ತಾವು ಶುದ್ಧ ಮುಸಲ್ಮಾನರಾಗಿದ್ದರೂ, ಈ ಸುಂದರವಾದ ದೇಶದಲ್ಲಿ ವಾಸಮಾಡುವ ಎಲ್ಲ ಜನರ ಸೇವೆಯನ್ನೂ ಸಮಾನ ರೂಪದಲ್ಲಿ ಮಾಡುತ್ತಿದ್ದರು. ಅವರ ಪರಿಶ್ರಮದ ಸರ್ವ ಶ್ರೇಷ್ಠ ಸ್ಮಾರಕವೆಂದರೆ, ದಿಲ್ಲಿಯ ಪ್ರಸಿದ್ಧವಾದ ತಿಬ್ಬಿ ಕಾಲೇಜ್ ಹಾಗೂ ಆಸ್ಪತ್ರೆ. ಅಲ್ಲಿ ಪ್ರತಿಯೊಂದು ವರ್ಗದ ವಿದ್ಯಾರ್ಥಿಗಳೂ ವ್ಯಾಸಂಗ ಮಾಡುತ್ತಿದ್ದರು. ಅಲ್ಲಿ ಯುನಾನಿ, ಆಯುರ್ವೇದ ಹಾಗೂ ಪಾಶ್ಚಿಮಾತ್ಯ ವೈದ್ಯಶಾಸ್ತ್ರವನ್ನು ಕಲಿಸಲಾಗುತ್ತಿತ್ತು. ಜಾತಿವಾದದ ವಿಷದ ಕಾರಣದಿಂದ, ಯಾವುದೇ ರೀತಿಯ ಜಾತಿವಾದಕ್ಕೆ ಎಡೆಗೊಡದಿದ್ದ ಆ ಸಂಸ್ಥೆಯೂ ಕೂಡ ಮುಚ್ಚಲ್ಪಡಬೇಕಾಯಿತು. ಆ ಸಂಸ್ಥೆಯ ಸ್ಥಾಪಕರಾದ ಹಕೀಮ ಸಾಹೇಬರು ಎಷ್ಟು ದೊಡ್ಡ ಮನುಷ್ಯರಾಗಿದ್ದರೇನು, ಎಷ್ಟು ಒಳ್ಳೆಯವರಾಗಿದ್ದರೇನು, ಎಲ್ಲರ ಗೌರವವನ್ನೂ ಗಳಿಸಿದ್ದರೆ ತಾನೆ ಏನು ?–ಅವರು ಮುಸಲ್ಮಾನರಾಗಿದ್ದುದೇ ತಪ್ಪು ಎಂಬಂತಾಯಿತು. ಆ ದಿವಂಗತ ದೇಶಭಕ್ತರ ಸ್ಮರಣೆಯಿಂದಾಗಿ ಹಿಂದೂ–ಮುಸ್ಲಿಂ ಜಗಳದ ಸಮಾಧಿಯಾಗುವುದು ಶಕ್ಯವಿಲ್ಲದಿದ್ದರೆ ಹೋಗಲಿ; ಕನಿಷ್ಠಪಕ್ಷ ಆ ಕಾಲೇಜಿಗೆ ಹೊಸ ಜೀವವಾದರೂ ಬರುವಂತಾಗಲಿ.[೩]

ಡಾ. ಮುಖ್ತಾರ್ ಅಹ್ಮದ್ ಅನ್ಸಾರಿ

ಮುಂದಿನ ವರ್ಷಕ್ಕೆ ಡಾ. ಅನ್ಸಾರಿ ಅವರು ಕಾಂಗ್ರೆಸ್ಸಿನ ಅಧ್ಯಕ್ಷ ರಾಗಿ ಚುನಾಯಿತರಾಗುವುದು ಬಹಳ ಮಾಡಿ, ನಿಶ್ಚಿತವಾದಂತೆಯೇ. ರಾಷ್ಟ್ರೀಯ ಕ್ಷಿತಿಜದಲ್ಲಿ ಈ ಚುನಾವಣೆಯನ್ನು ಆಕ್ಷೇಪಿಸುವವರು ಯಾರೂ ಇಲ್ಲ. ಡಾ. ಅನ್ಸಾರಿ ಅವರು ಎಷ್ಟು ಒಳ್ಳೆಯ ಮುಸಲ್ಮಾನರೋ ಅಷ್ಟೇ ಒಳ್ಳೆಯ ಭಾರತೀಯರೂ ಹೌದು. ಅವರಲ್ಲಿ ಧರ್ಮೋನ್ಮಾದವಿದೆಯೆಂಬ ಶಂಕೆ ಸಹ ಯಾರಿಗೂ ಇಲ್ಲ. ಅನೇಕ ವರುಷಗಳ ಕಾಲ ಒಂದೇ ಸಮನೆ ಅವರು ಕಾಂಗ್ರೆಸ್ಸಿನ ಸಹ-ಕಾರ್ಯದರ್ಶಿಗಳಾಗಿದ್ದಾರೆ. ಇತ್ತೀಚೆಗೆ ಅವರು ಐಕ್ಯತೆಗಾಗಿ ನಡೆಸಿದ ಪ್ರಯತ್ನವಾದರೂ ಎಲ್ಲರಿಗೂ ತಿಳಿದುದೆ. ನಿಜ ವಾದ ಮಾತೆಂದರೆ, ಬೆಳಗಾವಿಯಲ್ಲಿ ನಾನು, ಕಾನ್ ಪುರದಲ್ಲಿ ಶ್ರೀಮತಿ ಸರೋಜಿನೀ ನಾಯಿಡು ಅವರು, ಗೌಹಾತಿಯಲ್ಲಿ ಶ್ರೀಯುತ ಶ್ರೀನಿವಾಸ ಅಯ್ಯಂಗಾರ್ಯರು, ಅಡ್ಡ ಬರದೆ ಇದ್ದಿದ್ದರೆ, ಆ ಅಧಿವೇಶನಗಳಲ್ಲಿ ಯಾವುದೇ ಒಂದಕ್ಕಾದರೂ ಡಾ. ಅನ್ಸಾರಿ ಅವರು ಚುನಾಯಿತರಾಗು ತ್ತಿದ್ದರು. ಇದಕ್ಕೆ ಕಾರಣ ಆ ಚುನಾವಣೆಗಳು ನಡೆದ ಕಾಲಕ್ಕೆ ಎಲ್ಲರ ಬಾಯಿಯಲ್ಲೂ ಅವರ ಹೆಸರೇ ಕೇಳಿಬರುತ್ತಿತ್ತು. ಆದರೆ, ಹಲವು ವಿಶಿಷ್ಟ ಕಾರಣಗಳಿಂದ ಡಾ. ಅನ್ಸಾರಿ ಅವರ 'ಹಕ್ಕು' ಮುಂದೂಡಲ್ಪಟ್ಟಿತು. ದೇಶಕ್ಕೆ ಅವರ ಆವಶ್ಯಕತೆಯ ಅರಿವು ಎಂದಿಗಿಂತ ಹೆಚ್ಚಾಗಿ ಆದ ಕಾಲಕ್ಕೆ ಅವರು ಚುನಾಯಿತರಾಗಲೆಂದೇ ವಿಧಿ ಅವರ ಹಕ್ಕನ್ನು ಮುಂದೂಡಿರ ಬೇಕೆಂದು ಈಗ ನನಗೆ ಅನಿಸುತ್ತದೆ. ಎರಡೂ ಪಕ್ಷಗಳ ದೃಷ್ಟಿಯಿಂದ ಸ್ವೀಕಾರಯೋಗ್ಯವೆನಿಸಬಹುದಾದ ಹಿಂದೂ—ಮುಸ್ಲಿಮ್ ಐಕ್ಯತೆಯ ಯಾವುದೇ ಯೋಜನೆಯನ್ನು ಕಾಂಗ್ರೆಸ್ಸಿನ ಕಡೆಯಿಂದ ಆಗಗೊಳಿಸಲು ಡಾ. ಅನ್ಸಾರಿ ಅವರೇ ತಕ್ಕವರು ಎಂಬುದು ನಿಸ್ಸಂದೇಹ. ಮುಸಲ್ಮಾನ ರೊಬ್ಬರನ್ನು ಸರ್ವಾನುಮತದಿಂದ ಹಾಗೂ ಹೃತ್ಪೂರ್ವಕವಾಗಿ ತಮ್ಮ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಂಡುದೇ ಹಿಂದೂಗಳು ಐಕ್ಯತೆಯನ್ನು ಮನಃಪೂರ್ವಕವಾಗಿ ಅಪೇಕ್ಷಿಸುತ್ತಾರೆ ಎಂಬುದಕ್ಕೆ ನಿಚ್ಚಳ ನಿದರ್ಶನ.

ಅಲ್ಲದೆ, ಸಾಧಾರಣವಾಗಿ ಮುಸ್ಲಿಮ್ ಜನತೆಯ ದೃಷ್ಟಿಯಲ್ಲಿ ಡಾ. ಅನ್ಸಾರಿ ಅವರಿಗಿಂತ ಹೆಚ್ಚು ಆದರಣೀಯರಾದವರು ರಾಷ್ಟ್ರೀಯ ಭಾವನೆಯ ಮುಸ್ಲಿಮರಲ್ಲಿ ಬೇರೆ ಯಾರೂ ಇಲ್ಲ. ಆದಕಾರಣ, ಮುಂದಿನ ವರುಷಕ್ಕೆ ಡಾ. ಅನ್ಸಾರಿ ಅವರೇ ಕಾಂಗ್ರೆಸ್ಸಿನ ಅಧ್ಯಕ್ಷರಾಗುವುದು ಒಳಿತು ಎಂಬುದು ನನ್ನ ಅಭಿಪ್ರಾಯ. ಕಾರಣ, ಯಾವುದೇ ಒಂದು ಯೋಜನೆಯನ್ನು ಮಂಜೂರು ಮಾಡಿಬಿಟ್ಟರಷ್ಟೇ ಸಾಲದು. ಎರಡೂ ಪಕ್ಷಗಳವರಿಂದ ಅದನ್ನು ಮಂಜೂರು ಮಾಡಿಸುವುದಕ್ಕಿಂತ ಅದನ್ನು ಕಾರ್ಯರೂಪಕ್ಕೆ ತರುವುದು ಹೆಚ್ಚು ಆವಶ್ಯಕ. ಎರಡೂ ಪಕ್ಷಗಳಿಗೆ ತೃಪ್ತಿಯನ್ನುಂಟುಮಾಡುವ ಯೋಜನೆಯೊಂದು ಮಂಜೂರಾಯಿತೆಂದೇ ಇಟ್ಟುಕೊಳ್ಳೋಣ: ಆಗಲೂ ಅದನ್ನು ಕಾರ್ಯರೂಪಕ್ಕೆ ತರುವ ಕಾಲಕ್ಕೆ ಅತೀವ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಇಂಥ ಕೆಲಸಕ್ಕೆ ಡಾ. ಅನ್ಸಾರಿ ಅವರೇ ಎಲ್ಲರಿಗಿಂತ ಯೋಗ್ಯರು. ಆದಕಾರಣ, ರಾಷ್ಟ್ರೀಯ ಕಾಂಗ್ರೆಸ್ಸಿನ ಈ ಸರ್ವೋಚ್ಚ ಪದಕ್ಕೆ ಎಲ್ಲ ಪ್ರಾಂತಗಳೂ ಡಾ. ಅನ್ಸಾರಿ ಅವರ ಹೆಸರನ್ನೇ ಏಕ ಮತದಿಂದ ಸೂಚಿಸುವುದಾಗಿ ನಾನು ಆಶಿಸುವೆ.೪

ಈ ಪ್ರಪಂಚದಿಂದ ಪಯಣ ಬೆಳೆಸುವ ಎಲ್ಲ ಮಹಾಪುರುಷರ ನಿಧನದ ಬಗೆಗೆ 'ಹರಿಜನ' ಪತ್ರಿಕೆಯಲ್ಲಿ ಉಲ್ಲೇಖ ಮಾಡುವ ಪದ್ಧತಿಯಿಲ್ಲ. ಈ ಪತ್ರಿಕೆ ಒಂದು ವಿಶಿಷ್ಟ ಕಾರ್ಯೋದ್ದೇಶಕ್ಕಾಗಿ ಸಮರ್ಪಿತವಾದುದು. ಸಾಧಾರಣವಾಗಿ ಹರಿಜನ ಕಾರ್ಯದೊಡನೆ ವಿಶೇಷ ರೀತಿಯಲ್ಲಿ ಸಂಬಂಧ ಹೊಂದಿರುವ ವ್ಯಕ್ತಿಗಳ ನಿಧನದ ಬಗೆಗಷ್ಟೇ ಈ ಪತ್ರಿಕೆಯಲ್ಲಿ ಉಲ್ಲೇಖ ಮಾಡಲಾಗುವುದು. ಶ್ರೀ ಕಮಲಾ ನೆಹರೂ ಅವರ ನಿಧನದ ಬಗೆಗೆ 'ಹರಿಜನ' ಪತ್ರಿಕೆಯಲ್ಲಿ ಉಲ್ಲೇಖ ಮಾಡುವುದನ್ನು ತಪ್ಪಿಸಬೇಕಾದರೆ, ನಾನು ಅಸಾಧಾರಣ ಆತ್ಮಸಂಯಮದ ಪ್ರಯೋಗ ಮಾಡಬೇಕಾಯಿತು. ನನ್ನ ಪಾಲಿಗೆ ಅದು ಆತ್ಮ-ದಮನ, ಆತ್ಮ-ಪೀಡೆಯೇ ಆಯಿತೆನ್ನಬೇಕು. ಆದರೆ, ಡಾ. ಅನ್ಸಾರಿ ಅವರ ನಿಧನಕ್ಕೆ ಸಂಬಂಧಿಸಿದಂತೆ ಹಾಗೆ ಆತ್ಮ-ನಿಗ್ರಹ ಮಾಡಿಕೊಳ್ಳಬೇಕಾದ ಆವಶ್ಯಕತೆಯೇನಿಲ್ಲ. ಕಾರಣ, ಅವರೂ ಹಕೀಮ್ ಅಜಮಲ್ ಖಾನರ ಹಾಗೆಯೇ ನಿಸ್ಸಂದೇಹವಾಗಿ ಹಿಂದೂ-ಮುಸ್ಲಿಮ್

ಐಕ್ಯತೆಯ 'ಪ್ರತೀಕ' ವೇ ಆಗಿದ್ದರು. ಅತ್ಯಂತ ಕಠಿಣವಾದ ಪರೀಕ್ಷಾ ಸಮಯದಲ್ಲೂ ಅವರು ತಮ್ಮ ವಿಶ್ವಾಸದಲ್ಲಿ ಶಿಥಿಲತೆ ತೋರಲಿಲ್ಲ. ಅವರೊಬ್ಬ ಶುದ್ಧ ಮುಸಲ್ಮಾನರಾಗಿದ್ದರು. ಹಜರತ್ ಮೊಹಮ್ಮದರಿಗೆ ಆಪತ್ಕಾಲದಲ್ಲಿ ಸಹಾಯ ಮಾಡಿದವರ ವಂಶಕ್ಕೆ ಸೇರಿದವರು ತಾವು ಎಂಬ 'ಹೆಮ್ಮೆ' ಅವರಿಗಿತ್ತು. ಇಸ್ಲಾಮ್ ಬಗೆಗೆ ಅವರಿಗಿದ್ದ ಅಚಲ ಶ್ರದ್ಧೆ ಹಾಗೂ ಪ್ರಗಾಢ ಜ್ಞಾನವೇ ಅವರಿಗೆ ಹಿಂದೂ-ಮುಸ್ಲಿಮ್ ಐಕ್ಯತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿತೆನ್ನಬಹುದು. ಅವರಿಗೆ ಎಷ್ಟು ಮಂದಿ ಮುಸಲ್ಮಾನ ಮಿತ್ರರಿದ್ದರೋ ಅಷ್ಟೇ ಮಂದಿ ಹಿಂದೂ ಮಿತ್ರರೂ ಇದ್ದರೆಂದರೆ, ಅದರಲ್ಲಿ ಅತಿಶಯೋಕ್ತಿ ಯೇನೂ ಇಲ್ಲ. ಹಿಂದೂಸ್ತಾನದ ಅತ್ಯಂತ ನಿಷ್ಣಾತ ವೈದ್ಯರಲ್ಲಿ ಅವರೂ ಒಬ್ಬರು. ಬಡವರಾದವರು ಯಾವ ಕೋಮಿನವರೇ ಆಗಿರಲಿ–ಅವರಲ್ಲಿಗೆ ಧಾರಾಳವಾಗಿ ಬಂದು ಉಚಿತ ವೈದ್ಯಕೀಯ ಸಲಹೆ ಪಡೆಯಬಹುದಾಗಿತ್ತು. ತಾವು ರಾಜ-ಮಹಾರಾಜರುಗಳಿಂದ, ಶ್ರೀಮಂತ ಮನೆತನದವರಿಂದ ಸಂಪಾ ದಿಸಿದುದನ್ನು ಆವಶ್ಯಕತೆಯಿದ್ದ ತಮ್ಮ ಮಿತ್ರರ ಸಲುವಾಗಿ ಎರಡೂ ಕೈಗ ಳಿಂದ ಖರ್ಚುಮಾಡುತ್ತಿದ್ದರು. ಅವರಲ್ಲಿಗೆ ಏನಾದರೂ ಬೇಡಲು ಹೋದ ವರು, ಅವರ ಕಿಸೆಯನ್ನು ಖಾಲಿಮಾಡದೆ ಹಿಂತಿರುಗುತ್ತಲೇ ಇರಲಿಲ್ಲ. ತಾವು ಕೊಟ್ಟುದರ ಲೆಕ್ಕವನ್ನೂ ಅವರು ಇಡುತ್ತಿರಲಿಲ್ಲ. ತಮ್ಮನ್ನು ನೆಚ್ಚಿ ಕೊಂಡಿದ್ದ ನೂರಾರು ಮಂದಿ ಸ್ತ್ರೀ-ಪುರುಷರಿಗೆ ಅವರು ಆಧಾರ-ಸ್ತಂಭ ವಾಗಿದ್ದರು. ವೈಯಕ್ತಿಕವಾಗಿ ಹಾನಿಗೆ ಈಡಾಗಿ ಅಕ್ಷರಶಃ ಬಿಕ್ಕಿಬಿಕ್ಕಿ ಅಳು ತ್ತಿರುವವರನೇಕರನ್ನು ಅವರು ಬಿಟ್ಟುಹೋಗಿದಾರೆಂಬುದರಲ್ಲಿ ಸಂಶಯ ವೆಳ್ಳಷ್ಟೂ ಇಲ್ಲ. ಅವರ ಪತ್ನಿ ಬೇಗಂ ಸಾಹಿಬಾ ನಿತ್ಯರೋಗಿಯಾದರೂ ತತ್ವವೇತ್ತೆ. ಆಕೆ ತನ್ನ ಪ್ರಿಯ ಪತಿ ಅಸು ನೀಗಿದಾಗ ಒಂದೇ ಒಂದು ತೊಟ್ಟು ಕಣ್ಣೀರನ್ನೂ ಹಾಕಲಿಲ್ಲ–ಅಷ್ಟು ಧೀರೆ ಆಕೆ; ಇಸ್ಲಾಮಿನಲ್ಲಿ ಅಷ್ಟು ಉದಾತ್ತ ಶ್ರದ್ಧೆ ಆಕೆಗೆ. ಆದರೆ ಈಗ ನನ್ನ ಮನಸ್ಸಿನಲ್ಲಿ ಸುಳಿಯು ತ್ತಿರುವ ಅನೇಕ ಮಂದಿ ಜ್ಞಾನಿಗಳೂ ಅಲ್ಲ; ದಾರ್ಶನಿಕರೂ ಅಲ್ಲ. ಅವರಿಗೆ ಭಗವಂತನಲ್ಲಿರುವ ವಿಶ್ವಾಸ ಗಾಳಿಯಲ್ಲಿ ತೂರಿಹೋಗುವಂಥದು. ಆದರೆ ಡಾ. ಅನ್ಸಾರಿ ಅವರಿಗಿದ್ದ ವಿಶ್ವಾಸ ಜೀವಂತ ವಿಶ್ವಾಸ. ಇದರಲ್ಲಿ ಅವರ ದೇನೂ ತಪ್ಪಿಲ್ಲ. ದೇವರೇ ತಮ್ಮ ಕೈ ಬಿಟ್ಟನೆಂದು ಅವರಿಗೆ ಅನಿಸಿದ

ಅನೇಕ ಪ್ರಸಂಗಗಳಲ್ಲಿ ಡಾ. ಅನ್ಸಾರಿ ಅವರು ಅವರ ನೆರವಿಗೆ ಬಂದುದಕ್ಕೆ ಅವರಲ್ಲಿ ಬೇಕಾದಷ್ಟು ಪುರಾವೆ ಇದೆ. ಆದರೆ, ಡಾ. ಅನ್ಸಾರಿ ಅವರಂಥ ಮಹಾ ವ್ಯಕ್ತಿ ಕೂಡ, ಸೃಷ್ಟಿಕರ್ತ ಅವಕಾಶ ನೀಡಿದಷ್ಟು ಕಾಲ ಮಾತ್ರ ತಮಗೆ ಸಹಾಯಮಾಡಲು ಶಕ್ಯವಾಯಿತೆಂಬ ಮಾತು ಆ ಮಂದಿಗೇನು ಗೊತ್ತು ? ಅವರು ಜೀವಂತರಾಗಿದ್ದಾಗ ಯಾವ ಕಾರ್ಯವನ್ನು ಪೂರ್ಣಗೊಳಿಸಲು ಆಗಲಿಲ್ಲವೋ, ಅದು ಅವರ ಮೃತ್ಯುವಿನನಂತರವಾದರೂ ಪೂರ್ಣವಾಗುವಂತೆ ಭಗವಂತ ಅನುಗ್ರಹಿಸಲಿ.*

ಬೀ ಅಮ್ಮಾ*

ಬೀ ಅಮ್ಮಾ ಅವರು ಮೃತರಾದರೆಂದು ನಂಬುವುದೇ ಕಷ್ಟ. ಅವರ ಆ ಭವ್ಯ ಮೂರ್ತಿಯನ್ನು ಅರಿಯದವರಾರು? ಸಾರ್ವಜನಿಕ ಸಭೆಗಳಲ್ಲಿ ಅವರ ಧೀರವಾಣಿಯನ್ನು ಕೇಳದವರಾರು ? ವಯಸ್ಸಾಗಿದ್ದರೂ ಅವರಲ್ಲಿ ನವತಾರುಣ್ಯದ ಶಕ್ತಿಯಿತ್ತು. ಖಿಲಾಫತ್ ಹಾಗೂ ಸ್ವರಾಜ್ಯದ ಸಲುವಾಗಿ ಅವರು ಅವಿಶ್ರಾಂತವಾಗಿ ಯಾತ್ರೆ ಮಾಡಿದರು. ಇಸ್ಲಾಮಿನ ಕರ್ಮಠ ಅನುಯಾಯಿಯಾಗಿದ್ದರೂ, ಪುರುಷಪ್ರಯತ್ನಕ್ಕೆ ಸಂಬಂಧಿಸಿದ ಮಟ್ಟಿಗೆ ಇಸ್ಲಾಮಿನ ಹಿತ ಸ್ವರಾಜ್ಯದ ಮೇಲೆಯೇ ಅವಲಂಬಿತವಾಗಿರುವುದೆಂಬ ತಥ್ಯವನ್ನು ಅವರು ಕಂಡುಕೊಂಡಿದ್ದರು. ಹಾಗೆಯೇ ಹಿಂದೂ ಮುಸ್ಲಿಮ್ ಐಕ್ಯತೆ ಹಾಗೂ ಖಾದಿಯ ಹೊರತು ಸ್ವರಾಜ್ಯದ ಸಿದ್ಧಿ ಅಸಂಭವವೆಂಬುದನ್ನೂ ಅವರು ಕಂಡುಕೊಂಡಿದ್ದರು. ಅಂತಲೆ ಅವರು 'ಅವಿಶ್ರಾಂತವಾಗಿ ಹಿಂದೂ-ಮುಸ್ಲಿಮ್ ಐಕ್ಯತೆಗಾಗಿ ಪ್ರಚಾರ ನಡೆಸಿದ್ದರು. ಅದು ಅವರ ಪಾಲಿಗೆ ಅಚಲ ಸಿದ್ಧಾಂತವೇ ಆಗಿತ್ತು. ತಮ್ಮ ವಿದೇಶೀ ಹಾಗೂ ಗಿರಣಿ ಬಟ್ಟೆಯೆಲ್ಲವನ್ನೂ ಬಿಟ್ಟು, ಖಾದಿಯನ್ನೇ ಉಪಯೋಗಿಸುತ್ತಿದ್ದರು. ತಮ್ಮ ಶವಯಾತ್ರೆಯಲ್ಲಿ ಖಾದಿ ಹೊರತು ಮತ್ತೇನನ್ನೂ ಉಪಯೋಗಿಸದಂತೆ

*ಈಕೆ ಅಲೀ ಸಹೋದರರ(ಮೊಹಮ್ಮದ್ ಅಲೀ, ಶೌಕತ ಅಲೀ) ತಾಯಿ, ಹಿರಿಯ ದೇಶಾಭಿಮಾನಿಯಾಗಿದ್ದರು.

ಬೀ ಅಮ್ಮಾ ತಮಗೆ ಆದೇಶವಿತ್ತಿದ್ದರಿಂದು ಮೊಹಮ್ಮದ್ ಅಲೀ ನನಗೆ ತಿಳಿಸುತ್ತಾರೆ. ಅವರ ಹಾಸಿಗೆಯ ಬಳಿಗೆ ಹೋಗುವ ಸುಯೋಗ ಸಿಕ್ಕಾಗಲಿಲ್ಲ, ಅವರು ಸ್ವರಾಜ್ಯ ಹಾಗೂ ಐಕ್ಯತೆಯ ಮಾತನ್ನೇ ವಿಚಾರಿಸುತ್ತಿದ್ದರು. ಆ ವಿಷಯ ವಿಚಾರಿಸಿದ ಮೇಲೆ ತಪ್ಪದೆ ದೇವರಲ್ಲಿ ಮೊರೆಯಿಡುತ್ತಿದ್ದರು: "ಹೇ! ದೇವ! ಐಕ್ಯತೆಯ ಆವಶ್ಯಕತೆಯನ್ನು ಅರಿತುಕೊಳ್ಳುವಂಥ ಬುದ್ಧಿಯನ್ನು ಹಿಂದೂ-ಮುಸಲ್ಮಾನರಿಬ್ಬರಿಗೂ ಅನುಗ್ರಹಿಸು. ಸ್ವರಾಜ್ಯ ಸ್ಥಾಪಿತವಾಗುವುದನ್ನು ಕಣ್ಣಿನಿಂದ ನೋಡುವುದಕ್ಕಾಗಿ ನನ್ನನ್ನು ಜೀವಂತಳಾಗಿ ಇರಿಸುವ ಕೃಪೆಮಾಡು. ಸರ್ವಜನ ಹಿತದ ಬಗೆಗೆ ಅವರಲ್ಲಿದ್ದ ಉತ್ಸಾಹ ಹಾಗೂ ಸ್ಫೂರ್ತಿಯನ್ನು ಅನುಕರಣ ಮಾಡುವುದೇ ಆ ಧೀರೋದಾತ್ತ ಜೀವಾತ್ಮದ ನೆನಪನ್ನು ಚಿರಸ್ಥಾಯಿಯಾಗಿಸುವ ಸರ್ವೋತ್ತಮ ಮಾರ್ಗ. ಸ್ವರಾಜ್ಯದ ಅಭಾವದಲ್ಲಿ ಇಸ್ಲಾಮಿಗೆ ಎಷ್ಟು ಅಪಾಯವುಂಟೋ ಹಿಂದೂ ಧರ್ಮಕ್ಕೂ ಅಷ್ಟೇ ಅಪಾಯವುಂಟು. ಹಿಂದೂ ಮುಸಲ್ಮಾನರು ಈ ಮೂಲತತ್ವವನ್ನು ಅರಿಯಲು ಬೀ ಅಮ್ಮಾ ಅವರಿಗಿದ್ದಂಥ ವ್ಯವಹಾರ ಜ್ಞಾನವನ್ನು ಭಗವಂತ ಕೊಡಲಿ; ಹಾಗೆಯೇ ಅವರ ಆತ್ಮಕ್ಕೆ ಶಾಂತಿಯನ್ನೂ, ತಮಗೆ ವಹಿಸಲ್ಪಟ್ಟ ಕಾರ್ಯವನ್ನು ಮುಂಬರಿಸಲು ಅಲೀ ಬಂಧುಗಳಿಗೆ ಶಕ್ತಿಯನ್ನೂ ನೀಡಲಿ.

ಬೀ ಅಮ್ಮಾ ಅವರು ನಿಧನರಾದ ಆ ರಾತ್ರಿಯ ಗಂಭೀರ ಹಾಗೂ ಪ್ರಭಾವಯುಕ್ತ ವಾತಾವರಣದ ವರ್ಣನೆ ಮಾಡದಿರುವುದು ತರವಲ್ಲ. ಆ ಸಮಯಕ್ಕೆ ಅವರ ಸನಿಹದಲ್ಲೇ ಇರುವ ಸೌಭಾಗ್ಯ ನನಗೆ ಸಿಕ್ಕಿತ್ತು. ಅವರು ತಮ್ಮ ಜೀವನದ ಕೊನೆ ಉಸಿರು ಬಿಡಲಿರುವರೆಂಬ ಸುದ್ದಿ ಕೇಳಿದೊಡನೆಯೇ ನಾನು ಮತ್ತು ಸರೋಜಿನೀದೇವಿ ಅತ್ತ ಧಾವಿಸಿದೆವು. ಅವರ ಕುಟುಂಬಕ್ಕೆ ಸೇರಿದ ಎಷ್ಟೋಮಂದಿ ಅಕ್ಕಪಕ್ಕದಲ್ಲಿ ನೆರೆದಿದ್ದರು. ಅವರ ವೈದ್ಯರೂ, ಹಿತ ಚಿಂತಕರೂ ಆದ ಡಾ. ಅನ್ಸಾರಿ ಅವರೂ ಉಪಸ್ಥಿತರಿದ್ದರು. ಮೌಲಾನಾ ಮೊಹಮ್ಮದ್ ಅಲೀ ಅವರ ಕೆನ್ನೆಯ ಮೇಲೆ ಅವಶ್ಯವಾಗಿ ಕಣ್ಣೀರು ತೊಟ್ಟಿಕ್ಕುತ್ತಿದ್ದಿತಾದರೂ, ಅಲ್ಲಿ ಯಾರೂ ಅಳುವ ಶಬ್ದ ಕೇಳಿ ಬರುತ್ತಿರಲಿಲ್ಲ. ದೊಡ್ಡಣ್ಣ*ನವರ ಮುಖದಮೇಲೆ ಅಸಾಧಾರಣ ಗಂಭೀರ ಭಾವ ಕಂಡುಬರು

*ಶೌಕತ್ ಅಲೀ

ತ್ತಿದ್ದರೂ, ದುಃಖದ ಆವೇಗವನ್ನು ಅವರು ಕಷ್ಟಪಟ್ಟು ತಡೆದು ಕೊಂಡಿದ್ದರು. ಎಲ್ಲರೂ ಅಲ್ಲಾನ ನಾಮೋಚ್ಚಾರಣೆ ಮಾಡುತ್ತಿದ್ದರು. ಓರ್ವ ಸಜ್ಜನರು ಅಂತ್ಯಕಾಲದ ಪ್ರಾರ್ಥನೆ ಹಾಡುತ್ತಿದ್ದರು. 'ಕಾಮ್ರೇಡ್ ಪ್ರೆಸ್', ಅಮ್ಮಾ ಅವರ ಕೋಣೆಗೆ ಬಹಳ ಹತ್ತಿರದಲ್ಲೇ ಇದೆ; ಅಲ್ಲಿಗೆ ಸದ್ದು ಸುಲಭವಾಗಿ ಕೇಳಿಸುತ್ತದೆ. ಆದರೂ, ಅಲ್ಲಿಯ ಕೆಲಸದಲ್ಲಿ ಏನೂ 'ಗಲಿಬಿಲಿ' ಆಗಲಿಲ್ಲ; ಮೌಲಾನ ಅವರಾದರೂ ತಮ್ಮ ಸಂಪಾದಕೀಯ ಕಾರ್ಯಕ್ಕೆ ಅಡಚಣೆ ಉಂಟು ಮಾಡಿಕೊಳ್ಳಲಿಲ್ಲ. ಮುಖ್ಯವಾದ ಯಾವುದೇ ಸಾರ್ವಜನಿಕ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸಹ ರದ್ದು ಮಾಡಲಿಲ್ಲ. ನನ್ನ ರಾಮಜಸ ಕಾಲೇಜಿನ ಸಂದರ್ಶನವನ್ನು ಮುಂದುಹಾಕಲು ಮೌ. ಶೌಕತ್ ಅಲೀ ಕನಸಿನಲ್ಲೂ ಒಪ್ಪಲೊಲ್ಲರು. ಮುಜಫರ್ ನಗರದ ಹಿಂದುಗಳೊಡನೆ ಮೊದಲೇ ಗೊತ್ತುಪಡಿಸಿಕೊಂಡಿದ್ದ ಕಾರ್ಯಕ್ರಮವೊಂದನ್ನು ನೆರವೇರಿಸಲು ಅವರು ಶಿಸ್ತಿನ ಶಿಪಾಯಿಯಂತೆ ಹೊರಟೇ ಬಿಟ್ಟರು ; ಅದರ ಸಲುವಾಗಿ ಅವರು ಅಮ್ಮಾ ಅವರು ನಿಧನರಾದ ಸ್ವಲ್ಪವೇ ಸಮಯದನಂತರ ಅಲ್ಲಿಂದ ಪ್ರಯಾಣ ಮಾಡಬೇಕಾಯಿತು. ಇದೆಲ್ಲ ಹೇಗೆ ಆಗಬೇಕಾಗಿತ್ತೋ ಹಾಗೆಯೇ ಆಯಿತು. ಜನನ—ಮರಣಗಳು ಬೇರೆ ಬೇರೆ ಸ್ಥಿತಿಗಳಲ್ಲ; ಒಂದೇ ಸ್ಥಿತಿಯ ಎರಡು ಬೇರೆ ಬೇರೆ ಸ್ವರೂಪಗಳು. ಮರಣದ ಬಗೆಗೆ ದುಃಖಿಸಬೇಕಾಗಿಯೂ ಇಲ್ಲ; ಜನನದ ಬಗೆಗೆ ಹರ್ಷಿಸಬೇಕಾಗಿಯೂ ಇಲ್ಲ.೬

ಅರವಿಂದ ಘೋಷ್

ಅರವಿಂದ ಬಾಬುಗಳ ವಿಷಯದಲ್ಲಿ ಏನು ಹೇಳುವುದಕ್ಕೂ ನಾನು ಅಸಮರ್ಥ....ಇಷ್ಟನ್ನು ಮಾತ್ರ ಅವಶ್ಯವಾಗಿ ಒಪ್ಪಿಕೊಳ್ಳಲೇ ಬೇಕಾಗುವುದು—ಅರವಿಂದರ ಆಶ್ರಯದಲ್ಲಿ ವಾಸಿಸುತ್ತಿರುವ ಇನ್ನೂರು ಮಂದಿಯಲ್ಲಿ ಅವರ ಸಹವಾಸದಿಂದ ಜೀವನದಲ್ಲಿ ಬಹಳ ಪರಿವರ್ತನೆ ಹೊಂದಿರುವಂಥವರೂ ಇದಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಅನುಷ್ಠಾನ ಮಾಡುತ್ತಾರೆ.೭

ಅರವಿಂದರ ಆಶ್ರಮದ ವಿವರಗಳನ್ನು ತಿಳಿಯಬೇಕು. ಅಲ್ಲಿಗಂತೂ ಜನರ ಪ್ರವಾಹವೇ ಹರಿಯುತ್ತದೆ....ಸದಾ ಅಲ್ಲಿ ಸಾಕಷ್ಟು ಮಂದಿ ಇರುತ್ತಾರೆ. ಅವರಿಗೆ ಸಾಕಷ್ಟು ಭಕ್ತರೂ ಇದಾರೆ. ಹಿಂದೂಗಳೇನು, ಮುಸಲ್ಮಾನರೇನು— ಯಾರನ್ನೂ ಅಲ್ಲಿ ತಿರಸ್ಕಾರಭಾವದಿಂದ ನೋಡುವುದೇ ಇಲ್ಲ. ಸರ್ ಅಕ್ಬರ್ ಹೈದರಿ—ಈಗ ಅವರು ದಿವಂಗತರು—ಪ್ರತಿ ವರ್ಷ ಅಲ್ಲಿಗೆ ಹೋಗುತ್ತಿದ್ದುದಕ್ಕೆ ನಾನೇ ಸಾಕ್ಷಿ. ಅರವಿಂದರಂತೂ ದೀನ ಭಕ್ತರು ; ಅವರು ಯಾರನ್ನೂ ನೋಡುವುದಿಲ್ಲ. ಅವರ ದರ್ಶನ ಆದರೆ ಆಯಿತು ; ಇಲ್ಲದಿದ್ದರೆ ಇಲ್ಲ. ಆದರೂ ಜನ ಅಲ್ಲಿಗೆ ಹೋಗುತ್ತಲೇ ಇದ್ದರು. ಅವರ ಬಳಿ ಇರುವವರ ಹೃದಯದಲ್ಲೂ ತಿರಸ್ಕಾರ ಎಂಬುದು ಇರುವುದೇ ಇಲ್ಲ. ಅಂದಮೇಲೆ ನಾವು ಇಷ್ಟು ಪಾಠವನ್ನಾದರೂ ಕಲಿಯಬಹುದು—ನಮ್ಮ ಹೃದಯದಲ್ಲಿ ತಿರಸ್ಕಾರಭಾವಕ್ಕೆ ಎಡೆಗೊಡ ಬಾರದು.೮

ಅಲೀ ಬಂಧುಗಳು

(ಮೌಲಾನಾ ಶೌಕತ್ ಅಲೀಹಾಗೂ ಮೊಹಮ್ಮದ್ಅಲೀ)

ಶೌಕತ್ ಅಲೀ ಅವರು ಸರಳ ಹಾಗೂ ಸಹವಾಸಪ್ರಿಯ ವ್ಯಕ್ತಿ. ಆದರೆ ಕರ್ಮಠರು, ಯಾರಿಗೂ ಹೆದರುವ, ಸೊಪ್ಪುಹಾಕುವ, ವ್ಯಕ್ತಿಯಲ್ಲ.

ಮೌ. ಶೌಕತ್ ಅಲೀ ಅತ್ಯಂತ ಶೂರ ವೀರರಲ್ಲೊಬ್ಬರು. ಬಲಿದಾನದ ಅದ್ಭುತ ಯೋಗ್ಯತೆ ಅವರಲ್ಲಿದೆ. ಹಾಗೆಯೇ ಭಗವಂತನ ಸೃಷ್ಟಿಯಲ್ಲಿಯ ಅತ್ಯಂತ ಸಾಧಾರಣ ಜನವನ್ನು ಪ್ರಿತಿಸುವ ಅದ್ಭುತ ಪ್ರೇಮಶಕ್ತಿಯೂ ಇದೆ. ಸ್ವತಃ ಇಸ್ಲಾಂ ಮತದಲ್ಲಿ ನಿಷ್ಠೆಯುಳ್ಳವರಾದರೂ ಬೇರೆ ಧರ್ಮಗಳನ್ನು ತಿರಸ್ಕಾರಭಾವದಿಂದ ನೋಡುವವರಲ್ಲ ಮೌ. ಮೊಹಮುದ್ಅಲೀ ಅವರ ಇನ್ನೊಂದುದೇಹ. ಮೌ.ಮೊಹಮ್ಮದ್ ಅಲೀ ಅವರು ತಮ್ಮ ಅಣ್ಣನಲ್ಲಿ ಇಟ್ಟಿರುವ ಅನನ್ಯ ನಿಷ್ಠೆಯನ್ನು ನಾನು ಇನ್ನೆಲ್ಲಿಯೂ ನೋಡಿಲ್ಲ. ಹಿಂದೂ ಮುಸ್ಲಿಮ್ ಐಕ್ಯತೆಯ ಹೊರತು ಹಿಂದೂಸ್ಥಾನದ ವಿಮೋಚನೆಗೆ ಮಾರ್ಗವೇ ಇಲ್ಲವೆಂಬ

ಮಾತು ಅವರ ವಿವೇಕ ಬುದ್ಧಿಗೆ ಖಚಿತವಾಗಿ ಹೋಗಿದೆ. ಅವರ ಪ್ಯಾನ್ ಇಸ್ಲಾಮ್‌ವಾದ (ಮುಸಲ್ಮಾನ್ ಪ್ರಪಂಚಸಂಘಟನೆ) ಹಿಂದೂವಿರೋಧವಲ್ಲ. ಇಸ್ಲಾಮ್ ಒಳಗೂ ಹೊರಗೂ ಶುದ್ಧವಾಗಬೇಕು; ಹೊರಗಿನ ಎಲ್ಲ ಬಗೆಯ ಆಕ್ರಮಣವನ್ನು ಸಂಘಟಿತರೂಪದಲ್ಲಿ ಎದುರಿಸುವ ಶಕ್ತಿಯನ್ನು ಸಂಪಾದಿಸ ಬೇಕು ಎಂಬ ತೀವ್ರ ಆಕಾಂಕ್ಷೆಯನ್ನು ಯಾರು ತಾನೆ ಆಕ್ಷೇಪಿಸಲು ಸಾಧ್ಯ? ಕಾಕಿನಾಡದ ಅವರ ಭಾಷಣದ ಒಂದು ಭಾಗವನ್ನು ಬಹಳ ಆಕ್ಷೇಪಣೀಯವಾದುದೆಂದು ಹೇಳಿ, ನನಗೆ ತೋರಿಸಲಾಯಿತು. ನಾನು ಮೌಲಾನರ ಗಮನವನ್ನು ಅದರ ಕಡೆಗೆ ಸೆಳೆದೆ. ಅವರು ತತ್‌ಕ್ಷಣವೇ ವಸ್ತುತಃ ತಪ್ಪಾಯಿತೆಂದು ಒಪ್ಪಿಕೊಂಡರು. ಮೌ. ಶೌಕತ್ ಅಲೀಯವರ ಖಿಲಾಫತ್ ಪರಿಷತ್ತಿನ ಭಾಷಣದಲ್ಲೂ ಅನೇಕ ಆಕ್ಷೇಪಕರವಾದ ಅಂಶಗಳಿವೆ ಯೆಂದು ಹಲವು ಮಿತ್ರರು ನನಗೆ ತಿಳಿಸಿದ್ದಾರೆ. ಅವರ ಭಾಷಣ ನನ್ನ ಬಳಿ ಇದೆ; ಆದರೆ ಅದನ್ನು ಓದಲು ನನಗೆ ಸಮಯ ಸಿಕ್ಕಿಲ್ಲ. ಆ ಭಾಷಣ ದಲ್ಲಿ ಯಾರ ಮನಸ್ಸಿಗಾದರೂ ನೋವಾಗುವಂಥ ಮಾತೇನಾದರೂ ಇದ್ದರೆ, ಅದನ್ನು ಸರಿಪಡಿಸಲು ಸಿದ್ಧವಿರುವವರಲ್ಲಿ ಮೌ. ಶೌಕತ್ ಅಲೀಯವರು ಎಲ್ಲರಿಗಿಂತ ಮೊದಲಿಗರು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ.

ಅಲೀ ಸಹೋದರರು ದೋಷ ರಹಿತರು ಎಂದಲ್ಲ. ನಾನೂ ಸ್ವತಃ ದೋಷ ಭರಿತನೇ. ಅದರಿಂದ ಈ ಸಹೋದರರ ಸ್ನೇಹದ ಶೋಧನೆ ಮಾಡಲು ಹಾಗೂ ಅದರ ಬೆಲೆಯನ್ನು ತಿಳಿಯಲು ನಾನು ಹಿಂಜರಿಯುವು ದಿಲ್ಲ. ಅವರಲ್ಲಿ ಹಲವು ದೋಷಗಳಿದ್ದರೆ ಅವಕ್ಕಿಂತ ಹೆಚ್ಚಿನ ಗುಣಗಳೂ ಇವೆ. ದೋಷಗಳಿದ್ದರೂ ನಾನು ಅವರನ್ನು ಪ್ರೀತಿಸುತ್ತೇನೆ.

ನಮ್ಮಲ್ಲಿ ಬಹು ಮಂದಿ ಪೂರ್ಣತ್ವವನ್ನು ಸಾಧಿಸಿದವರಾಗಿದ್ದಲ್ಲಿ ನಮ್ಮಲ್ಲಿಯೇ ಜಗಳ ಆಗುತ್ತಿದ್ದಿತೇಕೆ? ಆದರೆ ನಾವೆಲ್ಲರೂ ಅಪೂರ್ಣ ವ್ಯಕ್ತಿಗಳು. ಅಂತಲೆ ನಾವೆಲ್ಲರೂ ಒಬ್ಬರೊಬ್ಬರಿಗೆ ಅನುಕೂಲವಾದ ಮಾತನ್ನು ಹುಡುಕಿ, ಭಗವಂತನ ಮೇಲೆ ಭರವಸೆಯಿಟ್ಟು ಧ್ಯೇಯಕ್ಕಾಗಿ ಮಡಿಯಬೇಕು.

ಅವರಿಗೆ (ಮೌ. ಶೌಕತ್ ಅಲೀ ಅವರಿಗೆ) ಉರ್ದು ಕವಿಗಳ ಸೊಗಸಾದ ವಚನಗಳು ಕಂಠಸ್ಥವಾಗಿವೆ. ಆ ವಚನಗಳನ್ನು ಅವರು ಹೇಳುತ್ತಿದ್ದಾಗಲೂ, ಆ ಕಾಲದಲ್ಲಿ ಯಾವುದೇ ಮಾತುಗಳನ್ನು ಆಡುತ್ತಿದ್ದಾಗಲೂ ಪ್ರಾಮಾಣಿಕರಾಗಿಯೇ ಇದ್ದರು. ಇಂದಿಗೂ ಪ್ರಾಮಾಣಿಕರೇ ಆಗಿದಾರೆ. ಅವರು ಸುಳ್ಳು ಹೇಳುತ್ತಿದ್ದರೆಂದಾಗಲಿ, ಮೋಸ ಮಾಡುತ್ತಿದ್ದರೆಂದಾಗಲಿ ನನಗೆ ಎಂದೂ ಅನಿಸಲಿಲ್ಲ. ಇಂದು ಹಿಂದೂಗಳು ವಿಶ್ವಾಸ ಪಾತ್ರರಲ್ಲವೆಂದೂ ಅವರೊಡನೆ ಜಗಳವಾಡುವುದರಿಂದಲೇ ರಾಷ್ಟ್ರದ ಕಲ್ಯಾಣವಾದೀತೆಂದೂ ಅವರು ಭಾವಿಸಿದಾರೆ. ಈ ಮನಃಸ್ಥಿತಿಯೇನೋ ಕೆಟ್ಟದೇ; ಆದರೆ, ಅವರ ಹೃದಯದಲ್ಲಿ ಇರುವುದು ರಾಷ್ಟ್ರಸೇವೆಯ ಮಾತು; ಸ್ವಾರ್ಥತೆಯ ವಿಚಾರವೇನೂ ಇಲ್ಲ. ಇಂಥ ಪ್ರಾಮಾಣಿಕ ವ್ಯಕ್ತಿಗಳು ಅನೇಕರಿದಾರೆ.೧೦

ದಿವಂಗತ ಮೌ. ಶೌಕತ್ ಅಲೀ ಯವರ ಸ್ಮಾರಕದ ಸಂಬಂಧದಲ್ಲಿ ಅನೇಕ ಅಭಿಪ್ರಾಯ-ಯೋಜನೆಗಳು ಸೂಚಿತವಾಗಿರುವುದನ್ನು ನೋಡಿದೇನೆ. ಮೌಲಾನರ ಮೃತ್ಯುವಿನ ಸುದ್ದಿ ತಿಳಿದಾಗ—ಇಷ್ಟು ಬೇಗ ಅದು ಸಂಭವಿಸುವುದೆಂದು ಯಾರೂ ನಿರೀಕ್ಷಿಸಿಯೇ ಇರಲಿಲ್ಲ—ಹಲವು ಮುಸಲ್ಮಾನ ಮಿತ್ರರಿಗೆ ನನ್ನ ಹೃದಯಾಂತರಾಳದ ವೇದನೆಯನ್ನು ವ್ಯಕ್ತಪಡಿಸಿ, ಪತ್ರಗಳನ್ನು ಬರೆದೆ. ಅವರಲ್ಲಿ ಒಬ್ಬ ಮಿತ್ರರು ಹೀಗೆ ಬರೆದಿದ್ದಾರೆ:

"....ಮೌಲಾನಾ ಶೌಕತ್ ಅಲೀ ಅವರಿಗೆ ತಮ್ಮದೇ ಆದ ರೀತಿಯಲ್ಲಿ ನಿಜವಾದ ಹಿಂದೂ-ಮುಸ್ಲಿಂ ಒಪ್ಪಂದವನ್ನು ಆಗಗೊಳಿಸುವ ಪ್ರಾಮಾಣಿಕವಾದ ಚಿಂತೆ ಇದ್ದಿತೆಂಬುದನ್ನು ನಾನು ಬಲ್ಲೆ. ತಮ್ಮ ಜೀವನದ ಉದ್ದೇಶವೊಂದು ಅಂತಿಮವಾಗಿ ನೆರವೇರಿತೆಂಬ ಮಾತು ತಿಳಿದರೆ, ಸ್ವರ್ಗದಲ್ಲಿರುವ ಅವರ ಆತ್ಮಕ್ಕೆ ಸಿಕ್ಕುವಷ್ಟು ಶಾಂತಿ ಬೇರಾವ ಕಾರ್ಯದಿಂದಲೂ ಸಿಕ್ಕುವುದಿಲ್ಲ. ಈ ವಿಷಯದಲ್ಲಿ ಸಂದೇಹ ಇರುವಂಥವರೂ ಇದ್ದಾರು. ಆದರೆ, ಮೌಲಾನಾ ಅವರನ್ನೂ-ಅವರ ಮನಸ್ಸಿನ ಅಂತರ್ಯವನ್ನೂ ಒಳಿತಾಗಿ ಅರಿತಿರುವ ನಾನು— ಈ ಮಾತನ್ನು ಭರವಸೆಯಿಂದ ದೃಢೀಕರಿಸಬಲ್ಲೆ."

ಅವರು ಆಗಾಗ ಆವೇಶವಶರಾಗಿ ವಿರೋಧವಾಗಿ ಮಾತನಾಡಿ ಬಿಡುತ್ತಿದ್ದುದುಂಟು; ಆದರೆ, ಖಿಲಾಫತದ ದಿನಗಳಲ್ಲಿ ಯಾವುದರ ಸಲುವಾಗಿ ಬಹಳ ಮೋಹಕವಾದ ರೀತಿಯಲ್ಲಿ ಮಾತನಾಡುತ್ತಿದ್ದರೋ ಹಾಗೂ ಕೆಲಸ ಮಾಡುತ್ತಿದ್ದರೋ ಅದೇ ಐಕ್ಯತೆ ಹಾಗೂ ಶಾಂತಿಯ 'ಹಂಬಲ' ಅವರ ಹೃದಯದಲ್ಲಿ ಇದ್ದೇ ಇತ್ತು: ಅವರ ಸ್ಮರಣಾರ್ಥವಾಗಿ, ಹಿಂದೂ-ಮುಸ್ಲಿಮ್ ಎರಡೂ ಕೋಮುಗಳ ಐಕ್ಯತೆಗಾಗಿ ಕೈಗೊಂಡ ಸಂಯುಕ್ತ-ಸಂಕಲ್ಪವೇ ಸರ್ವ ಶ್ರೇಷ್ಠ ಸ್ಮಾರಕವಾಗುವುದೆಂಬುದರಲ್ಲಿ ನನಗೆ ಲೇಶ ಮಾತ್ರವೂ ಸಂಶಯವಿಲ್ಲ. ಆದರೆ, ಆ ಐಕ್ಯತೆಯ ಸಂಕಲ್ಪ ಕೇವಲ ಸರಸ್ವತೀ ಪ್ರಸನ್ನವಾದುದಾಗಿರಬಾರದು ;, ಸಂಶಯ ಹಾಗೂ ಅವಿಶ್ವಾಸದ ಮೇಲೆ ಆಧಾರಿತವಾದುದೂ ಆಗಿರಬಾರದು ; ಪರಸ್ಪರ ವಿಶ್ವಾಸದ ಮೇಲೆ ಆಧಾರಿತವಾದುದಾಗಿರಬೇಕು. ಬೇರಾವ ಬಗೆಯ ಐಕ್ಯತೆಯೂ ನಮಗೆ ಬೇಡ. ಈ ಐಕ್ಯತೆಯ ಹೊರತು ಹಿಂದೂಸ್ಥಾನಕ್ಕೆ ನಿಜವಾದ ಸ್ವಾತಂತ್ರ್ಯ ಸಿಕ್ಕುವಂತೆಯೇ ಇಲ್ಲ.೧೧

ಮೌಲಾನಾ ಅಬುಲ್‌ಕಲಾಮ್ ಆಜಾದ್

ಕಾಂಗ್ರೆಸ್ಸಿನಲ್ಲಿ ಅನೇಕ ವಿಚಾರಶೀಲರಿದ್ದಾರೆ. ಮೌಲಾನಾ ಅವರು ಸ್ವತಃ ಓರ್ವ ಮಹಾನ್ ವಿಚಾರಶೀಲರು. ಅವರದು ತೀಕ್ಷ್ಣಬುದ್ಧಿ, ಅವರ ಅಧ್ಯಯನ ವಿಸ್ತೃತವಾದುದು. ಅರಬ್ಬಿ, ಫಾರಸಿ ಅಧ್ಯಯನ (ಜ್ಞಾನ) ದಲ್ಲಿ ಅವರಿಗೆ ಸರಿತೂಗುವ ವಿದ್ವಾಂಸರು ದೊರೆಯುವುದು ಕಷ್ಟ. ಅಹಿಂಸೆಯಿಂದಲೇ ಹಿಂದೂಸ್ಥಾನ ಸ್ವತಂತ್ರವಾದೀತು ಎಂಬುದನ್ನು ಅವರು ಅನುಭವದಿಂದ ಕಂಡುಕೊಂಡಿದಾರೆ.೧೨

ಶ್ರೀನಿವಾಸ ಅಯ್ಯಂಗಾರ್

ಶ್ರೀ ಶ್ರೀನಿವಾಸ ಅಯ್ಯಂಗಾರ್ಯರು ಮುಂದಿನ ಕಾಂಗ್ರೆಸ್ ಅಧ್ಯಕ್ಷ ರಾಗಿ ಚುನಾಯಿತರಾಗುವ ಮಾತು ಮೊದಲೇ ಗಟ್ಟಿಯಾಗಿತ್ತು. ಕಾಂಗ್ರೆಸ್ ಸಮಿತಿಗಳು ಓರ್ವ ಉಗ್ರ ಸ್ವರಾಜ್ಯವಾದಿಯನ್ನೇ ಚುನಾಯಿಸಲು ಬದ್ಧವಾಗಿದ್ದವು. ಶ್ರೀನಿವಾಸ ಅಯ್ಯಂಗಾರ್ಯರು ಹೋರಾಟಗಾರರೂ ಹೌದು, ಹಾಗೆಯೇ ಆದರ್ಶವಾದಿಗಳೂ ಹೌದು. ಅವರು ತಾಳ್ಮೆಯಿಲ್ಲದವರು; ತಾಳ್ಮೆಯಿಲ್ಲದ ತುಂಬಿದ ಉತ್ಸಾಹದಿಂದಾಗಿಯೇ ಬಹುಶಃ ಸಾಧಾರಣ ಮನುಷ್ಯರು ಹೋಗಲಾರದ ಆಳಕ್ಕೆ ಧುಮ್ಮಿಕ್ಕಲು ಇವರಿಗೆ ಸಾಧ್ಯವಾಗುತ್ತದೆ. ಇವರು ಯಾವುದೇ ಕಾರ್ಯದಲ್ಲಾಗಲಿ ಮೀನ ಮೇಷ ಎಣಿಸದೆಯೇ ತೊಡಗಿಬಿಡುತ್ತಾರೆ. ಹಿಂದೆಂದೂ ಸಂಭವಿಸದಿದ್ದಂಥ ಸಂಕಟ ಸಮಯದಲ್ಲಿ ಇಷ್ಟೊಂದು ಹೊಣೆಗಾರಿಕೆಯ ಸ್ಥಾನಕ್ಕೆ ಇವರ ಆಯ್ಕೆ ಆಗಿದೆ. ಆದರೆ, ಶ್ರೀ ಅಯ್ಯಂಗಾರ್ಯರಿಗೆ ತಮ್ಮಲ್ಲೂ, ತಮ್ಮ ಶಕ್ತಿಯಲ್ಲೂ ವಿಶ್ವಾಸವಿದೆ. ತಮ್ಮಲ್ಲಿಯೇ ವಿಶ್ವಾಸ ಇಟ್ಟುಕೊಂಡಿರುವವರಿಗೆ ದೇವರು ಸಹಾಯ ಮಾಡುವನೆಂಬ ಮಾತು ಸರ್ವ ವಿದಿತ. ಭಗವಂತ ಶ್ರೀ ಅಯ್ಯಂಗಾರ್ಯರಿಗೆ ಸಹಾಯ ಮಾಡಲೆಂದು ಆಶಿಸೋಣ. ಕಾಂಗ್ರೆಸ್ಸಿಗರು ನೀಡಬಹುದಾದ ಎಲ್ಲ ಸಹಾಯದ ಆವಶ್ಯಕತೆಯೂ ಅಯ್ಯಂಗಾರ್ಯರಿಗೆ ಇದೆ. ನಿಷ್ಕ್ರಿಯ ಭಕ್ತಿಯ ವಿದ್ಯೆಯನ್ನೇನೋ ನಾವು ಕಲಿತುಕೊಂಡಿದ್ದೇವೆ; ಆದರೆ ಇದೀಗ ಸಕ್ರಿಯಭಕ್ತಿ ತೋರುವುದನ್ನು ಕಲಿಯಬೇಕಾದ ಸಮಯ ಬಂದಿದೆ. ತಮ್ಮ ಸ್ವೀಕೃತ ನೀತಿ ಹಾಗೂ ನಿರ್ಣಯಗಳನ್ನು—ಅವುಗಳನ್ನು ಸ್ವೀಕರಿಸುವುದರಲ್ಲಿ ತಮ್ಮದೇ ಕೈ ಇರುತ್ತದೆ. ಕಾಂಗ್ರೆಸ್ಸಿಗರು ಪಾಲಿಸುವುದಾದರೆ ಅಯ್ಯಂಗಾರ್ಯರ ಕಾರ್ಯ ಕಠಿಣವಾಗಿದ್ದರೂ, ಸುಲಭವಾಗುತ್ತದೆ. ಯಾವುದೇ ಸಂಸ್ಥೆಯ ಸದಸ್ಯರಾಗಲಿ, ತಮ್ಮ ಸಂಸ್ಥೆಯನ್ನು ಅಭಿವೃದ್ಧಿಗೊಳಿಸಬೇಕಾದರೆ ಕನಿಷ್ಠ ಪಕ್ಷ ಇಷ್ಟನ್ನಾದರೂ ಮಾಡಲೇಬೇಕು. ದೊಡ್ಡ ಗೌರವಸ್ಥಾನ ದೊರೆತುದಕ್ಕಾಗಿ ಶ್ರೀ ಅಯ್ಯಂಗಾರ್ಯರನ್ನು ಅಭಿನಂದಿಸುತ್ತೇನೆ. ಹಾಗೆಯೇ ಅವರು ಎದುರಿಸಬೇಕಾಗುವ ಸಾಧಾರಣ ತೊಂದರೆ ತೊಡಕುಗಳ ಬಗೆಗೆ ಅವರಿಗೆ ಸಹಾನುಭೂತಿಯನ್ನೂ ವ್ಯಕ್ತಪಡಿಸುತ್ತೇನೆ.

ಕೃತಜ್ಞತಾಪೂರ್ವಕವಾದ ಅಭಿನಂದನೆಗೆ ಭಾಗಿಗಳಾಗಿದಾರೆ. ಸಮಿತಿಯ ಸಂಚಾಲಕರಾದ ಶ್ರೀ ಕುಮಾರಪ್ಪನವರು ಗುಜರಾತ್ ವಿದ್ಯಾಪೀಠದ ಅಧ್ಯಾಪಕರಾಗಿದಾರೆ. ಆದಕಾರಣ ಇದರಲ್ಲಿ ಅವರ ಪಾಲಿನ ಅಂಥ ತ್ಯಾಗವೇನೂ ಇಲ್ಲ. ಅವರಿಗೆ ರಾಷ್ಟ್ರ ಸೇವಕರು ಎಂಬ ನಾಮಾಂಕಿತವೇ ಇದೆ. ಅಂತಲೆ ಅವರ ಸಮಯ ಹಾಗೂ ಶ್ರಮ ರಾಷ್ಟ್ರೀಯ ಮಹಾ ಸಭೆ (ಕಾಂಗ್ರೆಸ್)ಯ ಚರಣಗಳಲ್ಲಿ ಅರ್ಪಿತವಾಗಿಯೇ ಹೋಗಿದೆ. ಈ ವಿಶಿಷ್ಟ ಕಾರ್ಯಕ್ಕೆ ಕುಮಾರಪ್ಪನವರನ್ನು ಆರಿಸಿಕೊಂಡುದಕ್ಕೆ ಅರ್ಥಶಾಸ್ತ್ರದಲ್ಲಿ ಅವರಿಗಿರುವ ಪ್ರಬುದ್ಧ ಜ್ಞಾನ ಹಾಗೂ ಸಂಶೋಧನ ಕಾರ್ಯದ ಬಗೆಗೆ ಅವರಿಗಿರುವ ತೀವ್ರಾಸಕ್ತಿಯೇ ಕಾರಣ. ವರದಿಯ ಲೇಖಕರ ಪರಿಚಯವನ್ನು ನಾನು ಮಾಡಿಕೊಟ್ಟುದಕ್ಕೆ ಕಾರಣವಿಷ್ಟೆ: ಈ ವರದಿ ಗಾಢಜ್ಞಾನವಿಲ್ಲದ ರಾಜನೀತಿಜ್ಞರು ಬರೆದುದಲ್ಲ; ಸಂಪನ್ನ ಸಂಭಾವಿತರು ಬರೆದುದು; ದುರಾಗ್ರಹಿ ಉಪದೇಶಕರು ಬರೆದುದಲ್ಲ--ಸ್ವತಃ ಯಾವ ವಿಷಯದಲ್ಲಿ ತಮಗೆ ಜ್ಞಾನವಿದೆಯೋ ಆ ವಿಷಯದ ಮೇಲೆ, ತಮ್ಮ ಒಂದೊಂದು ಶಬ್ದವನ್ನು ತೂಗಿ ತೂಗಿ ಪ್ರಯೋಗಿಸುವಂಥವರು ಬರೆದುದು–ಎಂಬುದನ್ನು ವಿದೇಶೀ ಪಾಠಕರು ತಿಳಿಯಬೇಕು.೧೭

ವೆಂಕಟಕೃಷ್ಣಯ್ಯ

ಮೈಸೂರಿನ ಪಿತಾಮಹ ಸ್ವರ್ಗೀಯ ಶ್ರೀ ವೆಂಕಟ ಕೃಷ್ಣಯ್ಯನವರ ಚಿತ್ರವನ್ನು ನನ್ನ ಕೈಯಿಂದ ಉದ್ಘಾಟನೆ ಮಾಡಿಸಿ ನನ್ನ ಆಂತರಿಕ ಆನಂದವನ್ನು ಇನ್ನೂ ಹೆಚ್ಚಿಸಿದ್ದೀರಿ. ಅವರ ಕಲಾ ಕೌಶಲದ ಬಗೆಗೆ ಚಿತ್ರಕಾರರನ್ನು ಅಭಿನಂದಿಸುತ್ತೇನೆ. ಬಹಳ ಸುಂದರವಾಗಿ, ಯಥಾರ್ಥವಾಗಿ ಚಿತ್ರಣ ಮಾಡಿದಾರೆ. ಆ ದಿನಗಳಲ್ಲಿ* ಈ ದಿವಂಗತ ಮಹರ್ಷಿಯ ಸತ್ಸಂಗದ ಆನಂದ ಲಾಭ ನನಗೆ ಎಷ್ಟು ಹೆಚ್ಚಾಗಿ ಲಭಿಸಿದ್ದಿತೆಂಬುದು ಪ್ರಾಯಶಃ ನಿಮ್ಮೆಲ್ಲರಿಗೂ ತಿಳಿದಿರಲಿಕ್ಕಿಲ್ಲ. ಅವರ ಅನೇಕ ಸದ್ಗುಣಗಳ ಪರಿಚಯ ನನಗೆ ಆಗಿತ್ತು. ನಿಮ್ಮ ಹೃದಯದಲ್ಲಿ ಅವರಿಗೊಂದು ವಿಶೇಷಸ್ಥಾನವಿದೆ

ಯೆಂಬುದನ್ನು ನಾನು ಆಗಲೇ ತಿಳಿದುಕೊಂಡಿದ್ದೆ. ಅವರ ಅನೇಕ ಗುಣಗಳ ವರ್ಣನೆಯನ್ನು ನಾನು ಮಾಡುವೆನೆಂಬುದಾಗಿ ನೀವು ನಿರೀಕ್ಷಿಸುವುದಿಲ್ಲವೆಂಬ ನಂಬಿಕೆ ನನಗಿದೆ. ನೀವು ಇಲ್ಲಿಯ ನಿವಾಸಿಗಳೇ ಆಗಿರುವುದರಿಂದ ನನಗಿಂತ ಹೆಚ್ಚಾಗಿ ನಿಮಗೇ ಅವರ ಗುಣಗಳ ಪರಿಚಯ ಇರಬೇಕು. ಸ್ವರ್ಗೀಯ ವೆಂಕಟಕೃಷ್ಣಯ್ಯನವರ ಯಾವ ಗುಣಗಳನ್ನು ಇಂದು ನಾವು ಗಾನಮಾಡುತ್ತಿರುವೆವೋ, ಅವನ್ನು ಸ್ವತಃ ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡೋಣ - ಎಂಬುದಿಷ್ಟೇ ನನ್ನ ಆಶಯ. ಆ ಹಿರಿಯ ಜೀವದ ಚಿತ್ರವನ್ನು ಗಾಂಧೀ ಕೈಯಿಂದ ಉದ್ಘಾಟನೆ ಮಾಡಿಸಿದುದಾಯಿತು ; ಅವರ ನೆನಪಿನಲ್ಲಿ ಒಂದು ಒಳ್ಳೆಯ ಉತ್ಸವವನ್ನು ಆಚರಿಸಿದುದೂ ಆಯಿತು.—ಇದಕ್ಕಿಂತ ಇನ್ನೇನು ಬೇಕು?—" ಎಂಬ ಆತ್ಮಪ್ರಶಂಸೆಗೆ ಎಂದಿಗೂ ಬಲಿಯಾಗದಿರುವುದೇ ಒಳಿತು.೧೮

ತಾತ್ಯಾ ಸಾಹೇಬ್ ಕೇಳ್ಕರ್

ತಾತ್ಯಾ ಸಾಹೇಬ್ ಕೇಳ್ಕರ್ ಅವರಂಥ ಮಹಾನ್ ದೇಶಭಕ್ತರ ಮರಣದ ಬಗೆಗೆ ನಾನೇಕೆ ಪ್ರಸ್ತಾವ ಮಾಡಿಲ್ಲವೆಂದು ಸ್ನೇಹಿತರು ಹಲವು ಬಾರಿ ನನ್ನನ್ನು ಕೇಳಿದ್ದಾರೆ. ಅವರು ನನ್ನ ರಾಜಕೀಯ ವಿರೋಧಿಗಳಾಗಿದ್ದುದನ್ನೂ ಅದಕ್ಕಿಂತ ಹೆಚ್ಚಾಗಿ ಮಹಾರಾಷ್ಟ್ರೀಯರ ಒಂದು ಪಂಥದವರಲ್ಲಿ ನನ್ನ ಬಗೆಗೆ ಹೆಚ್ಚಿನ ತಪ್ಪು ತಿಳಿವಳಿಕೆ ಮಾಡಿರುವುದನ್ನೂ ದೃಷ್ಟಿಯಲ್ಲಿರಿಸಿಕೊಂಡು ದಿವಂಗತರ ಮರಣದ ಬಗೆಗೆ ಪ್ರಸ್ತಾವಿಸಬೇಕಾಗಿತ್ತೆಂಬುದು ಸ್ನೇಹಿತರ ಅಭಿಪ್ರಾಯ. ಆದರೆ ಯಾವ ಕಾರಣಗಳು ದಿವಂಗತರ ಮರಣ ಕುರಿತು ಪ್ರಸ್ತಾವಿಸುವುದಕ್ಕೆ ಪ್ರೇರಕ ಕಾರಣಗಳಾಗಬೇಕಾಗಿತ್ತೆಂಬುದಾಗಿ ನನ್ನ ಟೀಕಾಕಾರರು ಭಾವಿಸುತ್ತಾರೋ, ಆ ಕಾರಣಗಳು ಮಾತ್ರ ನನ್ನಮನಸ್ಸಿಗೆ ಹಿಡಿಸಲಿಲ್ಲ.

ಮೃತ್ಯುವಿನಂಥ ಗಂಭೀರ ಘಟನೆಯನ್ನು ಸಾಧಾರಣ ನಿಯಮಗಳಿಗೆ ಅನುಗುಣವಾಗಿ ಪ್ರಸ್ತಾವಿಸುವುದು ತೀರ ಅನುಚಿತವೆಂದು ನನ್ನ ಭಾವನೆ.

* ಆರು ವರ್ಷಗಳ ಹಿಂದೆ ಸಂಸ್ಥಾನಕ್ಕೆ ಗಾಂಧೀಜೀ ಭೇಟಿಯಿತ್ತಿದ್ದರು.

ಆದರೆ ನನ್ನ ಅತ್ಯಂತ ಹಳೆಯ ಮಿತ್ರರಲ್ಲೊಬ್ಬರಾದ ಹರಿಭಾವೂ ಪಾಠಕರ ಆಗ್ರಹದಿಂದಾಗಿ ಕಾಲಮಿಾರಿದ್ದರೂ ಹಾಗೆ ಮಾಡಬೇಕಾಗಿದೆ.

'ಹರಿಜನ ಪತ್ರಿಕೆಯಲ್ಲಿ ಮಾಡುವುದು ವಾಡಿಕೆಯಾಗಿದ್ದಲ್ಲಿ ಪ್ರಥಮತಃ ಪ್ರಸ್ತಾವಿಸಲ್ಪಡಬೇಕಾದ ಮರಣಗಳಲ್ಲಿ ತಾತ್ಯಾ ಸಾಹೇಬರದು ಒಂದಾಗಿರಬೇಕೆಂಬುದನ್ನು ಮಿಾನಮೇಷ ಎಣಿಸದೆ ಒಪ್ಪಿಕೊಳ್ಳುತ್ತೇನೆ. ಆದರೆ ಅಂಥ ಯಾವ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿಲ್ಲವೆಂಬುದು ಹರಿಜನ ಪತ್ರಿಕೆಯ ಶ್ರದ್ಧಾಳು ಪಾಠಕರಿಗೆ ಗೊತ್ತು. ಆಯಾಕ್ಷಣದ ನನ್ನ ಗೀಳು ಅಥವಾ ನನಗೆ ಇರಬಹುದಾದ ಕಾಲಾವಕಾಶವನ್ನು ಅನುಸರಿಸಿ ಇಂಥ ಘಟನೆಗಳನ್ನು ಪ್ರಸ್ತಾವಿಸುತ್ತ ಬಂದಿದೇನೆ. ಕೆಲವು ಕಾಲದಿಂದ ನನಗೆ ವೃತ್ತಪತ್ರಿಕೆಗಳನ್ನು ಕ್ರಮವಾಗಿ ಓದುವುದಕ್ಕೂ ಆಗುತ್ತಿಲ್ಲ.

ಈ ನನ್ನ ಮಾತಿಗೆ ವಿರೋಧವಾಗಿ ಯಾರು ಏನೇ ಹೇಳಲೊಲ್ಲರೇಕೆ, ತಾತ್ಯಾ ಸಾಹೇಬರನ್ನು—ಅವರು ನನ್ನ ರಾಜಕೀಯ ವಿರೋಧಿಗಳೇ ಆಗಿದ್ದರೂ ನಾನು ಸದಾ ನನ್ನ ಸ್ನೇಹಿತರೆಂದೇ ಭಾವಿಸಿದ್ದೆ. ಅವರ ಟೀಕೆಯಿಂದ ನನಗೆ ಲಾಭವೇ ಆಗುತ್ತಿತ್ತು. ನಾನು ಅವರನ್ನು ದಿವಂಗತ ಲೋಕಮಾನ್ಯರ ನೆಚ್ಚಿನ ಅನುಯಾಯಿಯೆಂದು ಭಾವಿಸಿ ಅದೇ ದೃಷ್ಟಿಯಿಂದ ಗೌರವಿಸುತ್ತಿದ್ದೆ. ನನಗೆ ನೆನಪಿರುವ ಮಟ್ಟಿಗೆ ೧೯೧೯ರಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಕಾಂಗ್ರೆಸ್ಸಿಗೊಂದು 'ಅಂಗರಚನೆ' ಇರಬೇಕೆಂದು ಪ್ರತಿವಾದಿಸಿ ಲೋಕಮಾನ್ಯ ತಾತ್ಯಾ ಸಾಹೇಬರನ್ನು, ದೇಶಬಂಧುಗಳು ನಿಶಿಥ್‌ಸೇನರನ್ನೂ ನನ್ನ ಸಹಾಯಕ್ಕೆ ಕೊಟ್ಟರೆ, 'ಅಂಗರಚನೆ' ಯೊಂದನ್ನು ರೂಪಿಸಿ ಕಾಂಗ್ರೆಸ್ಸಿನ ಪರ್ಯಾಲೋಚನೆಗಾಗಿ ಮಂಡಿಸುವ ಜವಾಬುದಾರಿಯನ್ನು ವಹಿಸಿಕೊಳ್ಳುವುದಾಗಿ ಹೇಳಿದೆ. ಆ ನನ್ನ ಇಬ್ಬರು ಸಹೋದ್ಯೋಗಿ ಸಜ್ಜನರ ಬಗೆಗೆ ನಾನು ಎರಡು ಪ್ರಶಂಸೆಯ ಮಾತು ಹೇಳಲೇಬೇಕು:—ನಾನು ಸಕಾಲದಲ್ಲಿ 'ಕರಡ' ನ್ನು ಸಿದ್ಧಗೊಳಿಸಿ ಕೊಟ್ಟೆನಾದರೂ, ಅವರಿಬ್ಬರೂ ಅದರಲ್ಲಿ ಯಾವ 'ಹಸ್ತಕ್ಷೇಪ' ವನ್ನೂ ಮಾಡಲಿಲ್ಲ. ಕರಡನ್ನು ಪರಿಶೀಲಿಸಲು ಸಮಿತಿ ಸಭೆಸೇರಿದಾಗಲೆಲ್ಲ ತಾತ್ಯಾ ಸಾಹೇಬರು ಉಪಯುಕ್ತವಾದ ಟೀಕೆಯನ್ನೇ ಮಾಡುತ್ತಿದ್ದರು. ಅವರು ಎಡಬಿಡದೆ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ನೇಮಕವಾಗುತ್ತಿದ್ದುದೂ ನನ್ನ ಸಲಹೆಯ ಪ್ರಕಾರವೇ. ಅವರ

ಟೀಕೆ—ಕೆಲವು ವೇಳೆ ಕಟುವಾಗಿಯೇ ಇರುತ್ತಿದ್ದರೂ-ರಚನಾತ್ಮಕವಾಗಿರದಿದ್ದ ಒಂದು ಸಂದರ್ಭವೂ ನನಗೆ ನೆನಪಿಲ್ಲ. ಅವರೂ ನಿರ್ಭೀತರಾಗಿದ್ದರು; ವಿನಯಶೀಲರೂ, ಸ್ನೇಹಪರರೂ ಆಗಿದ್ದರು.

ಅವರು ಮರಾಠಿಯಲ್ಲಿ ಓರ್ವ ವಿದ್ವಾನ್ ಲೇಖಕರಾಗಿದ್ದರೆಂಬುದು ನನಗೆ ಮೊದಲೇ ತಿಳಿದಿತ್ತು. ತಾತ್ಯಾ ಸಾಹೇಬ್ ಹಾಗೂ ದಿವಂಗತ ಹರಿ ನಾರಾಯಣ ಆಪ್ಟೆ ಅವರಂಥ ಆಧುನಿಕ ಮರಾಠೀ ಲೇಖಕರ ಜ್ಞಾನಸುಧೆ ಪಾನಮಾಡುವ ಸಲುವಾಗಿ ಸಾಕಷ್ಟು ಮರಾಠಿಯನ್ನು ಕಲಿಯಲು ನನಗೆ ಸಮಯ ಸಿಕ್ಕಲಿಲ್ಲವಲ್ಲಾ ಎಂಬುದೇ ನನ್ನ ವ್ಯಥೆ. ಭಾರತೀಯ ಗಗನ ಮಂಡಲದಲ್ಲಿ ಶ್ರೀ ನರಸೋಪಂತ್ ಚಿಂತಾಮನ್ ಕೇಳ್ಕರ್‌ರಂಥ ಮಹಾನ್ ನಕ್ಷತ್ರ ಅಸ್ತಂಗತವಾದುದನ್ನು ಉಪೇಕ್ಷಿಸುವುದೆಂದರೆ, ಅದು ನನ್ನ ಪಾಲಿಗೆ ಅಸಭ್ಯತೆಯೆನಿಸದಿರದು.೧೯

ಕೆಳಪ್ಪನ್

ಶ್ರೀ ಕೆಳಪ್ಪನ್ ನನ್ನ ಅಭಿಪ್ರಾಯದಲ್ಲಿ ಭಾರತವರ್ಷದ ಅತ್ಯಂತ ಒಳ್ಳೆಯ ಮೂಕಸೇವಕರಲ್ಲಿ ಒಬ್ಬರು. ಅವರಿಗೆ ಯಾವಾಗ ಬೇಕಾದರೂ ಉನ್ನತ ಪದವಿ ಸಿಕ್ಕುವ ಅವಕಾಶವಿತ್ತು. ಅವರು ಮಲಬಾರಿನ ಪ್ರಸಿದ್ಧ ಲೋಕಸೇವಕರು ; ಆದರೆ ಅವರು ಉದ್ದೇಶಪೂರ್ವಕವಾಗಿಯೇ ದೂರೀಕರಿಸಲ್ಪಟ್ಟ ಹಾಗೂ ಅಸ್ಪೃಶ್ಯಜನರ ಸೇವೆಯಲ್ಲಿ ತೊಡಗಿದರು. ವೈಕಮ್ ಸತ್ಯಾಗ್ರಹದ ಕಾಲಕ್ಕೆ ಅವರೊಡನೆ ಕೆಲಸಮಾಡುವ ಆನಂದ ಹಾಗೂ ಗೌರವ ನನಗೆ ಸಿಕ್ಕಿತ್ತು. ಅದಕ್ಕೂ ಹಿಂದೆ ಬಹುಕಾಲದಿಂದ ಹಾಗೂ ಅದರ ನಂತರವೂ ಅವರು ದಲಿತವರ್ಗದ ಉನ್ನತಿಕಾರ್ಯದಲ್ಲಿ ತಮ್ಮ ಜೀವನವನ್ನು ನಡೆಸಿದ್ದಾರೆ. ದೀರ್ಘಕಾಲ ಕಾದುನೋಡಿದಮೇಲೆ, ಗುರುವಾಯೂರು ದೇವಾಲಯವನ್ನು ಹರಿಜನರ ಸಲುವಾಗಿ ತೆರೆಯಿಸುವ ಪ್ರಯತ್ನದಲ್ಲಿ ಪ್ರಾಣಾರ್ಪಣೆ ಮಾಡುವ ದೃಢಸಂಕಲ್ಪವನ್ನು ಅವರು ಮಾಡಿದ್ದುದು ಜನತೆಗೆ ಗೊತ್ತು.೨೦

ಧರ್ಮಾನಂದ ಕೌಸಾಂಬೀ

[ಬೌದ್ಧ ವಿದ್ವಾನ್ ಶ್ರೀ ಕೌಸಾಂಬೀ ಅವರ ಮರಣದ ಸುದ್ದಿಯನ್ನು ತಿಳಿಸುತ್ತ, ಗಾಂಧೀಜೀ ಹೀಗೆಂದರು:]

ಪ್ರಾಯಶಃ ನೀವು ಅವರ ಹೆಸರನ್ನು ಕೇಳಿರಲಿಕ್ಕಿಲ್ಲ. ಅದರಿಂದಾಗಿ ಶೋಕಾಚರಣೆ ಮಾಡುವುದನ್ನು ಇಚ್ಛಿಸಲಾರಿರಿ. ಹಾಗೆ ನೋಡಿದರೆ, ಯಾವುದೇ ಮರಣದ ಬಗೆಗೆ ಶೋಕಾಚರಣೆ ಮಾಡಬಾರದು. ಆದರೆ, ತನಗೆ ಮಿತ್ರರಾದವರು ಅಥವಾ ಪೂಜ್ಯರಾದವರು ನಿಧನರಾದರೆ ಶೋಕಾಚರಣೆ ಮಾಡಿಯೇ ಮಾಡುವುದು ಮನುಷ್ಯನ ಸ್ವಭಾವ. ನಾವು ಎಂಥವರಾಗಿದೇವೆಂದರೆ, ಯಾರು ತಮ್ಮ ಕಾರ್ಯದ ಬಗೆಗೆ ಪ್ರತಾಪ ಕೊಚ್ಚಿಕೊಂಡು ತಿರುಗುತ್ತಾರೋ, ಯಾರು ರಾಜಕಾರಣದಲ್ಲಿ ಲಾಗ ಹಾಕುತ್ತಾರೋ ಅವರನ್ನು ಆಗಸಕ್ಕೆ ಏರಿಸಿಬಿಡುತ್ತೇವೆ. ಯಾರು ಮೂಕ ಕಾರ್ಯ ಮಾಡುತ್ತಾರೋ ಅವರನ್ನು 'ಯಾವೂರ ದಾಸಯ್ಯ ?—ಎಂದೂ ಕೇಳುವುದಿಲ್ಲ.

ಕೌಸಾಂಬೀ ಅವರೂ ಅಂಥ ಓರ್ವ ಮೂಕ ಕಾರ್ಯಕರ್ತರೇ. ಅವರು ಹುಟ್ಟಿದುದು ಗೋವಾದಲ್ಲಿ ಅವರು ಜನ್ಮತಃ ಹಿಂದೂ ಆಗಿದ್ದರೂ, ಅಹಿಂಸೆ, ಶೀಲ ಮೊದಲಾದ ಗುಣಗಳು ಬೌದ್ಧ ಧರ್ಮದಲ್ಲಿ ವಿಕಾಸವಾಗಿರುವಷ್ಟು ಬೇರಾವ ಧರ್ಮದಲ್ಲೂ—ವೇದ ಧರ್ಮದಲ್ಲಿ ಕೂಡ—ಆಗಿಲ್ಲವೆಂಬ ದೃಢ ವಿಶ್ವಾಸ ಅವರಲ್ಲಿ ಬೇರೂರಿತು. ಆದಕಾರಣ, ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿ ಬೌದ್ಧ ಶಾಸ್ತ್ರಗಳ ಅಧ್ಯಯನದಲ್ಲಿ ತೊಡಗಿದರು. ಅವರು ಅದರಲ್ಲಿ ಎಷ್ಟು ದೊಡ್ಡ ವಿದ್ವಾಂಸರಾದರೆಂದರೆ, ಪ್ರಾಯಶಃ ಅವರಿಗೆ ಸರಿಗಟ್ಟಬಲ್ಲವರು ಭಾರತದಲ್ಲಿ ಬೇರೊಬ್ಬರಿಲ್ಲ. ಅವರು ಗುಜರಾತ್ ವಿದ್ಯಾಪೀಠ ಹಾಗೂ ಕಾಶೀ ವಿದ್ಯಾಪೀಠದಲ್ಲಿ 'ಪಾಳಿ' ಭಾಷೆಯನ್ನು ಕಲಿಸಿದರು ; ತಮ್ಮ ಅಗಾಧ ವಿದ್ವತ್ತಿನ ಜ್ಞಾನದಾನ ಮಾಡಿದರು.

ಯಾರೋ ತಮಗೆ ಕೊಟ್ಟಿದ್ದ ೧೦೦೦|— ರೂಪಾಯಿಗಳನ್ನು ನನಗೆ ಕಳುಹಿಸಿಕೊಟ್ಟು, ಯಾರನ್ನಾದರೂ ಪಾಳೀ ಭಾಷೆ ಕಲಿಯಲು ಲಂಕೆಗೆ ಕಳುಹಿಸಬೇಕೆಂದು ಬರೆದರು. 'ಲಂಕೆಗೆ ಹೋಗಿ ಓದುವುದರಿಂದ

ಯಾರಿಗೇ ಆಗಲಿ, ಬೌದ್ಧ ಧರ್ಮದ ಜ್ಞಾನ ಪ್ರಾಪ್ತಿ ಆದೀತೆ ?'—ಎಂಬು ದಾಗಿ ಅವರನ್ನು ಕೇಳಿದೆ. ಪ್ರಪಂಚದ ಬೌದ್ಧ ಜನರಿಗೆ ನಾನು ಹೀಗೆ ಹೇಳಿದೇನೆ—'ನಿಮಗೆ ಬೌದ್ಧ ಧರ್ಮವನ್ನು ಅರಿಯುವ ಇಚ್ಛೆಯಿದ್ದರೆ, ಅದು ನಿಮಗೆ ಅದರ ಜನ್ಮ ಸ್ಥಾನವಾದ ಭಾರತದಲ್ಲಿಯೇ ಸಿಕ್ಕೀತು. ಅದು ಎಲ್ಲಿ ವೇದ ಧರ್ಮದಿಂದ ಹೊರಟಿದೆಯೋ ಅಲ್ಲಿಯೇ ಅದನ್ನು 'ಶೋಧ' ಮಾಡಬೇಕು. ಅಲ್ಲದೆ, ಶಂಕರಾಚಾರ್ಯರಂಥ ಅದ್ವಿತೀಯ ವಿದ್ವಾಂಸರ—ಅವರು ಪ್ರಚ್ಛನ್ನ ಬುದ್ಧ ಎನಿಸಿಕೊಂಡಿದ್ದರು—ಗ್ರಂಥಗಳನ್ನು ಅರ್ಥಮಾಡಿ ಕೊಂಡಾಗಲೇ, ಬೌದ್ಧ ಧರ್ಮದ ಗೂಢರಹಸ್ಯ ನಿಮಗೆ ತಿಳಿದೀತು.

ಆದರೆ, ಕೌಶಾಂಬೀಯವರ ವಿದ್ವತ್ತಿನೊಡನೆ ನನ್ನದನ್ನು ಹೋಲಿಸಿ ಕೊಳ್ಳಲು ಆಳವಲ್ಲ. ನಾನಾದರೋ ಇಂಗ್ಲೆಂಡಿನಲ್ಲಿ ಊಟಮಾಡಿ, ಬ್ಯಾರಿಸ್ಟರ್ ಆದವನು. ನನ್ನಲ್ಲಿರುವ ಸಂಸ್ಕೃತದ ಜ್ಞಾನ ಎಲ್ಲೋ ಸ್ವಲ್ಪ. ಇಂದು ನಾನು ಮಹಾತ್ಮನಾಗಿದ್ದರೆ ಅದಕ್ಕೆ ನಾನು ಇಂಗ್ಲೀಷ್ ಬ್ಯಾರಿಸ್ಟರ್ ಆಗಿರುವುದು ಕಾರಣವಲ್ಲ; ನಾನು ಸೇವೆ ಮಾಡಿರುವುದು—ಆ ಸೇವೆಯನ್ನು ಸತ್ಯ ಹಾಗೂ ಅಹಿಂಸೆಯ ಮೂಲಕ ಮಾಡಿರುವುದು ಕಾರಣ. ಈ ಸತ್ಯ-ಅಹಿಂಸೆಯ ಪೂಜೆಯಲ್ಲಿ ನನಗೆ ಸಿಕ್ಕುತ್ತ ಬಂದಿರುವ ಅಲ್ಪ-ಸ್ವಲ್ಪ ಸಫಲತೆಯ ಕಾರಣದಿಂದಲೇ ಇಂದು ನನಗೂ ಒಂದಿಷ್ಟು ಸ್ಥಾನ-ಮಾನದೊರೆತಿದೆ.

ತಮ್ಮ ಶರೀರ ಇನ್ನು ಹೆಚ್ಚು ಕೆಲಸ ಮಾಡಲು ಯೋಗ್ಯವಿಲ್ಲವೆಂಬ ಮಾತಿನ ಅರಿವಾದಾಗ ಕೌಶಾಂಬೀಯವರಿಗೆ ಇಚ್ಛೆಯಿಲ್ಲದಿದ್ದರೂ ಅವರು ಉಪವಾಸ ಮಾಡಿ ದೇಹತ್ಯಾಗ ಮಾಡುವ ಸಂಕಲ್ಪ ಮಾಡಿದರು. ತಾಂಡನ್ನರು ಹೇಳಿದುದರಿಂದ ಕೌಸಂಬೀಯವರಿಗೆ ಇಚ್ಛೆಯಿಲ್ಲದಿದ್ದರೂ ಅವರ ಉಪವಾಸವನ್ನು ನಾನು ನಿಲ್ಲಿಸಿದೆ. ಆದರೆ, ಅವರ ಜೀರ್ಣಶಕ್ತಿ ಬಹಳ ಕೆಟ್ಟುಹೋಗಿದ್ದು, ಅವರಿಗೆ ಯಾವುದೇ ಆಹಾರ ತೆಗೆದುಕೊಳ್ಳುವದು ಆಗುತ್ತಿರಲಿಲ್ಲ. ಆಗ ಎರಡನೆಯ ಬಾರಿಗೆ ಸೇವಾ ಗ್ರಾಮದಲ್ಲಿ ನಲವತ್ತು ದಿನಗಳವರೆಗೆ ಕೇವಲ ನೀರನ್ನೇ ಸೇವಿಸುತ್ತಿದ್ದು ಶರೀರತ್ಯಾಗ ಮಾಡಿದರು. ಕಾಯಿಲೆಯ ಕಾಲದಲ್ಲಿ ಹೆಸರಿಗೂ ಸೇವೆ ಹಾಗೂ ಔಷಧಿಯನ್ನು ತೆಗೆದು ಕೊಳ್ಳಲಿಲ್ಲ. ತಮ್ಮ ಜನ್ಮ ಸ್ಥಾನವಾದ ಗೋವಾಕ್ಕೆ ಹೋಗುವ ಮೋಹವನ್ನು ಬಿಟ್ಟರು; ಮಗ ಮೊದಲಾದವರಿಗೆ ತಮ್ಮ ಬಳಿಗೆ ಬರಲಿಕ್ಕೂ ಅನು

ಮತಿ ಕೊಡಲಿಲ್ಲ. ಮೃತ್ಯುವಿನ ನಂತರ ತಮ್ಮ ಸ್ಮಾರಕವೇನನ್ನೂ ಮಾಡ ಬಾರದೆಂದೂ, ಶರೀರವನ್ನು ದಹನ ಹಾಗೂ ಹೂಳುವುದು ಇದರಲ್ಲಿ ಯಾವುದು ಕಡಿಮೆ ಖರ್ಚಿನಲ್ಲಿ ಆಗುವುದೋ ಅದನ್ನೆ ಮಾಡಬೇಕೆಂದೂ ಹೇಳಿದರು. ಹೀಗೆ ಬುದ್ಧನ ನಾಮಜಪ ಮಾಡುತ್ತಮಾಡುತ್ತ ಅಂತಿಮ ವಾದ ಗಾಢ ನಿದ್ರೆಯನ್ನು ಅಪ್ಪಿದರು; ಆ ನಿದ್ರೆಯನ್ನು ಜನ್ಮ ತಾಳುವ ಪ್ರತಿಯೊಬ್ಬರೂ ಒಂದಲ್ಲ ಒಂದು ಕಾಲಕ್ಕೆ ಅಪ್ಪಲೇ ಬೇಕಷ್ಟೆ. ಮೃತ್ಯು ಪ್ರತಿಯೊಬ್ಬರ ಪರಮ ಮಿತ್ರ. ಅದು ತನ್ನ ಕರ್ಮಾನುಸಾರವಾಗಿ ಬಂದೇ ಬರುವುದು. ಇಂಥವರ ಜನ್ಮ ಇಂಥ ಸಮಯಕ್ಕೆ ಆಗುವುದು ಎಂಬುದನ್ನು ಯಾರಾದರೂ ಹೇಳಲಿಕ್ಕೆ ಬಂದೀತು; ಆದರೆ, ಮೃತ್ಯು ಯಾವಾಗ ಬಂದೀತು ಎಂಬುದನ್ನು ಈ ವರೆಗೆ ಯ್ಯಾರೂ ಹೇಳಲು ಸಾಧ್ಯವಾಗಿಲ್ಲ.೨೧

ಖಾನ್ ಅಬ್ದುಲ್ ಗಫಾರ್ ಖಾನ್

ಖಾನ್ ಅಬ್ದುಲ್ ಗಫಾರ್ ಖಾನರ ಸಂಪರ್ಕ ಬೆಳೆಸುವ ಅಭಿಲಾಷೆ ನನಗೆ ಸದಾ ಇದ್ದೇ ಇತ್ತು–ಆದರೆ ಕಳೆದ ವರುಷ ಕಡೆಯ ತಿಂಗಳುಗಳಿಗೆ ಮುಂಚೆ ಅವರೊಡನೆ ಕೆಲಕಾಲ ಇರುವಂಥ ಅವಕಾಶ ನನಗೆ ಸಿಕ್ಕಿಯೇ ಇರಲಿಲ್ಲ. ಆದರೆ, ಹಜಾರೀಬಾಗ್ ಸೆರೆಮನೆಯಿಂದ ಬಿಡುಗಡೆಯಾದಮೇಲೆ, ಅದೃಷ್ಟವಶಾತ್ ಶೀಘ್ರವಾಗಿಯೇ ಖಾನ್ ಅಬ್ದುಲ್ ಗಫಾರ್ ಖಾನರು ಮಾತ್ರವಲ್ಲ, ಅವರ ಅಣ್ಣ ಡಾ. ಖಾನ್ ಸಾಹೇಬರೂ ನನ್ನ ಬಳಿಗೆ ಬಂದರು. ಡಿಸೆಂಬರ್ ೨೭ ರ ವರೆಗೆ ಸರಹದ್ದು ಪ್ರಾಂತವನ್ನು ಪ್ರವೇಶಿಸದಂತೆ ಅವರ ಮೇಲೆ ನಿಷೇಧಾಜ್ಞೆ ಇದ್ದುದೂ ಅದೃಷ್ಟವೆಂದೇ ಭಾವಿಸಬೇಕು. ಕಾಂಗ್ರೆಸ್ಸಿನ ಅದೇಶಕ್ಕೆ ಅನುಸಾರವಾಗಿ ಅವರು ಆ ನಿಷೇಧಾಜ್ಞೆಯನ್ನು ಉಲ್ಲಂಘಿಸುವಂತೆಯೂ ಇರಲಿಲ್ಲ. ಆದಕಾರಣ, ಅವರು ಸೇಠ್ ಜಮುನಾಲಾಲ್ ಬಜಾಜರ ಆತಿಥ್ಯವನ್ನು ಸ್ವೀಕರಿಸಿ, ವರ್ಧಾದಲ್ಲಿ ಉಳಿದರು, ಹೀಗೆ, ಆ ಸಹೋದರರ ಗಾಢ ಸಂಪರ್ಕ ಬೆಳೆಸುವ ಅವಕಾಶ ನನಗೆ ಸಿಕ್ಕಿತು. ಅವರ ಪರಿಚಯ ಎಷ್ಟೆಷ್ಟು ಅಗುತ್ತ ಹೋಯಿತೋ, ಅಷ್ಟಷ್ಟೂ ಹೆಚ್ಚಾಗಿ ನಾನು ಅವರ ಕಡೆಗೆ ಆಕರ್ಷಿತನಾದೆ.

ಅವರ ಗಾಢವಾದ ಪ್ರಾಮಾಣಿಕತೆ, ನಿಶ್ಶಂಕೆಯ ಮಾತು ಹಾಗೂ ಎಲ್ಲ ರೀತಿಯ ಸರಳತೆ ಇವುಗಳಿಂದ ನಾನು ಬಹಳ ಪ್ರಭಾವಿತನಾದೆ. ಹಾಗೆಯೇ ಸತ್ಯ–ಅಹಿಂಸೆಯಲ್ಲಿ ಕೇವಲ ನೀತಿಯ ರೂಪದಲ್ಲಲ್ಲದೆ, ಧ್ಯೇಯದ ರೂಪದಲ್ಲೂ ಅವರಿಗೆ ವಿಶ್ವಾಸ ಮೂಡಿದ್ದುದನ್ನೂ ನಾನು ಕಂಡೆ. ಕಿರಿಯ ಸಹೋದರ ಖಾನ್ ಅಬ್ದುಲ್ ಗಫಾರ್ ಖಾನರಂತೂ ಗಹನವಾದ ಧಾರ್ಮಿಕ ಭಾವನೆಗಳೊಡನೆ ಓತ-ಪ್ರೋತರಾಗಿದ್ದಂತೆ ನನಗೆ ತೋರಿತು, ಆದರೆ ಅವರ ವಿಚಾರ ಸಂಕೀರ್ಣವಲ್ಲ. ನನಗಂತೂ ಅವರು ವಿಶ್ವ–ಪ್ರೇಮಿಗಳಂತೆ ಕಂಡುಬಂದರು. ಅವರಲ್ಲಿ ರಾಜನೈತಿಕತೆ ಏನಾದರೂ ಇದ್ದರೂ, ಅದರ ಆಧಾರ ಅವರ ಧರ್ಮವೇ. ಇನ್ನು, ಡಾಕ್ಟರ್ ಸಾಹೇಬರದಂತೂ ರಾಜನೀತಿ ಯಾವುದೂ ಇಲ್ಲವೇ ಇಲ್ಲ.೨೨

ಖುದಾಯಿಖಿದ್‌ಮತ್‌ಗಾರರು (ಭಗವಂತನ ಸೇವಕರು) ಹೇಗೆಯೇ ಇರಲಿ, ಕೊನೆಗೆ ಅವರು ಎಂಥವರೆಂದೇ ರುಜುವಾತಾಗಲಿ, ಅವರು ಯಾರನ್ನು ಬಾದಶಹಖಾನರೆಂದು ಕರೆದು ಪ್ರಸನ್ನರಾಗುತ್ತಾರೋ, ಆ ಅವರ ನಾಯಕರ ಬಗೆಗೆ ಸಂದೇಹಕ್ಕೆ ಅವಕಾಶವೇ ಇಲ್ಲ. ಅವರು ನಿಸ್ಸಂದೇಹವಾಗಿ ದೈವ–ಭೀರು ಪುರುಷರು. ಆತನ (ಭಗವಂತ) ನಿರಂತರ, ಅಖಂಡ ಅಸ್ತಿತ್ವದಲ್ಲಿ ಅವರಿಗೆ ಪರಮ ಶ್ರದ್ಧೆ. ಭಗವಂತನ ಇಚ್ಛೆಯನ್ನು ಅನುಸರಿಸಿಯೇ ತಮ್ಮ ಆಂದೋಲನದ ಪ್ರಗತಿ ಆಗುವುದೆಂದು ಅವರು ಚೆನ್ನಾಗಿ ತಿಳಿದಿದ್ದಾರೆ. ಭಗವಂತನ ಕಾರ್ಯದಲ್ಲಿ ತಮ್ಮ ಇಡೀ ಆತ್ಮವನ್ನು ಸಮರ್ಪಣೆ ಮಾಡಿರುವ ಅವರು ಪರಿಣಾಮವನ್ನು ಕುರಿತು ಹೆಚ್ಚು ಚಿಂತೆ ಮಾಡುವುದಿಲ್ಲ. ಅಹಿಂಸೆಯನ್ನು ಪೂರ್ಣ ರೂಪದಲ್ಲಿ ಸ್ವೀಕರಿಸಿದಲ್ಲದೆ ಪಠಾಣರಿಗೆ ಮುಕ್ತಿಯಿಲ್ಲವೆಂಬುದರ ಸಾಕ್ಷಾತ್ಕಾರ ಮಾಡಿಕೊಳುವುದಷ್ಟೇ ಅವರಿಗೆ ಗೌರವಾಸ್ಪದವೆಂದು ಭಾವಿಸುವುದಿಲ್ಲ. ಪಠಾಣರ ಪರಾಕ್ರಮದ ಬಗೆಗೆ ಅವರಿಗೆ ಗೌರವವೇ ಇದೆ; ಆದರೆ, ಅದನ್ನು ಅತಿಯಾಗಿ ಪ್ರಶಂಸಿಸಿ, ಕುಲಗೆಡಿಸಲಾಗಿದೆಯೆಂದು ಅವರ ಅಭಿಪ್ರಾಯ. ತಮ್ಮ ಪಠಾಣರನ್ನು ಸಮಾಜದ 'ಗೂಂಡಾ'ಜನರ ರೂಪದಲ್ಲಿ ನೋಡಲು ಅವರು ಇಚ್ಛಿಸುವುದಿಲ್ಲ. ಪಠಾಣರನ್ನು ಅಜ್ಞಾನದಲ್ಲಿರಿಸಿ, ಸ್ವಾರ್ಥ ಸಾಧಿಸಿಕೊಳ್ಳಲಾಗಿದೆಯೆಂದು ಅವರ ಭಾವನೆ. ಅವರು ಪಠಾಣರನ್ನು ಇನ್ನೂ ವೀರರನ್ನಾಗಿ ಮಾಡಲು

ಬಯಸುತ್ತಾರೆ; ಹಾಗೂ ಅವರ ವೀರತೆಯ ಜತೆಗೆ ನಿಜವಾದ ಜ್ಞಾನದ ಸಮಾವೇಶವೂ ಆಗಲೆಂದು ಆಶಿಸುತ್ತಾರೆ. ಕೇವಲ ಅಹಿಂಸೆಯ ಮೂಲಕವೇ ಹಾಗೆ ಆಗುವುದು ಸಾಧ್ಯವೆಂಬುದು ಅವರ ಭಾವನೆ.೨೧

ಬಾದಶಹ ಖಾನರು ನನ್ನ ಮಿತ್ರರು. ಅವರು ಮೌಲಾನಾ ಆಜಾದ್ ಹಾಗೂ ಜವಾಹರಲಾಲರ ಬಂಗಲೆಗಳನ್ನು ಬಿಟ್ಟು, ನನ್ನ ಗುಡಿಸಿಲಿನಲ್ಲಿಯೇ ಬಂದು ಇಳಿದುಕೊಳ್ಳುತ್ತಾರೆ. ಇಲ್ಲಿ ಮೇಕೆಯ ಮಾಂಸವನ್ನೂ ಅವರು ಬೇಡುವುದಿಲ್ಲ. ನನ್ನ ಜತೆಯಲ್ಲಿಯೇ ರೊಟ್ಟಿ–ಹಣ್ಣು ಸೇವಿಸುತ್ತಾರೆ. ಅವರು ಪೂರ್ಣ ಫಕೀರರು. ಅವರ ಸಹಾಯವಿಲ್ಲದೆ, ಅವರ ಅಣ್ಣ ಡಾ|| ಖಾನ್ ಸಾಹೇಬರು ಯಾವ ಕೆಲಸವನ್ನೂ ಮಾಡಲಾರರು. ಅವರನ್ನು ನಾವು ಗಡಿನಾಡಿನ ಗಾಂಧೀ ಎಂದು ಕರೆಯುತ್ತೇವೆ. ಆದರೆ ಅಲ್ಲಿ ಗಾಂಧೀಯನ್ನೇ ಯಾರೂ ಅರಿಯರು; ಇನ್ನು ಗಡಿನಾಡಿನ ಗಾಂಧೀ ಯಾರಿಗೆ ಗೊತ್ತಿರಬೇಕು? ಅಲ್ಲಿ ಇವರನ್ನು ಬಾದಶಹ ಎಂದು ಕರೆಯುತ್ತಾರೆ. ಅಲ್ಲಿ ಯಾವ ಗುಡಿಸಲಿಗೇ ಹೋಗಿ ನೋಡಿರಿ–ಇವರ ಹೆಸರು ಹೇಳಿದರೆ ಸಾಕು, ಪಠಾಣರು ಪ್ರಸನ್ನರಾಗಿ ಬಿಡುತ್ತಾರೆ.೨೪

ಪಠಾಣರು ಕತ್ತಿವರಸೆಗಾರರು. ಪಠಾಣರಲ್ಲಿ ಕತ್ತಿ, ಬಂದೂಕಗಳನ್ನು ಪ್ರಯೋಗಿಸಲು ಬಾರದವರೇ ಇಲ್ಲ. ಪೀಳಿಗೆ–ಪೀಳಿಗೆಗಳಿಂದ (ತಲೆತಲಾಂತರದಿಂದ) ಪಠಾಣರು ರಕ್ತದ ಸೇಡು ತೀರಿಸಿಕೊಳ್ಳುತ್ತ ಬಂದಿದ್ದಾರೆ. ಆದರೆ, ಬಾದಶಹ ಖಾನರು ಶಸ್ತ್ರ–ಸಾಹಸಕ್ಕಿಂತ, ಜೀವವಿತ್ತು ಸ್ವರಕ್ಷಣೆ ಮಾಡಿಕೊಳ್ಳುವುದರಲ್ಲೇ ಅಗ್ಗಳಿಕೆ ಇದೆಯೆಂಬುದನ್ನು ಕಂಡುಕೊಂಡರು. ಪಠಾಣರು ಈ ಉಚ್ಚ ಪರಾಕ್ರಮವನ್ನು ಮೈಗೂಡಿಸಿಕೊಂಡು, ಐಕಮತ್ಯದಿಂದ ಎಲ್ಲರ ಸೇವೆ ಮಾಡಬೇಕೆಂಬುದು ಬಾದಶಹ ಖಾನರ ಅಭಿಪ್ರಾಯ.೨೫

ಕಸ್ತೂರ ಬಾ ಗಾಂಧೀ

ನಿನ್ನೆ ಓರ್ವ ವ್ಯಕ್ತಿ ಬಾ ಅನ್ನು ನನ್ನ ತಾಯಿ ಎಂಬುದಾಗಿ ತಪ್ಪು ತಿಳಿದುಕೊಂಡ. ಆ ತಪ್ಪು ನನ್ನ ಹಾಗೂ ಆಕೆಯ ದೃಷ್ಟಿಯಿಂದ ಕ್ಷಮ್ಯವೇ; ಏಕೆಂದರೆ, ನಮ್ಮಿಬ್ಬರ ನಡುವೆ ಆಗಿರುವ ಸಮಾಲೋಚನೆಯ ಪರಿಣಾಮ

ವಾಗಿ ಆಕೆ ಎಷ್ಟೋ ವರುಷಗಳಿಂದ ನನ್ನ ಪತ್ನಿಯಾಗಿ ಉಳಿದೇ ಇಲ್ಲ; ನಾನು ತಾಯಿ-ತಂದೆಗಳನ್ನು ಕಳೆದುಕೊಂಡು ನಲವತ್ತು ವರುಷಗಳಾದವು ; ಕಳೆದ ಮೂವತ್ತು ವರುಷಗಳಿಂದ ಆಕೆಯೇ ನನ್ನ ತಾಯಿಯ ಕೆಲಸ ಮಾಡುತ್ತಿದ್ದಾಳೆ. ಆಕೆ ನನ್ನ ತಾಯಿ, ಸೇವಕಿ, ಅಡಿಗೆ ಮಾಡುವಳು ಮುಸುರೆ ತಿಕ್ಕುವವಳು-ಎಲ್ಲವೂ ಆಗಿದಾಳೆ. ತಾವು ಬೆಳಗ್ಗೆ ಇಷ್ಟು ಮುಂಚೆ ಏರ್ಪಡಿಸಿರುವ ಈ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಲು ಇಲ್ಲಿಗೆ ಬಂದಿದ್ದರೆ, ನನಗೆ ಉಪವಾಸವೇ ಗತಿಯಾಗುತ್ತಿತ್ತು ; ನನ್ನ ಶಾರೀರಕ ಸುಖದ ಚಿಂತೆಯನ್ನು ಮಾಡುವವರು ಯಾರೂ ಇರುತ್ತಿರಲಿಲ್ಲ. ಅಂತಲೇ ನಾವು ನಮ್ಮಲ್ಲಿಯೇ ಹೀಗೆ ಒಪ್ಪಂದ ಮಾಡಿಕೊಂಡಿದ್ದೇವೆ: ಸನ್ಮಾನ ಸ್ವೀಕಾರವೆಲ್ಲ ನನ್ನ ಪಾಲಿಗೆ; ಪರಿಶ್ರಮ ಮಾಡುವುದೆಲ್ಲ ಆಕೆಯ ಪಾಲಿಗೆ.೨೬

ಬಾ ತೀರಿಕೊಂಡುದು ಒಂದು ' ಕಲ್ಪನೆ ' ಯಂತೆಯೇ ತೋರುತ್ತದೆ. ಅದಕ್ಕೆ ನಾನು ಸಿದ್ಧನಾಗಿಯೇ ಇದ್ದೆ. ಆದರೆ ಆಕೆ ನಿಜಕ್ಕೂ ತೀರಿಕೊಂಡಾಗ ನನಗೆ ಕಲ್ಪನೆಗಿಂತ ಹೆಚ್ಚಿನ ಹೊಸ ಅನುಭವವೊಂದು ಆಯಿತು : 'ಬಾ'ಳ ಹೊರತು ನಾನು ನನ್ನ ಜೀವನವನ್ನು ಸರಿಯಾಗಿ ಅಳವಡಿಸಿಕೊಳ್ಳಲಾರೆ ನೆಂದೇ ಈಗ ನನಗೆ ಅನಿಸುತ್ತದೆ.೨೭

ಕೇವಲ ಸ್ವ-ಇಚ್ಛೆಯಿಂದ ನನ್ನಲ್ಲಿ ಸಮಾವೇಶವಾಗಿ ಹೋಗುವುದೇ 'ಬಾ' ಳ ಪ್ರಬಲ ಗುಣವಾಗಿತ್ತು. ಅದು ನನ್ನ ಆಗ್ರಹದಿಂದ ಮೂಡಿಬಂದ ಗುಣವೇನೂ ಅಲ್ಲ. ಕಾಲಕ್ರಮದಲ್ಲಿ ಆಕೆಯಲ್ಲೇ ಆ ಗುಣ ವಿಕಾಸ ವಾಗಿತ್ತು. ಆ ಗುಣ 'ಬಾ'ಳಲ್ಲಿ ಅಡಗಿದ್ದುದು ನಮಗೆ ತಿಳಿದಿರಲಿಲ್ಲ. ನನ್ನ ಮೊದಮೊದಲ ಅನುಭವದ ಮೇಲಿಂದ ಹೇಳುವುದಾದರೆ, ಬಾ ಬಹಳ ಹಠ ಸ್ವಭಾವದವಳಿದ್ದಳು. ನಾನು ಒತ್ತಾಯ ಮಾಡಿದರೂ, ಆಕೆ ತನ್ನ ಮನ ಸ್ಸಿಗೆ ಬಂದುದನ್ನೇ ಮಾಡುತ್ತಿದ್ದಳು. ಅದರ ಕಾರಣದಿಂದ ನಮ್ಮಿಬ್ಬರ ನಡುವೆ ಅಲ್ಪಕಾಲದ ಅಥವಾ ದೀರ್ಘಕಾಲದ ' ವಿರಸ ' ಉಂಟಾಗುತ್ತಿತ್ತು. ಆದರೆ, ನನ್ನ ಸಾರ್ವಜನಿಕ ಜೀವನ ಉಜ್ವಲವಾದಂತೆ, ಬಾ ಜೀವನವೂ ಅರಳಿ ನನ್ನ ವಿಚಾರಗಳೊಡನೆ, ನನ್ನಲ್ಲಿ-ಅಂದರೆ ನನ್ನ ಕಾರ್ಯದಲ್ಲಿ ಅಂತರ್ಗತಳಾದಳು. ದಿನಗಳು ಕಳೆದಂತೆ ನನ್ನಲ್ಲಿ ಹಾಗೂ ನನ್ನ ಕಾರ್ಯ

ದಲ್ಲಿ—ಸೇವೆಯಲ್ಲಿ ಅಂತರವೇ ಉಳಿಯಲಿಲ್ಲ. ಬಾ ಕ್ರಮ ಕ್ರಮವಾಗಿ ಅದರಲ್ಲಿ ತಾದಾತ್ಮ್ಯ ಹೊಂದುತ್ತಿದ್ದಳು. ಪ್ರಾಯಶಃ ಭಾರತದ ಭೂಮಿಗೆ ಈ ಗುಣ ಹೆಚ್ಚು ಹೆಚ್ಚು ಪ್ರಿಯವಾದುದು. ಏನೇ ಇರಲಿ, 'ಬಾ'ಳಲ್ಲಿದ್ದ ಮೇಲೆ ಹೇಳಿದ ಭಾವನೆಗೆ ಇದುವೇ ಮುಖ್ಯ ಕಾರಣವಾಗಿರಬೇಕೆಂದು ನನಗೆ ತೋರುತ್ತದೆ.

'ಬಾ' ಳ ಈ ಗುಣ ಪರಾಕಾಷ್ಠೆಯನ್ನು ಮುಟ್ಟುದುದಕ್ಕೆ ನಮ್ಮ ಬ್ರಹ್ಮಚರ್ಯೆಯೇ ಕಾರಣ. ಅದು ನನಗಿಂತ 'ಬಾ'ಗೇ ಹೆಚ್ಚು ಸ್ವಾಭಾವಿಕವಾಗಿತ್ತೆಂಬುದು ಸಿದ್ಧವಾಯಿತು. ಆರಂಭದಲ್ಲಿ 'ಬಾ'ಗೆ ಅದರ ಜ್ಞಾನವೇ ಇರಲಿಲ್ಲ. ನಾನು ಅವಳ ಮುಂದೆ ವಿಚಾರ ಮಂಡಿಸಿದೆ ; ಬಾ ಅದನ್ನು ಸ್ವೀಕರಿಸಿ,ಮೈಗೂಡಿಸಿಕೊಂಡುಬಿಟ್ಟಳು. ಅದರ ಪರಿಣಾಮವಾಗಿ ನಮ್ಮಿಬ್ಬರ ಸಂಬಂಧ ನಿಜವಾದ ಮಿತ್ರರ ಸಂಬಂಧವಾಯಿತು. ನನ್ನೊಡನೆ ಇದ್ದುದರಿಂದ 'ಬಾ'ಪಾಲಿಗೆ ೧೯೦೬ ರಿಂದ ನನ್ನ ಕಾರ್ಯದಲ್ಲಿ ಪಾಲುಗೊಳ್ಳುವುದನ್ನ ಬಿಟ್ಟು, ಅಥವಾ ಅದರಿಂದ ಭಿನ್ನವಾದ ಕಾರ್ಯಯಾವುದೂ ಉಳಿಯಲಿಲ್ಲ. ಬೇರೆಯಾಗಿ ಇರುವುದು ಆಕೆಯಿಂದ ಆಗುತ್ತಲೇ ಇರಲಿಲ್ಲ. ಬೇರೆಯಾಗಿ ಇರುವುದಕ್ಕೆ ತೊಂದರೆಯೇನೂ ಇರಲಿಲ್ಲ. ಆದರೆ, ಮಿತ್ರಳಾದ ಮೇಲೂ ಸ್ತ್ರೀಯಾಗಿ, ಪತ್ನಿಯಾಗಿ ನನ್ನ ಕಾರ್ಯದಲ್ಲಿ ಅಂತರ್ಗತಳಾಗುವುದೇ ತನ್ನ ಧರ್ಮವೆಂದು ಆಕೆ ಭಾವಿಸಿದಳು. ಹೀಗೆ ನನ್ನ ವ್ಯಕ್ತಿಗತ ಸೇವೆಗೆ ಆಕೆ ಅನಿವಾರ್ಯ ಸ್ಥಾನ ನೀಡಿದಳು. ಅಂತಲೇ ನನ್ನ ಸುಖ–ಸೌಕರ್ಯ ನೋಡಿಕೊಳ್ಳುವುದನ್ನು ಆಕೆ ಅಸುನೀಗುವವರೆಗೆ ಬಿಡಲಿಲ್ಲ.

ನಾನು ನನ್ನ ಪತ್ನಿಯ ಬಗೆಗೆ ನನ್ನ ಪ್ರೇಮ ಹಾಗೂ ಭಾವನೆಯನ್ನು ಬಣ್ಣಿಸಬಲ್ಲೆನಾದರೆ ಹಿಂದೂ ಧರ್ಮದ ಬಗೆಗೇ ನನ್ನ ಪ್ರೇಮ ಹಾಗೂ ಭಾವನೆಯನ್ನು ವ್ಯಕ್ತಪಡಿಸಿದಂತಾಗುವುದು. ಅವಳು ಪ್ರಪಂಚದ ಬೇರೆ ಯಾವ ಸ್ತ್ರೀ ಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರಭಾವ ಬೀರಿದಾಳೆ.

ಬಾ ಸತತವೇದನೆಯಿಂದ ಪಾರಾದಳೆಂಬ ದೃಷ್ಟಿಯಿಂದ, ಆಕೆಯ ಮೃತ್ಯುವನ್ನು ನಾನು ಸ್ವಾಗತಿಸಿದೆನಾದರೂ, ಆಕೆಯ ಸಾವಿನಿಂದ ನನಗೆ ಎಷ್ಟು ದುಃಖವಾಗುವುದೆಂದು ಭಾವಿಸಿದ್ದೆನೋ ಅದಕ್ಕಿಂತ ಹೆಚ್ಚಿನ ದುಃಖವಾಗಿದೆ. ನಾವು ಅಸಾಧಾರಣ ದಂಪತಿಗಳಾಗಿದ್ದೆವು. ೧೯೦೬ ರಲ್ಲಿ ಪರಸ್ಪರ ಒಪ್ಪಿಗೆಯಿಂದ ಅಜ್ಞಾತ ಪರೀಕ್ಷಣದನಂತರ ನಾವು ಆತ್ಮ–ಸಂಯಮದ

ನಿಯಮವನ್ನು ನಿಶ್ಚಿತ ರೂಪದಲ್ಲಿ ಸ್ವೀಕರಿಸಿದೆವು. ಅದರ ಪರಿಣಾಮವಾಗಿ ನಮ್ಮ ಗಂಟು ಮೊದಲಿಗಿಂತ ಎಷ್ಟೋ ಹೆಚ್ಚು ಬಲಯುತವಾಯಿತು. ಅದರಿಂದ ನನಗೆ ಬಹಳ ಆನಂದವೂ ಆಯಿತು. ನಾವು ಇಬ್ಬರೂ ಬೇರೆ ಬೇರೆ ವ್ಯಕ್ತಿಗಳಾಗಿ ಉಳಿಯಲೇ ಇಲ್ಲ. ನನಗೆ ಅಂಥ ಇಚ್ಛೆ ಏನೂ ಇರದಿದ್ದರೂ, ಆಕೆ ನನ್ನಲ್ಲಿ ಲೀನವಾಗುವುದರಲ್ಲೇ 'ರುಚಿ' ಕಂಡಳು. ಅದರ ಫಲವಾಗಿ ನಿಜಕ್ಕೂ ನನ್ನ ಅರ್ಧಾಂಗಿನಿಯಾದಳು. ಆಕೆ ಸದಾಕಾಲಕ್ಕೂ ದೃಢ ಇಚ್ಛಾಶಕ್ತಿಯುಳ್ಳ ಸ್ತ್ರೀ ಆಗಿದ್ದಳು. ನಾನು ನನ್ನ ನವವಿವಾಹಿತ ಸ್ಥಿತಿಯಲ್ಲಿ ಆಕೆಯನ್ನು ಹಠಮಾರಿ ಎಂಬುದಾಗಿ ತಪ್ಪು ತಿಳಿದಿದ್ದೆ; ಆದರೆ, ತನ್ನ ದೃಢ ಇಚ್ಛಾಶಕ್ತಿಯ ಕಾರಣದಿಂದ ಆಕೆ ಅರಿವಿಲ್ಲದೆಯೇ ಅಹಿಂಸಾತ್ಮಕ ಅಸಹಯೋಗದ ಕಲೆಯ ಆಚರಣೆಯಲ್ಲಿ ನನ್ನ 'ಗುರು' ಆದಳು. ಆಚರಣೆಯನ್ನು ನಾನು ನನ್ನ ಕುಟುಂಬದಿಂದಲೇ ಆರಂಭಿಸಿದೆ. ೧೯೦೬ ರಲ್ಲಿ ಅದನ್ನು ರಾಜನೀತಿಯ ಕ್ಷೇತ್ರದಲ್ಲಿ ಪ್ರವೇಶಗೊಳಿಸಿದಾಗ, ಅದಕ್ಕೆ ಹೆಚ್ಚು ವಿಶಾಲ ಹಾಗೂ ವಿಶೇಷ ರೂಪದಿಂದ ಯೋಜಿತವಾದ 'ಸತ್ಯಾಗ್ರಹ' ಎಂಬ ಹೆಸರು ಬಂದಿತು. ದಕ್ಷಿಣ ಆಫ್ರಿಕೆಯಲ್ಲಿ ಭಾರತೀಯರ ಜೈಲು ಯಾತ್ರೆ ಆರಂಭವಾದಾಗ ಶ್ರೀಮತಿ ಕಸ್ತೂರಬಾ ಕೂಡ ಸತ್ಯಾಗ್ರಹಿಗಳಲ್ಲಿ ಒಬ್ಬಳಾಗಿದ್ದಳು. ನನಗಿಂತ ಹೆಚ್ಚಾಗಿ ಆಕೆಗೆ ದೈಹಿಕ ತೊಂದರೆ ಆಯಿತು. ಆಕೆ ಅನೇಕ ಸಲ ಜೈಲಿಗೆ ಹೋಗಿದ್ದಳು. ಆದರೂ ಈ ಬಾರಿಯ ಜೈಲು ವಾಸದಲ್ಲಿ ಎಲ್ಲ ರೀತಿಯ ಸೌಕರ್ಯವಿದ್ದರೂ, ಆಕೆಗೆ ಏಕೋ ಮನಸ್ಸಿಗೆ ಹಿತ ಕಾಣಲಿಲ್ಲ. ಇನ್ನೂ ಅನೇಕರೊಡನೆ ನನ್ನ, ಮರುಕ್ಷಣದಲ್ಲೇ ತನ್ನ, ಬಂಧನವಾದುದರಿಂದ ಆಕೆಗೆ ಆಘಾತವಾದ ಮನಸ್ಸು ಹುಳಿ ಆಯಿತು. ನನ್ನ ಬಂಧನವನ್ನು ಆಕೆ ನಿರೀಕ್ಷಿಸಿಯೇ ಇರಲಿಲ್ಲ. ನನ್ನ ಅಹಿಂಸೆಯ ಬಗೆಗೆ ಸರಕಾರಕ್ಕೆ ಭರವಸೆ ಇರುವುದೆಂದೂ, ನಾನೇ ಬಂಧಿತನಾಗಲು ಬಯಸಿದಲ್ಲದೆ ಸರಕಾರ ನನ್ನನ್ನು ಬಂಧಿಸುವುದಿಲ್ಲವೆಂದೂ ಆಕೆಗೆ ಭರವಸೆ ಕೊಟ್ಟಿದ್ದೆ. ನನ್ನ ದಸ್ತಗಿರಿಯಿಂದಾಗಿ ಆಕೆಯ ಜ್ಞಾನತಂತುವಿಗೆ ಎಂಥ ಧಕ್ಕೆ ತಗುಲಿತೆಂದರೆ, ಆಕೆಯ ಬಂಧನವಾದಮೇಲೆ, ಅತಿಯಾಗಿ ತೆಳುಭೇದಿ ಆಗುತ್ತಿತ್ತು. ಆ ಕಾಲಕ್ಕೆ ಆಕೆಯೊಡನೆಯೇ ದಸ್ತಗಿರಿ ಆಗಿದ್ದ ಡಾ. ಸುಶೀಲಾ ನಯ್ಯಾರ್ ಆಕೆಗೆ ಚಿಕಿತ್ಸೆಮಾಡದೆ ಇದ್ದಿದ್ದರೆ, ಈ ಜೈಲಿಗೆ ಬಂದು

ನನ್ನನ್ನು ಭೇಟಿ ಆಗುವುದರೊಳಗೇ ಆಕೆಯ ಕಥೆ ಮುಗಿದು ಹೋಗಿರುತ್ತಿತ್ತು. ನಾನು ಎದುರಿಗೆ ಇರಲಿಲ್ಲವಾದ್ದರಿಂದ ಆಕೆಗೆ ಧೈರ್ಯ ಬಂದು, ಯಾವುದೇ ವಿಶೇಷ ಚಿಕಿತ್ಸೆಯಿಲ್ಲದೆ, ಭೇದಿ ನಿಂತುಹೋಯಿತು. ಆದರೆ, ಹುಳಿ ಆಗಿದ್ದ ಮನಸ್ಸು ಹುಳಿಯಾಗಿಯೇ ಉಳಿಯಿತು. ಅದರ ಕಾರಣದಿಂದ ಆಕೆಯ ಸ್ವಭಾವ ಸಿಡುಕು ಸ್ವಭಾವವಾಯಿತು. ಅದರ ಪರಿಣಾಮವಾಗಿ ಕಷ್ಟ ಸಹಿಸಿ ಸಹಿಸಿ, ಕ್ರಮಕ್ರಮವಾಗಿ ಆಕೆಯ ದೇಹಪಾತವಾಯಿತು.೨೮

'ಬಾ' ಳಲ್ಲಿ ದೊಡ್ಡ ಗುಣ ಒಂದಿತ್ತು. ಪ್ರತಿಯೋರ್ವ ಹಿಂದೂ ಪತ್ನಿಯಲ್ಲೂ ಅದು ಇದ್ದೇ ಇರುತ್ತದೆ. ಇಚ್ಛೆ ಇದ್ದೋ ಇಲ್ಲದೆಯೋ, ತಿಳಿದೋ ತಿಳಿಯದೆಯೋ ನನ್ನ ಪದಚಿಹ್ನೆಗಳನ್ನು ಅನುಸರಿಸುವುದರಲ್ಲಿ ಆಕೆಗೆ ಧನ್ಯತೆಯ ಅನುಭವ ಆಗುತ್ತಿತ್ತು...........

ತೀವ್ರ ವೇದನೆಯಿಂದ ಆಕೆ ಪಾರಾಗಲೆಂದು, ಎಂದರೆ ಬೇಗನೆ ಆಕೆಯ ದೇಹಾಂತವಾಗಲೆಂದು ನಾನು ಬಯಸುತ್ತಿದ್ದರೂ, ಇಂದು ಆಕೆ ಇಲ್ಲವಾಗಿರುವುದರ ಅನುಭವ ನಾನು ಭಾವಿಸಿದ್ದುದಕ್ಕಿಂತ ಹೆಚ್ಚಾಗಿ ನನಗೆ ಆಗುತ್ತಿದೆ. ನಾವು ಅಸಾಧಾರಣ, ವಿಲಕ್ಷಣ ದಂಪತಿಗಳಾಗಿದ್ದೆವು. ನಮ್ಮದು ತೃಪ್ತ, ಸುಖೀ ಹಾಗೂ ಸದಾ ಊರ್ಧ್ವಗಾಮೀ ಜೀವನ ವಾಗಿತ್ತು.೨೯

ಮಗನ್‌ಲಾಲ್ ಖುಶಾಲ್‌ಚಂದ್ ಗಾಂಧೀ

ಯಾವ ಯಾವ ನೆಂಟರು ನನ್ನೊಡನೆ ದಕ್ಷಿಣ ಆಫ್ರಿಕಾಕ್ಕೆ ಹೊರಟಿದ್ದರೋ ಹಾಗೂ ಅಲ್ಲಿ ವ್ಯಾಪಾರ ಮೊದಲಾದುವುಗಳಲ್ಲಿ ತೊಡಗಿದ್ದರೋ ಅವರನ್ನು ನನ್ನ ಮತ (ವಿಚಾರ) ಕ್ಕೆ ತಿರುಗಿಸಿಕೊಳ್ಳುವ ಹಾಗೂ ಫೀನಿಕ್ಸ್ ಆಶ್ರಮಕ್ಕೆ ಸೇರಿಸಿಕೊಳ್ಳುವ ಪ್ರಯತ್ನ ಆರಂಭಿಸಿದ್ದೆ. ಅವರೆಲ್ಲರೂ ಹಣ ಗಳಿಸುವ ಉತ್ಸಾಹದಿಂದ ದಕ್ಷಿಣ ಆಫ್ರಿಕಾಕ್ಕೆ ಬಂದಿದ್ದವರು. ಅವರನ್ನು ಒಪ್ಪಿಸುವುದು ಬಹಳ ಕಠಿಣವಾದ ಕೆಲಸವೇ ಆಗಿತ್ತು ; ಆದರೂ ಎಷ್ಟೋ ಮಂದಿಗೆ ನನ್ನ ಮಾತು ಹಿಡಿಸಿತು. ಅವರೆಲ್ಲರ ಪೈಕಿ, ಇಂದು ಮಗನಲಾಲ ಗಾಂಧಿಯವರ ಹೆಸರನ್ನೆ ಆಯ್ದುಕೊಂಡು ಓದುಗರ ಮುಂದೆ ಇಡುತ್ತೇನೆ ;

ಏಕೆಂದರೆ ಇತರರು ಸ್ವಲ್ಪಕಾಲ ಫಿನಿಕ್ಸ್ ಆಶ್ರಮದಲ್ಲಿದ್ದು ಮತ್ತೆ ಧನ-ಸಂಗ್ರಹದ ಸುಳಿಯಲ್ಲಿ ಸಿಕ್ಕಿಕೊಂಡರು. ತಮ್ಮ ಕೆಲಸ ಬಿಟ್ಟು ಬಂದು ನನ್ನೊಂದಿಗೆ ಕೂಡಿಕೊಂಡ ಮಗನಲಾಲರು ಇಂದಿನವರೆಗೂ ನನ್ನೊಡನೆಯೇ ಇದಾರೆ; ಹಾಗೂ ತಮ್ಮ ಬುದ್ಧಿಬಲ, ತ್ಯಾಗ, ಶಕ್ತಿ ಹಾಗೂ ಅನನ್ಯ ಭಕ್ತಿಭಾವದಿಂದ ನನ್ನ ಆಂತರಿಕ ಪ್ರಯೋಗಗಳಲ್ಲಿ ನೆರವು ನೀಡುತ್ತಿದ್ದಾರೆ. ನನ್ನ ಮೂಲ ಸಂಗಾತಿಗಳಲ್ಲಿ ಅವರ ಸ್ಥಾನ ಅಗ್ರಗಣ್ಯವಾದುದು. ಅಲ್ಲದೆ, ಸ್ವಯಂಶಿಕ್ಷಿತ ಕುಶಲಕರ್ಮಿಯ ರೂಪದಲ್ಲಿ ಅವರ ಸ್ಥಾನ ಅದ್ವಿತೀಯವಾದುದು.

ಶಾಂತಿನಿಕೇತನದಲ್ಲಿ ನನ್ನ ಪರಿವಾರವನ್ನು ಪ್ರತ್ಯೇಕವಾದ ಸ್ಥಳದಲ್ಲಿ ಇಳಿಸಿದ್ದರು. ಅಲ್ಲಿ ಮಗನ್‌ಲಾಲ್ ಗಾಂಧೀ ನನ್ನ ಪರಿವಾರದ ಉಸಾಬರಿ ನೋಡಿಕೊಳ್ಳುತ್ತಿದ್ದರು. ಫೀನಿಕ್ಸ್ ಆಶ್ರಮದ ಎಲ್ಲ ನಿಯಮಗಳನ್ನು ನನ್ನ ಪರಿವಾರದವರು ಸೂಕ್ಷ್ಮವಾಗಿ ಅನುಸರಿಸುವಂತೆ ಮಾಡುತ್ತಿದ್ದರು. ತಮ್ಮ ಪ್ರೇಮ, ಜ್ಞಾನ ಹಾಗೂ ಉದ್ಯೋಗಶೀಲತೆಯ ದೆಸೆಯಿಂದ ಶಾಂತಿನಿಕೇತನದಲ್ಲಿ ತಮ್ಮ ಸುಗಂಧ ಹರಡಿದ್ದುದನ್ನು ನಾನು ಕಂಡೆ.

ಯಾರನ್ನು ನಾನು ನನ್ನ ಸರ್ವಸ್ವದ ವಾರಸುದಾರರೆಂದು ಆಯ್ಕೆ ಮಾಡಿಕೊಂಡಿದ್ದೆನೋ ಅವರು ಇನ್ನಿಲ್ಲ. ನನ್ನ ಮಾವನ ಮೊಮ್ಮಕ್ಕಳಾದ ಮಗನ್‌ಲಾಲ್ ಖುಶಾಲ್‌ಚಂದ್ ಗಾಂಧೀ ೧೯೦೪ ರಿಂದಲೂ ನನ್ನ ಕಾರ್ಯಗಳಲ್ಲಿ ಪಾಲುಗೊಂಡಿದ್ದರು. ಮಗನಲಾಲರ ತಂದೆ ತಮ್ಮ ಎಲ್ಲ ಮಕ್ಕಳನ್ನು ದೇಶದ ಕಾರ್ಯಕ್ಕಾಗಿ ಕೊಟ್ಟುಬಿಟ್ಟಿದ್ದಾರೆ. ಅವರು ಈ ತಿಂಗಳ ಆರಂಭದಲ್ಲಿ ಸೇಠ್ ಜಮನಾಲಾಲ್ ಹಾಗೂ ಇತರ ಸ್ನೇಹಿತರೊಡನೆ ಬಂಗಾಳಕ್ಕೆ ಹೋಗಿದ್ದರು. ಅಲ್ಲಿಂದ ಬಿಹಾರಕ್ಕೆ ಬಂದರು. ಅಲ್ಲಿಯೇ ತಮ್ಮ ಕರ್ತವ್ಯ-ಪಾಲನೆಯಲ್ಲಿ ತೊಡಗಿದ್ದಾರೆ, ಅವರಿಗೆ ಉಗ್ರಜ್ವರ ಬಂತು. ಪ್ರೇಮ ಹಾಗೂ ವೈದ್ಯರ ಜ್ಞಾನದಿಂದ ಎಷ್ಟು ಸೇವೆ ಸಾಧ್ಯವೋ ಅಷ್ಟನ್ನು ಮಾಡಿದರೂ ಒಂಭತ್ತು ದಿನಗಳ ಖಾಯಿಲೆಯನಂತರ ವ್ರಜಕಿಶೋರ ಪ್ರಸಾದರ ತೊಡೆಯ ಮೇಲೆ ಅವರು ಅಸುನೀಗಿದರು.

ಸ್ವಲ್ಪ ಹಣಗಳಿಸಬಹುದೆಂಬ ಆಸೆಯಿಂದ ಮಗನಲಾಲ್ ಗಾಂಧೀ ೧೯೦೩ ರಲ್ಲಿ ನನ್ನೊಡನೆ ದಕ್ಷಿಣ ಆಫ್ರಿಕಕ್ಕೆ ಹೊರಟದ್ದರು. ಆದರೆ

ವ್ಯಾಪಾರ ಆರಂಭಿಸಿದ ಒಂದು ವರುಷವೂ ಕಳೆದಿರಲಿಕ್ಕಿಲ್ಲ; ಸ್ವೇಚ್ಛಾಪೂರ್ವಕ ದಾರಿದ್ರ್ಯ ಸ್ವೀಕಾರದ ನನ್ನ ಆಕಸ್ಮಿಕ ಕರೆಗೆ ಓಗೊಟ್ಟು, ಫೀನಿಕ್ಸ್ ಆಶ್ರಮಕ್ಕೆ ಸೇರಿಕೊಂಡರು. ಆಗಿನಿಂದ ಒಂದೂ ಸಲವಾದರೂ ಅವರು ವಿಚಲಿತರಾಗಲಿಲ್ಲ; ನನ್ನ ಆಶೆಗಳನ್ನು ಪೂರ್ಣಗೊಳಿಸುವುದರಲ್ಲಿ ಅಸಮರ್ಥರಾಗಲಿಲ್ಲ. ಸ್ವದೇಶದ ಸೇವೆಯಲ್ಲಿ ಅವರು ತಮ್ಮನ್ನು ತಾವೇ ಆಹುತಿ ಕೊಟ್ಟರೇನೋ ಸರಿ. ವ್ಯಾಪಾರವನ್ನೆ ಕೈಗೊಂಡಿದ್ದರೂ ತಮ್ಮ ಯೋಗ್ಯತೆ ಹಾಗೂ, ಅಧ್ಯವಸಾಯದ ಬಲದಿಂದ—ಆ ವಿಷಯದಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ—ಅವರು ವ್ಯಾಪಾರಿಗಳ ಶಿರೋರತ್ನವಾಗಲಿಕ್ಕೂ ಬರುತ್ತಿತ್ತು. ಮುದ್ರಣಾಲಯ ಸೇರಿದಮೇಲೆ, ಅವರು ಶೀಘ್ರವಾಗಿಯೇ ಮುದ್ರಣ ಕಲೆಯ ಎಲ್ಲ ರಹಸ್ಯಗಳನ್ನೂ ಅರಿತುಕೊಂಡರು. ಹಿಂದೆಂದೂ ಕೈಯಲ್ಲಿ ಯಂತ್ರ ಹಿಡಿದವರಲ್ಲವಾದರೂ ಎಂಜಿನ್-ಮನೆಯಲ್ಲಿ, ಯಂತ್ರಗಳ ನಡುವೆ ಹಾಗೂ ಕಂಪಾಸಿಟರುಗಳ ಮೇಜಿನ ಮೇಲೆ—ಎಲ್ಲೆಲ್ಲೂ ಅತ್ಯಂತ ಕೌಶಲವನ್ನು ತೋರಿದರು. 'ಇಂಡಿಯನ್ ಒಪಿನಿಯನ್'ನ ಗುಜರಾತಿ ಭಾಗದ ಸಂಪಾದಕನ ಕಾರ್ಯ ಮಾಡುವುದೂ ಅವರ ಪಾಲಿಗೆ ಅಷ್ಟೇ ಸಹಜವಾದ ಕಾರ್ಯವಾಗಿತ್ತು. ಫೀನಿಕ್ಸ್ ಆಶ್ರಮದಲ್ಲಿ ವ್ಯವಸಾಯದ ಕಾರ್ಯವೂ ಇತ್ತು; ಆದಕಾರಣ, ಅವರು ಕುಶಲ ರೈತರೂ ಆದರು. ನನ್ನ ಅಭಿಪ್ರಾಯದಲ್ಲಿ ಅವರು ಆಶ್ರಮದ ಸರ್ವೋತ್ತಮ ತೋಟಗಾರರಾಗಿದ್ದರು. ಅಹಮದಾಬಾದಿನಲ್ಲಿ 'ಯಂಗ್ ಇಂಡಿಯಾ'ದ ಮೊದಲ ಸಂಚಿಕೆ ಹೊರಟಾಗ ಆ ಸಂಕಟ ಸಮಯದಲ್ಲಿ ಇವರ ಕೈಚಳಕವೂ ಇತ್ತು.

ಮೊದಲು ಅವರು ಭೀಮ-ಕಾಯರಾಗಿದ್ದರು. ಆದರೆ, ಯಾವ ಕಾರ್ಯದಲ್ಲಿ ತಮ್ಮನ್ನು ತಾವೇ ಸಮರ್ಪಣೆ ಮಾಡಿಕೊಂಡರೋ, ಅದರ ಉನ್ನತಿಯಲ್ಲಿ ತಮ್ಮ ಶರೀರವನ್ನು ಸವೆಸಿದರು. ಅವರು ಬಹಳ ಎಚ್ಚರಿಕೆಯಿಂದ ನನ್ನ ಆಧ್ಯಾತ್ಮಿಕ ಜೀವನವನ್ನು ಅಭ್ಯಸಿಸಿದ್ದರು. ವಿವಾಹಿತ ಸ್ತ್ರೀ-ಪುರುಷರಿಗೂ ಬ್ರಹ್ಮಚರ್ಯವೇ ಜೀವನದ ನಿಯಮ—ಎಂಬ ಸಿದ್ಧಾಂತವನ್ನು ನಾನು ನಮ್ಮ ಸಹಕಾರ್ಯಕರ್ತರ ಮುಂದೆ ಮಂಡಿಸಿದಾಗ ಅದರ ಸೌಂದರ್ಯ ಹಾಗೂ ಅದರ ಪಾಲನೆಯ ಆವಶ್ಯಕತೆಯನ್ನು ಎಲ್ಲರಿಗಿಂತ ಮೊದಲು ಅರಿತುಕೊಂಡವರು ಇವರೇ. ನನಗೆ ತಿಳಿದ ಮಟ್ಟಿಗೆ, ಅದರ

ಸಲುವಾಗಿ (ಬ್ರಹ್ಮಚರ್ಯದ ಪಾಲನೆ) ಮಗನಲಾಲರು ಕಠೋರ ಪ್ರಯತ್ನ ವನ್ನೇ ಮಾಡಬೇಕಾಯಿತು. ಆದರೂ ತಮ್ಮ ಪ್ರಯತ್ನದಲ್ಲಿ ಅವರು ಸಫಲ ರಾದರು. ಆ ವಿಷಯದಲ್ಲಿ ಅವರು ತಮ್ಮ ಧರ್ಮ ಪತ್ನಿಯನ್ನು—ಸಹನೆ ಯಿಂದ ವಿಷಯ ತಿಳಿಸಿಕೊಟ್ಟು—ತಮ್ಮೊಡನೆ ಕೊಂಡೊಯ್ದರೇ ಹೊರತು, ಆಕೆಯ ಮೇಲೆ ವಿಚಾರವನ್ನು ಬಲಾತ್ಕಾರವಾಗಿ ಹೇರಲಿಲ್ಲ.

ಸತ್ಯಾಗ್ರಹ ಆರಂಭವಾದಾಗ ಅವರು ಎಲ್ಲರಿಗಿಂತ ಮುಂದೆ ಇದ್ದರು. ದಕ್ಷಿಣ ಆಫ್ರಿಕದ ಹೋರಾಟದ ಪೂರ್ಣ ಅರ್ಥವನ್ನು ತಿಳಿಸುವ ಶಬ್ದ ವೊಂದನ್ನು ನಾನು ಅರಸುತ್ತಲಿದ್ದೆ. ಬೇರೆ ಯಾವ ಒಳ್ಳೆಯ ಶಬ್ದವೂ ಸಿಕ್ಕದಿದ್ದುದರಿಂದ, ಬಹಳ ಅಪೂರ್ಣ ಹಾಗೂ ಭ್ರಮೋತ್ಪಾದಕವೆನಿಸಿದ್ದರೂ "ನಿಷ್ಕ್ರಿಯ ಪ್ರತೀಕಾರ" ಎಂಬ ಹೆಸರನ್ನು ಕೊಟ್ಟಿದ್ದೆ. ಈ ಯುದ್ಧವನ್ನು 'ಸದಾಗ್ರಹ' ಎಂದು ಏಕೆ ಕರೆಯಬಾರದು ?—ಎಂಬುದಾಗಿ ಸೂಚಿಸಿ ಅವರು ಬರೆದಿದ್ದ ಆ ಅತ್ಯಂತ ಸುಂದರವಾದ ಪತ್ರ ಇಂದು ನನ್ನ ಬಳಿ ಇದ್ದಿದ್ದರೆ, ಎಷ್ಟು ಚೆನ್ನಾಗಿರುತ್ತಿತ್ತು ? ಅದೇ 'ಸದಾಗ್ರಹ'ವನ್ನು ಬದಲಿಸಿ, ನಾನು 'ಸತ್ಯಾಗ್ರಹ'ಮಾಡಿದೆ. ಅವರ ಪತ್ರ ಓದಿ, ಈ ಯುದ್ಧದ ಎಲ್ಲ ಸಿದ್ಧಾಂತಗಳ ಬಗೆಗೆ ಒಂದೊಂದಾಗಿ ವಿಚಾರ ಮಾಡುತ್ತ ಮಾಡುತ್ತ ಹೋದರೆ ಕೊನೆಗೆ ಈ ಹೆಸರಿಗೇ ಬಂದು ಮುಟ್ಟಬೇಕಾಗುವುದು. ಅವರ ಆ ಪತ್ರ ಬಹಳ ಚಿಕ್ಕದಾಗಿದ್ದು ಆವಶ್ಯಕ ವಿಷಯವನ್ನು ಮಾತ್ರ ಒಳ ಗೊಂಡಿದ್ದುದು ನನಗೆ ನೆನಪಿದೆ. ಅವರ ಎಲ್ಲ ಪತ್ರಗಳೂ ಹಾಗೆಯೇ ಇರು ತ್ತಿದ್ದವು. ಎಂಬುದು ಉಲ್ಲೇಖನೀಯ.

ಯುದ್ಧದ ಸಮಯದಲ್ಲಿ ಅವರು ಎಂದೂ ದಣಿಯಲಿಲ್ಲ; ಯಾವ ಕೆಲಸದಲ್ಲೂ ಮೈಗಳ್ಳತನ ಮಾಡಲಿಲ್ಲ. ತಮ್ಮ ವೀರತೆಯಿಂದ ಅಕ್ಕಪಕ್ಕ ದಲ್ಲಿ ಎಲ್ಲರ ಹೃದಯದಲ್ಲೂ ಆಶೆ-ಉತ್ಸಾಹ ತುಂಬುತ್ತಿದ್ದರು. ಎಲ್ಲರೂ ಜೈಲಿಗೆ ಹೋದಾಗ, ಫೀನಿಕ್ಸ್ ಆಶ್ರಮದಲ್ಲಿ ಜೈಲಿಗೆ ಹೋಗುವುದೇ ಬಹುಮಾನಗೆದ್ದಂತೆ ಎನಿಸಿದ್ದಾಗ, ನನ್ನ ಆಜ್ಞಾನುಸಾರವಾಗಿ ಜೈಲಿಗೆ ಹೋಗುವುದಕ್ಕಿಂತ ದೊಡ್ಡಕೆಲಸ ಕೈಗೊಳ್ಳುವ ಸಲುವಾಗಿ ಅವರು ಹಿಂದೆಯೇ ಉಳಿದರು. ತಮ್ಮ ಪತ್ನಿಯನ್ನು ಸ್ತ್ರೀಯರ ತಂಡದೊಡನೆ ಕಳುಹಿಸಿದರು.

ಹಿಂದೂಸ್ಥಾನಕ್ಕೆ ಹಿಂತಿರುಗಿದ ಮೇಲೂ, ಅವರ ಕಾರಣದಿಂದಲೇ ಸಂಯಮ—ನಿಯಮದ ಮೇಲೆ ಆಧಾರಗೊಂಡಿದ್ದ ಆಶ್ರಮ ನಡೆದು ಬರುತ್ತಿತ್ತು. ಇಲ್ಲಿ ಅವರು ಹೊಸದಾದ, ಹೆಚ್ಚು ಕಷ್ಟವಾದ ಕೆಲಸ ಮಾಡಬೇಕಾಯಿತು. ಆದರೆ, ಅದಕ್ಕೆ ತಾವು ತಕ್ಕವರು ಎಂಬುದನ್ನೂ ಅವರು ತೋರಿಸಿಕೊಟ್ಟರು. ಅವರ ಪಾಲಿಗೆ ಅಸ್ಪೃಶ್ಯತೆ ಬಹಳ ಕಠಿಣ ಪರೀಕ್ಷೆ ಆಗಿತ್ತು. ಕ್ಷಣಕಾಲ ಮಾತ್ರಕ್ಕೆ ಅವರ ಹೃದಯ ಡೋಲಾಯಮಾನವಾದಂತೆ ತೋರಿತು. ಆದರೆ, ಅದು ಒಂದು ಕ್ಷಣಕಾಲದ ಮಾತು ಮಾತ್ರ. ಪ್ರೇಮಕ್ಕೆ ಸೀಮಾಬಂಧನ ಮಾಡುವುದು ಶಕ್ಯವಿಲ್ಲ. ಇನ್ನೇನೂ ಅಲ್ಲದಿದ್ದರೂ ಅಸ್ಪೃಶ್ಯತೆಗೆ ಉತ್ತಮ ಜಾತಿಯವರೇ ಜವಾಬದಾರರಾಗಿರುವುದರಿಂದ, ನಾವು ಅವರ ಹಾಗೆಯೇ ಇರಬೇಕು—ಎಂಬ ಮಾತನ್ನು ಅವರು ಕಂಡುಕೊಂಡರು.

ಆಶ್ರಮದ ಔದ್ಯೋಗಿಕ ವಿಭಾಗ ಫೀನಿಕ್ಸಿನ ಕಾರಖಾನೆಗಳ ರೀತಿಯದಾಗಿರಲಿಲ್ಲ. ಅಲ್ಲಿ ನಾವು ನೂಲುವುದು ನೇಯುವುದು ಹತ್ತಿ ಎಕ್ಕುವುದು—ಎಲ್ಲವನ್ನೂ ಕಲಿಯಬೇಕಾಗಿತ್ತು. ಸರಿ—ಮಗನ್‌ಲಾಲರ ಕಡೆಗೇ ಮೋರೆಮಾಡಿದೆ. ಕಲ್ಪನೆ ನನ್ನದಾಗಿದ್ದರೂ, ಅದನ್ನು ಕಾರ್ಯಾನ್ವಿತಗೊಳಿಸುವ ಕೈ ಅವರವೇ ಆಗಿದ್ದವು. ನೇಯುವುದನ್ನೂ, ಹತ್ತಿಯಿಂದ ಬಟ್ಟೆ ಮಾಡುವವರೆಗಿನ ಉಳಿದೆಲ್ಲ ಪ್ರಕ್ರಿಯೆಗಳನ್ನೂ ಅವರು ಕಲಿತರು. ಅವರು ಹುಟ್ಟನಿಂದಲೇ ವಿಶ್ವಕರ್ಮರು, ಕುಶಲ ಕರ್ಮಿಗಳು, ಆಗಿದ್ದರು.

ಆಶ್ರಮದಲ್ಲಿ ಗೋಶಾಲೆಯ ಕೆಲಸ ಆರಂಭವಾದಾಗ ಆ ಕಾರ್ಯದಲ್ಲೂ ಉತ್ಸಾಹದಿಂದ ತೊಡಗಿದರು. ಗೋಶಾಲೆಗೆ ಸಂಬಂಧಿಸಿದ ಎಲ್ಲ ಸಾಹಿತ್ಯವನ್ನೂ ಓದಿ, ಆಶ್ರಮದ ಎಲ್ಲ ಗೋವುಗಳಿಗೂ ನಾಮಕರಣ ಮಾಡಿ, ಎಲ್ಲ ಕೋಡಿನ ಪ್ರಾಣಿಗಳ ಸ್ನೇಹ ಬೆಳೆಸಿಕೊಂಡರು.

ಚರ್ಮಾಲಯ ಆರಂಭವಾದಾಗಲೂ ಅಷ್ಟೇ ದೃಢವಾಗಿದ್ದರು. ಸ್ವಲ್ಪ ಉಸಿರು ತೆಗೆದುಕೊಳ್ಳಲು ವಿರಾಮ ಸಿಕ್ಕಿತೋ ಇಲ್ಲವೋ, ಚರ್ಮದ ಕೆಲಸದ ಸಿದ್ಧಾಂತಗಳನ್ನು ಕಲಿಯ ತೊಡಗಿದರು. ರಾಜಕೋಟೆಯ ಪ್ರೌಢ ಶಾಲೆಯ ಶಿಕ್ಷಣವನ್ನು ಬಿಟ್ಟರೆ, ಅವರು ಚೆನ್ನಾಗಿ ತಿಳಿದಿದ್ದ ಉಳಿದೆಲ್ಲ ಕಲೆಗಳನ್ನು ಅವರು ಸ್ವಾನುಭವದ ಕಠಿಣ ಪಾಠಶಾಲೆಯಲ್ಲೇ ಕಲಿತರು.

ಅವರು ಆ ಕಲೆಗಳನ್ನೆಲ್ಲ ಗ್ರಾಮೀಣ ಬಡಗಿ, ಗ್ರಾಮೀಣ ನೇಕಾರ ರೈತ ಹಾಗೂ ದನಕಾಯುವವ—ಇಂಥ ಸಾಮಾನ್ಯ ಮಂದಿಯಿಂದಲೇ ಕಲಿತರು.

ಅವರು ಚರಖಾ ಸಂಘದ ಶಿಕ್ಷಣ ವಿಭಾಗದ ವ್ಯವಸ್ಥಾಪಕರೂ ಆಗಿದ್ದರು. ಶ್ರೀ ವಲ್ಲಭಭಾಯಿ ಅವರು ಪ್ರವಾಸದ ಸಮಯದಲ್ಲಿ ವಿಠಲ ಪುರದ ಹೊಸ ಗ್ರಾಮ ನಿರ್ಮಾಣ ಮಾಡುವ ಜವಾಬುದಾರಿಯನ್ನು ಇವರಿಗೆ ವಹಿಸಿದ್ದರು.

ಅವರು ಆದರ್ಶ ತಂದೆಯೆ ಆಗಿದ್ದರು. ಅವರು ತಮ್ಮ ಮಕ್ಕಳಿಗೆ—(ಇಬ್ಬರು ಹೆಣ್ಣುಮಕ್ಕಳು, ಓರ್ವ ಗಂಡುಮಗ—ಇಂದಿಗೂ ಅವಿವಾಹಿತರು—) ಒಳ್ಳೆಯ ಶಿಕ್ಷಣ ಕೊಟ್ಟಿದ್ದರು. ಅವರನ್ನು ದೇಶದ ಪಾಲಿಗೆ 'ಉಪಹಾರ' ವಾಗಲು ಯೋಗ್ಯರನ್ನಾಗಿ ಮಾಡುವಂಥ ಶಿಕ್ಷಣವದು. ಅವರ ಮಗ ಕೇಶವ ಯಂತ್ರವಿದ್ಯೆಯಲ್ಲಿ ಬಹಳ ಕೌಶಲ ತೋರುತ್ತಿದ್ದಾನೆ. ಅತನೂ ತನ್ನ ತಂದೆಯ ಹಾಗೆ ಸಾಧಾರಣ ಕಮ್ಮಾರರು—ಬಡಗಿಗಳು ಕೆಲಸಮಾಡುತ್ತಿರುವುದನ್ನು ನೋಡಿ ನೋಡಿಯೇ ಅದನ್ನು ಕಲಿತಿದಾನೆ. ಅವರ ಹಿರಿಯಮಗಳಾದ ರಾಧೆ—ಆಕೆಗೆ ಈಗ ಹದಿನೆಂಟು ವರುಷ—ಬಿಹಾರಿನಲ್ಲಿ ಸ್ತ್ರೀಯರ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಕಠಿಣವೂ, ಸೂಕ್ಷ್ಮವೂ ಆದ ಕಾರ್ಯವೊಂದನ್ನು ತಲೆಯಮೇಲೆ ಹೊತ್ತುಕೊಂಡಿದ್ದಾಳೆ. ರಾಷ್ಟ್ರೀಯ ಶಿಕ್ಷಣ ಹೇಗಿರಬೇಕು ಎಂಬುದರ ಪೂರ್ಣ ಕಲ್ಪನೆ ಅವರಿಗಿತ್ತು. ಅವರು ಶಿಕ್ಷಕರನ್ನು ಆ ವಿಷಯದ ಮೇಲಿನ ಗಂಭೀರ ಹಾಗೂ ವಿಚಾರ ಪೂರ್ಣವಾದ ಚರ್ಚೆಯಲ್ಲಿ ತೊಡಗಿಸುತ್ತಿದ್ದರು.

ಅವರಿಗೆ ರಾಜನೀತಿಯ ಜ್ಞಾನ ಏನೇನೂ ಇರಲಿಲ್ಲವೆಂದು ಓದುಗರು ಭಾವಿಸಬಾರದು. ಅವರಿಗೆ ಅದರ ಜ್ಞಾನ ಅವಶ್ಯವಾಗಿ ಇತ್ತು; ಆದರೆ, ಅವರು ತಮ್ಮ ಮಟ್ಟಿಗೆ ಆತ್ಮ ತ್ಯಾಗದ ರಚನಾತ್ಮಕವಾದ, ಶಾಂತವಾದ ಪಥವನ್ನು ಆಯ್ಕೆಮಾಡಿಕೊಂಡರು.

ಅವರು ನನ್ನ ಕೈ, ನನ್ನ ಕಾಲು ಹಾಗೂ ನನ್ನ ಕಣ್ಣು ಸಹ ಆಗಿದ್ದರು. ನಾನೇನೋ ಇಷ್ಟು ದೊಡ್ಡ ಮನುಷ್ಯ ಅನಿಸಿಕೊಂಡಿದ್ದೇನೆ. ಆದರೆ ಈ ನನ್ನ 'ದೊಡ್ಡಸ್ತಿಕೆ', ಶಾಂತರೂ, ಶ್ರದ್ಧಾಳುಗಳೂ, ಯೋಗ್ಯರೂ, ಪವಿತ್ರರೂ ಆದ ನನ್ನ ಸ್ತ್ರೀ ಪುರುಷ ಕಾರ್ಯಕರ್ತರ ಅವಿಶ್ರಾಂತ

ಪರಿಶ್ರಮ ಹಾಗೂ ಸೇವೆಯಮೇಲೆ ಎಷ್ಟರಮಟ್ಟಿಗೆ ಅವಲಂಬಿತವಾಗಿದೆ-ಎಂಬುದು ಪ್ರಪಂಚಕ್ಕೇನು ಗೊತ್ತು? ಅವರೆಲ್ಲರ ಪೈಕಿ ನನ್ನ ಪಾಲಿಗೆ ಮಗನಲಾಲರು ಎಲ್ಲರಿಗಿಂತ ದೊಡ್ಡವರು, ಎಲ್ಲರಿಗಿಂತ ಒಳ್ಳೆಯವರು, ಎಲ್ಲರಿಗಿಂತ ಹೆಚ್ಚು ಪವಿತ್ರರು ಆಗಿದ್ದರು.

ಈ ಲೇಖನ ಬರೆಯುತ್ತಿರುವಂತೆಯೇ ತನ್ನ ಪ್ರಿಯ ಪತಿಗಾಗಿ ದುಃಖಿಸುತ್ತಿರುವ ಅವರ ವಿಧವೆಯ ರೋದನ ನನಗೆ ಕೇಳಿಬರುತ್ತಿದೆ. ಆದರೆ, ಆಕೆಗಿಂತ ಹೆಚ್ಚಾಗಿ ನಾನು ವಿಧವೆಯಾಗಿದೇನೆ, ಅನಾಥನಾಗಿದೇನೆ—ಎಂಬುದು ಆಕೆಗೆ ಏನು ಗೊತ್ತು? ದೇವರಲ್ಲಿ ನನಗೆ ಜೀವಂತ ವಿಶ್ವಾಸ ಇಲ್ಲದೆ ಇದ್ದಿದ್ದರೆ, ನನಗೆ ಸ್ವಂತ ಮಕ್ಕಳಿಗಿಂತ ಹೆಚ್ಚು ಪ್ರಿಯರಾಗಿದ್ದ, ನನಗೆ ಎಂದೂ ಮೋಸಮಾಡದ, ನನ್ನ ಆಶೆಗಳನ್ನು ಎಂದೂ ಭಗ್ನಪಡಿಸದ, ಅಧ್ಯವಸಾಯದ ಮೂರ್ತಿಯೇ ಆಗಿದ್ದ, ಆಶ್ರಮದ ಭೌತಿಕ, ನೈತಿಕ, ಆಧ್ಯಾತ್ಮಿಕ ಎಲ್ಲ ಅಂಗಗಳ ನಿಜವಾದ ರಕ್ಷಕರಾಗಿದ್ದ—ಮಗನಲಾಲರ ನಿಧನದಿಂದಾಗಿ ದಿಗ್ಭ್ರಾಂತನಾಗಿ ಹೋಗುತ್ತಿದ್ದೆ. ಅವರ ಜೀವನ ನನ್ನ ಪಾಲಿಗೆ ಉತ್ಸಾಹದಾಯಕವಾದುದು; ನೈತಿಕ ನಿಯಮದ ಅಮೋಘತೆ ಹಾಗೂ ಉಚ್ಚತೆಯ ಪ್ರತ್ಯಕ್ಷ ಪ್ರದರ್ಶನ ಅದು. ಅವರು ತಮ್ಮದೇ ಜೀವನದಲ್ಲಿ—ಒಂದೆರಡು ದಿನಗಳಲ್ಲಲ್ಲ—ಹಲವು ತಿಂಗಳುಗಳಲ್ಲಿಯೂ ಅಲ್ಲ—ಪೂರ್ಣ ಇಪ್ಪತ್ತುನಾಲ್ಕು ವರುಷಗಳ ದೀರ್ಘ ಅವಧಿಯಲ್ಲಿ—ಹಾಯ್! ಅದು ಈಗ ಕ್ಷಣಕಾಲದ ಅವಧಿ ಎಂಬಂತೆ ತೋರುತ್ತದೆ—ದೇಶಸೇವೆ, ಮನುಷ್ಯ ಸೇವೆ-ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನ ಮೊದಲಾದ ಎಲ್ಲ ಶಬ್ದಗಳೂ ಒಂದೇ ಅರ್ಥದ ದ್ಯೋತಕ ಎಂಬುದನ್ನು ಸಿದ್ಧಮಾಡಿ ತೋರಿದರು.

ಮಗನಲಾಲರು ಇನ್ನಿಲ್ಲ. ಆದರೆ, ತಮ್ಮೆಲ್ಲ ಕಾರ್ಯಸಾಧನೆಯ ಮೂಲಕ ಅವರು ಜೀವಂತರಾಗಿಯೇ ಇದಾರೆ. ಅದರ ಚಿಹ್ನೆಗಳನ್ನು ಆಶ್ರಮದ ಧೂಳಿನ ಕಣಕಣಗಳಲ್ಲಿಯೂ ಕಾಣಬಹುದಾಗಿದೆ.೩೦

ಮಗನಲಾಲರ ಬಗೆಗೆ ಏನು ಹೇಳಲಿ? ಆಶ್ರಮದ ಸಲುವಾಗಿಯೇ ಅವರು ಜನ್ಮತಾಳಿದ್ದರು. ಅಗ್ನಿಯಲ್ಲಿ ಚಿನ್ನ ತಪಿಸುವಂತೆ ಅವರು ಸೇವಾಗ್ನಿಯಲ್ಲಿ ತಪಿಸಿ, ಒರೆಗಲ್ಲ ಮೇಲೆ ಹದಿನಾರಾಣೆ ಅಪ್ಪಟ ಚಿನ್ನವಾಗಿ

ಹೊರಬಿದ್ದು, ಈ ಪ್ರಪಂಚದಿಂದ ಪಯಣ ಬೆಳೆಸಿದರು. ಆಶ್ರಮದಲ್ಲಿರುವವರು ಯಾರೇ ಆಗಲಿ, ಮಗನಲಾಲರ ಸೇವೆಯನ್ನು ಪ್ರಮಾಣೀಕರಿಸುವವರು ಆಗಿದ್ದರು. ನನ್ನ ಆದರ್ಶವೂ ಅವರೇ. ಅವರಂಥ ಸರದಾರರು (ನಾಯಕ) ನನಗೆ ದೊರೆಯದೇ ಇದ್ದಿದ್ದರೆ, ಅವರು ನನಗೆ ಮಾಡಿದಷ್ಟು ಸೇವೆಯನ್ನು, ನನ್ನ ನಾಯಕರಿಗೆ ನಾನು ಮಾಡಲು ಆಗುತ್ತಿರಲಿಲ್ಲ. ಅವರ ಜೀವನ ಸಂಪೂರ್ಣವಾಗಿತ್ತು. ಅವರು ಆಶ್ರಮದ ಪ್ರಾಣವಾಗಿದ್ದರು. ನಾನಂತೂ ತಿರುಗಾಡಿಕೊಂಡು ಇರುತ್ತಿದ್ದೆ; ಆಶ್ರಮದ ಬಗೆಗೆ ಕಾಳಜಿಯೇ ಇಲ್ಲದೆ ಇರುತ್ತಿದ್ದೆ. ಅವರಾದರೋ ಆಶ್ರಮದ ಸೇವೆಯಲ್ಲಿ ತಮ್ಮ ಶರೀರವನ್ನು ಸವೆಸಿದರು.

....ನಾನು ಮೀರಾಬಾಯಿಯ ಹಾಗೆ ವಿಷ ಕುಡಿಯಬಲ್ಲೆ; ನನ್ನ ಕೊರಳಿಗೆ ಯಾರಾದರೂ ಸರ್ಪಗಳ ಮಾಲೆಯನ್ನೇ ಹಾಕಿದರೂ ಸಹಿಸಬಲ್ಲೆ. ಆದರೆ, ಈ ವಿಯೋಗ ದುಃಖ ಅವೆರಡು ವಿಷಯಗಳಿಗಿಂತ ಕಠಿಣವೆನಿಸಿದೆ. ಆದರೂ ಗುಂಡಿಗೆ ಗಟ್ಟಿಮಾಡಿಕೊಂಡು, ಅವರ ಗುಣಗಾನ ಮಾಡುತ್ತ, ನನ್ನ ಹೃದಯದಲ್ಲಿ ಅವರ ಮೂರ್ತಿಯನ್ನು ನೆಲೆಗೊಳಿಸಿಕೊಂಡಿದೇನೆ.

ನನ್ನ ಅಭಿಪ್ರಾಯದಲ್ಲಿ ಸ್ವರ್ಗೀಯ ಮಗನಲಾಲ ಗಾಂಧೀಯವರು ಓರ್ವ ಆದರ್ಶ ಖಾದೀ ಸೇವಕರಾಗಿದ್ದರು. ನಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿಯೇ ಅವರು ಮಾಡಿ ತೋರಿಸಿದರು. ಎಷ್ಟೇ ಕಷ್ಟಗಳನ್ನಾದರೂ ಎದುರಿಸಿ, ತಮ್ಮ ಕೆಲಸದ ಕಲೆಯನ್ನು ಎಲ್ಲಿಂದಲಾದರೂ ಕಲಿತುಕೊಳ್ಳುತ್ತಿದ್ದರು. ಕಷ್ಟಗಳನ್ನು ಕಂಡು, ಅವರು ಎಂದೂ ಗಾಬರಿಯಾಗುತ್ತಿರಲಿಲ್ಲ; ದಣಿಯುತ್ತಿರಲಿಲ್ಲ. ಕೊನೆಯ ಸಮಯದವರೆಗೆ ತಮ್ಮ ಖಾದೀ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರಲ್ಲೇ ತೊಡಗಿದ್ದರು.೩೦

ಹೀಗೊಂದು ಭಜನೆಯಿದೆ: 'ಅಜಹು ನ ನಿಕಸೇ ಪ್ರಾಣ ಕಠೋರ್' ....ಇದುವರೆಗೆ ಈಶ್ವರನ ದರ್ಶನ ಆಗಲಿಲ್ಲ; ಅಂದ ಮೇಲೆ ಈ ಜೀವವಾದರೂ ಏಕೆ ಹೋಗಬಾರದಾಗಿತ್ತು? ಈ ಭಜನೆಯನ್ನು ಯಾವಾಗಲೂ ಗಣೇಶ ಶಾಸ್ತ್ರಿಗಳೇ ಹಾಡುತ್ತಿದ್ದರು; ಅವರು ಉಪಸ್ಥಿತರಿರದಿದ್ದರೆ ಅಥವಾ

ಕಾಯಿಲೆ ಬಿದ್ದರೆ, ಮಗನಲಾಲರು ಹಾಡುತ್ತಿದ್ದರು. ಅವರು ಸಂಗೀತ ಗಾರರಲ್ಲದಿದ್ದರೂ, ಅವರ ಕಂಠ ಚೆನ್ನಾಗಿತ್ತು. ಅವರ ಆ ಭಜನೆ ಇಂದೂ ನನ್ನ ಕಿವಿಗಳಲ್ಲಿ ಪ್ರತಿಧ್ವನಿತವಾಗುತ್ತದೆ. ಅವರು ಆಶ್ರಮದ 'ಸ್ತಂಭ'ವೇ ಆಗಿದ್ದರು. ಗುದ್ದಲಿ ಹಿಡಿದು ಅಗೆಯಲು ತೊಡಗಿದರೆ, ಅವರೇ ಎಲ್ಲರಿಗಿಂತ ಮುಂದೆ. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಅವರ ಶರೀರ ಬಹಳ ಬಲಯುತ ವಾಗಿತ್ತು. ಇಲ್ಲಿ ಕಾಯಿಲೆ ಏನೂ ಇರದಿದ್ದರೂ, ಶರೀರ ಕ್ಷೀಣವಾಗುತ್ತ ನಡೆದಿತ್ತು. ಕಾರಣ, ಎರಡೂ ಕಡೆ ಆಶ್ರಮದ ಭಾರ ಅವರ ಮೇಲೆಯೇ ಬಿದ್ದಿದ್ದಿತಾದರೂ, ಇಲ್ಲಿ ಕೋಟ್ಯಂತರ ಮಂದಿಯೊಡನೆ ಅವರು ಕೆಲಸ ಮಾಡುವಂಥ ವಿಶಿಷ್ಟ ಪರಿಸ್ಥಿತಿ ಇತ್ತು. ರಚನಾತ್ಮಕ ಕಾರ್ಯದ ಹೊರೆಯೂ ಅವರ ಮೇಲೆಯೇ. ರಚನಾತ್ಮಕ ಕಾರ್ಯದ ಹೊರತು, ನಾವು ಬದುಕುವು ದಾದರೂ ಹೇಗೆ? ಅದರ ಹೊರತು, ಸ್ವರಾಜ್ಯದ ಮಾತೆಲ್ಲಿ ಬಂತು? ಇಂದು ಸ್ವರಾಜ್ಯವೇನೋ ಸಿಕ್ಕಿದೆ. ಆದರೆ, ಇದರ ಬೆಲೆ ಏನು? ಆ ಕಾಲಕ್ಕೆ ನಾವು ರಚನಾತ್ಮಕ ಕಾರ್ಯವನ್ನು ಸರಿಯಾಗಿ ಮಾಡಿದ್ದಲ್ಲಿ, ಇಂದು ನಾವು ಪ್ರತ್ಯಕ್ಷವಾಗಿ ನೋಡಬೇಕಾಗಿ ಬಂದಿರುವಂಥ ಸ್ಥಿತಿ ಒದಗುತ್ತಿರಲಿಲ್ಲ. ನಾವು ಮಾಡಿಕೊಂಡಿದ್ದ ಸ್ವರಾಜ್ಯದ ಕಲ್ಪನೆ, ಬೆಳಿಸಿಕೊಂಡಿದ್ದ ಆ ಕಲ್ಪನೆ ಇದೇಯೇ? ಆ ಕಾಲಕ್ಕೆ ನಾವು ಅಷ್ಟು ಕಾರ್ಯ ಮಾಡಿದ್ದಲ್ಲಿ, ಇಂದು ಹಿಂದೂಸ್ಥಾನದ ಇತಿಹಾಸವೇ ಅದ್ಭುತವಾಗಿರುತ್ತಿತ್ತು; ಈ ಮಾತಿನಲ್ಲಿ ನನಗೆ ಸಂದೇಹವೇ ಇಲ್ಲ. ಮಗನಲಾಲರ ಭಗವಂತ ಸ್ವರಾಜ್ಯದಲ್ಲೇ ಅಡಗಿದ್ದ. ಆ ಸ್ವರಾಜ್ಯವೇ ರಾಮರಾಜ್ಯ.[೩೨]

ಹರಿಲಾಲ್ ಗಾಂಧಿ

ಹರಿಲಾಲನ ಜೀವನದಲ್ಲಿ ನನಗೆ ಸರಿಬೀಳದಂಥ ಅನೇಕ ವಿಷಯ ಗಳಿವೆ. ಆ ಅವಗುಣಗಳಿದ್ದರೂ ಆತನನ್ನು ನಾನು ಪ್ರೀತಿಸುತ್ತೇನೆ. ನನ್ನದು ತಂದೆಯ ಹೃದಯ. ಆತ ಅದರಲ್ಲಿ ಪ್ರವೇಶಿಸಲು ಬಯಸಿದನೋ, ಆತನಿಗೆ ಸ್ಥಾನ ಸಿದ್ಧವಾಗಿದೆ. ಸದ್ಯಕ್ಕೆ ಅತ ತನ್ನ ಪಾಲಿಗೆ ಆ ಬಾಗಿಲನ್ನು

ಮುಚ್ಚಿಬಿಟ್ಟದಾನೆ. ಇನ್ನೂ ಆತನಿಗೆ ಕಾಡು-ಮೇಡುಗಳಲ್ಲಿ ಅಲೆಯುವುದಿದೆ. ಮಾನವೀಯ ಪಿತನ ಸಂರಕ್ಷಣೆಗೂ ಒಂದು ಮಿತಿ ಇರುತ್ತದೆ. ಅದನ್ನು ಆತ ಅರಸುವುದಾದರೆ, ಖಂಡಿತವಾಗಿ ಆತನಿಗೆ ಸ್ಥಾನ ಸಿಕ್ಕಿಯೇ ಸಿಕ್ಕುವುದು.೩೩

ಹರಿಲಾಲನ ಕೆಂಪು ಸೀಸೆ ದಿನವೂ ತುಂಬಿಯೇ ಇರುತ್ತದೆ. ಚೆನ್ನಾಗಿ ಕುಡಿದು ಎಲ್ಲಂದರಲ್ಲಿ ಅಲೆಯುತ್ತಾನೆ ; ಭಿಕ್ಷೆಬೇಡುತ್ತಾನೆ. ಬಲಿ ಹಾಗೂ ಮನು-ಇವರನ್ನು ಬೆದರಿಸುತ್ತಾನೆ. ಹಾಗೆ ಮಾಡುವುದರಲ್ಲೂ ಹಣ ದೋಚುವುದೇ ಉದ್ದೇಶವೆಂಬಂತೆ ತೋರುತ್ತದೆ. ನನಗೂ ಬಹಳ ಉದ್ಧಟತನದಿಂದ ಬೆದರಿಕೆಯ ಪತ್ರಗಳನ್ನು ಬರೆದಿದಾನೆ. ಮನುವಿನ ಮೇಲೆ ಅಧಿಕಾರ ಪಡೆಯಲು ಬಲಿಯಮೇಲೆ ದಾವೆ ಹೂಡುವ ಬೆದರಿಕೆಯನ್ನು ಹಾಕಿದಾನೆ. ಇದನ್ನೆಲ್ಲ ನೋಡಿದರೆ, ನನಗೆ ದುಃಖವಾಗುವುದಿಲ್ಲ ; ಕನಿಕರ ಹುಟ್ಟುತ್ತದೆ. ನಗೆಯೂ ಬರುತ್ತದೆ. ಇಂಥ ಜನ ಇನ್ನೂ ಎಷ್ಟೋ ಮಂದಿ ಇದ್ದಾರೆ. ಅವರ ಬಗೆಗೂ ನನಗೆ ಇಷ್ಟೇ 'ಚಿಂತೆ' ಇರಬೇಕಲ್ಲವೆ ? ಅವರೆಲ್ಲರೂ ತಮ್ಮ ಸ್ವಭಾವಕ್ಕೆ ತಕ್ಕಂತೆ ಕೆಲಸಮಾಡುತ್ತಾರೆ. ಮಾಡುವುದೇನು ? ನಮ್ಮ ವ್ಯವಹಾರ ಮಾತ್ರ ನೆಟ್ಟಗಿದ್ದರೆ, ಕೊನೆಗೆ ಆತ ದಾರಿಗೆ ಬಂದಾನು. ಹರಿಲಾಲ ಹೀಗಾಗುವುದಕ್ಕೆ ನನ್ನದೂ ಸಾಕಷ್ಟು 'ಹೊಣೆ' ಇದೆಯೆಂಬುದನ್ನು ನಾನು ಒಪ್ಪಿಕೊಳ್ಳಬೇಕು. ಆತ ಹುಟ್ಟುವ ಸಮಯದಲ್ಲಿ ನನಗೆ 'ಮೌಢ್ಯ' ಕವಿದುಕೊಂಡಿತ್ತು. ಆತನ ಪಾಲನೆ-ಪೋಷಣೆಯ ಸಮಯ ನನ್ನ ಪಾಲಿಗೆ 'ಶೃಂಗಾರ'ದ ಸಮಯವಾಗಿತ್ತು. ನಾನು ಮದ್ಯದ ಮಜ ಮಾತ್ರ ಮಾಡುತ್ತಿರಲಿಲ್ಲ. ಆ ಕೊರತೆಯನ್ನು ಹರಿಲಾಲ ತುಂಬಿಕೊಟ್ಟ ! ನಾನು ಒಬ್ಬಳೇ ಸ್ತ್ರೀಯೊಡನೆ ಆಟ ಆಡುತ್ತಿದ್ದೆ ; ಆತ ಅನೇಕ ಸ್ತ್ರೀಯರೊಡನೆ ಆಟ ಆಡುತ್ತಾನೆ. ವ್ಯತ್ಯಾಸ ಗಾತ್ರದ್ದೆ ಹೊರತು, ಗುಣದ್ದಲ್ಲ. ಆದಕಾರಣ, ನಾನೇ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು. ಪ್ರಾಯಶ್ಚಿತ್ತವೆಂದರೆ, ಆತ್ಮ-ಶುದ್ಧಿ. ಅದು ಶಂಬುಕದ ಗತಿಯಲ್ಲಿ ಸಾಗುತ್ತಿದೆ.೩೪

ಹರಿಲಾಲ ಹುಟ್ಟಿದಾಗ ನಾನು ಪೂರಾ ಸಾಹೇಬನೇ ಆಗಿದ್ದೆ. ನಾನು ಸಾಹೇಬನೇ ಆಗಿದ್ದರೂ, ಸಾಹೇಬಗಿರಿಯಲ್ಲಿ ನನಗೆ ಸ್ವಲ್ಪವೂ ಮನಸ್ಸಿರಲಿಲ್ಲವೆಂಬುದು, ಪಾಪ! ಆತನಿಗೇನು ಗೊತ್ತು? ನನ್ನ ಬಾಹ್ಯ ರೂಪವನ್ನು ನೋಡಿ, ತಾನೂ ಹಾಗೆಯೇ ಮೋಜು—ದಿಮಾಕು ಮಾಡ ಬೇಕೆಂದು ಆತನಿಗೆ ಅನಿಸಿತು. ಆತ ನನಗೆ ಹೀಗೆ ಹೇಳಿದ್ದ—"ನನ್ನನ್ನು ಬ್ಯಾರಿಸ್ಟರ್ ಮಾಡಿರಿ. ಆಮೇಲೆ ನಾನು ಏನೇನು ಮಾಡುವೆನೆಂಬುದನ್ನು ನೋಡಿರಿ. ಇಷ್ಟು ತ್ಯಾಗಮಾಡುತ್ತೇನೋ ಇಲ್ಲವೋ ನೋಡಿರಿ."೩೫

ಭಗವಂತ ಆತನಿಗೆ ಯಾವಾಗ ಸದ್ಬುದ್ಧಿ ಕೊಡುವನೋ ನೋಡ ಬೇಕು. ಇದರಲ್ಲಿ ನಮ್ಮ ಪಾಪ—ಪುಣ್ಯಗಳ ಪಾತ್ರವೂ ಇರುವುದಷ್ಟೆ. ಹರಿಲಾಲನ ಜನನದ ಸಮಯದಲ್ಲಿ ನಾನೆಷ್ಟು ಮೂಢನಾಗಿದ್ದೆ? ಬಿತ್ತಿದಂತೆ ಫಲ—ನಾವಿಬ್ಬರೂ ಇದನ್ನು ಅನುಭವಿಸಬೇಕು. ಮಕ್ಕಳ ಆಚರಣೆಗೆ ತಾಯಿ—ತಂದೆಗಳು ಜವಾಬ್ದಾರರೇ ತಾನೆ? ನಾವು ಈಗ ಮಾಡಬಹು ದಾದುದು ಇಷ್ಟೆ: ಇಬ್ಬರೂ ಶುದ್ಧರಾಗಬೇಕು.. ಆ ಪ್ರಯತ್ನವನ್ನು ಮಾಡುತ್ತಲೇ ಇದ್ದೇವೆ. ಅದರಿಂದಲೇ ತೃಪ್ತರಾಗಬೇಕು. ನಮ್ಮ ಶುದ್ಧಿಯ ಪ್ರಭಾವ ತಿಳಿದೋ ತಿಳಿಯದೆಯೋ ಹರಿಲಾಲನ ಮೇಲೆ ಬೀಳು ತ್ತಲೂ ಇದ್ದೀತು.೩೬

ಸತೀಶಚಂದ್ರ ದಾಸಗುಪ್ತ

ಬಂಗಾಳದ ಶುದ್ಧತ್ಯಾಗದ ದೃಷ್ಟಾಂತಕೊಟ್ಟು ನಾನು ಆನಂದರಸ ಬಿಂದುವಿನ ಪಾನ ಮಾಡಹತ್ತಿದೆ. ಜಮೀನ್ದಾರರೊಬ್ಬರ ಇಡೀ ಕುಟುಂಬ ಖಾದೀಮಯವಾಗಿದೆ. ಕುಟುಂಬದ ಸ್ತ್ರೀಯರೆಲ್ಲರೂ ನೂಲು ತೆಗೆಯು ತ್ತಾರೆ. ಸ್ತ್ರೀ-ಪುರುಷರೆಲ್ಲರೂ 'ಖಾದೀ ಪ್ರತಿಷ್ಠಾನ'ದ ಉಪಯೋಗ ಕ್ಕಾಗಿ ಕೊಟ್ಟುಬಿಟ್ಟಿದ್ದಾರೆ. ಪ್ರತಿಷ್ಠಾನ ಪ್ರಾಣಸ್ವರೂಪರಾದ ಸತೀಶ ಬಾಬುಗಳ ತ್ಯಾಗ ಅಂಥಿಂಥದಲ್ಲ. ಡಾ. ರಾಯರ ರಸಾಯನ ಕಾರ್ಖಾನೆ

ಯಲ್ಲಿ ಇವರಿಗೆ ತಿಂಗಳಿಗೆ ಒಂದು ಸಾವಿರದ ಐನೂರು ರೂಪಾಯಿ ಆದಾಯವಿತ್ತು. ಅಲ್ಲಿ ವಾಸಕ್ಕೆ ಬಂಗಲೆಯೂ ಇತ್ತು. ಇನ್ನೂ ಹೆಚ್ಚಿಗೆ ಏನಾದರೂ ಬೇಡಿದರೂ ಸಿಕ್ಕುತ್ತಿತ್ತು. ಅಲ್ಲಿ ಇದ್ದುಕೊಂಡೇ ಖಾದಿ ಕಾರ್ಯ ಮಾಡುತ್ತಿದ್ದರು. ಆದರೆ ಅದರಿಂದ ಅವರ ಮನಸ್ಸಿಗೆ ತೃಪ್ತಿ ಆಗಲಿಲ್ಲ. ಆ ರೀತಿ ಎರಡೂ ಕಾರ್ಯಮಾಡುವುದರಿಂದ, ಎರಡೂ ಕಾರ್ಯ ಕೆಟ್ಟು ಹೋಗಬಹು ದೆಂದು ಅವರ ಕೋಮಲ ಹೃದಯಕ್ಕೆ ಅನಿಸಿತು. ರಸಾಯನ ಕಾರ ಖಾನೆಗೂ ಅವರು ಪ್ರಾಣಪ್ರಾಯರೇ ಆಗಿದ್ದರು. ಪೂರ್ಣ ಸಮಯವನ್ನು ಕೊಡದಿದ್ದರೆ ಅದಕ್ಕೆ ಧಕ್ಕೆ ತಗುಲುವುದು ಖಂಡಿತ. ಇತ್ತ ಖಾದೀ ಕಾರ್ಯ ವೆಂದರೆ, ಬಡವರ ಸೇವೆಯ ಕಾರ್ಯ. ಅಂಥ ಕಾರ್ಯವನ್ನು ಪುರುಸೊತ್ತು ಸಿಕ್ಕಿದಾಗ ಮಾಡುವುದೆನ್ನುವುದು ಅವರಿಗೆ ಸರಿಕಾಣಲಿಲ್ಲ. ಒಬ್ಬ ಗಂಡಸು ಇಬ್ಬರು ಹೆಂಡಂದಿರನ್ನು ಇಟ್ಟುಕೊಳ್ಳುವುದು ಹೇಗೆ ಪಾಪವೋ, ಹಾಗೆಯೇ ಒಬ್ಬಾತ ಎರಡು ಕಾರ್ಯಗಳನ್ನು ತನ್ನ ಪ್ರಾಣಕ್ಕೆ ಸಮಮಾಡಿಸಿಕೊಳ್ಳುವುದು ಅನರ್ಥಕರ. ಇನ್ನು ಖಾದಿಗಾಗಿ ಎಷ್ಟು ತ್ಯಾಗಮಾಡಿದರೂ ಕಡಿಮೆಯೇ– ಹೀಗೆ ಮನಸ್ಸಿನಲ್ಲಿ ವಾದಮಾಡಿಕೊಂಡು, ಸ್ವತಃ ಸ್ಥಾಪಿಸಿದ್ದ ಕಾರಖಾನೆ ಯನ್ನು ಒಂದೇ ಕ್ಷಣದಲ್ಲಿ ಬಿಟ್ಟುಬಿಟ್ಟರು. ಈಗ ತಮ್ಮ ಬಳಿ ಉಳಿದಿದ್ದ ಅಲ್ಪಸ್ವಲ್ಪ ದ್ರವ್ಯದಿಂದಲೇ ಮನೆಯ ಖರ್ಚನ್ನು ನಿರ್ವಹಿಸುತ್ತಿದಾರೆ; ಇಪ್ಪತ್ತುನಾಲ್ಕು ಘಂಟೆ ಖಾದೀಕಾರ್ಯದಲ್ಲಿ ತೊಡಗಿದಾರೆ. ಈವರೀಗ ಹನ್ನೊಂದು ಕಡೆಗಳಲ್ಲಿ ತಮ್ಮ ಕಾರ್ಯದ ಶಾಖೆಗಳನ್ನು ತೆರೆದಿದಾರೆ. ಅವು ಗಳಲ್ಲಿ ಐದು ಖಾದೀ ಉತ್ಪತ್ತಿ ಕೇಂದ್ರಗಳು. ಇನ್ನೂ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ. ಅವುಗಳ ಮೂಲಕ ೫೦೬೦ ಚರಖಾಗಳು ನಡೆಯುತ್ತಿವೆ. ಶುದ್ಧ ಖಾದಿಯ ಮಗ್ಗಗಳು ೬೯೭ ನಡೆಯುತ್ತಿವೆ.

ಅವರ ಈ ಕಾರ್ಯದಲ್ಲಿ ಅವರ ಧರ್ಮಪತ್ನಿಯೂ ಜೊತೆಗೂಡಿದಾರೆ. ಹಣದ ಅಭಾವದ ಅನುಭವವೇ ಇಲ್ಲದ ಆಕೆಗೆ ಈಗ ಬಡತನದಿಂದ ಕೆಲಸ ಸಾಗಿಸುವುದೆಂದರೆ ಬೇಸರಿಕೆ ಆಗುತಿರಲಿಕ್ಕೆ ಸಾಕು; ಪ್ರತ್ಯೇಕವಾದೊಂದು ಬಂಗಲೆಯಲ್ಲೇ ಇದ್ದು ರೂಢಿ ಆಗಿದ್ದ ಆ ಹೆಣ್ಣುಮಗಳಿಗೆ ಚಿಕ್ಕ ಮನೆ ಯೊಂದರ ಸಣ್ಣ ಅಟ್ಟದಲ್ಲಿ ಇರುವುದೆಂದರೆ, ಕಷ್ಟವಾಗಲಿಕ್ಕೆ ಸಾಕು. ಆದರೂ ಆಕೆ ಎಲ್ಲ ಕಷ್ಟಗಳನ್ನೂ ಪ್ರಫುಲ್ಲವದನೆಯಾಗಿ ಸಹಿಸುತ್ತಾಳೆ.೩೭

ಅವರು (ಸತೀಶಬಾಬು) ಶುದ್ಧ ಬಂಗಾರದಂತೆ ಇದ್ದಾರೆ. ಆದರೆ, ಶುದ್ಧ ಬಂಗಾರದಿಂದ ಒಡವೆಗಳನ್ನು ಮಾಡಲು ಆದೀತೆ? ಶುದ್ಧ ಬಂಗಾರಕ್ಕೆ ಒಂದಿಷ್ಟು 'ಕುಧಾತು' ಸೇರಿದರೆಯೇ ಅದರಿಂದ ಒಡವೆ ಆದೀತು. ಹೀಗೆ ಕೆಲಸಕ್ಕೆ ಬರಬೇಕಾದರೆ, 'ಕುಧಾತು' ಆವಶ್ಯಕ. ಆದರೂ 'ಸುಧಾತು' ಸ್ವಯಂ ಶೋಭಿಸುವುದು.೪೭

ನಾಯಕರಲ್ಲಿ ಎರಡು ಬಗೆ: ತಮ್ಮನ್ನು ತಾವೇ ನಾಯಕರೆಂದು ಭಾವಿಸಿಕೊಂಡು, ತಮ್ಮ ನಾಯಕತ್ವದ ಮುಖಾಂತರ ಜನತೆಯನ್ನು ಶೋಷಣೆ ಮಾಡುವವರದು ಒಂದು ಬಗೆ. ತಮ್ಮ ಸೇವಾಬಲದಿಂದ ಜನತೆಯ ನಾಯಕರಾಗುವವರದು ಇನ್ನೊಂದು ಬಗೆ. ಎರಡನೆಯ ಬಗೆಯವರು ವಿಶ್ವಾಸಪಾತ್ರರು. ಅವರನ್ನು ಜನ ಮಾನ್ಯಮಾಡುತ್ತಾರೆ. ಈ ಎರಡೂ ಬಗೆಯನ್ನು ಗುರುತಿಸುವುದು ಅತಿಸುಲಭ. ಎರಡನೆಯ ಬಗೆಯ ನಾಯಕರನ್ನು ಜನತೆಯಿಂದ ಬೇರ್ಪಡಿಸುವುದು ಉಚಿತವಲ್ಲ.

ಶ್ರೀ ಸತೀಶಬಾಬುಗಳು ಎರಡನೆಯ ಶ್ರೇಣಿಗೆ ಸೇರಿದವರು. ಅವರಿಗೆ ರಾಜನೀತಿ ತಿಳಿದಿದ್ದರೂ, ಅವರು ರಾಜನೈತಿಕ ಪುರುಷರಲ್ಲ; ಕಾರ್ಯಕರ್ತರೂ ಸುಪ್ರಸಿದ್ಧ ವಿಜ್ಞಾನಿಗರೂ ಆಜೀವ ಲೋಕಸೇವಾ ದೀಕ್ಷಿತರೂ ಆದ ಆಚಾರ್ಯ ಪಿ. ಸಿ. ರೇ ಅವರ ಪ್ರಿಯ ಶಿಷ್ಯರಲ್ಲಿ ಒಬ್ಬರು. ಆಚಾರ್ಯ ರೇ ತಮಗಾಗಿ ಒಂದು ದುಗ್ಗಾಣಿಯನ್ನೂ ಆರ್ಜಿಸಿದವರಲ್ಲ. ಸುಪ್ರಸಿದ್ಧರಾದ ಬೆಂಗಾಲ್ ಕೆಮಿಕಲ್ ವರ್ಕ್ಸ್ ಆಚಾರ್ಯರೇ ಅವರ ಅನೇಕಾನೇಕ ಕೃತಿಗಳಲ್ಲಿ ಒಂದು. ಸತೀಶಬಾಬು ಅದರ ನಿರ್ಮಾಪಕರಲ್ಲಿ ಒಬ್ಬರು. ಅವರು ಆ ಕೆಮಿಕಲ್ ವರ್ಕ್ಸ್‌ನ ವ್ಯವಸ್ಥಾಪಕರಾಗಿದ್ದು, ಒಳ್ಳೆ ಸಂಬಳ ಪಡೆಯುತ್ತಿದ್ದರು. ಆ ಕಾರ್ಯವನ್ನು ಬಿಟ್ಟು ಖಾದೀಕಾರ್ಯವನ್ನು ತಮ್ಮದನ್ನಾಗಿ ಮಾಡಿಕೊಂಡು, ಬಡವರಂತೆ ಬಾಳುವೆ ಮಾಡಹತ್ತಿದರು. ಅವರ ಧರ್ಮಪತ್ನಿ ಅವರಿಗೆ ಸಂಪೂರ್ಣ ನೆರವು ನೀಡಿ, ಅವರು ಕಠಿಣವಾದ ಸಾಧನೆಯಲ್ಲಿ ಅವರ ಸುಖ–ದುಃಖಗಳಲ್ಲಿ ಸಹಭಾಗಿನಿಯಾದರು. ಅವರ ಸಹೋದರರೂ ಅವರ ಬುದ್ಧಿವಂತನಾದ ಮಗನೂ ಹಾಗೆಯೇ ಮಾಡಿದರು. ಅವರಲ್ಲಿ ಒಬ್ಬರು ಸೇವೆಮಾಡುತ್ತ ಮಾಡುತ್ತಲೇ ಅಸುನೀಗಿದರು. ಶ್ರೀ ಸತೀಶ

ಬಾಬುಗಳ ಸಹೋದರ ಶ್ರೀ ಕ್ಷಿತೀಶಬಂಧುದಾಸಗುಪ್ತರೂ ಓರ್ವ ರಸಾಯನ ಶಾಸ್ತ್ರಜ್ಞ. ಅವರೂ 'ಖಾದಿ' ಪ್ರತಿಷ್ಠಾನ 'ದ ಕಾರ್ಯದಲ್ಲಿ ತಮ್ಮ ಶರೀರವನ್ನು ಸವೆಸಿದಾರೆ. ಅವರು ತಮ್ಮ ಎಲ್ಲ ಸಮಯ ಹಾಗೂ ಶಕ್ತಿಯನ್ನು ಜೇನುಸಾಕಾಣಿಕೆ, ಕೈಕಾಗದ ತಯಾರಿಕೆ ಹಾಗೂ ಅಂಥದೇ ಗೃಹೋದ್ಯೋಗಗಳಲ್ಲಿ ಕಳೆದಿದಾರೆ. ಶ್ರೀ ಸತೀಶಬಾಬುಗಳು ತಾವು ಸ್ವತಃ ಪಡೆದುಕೊಂಡ ಉಚ್ಚ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸಲಿಲ್ಲ. ಅವರು ತಮ್ಮ ಹೊಸ ಕಾರ್ಯದಲ್ಲಿ ಅತೀವ ಉತ್ಸಾಹ ಹಾಗೂ ಶಕ್ತಿಯಿಂದ ತಲ್ಲೀನ ರಾಗಿ ಖಾದೀಕಾರ್ಯದಲ್ಲಿ ವಿಶೇಷಜ್ಞರೆನಿಸಿದರು. ಅವರು ಸ್ಥಾಪಿಸಿದ ಖಾದೀ ಪ್ರತಿಷ್ಠಾನ ಲೋಕಸೇವಾ ಪ್ರವೃತ್ತಿಗಳ ಮಹಾ ಕೇಂದ್ರವಾಗಿದೆ. ಯಾರೊಡನೆ ಕೆಲಸಮಾಡುವ ಸೌಭಾಗ್ಯ ನನಗೆ ಸಿಕ್ಕಿದೆಯೋ ಅಂಥ ಅತೀವ ಪ್ರಾಮಾಣಿಕರೂ, ಅತೀವ ನಮ್ರರೂ ಆದ ಮಂದಿಯಲ್ಲಿ ಶ್ರೀ ಸತೀಶ ಬಾಬುಗಳೂ ಒಬ್ಬರು. ಅವರು ಸತ್ಯ—ಅಹಿಂಸೆಗಳ ಆದರ್ಶಕ್ಕೆ ಅನುಗುಣವಾಗಿ ಜೀವನ ನಡೆಸುವ ಪ್ರಯತ್ನಕ್ಕೆ ತಮ್ಮ ಸರ್ವಶಕ್ತಿಯನ್ನು ಧಾರೆಯೆರೆದಿದಾರೆ.೬೯

ಗೋಪಾಲಕೃಷ್ಣ ಗೋಖಲೆ

ಗೋಖಲೆ ೧೮೬೬ ರಲ್ಲಿ ಕೊಲ್ಹಾಪುರದಲ್ಲಿ ಬಡ ಬ್ರಾಹ್ಮಣ ಕುಟುಂಬ ವೊಂದರಲ್ಲಿ ಜನ್ಮ ತಾಳಿದರು. ಅಲ್ಲಿಯ ಕಾಲೇಜಿನಲ್ಲಿಯೆ ಓದಿ ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಮುಂಬಯಿಯ ಎಲ್ಫಿನ್ ಸ್ಟನ್ ಕಾಲೇಜಿಗೆ ಸೇರಿ, ೧೮೮೪ ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಯಾದರು.

ಬಿ. ಎ. ಆದಮೇಲೆ ಅವರಿಗೆ ಯಾವುದಾದರೊಂದು ಕೆಲಸಕ್ಕೆ ಸೇರುವ ವಿಚಾರ ಮಾಡಬೇಕಾಯಿತು; ಅಧ್ಯಾಪಕ ವೃತ್ತಿಯೇ ಅವರಿಗೆ ಹಿಡಿಸಿತು. ಆ ಕಾಲಕ್ಕೆ 'ಡೆಕ್ಕನ್ ಎಜುಕೇಷನ್ ಸೊಸೈಟಿ' ಒಳ್ಳೆಯ ಕೆಲಸ ಮಾಡು ತ್ತಿತ್ತು. ಶ್ರೀ ಗೊಖಲೆ ಆ ಸಂಸ್ಥೆಗೆ ಸೇರಿದರು. ಆ ಸಂಸ್ಥೆಯ ಮೇಲ್ವಿ

ಚಾರಣೆಯಲ್ಲಿ ಪುಣೆಯಲ್ಲಿ ನಡೆಯುತ್ತಿದ್ದ ಫೆರ್ಗೂಸನ್ ಕಾಲೇಜಿನಲ್ಲಿ ಅವರನ್ನು ಮಾಹೆಯಾನ ಎಪ್ಪತ್ತು ರೂಪಾಯಿ ಸಂಬಳದ ಮೇಲೆ ಅರ್ಥ ಶಾಸ್ತ್ರ ಹಾಗೂ ಇತಿಹಾಸದ ಅಧ್ಯಾಪಕರನ್ನಾಗಿ ನೇಮಕ ಮಾಡಲಾಯಿತು. ಶ್ರೀ ಗೋಖಲೆ ಅವರು ಅಲ್ಲಿ ಇಪ್ಪತ್ತು ವರ್ಷಗಳಕಾಲ ಅಧ್ಯಾಪನ ಕಾರ್ಯ ಮಾಡುವುದಾಗಿ ಶಪಥ ಮಾಡಿದರು. ಆ ಪ್ರತಿಜ್ಞೆಯನ್ನು ಪಾಲಿಸಿಯೂ ಪಾಲಿಸಿದರು. ಈ ಪ್ರಕಾರದ ಸೇವಾವೃತ್ತಿಪರಾಯಣರಾದ ಜನ ಶಿಕ್ಷಣದ ಸಲುವಾಗಿ ತಮ್ಮ ಜೀವನವನ್ನು ಅರ್ಪಣೆ ಮಾಡಿದಾಗಲೇ ಶಿಕ್ಷಣ ಫಲ ದಾಯಕವಾಗುವುದು; ಬಾಲಕರ ಸಂಸ್ಕಾರ ರೂಪಿತವಾಗುವುದು. ಶ್ರೀ ಗೋಖಲೆ ಅವರು ಫೆರ್ಗೂಸನ್ ಕಾಲೇಜಿನಲ್ಲಿ ಇಪ್ಪತ್ತು ವರುಷ ಕಳೆದರು. ಆ ಅವಧಿಯಲ್ಲಿ ಸಭೆ—ಸಮಾಚಾರಪತ್ರಗಳ ಮೂಲಕ ಅವರ ದರ್ಶನ ಹೆಚ್ಚಾಗಿ ಆಗದಿದ್ದರೂ, ಅನೇಕ ಯುವಕರಿಗೆ ತಮ್ಮ ಮನಸ್ಸನ್ನು ವಿಕಾಸ ಗೊಳಿಸಿಕೊಳ್ಳುವ ಹಾಗೂ ಆಚರಣೆಯನ್ನು ದೃಢಗೊಳಿಸಿಕೊಳ್ಳುವ ಮುಂದಿನ ಪೋಷಣೆ ಆ ಅವಧಿಯಲ್ಲಿ ಅದರಿಂದಲೇ ದೊರೆಯಿತು.

ಶ್ರೀ ಗೋಖಲೆ ಅವರು ಫೆರ್ಗೂಸನ್ ಕಾಲೇಜಿನಲ್ಲಿ ಇದ್ದಾಗ ಶಿಕ್ಷಣ ಕಾರ್ಯವಲ್ಲದೆ ಇತರ ಕಾರ್ಯಗಳತ್ತಲೂ ಗಮನ ಹರಿಸುತ್ತಿದ್ದರು. ಅವರು ಕಾಲೇಜಿಗೆ ಸೇರಿದಾಗ, ಅವರಿಗೆ ಸ್ವರ್ಗೀಯ ಶ್ರೀ ಮಹಾದೇವ ಗೋವಿಂದ ರಾನಡೆ ಅವರ ಸಂಪರ್ಕ ಉಂಟಾಯಿತು. ವಿಶೇಷತಃ ಅವರ ಮೇಲ್ವಿ ಚಾರಣೆಯಲ್ಲಿಯೇ ಇವರ ಚಾರಿತ್ರ್ಯ ರೂಪಿತವಾಯಿತು. ನ್ಯಾಯಮೂರ್ತಿ ರಾನಡೆ ಅವರ ನಿಷ್ಣಾತ ಉಸ್ತುವಾರಿಯಲ್ಲಿ ಹನ್ನೆರಡು ವರುಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಶ್ರೀ ಗೋಖಲೆ ಅವರು ಅರ್ಥಶಾಸ್ತ್ರದ ಅಧ್ಯಯನ ಮಾಡಿದ್ದರು. ಪರಿಣಾಮತಃ ಭಾರತದಲ್ಲಿ ಆರ್ಥಿಕ ವಿಷಯಗಳಲ್ಲಿ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಗೋಖಲೆ ಅವರು ಒಬ್ಬರೆನಿಸಿದಾರೆ. ಶ್ರೀ ಗೊಖಲೆ ಅವರಿಗೆ ಸ್ವರ್ಗೀಯ ಶ್ರೀ ರಾನಡೆ ಅವರಲ್ಲಿ ಬಹಳ ಪೂಜ್ಯಭಾವ; ಅವರನ್ನು ಗುರುಗಳೆಂದೇ ಭಾವಿಸುತ್ತಾರೆ. ೧೮೮೭ ರಲ್ಲಿ ಶ್ರೀ ರಾನಡೆ ಅವರ ಇಚ್ಛೆಯಂತೆ ಪುಣೆಯ ಸಾರ್ವಜನಿಕರ ಸಭೆಯ ವತಿಯಿಂದ ಪ್ರಕಟವಾಗುತ್ತಿದ್ದ 'ಕ್ವಾರ್ಟರ್ಲಿ ಜರ್ನಲ್' ಸಂಚಾಲಕತ್ವ ವನ್ನು ಶ್ರೀ ಗೋಖಲೆ ಅವರೇ ವಹಿಸಿಕೊಂಡಿದ್ದರು. ಸ್ವಲ್ಪ ಕಾಲದ

ನಂತರ ಅವರು 'ಡೆಕ್ಕನ್' ಸಭೆಯ ಅವೈತನಿಕ ಕಾರ್ಯದರ್ಶಿಗಳಾಗಿ ನೇಮಕವಾದರು. ಪುಣೆಯ ಆಂಗ್ಲ-ಮರಾಠೀ ಸಾಪ್ತಾಹಿಕದ 'ಸುಧಾರಕ'ಕ್ಕೂ ಅವರು ಸಂಚಾಲಕರಾಗಿದ್ದರು. ಬೊಂಬಾಯಿ ಪ್ರಾಂತೀಯ ಸಮ್ಮೇಳನಕ್ಕೆ ಅವರು ನಾಲ್ಕು ವರುಷ ಕಾಲ ಕಾರ್ಯದರ್ಶಿಗಳಾಗಿದ್ದರು. ೧೮೯೫ ರಲ್ಲಿ ಪುಣೆಯಲ್ಲಿ ನಡೆದ ಕಾಂಗ್ರೆಸ್ಸಿಗೂ ಅವರು ಕಾರ್ಯದರ್ಶಿಗಳಾಗಿ ನೇಮಕವಾಗಿದ್ದರು. ಸಾರ್ವಜನಿಕ ಕಾರ್ಯಗಳಲ್ಲಿ ಅವರಿಗಿದ್ದ ಅತೀವ ಅಭಿರುಚಿ ಹಾಗೂ ತೀವ್ರಾಸಕ್ತಿಯ ಫಲವಾಗಿ, ಅವರ ಖ್ಯಾತಿ ಎಷ್ಟು ಹೆಚ್ಚಿತೆಂದರೆ, ಮಂದಿ "ದಕ್ಷಿಣದ ಉದಯಿಸುತ್ತಿರುವ ತಾರೆಗೆ" ಎಂಬ ಉಪಮಾನವನ್ನು ಅವರಿಗೆ ಹಚ್ಚ ತೊಡಗಿದರು. ಭಾರತದ ಖರ್ಚಿನ ಸಂಬಂಧದಲ್ಲಿ ಪರಿಶೀಲನೆ ಮಾಡಲು ವಿಲಾಯತಿಯಲ್ಲಿ ನಿಯೋಜಿತವಾಗಿದ್ದ 'ವೆಲ್ಬಿ ಕಮಿಶನ್ನಿ'ನ ಮುಂದೆ ಸಾಕ್ಷ್ಯ ಕೊಡಲು ಮುಂಬಯಿಯ ಜನ ಶ್ರೀ ವಾಚ್ಛಾ ಅವರ ಜತೆಗೆ ಇವರನ್ನೂ ಚುನಾಯಿಸಿದುದು ಇವರ ಕೀರ್ತಿ ಎಷ್ಟು ಹರಡಿತ್ತೆಂಬುದಕ್ಕೆ ಪ್ರಮಾಣ. ಅಲ್ಲಿ ಇವರು ಅಮೂಲ್ಯವಾದ ಹೇಳಿಕೆಯನ್ನು ಕೊಟ್ಟರು.

ಇಂಗ್ಲೆಂಡಿನಲ್ಲಿ ಇದ್ದಾಗ ಇವರು ಹಿಂದೂಸ್ಥಾನದ ವಿದ್ಯಮಾನಗಳ ಬಗೆಗೆ ಹಲವಾರು ಭಾಷಣಗಳನ್ನು ಮಾಡಿದರು. ಪ್ಲೇಗ್ ಸಂಬಂಧದಲ್ಲಿ ಮುಂಬಯಿ ಸರಕಾರ ಕೆಲಸ ಮಾಡುತ್ತಿದ್ದ ರೀತಿ ಹಾಗೂ ಸೈನಿಕರು ಮಾಡಿದ ಅವಾಂತರದ ಕೆಲಸದ ಬಗೆಗೆ ಕಟುವಾದ ಟೀಕೆಯನ್ನು ಅಲ್ಲಿ ಮುದ್ರಿಸಿ, ಪ್ರಕಟಿಸಿದರು. ಸ್ವಲ್ಪ ಕಾಲಾನಂತರ ಅವರು ಬೊಂಬಾಯಿ ಶಾಸನ ಸಭೆಯ ಸದಸ್ಯರಾಗಿ ಚುನಾಯಿತರಾದರು, ೧೯೦೨ ರಲ್ಲಿ ೨೫/- ರೂ. ವಿರಾಮವೇತನ ತೆಗೆದುಕೊಂಡು, ಫೆರ್ಗೂಸನ್ ಕಾಲೇಜನ್ನು ಬಿಟ್ಟರು. ಅದೇ ಸಮಯಕ್ಕೆ ಸರ್ ಫಿರೋಜ್ ಷಾ ಮೆಹ್ತಾ ಅವರು ಖಾಯಿಲೆ ಬಿದ್ದುದರಿಂದ ಅವರ ಸ್ಥಾನದಲ್ಲಿ ಕೇಂದ್ರ ಶಾಸನ ಸಭೆಗೆ ಮುಂಬಯಿಯ ಪ್ರತಿನಿಧಿಯಾಗಿ ಶ್ರೀ ಗೋಖಲೆ ಅವರು ಚುನಾಯಿತರಾದರು. ಅಲ್ಲಿ ಇವರು ತಮ್ಮ ಕೆಲಸವನ್ನು ಎಷ್ಟು ಚೆನ್ನಾಗಿ ನಿರ್ವಹಿಸಿದರೆಂದರೆ, ಆಗಿನಿಂದ ಈಗಿನವರೆಗೆ ಆ ಸ್ಥಾನಕ್ಕೆ ಮೇಲಿಂದ ಮೇಲೆ ಚುನಾಯಿತರಾಗುತ್ತಲೇ ಇದ್ದಾರೆ.

ಹಿರಿಯ ಶಾಸನ ಸಭೆಗೆ ಚುನಾಯಿತರಾದ ಮೇಲೆ ಅವರ ಕಾರ್ಯ-ಕುಶಲತೆಯ ಹೊಸ ಪ್ರಕರಣವೇ ಆರಂಭವಾಯಿತು. ಸ್ವದೇಶದ ಸೇವೆಯಲ್ಲಿ ಅವರಿಗೆ ದೊರೆತ ಅತ್ಯದ್ಭುತ ಜಯ ಇತಿಹಾಸ ರೂಪದಲ್ಲಿ ಕಾಣಿಸಿ ಕೊಂಡಿದೆ. ಬಡ್ಜೆಟ್ ಸಮಯದ ಅವರ ಪ್ರಥಮ ಭಾಷಣವೇ ಪ್ರೇರಣಾ ಪ್ರದವೆನಿಸಿದೆ. ಆಗಿನಿಂದ ಅವರ ಬಡ್ಜೆಟ್ ಸಂಬಂಧದ ಭಾಷಣ ಗಳೆಂದರೆ, ಜನಕ್ಕೆ ಬಹಳ ಕುತೂಹಲ. ವಾರ್ಷಿಕ ಲೆಕ್ಕದಲ್ಲಿ 'ಉಳಿಕೆ ಹಣ' ಎಂದು ತೋರಿಸುವುದು ಎಷ್ಟು ಅಬದ್ಧ, ಅದರಿಂದ ಜನ ಎಷ್ಟು ಅಪ್ರಾಮಾಣಿಕರಾಗುತ್ತಾರೆ ಎಂಬುದನ್ನು ಅವರು ವರ್ಷೇ ವರ್ಷೇ ತೋರಿಸಿ ಕೊಡುತ್ತಲೇ ಬಂದಿದಾರೆ. ಸರಕಾರದ ಇಲಾಖೆಗಳಲ್ಲಿ ಭಾರತೀಯರಿಗೆ ಹೆಚ್ಚು ಪ್ರಮಾಣದಲ್ಲಿ ನೌಕರಿ ಕೊಡಬೇಕೆಂಬ ಬೇಡಿಕೆಯನ್ನೂ ಅವರು ವರ್ಷೇ ವರ್ಷೇ ಮುಂಡಿಸುತ್ತಲೇ ಬಂದಿದಾರೆ. ಸೈನ್ಯದ ವೆಚ್ಚವನ್ನು ತಗ್ಗಿಸ ಬೇಕೆಂದೂ ಪ್ರತಿಪಾದಿಸುತ್ತಿದ್ಧಾರೆ. ಉಪ್ಪಿನ ಕರ ರದ್ದಾಗಬೇಕು, ಕೃಷಿ, ಉದ್ಯೋಗ ಹಾಗೂ ಶಿಕ್ಷಣದ ಪ್ರಸಾರ ಆಗಬೇಕು, ನಿಃಶುಲ್ಕ ಹಾಗೂ ಅನಿವಾರ್ಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕು-ಹಾಗೂ ಇಂಥದೇ ಇತರ ಸುಧಾರಣೆಗಳು ಆಗಬೇಕು—ಎಂಬುದಾಗಿ ವರ್ಷೇ ವರ್ಷೇ ಆಗ್ರಹ ಮಾಡುತ್ತಿದ್ದಾರೆ. ಉಪ್ಪಿನ ತೆರಿಗೆ ಕಡಿಮೆಯಾಗಿರುವುದು ಬಹಳವಾಗಿ ಅವರ ಪ್ರತಿಪಾದನೆಯ ಕಾರಣದಿಂದಲೇ.

ಹಿಂದೂಸ್ಥಾನದ ಅನೇಕ ಅತ್ಯುಚ್ಚ ಪದಾಧಿಕಾರಿಗಳು ಶ್ರೀ ಗೋಖಲೆಯವರಿಗೆ ಸ್ನೇಹಿತರು. ತೀಕ್ಷ್ಣಸ್ವಭಾವದ ವೈಸ್‌ರಾಯ್ ಲಾರ್ಡ್ ಕರ್ಜನ್ ಅವರೂ ಕೂಡ ಇವರನ್ನು ತಮಗೆ ಸರಿಮಿಗಿಲಾದ ಪ್ರತಿ ಸ್ಪರ್ಧಿ ಎಂದು ಭಾವಿಸಿದ್ದರು. 'ಶ್ರೀ ಗೋಖಲೆ ಅವರೊಡನೆ ಸೆಣಸುವು ದೆಂದರೆ ಸಂತೋಷದಾಯಕವಾದ ಸಂಗತಿ'—ಎಂಬುದಾಗಿ ಅವರು ಹೇಳಿದ್ದರು. ತಮಗೆ ಸಂಪರ್ಕ ಉಂಟಾದ ಮನುಷ್ಯರಲ್ಲೆಲ್ಲ ಶ್ರೀ ಗೋಖಲೆ ಅವರೇ ಅತ್ಯಂತ ಬಲಿಷ್ಠರು—ಎಂಬುದಾಗಿ ಅವರು ಹೇಳಿದುದನ್ನೂ ಕೇಳಿದವರಿದಾರೆ. ಕೌನ್ಸಿಲ್‌ನಲ್ಲಿ ಶ್ರೀ ಗೋಖಲೆ ಲಾರ್ಡ್ ಕರ್ಜನರನ್ನು ಎಂದೂ ಸಡಿಲ ಬಿಡದೆ ವಿರೋಧಿಸುತ್ತಿದ್ದರು. ಅದರೂ ಇವರ ಯೋಗ್ಯತೆ ಹಾಗೂ ಸುಂದರ ವ್ಯವಹಾರದ ಬಗೆಗೆ ಗೌರವದ ಪ್ರತೀಕವಾಗಿ ಸಿ.ಐ.ಇ.

ಬಿರುದನ್ನು ಕೊಟ್ಟು, ಅದನ್ನು ಕೊಡುವ ಸಂದರ್ಭದಲ್ಲಿ ಅಭಿನಂದನೀಯ ವ್ಯಕ್ತಿಗತ ಪತ್ರವೊಂದನ್ನು ಲಾರ್ಡ್ ಕರ್ಜನರು ಬರೆದಿದ್ದರು.

ಶ್ರೀ ಗೋಖಲೆ ಅವರು ಕಾಂಗ್ರೆಸ್ ಚಟುವಟಿಕೆಗಳಲ್ಲಿ ಮೊದಲಿನಿಂದಲೂ ಪಾಲುಗೊಂಡಿದ್ದರು. ಕಾಂಗ್ರೆಸ್ಸಿನ ಅನೇಕ ಸಭೆಗಳಲ್ಲಿ ಹಾಜರಿದ್ದು ಭಾಷಣಗಳನ್ನು ಮಾಡಿದಾರೆ. ಬೊಂಬಾಯಿ ಕಾಂಗ್ರೆಸ್ಸಿನಲ್ಲಿ ಹಿಂದೂಸ್ಥಾನದ 'ಸ್ಟರ್ಲಿಂಗ್ ಬ್ಯಾಲೆನ್ಸ್' ವಿಷಯದಲ್ಲಿ ಅವರು ಮಾಡಿದ ಭಾಷಣ ಎಲ್ಲಕ್ಕಿಂತ ಹೆಚ್ಚು ಉಲ್ಲೇಖನೀಯವಾದುದು. ಹೆನ್ರಿಕಾಟನ್ ಅವರ ಅಭಿಪ್ರಾಯದಂತೆ, ಆ ಭಾಷಣ 'ಹೌಸ್ ಆಫ್ ಕಾಮನ್ಸ್' ನಲ್ಲಿ ನಡೆದಿರುವ ಅತ್ಯಂತ ಸುಂದರವಾದ ಭಾಷಣಗಳಿಗೆ ಸರಿಮಿಗಿಲಾಗಬಲ್ಲದು.

ವಿಲಾಯತಿಯ ಜನಕ್ಕೆ ಹಿಂದೂಸ್ಥಾನದ ರಾಜನೈತಿಕ ಸ್ಥಿತಿಯ ಪರಿಚಯ ಮಾಡಿಕೊಡುವ ಸಲುವಾಗಿ ಬೊಂಬಾಯಿಯ ಜನ ಇವರನ್ನು ೧೯೦೫ ರಲ್ಲಿ ತಮ್ಮ ಪ್ರತಿನಿಧಿಯೆಂದು ಅಲ್ಲಿಗೆ ಕಳುಹಿಸಿದ್ದರು. ಆ ಕಾರ್ಯವನ್ನು ಇವರು ಬಹಳ ತೃಪ್ತಿಕರವಾಗಿ ನಿರ್ವಹಿಸಿದರು. ಐವತ್ತು ದಿನಗಳಲ್ಲಿ ಏನಿಲ್ಲವೆಂದರೂ ನಲವತ್ತೈದು ಭಾಷಣಗಳನ್ನು ಮಾಡಿದರು. ಹಿಂದೂಸ್ಥಾನದಲ್ಲಿಯ ಬ್ರಿಟಿಷ್ ಆಡಳಿತದ ವಿಷಯದಲ್ಲಿ ಜನಮತವನ್ನು ಪ್ರಕಟಿಸುವ ಅವರ ನೈಪುಣ್ಯತೆಯನ್ನು ನೋಡಿ, ಅನೇಕ ಚತುರ ಆಂಗ್ಲೇಯರೂ ಆಶ್ಚರ್ಯ ಚಕಿತರಾದರು. ಅವರು ಇಂಗ್ಲೆಂಡಿನಿಂದ ಹೊರಡುವ ಮುನ್ನವೇ, ಪುಣ್ಯಭೂಮಿ—ವಾರಣಾಸಿಯಲ್ಲಿ ನಡೆಯಲಿದ್ದ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಚುನಾಯಿತರಾದರು. ಕಾಶೀ-ಕಾಂಗ್ರೆಸ್ ಅಧ್ಯಕ್ಷ ಪೀಠದಿಂದ ಅವರು ಮಾಡಿದ ಭಾಷಣ ಅತ್ಯಂತ ಸ್ಪಷ್ಟವಾಗಿದ್ದು, ನೈಪುಣ್ಯತೆಯ, ನಮೂನೆಯೂ ಆಗಿತ್ತು. ಕಾಶಿ-ಕಾಂಗ್ರೆಸ್ ನಡೆದ ತರುಣದಲ್ಲೇ ಪುನಃ ಅವರು ವಿಲಾಯತಿಗೆ ಹೋದರು. ಅಲ್ಲಿ ಲಾರ್ಡ್ ಮಾರ್ಲೆ ಅವರನ್ನು ಅನೇಕ ಬಾರಿ ಭೇಟಿಮಾಡಿದರು. ಲಾರ್ಡ್ ಮಿಂಟೋ ಅವರ ಹೊಸ ಸುಧಾರಣೆಗಳ ಯೋಜನೆಯ ಸಂಬಂಧದಲ್ಲಿ ೧೯೦೯ ರಲ್ಲಿ ಅವರು ಪುನಃ ವಿಲಾಯತಿಗೆ ಹೋಗಿದ್ದರು.

ರಾಜನೈತಿಕ ಕಾರ್ಯಕ್ಕಾಗಿ ದೇಹವನ್ನು ಅರ್ಪಣೆ ಮಾಡುವಂಥ

ಹಲವು ವ್ಯಕ್ತಿಗಳು ಪ್ರತಿಯೊಂದು ಪ್ರಾಂತದಲ್ಲೂ ಹುಟ್ಟಿಕೊಳ್ಳುವುದು ಅತ್ಯಂತ ಆವಶ್ಯಕ—ಎಂಬ ಮಾತನ್ನು ಶ್ರೀ ಗೋಖಲೆ ಅವರು ಮೇಲಿಂದ ಮೇಲೆ ಸ್ವರಭಾರ ಹಾಕಿ ಹೇಳಿದಾರೆ. ನಿಜವಾದ ಮಾತೆಂದರೆ, ಸ್ವದೇಶ-ಸೇವೆಯನ್ನೇ ಧ್ಯೇಯವಾಗುಳ್ಳ ರಾಜನೈತಿಕ ಸನ್ಯಾಸಿಗಳ ಮಾರ್ಗ ರಚನೆ ಮಾಡುವುದೇ ಅವರ ಬಹುಕಾಲದ ಅಭಿಲಾಷೆ ಆಗಿತ್ತು. ಆ ಆಭಿಲಾಷೆ ಈಚೆಗೆ ಪ್ರಕಟವಾಗಿದೆ. ಹಿಂದೂಸ್ಥಾನದ ಜನಕ್ಕೆ 'ಭಾರತ ಸೇವಕ ಸಂಘ'ದ ಪರಿಚಯ ಈಗಾಗಲೇ ಆಗಿದೆ. ಆ ಸಂಘದ ಉದ್ದೇಶಗಳು ಚೆನ್ನಾಗಿವೆ. ಮುಂದೆ ಈ ದೇಶಕ್ಕೆ ಹೆಚ್ಚು ಹೆಚ್ಚು ಸೇವೆ ಮಾಡುವುದರಲ್ಲಿ ಅದು ಹೆಚ್ಚು ಹೆಚ್ಚು ಶಕ್ತಿ-ಸಂಪನ್ನವಾಗುತ್ತ ಹೋಗಲೆಂಬುದೇ ನಮ್ಮೆಲ್ಲರ ಹಾರೈಕೆ.

ಶ್ರೀ ಗೋಖಲೆ ಅವರು ಭಾಷಣ ಮಾಡುವ ಪದ್ಧತಿಯ ವಿಷಯದಲ್ಲಿ ಎರಡು ಮಾತು ಹೇಳಬೇಕು: ಅವರು ಅಂಥ 'ವಾಗ್ಮಿ' ಗಳೇನೂ ಅಲ್ಲ. ಶ್ರೋತೃಗಣದ ಭಾವನೆಯನ್ನು ಕೆರಳಿಸುವ ಕಡೆಗೆ ಅವರ ಗಮನ ಅಷ್ಟಾಗಿ ಇರುವುದಿಲ್ಲ: ತಮ್ಮ ವಿಚಾರವನ್ನು ಎದುರಿಗಿರುವವರ ಮನಸ್ಸಿನೊಳಗೆ ಹೊಗಿಸುವುದೇ ಅವರ ಉದ್ದೇಶವಾಗಿರುತ್ತದೆ. ವೇಗವಾಗಿ ಮಾತನಾಡುತ್ತಾರೆ. ವಿಪುಲವಾದ ಅಂಕಿ-ಅಂಶಗಳು, ವಿವರಣೆಯೇ ಅವರ ಸರಂಜಾಮು, ತಿಳಿಹೇಳುವ ಅವರ ಶಕ್ತಿ ಬಹಳ ತೀಕ್ಷ್ಣ ಹಾಗೂ ಉತ್ಸಾಹ ಪೂರ್ಣ. ಮಾತನಾಡುವ ರೀತಿ ಸರಳ; ಆದರೆ ಸ್ಪಷ್ಟ ಹಾಗೂ ಪ್ರಭಾವಶಾಲಿ.

ಶ್ರೀ ಗೋಖಲೆ ಬಹಳ ಉತ್ಸಾಹಶಾಲಿಗಳಾದ ಸುಧಾರಕರು. ಪುಣೆಯಿಂದ ಪ್ರಕಟವಾಗುವ ಮರಾಠೀ—ದಿನ ಪತ್ರಿಕೆಯಾದ 'ಜ್ಞಾನ ಪ್ರಕಾಶ' ವನ್ನೂ ಅವರು ನಡೆಸುತ್ತಾರೆ; ಅದರ ಮೂಲಕ ತಮ್ಮ ಸಾಮಾಜಿಕ ಹಾಗೂ ರಾಜನೈತಿಕ ವಿಚಾರಗಳನ್ನು ಪ್ರಚಾರ ಮಾಡುತ್ತಾರೆ. ಅವರ ನಡೆ-ನುಡಿ ಅತೀವ ಸರಳ ಹಾಗೂ ಉಗ್ರತಪೋಮಯ—ಎಂಬುದಾಗಿ ಹೇಳಬಹುದು. ನಿಜವಾಗಿ ಹೇಳುವುದಾದರೆ ಸುಪ್ರಸಿದ್ಧ ಪತ್ರಕರ್ತರಾದ ಶ್ರೀ ನೆವಿನ್‌ಸನ್ ಹೇಳಿರುವ ಹಾಗೆ, ಅವರು ಓರ್ವ ನಿಜವಾದ ಬ್ರಾಹ್ಮಣನಂತೆ ದಾರಿದ್ರ್ಯ ಹಾಗೂ ಜ್ಞಾನದ ಯಜ್ಞದಲ್ಲಿ ತಮ್ಮ ಜೀವನವನ್ನು ಧಾರೆ ಎರೆದಿದಾರೆ. 'ಸರಳ ಜೀವನ ಹಾಗೂ ಉದಾತ್ತ ವಿಚಾರ'—ಇದು

ಅತ್ಯಂತ ಪ್ರಾಚೀನ ಭಾರತೀಯ ಆದರ್ಶ. ಅದಕ್ಕೆ—ಇದಕ್ಕಿಂತ ಒಳ್ಳೆಯ 'ನಮೂನೆ' ಬೇರೆ ಸಿಕ್ಕಲಿಕ್ಕಿಲ್ಲ.

ಶ್ರೀ ಗೋಖಲೆಯವರು ಕೊನೆಯಲ್ಲಿ ಮಾಡಿದ ಎರಡು ದೊಡ್ಡ ಕಾರ್ಯಗಳೆಂದರೆ, ಶಿಕ್ಷಣ ಮಸೂದೆ ಹಾಗೂ ಭಾರತೀಯ ಕೂಲಿಗಾರರ ಅನಿವಾರ್ಯ ದಾಸ್ಯವನ್ನು ನಿಲ್ಲಿಸುವ ಪ್ರಯತ್ನ. ಶಿಕ್ಷಣ ಮಸೂದೆಯನ್ನು ವೈಸ್‌ರಾಯರ ಶಾಸನ ಸಭೆಯ ಮುಂದೆ ಮಂಡಿಸಲಾಯಿತು. ಬೇರೆ ಪ್ರಜಾಪ್ರಿಯ ಮಸೂದೆಗಳಿಗೆ ಆದ ಗತಿಯೇ ಶ್ರೀ ಗೋಖಲೆ ಅವರ ಮಸೂದೆಗೂ ಆಯಿತು. ಆದರೆ ಭಾರತದ ಎಲ್ಲ ಭಾಗಗಳಿಂದ, ಎಲ್ಲ ಜಾತಿಗಳವರಿಂದ ಎಷ್ಟೊಂದು ಸಹಕಾರ ದೊರೆತಿದೆಯೆಂದರೆ, ಆ ಏಕೀಕೃತ ಬಲವನ್ನು ಸರಕಾರ ಹೆಚ್ಚು ಕಾಲ ಮೀಟಿ ನಿಲ್ಲಲು ಶಕ್ಯವಾಗದು.

ಈ ದೇಶದಲ್ಲಿ 'ಗಿರ್‌ಮಿಟ್'* ಬರೆಸಿಕೊಳ್ಳುವ ಪದ್ಧತಿ ರದ್ದಾದುದಕ್ಕಾಗಿ ನಾವು ಶ್ರೀ ಗೋಖಲೆ ಅವರಿಗೆ ಬಹಳ ಆಭಾರಿಗಳಾಗಿರಬೇಕು. ಸ್ವತಃ ಅನೇಕ ಕಾರ್ಯಗಳಲ್ಲಿ ಸಿಲುಕಿಕೊಂಡಿದ್ದರೂ, ರೋಗಗ್ರಸ್ತರಾಗಿದ್ದರೂ ಈ ಪ್ರಶ್ನೆಯನ್ನು ಅವರು ಎಷ್ಟು ಗಹನವಾಗಿ ಅಭ್ಯಸಿಸಿರುವರೆಂಬುದನ್ನು ತಿಳಿಯಬೇಕಾದರೆ, ಭಾರತದ ಶಾಸನ ಸಭೆಯಲ್ಲಿ ಅವರು ಮಾಡಿರುವ ಭಾಷಣ ಕನ್ನಡಿಯಂತಿದೆ.

'ಗಿರ್‌ಮಿಟ್' ಪ್ರಶ್ನೆಯನಂತರ ನಮ್ಮ ತೊಂದರೆಗಳ ಕಡೆಗೆ ಅವರ ಹಾರ್ದಿಕ ದೃಷ್ಟಿ ಹೊರಳಿದೆ. ನಮ್ಮ ಸತ್ಯಾಗ್ರಹದ ಹೋರಾಟದಲ್ಲೂ ಅವರು ಅಮೌಲ್ಯವಾದ ಸಹಾಯ ಮಾಡಿದಾರೆ. ನಮ್ಮ ಬಗೆಗೆ ಅವರ ಸಹಾನುಭೂತಿ ಬೆಳೆದು ಯಾವ ಮಟ್ಟಕ್ಕೆ ಮುಟ್ಟಿದೆಯೆಂದರೆ, ಅವರು ಈ ದೇಶಕ್ಕೆ (ದಕ್ಷಿಣ ಆಫ್ರಿಕಾ) ಬಂದು ನಮ್ಮ ಸ್ಥಿತಿಯನ್ನು ತಿಳಿದುಕೊಳ್ಳಲು ನಿಶ್ಚಯಸಿದ್ದಾರೆ.

ಮಾತೃಭೂಮಿಯ ಸೇವೆಯಲ್ಲಿ ತಮ್ಮ ಪೂರ್ಣ ಜೀವನವನ್ನು ಅರ್ಪಣೆಮಾಡಿರುವ ಮಾನನೀಯ ಗೋಖಲೆ ಅವರಷ್ಟು ಬುದ್ಧಿವಂತರೂ ತೇಜಸ್ವಿಗಳೂ ಆಗುವುದು ನಮ್ಮ ಕೈಯಿಂದ ಆಗುವ ಮಾತಲ್ಲ. ಆದರೆ,

---

*ಕೂಲಿಗಾಗಿ ವಿದೇಶಕ್ಕೆ ಹೋಗುವ ಭಾರತೀಯರಿಂದ ಬರೆಸಿಕೊಳ್ಳುವ ಮುಚ್ಚಳಿಕೆ.

ಅವರಂತೆಯೇ ನಮ್ಮ ನಮ್ಮ ಕಾರ್ಯದಲ್ಲಿ ಏಕರಸವಾಗುವುದು ನಮ್ಮೆಲ್ಲರ ಕೈಯಿಂದಲೂ ಆಗುವ ಮಾತು. ಶ್ರೀ ಗೋಖಲೆ ಅವರು ಯಾವುದನ್ನು ಒಪ್ಪುತ್ತಾರೋ ಅದರಲ್ಲಿ ಏಕರಸವಾಗುತ್ತಾರೆ. ಅದರಿಂದಾಗಿ ಎಲ್ಲರೂ ಅವರನ್ನು ಸಮಾನವಾಗಿ ಗೌರವಿಸುತ್ತಾರೆ....ಅವರು ದೀರ್ಘಾಯುವಾಗಲಿ ; ನಮ್ಮ ಹೃದಯದಲ್ಲಿ ಅವರ ಪ್ರಭಾವ ಎಂದಿಗೂ ಮಂದವಾಗದೆ ಉಳಿಯಲಿ —ಎಂಬುದೇ ನಮ್ಮ ಹಾರೈಕೆ.೪೦

ಶ್ರೀ ಗೋಖಲೆ ಅವರ ಉದ್ದೇಶಗಳು ಪವಿತ್ರವಾದುವು ಎಂದೇ ನನ್ನ ಭಾವನೆ. ಕಿಂಬರ್ಲಿಯಲ್ಲಿ ಅತ್ಯಂತ ಪ್ರಮುಖರಾದ ಬಿಳಿಯರು ಹಾಗೂ ಭಾರತೀಯರು ಒಂದೇ ಮೇಜಿನ ಮೇಲೆ ಊಟಮಾಡಿದರು ; ಆ ಪ್ರಸಂಗಕ್ಕೆ ಶ್ರೀ ಗೋಖಲೆ ಅವರೇ ಕಾರಣ ಪುರುಷರಾದರು—ಎಂಬುದು ನನಗೆ 'ಹೆಮ್ಮೆ' ಯ ವಿಷಯ. ಟಾಲ್‌ಸ್ಟಾಯ್ ಅವರ ಜೀವನ ಹಾಗೂ ಶಿಕ್ಷಣದ ಓರ್ವ ನಮ್ರ ಅಭ್ಯಾಸಿಯಾಗಿರುವ ನನಗೆ ಹೀಗೂ ಅನಿಸುತ್ತದೆ ;—ಇಂಥ ಸಮಾರಂಭಗಳು ಅನಾವಶ್ಯಕ, ಇದರಿಂದ ಅನೇಕ ಬಾರಿ ನಷ್ಟವೇ ಆಗುತ್ತದೆ—ಇನ್ನೇನೂ ಅಲ್ಲದಿದ್ದರೂ ಪಚನ-ಕ್ರಿಯೆಗೆ ಆತಂಕವಾಗುವ ನಷ್ಟವಾದರೂ ಆಗುತ್ತದೆ. ನಾನೇನೋ ಟಾಲ್‌ಸ್ಟಾಯ್ ಶಿಷ್ಯ. ಆದರೂ ಇದರಿಂದ ಒಬ್ಬರನ್ನೊಬ್ಬರು ಒಳಿತಾಗಿ ಅರಿತುಕೊಳ್ಳಲು ಅವಕಾಶವಾಗುವುದಾದರೆ, ಇದರಲ್ಲಿ ದೋಷವೆಣಿಸಲು ನಾನು ತಯಾರಿಲ್ಲ. ಈ ಸಂದರ್ಭದಲ್ಲಿ ನನಗೊಂದು ಸುಂದರವಾದ ಇಂಗ್ಲೀಷ್-ಭಜನೆ ನೆನಪಿಗೆ ಬರುತ್ತದೆ : "We Shall Know each other when the mists have rolled away". ನಮ್ಮಿಂದ ಅಜ್ಞಾನ ದೂರವಾಗಲಿ. ಒಬ್ಬರೊಬ್ಬರ ನಡುವೆ ಮತಭೇದವಿದ್ದರೂ, ಒಬ್ಬರೊಬ್ಬರ ಭಾವವನ್ನು ಬಳಿತಾಗಿ ಅರಿತುಕೊಳ್ಳುವಂತಾಗಲಿ. ಇಲ್ಲಿಗೆ ಬಂದಿರುವ ನಮ್ಮ ದೇಶದ ಪ್ರಖ್ಯಾತ ಪುರುಷರು ಈ ಅಜ್ಞಾನದ ಬಿರುಗಾಳಿಯನ್ನು ದೂರಮಾಡಲಿಕ್ಕಾಗಿಯೇ ಬಂದಿದಾರೆ. ಹಿಂದೂಸ್ಥಾನ ಇಲ್ಲಿಗೆ ಕಳುಹಿಸಬಹುದಾದ ಅತ್ಯಂತ ಅಮೂಲ್ಯವಾದ ಮುತ್ತು-ರತ್ನದ ರೂಪದಲ್ಲಿ ಅವರು ಬಂದಿದಾರೆ. ಶ್ರೀ ಗೋಖಲೆ ಅವರ ಕಾರ್ಯಗಳ ಬಗೆಗೆ ನಾನು ಏನಾದರೂ ಹೇಳಿದರೆ, ಅವರ

ಮನಸ್ಸಿಗೆ ನುಲಿನುಲಿ ಆಗುವುದೆಂಬುದನ್ನು ನಾನು ಬಲ್ಲೆ. ಆದರೂ ನನ್ನ ಕರ್ತವ್ಯವನ್ನು ನಾನು ಪಾಲಿಸಲೇಬೇಕು. ಹಿಂದೂಸ್ಥಾನದ ರಾಜನೈತಿಕ ಕ್ಷೇತ್ರದಲ್ಲಿ ಶ್ರೀ ಗೋಖಲೆ ಅವರು ಎಷ್ಟು ಕೀರ್ತಿ ಸಂಪಾದಿಸಿದಾರೆಂಬ ವಿಷಯದಲ್ಲಿ ನನ್ನಷ್ಟು ಹೇಳಬಲ್ಲವರು ಇಲ್ಲಿ ಇನ್ನಾರೂ ಇಲ್ಲ. ಹಿಂದೂ ಸ್ಥಾನದ ವೈಸ್‌ರಾಯರಾದರೋ ಹಿಂದೂಸ್ಥಾನದ ಆಡಳಿತದ ಹೊರೆಯನ್ನು ಐದು ವರುಷಗಳವರೆಗೆ ಮಾತ್ರ ತಮ್ಮ ತಲೆಯಮೇಲೆ ಹೊತ್ತುಕೊಳ್ಳು ತ್ತಾರೆ. (ಆಗಾಗ ಲಾರ್ಡ್ ಕರ್ಜನರಂತೆ ಏಳು ವರುಷಗಳವರೆಗೂ ಹೊತ್ತುಕೊಳ್ಳಬಹುದು) ಅದೂ ಅಸಂಖ್ಯಾತ ಅಧಿಕಾರಿಗಳ ಸಹಾಯದಿಂದ ಆ ಹೊರೆಯನ್ನು ಹೊರುತ್ತಾರೆ. ಆದರೆ, ಈ ನನ್ನ ವಿಖ್ಯಾತ ದೇಶೀಯ ಬಂಧು ಅಂಥ ಯಾವ ಸಹಾಯವೂ ಇಲ್ಲದೆ, ನೌಕರರು, ಗೌರವ-ಸ್ಥಾನ ಯಾವುದೂ ಇಲ್ಲದೆ ಏಕಾಕಿಯಾಗಿ ಆಡಳಿತದ ಹೊರೆಯನ್ನು ಹೊತ್ತಿದ್ದಾರೆ. ಇವರಿಗೆ ಸಿ. ಐ. ಇ. ಬಿರುದು ಇರುವುದು ನಿಜ. ಆದರೆ, ನನ್ನ ಅಭಿಪ್ರಾಯ ದಲ್ಲಿ ಅವರು ಅದಕ್ಕಿಂತ ಹೆಚ್ಚಿನ ದೊಡ್ಡ ದೊಡ್ಡ ಪದವಿಗಳಿಗೆ ಪಾತ್ರರು. ಶ್ರೀ ಗೋಖಲೆ ಅವರು ಅಪೇಕ್ಷಿಸುವ ಪದವಿಯೆಂದರೆ, ತಮ್ಮ ದೇಶೀಯ ಸೋದರರ ಬಗೆಗೆ ಪ್ರೇಮ ಹಾಗೂ ತಮ್ಮ ಅಂತರಾತ್ಮನ ಸಮ್ಮತಿ. ಪಾಶ್ಚಾತ್ಯ ಶಿಕ್ಷಣ ಪಡೆದಿರುವ ಭಾರತೀಯರ ಪಾಲಿಗೆ ಶ್ರೀ ಗೋಖಲೆ ಅವರು ನಮ್ರತೆ ಹಾಗೂ ಸೌಜನ್ಯದ ' ಮಾದರಿ ' ಆಗಿದಾರೆ.೪೧*

ಗೋಖಲೆ ಅವರಿಗೆ ಹೆಸರಿನ (ಕೀರ್ತಿ) ಹಂಬಲವೇನೂ ಇರಲಿಲ್ಲ. ಅಷ್ಟೇ ಅಲ್ಲ—ಗೌರವ ಸಮಾರಂಭ ಅವರಿಗೆ ಸೇರುತ್ತಲೂ ಇರಲಿಲ್ಲ. ಅನೇಕ ಬಾರಿ ಸತ್ಕಾರ ಸಮಾರಂಭ ಏರ್ಪಡಿಸಿದಾಗ, ಅವರು ತಲೆ ತಗ್ಗಿಸಿ ಬಿಡುತ್ತಿದ್ದರು. ಗೋಖಲೆ ಅವರ ಚಿತ್ರವನ್ನು ಅನಾವರಣ ಮಾಡುವುದ ರಿಂದಲೇ ಅವರ ಆತ್ಮಕ್ಕೆ ಶಾಂತಿ ಸಿಕ್ಕುವುದೆಂದು ಭಾವಿಸಿದರೆ, ಅದು ತಪ್ಪಾ

---

* ಶ್ರೀ ಗೋಖಲೆ ಅವರ ಗೌರವಾರ್ಥವಾಗಿ ಕಿಂಬರ್ಲಿಯಲ್ಲಿ ಮೇಯುರರ ಅಧ್ಯಕ್ಷತೆಯಲ್ಲಿ ನವೆಂಬರ್ ೧೯೧೨ ರಲ್ಲಿ ನಡೆದ ದೊಡ್ಡ ಸಮಾರಂಭದ ಸಂದರ್ಭ ದಲ್ಲಿ ಗಾಂಧೀಜಿ ಅವರು ಮಾಡಿದ ಭಾಷಣದ ಸಾರಾಂಶ.

ಗುವುದು. ಸಾಯುವ ಸಮಯದಲ್ಲಿ ಆ ಮಹಾತ್ಮರು ತಮ್ಮ ಆಶೀರ್ವಾದ ವನ್ನು ಈ ಮಾತುಗಳಲ್ಲಿ ತಿಳಿಯಪಡಿಸಿದ್ದರು—'ನಾನು ಗತಿಸಿದನಂತರ ನನ್ನ ಜೀವನ ಚರಿತ್ರೆಯನ್ನು ಬರೆದಾರು ; ಸ್ಮಾರಕವನ್ನು ಏರ್ಪಡಿಸಿಯಾರು; ಶೋಕ-ಸೂಚಕ ಸಭೆಗಳನ್ನು ನಡೆಸಿಯಾರು. ಆದರೆ, ಅದಾವುದರಿಂದಲೂ ನನ್ನ ಆತ್ಮಕ್ಕೆ ಶಾಂತಿ ಸಿಕ್ಕಲೊಲ್ಲದು. ನನ್ನ ಜೀವನವೇ ಸಮಸ್ತ ಭಾರತದ ಜೀವನವಾಗಬೇಕು. ಭಾರತ ಸೇವಕ ಸಂಘದ ಪ್ರಗತಿ ಆಗಲೇಬೇಕು—ಎಂಬುದೇ ನನ್ನ ಅಭಿಲಾಷೆ. ಅವರ ಈ 'ಉಯಿಲ'ನ್ನು ಒಪ್ಪುವವರಿಗೆ ಮಾತ್ರವೇ ಅವರ ಚಿತ್ರವನ್ನು ಇಟ್ಟುಕೊಳ್ಳುವ ಅಧಿಕಾರವುಂಟು.

ಗೋಖಲೆ ಅವರ ಜೀವನ ವಿಸ್ತಾರವಾದುದು; ವಿಶಾಲವಾದುದು. ಅವರ ಜೀವನದ ಹಲವು ಕೌಟುಂಬಿಕ ಪ್ರಸಂಗಗಳನ್ನು ಇಂದು ಇಲ್ಲಿಗೆ ಬಂದಿರುವ ಸಹೋದರಿಯರಿಗೆ ತಿಳಿಸುವೆನು. ಗೋಖಲೆ ಅವರು ತಮ್ಮ ಕುಟುಂಬದ ಸೇವೆಯನ್ನು ಒಳಿತಾಗಿಯೇ ಮಾಡಿದರೆಂಬುದನ್ನು ಸಹೋದರಿ ಯರು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಕುಟುಂಬದ ಜನಕ್ಕೆ ಕಷ್ಟ ಆಗು ವಂತೆ ಅವರು ಎಂದೂ ನಡೆದುಕೊಳ್ಳಲಿಲ್ಲ. ಇಂದು ಹಿಂದೂ—ಕುಟುಂಬ ದಲ್ಲಿ ಬೊಂಬೆ ಆಟದ ಮದುವೆಯೋಪಾದಿಯಲ್ಲಿ ಎಂಟು ವರುಷದ ಹುಡುಗಿಗೆ ಮದುವೆ ಮಾಡಿ ನದಿಯಲ್ಲಿ ತಳ್ಳಿಬಿಡುವಂತೆ ಗೋಖಲೆ ಅವರು ಮಾಡಲಿಲ್ಲ. ಅವರ ಮಗಳು ಇನ್ನೂ ಕುಮಾರಿಯಾಗಿಯೇ ಉಳಿದಿದ್ದಾಳೆ. ಆಕೆಯನ್ನು ಹಾಗೆಯೇ ಇರಗೊಡುವುದರಲ್ಲಿ ಅವರು ಬಹಳ ಸಹನಶೀಲತೆ ತೋರಿದಾರೆ. ಅಲ್ಲದೆ ಗೋಖಲೆ ಅವರ ತುಂಬು ತಾರುಣ್ಯದಲ್ಲೇ ಪತ್ನಿ ತೀರಿ ಕೊಂಡರು. ಅವರಿಗೆ ಪುನಃ ಮದುವೆ ಮಾಡಿಕೊಳ್ಳಲು ಸಾಧ್ಯವಿತ್ತು. ಆದರೆ, ಅವರು ಮಾಡಿಕೊಳ್ಳಲಿಲ್ಲ. ಕುಟುಂಬ-ಸೇವೆಯನ್ನು ಅನೇಕ ರೀತಿಯಿಂದ ಮಾಡಿದಾರೆ. ಸಾಮಾನ್ಯವಾಗಿ ಕುಟುಂಬ ಸೇವೆಯನ್ನು ಎಲ್ಲರೂ ಮಾಡುವುದುಂಟು. ಆದರೆ, ಕುಟುಂಬ-ಸೇವೆ ಸ್ವಾರ್ಥದೃಷ್ಟಿ ಹಾಗೂ ಸ್ವದೇಶ ಹಿತದ ದೃಷ್ಟಿ—ಹೀಗೆ ಎರಡರ ಪ್ರಕಾರದಿಂದ ಆಗು ತ್ತದೆ. ಗೋಖಲೆ ಅವರಂತೂ ಸ್ವಾರ್ಥವೃತ್ತಿಗೆ ತಿಲಾಂಜಲಿಯನ್ನೇ ಕೊಟ್ಟರು. ಕುಟುಂಬದ ಬಗೆಗೆ, ಅನಂತರ ಗ್ರಾಮದ ಬಗೆಗೆ, ಅನಂತರ ದೇಶದ ಬಗೆಗೆ—ಹೀಗೆ ಸಂದರ್ಭಾನುಸಾರವಾಗಿ ಅವರು ಸಂಪೂರ್ಣ

ಸಾಹಸ, ತತ್ಪರತೆ ಹಾಗೂ ಶ್ರಮದಿಂದ ತಮ್ಮ ಕರ್ತವ್ಯವನ್ನು ಪಾಲಿಸಿದರು.

ಗೋಖಲೆ ಅವರ ಮನಸ್ಸಿನಲ್ಲಿ ಹಿಂದೂ—ಮುಸಲ್ಮಾನ್ ಎಂಬ ಭೇದ ಭಾವ ಇರಲಿಲ್ಲ. ಅವರು ಎಲ್ಲರನ್ನೂ ಸಮದೃಷ್ಟಿಯಿಂದಲೂ, ಸ್ನೇಹ ಭಾವದಿಂದಲೂ ನೋಡುತ್ತಿದ್ದರು. ಆಗಾಗ ಅವರು ಕುಪಿತರಾಗುತ್ತಿದ್ದುದೂ ಉಂಟು. ಆದರೆ, ಅವರ ಕೋಪ ಸ್ವದೇಶ ಹಿತದೊಡನೆ ಸಂಬಂಧವುಳ್ಳದಾಗಿಯೂ, ಎದುರಾಳಿಯ ಮನಸ್ಸಿನ ಮೇಲೆ ಒಳ್ಳೆಯ ಪ್ರಭಾವ ಬೀರುವಂಥದಾಗಿಯೂ ಇರುತ್ತಿತ್ತು. ಆ ಕೋಪ ಎಂಥದೆಂದರೆ, ಅದರ ಪ್ರಭಾವದಿಂದ ವೈರ ತೋರುತ್ತಿದ್ದ ಅನೇಕ ಯೂರೋಪಿಯನರು ಆಪ್ತ ಮಿತ್ರರೂ ಆಗಿಬಿಟ್ಟಿದ್ದರು.

ಗೋಖಲೆ ಅವರ ಸಮಗ್ರ ಜೀವನದ ಮೇಲೆ ದೃಷ್ಟಿಬೀರುವವರಿಗೆ, ಅವರು ತಮ್ಮ ಇಡೀ ಜೀವನವನ್ನು ಸ್ವದೇಶ-ಸೇವಾಮಯವಾದುದನ್ನಾಗಿ ಮಾಡಿದ್ದರೆಂಬ ಮಾತಿನ ಅರಿವಾಗುವುದು. ಐವತ್ತು ವರುಷ ವಯಸ್ಸು ಆಗುವುದರೊಳಗಾಗಿಯೇ ಅವರು ಈ ನಶ್ವರ ಜಗತ್ತನ್ನು ಬಿಟ್ಟು ತೆರಳಿದರು. ಸ್ವದೇಶ ಸೇವೆಯಲ್ಲಿ ಇಪ್ಪತ್ತುನಾಲ್ಕು ತಾಸು ತಮ್ಮ ಶಾರೀರಕ ಹಾಗೂ ಮಾನಸಿಕ ಶಕ್ತಿಯನ್ನು ಶ್ರಮಪೂರ್ವಕವಾಗಿ, ವಿನಿಯೋಗಿಸುತ್ತಿದ್ದುದೇ ಅದಕ್ಕೆ ಕಾರಣ. ಸ್ವಹಿತ ಅಥವಾ ಸ್ವಕೀಯ ಹಿತಕ್ಕಾಗಿ ಏನಾದರೂ ಮಾಡಿಹೋಗಬೇಕೆಂಬ ಸಂಕುಚಿತ ಭಾವನೆ ಅವರಲ್ಲಿ ಇರಲೇ ಇಲ್ಲ. ದೇಶಕ್ಕೆ ಏನಾದರೂ ಮಾಡಿಹೋಗಬೇಕೆಂಬುದು ಅವರ ವಿಚಾರ.

ನಮ್ಮ ಹಿಂದೂಸ್ಥಾನದ ಸಮರ್ಥ ಹಾಗೂ ಬಲಿಷ್ಠ ಅಂತ್ಯಜ ವರ್ಗದ ಉದ್ಧಾರದ ಪ್ರಶ್ನೆಯೂ ಗೋಖಲೆ ಅವರ ಮನಸ್ಸನ್ನು ಕೊರೆಯುತ್ತಿತ್ತು. ಅವರ ಉನ್ನತಿಗಾಗಿ ಬಹಳ ಕೆಲಸವನ್ನು ಅವರು ಮಾಡಿದರು. ಅವರ ಆ ಕೆಲಸದ ಬಗೆಗೆ ಯಾರಾದರೂ ಆಕ್ಷೇಪಣೆ ಮಾಡಿದರೆ, ‘ ಅಂತ್ಯಜ ಸಹೋದರರನ್ನು ಮುಟ್ಟಿಸಿಕೊಳ್ಳುವುದರಿಂದ ನಾವು ಭ್ರಷ್ಟರಾಗುವುದಿಲ್ಲ. ಅವರು ಮುಟ್ಟಿಸಿಕೊಳ್ಳಬಾರದೆಂಬ ದುಷ್ಟ ಭಾವನೆಯಿಂದ ಪಾಪಕೂಪದಲ್ಲಿ ಬೀಳುತ್ತೇವೆ ”—ಎಂಬುದಾಗಿ ಚುಚ್ಚು ಮಾತಿನಲ್ಲಿ ಹೇಳಿಬಿಡುತ್ತಿದ್ದರು. ೪೨

ಶಿಷ್ಯನಾಗುವುದು ಪರಮಪವಿತ್ರವಾದ, ಆದರೆ ವ್ಯಕ್ತಿಗತವಾದ ವಿಚಾರ. ಸನ್ ೧೮೮೮ ರಲ್ಲಿ ನಾನು ದಾದಾಭಾಯಿ ಅವರ ಚರಣಗಳಲ್ಲಿ

ಆತ್ಮಾರ್ಪಣೆ ಮಾಡಿಕೊಂಡೆ. ಆದರೆ, ನನ್ನ ಆದರ್ಶದಿಂದ ಅವರು ಬಹಳ ದೂರವಿದ್ದರು. ನಾನು ಅವರ ಪುತ್ರನ ಸ್ಥಾನದಲ್ಲಿ ಇರಬಹುದಾಗಿದ್ದಿತೇ ಹೊರತು, ಶಿಷ್ಯನಾಗಲು ಶಕ್ಯವಿಲ್ಲ. ಶಿಷ್ಯನ ಶ್ರೇಣಿ ಪುತ್ರನದಕ್ಕಿಂತ ಉಚ್ಚ. ಶಿಷ್ಯನಾಗುವುದೆಂದರೆ, ಸ್ವಪ್ರೇರಣೆಯಿಂದ ಆತ್ಮಾರ್ಪಣೆ ಮಾಡಿಕೊಳ್ಳುವುದು. ೧೮೯೬ ರಲ್ಲಿ ದಕ್ಷಿಣ ಆಫ್ರಿಕದ ಸಂಬಂಧದಲ್ಲಿ ಭಾರತದ ಎಲ್ಲ ಮುಖ್ಯ ನಾಯಕರನ್ನೂ ಭೇಟಿಯಾಗಿದ್ದೆ. ನ್ಯಾಯಮೂರ್ತಿ ರಾನಡೆ ಅವರನ್ನು ಕಂಡರೆ ನನಗೆ ಭಯವಾಗುತ್ತಿತ್ತು. ಅವರ ಮುಂದೆ ಮಾತನಾಡುವುದಕ್ಕೂ ನನಗೆ ಧೈರ್ಯಬರುತ್ತಿರಲಿಲ್ಲ. ಬದರುದ್ದೀನ್ ತಯಾಬ್ಜಿ ತಂದೆಯಂತೆ ತೋರಿದರು. ಫಿರೋಜ್‌ಷಹಾ ಮೆಹ್ತಾ ಹಾಗೂ ರಾನಡೆ ಅವರೊಡನೆ ಸಮಾಲೋಚನೆ ಮಾಡಿ ಕಾರ್ಯಮಾಡಬೇಕೆಂದು ಅವರು ನನಗೆ ಹೇಳಿದರು. ಸರ್. ಫಿರೋಜ್ ಶಹಾರಂತೂ ನಮ್ಮ ಸಂರಕ್ಷಕರೇ ಆದರು. ಅಂದಮೇಲೆ ಅವರ ಅಜ್ಞೆ ನನಗೆ ಶಿರೋಧಾರ್ಯವೇ ಆಯಿತು. ಅವರು ಏನೇ ಹೇಳಲಿ, ಸುಮ್ಮನೆ ಒಪ್ಪಿಕೊಂಡು ಬಿಡುತ್ತಿದ್ದೆ. 'ಸೆಪ್ಟೆಂಬರ್ ೨೬ ರಂದು ನೀವು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಬೇಕಾಗುವುದು' ಎಂದು ಅವರು ಒಮ್ಮೆ ಹೇಳಿದರು ; ಸಂತೋಷದಿಂದ ಒಪ್ಪಿಕೊಂಡೆ. ಸೆಪ್ಟೆಂಬರ್ ೨೫ರಂದು ನಾನು ಅವರನ್ನು ಭೇಟಿಯಾದೆ. "ನಿಮ್ಮ ಭಾಷಣವನ್ನುಬರೆದು ಸಿದ್ಧಪಡಿಸಿಕೊಂಡಿದೀರಾ ?" ಎಂಬುದಾಗಿ ಕೇಳಿದರು. 'ಇಲ್ಲ ಸ್ವಾಮಿ' ಎಂದು ಹೇಳಿದೆ.

ಇದು ಚಕ್ಷು-ರಾಗ — ಅಂದರೆ ಪ್ರಥಮದರ್ಶನದಲ್ಲೇ ಗಾಢ ಪ್ರೇಮದ ಅಂಕುರ ಮೊಳೆತಿತ್ತು. ೧೯೧೨ ರಲ್ಲಿ ಕಠಿಣ ಪರೀಕ್ಷೆಗೆ ಗುರಿಯಾಗಬೇಕಾಯಿತು. ಆಗ ಅವರಲ್ಲಿ ಎಲ್ಲ ಗುಣಗಳೂ ಇದ್ದುದು ನನಗೆ ತಿಳಿಯಿತು. ಅದಕ್ಕೆ ಮುನ್ನ ಅವರಲ್ಲಿ ಆ ಎಲ್ಲ ಗುಣಗಳು ಇದ್ದವೋ ಇಲ್ಲವೋ ಎಂಬ ಚಿಂತೆ ನನಗೇಕೆ? ಅವರಲ್ಲಿ ಯಾವ ದೋಷವೂ ಕಂಡು ಬರಲಿಲ್ಲ—ನನಗಿಷ್ಟೇಸಾಕು. ರಾಜಕೀಯ ಕ್ಷೇತ್ರದಲ್ಲಿ ಅವರು ನನಗೆ ಸರ್ವೋತ್ತಮ ವ್ಯಕ್ತಿಯಂತೆ ಕಂಡರು. ಅಂದಮಾತ್ರಕ್ಕೆ ನನಗೂ ಅವರಿಗೂ ಮತಭೇದ (ಅಭಿಪ್ರಾಯ ಭೇದವೇ) ಇರಲಿಲ್ಲವೆಂದಲ್ಲ. ಸಾಮಾಜಿಕ ವಿಷಯಗಳಲ್ಲಿ ೧೯೦೧ ರ ವರೆಗೆ ನಮ್ಮಿಬ್ಬರಲ್ಲೂ ಅಭಿಪ್ರಾಯ ಭೇದವಿತ್ತು.

ಪಾಶ್ಚಾತ್ಯ ಸಭ್ಯತೆಯ ಪ್ರಭಾವದ ಬಗೆಗೇ ನಮ್ಮ ಮತಭೇದ. ಅಹಿಂಸೆಯಲ್ಲಿದ್ದ ನನ್ನ ದೃಢ ವಿಶ್ವಾಸದ ಬಗೆಗೂ ಅವರಿಗೆ ಭಿನ್ನಾಭಿಪ್ರಾಯವಿತ್ತು. ಆದರೂ ಅದರಿಂದ ನಮ್ಮಿಬ್ಬರಲ್ಲಿ ಯಾವುದೇ ಪ್ರಕಾರದ ಅಂತರ ಹುಟ್ಟಲಿಲ್ಲ. ಆ ಎಲ್ಲ ವಿಷಯಗಳೂ ನಮ್ಮಲ್ಲಿ ಯಾವುದೇ ಪ್ರಕಾರದ ಭೇದವನ್ನು ಹುಟ್ಟಿಸಲಿಲ್ಲ. ಇಂದು ಅವರು ಜೀವಂತರಾಗಿದ್ದರೆ ಏನಾಗುತ್ತಿತ್ತು ಎಂಬ ಮಾತು ಈಗ ವ್ಯರ್ಥ. ನಾನು ಅವರ ಆಜ್ಞೆಯನ್ನು ಪಾಲಿಸುತ್ತಿದ್ದೆನೆಂದು ನನಗೆ ಗೊತ್ತು. ಆ ಅನಾಮಕ ಪತ್ರದಲ್ಲಿ ಪ್ರಸ್ತಾಪಿಸಿರುವ ಶಿಷ್ಯತ್ವ ಸಂಬಂಧದ ಮಾತಿನಿಂದ ನನ್ನ ಮನಸ್ಸಿಗೆ ತೀವ್ರ ನೋವಾಗಿರುವುದರಿಂದಲೇ ಈ ಎಲ್ಲ ಮಾತುಗಳನ್ನು ಬರೆಯುತ್ತಿದೇನೆ. ಈ ಸಂಬಂಧವನ್ನು ಒಪ್ಪಿಕೊಳ್ಳುವುದರಲ್ಲಿ ನಾನು ಸಾವಕಾಶ ಮಾಡಿದೆನೆಂಬ ದೋಷಾರೋಪಣೆಯನ್ನು ನನ್ನ ಮೇಲೆ ಮಾಡಲು ಬರುವುದೆ? ಸ್ವರ್ಗೀಯ ಗೋಖಲೆ ಅವರ ಪಕ್ಷಕ್ಕೆ ನಾನು ಪೂರ್ಣ ವಿರೋಧವಾಗಿದ್ದೇನೆ ಎಂಬುದಾಗಿ ಜನ ಹೇಳುತ್ತಿರುವಾಗ ಆ ಪವಿತ್ರ ಸಂಬಂಧವನ್ನು ವ್ಯಕ್ತಗೊಳಿಸುವುದು ನನ್ನ ಪಾಲಿಗೆ ಅತ್ಯಂತ ಆವಶ್ಯಕವೆನಿಸಿತು.೪೩

ನಾನು ದಕ್ಷಿಣ ದೇಶದ ಈ ಪ್ರವಾಸ ಮಾಡುತ್ತಿರುವಾಗ ಅನೇಕ ನವತರುಣರು ಹಿಂದೂ ಸಮಾಜವನ್ನು ಪೀಡೆಗೆ ಗುರಿಮಾಡಿರುವ ಅಸ್ಪೃಶ್ಯತೆಯೇ ಮೊದಲಾದ ದುಷ್ಟಪದ್ಧತಿಗಳಿಗೆ ಬ್ರಾಹ್ಮಣರೇ ಕಾರಣ ಎಂಬುದಾಗಿ ಪತ್ರಗಳನ್ನು ಬರೆದಿದಾರೆ. ಈ ಸ್ವರ್ಗೀಯ ಗೋಖಲೆ ಅವರ ಹತ್ತೊಂಭತ್ತನೆಯ ಪುಣ್ಯತಿಥಿಯ ದಿನ ಈ ಲೇಖನ ಬರೆಯುತ್ತಿರುವೆ. ಆದಕಾರಣ ಸ್ವಾಭಾವಿಕವಾಗಿಯೇ ಅವರಿಗೆ ಹರಿಜನರ ಮೇಲಿದ್ದ ಪ್ರೇಮ ನೆನಪಿಗೆ ಬರುತ್ತದೆ. ಶ್ರೀ ಗೋಖಲೆಯವರನ್ನು ಬಿಟ್ಟರೆ, ಅಸ್ಪೃಶ್ಯತೆಯ ಕಳಂಕದಿಂದ ಪೂರ್ಣ ಮುಕ್ತರಾಗಿದ್ದ ಬೇರೊಬ್ಬ ವ್ಯಕ್ತಿ ನನ್ನ ನೆನಪಿಗೆ ಬರುತ್ತಿಲ್ಲ. ಮನುಷ್ಯ-ಮನುಷ್ಯರ ನಡುವೆ ಯಾವುದೇ ರೀತಿಯ ಅಸಮಾನತೆಯ ಕಲ್ಪನೆ ಮಾಡುವುದೂ ಅವರಿಂದ ಆಗುತ್ತಿದ್ದಿಲ್ಲ. ಅವರ ದೃಷ್ಟಿಯಲ್ಲಿ ಮನುಷ್ಯಮಾತ್ರರು ಸಮಾನರು. ದಕ್ಷಿಣ ಆಫ್ರಿಕಾದಲ್ಲಿ ಸಜ್ಜನರೊಬ್ಬರು ಅವರನ್ನು ಸಾಂಪ್ರದಾಯಕ (ಕೋಮುವಾರು) ಸಭೆಯೊಂದಕ್ಕೆ ಕರೆದು

ಕೊಂಡು ಹೋಗಲು ಬಂದರು. ಅವರು ಆ ಸಭೆಗೆ ಹೋಗಲು ನಿರಾಕರಿಸಿದರು. ಹಿಂದೂ ಧರ್ಮದ ಹೆಸರಿನಲ್ಲಿ ಅವರನ್ನು ಪ್ರಾರ್ಥಿಸಿಕೊಳ್ಳಲು, ಅವರು ಸಿಡಿಮಿಡಿಗೊಂಡರು ; ತಮಗೆ ಅವಮಾನವಾಯಿತೆಂದು ಭಾವಿಸಿ, ಸ್ವಲ್ಪ ಉದ್ರಿಕ್ತರಾಗಿ, " ಇದೇ ಹಿಂದೂಧರ್ಮವಾದರೆ, ನಾನು ಹಿಂದುವೇ ಅಲ್ಲ " ಎಂದು ಆ ಸಜ್ಜನರಿಗೆ ಹೇಳಿದರು. ಆ ಮಾತನ್ನು ಕೇಳಿ ಜನ ಆಶ್ಚರ್ಯಚಕಿತರಾದರು. ಯಾವನೇ ವ್ಯಕ್ತಿ ಅಥವಾ ಯಾವುದೇ ಸಂಪ್ರದಾಯ (ಕೋಮು) ದ ಉಚ್ಚನೀಚತೆಯ ಕಲ್ಪನೆ ಮಾಡುವುದೂ ಅವರಿಗೆ ಸಹಿಸುತ್ತಿರಲಿಲ್ಲ. ವಿಶ್ವಬಂಧುತ್ವದ ಭಾವನೆಯನ್ನು ಅವರು ಸ್ವತಃ ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದರು. ಆ ವಿಷಯ ಅವರ ಸಂಗಾತಿಗಳಿಗೆ ಚೆನ್ನಾಗಿ ಗೊತ್ತು. ಪರಯಾ (ಅಂತ್ಯಜ) ಎನಿಸಿಕೊಂಡ ಸಹೋದರರೊಡನೆ ಅವರು ಧಾರಾಳವಾಗಿ ಬೆರೆಯುತ್ತಿದ್ದರು. ಆಗ ತಾವು ಯಾರ ಮೇಲೆಯೇ ಆಗಲಿ ಕೃಪೆ ತೋರುತ್ತಿರುವಂತೆ ಅಥವಾ ಯಾರಿಗೆ ಆಗಲಿ ಉಪಕಾರ ಮಾಡುತ್ತಿರುವಂತೆ ಅವರಿಗೆ ಅನಿಸುತ್ತಿರಲಿಲ್ಲ. ಸೇವೆಯ ಆದರ್ಶವೊಂದೇ ಅವರ ಹೃದಯದಲ್ಲಿದ್ದುದು. ಸಾರ್ವಜನಿಕ ಕಾರ್ಯಕರ್ತ ಜನತೆಯ ನಾಯಕನಲ್ಲ, ಸೇವಕ ಎಂಬ ಭಾವನೆ ಅವರಿಗಿತ್ತು. ಅವರ ದೃಷ್ಟಿಯಲ್ಲಿ ಎಲ್ಲರಿಗಿಂತ ದೊಡ್ಡ ಸೇವಕನೆ ಎಲ್ಲರಿಗಿಂತ ದೊಡ್ಡನಾಯಕ. ಸ್ವರ್ಗೀಯ ಗೋಖಲೆ ಅವರು ಎಲ್ಲ ಅರ್ಥದಲ್ಲಿ ನಿಜವಾದ ಹುಟ್ಟು ಬ್ರಾಹ್ಮಣರಾಗಿದ್ದರು. ಅವರು ಹುಟ್ಟು ಅಧ್ಯಾಪಕರು ಆಗಿದ್ದರು. ಯಾರಾದರೂ ಪ್ರೊಫೆಸರ್ ಎಂದು ಕರೆದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತು. ಅವರು ವಿನಮ್ರತೆಯ ಮೂರ್ತಿಯೇ ಆಗಿದ್ದರು. ರಾಷ್ಟ್ರಕ್ಕೆ ತಮ್ಮ ಸರ್ವಸ್ವವನ್ನೂ ಸಮರ್ಪಣೆ ಮಾಡಿದ್ದರು. ಇಷ್ಟಪಟ್ಟಿದ್ದರೆ, ಅವರು ಶ್ರೀಮಂತರಾಗಬಹುದಾಗಿತ್ತು. ಆದರೆ ಸ್ವ-ಇಚ್ಛೆಯಿಂದಲೇ ಅವರು ಬಡತನದ ಬಾಳುವೆಯನ್ನೇ ಆಯ್ಕೆ ಮಾಡಿಕೊಂಡರು. ಗೋಖಲೆ ಅವರಂಥ ಜನ-ಸೇವಕರ ಬಗೆಗೆ ಈ ಬ್ರಾಹ್ಮಣ–ನಿಂದಕರಿಗೆ ' ಹೆಮ್ಮೆ ' ಅನಿಸುವುದಿಲ್ಲವೆ ? ಅಂಥ ಬ್ರಾಹ್ಮಣರು ಗೋಖಲೆ ಅವರು ಒಬ್ಬರೇ ಎನ್ನಲ್ಲಿಕ್ಕೂ ಬರುವುದಿಲ್ಲ. ಮನುಷ್ಯ-ಮನುಷ್ಯರ ನಡುವಣ ಸಮಾನತೆಯನ್ನು ಒಪ್ಪುವ ಅಂಥ ಬ್ರಾಹ್ಮಣರ ವಿಶಿಷ್ಟವಾದ ಉದ್ದವಾದ ಒಂದು ಪಟ್ಟಿಯನ್ನು ಮಾಡಬಹುದು. ಬ್ರಾಹ್ಮಣ ಮಾತ್ರರ

ಮೇಲೆ ದೋಷ ಹೊರಿಸುವುದೆಂದರೆ, ಇಂದು ವಿಶೇಷ ರೀತಿಯಲ್ಲಿ ಸ್ವತಃ ನಿಸ್ವಾರ್ಥ ಜನಸೇವೆಮಾಡಲು ಸಿದ್ಧವಿರುವ ಬ್ರಾಹ್ಮಣರ ಸೇವೆಯ ಮಧುರ ಫಲವನ್ನು ಅಸ್ವೀಕಾರ ಮಾಡಿದಂತೆಯೇ ಆಗುವುದು. ಆ ಜನಕ್ಕೆ ಅವರು ಮಾಡುವ ಸೇವೆಗೆ ಪ್ರಶಸ್ತಿ-ಪತ್ರವೇನೂ ಬೇಕಾಗಿಲ್ಲ. ಅವರು ಮಾಡುವ ಸೇವೆಯೇ ಅವರಿಗೆ ಪುರಸ್ಕಾರ, ಗೋಖಲೆ ಅವರು ಒಂದು ಮುಖ್ಯವಾದ ಸಂದರ್ಭದಲ್ಲಿ ಹೀಗೆ ಹೇಳಿದ್ದರು — "ಯಾವ ವ್ಯಕ್ತಿಯಿಂದಲೂ ಹೇಳಿಸಿಕೊಳ್ಳದೆ ಕೈಗೊಂಡ ಸೇವೆಯನ್ನು ಯಾವನೋ ವ್ಯಕ್ತಿ ಆಜ್ಞೆಮಾಡಿದನೆಂದು ಬಿಟ್ಟು ಬಿಡುವುದಕ್ಕಾಗುವುದಿಲ್ಲ". ಆದಕಾರಣ ಮನುಷ್ಯ ಯಾವ ಕುಲದಲ್ಲಿಯೇ ಹುಟ್ಟಿರಲಿ, ಯಾವ ಜಾತಿಗೇ ಸೇರಿರಲಿ, ಅವನ ಬಣ್ಣ ಯಾವುದೇ ಇರಲಿ, ಈಗ ಆತ ಇರುವ ರೀತಿಯನ್ನು ಗಣನೆಗೆ ತಂದುಕೊಳ್ಳುವುದೇ ಎಲ್ಲಕ್ಕಿಂತ ಸುರಕ್ಷಿತವಾದ ನಿಯಮ. ಅಸ್ಪೃಶ್ಯತಾ ನಿವಾರಣೆಯ ಈ ಆಂದೋಲನದಲ್ಲಿ, ಎಷ್ಟು ಚಿಕ್ಕವನ ಸೇವೆಯನ್ನೇ ಆಗಲಿ, ಆತನಲ್ಲಿ ಉದ್ಧಾರಮಾಡುವ ಅಥವಾ ಕೃಪೆದೋರುವ ಭಾವನೆಯಿರದೆ, ಸೇವಾಭಾವನೆ ಇರುವವರೆಗೆ—ಉಪೇಕ್ಷೆ ಮಾಡಬಾರದು. ೪೪

ಅಮೃತಲಾಲ್ ವಿ. ಠಕ್ಕರ್ *

ಬಾಪಾ ಅವರಿಗೆ ಬರುವ ನವೆಂಬರ್ ೨೭ ಕ್ಕೆ ೭೦ ವರುಷ ತುಂಬುವುದು. ಬಾಪಾ, ಹರಿಜನರ, ಮತ್ತು ಆದಿವಾಸಿಗಳ ಹಾಗೂ ಹೆಚ್ಚುಕಡಿಮೆ ಹರಿಜನರ ಶ್ರೇಣಿಗೆ ಸೇರಿದ, ಅರ್ಧ-ಸಭ್ಯ ಜಾತಿಯವರು ಅನಿಸಿ ಕೊಂಡಿರುವ ಆ ಎಲ್ಲ ಮಂದಿಯ ತಂದೆ.

ಠಕ್ಕರ್ ಬಾಪಾ ಅಪರೂಪದ ಲೋಕ ಸೇವಕರು. ಅವರದು

---

* ಇವರು ಸುಪ್ರಸಿದ್ಧ ಹರಿಜನ ಸೇವಕರಾಗಿದ್ದರು. ಗೋಖಲೆ ಸ್ಥಾಪಿಸಿದ ಭಾರತಸೇವಾಸಂಘದ ಸದಸ್ಯರಾಗಿದ್ದರು.

ವಿನಮ್ರ ಸ್ವಭಾವ. ಪ್ರಶಂಸೆಯ ಹಸಿವು ಅವರಿಗಿಲ್ಲ. ಅವರ ಜೀವನ ಕಾರ್ಯವೇ ಅವರಿಗೆ ಸಮಾಧಾನ—ವಿಶ್ರಾಮ. ಮುಪ್ಪು ಅವರ ಉತ್ಸಾಹ ವನ್ನು ಕುಗ್ಗಿಸಲು ಅಸಮರ್ಥವಾಗಿದೆ. ಅವರೇ ಒಂದು ಸಂಸ್ಥೆ. ಒಮ್ಮೆ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವಂತೆ ಅವರಿಗೆ ಹೇಳಿದೆ. ತತ್‌ಕ್ಷಣ ಅವರು ಉತ್ತರವಿತ್ತರು—"ಮಾಡಲು ಇಷ್ಟೊಂದು ಕೆಲಸ ಬಿದ್ದಿರುವಾಗ ನಾನು ವಿಶ್ರಾಂತಿ ತೆಗೆದುಕೊಳ್ಳುವುದು ಹೇಗೆ? ನನ್ನ ಕಾರ್ಯವೇ ನನಗೆ ವಿಶ್ರಾಂತಿ." ತಮ್ಮ ಜೀವನ ಕಾರ್ಯದಲ್ಲಿ ಅವರು ತಮ್ಮ ಶಕ್ತಿ ಹೆಚ್ಚುವ ಬಗೆಯನ್ನು ನೋಡಿದರೆ, ಅವರ ಅಕ್ಕ ಪಕ್ಕದಲ್ಲಿರುವ ನವ ತರುಣರಿಗೆ ಲಜ್ಜೆ ಯೆನಿಸುತ್ತದೆ. ೪೫

ಬಾಪಾ ಅವರ ಎಪ್ಪತ್ತೊಂದನೆಯ ಜಯಂತ್ಯುತ್ಸವದಲ್ಲಿ ನಾನು ಭಾಗವಹಿಸಬೇಕು. ಆದರೆ, ನನ್ನ ದೇಹಸ್ಥಿತಿ ಇನ್ನೂ ಅದಕ್ಕೆ ಅನುಕೂಲ ವಾಗಿಲ್ಲ. ಬಾಪಾ ನೂರು ವರುಷಗಳ ಕಾಲ ಬದುಕಲೆಂಬುದು ನನ್ನ ಆಶೆ. ಅಸ್ಪೃಶ್ಯರಾಗಲಿ, ಭಿಲ್ಲರಾಗಲಿ, ಸಂತಾಲರಾಗಲಿ—'ಖಾಸಿ' ಮೊದಲಾದ ವರೇ ಆಗಲಿ ಒಟ್ಟು ದಲಿತರ ಸೇವೆಗಾಗಿಯೇ ಬಾಪಾ ಅವರು ಜನ್ಮ ತಾಳಿ ದಾರೆ. ಅವರನ್ನು ಗೌರವಿಸುವುದರಿಂದಲೇ ನೀವು ದಲಿತರಿಗೆ ಅಷ್ಟಿಷ್ಟು ಸೇವೆ ಸಲ್ಲಿಸಿದಂತಾಗುತ್ತದೆ. ಬಾಪಾ ಅವರ ಸೇವೆಯಿಂದ ಹಿಂದೂ ಸ್ಥಾನದ ಹಿರಿಮೆ ಹೆಚ್ಚಿದೆ. ೪೬

ರವೀಂದ್ರನಾಥ ಟಾಗೂರರು

ಟಾಗೂರರ ವಿಷಯ ಹೇಳುವುದೇನು? ಅವರು ಸಾಧಿಸದಿರುವ ವಿಷಯವಾವುದು? ಸಾಹಿತ್ಯದ ಯಾವುದೇ ಕ್ಷೇತ್ರವನ್ನು ಅವರು ಸ್ಪರ್ಶಿಸದೆ ಬಿಟ್ಟಿರುವುದುಂಟೆ? ಹಾಗೂ ಎಲ್ಲದರಲ್ಲೂ ಚಮತ್ಕಾರ....ಇಂಥ ಅಲೌಕಿಕ ಶಕ್ತಿಯುಳ್ಳ ವ್ಯಕ್ತಿ ಬೇರೊಬ್ಬರು ನಮ್ಮಲ್ಲಂತೂ ಇಲ್ಲ; ಪ್ರಪಂಚದ ಲ್ಲಿಯೂ ಇರುವರೋ ಇಲ್ಲವೋ—ನನಗೆ ಸಂದೇಹ. ೪೭

ನಾನು ನಿಮ್ಮಲ್ಲಿಗೆ ದೊಡ್ಡ ಅತಿಥಿ ಅಥವಾ ಅಭ್ಯಾಗತನಾಗಿ ಬಂದಿಲ್ಲ. ಶಾಂತಿ ನಿಕೇತನವಾದರೋ ನನಗೆ ಮನೆಗಿಂತ ಹೆಚ್ಚು. ೧೯೧೪ ರಲ್ಲಿ ನಾನು ಇಂಗ್ಲೆಂಡಿನಿಂದ ಹಿಂತಿರುಗುವವನಿದ್ದಾಗ, ನನ್ನ ದಕ್ಷಿಣ ಆಫ್ರಿಕದ ಕುಟುಂಬಕ್ಕೆ ಇಲ್ಲಿ ಪ್ರೇಮಪೂರ್ವಕವಾದ ಆತಿಥ್ಯ ದೊರೆತಿತ್ತು. ನನಗೂ ಸುಮಾರು ಒಂದು ತಿಂಗಳ ಕಾಲ ಆಶ್ರಯ ಸಿಕ್ಕಿತ್ತು. ನನ್ನ ಮುಂದೆ ನೆರೆದಿರುವ ನಿಮ್ಮೆಲ್ಲರನ್ನೂ ನೋಡಿದಾಗ ಆ ದಿನಗಳ ನೆನಪು ಹೃದಯವನ್ನು ಆವರಿಸುತ್ತದೆ. ಹೆಚ್ಚು ದಿನ ಇಲ್ಲಿ ಉಳಿಯಬೇಕೆಂದು ನನಗೆ ಎಷ್ಟೋ ಆಸೆ. ಆದರೆ, ಅದು ಶಕ್ಯವಿಲ್ಲವೆಂದು ವ್ಯಸನ. ಇದು ಕರ್ತವ್ಯದ ಪ್ರಶ್ನೆ. ಶಾಂತಿ ನಿಕೇತನ ಹಾಗೂ ಮಲಿಕಂಡಾದ ಈ ಯಾತ್ರೆ ನನ್ನ ಪಾಲಿಗೆ ತೀರ್ಥಯಾತ್ರೆ—ಎಂಬುದಾಗಿ ಅಂದು ಮಿತ್ರರೊಬ್ಬರಿಗೆ ಪತ್ರ ಬರೆದಿದ್ದೆ. ಈ ಸಲವಂತೂ 'ಶಾಂತಿ ನಿಕೇತನ' ನನ್ನ ಪಾಲಿಗೆ 'ಶಾಂತಿ'ಯ 'ನಿಕೇತನ'ವೇ ಆಯಿತು. ರಾಜನೀತಿಯ ಎಲ್ಲ ಚಿಂತೆ ಹಾಗೂ ವಿಚಾರಗಳನ್ನು ತೊರೆದು, ಕೇವಲ ಗುರುದೇವರ ದರ್ಶನ ಹಾಗೂ ಆಶೀರ್ವಾದವನ್ನು ಪಡೆದುಕೊಳ್ಳಲು ಇಲ್ಲಿಗೆ ಬಂದಿದೇನೆ. ನಾನೊಬ್ಬ 'ನಿಷ್ಣಾತ ಭಿಕ್ಷುಕ' ಎಂಬುದಾಗಿ ಎಷ್ಟೋ ವೇಳೆ ಪ್ರತಿಪಾದನೆ ಮಾಡಿಕೊಂಡಿದೇನೆ. ಆದರೆ, ಇಂದು ಗುರುದೇವರಿಂದ ನನಗೆ ಸಿಕ್ಕಿರುವ ಆಶೀರ್ವಾದಕ್ಕಿಂತ ದೊಡ್ಡ ದಾನವನ್ನು ಯಾರೂ ಎಂದೂ ನನ್ನ ಜೋಳಿಗೆಯಲ್ಲಿ ಹಾಕಿಲ್ಲ. ಅವರ ಆಶೀರ್ವಾದ ನನಗೆ ಸದಾ ಕಾಲಕ್ಕೂ ಇದೆಯೆಂಬುದನ್ನು ನಾನು ಬಲ್ಲೆ. ಆದರೆ, ಇಂದು ಅವರ ಕಡೆಯಿಂದ ಪ್ರತ್ಯಕ್ಷವಾಗಿ ನನಗೆ ಆಶೀರ್ವಾದ ಸಿಕ್ಕಿದುದು ವಿಶೇಷ ಸೌಭಾಗ್ಯ. ಅದರಿಂದಾಗಿ ನನ್ನ ಸಂತೋಷಕ್ಕೆ ಪಾರವಿಲ್ಲವಾಗಿದೆ.೪೮

ಡಾ. ರವೀಂದ್ರನಾಥ ಟಾಗೋರರ ನಿಧನದಿಂದಾಗಿ ನಾವು ನಮ್ಮ ಯುಗದ ಸರ್ವ ಶ್ರೇಷ್ಠ ಕವಿಯನ್ನು ಮಾತ್ರವಲ್ಲದೆ ಮಾನವತೆಯ ಪೂಜಾರಿಯೂ ಆಗಿದ್ದ ಉಜ್ವಲ ರಾಷ್ಟ್ರವಾದಿಯೊಬ್ಬರನ್ನು ಕಳೆದುಕೊಂಡಂತಾಗಿದೆ. ಅವರ ಶಕ್ತಿಶಾಲಿ ವ್ಯಕ್ತಿತ್ವದ ಅಚ್ಚು ಬೀಳದ ಯಾವುದೇ ಸಾರ್ವಜನಿಕ ಪ್ರವೃತ್ತಿ ಇದ್ದಿರಲಿಕ್ಕಿಲ್ಲ. ಶಾಂತಿನಿಕೇತನ ಹಾಗೂ ಶ್ರೀನಿಕೇತನ ರೂಪದಲ್ಲಿ ಅವರು ಇಡೀ ರಾಷ್ಟ್ರಕ್ಕೆ ಅಲ್ಲದೆ, ಸಮಸ್ತ ಜಗತ್ತಿಗೆ 'ಕುಲಧನ'

ವನ್ನು ಬಿಟ್ಟುಹೋಗಿದಾರೆ. ಭಗವಂತ ಆ ಮಹಾನ್ ಆತ್ಮಕ್ಕೆ ಶಾಂತಿ ನೀಡಲಿ; ಶಾಂತಿನಿಕೇತನದ ಸಂಚಾಲನದ ಭಾರ ಯಾರ ಮೇಲೆ ಬಿದ್ದಿದೆಯೋ ಅವರಿಗೆ ಅದನ್ನು ನಿರ್ವಹಿಸುವ ಯೋಗ್ಯತೆ ಉಂಟಾಗಲಿ. ೪೯

ಹದಿನೇಳನೆಯ ತಾರೀಖು ಗುರುದೇವರ ಶ್ರಾದ್ಧ ದಿನ, ಶ್ರಾದ್ಧಕ್ಕೆ ಧಾರ್ಮಿಕ ಮಹತ್ವ ಕೊಡುವವರು, ಅಂದು ನಿರ್ಜಲ ಉಪವಾಸಮಾಡುವರು; ಅಥವಾ ಕೇವಲ ಫಲಾಹಾರ ಮಾಡುವರು, ಹಾಗೂ ಪ್ರಾರ್ಥನೆಯಲ್ಲಿ ತೊಡಗುವರು. ಪ್ರಾರ್ಥನೆಯನ್ನು ವ್ಯಕ್ತಿಗತವಾಗಿಯೂ ಮಾಡಬಹುದು; ಸಾಮೂಹಿಕವಾಗಿಯೂ ಮಾಡಬಹುದು. ಗುರುದೇವರು ತಮ್ಮ ಕೃತಿಗಳ ಮೂಲಕ ನೀಡಿರುವ ಅಥವಾ ಪ್ರತ್ಯಕ್ಷ ಬಾಳುವೆಯಲ್ಲಿ ಅನುಸರಿಸಿರುವ ಉತ್ಕರ್ಷಕಾರಕ ಸಂದೇಶವನ್ನು ಆರಿತ ಹಳ್ಳಿ–ಪಟ್ಟಣಗಳ ಜನ ಅಂದು ಅನುಕೂಲಕ್ಕೆ ತಕ್ಕಂತೆ ಒಟ್ಟುಗೂಡಿ, ಆ ದಿವ್ಯ ಜೀವನದ ಬಗೆಗೆ ಚಿಂತನ ಮಾಡಿ, ದೇಶ ಸೇವೆಗೆ ತಮ್ಮನ್ನು ತಾವೇ ಸಮರ್ಪಣ ಮಾಡಿಕೊಳ್ಳುವರು.

ಶಾಂತಿ ಹಾಗೂ ಸದ್ಭಾವನೆಯೇ ಗುರುದೇವರ ಧ್ಯೇಯ. ಸಾಂಪ್ರದಾಯಿಕ (ಕೋಮುವಾರು) ಬಂಧನವನ್ನು ಅವರು ಕಂಡರಿಯರು. ಆದ ಕಾರಣ ಎಲ್ಲ ಮಾರ್ಗದ ಜನ ಸರ್ವಸಮ್ಮತಿಯಿಂದ ಆ ಪವಿತ್ರ ದಿನವನ್ನು ಆಚರಿಸಿ, ಕೋಮುವಾರು ಐಕ್ಯತೆಯನ್ನು ಕುದುರಿಸುವರೆಂದು ನಾನು ಆಶಿಸುವೆ. ದೀನಬಂಧು ಸ್ಮಾರಕ ನಿಧಿಯ ಬಹ್ವಂಶವನ್ನು ಇನ್ನೂ ಸಂಗ್ರಹಿಸಬೇಕಾಗಿದೆಯೆಂಬ ಅಂಶವನ್ನೂ ಮುಂದಿಗೆ ನೆನಪು ಮಾಡಿಕೊಡಲು ಬಯಸುವೆ. ಆ ನಿಧಿ ಈಗ ಗುರುದೇವ–ಸ್ಮಾರಕ–ನಿಧಿಯೂ ಆಗಿ ಬಿಟ್ಟಿದೆಯೆನ್ನಲು ವಿಷಾದವೆನಿಸುತ್ತದೆ. ಕಾರಣ ಸ್ಮಾರಕ ನಿಧಿಗೆ ಕೂಡಿಸುವ ಹಣವೆಲ್ಲವನ್ನೂ ಶಾಂತಿನಿಕೇತನದ — ಅದರಲ್ಲಿ ವಿಶ್ವಭಾರತಿ ಹಾಗೂ ಶ್ರೀನಿಕೇತನವೂ ಸೇರಿವೆ — ಸಂಚಾಲನೆ ಹಾಗೂ ಸಂವರ್ಧನೆಗಾಗಿಯೇ ಉಪಯೋಗಿಸಲಾಗುವುದು. ಹೀಗೆಂದ ಮಾತ್ರಕ್ಕೆ ಗುರುದೇವರಿಗೆ ಪ್ರತ್ಯೇಕ ಸ್ಮಾರಕದ ಆವಶ್ಯಕತೆ ಇರುವುದಿಲ್ಲವೆಂದಲ್ಲ. ಆದರೆ, ಗುರುದೇವರೇ ಆರಂಭಿಸಿದ ಈ ಸ್ಮಾರಕ (ದೀನಬಂಧು ಸ್ಮಾರಕ) ಪೂರ್ಣವಾಗುವವರೆಗೆ ಆ ಸ್ಮಾರಕ (ಗುರುದೇವರ ಸ್ಮಾರಕದ) ಬಗೆಗೆ ಚಿಂತನಮಾಡುವುದು ವಿಡಂಬನೆಯೇ ಆದೀತು. ೫೦

ಗುರುದೇವರ ದೇಹವೇನೋ ಮಣ್ಣುಗೂಡಿತು; ಆದರೆ ಪ್ರಕಾಶಮಾನವಾದ ಅವರ ಅಂತರ್ಜ್ಯೋತಿ, ಈ ಭೂತಲದಲ್ಲಿ ಜೀವಮಾತ್ರರು ಜೀವಿಸಿರುವವರೆಗೆ ಸೂರ್ಯನ ಹಾಗೆ ಬೆಳಗುತ್ತಲೇ ಇರುವುದು. ಗುರುದೇವರು ಹರಡಿದ ಬೆಳಕು ಆತ್ಮಕ್ಕೆ ಸಂಬಂಧಿಸಿದುದು. ಸೂರ್ಯನ ಬೆಳಕು ನಮ್ಮ ದೇಹಕ್ಕೆ ಉಪಕಾರ ಮಾಡುವಂತೆಯೇ ಗುರುದೇವರು ಹರಡಿದ ಬೆಳಕು ನಮ್ಮ ಆತ್ಮವನ್ನು ಉದ್ಧರಿಸಿದೆ. ಅವರು ಕವಿಯಾಗಿದ್ದರು; ಪ್ರಥಮ ಶ್ರೇಣಿಯ ಸಾಹಿತಿಗಳಾಗಿದ್ದರು. ಅವರು ತಮ್ಮ ಕೃತಿಯನ್ನು ಮಾತೃ ಭಾಷೆಯಲ್ಲಿ ರಚಿಸಿದರು; ಅದರಿಂದ ಇಡೀ ಬಂಗಾಳ ಅವರ ಕವಿತಾ ಸ್ರೋತದ ಕಾವ್ಯರಸವನ್ನು ವಿಪುಲವಾಗಿ ಸೇವಿಸಲು ಸಾಧ್ಯವಾಯಿತು. ಅವರ ಕೃತಿಗಳನ್ನು ಅನೇಕ ಭಾಷೆಗಳಿಗೆ ಭಾಷಾಂತರಿಸಲಾಗಿದೆ. ಅವರು ಇಂಗ್ಲೀಷಿನಲ್ಲಿಯೂ ದೊಡ್ಡ ಲೇಖಕರಾಗಿದ್ದರು. ಬಹುಶಃ ಇಂಗ್ಲೀಷ್ ತಿಳಿಯದೆಯೇ ಅವರು ಆ ಭಾಷೆಯಲ್ಲಿ ಅಷ್ಟು ದೊಡ್ಡ ಲೇಖಕರಾಗಿದ್ದರು. ಪಾಠಶಾಲೆಯಲ್ಲಿ ಓದಿದ್ದರಾದರೂ, ವಿಶ್ವವಿದ್ಯಾಲಯದ ಯಾವ 'ಪದವಿ'ಯನ್ನೂ ಅವರು ತೆಗೆದುಕೊಂಡಿರಲಿಲ್ಲ. ಅವರು ಗುರುದೇವರೇ ಸರಿ. ನಮ್ಮ ಓರ್ವ ವೈಸ್‌ರಾಯ್ ಅವರನ್ನು ಏಷ್ಯಾದ ಕವಿ ಎಂದಿದ್ದರು. ಅದಕ್ಕೆ ಮೊದಲು ಯಾರಿಗೂ ಆ ಪದವಿ ಸಿಕ್ಕಿರಲಿಲ್ಲ. ಅವರು ಇಡೀ ವಿಶ್ವದ ಕವಿಯೂ ಆಗಿದ್ದರು. ಅಷ್ಟೇ ಏಕೆ, ಅವರು ಋಷಿಯೇ ಆಗಿದ್ದರು. ಇಡೀ ಪ್ರಪಂಚದಲ್ಲಿ ಅವರಿಗೆ ಕೀರ್ತಿಗಳಿಸಿಕೊಟ್ಟ 'ಗೀತಾಂಜಲಿ' ಯನ್ನು ಅವರು ನಮ್ಮ ಸಲುವಾಗಿ ಬಿಟ್ಟುಹೋಗಿದಾರೆ. ತುಲಸೀದಾಸರು ತಮ್ಮ ಅಮರ ರಾಮಾಯಣವನ್ನು ನಮಗೆ ಕೊಟ್ಟುಹೋಗಿದಾರೆ; ವೇದವ್ಯಾಸರು ಮಹಾಭಾರತದ ರೂಪದಲ್ಲಿ ಮಾನವ ಜಾತಿಯ ಇತಿಹಾಸವನ್ನೇ ನಮಗೆ ನೀಡಿದಾರೆ. ಅವರೆಲ್ಲ ಕೇವಲ ಕವಿಗಳಲ್ಲ, ಗುರುಗಳು. ಗುರುದೇವರೂ ಕೇವಲ ಕವಿಯಂತಲ್ಲದೆ, ಗುರುವಾಗಿ ಬರೆದಿದಾರೆ. ಆದರೆ ಕೇವಲ ಬರೆಯುವುದಷ್ಟೇ ಅವರ ವೈಶಿಷ್ಟ್ಯವಾಗಿರಲಿಲ್ಲ, ಅವರು ಕಲಾವಿದರು, ನೃತ್ಯಗಾರರು, ಗಾಯಕರು ಕೂಡ ಆಗಿದ್ದರು. ಅತಿ ಸುಂದರವಾದ ಕಲೆಯಲ್ಲಿ ಇರಬೇಕಾದ ಮಾಧುರ್ಯ ಹಾಗೂ ಪವಿತ್ರತೆ ಅವರಲ್ಲಿಯೂ ಅವರ ಕೃತಿಗಳಲ್ಲಿಯೂ ಇತ್ತು. ಹೊಸ ಹೊಸ ವಸ್ತುಗಳನ್ನು ಸೃಷ್ಟಿಸುವ ಅವರ ಶಕ್ತಿಯಿಂದ

ನಮಗೆ ಶಾಂತಿ ನಿಕೇತನ, ಶ್ರೀನಿಕೇತನ, ವಿಶ್ವಭಾರತಿಯಂಥ ಸಂಸ್ಥೆಗಳು ದೊರೆತಿವೆ. ತಮ್ಮ ಈ ಸಂಸ್ಥೆಗಳಲ್ಲಿ ಅವರು ಭಾವರೂಪದಲ್ಲಿ ವಿರಾಜಮಾನ ರಾಗಿದಾರೆ. ಈ ಸಂಸ್ಥೆಗಳು ಬಂಗಾಳಕ್ಕೆ ಮಾತ್ರವಲ್ಲ, ಇಡೀ ಹಿಂದೂ ಸ್ಥಾನಕ್ಕೆ 'ಕುಲಧನ' ದ ರೂಪದಲ್ಲಿ ದೊರೆತಿವೆ. ಶಾಂತಿನಿಕೇತನವಂತೂ ನಮ್ಮೆಲ್ಲರಿಗೆ ನಿಜಕ್ಕೂ ಯಾತ್ರಾಸ್ಥಳವೇ ಆಗಿದೆ. ಗುರುದೇವರು ಈ ಸಂಸ್ಥೆ ಗಳಿಗೆ ಯಾವ ರೂಪ ಕೊಡಬೇಕೆಂದು ಬಯಸಿದ್ದರೋ ಯಾವುದರ ಸ್ವಪ್ನ ಕಾಣುತ್ತಿದ್ದರೋ ಅದನ್ನು ತಮ್ಮ ಜೀವಿತಕಾಲದಲ್ಲಿ ಸಾಧಿಸಲು ಅವರಿಗೆ ಆಗಲಿಲ್ಲ. ಹಾಗೆ ಸಾಧನೆ ಮಾಡಿರುವವರು ಯಾರಿದಾರೆ? ಮನುಷ್ಯನ ಮನೋರಥವನ್ನು ಈಡೇರಿಸುವುದು ಭಗವಂತನ ಕೈಯಲ್ಲಿರುವ ಮಾತು. ಆದರೂ ಈ ಸಂಸ್ಥೆಗಳು ನಮಗೆ ಗುರುದೇವರ ಪ್ರಯತ್ನಗಳನ್ನು ನೆನಪಿಗೆ ತರುತ್ತವೆ, ಹಾಗೂ ತಮ್ಮ ದೇಶದ ಬಗೆಗೆ ಗುರುದೇವರ ಮನಸ್ಸಿನಲ್ಲಿ ಎಷ್ಟು ಆಳವಾದ ಪ್ರೀತಿಯಿತ್ತು, ಅದಕ್ಕೆ ಎಷ್ಟೆಲ್ಲ ಸೇವೆಯನ್ನು ಸಲ್ಲಿಸಿದರು— ಎಂಬುದನ್ನು ನಮಗೆ ತಿಳಿಸಿಕೊಡುತ್ತವೆ. ಅವರು ರಚಿಸಿರುವ ರಾಷ್ಟ್ರಗೀತೆ ಯನ್ನು ಈಗ ತಾನೆ ಕೇಳಿದೀರಿ. ನಮ್ಮ ದೇಶದ ಜೀವನದಲ್ಲಿ ಈ ಗೀತೆ ತನ್ನದೊಂದು ಸ್ಥಾನವನ್ನು ಗಳಿಸಿಕೊಂಡಿದೆ. ಸಹಸ್ರಾರು-ಲಕ್ಷಾಂತರ ಮಂದಿ ಪ್ರೇರಣಾದಾಯಕವಾದ ಇದರ ಚರಣಗಳನ್ನು ಅನೇಕ ವೇಳೆ ಒಟ್ಟಿಗೆ ಹಾಡುತ್ತಾರೆ, ಇದು ಗೀತೆ ಮಾತ್ರವಲ್ಲ, ಭಕ್ತಿ-ಭಾವದಿಂದ ಕೂಡಿದ ಭಜನೆಯೂ ಹೌದು. ೫೧

ಲೋಕಮಾನ್ಯ ಬಾಲ ಗಂಗಾಧರ ತಿಲಕ್

ಲೋಕಮಾನ್ಯ ಬಾಲ ಗಂಗಾಧರ ತಿಲಕರು ಇನ್ನಿಲ್ಲ. ಅವರು ಈ ಲೋಕ ಬಿಟ್ಟು ಹೋದರೆಂದು ನಂಬುವುದೇ ಕಷ್ಟ. ಜನತೆಯ ಮೇಲೆ ಲೋಕಮಾನ್ಯರಷ್ಟು ಪ್ರಭಾವ ಬೀರಿರುವ ಬೇರೊಬ್ಬ ವ್ಯಕ್ತಿ ನಮ್ಮ ಕಾಲದಲ್ಲಿ ಯಾರೂ ಇಲ್ಲ. ನಮ್ಮ ದೇಶದ ಜನ ಅವರಲ್ಲಿ ಇಟ್ಟಿದ್ದ ಶ್ರದ್ಧಾ ಭಕ್ತಿ

ಅಪೂರ್ವವಾದುದು. ಅವರು ಜನತೆಯ ಆರಾಧ್ಯ ದೈವವಾಗಿದ್ದರು; ಮೂರ್ತಿಯಾಗಿದ್ದರು; ಅವರ ಮಾತು ಸಹಸ್ರಾರು ಮಂದಿಯ ಪಾಲಿಗೆ ಶಾಸನವೇ ಆಗಿತ್ತು ಎಂಬುದು ಅಕ್ಷರಶಃ ಸತ್ಯ. ಪುರುಷರಲ್ಲಿ ಪುರುಷ ಸಿಂಹ ಈ ಪ್ರಪಂಚದಿಂದ ಸಾಗಿ ಹೋಯಿತು. ಕೇಸರಿಯ ಘೋರ ಗರ್ಜನೆ ಅಡಗಿ ಹೋಯಿತು.

ಜನತೆಯ ಮೇಲೆ ಅವರ ಪ್ರಭಾವ ಅಷ್ಟೊಂದು ಇರಲು ಕಾರಣ ವೇನು? ಈ ಪ್ರಶ್ನೆಗೆ ಉತ್ತರ ಬಹಳ ಸಹಜ-ಎಂದು ನನಗೆ ಅನಿಸುತ್ತದೆ. ಸ್ವದೇಶ ಭಕ್ತಿಯೇ ಅವರ ಸಹಜ—ವೃತ್ತಿಯಾಗಿತ್ತು. ಸ್ವದೇಶ ಪ್ರೇಮ ಬಿಟ್ಟು, ಬೇರೆ ಧರ್ಮವೇ ಅವರಿಗೆ ತಿಳಿದಿರಲಿಲ್ಲ.

ಅವರು ಜನ್ಮತಃ ಪ್ರಜಾತಂತ್ರವಾದಿಗಳು. ಬಹುಮತದ ಆದೇಶದ ಮೇಲೆ ಅವರು ಇಟ್ಟಿದ್ದ ವಿಶ್ವಾಸವನ್ನು ಕಂಡು ನಾನು ಭಯ—ಭೀತನಾಗಬೇಕಾಗುತ್ತಿತ್ತು. ಆದರೆ, ಜನತೆಯ ಮೇಲೆ ಅವರಿಗೆ ಅಷ್ಟೊಂದು ಪ್ರಭಾವವಿದ್ದುದಕ್ಕೆ ಅದೇ ಕಾರಣ. ಸ್ವದೇಶಕ್ಕಾಗಿ ಕೆಲಸ ಮಾಡುವುದರಲ್ಲಿ ಅವರು ತೋರುತ್ತಿದ್ದ ಇಚ್ಛಾಶಕ್ತಿ ಅತೀವ ಪ್ರಬಲವಾಗಿತ್ತು. ಅವರ ಜೀವನವೆಂದರೆ ಒಂದು ತೆರೆದ ಗ್ರಂಥ; ಅದನ್ನು ತೆರೆಯುವ ಆವಶ್ಯಕತೆಯೇ ಇಲ್ಲ. ಅವರ ಆಹಾರ—ಪಾನೀಯ, ಉಡುಗೆ—ತೊಡುಗೆ ಎಲ್ಲವೂ ಅತೀವ ಸರಳ. ಅವರ ವ್ಯಕ್ತಿಗತ ಜೀವನ ಬಹಳ ನಿರ್ಮಲ ಹಾಗೂ ಕಳಂಕ ರಹಿತ. ಅವರು ತಮ್ಮ ಅದ್ಭುತ ಬುದ್ಧಿಶಕ್ತಿಯನ್ನು ಸ್ವದೇಶಕ್ಕೆ ಅರ್ಪಣೆ ಮಾಡಿದ್ದರು. ಸ್ವರಾಜ್ಯದ ಉಪದೇಶವನ್ನು ಲೋಕಮಾನ್ಯರು ನೀಡಿದಷ್ಟು ಸ್ಥಿರತೆ ಹಾಗೂ ದೃಢತೆಯಿಂದ ಬೇರೆ ಯಾರೂ ನೀಡಲಿಲ್ಲ. ದೇಶ ಬಾಂಧವರು ಅವರಲ್ಲಿ ಅಚಲ ಶ್ರದ್ಧೆ ಇಡುವುದಕ್ಕೆ ಅದೇ ಕಾರಣ. ಸಾಹಸಕ್ಕೂ ಅವರಿಗೂ ಬಿಡಿಸಲಾಗದ ಗಂಟು. ಅವರ ಆಶಾವಾದಿತ್ವ ಅದಮ್ಯ. ತಮ್ಮ ಜೀವಿತ ಕಾಲದಲ್ಲೇ ಸಂಪೂರ್ಣ ಸ್ವರಾಜ್ಯ ಸ್ಥಾಪಿತವಾಗುವುದನ್ನು ನೋಡೇನೆಂಬ ಆಶೆ ಅವರಿಗಿತ್ತು. ಅದನ್ನು ನೋಡಲು ಆಗದಿದ್ದುದು ಅವರ ದೋಷವಲ್ಲ. ಸ್ವರಾಜ್ಯ ಪ್ರಾಪ್ತಿಯ ಅವಧಿಯನ್ನು ನಿಸ್ಸಂದೇಹವಾಗಿ ಅವರು ಹ್ರಸ್ವಗೊಳಿಸಿದಾರೆ. ಇನ್ನು ಆದಷ್ಟು ಬೇಗ ಸ್ವರಾಜ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಈಗ ಜೀವಂತರಾಗಿರುವ ನಮ್ಮ ಕರ್ತವ್ಯ.

ಲೋಕಮಾನ್ಯರು ಆಂಗ್ಲೇಯರ ಶತ್ರು ಎಂಬ ಭಾವನೆಯನ್ನು ಪೋಷಿಸುವುದಕ್ಕೆ ನನ್ನ ವಿರೋಧವಿದೆ. ಹಾಗೆಯೇ ಅವರು ಅಧಿಕಾರಿ ವರ್ಗವನ್ನು ಅಥವಾ ಆಂಗ್ಲ ರಾಜ್ಯವನ್ನು ತಿರಸ್ಕಾರ ಭಾವದಿಂದ ನೋಡುತ್ತಿದ್ದರೆಂಬುದನ್ನು ನಾನು ಒಪ್ಪುವುದಿಲ್ಲ.

ಕಲಿಕತ್ತೆಯ ಕಾಂಗ್ರೆಸ್ ಸಮಯದಲ್ಲಿ ಹಿಂದೀ ರಾಷ್ಟ್ರಭಾಷೆಯಾಗಬೇಕೆಂಬ ವಿಷಯದಲ್ಲಿ ಅವರು ಆಡಿದ ಮಾತನ್ನು ಕೇಳುವ ಭಾಗ್ಯ ನನಗೂ ಸಿಕ್ಕಿತ್ತು. ಅವರು ಕಾಂಗ್ರೆಸ್ ಚಪ್ಪರದಿಂದ ಆಗತಾನೇ ವಾಪಸಾಗಿದ್ದರು. ಹಿಂದಿಯ ಸಂಬಂಧದಲ್ಲಿ ಅವರು ಶಾಂತವಾದ ಭಾಷಣದಲ್ಲಿ ಹೇಳಿದ ಮಾತು ಕೇಳಿ ಬಹಳ ತೃಪ್ತಿಯಾಯಿತು. ತಮ್ಮ ಭಾಷಣದಲ್ಲಿ ದೇಶೀಯ ಭಾಷೆಗಳ ಕಡೆಗೆ ಗಮನ ಹರಿಸಿದ ಕಾರಣ ಇಂಗ್ಲೀಷನ್ನು ಬಹುವಾಗಿ ಪ್ರಶಂಶಿಸಿದರು. ವಿಲಾಯತಿಗೆ ಹೋದಮೇಲೆ ಆಂಗ್ಲ ಪಂಚಾಯತರ ಬಗ್ಗೆ ಅವರಿಗೆ ಕೆಟ್ಟ ಅನುಭವವೇ ಆಯಿತಾದರೂ ಬ್ರಿಟಿಷ್ ಪ್ರಜಾಸತ್ತೆಯಲ್ಲಿ ಅವರಿಗೆ ದೃಢ ವಿಶ್ವಾಸ ಮೂಡಿತು. ಪಂಜಾಬ್ ಅತ್ಯಾಚಾರಗಳ ಚಿತ್ರವನ್ನು ' ಸಿನಿಮಟೋಗ್ರಾಫ್ ಯಂತ್ರದ ಮೂಲಕ ಬ್ರಿಟಿಷ್ ಪ್ರಜಾಸತ್ತಾವಾದಿಗಳಿಗೆ ತೋರಿಸಬೇಕು—'ಎಂಬುದಾಗಿ ಅವರು ಹೇಳಿದ್ದರು. ನಾನು ಈ ಮಾತಿನ ಉಲ್ಲೇಖ ಮಾಡುತ್ತಿರುವುದರಿಂದ ನನಗೂ ಬ್ರಿಟಿಷ್ ಪ್ರಜಾಸತ್ತೆಯಲ್ಲಿ ವಿಶ್ವಾಸವಿದೆಯೆಂದು ಭಾವಿಸಬಾರದು. (ನನಗೆ ಆ ವಿಶ್ವಾಸವಿಲ್ಲ) ; ಆಂಗ್ಲರ ಬಗೆಗೆ ಲೋಕಮಾನ್ಯರಿಗೆ ತಿರಸ್ಕಾರ ಭಾವ ಇರಲಿಲ್ಲವೆಂಬುದನ್ನು ತೋರಿಸುವುದಕ್ಕೆ ಮಾತ್ರ ಇದರ ಉಲ್ಲೇಖ ಮಾಡಿದೇನೆ. ಆದರೆ, ಬ್ರಿಟಿಷ್ ಸಾಮ್ರಾಜ್ಯವನ್ನು ಆ ಹಿಂದುಳಿದ ಸ್ಥಿತಿಯಲ್ಲಿ ಇರಗೊಡುವುದು ಅವರಿಗೆ ಇಷ್ಟವಿರಲಿಲ್ಲ; ಇರಗೊಡಲು ಆಗುತ್ತಲೂ ಇರಲಿಲ್ಲ.

ಭಾರತದ ಬಗೆಗೆ ಸಮಾನತೆಯ ಭಾವವನ್ನು ತೋರಬೇಕೆಂಬುದು ಅವರ ಇಚ್ಛೆಯಾಗಿತ್ತು. ಅದು ದೇಶದ ಜನ್ಮಸಿದ್ಧ ಹಕ್ಕು ಎಂಬುದಾಗಿಯೂ ಅವರು ಭಾವಿಸಿದ್ದರು. ಅವರು ನಡೆಸಿದ ಸ್ವಾತಂತ್ರ್ಯ ಯುದ್ಧದಲ್ಲಿ ಯಾರ ಆಶ್ರಯವನ್ನೂ ಕೋರಲಿಲ್ಲ ; ಯಾರ ದಾರಿಯನ್ನೂ ನೋಡಲಿಲ್ಲ. ಭಾರತ ಯಾರನ್ನು ಪೂಜಿಸುತ್ತಿದ್ದಿತೋ ಅಂಥ ಮಹಾ ಪುರುಷನನ್ನು ಆಂಗ್ಲರು ಅರ್ಥಮಾಡಿಕೊಳ್ಳುವರೆಂದು ನಾನು ಆಶಿಸುವೆನು.

ಲೋಕಮಾನ್ಯರು ನವಭಾರತದ ನಿರ್ಮಾಪಕರೆಂಬ ಭಾವನೆಯೇ ಭಾರತದ ಮುಂದಿನ ಪೀಳಿಗೆಯವರ ಹೃದಯದಲ್ಲಿ ನೆಲೆಸಿತು. ಅವರು ತಿಲಕರನ್ನು "ನಮಗಾಗಿಯೇ ಹುಟ್ಟಿ ನಮಗಾಗಿಯೇ ಮಡಿದ ಮಹಾ ಪುರುಷ" ಎಂಬುದಾಗಿ ನೆನಪು ಮಾಡಿಕೊಳ್ಳುವರು. ಅಂಥ ಮಹಾ ಪುರುಷರು ಮಡಿದರು ಎನ್ನುವುದು ಭಗವಂತನಿಗೆ ದ್ರೋಹವೆಸಗಿದಂತೆ ಅವರ ಸ್ಥಾಯಿಯಾ ತತ್ವ ಸದಾಕಾಲಕ್ಕೂ ನಮ್ಮಲ್ಲಿ ವ್ಯಾಪ್ತವಾಗಿ ಹೋಗಿದೆ. ನಮ್ಮ ಜೀವನದಲ್ಲಿ ಅವರ ಸಾಹಸ, ಅವರ ಸರಳತೆ, ಅವರ ಆಶ್ಚರ್ಯ ಜನಕ ಉದ್ಯಮಶೀಲತೆ ಹಾಗೂ ಸ್ವದೇಶ ಭಕ್ತಿಯನ್ನು ಪ್ರವೇಶಗೊಳಿಸು ವುದರ ಮೂಲಕ ಏಕಮಾತ್ರ ಲೋಕಮಾನ್ಯರ ಅವಿನಾಶಿಯಾದ ಸ್ಮಾರಕ ವನ್ನು ರಚಿಸೋಣ. ಭಗವಂತ ಅವರ ಆತ್ಮಕ್ಕೆ ಶಾಂತಿಯನ್ನು ಅನು ಗ್ರಹಿಸಲಿ.೫೨

ಲೋಕಮಾನ್ಯರು ಏಕಮಾತ್ರರು. ಜನ ತಿಲಕರಿಗೆ ಕೊಟ್ಟಿದ್ದ ಪದವಿ, ಉಚ್ಚಸ್ಥಾನ ರಾಜರು ಕೊಡುವ ಬಿರುದುಗಳಿಗಿಂತ ಲಕ್ಷಪಾಲು ಮಿಗಿಲಾದುದು; ಬೆಲೆಯುಳ್ಳದು. ದೇಶ ಆ ಮಾತನ್ನು ಇಂದು ಸಿದ್ಧ ಪಡಿಸಿ, ತೋರಿದೆ. ಲೋಕಮಾನ್ಯರನ್ನು ಕಳುಹಿಸಿಕೊಡಲು ಇಡೀ ಮುಂಬಯಿ ನಗರವೇ ಮೇಲ್ವಾಯ್ದು ಬಂದಿತ್ತು ಎಂಬುದರಲ್ಲಿ ಅತ್ಯುಕ್ತಿ ಏನಿಲ್ಲ.

ಅವರ ಕಡೆಯ ದಿನಗಳಲ್ಲಿ ನಾನು ಕಣ್ಣಾರೆ ಕಂಡ ದೃಶ್ಯವನ್ನು ಎಂದಿಗೂ ಮರೆಯುವ ಹಾಗಿಲ್ಲ. ಜನರ ಆ ಅಗಾಧ ಪ್ರೇಮವನ್ನು ಬಣ್ಣಿಸು ವುದು ಅಸಂಭವ. 'ರಾಜ ಸತ್ತ; ರಾಜ ಚಿರಾಯುವಾಗಲಿ'—ಎಂಬು ದೊಂದು ಫ್ರೆಂಚ್ ಗಾದೆ. ಆ ವಿಚಾರ ಇಂಗ್ಲೆಂಡ್ ಮೊದಲಾದ ಎಲ್ಲ ದೇಶಗಳಲ್ಲಿಯೂ ಪ್ರಚಲಿತವಾಗಿದೆ. ರಾಜ ಸತ್ತಾಗ ಆ ಗಾದೆಯನ್ನು ಹೇಳುತ್ತಾರೆ. ಅದರ ಭಾವಾರ್ಥವಿದು: "ರಾಜ ಸಾಯುವುದೇ ಇಲ್ಲ; ರಾಜತಂತ್ರ ಒಂದು ಕ್ಷಣವೂ ನಿಲ್ಲುವಂಥದಲ್ಲ."

ಅದೇ ಪ್ರಕಾರ ತಿಲಕ ಮಹಾರಾಜರು ಸಾಯಲಾರರು; ಸತ್ತಿಲ್ಲ. ಅವರು ಬದುಕಿದಾರೆ; ಇನ್ನೂ ಬಹುಕಾಲ ಬದುಕುವರು—ಎಂಬುದನ್ನು

ಬೊಂಬಾಯಿಯ ಜನ ತೋರಿಕೊಟ್ಟರು. ಅವರ ಬಂಧು-ಬಳಗದವರು ದುಃಖಿತರಾಗಿರಬಹುದು; ಕಂಬನಿಗರೆಯುತ್ತಿರಬಹುದು; ಆದರೆ ಬೇರೆ ಜನ ಉತ್ಸವ ಆಚರಿಸಲು ಬಂದಿದ್ದರು. ಬಾಜಾ-ಬಜಂತ್ರಿ, ಭಜನೆ-ಕೀರ್ತನೆ ಲೋಕಮಾನ್ಯರು ಅಳಿದಿಲ್ಲವೆಂದು ಜನರನ್ನು ಎಚ್ಚರಿಸುತ್ತಿದ್ದವು. "ಲೋಕಮಾನ್ಯ ತಿಲಕ್ ಮಹಾರಾಜ್ ಕೀ ಜೈ" ಎಂಬ ಧ್ವನಿಯಿಂದ ಆಕಾಶ ಪ್ರತಿಧ್ವನಿತವಾಗುತ್ತಿತ್ತು. ತಾವು ತಿಲಕ ಮಹಾರಾಜರ ದೇಹ ದಹನ ಕರ್ಮಕ್ಕಾಗಿ ಬಂದಿರುವೆವೆಂಬ ವಿಷಯವೇ ಆಗ ಮಂದಿಗೆ ಮರೆತು ಹೋಗಿತ್ತು.

ಶನಿವಾರ ರಾತ್ರಿ ಅವರ ಮರಣದ ಸುದ್ದಿಯನ್ನು ಕೇಳಿದಾಗ ನನ್ನ ಮನಸ್ಸು ವ್ಯಾಕುಲಗೊಂಡಿತು; ಆದರೆ ಜಯಘೋಷ ಕೇಳಿ ನನ್ನ ವ್ಯಾಕುಲತೆ ದೂರವಾಗುತ್ತ ಬಂದಿತು. ತಿಲಕ ಮಹಾರಾಜರು ಬದುಕಿರುವರೆಂಬ ಭಾವನೆ ನನ್ನಲ್ಲಿಯೂ ಮೂಡಿತು. ಅವರ ಕ್ಷಣಭಂಗುರ ದೇಹ ನಾಶ ವಾಗಿದೆ; ಆದರೆ ಅವರ ಅಮರ ಆತ್ಮ ಲಕ್ಷಾಂತರ ಮಂದಿಯ ಹೃದಯದಲ್ಲಿ ವಿರಾಜಮಾನವಾಗಿದೆ.

ಈ ಯುಗದಲ್ಲಿ ಅಂಥ ಸೌಭಾಗ್ಯ—ಮರಣ ಬೇರಾವ ಜನ ನಾಯಕ ರಿಗೂ ದೊರೆತಿರಲಿಲ್ಲ. ದಾದಾಭಾಯಿ ಹೋದರು; ಫಿರೋಜ್ ಶಹ ಹೋದರು; ಗೋಖಲೆಯೂ ಹೋದರು. ಅವರೆಲ್ಲರ ಜತೆಯಲ್ಲಿ ಸಹ ಸ್ರಾರು ಮಂದಿ ಸ್ಮಶಾನದವರೆಗೆ ಹೋಗಿದ್ದರು. ಆದರೆ ತಿಲಕರು ಮೇರೆ ಯನ್ನೇ ಮೀರಿಸಿಬಿಟ್ಟರು. ಇಡೀ ಪ್ರಪಂಚವೇ ಅವರ ಹಿಂದೆ ಹೋಯಿತು. ಭಾನುವಾರದಂದು ಬೊಂಬಾಯಿ ನಗರಕ್ಕೆ ಹುಚ್ಚು ಹಿಡಿದುಹೋಗಿತ್ತು.

ಅದು ಎಂಥ ಚಮತ್ಕಾರ! ಜಗತ್ತಿನಲ್ಲಿ ಚಮತ್ಕಾರ ಎಂಬುದು ಯಾವುದೂ ಇಲ್ಲ. ಅಥವಾ ಜಗತ್ತೇ ಸ್ವತಃ ಒಂದು ಚಮತ್ಕಾರ ಎನ್ನ ಬಹುದು. ಕಾರಣವಿಲ್ಲದೆ ಯಾವುದೂ ಆಗುವುದಿಲ್ಲ. ಈ ಸಿದ್ಧಾಂತಕ್ಕೆ ಅಪವಾ ದವೇಇಲ್ಲ. ಲೋಕಮಾನ್ಯರಿಗೆ ಭಾರತದ ಮೇಲೆ ಅಸೀಮ ಪ್ರೇಮ. ಆ ಕಾರಣ ದಿಂದಲೇ ಜನರ ಪ್ರೇಮಕ್ಕೂ ಮಿತಿ ಇಲ್ಲದಂತಾಯಿತು. ಅವರು ಮಾಡಿ ದಷ್ಟು ಸ್ವರಾಜ್ಯದ ಜಪವನ್ನು ಬೇರೆ ಯಾರೂ ಮಾಡಲಿಲ್ಲ. ಭಾರತ ಸ್ವರಾಜ್ಯಕ್ಕೆ ಯೋಗ್ಯವಾದೀತು ಎಂಬುದಾಗಿ ಬೇರೆಯವರು ವಿಚಾರ

ಮಾಡುತ್ತಿದ್ದಾಗ ಲೋಕಮಾನ್ಯರು 'ಭಾರತ ಆಗಲೇ ಅದಕ್ಕೆ ಸಿದ್ಧವಾಗಿದೆ' ಎಂಬುದಾಗಿ ಪ್ರಾಮಾಣಿಕವಾಗಿಯೇ ನಂಬಿದ್ದರು. ಲೋಕಮಾನ್ಯರ ಆ ಭಾವನೆ ಜನರ ಮನಸ್ಸನ್ನು ಹರಣಮಾಡಿತ್ತು. ಹಾಗೆ ನಂಬಿ ಅವರು ಸುಮ್ಮನೆ ಕೂಡಲಿಲ್ಲ; ಅದಕ್ಕೆ ಅನುಗುಣವಾಗಿ ಕೆಲಸವನ್ನೂ ಮಾಡಿದರು. ಅದರಿಂದ ಜನತೆಯಲ್ಲಿ ಹೊಸ ಚೈತನ್ಯ, ಹೊಸ ಉತ್ಸಾಹ ಹುಟ್ಟಿತು. ಸ್ವರಾಜ್ಯಗಳಿಸುವ ಬಗೆಗೆ ತಮಗಿದ್ದ ತೀವ್ರತೆಯ ರುಚಿಯನ್ನು ಅವರು ಜನಕ್ಕೆ ತೋರಿಸಿದರು. ಆ ರುಚಿಯನ್ನು ಜನ ಕಂಡುಕೊಂಡಂತೆ ತಿಲಕರ ಕಡೆಗೆ ಆಕರ್ಷಿತರಾಗುತ್ತ ನಡೆದರು.

ಅವರಿಗೆ ಅನೇಕ ಬಗೆಯ ಆಪತ್ತು ಒದಗಿತು; ತರತರದ ಕಷ್ಟವನ್ನು ಅನುಭವಿಸಬೇಕಾಯಿತು. ಆದರೂ ಆ ಮಂತ್ರದ ಅನುಷ್ಠಾನವನ್ನು ಅವರು ಬಿಡಲಿಲ್ಲ. ಕಠಿಣ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾದರು. ಆ ಕಾರಣ ದಿಂದ ಜನ ಅವರನ್ನು ತಮ್ಮ ಹೃದಯದ ಸಮ್ರಾಟರನ್ನಾಗಿ ಮಾಡಿ ಕೊಂಡರು. ಅವರ ಮಾತು ಜನಕ್ಕೆ ಶಾಸನದಂತೆ ಮಾನ್ಯವೆನಿಸಿತು.

ದೇಹ ನಾಶವಾಗುವುದರಿಂದ ಅಂಥ ಮಹಾನ್ ಜೀವನ ನಾಶವಾಗು ವುದಿಲ್ಲ. ದೇಹ ಪತನವಾದಮೇಲೆಯೇ ಅದು ಆರಂಭವಾಗುತ್ತದೆ. ನಾವು ಯಾರನ್ನು ಪೂಜ್ಯರೆಂದು ಭಾವಿಸುತ್ತೇವೆಯೋ ಅವರ ಸದ್ಗುಣಗಳನ್ನು ಅನುಸರಿಸುವುದರಿಂದಲೇ ಅವರನ್ನು ನಿಜವಾಗಿ ಪೂಜಿಸಿದಂತಾಗುತ್ತದೆ. ಲೋಕಮಾನ್ಯರು ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. ಅವರ ನೆನಪಾಗಿ ನಾವೂ ಸರಳ ಜೀವಿಗಳಾಗಬೇಕು. ಮನಸ್ಸಾಕ್ಷಿಯಾಗಿ ಎಷ್ಟು ವಸ್ತುಗಳನ್ನು ತ್ಯಾಗಮಾಡಲು ಸಾಧ್ಯವೋ ಅಷ್ಟನ್ನೂ ತ್ಯಾಗಮಾಡಬೇಕು. ನಮ್ಮ ನಿಶ್ಚಿತ ಕಾರ್ಯವನ್ನು ಮಾಡಲು ಎಂದಿಗೂ ಹಿಂಜರಿಯಬಾರದು. ವಿಚಾರ ಮಾಡಿಯೇ ಮಾತನಾಡಬೇಕು, ಕೆಲಸ ಮಾಡಬೇಕು. ಅವರು ವಿದ್ವಾಂಸರಾಗಿದ್ದರು; ಮಾತೃ ಭಾಷೆ ಹಾಗೂ ಸಂಸ್ಕೃತದ ಮೇಲೆ ಅವರಿಗೆ ಒಳ್ಳೆ ಪ್ರಭುತ್ವವಿತ್ತು. ನಾವೂ ಅವರಂತೆ ವಿದ್ವಾಂಸರಾಗಲು ನಿಶ್ಚಯ ಮಾಡಿಕೊಳ್ಳಬೇಕು. ವ್ಯವಹಾರದಲ್ಲಿ ವಿದೇಶೀ ಭಾಷೆಯನ್ನು ತ್ಯಾಗ ಮಾಡಿ ಮಾತೃ ಭಾಷೆಯ ಜ್ಞಾನವನ್ನು ಸಾಕಷ್ಟು ಗಳಿಸಬೇಕು; ಅದರ ಮೂಲಕವೇ ನಮ್ಮ ವಿಚಾರಗಳನ್ನು ಪ್ರಕಟಿಸುವ ಅಭ್ಯಾಸ ಮಾಡಬೇಕು. ಸಂಸ್ಕೃತ

ಭಾಷೆಯನ್ನು ಕಲಿತು, ನಮ್ಮ ಧರ್ಮ ಶಾಸ್ತ್ರಗಳಲ್ಲಿ ಅಡಗಿರುವ ಧರ್ಮ—ರಹಸ್ಯಗಳನ್ನು ಪ್ರಕಟಿಸಬೇಕು. ಅವರು ಸ್ವದೇಶೀ—ವಸ್ತುಗಳ ಪ್ರೇಮಿಗಳಾಗಿದ್ದರು. ನಾವೂ ಸ್ವದೇಶೀ—ಎಂಬುದರ ಅರ್ಥವನ್ನು ಗ್ರಹಿಸಿ, ಆದನ್ನುಅನುಷ್ಠಾನಕ್ಕೆ ತರಬೇಕು. ಅವರ ಹೃದಯದಲ್ಲಿ ಸ್ವದೇಶದ ಬಗೆಗೆ ಅಗಾಧ ಪ್ರೀತಿಯಿತ್ತು. ನಾವೂ ನಮ್ಮ ಹೃದಯದಲ್ಲಿ ಅಂಥದೇ ಪ್ರೇಮವನ್ನು ಬೆಳೆಸಿಕೊಂಡು ದಿನೇ ದಿನೇ ಹೆಚ್ಚೆಚ್ಚು ದೇಶ ಸೇವೆಯಲ್ಲಿ ನಿರತರಾಗಬೇಕು. ಅವರನ್ನು ಪೂಜಿಸುವ ಬಗೆ ಇದುವೇ. ಇಷ್ಟು ಮಾಡಲು ಆಗಲಾರದವರು ಅವರ ಸ್ಮಾರಕ ನಿಧಿಗೆ ಕಾಣಿಕೆ ನೀಡಲಿ. ಅದನ್ನು ಸ್ವರಾಜ್ಯ ಕಾರ್ಯಕ್ಕೆ ವಿನಿಯೋಗಿಸಲಾಗುವುದು.

ಲೋಕಮಾನ್ಯರು ಈಗಿನ ರಾಜ್ಯಮಂಡಲದ ಉಗ್ರವಿರೋಧಿಗಳಾಗಿದ್ದರು. ಅಂದಮಾತ್ರಕ್ಕೆ ಅವರು ಆಂಗ್ಲೇಯರನ್ನು ದ್ವೇಷಿಸುತ್ತಿದ್ದರೆಂದು ಭಾವಿಸಲಾಗದು. ಹಾಗೆ ಭಾವಿಸುವುದು ಶುದ್ಧ ತಪ್ಪು. ಅವರು ಆಂಗ್ಲೇಯರ ಪ್ರಶಂಸೆ ಮಾಡಿರುವುದನ್ನು ನಾನು ಎಷ್ಟೋ ವೇಳೆ ಕೇಳಿದೇನೆ. ಆಂಗ್ಲ-ರಾಜ್ಯದ ಸಂಬಂಧವನ್ನೂ ಅವರು ಅನಿಷ್ಟವೆಂದು ಭಾವಿಸಿರಲಿಲ್ಲ. ತಮ್ಮನ್ನೂ (ಭಾರತೀಯರನ್ನೂ) ಸಮಾನರೆಂದು ಭಾವಿಸಬೇಕೆಂಬುದಷ್ಟೇ ಅವರ ಅಪೇಕ್ಷೆಯಾಗಿತ್ತು. ಯಾರೇ ಆಗಲಿ, ಗುಲಾಮರಾಗಿ ಬಾಳುವುದು ಅವರಿಗೆ ಸೇರುತ್ತಿರಲಿಲ್ಲ.

ಅಂಥ ಹಿರಿಯ ದೇಶಭಕ್ತರ ಪುಣ್ಯತಿಥಿಯನ್ನು ನಾವು ಆಚರಿಸುತ್ತಿದೇವೆ. ಅಂಥ ಪುರುಷರ ದೇಹ ಇರಲಿ, ಇಲ್ಲದಿರಲಿ-ಅದು ದೇಶಸೇವೆಯನ್ನು ಮಾಡುತ್ತಲೇ ಇರುತ್ತದೆ; ದೇಶವನ್ನು ಮುಂಬರಿಸುತ್ತಲೇ ಇರುತ್ತದೆ. ಯಾರು ತಮ್ಮ ಕಾರ್ಯದ ರೂಪ–ರೇಖೆಯನ್ನು ತಯಾರಿಸಿಯೇ ಇದ್ದರೋ, ಯಾರು ನಲವತ್ತೈದು ವರುಷಗಳ ಕಾಲ ಕೆಲಸಮಾಡಿದ್ದರೋ, ಯಾರು ತಮ್ಮ ದೇಹವನ್ನು ದೇಶಸೇವೆಗಾಗಿಯೇ ಅರ್ಪಣೆ ಮಾಡಿದ್ದರೋ ಅಂಥವರ ದೇಹ ನಾಶವಾಗಿದ್ದರೆ ತಾನೆ ಏನು, ಅವರ ಸ್ಮರಣೆ ಎಂದಿಗೂ ಅಳಿಯುವುದಿಲ್ಲ; ಅವರ ಸಾವು ಎಂದಿಗೂ ಆಗುವುದಿಲ್ಲ. ಅಂತಲೇ, ಲೋಕಮಾನ್ಯರು ನಿಧನಹೊಂದಿಯೂ ನಮಗೆ ಜೀವನದ ಮಂತ್ರವನ್ನು ಕಲಿಸಿಕೊಟ್ಟದ್ದಾರೆ.**

'ಶಠಂ ಪ್ರತಿ ಶಾಠ್ಯಮ್'—ಎಂಬುದು ತಿಲಕರ ಸಿದ್ಧಾಂತವಾಗಿತ್ತು ಎಂಬುದಾಗಿ ಜನರ ಭಾವನೆ. ಆ ಸಿದ್ಧಾಂತ ಅವರ ಜೀವನದಲ್ಲಿ ಎಷ್ಟರ ಮಟ್ಟಿಗೆ ಕಂಡುಬರುತ್ತದೆ ಎಂಬುದೇ ನಿಮ್ಮ ಪ್ರಶ್ನೆ. ಈ ಪ್ರಶ್ನೆಯಲ್ಲಿ ನನಗೆ ಅಷ್ಟೇನೂ ಸಾರವಿದ್ದಂತೆ ತೋರುವುದಿಲ್ಲ. ಈ ವಿಷಯದಲ್ಲಿ ಹಲವು ದಿನಗಳವರೆಗೆ ಅವರೊಡನೆ ನಾನು ಪತ್ರವ್ಯವಹಾರ ಮಾಡಿದ್ದುದು ನಿಜ. ಅವರ ಜೀವನವನ್ನು ಅಭ್ಯಸಿಸಿರುವ ನಮ್ರ ವಿದ್ಯಾರ್ಥಿಯಾಗಿ, ಅವರ ಗುಣಗಳ ಪೂಜಕನಾಗಿ, ಅವರಲ್ಲಿ ವಿನೋದ ಶಕ್ತಿ ಇದ್ದಿತೆಂದು ಹೇಳಬಲ್ಲೆ. ವಿನೋದ ಎಂಬುದಕ್ಕೆ ಇಂಗ್ಲೀಷಿನಲ್ಲಿ 'ಹ್ಯೂಮರ್' (Humour) ಎಂಬ ಶಬ್ದವಿದೆ. ಈವರೆಗೆ ನಾವು ವಿನೋದ ಎಂಬ ಶಬ್ದವನ್ನು ಆ ಅರ್ಥದಲ್ಲಿ ಬಳಸಿಲ್ಲ. ಅಂತಲೇ, ಇಂಗ್ಲೀಷ್ ಶಬ್ದ ಉಪಯೋಗಿಸಿ ಅರ್ಥ ತಿಳಿಸಬೇಕಾಗಿದೆ. ಲೋಕಮಾನ್ಯರಲ್ಲಿ ವಿನೋದ ಶಕ್ತಿ ಇರದೆ ಇದ್ದಿದ್ದರೆ, ರಾಷ್ಟ್ರದ ಭಾರಿ ಹೊರೆಯನ್ನು ಹೊತ್ತಿದ್ದ ಅವರು ಹುಚ್ಚರೇ ಆಗಿಬಿಡುತ್ತಿದ್ದರು. ತಮ್ಮ ವಿನೋದ ಪ್ರಿಯತೆಯ ದೆಸೆಯಿಂದ ಅವರು ಸ್ವತಃ ತಮ್ಮ ರಕ್ಷಣೆ ಮಾಡಿಕೊಳ್ಳುತ್ತಿದ್ದುದಲ್ಲದೆ, ಇತರರನ್ನೂ ವಿಷಮ ಸ್ಥಿತಿಯಿಂದ ಪಾರುಮಾಡುತ್ತಿದ್ದರು. ಎರಡನೆಯದಾಗಿ, ಅವರು ವಾದ ವಿವಾದ ಮಾಡುವಾಗ ಬೇಕೆಂತಲೇ ಅತ್ಯುಕ್ತಿಯನ್ನು ಬಳಸಿ ಕೆಲಸ ನಿರ್ವಹಿಸುತ್ತಿದ್ದುದನ್ನು ನಾನು ನೋಡಿದೇನೆ. ಸದ್ಯದ ಪ್ರಶ್ನೆಯ ಸಂಬಂಧದಲ್ಲಿ ಅವರೊಡನೆ ನಾನು ನಡೆಸಿದ್ದ ಪತ್ರವ್ಯವಹಾರ ನನಗೆ ಸರಿಯಾಗಿ ನೆನಪಿಲ್ಲ. 'ಶಠಂ ಪ್ರತಿ ಶಾಠ್ಯಮ್'—ತಿಲಕರ ಜೀವನ ಮಂತ್ರ ಆಗಿರಲಿಲ್ಲ. ಹಾಗಿದ್ದಲ್ಲಿ ಅವರು ಇಷ್ಟೊಂದು ಜನ ಪ್ರಿಯತೆಯನ್ನು ಗಳಿಸಲು ಆಗುತ್ತಿರಲಿಲ್ಲ. ಇಡೀ ಪ್ರಪಂಚದಲ್ಲಿ ಯಾವನೇ ವ್ಯಕ್ತಿ ಆ ಸಿದ್ಧಾಂತದಮೇಲೆ ತನ್ನ ಜೀವನವನ್ನು ರೂಪಿಸಿಕೊಂಡು ಲೋಕಮಾನ್ಯನಾಗಿರುವ ಒಂದಾದರೂ ಉದಾಹರಣೆಯನ್ನು ನಾನು ಕಂಡಿಲ್ಲ. ಈ ವಿಷಯದಲ್ಲಿ ನನ್ನಷ್ಟು ಗಹನವಾಗಿ ಅವರು ವಿಚಾರ ಮಾಡುತ್ತಿರಲಿಲ್ಲವೆಂಬುದು ನಿಜ. ನಾವು 'ಶಠಂ ಪ್ರತಿ ಶಾಠ್ಯಮ್'—ತತ್ವವನ್ನು ಪ್ರಯೋಗಿಸಲು ಶಕ್ಯವೇ ಇಲ್ಲ. 'ಗೀತಾರಹಸ್ಯ'ದಲ್ಲಿ ಕೇವಲ ಒಂದೆರಡು ಸ್ಥಳಗಳಲ್ಲಿ ಈ ಬಗೆಗೆ ಸ್ವಲ್ಪ ಸಮರ್ಥನೆಯೇನೋ ಕಂಡುಬರುತ್ತದೆ. ರಾಷ್ಟ್ರಹಿತದ ಸಲುವಾಗಿ ಶಾಠ್ಯದಿಂದ ಬೇರೆ

ಮಾತುಗಳಲ್ಲಿ 'ಮುಯ್ಯಿಗೆ ಮುಯ್ಯಿ'—ಸಿದ್ಧಾಂತದಿಂದ ಕೆಲಸ ಸಾಧಿಸಬೇಕಾಗಿ ಬಂದರೆ, ಹಾಗೆ ಮಾಡಬಹುದು ಎಂಬುದು ಅವರ ನಿಶ್ಚಿತಾಭಿಪ್ರಾಯವಾಗಿತ್ತು. ಹಾಗೆಯೇ ಶಠದ ಮುಂದೆ ಸತ್ಯದ ಪ್ರಯೋಗಮಾಡುವುದೂ ಒಳ್ಳೆಯದು—ಅದೇ ಸತ್ಯ ಸಿದ್ಧಾಂತ ಎಂಬುದಾಗಿಯೂ ಅವರು ಒಪ್ಪುತ್ತಿದ್ದರು. ಆದರೆ, ಆ ಸಿದ್ಧಾಂತವನ್ನು ಅನುಸರಿಸಲು ಸಾಧುಗಳಿಗೆ ಮಾತ್ರ ಸಾಧ್ಯ ಎಂಬುಧಾಗಿಯೂ ಅವರು ಹೇಳುತ್ತಿದ್ದರು. ತಿಲಕರ ಸೂತ್ರಕ್ಕೆ ಅನುಸಾರವಾಗಿ ಸಾಧುಗಳೆಂದರೆ ಬೈರಾಗಿಗಳಲ್ಲ! ಪ್ರಪಂಚದಿಂದ ಅಲಿಪ್ತರಾಗಿರುವ, ಪ್ರಪಂಚದ ಹವ್ಯಾಸದಿಂದ ದೂರವಾಗಿರುವ ಜನ. ಈ ಪ್ರಪಂಚದಲ್ಲಿ ಇದ್ದುಕೊಂಡೇ ಯಾರಾದರೂ ಆ ಸಿದ್ಧಾಂತವನ್ನು ಅನುಸರಿಸಲು ಪ್ರಯತ್ನಿಸಿದರೆ ಅದು ಅನುಚಿತ ಎಂಬುದಾಗಿ ಆ ಮಾತಿನ ಅರ್ಥವಲ್ಲ. ಹಾಗೆ ಮಾಡಲಿಕ್ಕೆ ಆಗುವುದಿಲ್ಲ ಎಂಬ ಮಾತು ಬೇರೆ. ಶಾಠ್ಯದ ಪ್ರಯೋಗ ಮಾಡಲು ಮನುಷ್ಯನಿಗೆ ಅಧಿಕಾರವಿದೆ ಎಂಬುದು ಅವರ ಅಭಿಮತವಾಗಿತ್ತು.

ಅಂಥ ಮಹಾಪುರುಷರ ಜೀವನದ ಮೌಲ್ಯ ಮಾಪನ ಮಾಡುವ ಅಧಿಕಾರ ನಮಗಿರುವುದಾದರೆ, ವಿವಾದಾಸ್ಪದವಾದ ಅಂಶಗಳನ್ನು ತೆಗೆದುಕೊಂಡು ಮೌಲ್ಯ ಮಾಪನ ಮಾಡುವುದು ಬೇಡ. ಲೋಕಮಾನ್ಯರ ಜೀವನ ಭಾರತದ ಪಾಲಿಗೆ, ಸಮಸ್ತ ಪ್ರಪಂಚದ ಪಾಲಿಗೆ ಅಮೌಲ್ಯ ಕುಲಧನ. ಅದರ ಪೂರ್ಣ ಬೆಲೆ ಭವಿಷ್ಯದಲ್ಲೇ ನಿಶ್ಚಿತವಾದೀತು. ಅದರ ಮೌಲ್ಯಾಂಕನವನ್ನು ಇತಿಹಾಸವೇ ಮಾಡೀತು—ಮಾಡಲು ಶಕ್ಯ. ಜೀವಂತ ಮನುಷ್ಯನ ಸರಿಯಾದ ಮೌಲ್ಯವನ್ನು, ನಿಜವಾದ ಮಹತ್ವವನ್ನು ಆತನ ಸಮಕಾಲೀನರು ಎಂದಿಗೂ ಗೊತ್ತುಹಚ್ಚಲಾರರು. ಅವರು ಸ್ವಲ್ಪ ಪಕ್ಷಪಾತ ತೋರಿಯೇ ತೋರುವರು; ಕಾರಣ, ರಾಗ-ದ್ವೇಷಪೂರ್ಣರಾದ ವ್ಯಕ್ತಿಗಳೇ ಆ ಕೆಲಸ ಮಾಡುವವರಾಗಿರುತ್ತಾರೆ. ನಿಜ ಹೇಳುವುದಾದರೆ, ಇತಿಹಾಸಕಾರರೂ ರಾಗ-ದ್ವೇಷರಹಿತರಾಗಿರುವುದು ಕಂಡುಬಂದಿಲ್ಲ. ಗಿಬನ್ ಓರ್ವ ಪ್ರಾಮಾಣಿಕ ಇತಿಹಾಸಕಾರ ಎಂಬುದಾಗಿ ಪರಿಗಣಿಸಲ್ಪಟ್ಟಿದ್ದಾನೆ. ಆದರೆ, ಆತನ ಪುಸ್ತಕದ ಹಾಳೆ ಹಾಳೆಗಳಲ್ಲೂ ಪಕ್ಷಪಾತ ಎದ್ದು ಕಾಣುತ್ತದೆ. ವಿಶಿಷ್ಟ—ವ್ಯಕ್ತಿ ಅಥವಾ ವಿಶಿಷ್ಟ—ಸಂಸ್ಥೆಯ ಬಗೆಗೆ ರಾಗ ಅಥವಾ ದ್ವೇಷ

ಪೂರಿತನಾಗಿ ಆತ ಅನೇಕ ಮಾತುಗಳನ್ನು ಬರೆದಿರಬೇಕು. ಸಮಕಾಲೀನ ವ್ಯಕ್ತಿಯಲ್ಲಿ ವಿಶೇಷ ಪಕ್ಷಪಾತ ಇರುವ ಸಂಭವವುಂಟು. ಲೋಕಮಾನ್ಯರ ಜೀವನದ ಶಾಶ್ವತ—ಸಿದ್ಧಾಂತಗಳನ್ನು ನೆನಪುಮಾಡಿಕೊಂಡು ಅವುಗಳನ್ನು ಅನುಸರಿಸೋಣ—ಅದೇ ಅವರ ಮಹಾನ್ ಜೀವನದ ಉಪಯೋಗ.

ತಿಲಕರ ದೇಶಪ್ರೇಮ ಅಚಲವಾದುದು. ಜತೆಗೆ ಅವರಲ್ಲಿ ತೀಕ್ಷ್ಣವಾದ ನ್ಯಾಯವೃತ್ತಿಯೂ ಇತ್ತು. ಆ ಗುಣದ ಪರಿಚಯು ನನಗೆ ಸಹಜವಾಗಿಯೇ ಆಗಿತ್ತು. ೧೯೧೭ ರಲ್ಲಿ ಕಲ್ಕತ್ತೆಯ ಕಾಂಗ್ರೆಸ್ ಮಹಾ ಸಭೆಯ ಸಮಯ ದಲ್ಲಿ ಹಿಂದೀ ಸಾಹಿತ್ಯ ಸಮ್ಮೇಳನದ ಸಭೆಗೂ ಅವರು ಬಂದಿದ್ದರು. ಮಹಾ ಸಭೆಯ ಕೆಲಸದಲ್ಲಿ ಅವರಿಗೆ ಬಿಡುವು ಸಿಕ್ಕುವುದೆಂದರೇನು? ಹೇಗೋ ಸಭೆಗೆ ಬಂದು ಭಾಷಣ ಮಾಡಿ ಹೋದರು. ರಾಷ್ಟ್ರ ಭಾಷೆಯಾದ ಹಿಂದಿಯ ಬಗೆಗೆ ಅವರಿಗೆ ಎಷ್ಟು ಪ್ರೇಮವಿದ್ದಿತೆಂಬುದನ್ನು ಆಗಲೇ ಕಂಡೆ. ಅದಕ್ಕಿಂತ ಹೆಚ್ಚಾಗಿ ನಾನು ಅವರಲ್ಲಿ ಕಂಡ ಮಾತೆಂದರೆ, ಆಂಗ್ಲೇಯರ ಬಗೆಗೆ ಅವರಿಗಿದ್ದ ನ್ಯಾಯ—ವೃತ್ತಿ. ಅವರು ತಮ್ಮ ಭಾಷಣವನ್ನು ಹೀಗೆಯೇ ಆರಂಭಿಸಿದ್ದರು—"ನಾನು ಆಂಗ್ಲ—ಶಾಸನವನ್ನು ಕಟುವಾಗಿ ನಿಂದಿಸುತ್ತೇನೆ. ಆದರೆ, ಆಂಗ್ಲ ವಿದ್ವಾಂಸರು ನಮ್ಮ ಭಾಷೆಗೆ ಮಾಡಿರುವ ಸೇವೆಯನ್ನು ನಾವು ಎಂದಿಗೂ ಮರೆಯಲಾರೆವು." ಅವರ ಅರ್ಧ ಭಾಷಣ ವೆಲ್ಲ ಇಂಥ ಮಾತುಗಳಿಂದಲೇ ತುಂಬಿತ್ತು. ಕೊನೆಗೆ ಅವರು ಹೀಗೆ ಹೇಳಿದರು—'ನಾವು ರಾಷ್ಟ್ರ ಭಾಷೆಯ ಕ್ಷೇತ್ರವನ್ನು ಗೆಲ್ಲಬೇಕಾದರೆ, ಅದನ್ನು ಬೆಳೆಸಬೇಕಾದರೆ, ನಾವೂ ಆಂಗ್ಲ—ವಿದ್ವಾಂಸರಂತೆಯೇ ಪರಿಶ್ರಮ ಹಾಗೂ ಅಭ್ಯಾಸ ಮಾಡಬೇಕು. ನಮ್ಮ ಲಿಪಿಯ ರಕ್ಷಣೆ ಹಾಗೂ ವ್ಯಾಕರಣದ ವ್ಯವಸ್ಥೆಯ ಸಂಬಂಧದಲ್ಲಿ ನಾವು ಆಂಗ್ಲ—ವಿದ್ವಾಂಸರಿಗೆ ಬಹುಮಟ್ಟಿಗೆ ಆಭಾರಿಗಳು. ಪ್ರಾರಂಭದಲ್ಲಿ ಬಂದ ಪಾದರಿಗಳಿಗೆ ಪರಭಾಷೆಯ ಮೇಲೆ ಪ್ರೇಮವಿತ್ತು. ಗುಜರಾತಿಯಲ್ಲಿ ಟೈಲರ್ ಅವರು ರಚಿಸಿರುವ ವ್ಯಾಕರಣ ಅಂಥಿಂಥ ವಸ್ತುವಲ್ಲ,' ಆಂಗ್ಲೇಯರನ್ನು ಪ್ರಶಂಸಿಸುವುದರಿಂದ ತಮ್ಮ ಜನ—ಪ್ರಿಯತೆ ಕಡಿಮೆಯಾಗುವುದೆಂಬ ವಿಚಾರವೇ ಅವರ ಮನಸ್ಸಿಗೆ ಬರಲಿಲ್ಲ. ಅವರು ಆಂಗ್ಲೇಯರ ನಿಂದೆಯನ್ನು ಮಾತ್ರವೇ ಮಾಡಬಲ್ಲರೆಂಬ ಭಾವನೆ ಮುಂದಿಗಿತ್ತು.

ತಿಲಕರಲ್ಲಿದ್ದ ತ್ಯಾಗವೃತ್ತಿಯಲ್ಲಿ ನೂರರಲ್ಲೊಂದು ಪಾಲು, ಸಾವಿರದ ಲ್ಲೊಂದು ಪಾಲು ಕೂಡ ನಮ್ಮಲ್ಲಿ ಕಂಡುಬರುವುದಿಲ್ಲ. ಇನ್ನು ಅವರ ಸರಳತೆಯೋ ?.ಅವರ ಕೋಣೆಯಲ್ಲಿ ಯಾವುದೇ ರೀತಿಯ ಪೀಠೋಪಕರಣ ಯಾವುದೇ ವಿಶಿಷ್ಟ ಅಲಂಕಾರ ಇರುತ್ತಿರಲಿಲ್ಲ. ಅಪರಿಚಿತರಿಗೆ ಅದು ಮಹಾ ಪುರುಷನೊಬ್ಬನ ನಿವಾಸಸ್ಥಾನ ಎಂಬ ಕಲ್ಪನೆ ಬರುವುದೂ ಶಕ್ಯವಿರಲಿಲ್ಲ. ಕಣ—ಕಣಗಳಲ್ಲಿ ತುಂಬಿರುವ ಅವರ ಸರಳತೆಯನ್ನು ನಾವು ಅನುಸರಿಸಿದರೆ, ಎಷ್ಟು ಚೆಂದ? ಅವರ ಧೈರ್ಯವಂತೂ ಅದ್ಭುತ. ತಮ್ಮ ಕರ್ತವ್ಯದಲ್ಲಿ ಅವರು ನಿಶ್ಚಿಲರು; ಎಂದಿಗೂ ಅದನ್ನು ಮರೆಯುತ್ತಿರಲಿಲ್ಲ. ಧರ್ಮಪತ್ನಿಯ ಮರಣದ ಸುದ್ದಿ ಕೇಳಿದಮೇಲೂ, ಅವರ ಲೇಖನಿ ಓಡುತ್ತಲೇ ಇತ್ತು........ ತಿಲಕರು ತಮ್ಮ ಜೀವನದ ಒಂದು ಕ್ಷಣವನ್ನಾದರೂ ಭೋಗ ವಿಲಾಸದಲ್ಲಿ ಕಳೆದುದನ್ನು ಕಾಣಲು ಸಾಧ್ಯವೆ? ಅವರಲ್ಲಿ ಸಹಿಷ್ಣುತೆ ಇತ್ತು. ಅಂದರೆ, ಎಷ್ಟೇ ಉದ್ದಂಡನಾದ ಮನುಷ್ಯನಿಂದಲಾದರೂ ಕೆಲಸ ಮಾಡಿಸಿಕೊಳ್ಳು ತ್ತಿದ್ದರು. ಲೋಕನಾಯಕರಲ್ಲಿ ಅಂಥ ಶಕ್ತಿ ಇರಬೇಕು, ಅದರಿಂದ ಹಾನಿಯೇನೂ ಆಗದು. ಇಂಥ ಮನುಷ್ಯನಿಂದ ಕೆಲಸಮಾಡಿಸಿಕೊಳ್ಳ ಬಾರದು ಎಂಬ ಸಂಕುಚಿತ ಮನಸ್ಸು ನಮಗೆ ಬಂದರೆ, ಇಲ್ಲವೇ ಕಾಡಿನಲ್ಲಿ ಹೋಗಿ ಇರಬೇಕು ; ಇಲ್ಲವೆ ಮನೆಯಲ್ಲಿ ಕುಳಿತು ಗೃಹಸ್ಥ ಜೀವನ ನಡೆಸ ಬೇಕು. ಅಂತೂ ಒಂದು ಮಾತು—ಸ್ವತಃ ಅಲಿಪ್ತರಾಗಿರಬಲ್ಲವರಾಗ ಬೇಕು.

ತಿಲಕರನ್ನು ಕೇವಲ ಬಾಯಿಂದ ಹೊಗಳಿ, ಸುಮ್ಮನೆ ಕೂಡಬಾರದು. ಕೆಲಸ-ಕೆಲಸ-ಕೆಲಸವೇ ನಮ್ಮ ಜೀವನದ ಸೂತ್ರವಾಗಬೇಕು. ಸ್ವರಾಜ್ಯ -ಯಜ್ಞವನ್ನು ನಡೆಸಿಕೊಂಡುಹೋಗಲು ಬಯಸುವಾಗ ಅಪ್ರಯೋಜಕ ವಾದ ಸಾಹಿತ್ಯ ಓದುವುದನ್ನು ನಾವು ನಿಲ್ಲಿಸಬೇಕು. ನಿರರ್ಥಕವಾದಮಾತು ಆಡುವುದನ್ನು ಬಿಡಬೇಕು. ನಮ್ಮ ಜೀವನದ ಒಂದೊಂದು ಕ್ಷಣವನ್ನೂ ಸ್ವರಾಜ್ಯದ ಕೆಲಸಕ್ಕಾಗಿಯೇ ವಿನಿಯೋಗಿಸಬೇಕು. ಓದುವುದನ್ನು ಬಿಟ್ಟು ಈ ಕೆಲಸ ಮಾಡಬೇಕೆ—ಎಂದು ಕೇಳುವಿರೇನೋ? ೧೯೨೧ರಲ್ಲೂ ವಿದ್ಯಾರ್ಥಿಗಳೊಡನೆ ಈ ವಿಷಯದಲ್ಲೇ ನನ್ನ ಜಗಳ ನಡೆದಿತ್ತು. ತಿಲಕರು ಏನು ಮಾಡಿದರು? ಅವರು ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದುದು

ಹೊರಗಿದ್ದುಕೊಂಡಲ್ಲ, ಜೈಲಿನಲ್ಲಿ. 'ಗೀತಾರಹಸ್ಯ' ಹಾಗೂ 'ಆರ್ಕ್‌ಟಿಕ್ ಹೋಮ್' ಗ್ರಂಥಗಳನ್ನು ಅವರಿಗೆ ಜೈಲಿನಲ್ಲಿಯೇ ಬರೆಯಲು ಸಾಧ್ಯ ವಾಯಿತು. ದೊಡ್ಡ ದೊಡ್ಡ ಮೌಲಿಕ ಗ್ರಂಥಗಳನ್ನು ಬರೆಯುವ ಶಕ್ತಿ ಯಿದ್ದರೂ, ದೇಶದ ಸಲುವಾಗಿ ಅದನ್ನು ಬಲಿದಾನ ಮಾಡಿದರು. 'ಮನೆಯ ನಾಲ್ಕು ಕಡೆ ಬೆಂಕಿ ಹತ್ತಿಕೊಂಡಿದೆ; ನನ್ನ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಅದನ್ನು ಆರಿಸುವೆನು'— ಎಂಬುದಾಗಿ ಅವರು ವಿಚಾರ ಮಾಡಿದರು. ಅವರು ಸಾವಿರ ಬಿಂದಿಗೆ ನೀರು ಹಾಕಿ, ಅದನ್ನು ಆರಿಸಿದ್ದರೆ, ನಾವು ಒಂದು ಬಿಂದಿಗೆ ನೀರಾದರೂ ಹಾಕೋಣ–ಅಂತೂ ಹಾಕಿದರೆ ಸರಿ. ಓದು ಮೊದ ಲಾದುವು ಆವಶ್ಯಕವೇ ಆದರೂ, ಗೌಣ ವಿಷಯಗಳು. ಸ್ವರಾಜ್ಯ ಸಾಧನೆಗೆ ಅವು ಉಪಯೋಗವಾದರೆ, ಮಾಡಬೇಕು; ಇಲ್ಲದಿದ್ದರೆ ಅವುಗಳಿಗೆ ತಿಲಾಂಜಲಿ ಕೊಟ್ಟುಬಿಡಬೇಕು. ಅದರಿಂದ ನಮಗೂ ನಷ್ಟವಿಲ್ಲ; ಪ್ರಪಂಚಕ್ಕೂ ನಷ್ಟವಿಲ್ಲ.

ತಿಲಕರು ತಮ್ಮ ಜೀವನದ ಮೂಲಕವೇ ಪ್ರತ್ಯಕ್ಷ ನಿದರ್ಶನವನ್ನು ತೋರಿಹೋಗಿದಾರೆ. ಯಾರ ಜೀವನದಲ್ಲಿ ಇಷ್ಟೊಂದು ಗ್ರಹಿಸಲು ಯೋಗ್ಯವಾದ ವಿಷಯಗಳಿವೆಯೋ, ಯಾರ ಕುಲಧನ ಇಷ್ಟು ಪ್ರಬಲ ವಾಗಿದೆಯೋ ಅವರ ವಿಷಯದಲ್ಲಿ ಮೇಲಿನ ಪ್ರಶ್ನೆಗೆ ಅವಕಾಶವೇ ಇಲ್ಲ. ಗುಣಗ್ರಾಹಿಗಳಾಗುವುದೇ ನಮ್ಮ ಧರ್ಮ.

ನಾವು ಮಾಡಬೇಕಾಗಿರುವ ಕೆಲಸ ಸತ್ವಹೀನ ಜನರಿಂದ ಆಗತಕ್ಕು ದಲ್ಲ. ಸ್ವರಾಜ್ಯದ ಕೆಲಸ ಕಠಿಣ. ಭಾರತದಲ್ಲಿ ಇಂದು ಒಂದು ಅಲೆ ಎದ್ದಿದೆ. ಅದರ ಸೆಳತಕ್ಕೆ ಸಿಕ್ಕಿ ನಾವು ಭಾಷಣಗಳನ್ನು ಬಿಗಿಯುತ್ತೇವೆ; ಬಿರುಗಾಳಿ ಎಬ್ಬಿಸುತ್ತೇವೆ, ಸ್ವೇಚ್ಛೆಯಾಗಿ ಸಂಸ್ಥೆಗಳಿಗೆ ನುಗ್ಗುತ್ತೇವೆ ಮತ್ತೆ ಅವುಗಳನ್ನು ನಾಶಮಾಡಿ, ಶಾಸನ ಸಭೆಗಳಿಗೆ ಹೋಗಿ ಭಾಷಣ ಮಾಡುತ್ತೇವೆ. ತಿಲಕರ ಜೀವನದಲ್ಲಿ ಇಂಥ ವಿಷಯಗಳಾವುವೂ ನೋಡಲು ಸಿಕ್ಕುವುದಿಲ್ಲ. ಅವರ ಜೀವನದಲ್ಲಿಯ ಅನುಕರಣೀಯವಾದ ಗುಣ ಗಳಾವುವೆಂಬುದನ್ನು ಮೇಲೆ ತಿಳಿಸಿಯೇ ಇದ್ದೇನೆ.೫೪

ಶ್ರೀಮತಿ ತಾರಾ ಬಹನ್

ಮಿಸ್ ಮೇರಿ ಚೆಸ್ಲೆ ಎಂಬ ಹೆಸರಿನ ಆಂಗ್ಲ—ಮಹಿಳೆಯೊಬ್ಬಳು ೧೯೩೪ರ ರಲ್ಲಿ ಭಾರತಕ್ಕೆ ಬಂದಳು. ಆಗ ಬೊಂಬಾಯಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುತ್ತಿತ್ತು. ಜಹಜಿನಿಂದ ಇಳಿದವಳೇ ಆಕೆ ಕಾಂಗ್ರೆಸ್—ಶಿಬರವನ್ನು ಸೇರಿ, ನನ್ನ ಕುಟೀರಕ್ಕೆ—ಬಂದು ಹೇಳಿದಳು: "ನನಗೆ ಮೀರಾ ಬಹನ್ ಗೊತ್ತು. ನಾನು ಆಕೆಯ ಜತೆಯಲ್ಲೇ ಇಲ್ಲಿಗೆ ಬರುವವಳಿದ್ದೆ. ಆದರೆ, ಕಾರಣಾಂತರದಿಂದ ಒಂದು ವಾರ ಮುಂಚಿತ ವಾಗಿಯೇ ವಿಲಾಯತಿಯಿಂದ ಹೊರಟುಬಿಟ್ಟೆ" ಹಳ್ಳಿಗಳಲ್ಲಿ ನೆಲೆಸಿ ಭಾರತದ ಸೇವೆ ಮಾಡುವ ಇಚ್ಛೆ ಆಕೆಗೆ. ಆಕೆಯ ಮಾತುಕತೆಯಿಂದ ನಾನು ವಿಶೇಷ ಪ್ರಭಾವಿತನೇನೂ ಆಗಲಿಲ್ಲ. ಆಕೆ ಹಲವು ತಿಂಗಳುಗಳಿಗಿಂತ ಹೆಚ್ಚಾಗಿ ಭಾರತದಲ್ಲಿ ನೆಲೆಸುವವಳಲ್ಲವೆಂದು ನನಗೆ ಅನಿಸಿತು. ಆದರೆ ನನ್ನ ಎಣಿಕೆ ತಪ್ಪಾಯಿತು. ಮಧ್ಯ ಪ್ರದೇಶದ ಬೇತೂಲಕ್ಕೆ ಸ್ವಲ್ಪ ದೂರದಲ್ಲಿದ್ದ ಖೇಡಿ ಗ್ರಾಮದಲ್ಲಿ ಮೊದಲೇ ಕೆಲಸ ಆರಂಭಿಸಿದ್ದ ಮೇರಿ ಬಾರ್‌ಳ ಪರಿಚಯವೂ ಈಕೆಗೆ ಇತ್ತು. ಮೇರಿ ಬಾರ್ ಮಿಸ್ ಚೆಸ್ಲೆಯನ್ನು ವರ್ಧಾಕ್ಕೆ ಕರೆತಂದಳು. ನಾವೆಲ್ಲರೂ ಕೆಲಕಾಲ ಜತೆಯಲ್ಲಿಯೇ ಇದ್ದೆವು. ಮಿಸ್ [ಕುಮಾರಿ] ಚೆಸ್ಲೆಯ ಸಂಕಲ್ಪ ಕಂಡು ನಾನು ಚಕಿತನಾದೆ. ಮೇರಿ ಬಾರಳೊಡನೆ ಆಕೆ ಖೇಡಿ ಗ್ರಾಮದಲ್ಲಿ ಗ್ರಾಮ ಸೇವಾ ಕಾರ್ಯವನ್ನು ಆರಂಭಿಸಿ ದಳು. ಭಾರತೀಯ ಉಡುಪು ಧರಿಸಿ, ತಾರಾ ಬಹನ್ ಎಂದು ಹೆಸರಿಟ್ಟು ಕೊಂಡಳು. ಖೇಡಿಯಲ್ಲಿ ಆಕೆ ಮಾಡಿದ ಉಗ್ರ ಪರಿಶ್ರಮ ಕಂಡು ಬಡ ಪಾಯಿ ಬಾರಳು ಕಕ್ಕಾಬಿಕ್ಕಿಯಾದಳು. ಮಣ್ಣು ಅಗೆಯವುದು, ತಲೆಯ ಮೇಲೆ ಮಣ್ಣಿನ ಮಂಕರಿ ಹೊರುವುದು – ಎಲ್ಲವನ್ನೂ ಮಾಡುತ್ತಿದ್ದಳು. ಭೋಜನವನ್ನೂ ತೀರ ಸಾದಾ ಮಾಡಿಕೊಂಡಳು; ಅದರಿಂದ ಆಕೆಯ ಆರೋಗ್ಯ ಕೂಡ ಕೆಟ್ಟು ಹೋಯಿತು. ಕೆನಡಾದಿಂದ ಆಕೆಗೆ ಬೇಕಾದಷ್ಟು ಹಣ ಬರುತ್ತಿತ್ತು; ಆದರೆ ತನ್ನ ಸಲುವಾಗಿ ಕೇವಲ ೧೦ ರೂಪಾಯಿ ಇಟ್ಟುಕೊಂಡು, ಉಳಿದುದನ್ನೆಲ್ಲ ಗ್ರಾಮೋದ್ಯೋಗ ಸಂಘಕ್ಕೆ ಕೊಟ್ಟು ಬಿಡುತ್ತಿದ್ದಳು; ಇಲ್ಲವೆ ಯಾರೊಡನೆ ಪರಿಚಯವಾಗುತ್ತಿತ್ತೋ, ಯಾರು

ಮುಂದೆ ಗ್ರಾಮ ಸೇವಕರಾಗುವರೆಂದು ಆಕೆಗೆ ಅನಿಸುತ್ತಿತ್ತೋ ಹಾಗೂ ಹಣದ ಆವಶ್ಯಕತೆ ಇರುತ್ತಿತ್ತೋ ಅಂಥವರಿಗೆ ಕೊಡುತ್ತಿದ್ದಳು. ಆಕೆ ಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದೆ. ಆಕೆಯ ಔದಾರ್ಯಕ್ಕೆ ಪಾರವೇ ಇರಲಿಲ್ಲ. ಮಾನವ ಸ್ವಭಾವದ ಸೌಜನ್ಯದಲ್ಲಿ ಆಕೆಗೆ ಬಹಳ ಶ್ರದ್ಧೆಯಿತ್ತು. ತಪ್ಪುಗಳನ್ನು ಮರೆತು ಬಿಡುವ ಪ್ರಕೃತಿ ಆಕೆಯದು. ನಿಜವಾದ ಕ್ರೈಸ್ತಳು ಆಕೆ. ಕ್ವೇಕರ್ ಸಂಪ್ರದಾಯದವಳಾದರೂ, ಸಂಕೀರ್ಣತೆ ಎಂಬುದು ಆಕೆಯಲ್ಲಿ ಇರಲಿಲ್ಲ. ಬೇರೆಯವರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳು ವುದರಲ್ಲಿ ಆಕೆಗೆ ನಂಬಿಕೆ ಇರಲಿಲ್ಲ. ಆಕೆ "ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್" ನ ಪದವೀಧರಳು ; ಒಳ್ಳೆ ಶಿಕ್ಷಕಿ. ಲಂಡನ್‌ನಲ್ಲಿ ಅನೇಕ ವರುಷಗಳ ವರೆಗೆ ಆಕೆ ಒಂದು ಶಾಲೆಯನ್ನು ನಡೆಸುತ್ತಿದ್ದಳು. ಹಿಂದಿ ಕಲಿಯಬೇಕೆಂದು ಅನಿಸಿ, ನಿಯಮ ಪೂರ್ವಕವಾಗಿ ಅದರ ಅಭ್ಯಾಸವನ್ನು ಆರಂಭಿಸಿದಳು. ಮಾತನಾಡುವ ಹಿಂದಿ ಕಲಿಯಲಿಕ್ಕೆಂದು ಕೆಲವು ತಿಂಗಳು ವರ್ಧಾ—ಮಹಿಳಾಶ್ರಮಕ್ಕೆ ಬಂದು ಇದ್ದಳು. ಅಲ್ಲಿದ್ದಾಗಲೇ ಇಬ್ಬರು ಸಹೋದರಿಯರೊಡನೆ ಬೇಸಗೆಯಲ್ಲಿ ಬದರಿ—ಕೇದಾರಕ್ಕೆ ಹೋಗುವ ವಿಚಾರ ಮಾಡಿದಳು. ನಾನು ಆಕೆಗೆ ಆ ಅಪಾಯಕರವಾದ ಯಾತ್ರೆಯ ಬಗೆಗೆ ತಿಳಿಸಿ ಹೇಳಿದ್ದೆ. ಆದರೆ ಆಕೆ ಒಮ್ಮೆ ನಿರ್ಧಾರ ಮಾಡಿಬಿಟ್ಟಳೆಂದರೆ, ಅಂಥ ಸಾಹಸ ಕಾರ್ಯಗಳಿಂದ ಆಕೆಯನ್ನು ವಿಮುಖಗೊಳಿಸುವುದು ಕಷ್ಟ ವಾಗುತ್ತಿತ್ತು. ಆಕೆಗೆ, ಬದರಿ—ಕೇದಾರದ ಭಯಾನಕ ಯಾತ್ರೆಯನ್ನು ಮಾಡಲೇ ಬೇಕಿತ್ತು. ಇಬ್ಬರು ಸಖಿಯರೊಡನೆ ಹೊರಟಳು. ನನಗೆ ಮೇ ೧೫ ಕ್ಕೆ ಕನಖಲದಿಂದ ಸಂಕ್ಷಿಪ್ತವಾದ ತಂತಿ ಬಂತು : "ತಾರಾ ಬಹನ್ ತೀರಿಕೊಂಡಳು."

ಹಿಂದೂಸ್ಥಾನದ ಹಳ್ಳಿಗಳ ಬಗೆಗೆ ಆಕೆಯ ಹೃದಯದಲ್ಲಿದ್ದ ಪ್ರೇಮ ವನ್ನು ವಿವಾರಿಸಬಲ್ಲವರು ಯಾರು ? ಹಿಂದೂಸ್ಥಾನದ ಸ್ವಾತಂತ್ರ್ಯದ ಬಗೆಗೆ ನಮ್ಮಲ್ಲಿ ಅತೀವ ಒಳ್ಳೆಯವರು ಅನಿಸಿಕೊಂಡವರಿಗೆ ಇರುವಷ್ಟೇ ಉತ್ಸಾಹ ಆಕೆಗೂ ಇತ್ತು. ವರ್ಗ ಭೇದ ಕಂಡರೆ ಆಕೆಗೆ ಸಹಿಸುತ್ತಿದ್ದಿಲ್ಲ. ಬಡ ಸ್ತ್ರೀಯರು ಹಾಗೂ ಮಕ್ಕಳೊಡನೆ ನೋಡಿದೊಡನೆಯೇ ಹೊಂದಿಕೊಳ್ಳು ವಷ್ಟು ಧಾರಾಳವಾಗಿ ಬೆರೆಯುತ್ತಿದ್ದಳು. ಸೇವೆ ಮಾಡಿ ಯಾರಿಗೋ

ಉಪಕಾರ ಮಾಡುತ್ತಿದೇನೆ–ಎಂಬ ಭಾವನೆ ಆಕೆಗೆ ಇರಲೇ ಇಲ್ಲ. ಯಾರಿಂದಲೂ ಆಕೆ ಸೇವೆ ತಕ್ಕೊಳ್ಳಲಿಲ್ಲ; ಆದರೆ ಯಾರ ಸೇವೆಯನ್ನೇ ಆಗಲಿ ಅತೀವ ಉತ್ಸಾಹದಿಂದ ಮಾಡುತ್ತಿದ್ದಳು. ಅಹಂಕಾರಕ್ಕೆ ತಿಲಾಂಜಲಿ ಕೊಟ್ಟಿದ್ದಳು. ಆಕೆ ಎಂಥ ಮೂಕ-ಸೇವಿಕೆಯೆಂದರೆ, ಆಕೆಯ ಬಲಗೈ ಏನು ಕೆಲಸ ಮಾಡಿತೆಂಬುದು ಎಡಗೈಗೆ ಗೊತ್ತಾಗುತ್ತಿರಲಿಲ್ಲ. ದಿವಂಗತೆಯ ಆತ್ಮಕ್ಕೆ ಭಗವಂತ ಚಿರ ಶಾಂತಿ ನೀಡಲಿ.**

ಅಬ್ಬಾಸ್ ತ್ಯೈಯಬ್ಜಿ

೧೯೧೫ ರಲ್ಲಿ ಅಬ್ಬಾಸ್ ತ್ಯೈಯಬ್ಜಿಯವರನ್ನು ಮೊಟ್ಟಮೊದಲು ಭೇಟಿಯಾಗಿದ್ದೆ. ನಾನು ಹೋದ ಕಡೆಗಳಲ್ಲೆಲ್ಲ ತ್ಯೈಯಬ್ಜಿ—ಪರಿವಾರಕ್ಕೆ ಸೇರಿದ ಯಾರಾದರೊಬ್ಬರು ಬಂದು ನನ್ನನ್ನು ಭೇಟಿಯಾಗುತ್ತಲೇ ಇದ್ದರು. ನಾಲ್ಕು ಕಡೆ ಹಬ್ಬಿರುವ ಆ ದೊಡ್ಡ ಪರಿವಾರದವರು ಅಂಥದೊಂದು ನಿಯಮವನ್ನೇ ಮಾಡಿಕೊಂಡಿದ್ದಂತೆ ತೋರುತ್ತದೆ. ನನಗೆ ತಿಳಿದ ಮಟ್ಟಿಗೆ ನಮ್ಮ ನಡುವಣ ಅಚ್ಚಳಿಯದ ವಿಶ್ವಾಸಕ್ಕೆ ಕಾರಣವಿಷ್ಟೇ: ಯಾವ ಸುಪ್ರಸಿದ್ಧ ನ್ಯಾಯಾಧೀಶರ ಕಾರಣದಿಂದ ಆ ವಂಶ ಪ್ರಸಿದ್ಧವಾಗಿದೆಯೋ ಅವರೊಡನೆ ೧೮೯೦ ರಲ್ಲಿ ನನಗೆ ಸಖ್ಯ ಬೆಳೆಯಿತು. ಆಗ ನಾನು ದಕ್ಷಿಣ ಆಫ್ರಿಕೆಯಿಂದ ಹಿಂತಿರುಗಿದ್ದೆ; ತೀರ ಅಪರಿಚಿತ ವ್ಯಕ್ತಿಯೇ ಆಗಿದ್ದೆ. ಕೆಲವರಿಗೆ ಬಹುಶಃ ನಾನು ದುಸ್ಸಾಹಸಿಯಾದ ಮನುಷ್ಯ ಎಂಬ ಭಾವನೆಯಿತ್ತು. ಆದರೆ, ಬದುರುದ್ದೀನ್ ತ್ಯೈಯಬ್ಜಿ ಹಾಗೂ ಇನ್ನು ಕೆಲವರಿಗೆ ಆ ಭಾವನೆ ಇರಲಿಲ್ಲ,

ಆದರೆ ನಾನೀಗ ಬರೋಡೆಯ ಅಬ್ಬಾಸ್ ಮಿಯಾ ಅವರ ವಿಷಯವನ್ನೇ ಪ್ರಸ್ತಾಪಿಸಬೇಕು. ನಾವು ಪರಸ್ಪರ ಭೇಟಿಯಾದಾಗ ಅವರ ಮುಖವನ್ನು ನೋಡಿದರೆ ಸ್ವರ್ಗೀಯ ಜಸ್ಟಿಸ್ ಬದರುದ್ದೀನ್ ತ್ಯೈಯಬ್ಜಿ ಅವರ ನೆನಪೇ ಬರುತ್ತಿತ್ತು. ಆ ಭೆಟ್ಟಿಯ ದೆಸೆಯಿಂದ ನಮ್ಮ ನಡುವೆ ಆಜೀವ ಸ್ನೇಹ ಬೆಳೆಯಿತು. ಅವರು ಹರಿಜನರ ಮಿತ್ರರಷ್ಟೇ ಅಲ್ಲ, ಹರಿ

ಜನರಲ್ಲಿ ಒಬ್ಬರೇ ಆಗಿಹೋಗಿದ್ದರು. ಬಹು ದಿನಗಳ ಹಿಂದೆ ಗೋಧ್ರಾದಲ್ಲಿ ಹರಿಜನ ವಸತಿಯಲ್ಲಿ ನಡೆದ ಅಸ್ಪೃಶ್ಯತಾ ನಿರೋಧ ಸಮ್ಮೇಳನವೊಂದಕ್ಕೆ ನಾನು ಅವರನ್ನು ಕರೆದುಕೊಂಡು ಹೋದಾಗ, ಪ್ರೇಕ್ಷಕರಿಗೆ ಬಹಳ ಅಚ್ಚರಿ ಆಯಿತು. ಆದರೆ ಅಬ್ಬಾಸ್ ಮಿಯಾ ಅವರು ನಿಷ್ಠಾವಂತ ಹಿಂದು ವಹಿಸಬಹುದಾದಷ್ಟೆ ಉತ್ಸಾಹದಿಂದ ಹರಿಜನ ಕಾರ್ಯದಲ್ಲಿ ಭಾಗವಹಿಸು ತ್ತಿದ್ದರು. ಆದರೂ ಅವರೇನು ಸಾಮಾನ್ಯ ಮುಸಲ್ಮಾನರಾಗಿರಲಿಲ್ಲ. ಇಸ್ಲಾಂ ಗಾಗಿ ಅವರು ಧಾರಾಳವಾಗಿ ದಾನಮಾಡಿದರು; ಅನೇಕ ಮುಸ್ಲಿಮ್ ಸಂಸ್ಥೆಗಳಿಗೆ ಸಹಾಯ ಮಾಡುತ್ತಿದ್ದರು. ಆದರೆ ಹರಿಜನರನ್ನು ಮುಸಲ್ಮಾನ ರನ್ನಾಗಿ ಮಾಡುವಂಥ ವಿಚಾರ ಅವರ ಮನಸ್ಸಿನಲ್ಲಿ ಇರಲಿಲ್ಲ. ಅವರ ಇಸ್ಲಾಂಜನದಲ್ಲಿ ಭೂಮಂಡಲದ ಎಲ್ಲ ಮಹಾನ್ ಧರ್ಮಗಳಿಗೂ ಅವಕಾಶವಿತ್ತು. ಅಂತಲೆ, ಅಸ್ಪೃಶ್ಯತಾ ನಿರೋಧ ಆಂದೋಲನದಲ್ಲಿ ಅವರು ಹಿಂದೂಗಳಷ್ಟೇ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ನನಗೆ ತಿಳಿದಿರುವ ಮಟ್ಟಿಗೆ ಅವರ ಆ ಉತ್ಸಾಹ ಅವರು ಬದುಕಿರುವವರೆಗೆ ಏಕರೀತಿಯಾಗಿ ಉಳಿದು ಬಂದಿತ್ತು.

ನಿಜಕ್ಕೂ ಅವರು ಯಾವ ಕೆಲಸವನ್ನೂ ಅರ್ಧಮನಸ್ಸಿನಿಂದ ಮಾಡು ತ್ತಿರಲಿಲ್ಲ. ಯಾವ ವಿಷಯವನ್ನೂ ಮನಸ್ಸಿನಲ್ಲಿ ಮುಚ್ಚಿಟ್ಟುಕೊಳ್ಳುತ್ತಿರ ಲಿಲ್ಲ. ಪಂಜಾಬಿನ ಕರೆಗೆ ಒಡನೆಯೇ ಓಗೊಟ್ಟರು. ಜೀವನದಲ್ಲಿ ಎಂದೂ ಕಷ್ಟವನ್ನು ಅನುಭವಿಸದಿದ್ದ ಆ ವಯಸ್ಸಿನ ವ್ಯಕ್ತಿಗೆ ಜೈಲಿನ ತ್ರಾಸವನ್ನು ಸಹಿಸುವುದೆಂದರೆ ತಮಾಷೆಯಲ್ಲ. ಆದರೆ ತಮ್ಮಲ್ಲಿದ್ದ ಶ್ರದ್ಧೆಯಿಂದಾಗಿ ಅವರು ಎಲ್ಲ ಕಷ್ಟವನ್ನೂ ಗೆದ್ದರು. ಖೇಡಾದ ರೈತರಂತೆ ನಗುನಗುತ್ತ ಸಾದಾ ಜೀವನ ನಡೆಸುವುದು—ಅವರಂತೆಯೇ ಊಟ ಉಪಚಾರ ಮಾಡು ವುದು—ಎಲ್ಲ ಕಾಲದಲ್ಲೂ ಅವರ ಒಡ್ಡರ ಬಂಡಿಗಳಲ್ಲಿಯೇ ಪ್ರಯಾಣ ಮಾಡುವುದು—ಈ ಕಾರ್ಯ ಕ್ಷಮತೆ ತೋರುತ್ತಿದ್ದರಾಗಿ, ಅನೇಕ ನವ ತರ ಣರು ಅವರ ಮುಂದೆ ನಾಚಿಕೆಯಿಂದ ತಲೆತಗ್ಗಿಸಬೇಕಾಗಿತ್ತು. ತಪ್ಪಿಸಲು ಬರುವಂಥ ಅಸೌಕರ್ಯಗಳ ವಿಷಯದಲ್ಲೂ ಅವರು ಎಂದೂ ದೂರಿದುದನ್ನು ನಾನು ಕೇಳಿಲ್ಲ. 'ಏಕೆ?'—ಎಂದು ಪ್ರಶ್ನಿಸುವುದು ಅವರಿಗೆ ತಿಳಿಯದು; ಕೆಲಸ ಮಾಡುವುದು-ಶ್ರಮಯಜ್ಞ ಮಾಡುವುದು ಮಾತ್ರವೇ ಅವರಿಗೆ

ಗೊತ್ತು. ಮುಖ್ಯ ನ್ಯಾಯಾಧೀಶರಾಗಿ ಯಾರಿಗಾದರೂ ಮರಣದಂಡನೆ ವಿಧಿಸುವ, ತಮ್ಮ ಆಜ್ಞೆಯನ್ನು ಪಾಲಿಸುವಂತೆ ಮಾಡುವ ಅಧಿಕಾರ ಅವರಿಗೆ ದೊರೆತಿದ್ದಿತಾದರೂ ಯಾವುದೇ ಆಕ್ಷೇಪವೆತ್ತದೆ, ಅನುಶಾಸನ ಪಾಲನೆ ಮಾಡುವುದರಲ್ಲಿ ಅವರು ಆಶ್ಚರ್ಯಜನಕವಾದ ಸಾಮರ್ಥ್ಯವನ್ನು ತೋರಿದರು. ಅವರು ಮನುಷ್ಯ ಜಾತಿಯ ಅಪರೂಪದ ಸೇವಕರಲ್ಲಿ ಒಬ್ಬರು. ಅವರು ಭಗವಂತನನ್ನು ದರಿದ್ರನಾರಾಯಣ ರೂಪದಲ್ಲಿ ಕಾಣುತ್ತಿದ್ದರು. ಭಗವಂತ ದೀನ—ದುಃಖಿತರ ನಡುವೆಯೇ ಇರುವನೆಂಬುದು ಅವರ ನಂಬಿಕೆಯಾಗಿತ್ತು. ಅಬ್ಬಾಸ್ ಮಿಯಾ ಅವರ ದೇಹ ಇಂದು ಗೋರಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರೂ, ಅವರು ಸತ್ತಿಲ್ಲ. ಅವರ ಜೀವನವೇ ನಮ್ಮೆಲ್ಲರಿಗೆ ಒಂದುಸ್ಫೂರ್ತಿ, ಒಂದು ಪ್ರೇರಣೆ.೫೬

ಬದರುದ್ದೀನ್ ತ್ಯೆಯಬ್ಜಿ

ತಮ್ಮ ಕಾನೂನು ಸಂಬಂಧದ ಜ್ಞಾನವನ್ನು ಉಚಿತವಾಗಿ ಹಂಚ, ದೇಶಕ್ಕೆ ಪ್ರಾಮಾಣಿಕವಾದ ಸೇವೆಯನ್ನು ಸಲ್ಲಿಸಿದ ಶ್ರೀ ಮೋತೀಲಾಲ್ ನೆಹರೂ, ಸಿ. ಆರ್. ದಾಸ್, ಮನಮೋಹನ ಘೋಷ್, ಬದರುದ್ದೀನ್ ತ್ಯೆಯಬ್ಜಿ ಮೊದಲಾದವರ ನೆನಪನ್ನು ನಿಮಗೆ ಮಾಡಿಕೊಡುವೆ. ಅವರು ತಮ್ಮ ವೃತ್ತಿಯಲ್ಲಿ ಭಾರಿ ಶುಲ್ಕ ತೆಗೆದುಕೊಳ್ಳುತ್ತಿದ್ದುದರಿಂದ, ಹಾಗೆ ಸೇವೆ ಮಾಡಲು ಶಕ್ಯವಾಯಿತು—ಎಂಬುದಾಗಿ ನೀವು ಪ್ರತಿನುಡಿಯಬಹುದು. ಈ ತರ್ಕವನ್ನು ನಾನು ಒಪ್ಪುವುದಿಲ್ಲ. ಮನಮೋಹನ ಘೋಷರನ್ನು ಬಿಟ್ಟು ಉಳಿದವರೆಲ್ಲರ ಪರಿಚಯ ನನಗಿದೆ. ಬೇಕಾದಷ್ಟು ಹಣವಿದ್ದುದರಿಂದ ಆವಶ್ಯಕತೆ ಬಿದ್ದಾಗ ಅವರು ತಮ್ಮ ಜ್ಞಾನವನ್ನು ಉದಾರವಾಗಿ ದಾನ ಮಾಡಿದರು—ಎಂಬುದಾಗಿ ಹೇಳಲಾಗುವುದಿಲ್ಲ. ಅವರು ಸ್ಥಿತಿವಂತರಾಗಿದ್ದುದಕ್ಕೂ ಅವರ ಸೇವಾಕಾರ್ಯಕ್ಕೂ ಸಂಬಂಧವೇ ಇಲ್ಲ. ಅವರು ಸಂತೋಷದಿಂದ ದೈನ್ಯ ಜೀವನ ನಡೆಸುತ್ತಿದ್ದುದನ್ನುನಾನು ನೋಡಿದೇನೆ೫೭.

ಡಾ. ದತ್

ಫೋರ್‌ಮನ್ ಕ್ರಿಶ್ಚಿಯನ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ದತ್ ಅವರ ನಿಧನದಿಂದ ಉಗ್ರ-ರಾಷ್ಟ್ರೀಯ ಕ್ರೈಸ್ತರೊಬ್ಬರು ಕಣ್ಮರೆ ಆದಂತೆ ಆಗಿದೆ. ದಕ್ಷಿಣ ಆಫ್ರಿಕೆಯಿಂದ ಮರಳಿದ ತರುಣದಲ್ಲೇ ಅವರನ್ನು ಸನಿಹದಿಂದ ನೋಡುವ ಸೌಭಾಗ್ಯ ನನಗೆ ಸಿಕ್ಕಿತ್ತು. ಅವರು ದಿವಂಗತ ಆಂಡ್ರ್ಯೂಸರ ಅಂತರಂಗ ಮಿತ್ರರು. ತಮ್ಮ ಎಲ್ಲ ಮಿತ್ರರಿಗೂ ನನ್ನ ಪರಿಚಯ ಮಾಡಿಕೊಟ್ಟಮೇಲೆಯೇ ಅವರಿಗೆ ತೃಪ್ತಿಯಾದುದು. ೧೯೨೪ ರಲ್ಲಿ ನಾನು ಇಪ್ಪತ್ತೊಂದು ದಿನಗಳ ಉಪವಾಸ ಕೈಗೊಂಡಿದ್ದ ಐಕ್ಯತಾ ಪರಿಷತ್ತಿನ ಆ ಚಿಂತಾಜನಕ ದಿನಗಳಲ್ಲಿ ಅವರು ಹಗಲೂ–ರಾತ್ರಿ ಕಾರ್ಯತತ್ಪರರಾಗಿದ್ದರು. ಎರಡನೆಯ 'ಚಕ್ರಗೋಷ್ಠಿ' ಸಮಯದಲ್ಲೂ ಅವರು ಅಷ್ಟೇ ತತ್ಪರತೆಯಿಂದ ಕಾರ್ಯ ಮಾಡುತ್ತಿದ್ದುದನ್ನು ಕಂಡಿದ್ದೆ. ದೇಶದ ಇತಿಹಾಸದ ಈ ಸೂಕ್ಷ್ಮ ಸಮಯದಲ್ಲಿ ಅವರ ನಿಧನ ದ್ವಿಗುಣ ಕಷ್ಟದಾಯಕವಾಗದೇ ಇರದು. ಶ್ರೀಮತಿ ದತ್ತರಿಗೆ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುವೆನು. ಡಾ. ದತ್ತರ ಅನೇಕಾನೇಕ ಮಿತ್ರರು ಶ್ರೀಮತಿ ದತ್ತರ ಶೋಕದಲ್ಲಿ ಸಹಭಾಗಿಗಳಾಗಿದಾರೆ.೫೮

ದೇಶಬಂಧು ಚಿತ್ತರಂಜನ ದಾಸ್

ಫರೀದಪುರದಿಂದ ಮರಳಿ, ಸೋಮವಾರದಂದು ಈ ಸಂಸ್ಮರಣೆಗಳನ್ನು ಬರೆಯುತ್ತಿರುವೆ: ದೇಶಬಂಧು ದಾಸರ ಹಳೆಯ ಬಂಗಲೆಯ ಮಹಡಿಯ ಮೇಲೆ ಕುಳಿತಿರುವೆ. ನಾನು ಬಂಗಾಳಕ್ಕೆ ಬಂದು ನಾಲ್ಕು ದಿವಸಗಳಾದವು; ಆದರೆ ಈ ಬಂಗಲೆಯಲ್ಲಿ ಮೊಟ್ಟಮೊದಲು ನನ್ನ ಹೃದಯಕ್ಕೆ ಹತ್ತಿರುವ ವ್ಯಥೆ ನನ್ನನ್ನು ಬಿಟ್ಟು ಹೋಗಲೊಲ್ಲದು. ಈ ಬಂಗಲೆಯನ್ನು ದೇಶಬಂಧು ದಾಸರು ಸಾರ್ವಜನಿಕ ಕಾರ್ಯಕ್ಕಾಗಿ ಬಿಟ್ಟು ಕೊಟ್ಟಿರುವರೆಂಬುದು ನನಗೆ ತಿಳಿದಿತ್ತು. ಅವರಿಗೆ ಸಾಲ ಇತ್ತೆಂಬುದೂ ನನಗೆ ಗೊತ್ತಿತ್ತು; ಹಾಗೆಯೇ

ಅವರು ವಕೀಲಿ ಮಾಡಿದಲ್ಲಿ ಸ್ವಲ್ಪ ಸಮಯದಲ್ಲೇ ಸಾಲ ತೀರಿಸಿ ತಮ್ಮ ಮನೆಯನ್ನು ವಶಪಡಿಸಿಕೊಳ್ಳಬಹುದಾಗಿತ್ತೆಂಬುದೂ ನನಗೆ ತಿಳಿದಿತ್ತು. ಆದರೆ, ಅವರಿಗೆ ವಕೀಲಿ ಮಾಡುವುದು ಬೇಕಾಗಿರಲಿಲ್ಲ; ಅಥವಾ ಶುಲ್ಕ ತೆಗೆದುಕೊಳ್ಳದೆ ದೇಶದ ವಕೀಲಿ ಮಾಡಲು ಬಯಸುತ್ತಿದ್ದರೆಂದು ಹೇಳ ಬಹುದು. ಅಂತೆಯೇ ಅರಮನೆಯಂತಿದ್ದ ಮನೆಯನ್ನೇ ಕೊಟ್ಟು ಬಿಡುವ ನಿಶ್ಚಯಮಾಡಿ, ಅದನ್ನು ಟ್ರಸ್ಟಿಗಳ ವಶಕ್ಕೆ ವಹಿಸಿದರು. ನನ್ನ ಈ ಯಾತ್ರೆಯ ಸಂದರ್ಭದಲ್ಲಿ ಕಲ್ಕತ್ತೆಯ ಅವರ ಹಳೆಯ ಮನೆಯಲ್ಲಿಯೇ ನಾನು ತಂಗಬೇಕೆಂಬುದು ಅವರ ಇಚ್ಛೆಯಾಗಿತ್ತು. ಅಂತಲೇ ಇಲ್ಲಿ ಬಂದು ಉಳಿದುಕೊಂಡಿರುವೆ.

ಆದರೆ, ತಿಳಿಯುವುದೇ ಬೇರೆ; ನೋಡುವುದೇ ಬೇರೆ. ಮನೆ ಯೊಳಗೆ ಪ್ರವೇಶಿಸುತ್ತಲೇ ನನಗೆ ದುಃಖ ಉಕ್ಕಿಬಂತು. ಕಣ್ಣಲ್ಲಿ ನೀರು ತುಂಬಿಬಂತು. ಮನೆಯ ಮಾಲಿಕರು ಹಾಗೂ ಅವರ ಮಾಲಿಕತ್ವ-ಇಲ್ಲದ ಮನೆ ನನಗೆ ಜೈಲುಖಾನೆಯಂತೆ ತೋರಿತು. ಅದರಲ್ಲಿ ವಾಸಿಸುವುದೇ ಕಷ್ಟವಾಯಿತು. ಇನ್ನೂ ಆ ಭಾವನೆಯ ಪ್ರಭಾವ ಉಳಿದೇ ಇದೆ.

ಇದು ಮೋಹ ಎಂಬುದನ್ನು ನಾನು ಬಲ್ಲೆ. ಮನೆಯ ಮಾಲಿಕತ್ವ ವನ್ನು ವಹಿಸಿಕೊಟ್ಟು, ದೇಶಬಂಧುಗಳು ತಮ್ಮ ತಲೆಯ ಮೇಲಿದ್ದ ಹೊರೆ ಯನ್ನು ಕಡಿಮೆಮಾಡಿಕೊಂಡಿದಾರೆ. ಈ ಮನೆಯಿಂದ ದಂಪತಿಗಳಿಗೆ ಏನು ಲಾಭ? ಅವರು ಮನಸ್ಸುಮಾಡಿದರೆ, ಗುಡಿಸಲನ್ನೇ ರಾಜಮಹಲು ಮಾಡಬಹುದು. ಇಬ್ಬರೂ ಸ್ವ-ಇಚ್ಛೆಯಿಂದಲೇ ಅದನ್ನು ಬಿಟ್ಟು ಕೊಟ್ಟದಾರೆ. ಅಂದಮೇಲೆ, ಅದರ ಬಗೆಗೆ ವ್ಯಥೆಯೇಕೆ? ಇದು ಜ್ಞಾನದ ಮಾತು. ಈ ಜ್ಞಾನ ನನಗೆ ಇರದಿದ್ದರೆ, ಇಂದಿನಿಂದಲೇ ಮಹಲು ಕಟ್ಟುವ ಉದ್ಯಮವನ್ನು ನಾನು ಆರಂಭಿಸಬೇಕು.

ಆದರೆ, ದೇಹದ ಅಭಿಮಾನ ಎಲ್ಲಿ ಹೋದೀತು? ಪ್ರಪಂಚ ದಾಸರ ಹಾಗೆ ನಡೆದೀತೆ? ಪ್ರಪಂಚಕ್ಕೆ ಮಹಲು ಇದ್ದರೆ ಬೇಕೇಬೇಕು. ಆದರೆ, ಈ ವ್ಯಕ್ತಿ ಅದನ್ನು ಬಿಟ್ಟೇಬಿಟ್ಟರು. ಅವರೇ ಧನ್ಯರು. ನನ್ನ ಕಂಬನಿ ಪ್ರೇಮಾಶ್ರು; ನೋವು ಪ್ರೇಮದ್ದೇ. ಸ್ವಾರ್ಥ ಏಕಿಲ್ಲ? ದೇಶಬಂಧುಗ ಳೊಡನೆ ನನಗೆ ಯಾವ ಸಂಬಂಧವೂ ಇರದೇ ಇದ್ದಿದ್ದರೆ, ನನಗೆ ಈ ದುಃಖ

ಎಲ್ಲಿ ಆಗುತ್ತಿತ್ತು? ಮಾಲಿಕತ್ವ ಬಿಟ್ಟುಕೊಟ್ಟು ಈ ಪ್ರಪಂಚದಿಂದಲೇ ಪಯಣ ಬೆಳೆಸಿರುವ ಎಷ್ಟೋ ಮಾಲಿಕರ ಮನೆಗಳನ್ನು ನೋಡಿದೇನೆ. ಅವುಗಳನ್ನು ಪ್ರವೇಶಿಸುವಾಗ ನನ್ನ ಕಣ್ಣಲ್ಲಿ ನೀರು ಬಂದಿಲ್ಲ. ಆದಕಾರಣ ಈ ದುಃಖಕ್ಕೆ ಸ್ವಾರ್ಥವೂ ಕಾರಣ. ಚಿತ್ತರಂಜನ ದಾಸರು ಮನೆಯನ್ನು ಬಿಟ್ಟುಕೊಟ್ಟಿರಲೊಲ್ಲರೇಕೆ, ಅವರ ಸೇವೆಯ ಬೆಲೆ ಹೆಚ್ಚಿತು.

ಪರಿಷತ್ತಿಗೆ ಬಂದಿದ್ದಾಗ ದೇಶಬಂಧುಗಳ ದೇಹ ಬಹಳ ದುರ್ಬಲವಾಗಿದ್ದಂತೆ ಕಂಡಿತು. ಅವರ ಧ್ವನಿ ಕುಗ್ಗಿದೆ. ನಿಶ್ಶಕ್ತಿ ಹೆಚ್ಚಾಗಿದೆ. ನಿಜ ಹೇಳಬೇಕಾದರೆ, ಇಂಥ ಕೆಲಸಗಳನ್ನು ಕೈಗೊಳ್ಳಲು ಅವರ ದೇಹಸ್ಥಿತಿ ಇನ್ನೂ ಅನುಕೂಲವಾಗಿಲ್ಲ. ಶಕ್ತಿಯನ್ನು ಕೂಡಿಸಿಕೊಳ್ಳಲು ಯೂರೋಪಿಗೋ ಡಾರ್ಜಲಿಂಗಿಗೋ ಹೋಗಬೇಕೆಂದು ಅವರಿಗೆ ಡಾಕ್ಟರು ಸಲಹೆ ಕೊಟ್ಟಿದ್ದಾರೆ. ಆದರೆ, ದಾಸರು ಅಲ್ಲಿಗೆ ತೀರ ತೀರದೆ ಬಂದರಷ್ಟೇ ಹೋದಾರು.

........ದೇಶಬಂಧುಗಳ ಭಾಷಣ ಸಂಕ್ಷಿಪ್ತವಾಗಿಯೂ ಸ್ವಾರಸ್ಯವಾಗಿಯೂ ಇತ್ತು. ಒಂದೊಂದು ಮಾತಿನಲ್ಲೂ ಅಹಿಂಸೆಯ ಧ್ವನಿ ಇತ್ತು. ಹಿಂದೂಸ್ಥಾನದ ಉದ್ಧಾರ ಅಹಿಂಸಾಮಯ ಸಂಗ್ರಾಮದಿಂದಲೇ ಆದೀತೆಂದು ತಮ್ಮ ಭಾಷಣದಲ್ಲಿ ಅವರು ಸ್ಪಷ್ಟವಾಗಿ ತಿಳಿಸಿದರು. ಆ ಭಾಷಣದ ಕೆಳಗೆ ಸಹಿ ಹಾಕುವಂತೆ ಯಾರಾದರೂ ನನಗೆ ಹೇಳಿದರೆ, ನಾನು ಅದರಲ್ಲಿ ಒಂದೇ ಒಂದು ವಾಕ್ಯ ಅಥವಾ ಶಬ್ದವನ್ನೂ ಬದಲಿಸಬೇಕಾದ ಆವಶ್ಯಕತೆ ಇರದು. ಅವರ ಭಾಷಣಕ್ಕೆ ಅನುಗುಣವಾಗಿಯೇ ನಿರ್ಣಯಗಳು ಆಗುವುದು ಸ್ವಾಭಾವಿಕವೇ. ಆ ಬಗೆಗೆ ವಿಷಯ ನಿಯಾಮಕ ಸಮಿತಿಯಲ್ಲಿ ಸಾಕಷ್ಟು ಜಗಳವೂ ಆಯಿತು. ದೇಶಬಂಧುಗಳು ರಾಜಿನಾಮೆ ಕೊಡುವುದಾಗಿ ಹೇಳುವವರೆಗೂ ಪ್ರಸಂಗ ಬೆಳೆಯಿತು. ಕೊನೆಗೆ ಅವರ ಪ್ರಭಾವಕ್ಕೆ ಜಯವಾಗಿ ಪರಿಷತ್ತಿನ ನಿರ್ಣಯಗಳು ನಿರ್ವಿಘ್ನವಾಗಿ ಅಂಗೀಕೃತವಾದವು.

* * * *

ಹೃದಯ ದುಃಖತಪ್ತವಾದಾಗ, ಲೇಖಣಿಯ ಗತಿ ಕುಂಠಿತವಾಗುತ್ತದೆ. ಇಲ್ಲಿ ನಾನು ಶೋಕಮಯವಾದ ವಾತಾವರಣದಲ್ಲಿದೇನೆ. ತಂತಿಯ ಮೂಲಕ ಪಾಠಕರಿಗೆ ಬಹಳ ಸುದ್ದಿ ಕಳುಹಿಸಲು ಅಸಮರ್ಥನಾಗಿದೇನೆ.

ಇಡೀ ಡಾರ್ಜಲಿಂಗಿನಲ್ಲಿ ಆ ಮಹಾನ್ ದೇಶಭಕ್ತರೊಡನೆ ಐದು ದಿನಗಳ ವರೆಗೆ ನನ್ನ ಭೇಟಿ ಆಯಿತು. ಅವರು ನಮ್ಮ ಪರಸ್ಪರ ಸಂಬಂಧವನ್ನು ಮೊದಲಿಗಿಂತಲೂ ನಿಕಟವಾದುದನ್ನಾಗಿ ಮಾಡಿದರು. ದೇಶಬಂಧುಗಳು ಎಷ್ಟು ದೊಡ್ಡವರು ಎಂಬುದರ ಅನುಭವ ಮಾತ್ರವಲ್ಲ, ಅವರು ಎಷ್ಟು ಒಳ್ಳೆಯವರು ಎಂಬುದರ ಅನುಭವವೂ ನನಗೆ ಆಯಿತು. ಭಾರತದ ಒಂದು 'ರತ್ನ' ಮಾಯವಾಯಿತು. ಸ್ವರಾಜ್ಯದ ಮೂಲಕ ಪುನಃ ಅದನ್ನು ಪ್ರಾಪ್ತಿಸಿಕೊಳ್ಳಬೇಕು.*೫೯

ಮಾನವರಲ್ಲೊಬ್ಬ ದಿಗ್ಗಜ ಸಮಾನನಾದ ಪುರುಷ ಇನ್ನಿಲ್ಲದಂತಾಯಿತು. ಬಂಗಾಳ ಇಂದು ವಿಧವೆಯಂತಾಗಿದೆ. ಕೆಲವು ವಾರಗಳ ಹಿಂದೆ ದೇಶಬಂಧುಗಳನ್ನು ಟೀಕಿಸುತ್ತಿದ್ದ ಸಜ್ಜನರೊಬ್ಬರು ಹೀಗೆ ಹೇಳಿದರು :- " ನಾನು ಅವರ ದೋಷಗಳನ್ನು ಎತ್ತಿತೋರುವೆನಾದರೂ, ಅವರ ಸ್ಥಾನವನ್ನು ತೆಗೆದುಕೊಳ್ಳಲು ಯೋಗ್ಯನಾದ ವ್ಯಕ್ತಿ ಬೇರೆಯಾರೂ ಇಲ್ಲವೆಂಬುದು ಸತ್ಯ—ಎಂಬುದಾಗಿ ನಿಮ್ಮ ಮುಂದೆ ಒಪ್ಪಿಕೊಳ್ಳುತ್ತೇನೆ."

ಖುಲ್‌ನಾದ ಸಭೆಯಲ್ಲಿ–ಎದೆನಡುಗಿಸುವ ದುರ್ವಾರ್ತೆಯನ್ನು ನಾನು ಮೊಟ್ಟಮೊದಲು ಕೇಳಿದುದು. ಖುಲ್ನಾದಲ್ಲಿಯೇ—ಈ ವಿಷಯವನ್ನು ನಾನು ಪ್ರಸ್ತಾಪಿಸಿದಾಗ ಆಚಾರ್ಯ ರಾಯರು ಹೀಗೆಂದರು :—' ಈ ಮಾತು ಪೂರಾ ನಿಜ. ರವೀಂದ್ರನಾಥರ ನಂತರ ಕವಿ-ಸ್ಥಾನವನ್ನು ತೆಗೆದುಕೊಳ್ಳುವವರು ಯಾರಿದಾರೆ-ಎಂದು ಕೇಳುವಂತೆಯೇ, ದೇಶಬಂಧುಗಳ ನಂತರ ನಾಯಕ ಸ್ಥಾನವನ್ನು ತೆಗೆದುಕೊಳ್ಳಬಲ್ಲವರು ಯಾರು—ಎಂಬುದಾಗಿಯೂ ಕೇಳಬಹುದು. ದೇಶಬಂಧುಗಳ ಸನಿಹಕ್ಕೆ ಬರುವಂಥ ವ್ಯಕ್ತಿ ಬಂಗಾಳದಲ್ಲಿ ಯಾರೂ ಇಲ್ಲ. ಅವರು ಹಲವೊಂದು ಹೋರಾಟಗಳಲ್ಲಿ ಗೆದ್ದ ವೀರರು. ಅವರು ಔದಾರ್ಯ ಒಂದು ದೋಷವೇ ಎನಿಸುವಷ್ಟು ಮಿತಿಯನ್ನು ಮುಟ್ಟಿತ್ತು. ವಕೀಲ ವೃತ್ತಿಯಲ್ಲಿ ಅವರು ಲಕ್ಷಾಂತರ ರೂಪಾಯಿ

---

* ದೇಶಬಂಧುಗಳ ನಿಧನದ ಶೋಕ ಸಮಾಚಾರ ಮುಟ್ಟಿದ ಮೇಲೆ ಖುಲ್‌ನಾದಲ್ಲಿ ಮಾಡಿದ ಭಾಷಣ

ಗಳಿಸಿದರು. ಆದರೆ ಅದನ್ನು ಕೂಡಿಟ್ಟು ಶ್ರೀಮಂತರಾಗಲಿಲ್ಲ. ಕೊನೆಗೆ ತಮ್ಮ ಪಿತ್ರಾರ್ಜಿತವಾದ ಬಂಗಲೆಯನ್ನೂ ದಾನಮಾಡಿಬಿಟ್ಟರು.

೧೯೧೯ ರಲ್ಲಿ ಪಂಜಾಬ್ ಮಹಾಸಭೆಯ (ಕಾಂಗ್ರೆಸ್) ವಿಚಾರಣಾ ಸಮಿತಿಯ ಸಂಬಂಧದಲ್ಲಿ ನನಗೆ ಅವರ ಪ್ರಥಮ ಪರಿಚಯವಾಯಿತು. ಅವರ ಬಗೆಗೆ ಸಂಶಯ ಹಾಗೂ ಭಯದ ಭಾವದಿಂದಲೇ ಅವರನ್ನು ಭೇಟಿಯಾಗಲು ಹೋದೆ. ಅವರ ಉಜ್ವಲವಾದ ವಕೀಲ ವೃತ್ತಿಯ, ಅದಕ್ಕಿಂತಲೂ ಉಜ್ಜಲವಾದ ಭಾಷಣ ಶಕ್ತಿಯ ವಿಷಯವನ್ನು ದೂರದಿಂದಲೇ ಕೇಳಿದ್ದೆ. ಅವರು ಪತ್ನಿ ಸಮೇತರಾಗಿ, ಪರಿವಾರ ಸಮೇತರಾಗಿ ಮೋಟಾರಿನಲ್ಲಿ ಬಂದಿದ್ದು, ರಾಜ-ವೈಭವದಿಂದ ಬಿಡಾರ ಮಾಡಿದ್ದರು. ನನ್ನ ಮೊದಲ ಅನುಭವ ಅಷ್ಟೇನೂ ಒಳಿತಾಗಿರಲಿಲ್ಲ. ಹಂಟರ್ ಕಮಿಟಿಯ ವಿಚಾರಣೆಯಲ್ಲಿ ಭಾಗವಹಿಸುವ ವಿಷಯವನ್ನು ಪರಿಶೀಲಿಸಲು ನಾವು ಕೂಡಿದ್ದೆವು. ಕಾನೂನು ಸಂಬಂಧದ ವಿಷಯಗಳನ್ನೂ ಸಾಕ್ಷಿಗಳನ್ನೂ ಅಡ್ಡ ಪ್ರಶ್ನೆಯಿಂದ ಖಂಡತುಂಡಮಾಡಿ, ಸೈನಿಕ ಶಾಸನದ ಅತ್ಯಾಚಾರದ ರಹಸ್ಯವನ್ನು ಹೊರಗೆಡಹಬೇಕೆಂಬ ವಕೀಲರಿಗೆ ಉಚಿತವಾದ ತೀವ್ರ ಇಚ್ಛೆಯನ್ನೇ ಅವರಲ್ಲಿ ಕಂಡೆ. ನನ್ನ ಉದ್ದೇಶವೇ ಬೇರೆ. ನನ್ನ ಹೇಳಿಕೆಯನ್ನು ಅವರ ಮುಂದಿಟ್ಟೆ. ಎರಡನೆಯ ಭೇಟಿಯಲ್ಲಿ ನನ್ನ ಮನಸ್ಸಿಗೆ ಸಮಾಧಾನವಾಯಿತು, ಭಯವೆಲ್ಲ ದೂರವಾಯಿತು, ನಾನು ಹೇಳಿದುದನ್ನೆಲ್ಲ ಅವರು ಉತ್ಸುಕತೆಯಿಂದ ಕೇಳಿದರು. ಭಾರತದಲ್ಲಿ ಮೊದಲನೆಯ ಬಾರಿಗೆ ಅನೇಕ ದೇಶಭಕ್ತರ ನಿಕಟ ಸಹವಾಸ-ಸಂಪರ್ಕದ ಅವಕಾಶ ನನಗೆ ದೊರೆಯಿತು. ಅದುವರೆಗೆ ಕಾಂಗ್ರೆಸ್ಸಿನ ಯಾವುದೇ ಕಾರ್ಯದಲ್ಲಿ ಅಂಥ ಪಾತ್ರ ವಹಿಸಿರಲಿಲ್ಲ. ದಕ್ಷಿಣ ಆಫ್ರಿಕಾದ ಒಬ್ಬ ಯೋಧನಂತೆ ಅವರಿಗೆ ನಾನು ಪರಿಚಿತನಾಗಿದ್ದೆ. ಆದರೆ ನನ್ನ ಒಡನಾಡಿಗಳೆಲ್ಲರೂ ನನ್ನನ್ನು ತಮ್ಮ ಮನೆಯವನಂತೆ ಕಂಡರು. ಅಂಥವರಲ್ಲಿ ಈ ವಿಖ್ಯಾತ ಸೇವಕರು ಮೊಟ್ಟಮೊದಲಿಗರು. ನಾನು ಆ ಸಮಿತಿಯ ಅಧ್ಯಕ್ಷ ಎನಿಸಿಕೊಂಡಿದ್ದೆ. "ನನಗೆ ಭಿನ್ನಾಭಿಪ್ರಾಯವಿರುವ ವಿಷಯಗಳಲ್ಲಿ ನನ್ನ ಹೇಳಿಕೆಯನ್ನು ನಿಮ್ಮ ಮುಂದಿಡುವೆ. ಕೊನೆಗೆ ನೀವು ಮಾಡುವ ತೀರ್ಮಾನವನ್ನು ಒಪ್ಪುವೆ—ಎಂಬ ಸ್ವಯಂಪ್ರೇರಿತ ಆಶ್ವಾಸನೆಯನ್ನು ಅವರು ನೀಡುವ ಮೊದಲೇ ನಮ್ಮ ಘನಿಷ್ಠತೆ ಸಾಕಷ್ಟು ಬೆಳೆದಿದ್ದು,

ಅವರ ಬಗೆಗೆ ನನ್ನ ಮನಸ್ಸಿನಲ್ಲಿದ್ದ ಸಂಶಯವನ್ನು ವ್ಯಕ್ತಪಡಿಸುವ ಧೈರ್ಯ ನನಗೆ ಬಂದಿತ್ತು. ಅವರ ಕಡೆಯಿಂದ ಆ ಭರವಸೆ ದೊರೆತಮೇಲಂತೂ ಆ ಮೈತ್ರೀನಿಷ್ಠ ಒಡನಾಡಿಯ ಮೇಲೆ ನನಗೆ ಅಭಿಮಾನ ಮೂಡಿತು ; ಜತೆಗೆ ಸ್ವಲ್ಪ ಸಂಕೋಚವೂ ಆಯಿತು. ಕಾರಣ, ಭಾರತದ ರಾಜನೀತಿಯಲ್ಲಿ ನಾನಿನ್ನೂ ಓನಾಮದ ಅಭ್ಯಾಸಿಯಾಗಿದ್ದೆ ; ಬಹಳಮಾಡಿ ಪೂರ್ಣ ವಿಶ್ವಾಸಕ್ಕೆ ಅಧಿಕಾರಿಯಾಗಿರಲಿಲ್ಲ. ಆದರೆ, ತಂತ್ರ-ನಿಷ್ಠೆ ಚಿಕ್ಕವರು-ದೊಡ್ಡವರು ಎಂಬ ಭೇದವನ್ನು ಮಾನ್ಯಮಾಡದು. ತಂತ್ರ ನಿಷ್ಠೆಯ ಬೆಲೆಯನ್ನು ಬಲ್ಲ ರಾಜ ತಾನು ಪೂರ್ಣ ಜವಾಬದಾರಿ ವಹಿಸಿಕೊಟ್ಟಿರುವಂಥ ವಿಷಯಗಳಲ್ಲಿ ಸೇವಕನ ಮಾತನ್ನೂ ಮಾನ್ಯ ಮಾಡುತ್ತಾನೆ. ನನ್ನ ಸ್ಥಾನ ಓರ್ವ ಸೇವಕನ ಸ್ಥಾನದಂತೆಯೇ ಇತ್ತು. ಕೃತಜ್ಞತೆ ಹಾಗೂ ಅಭಿಮಾನ ಪೂರ್ವಕವಾಗಿ ನಾನು ಹೇಳುವೆ:—ಅಲ್ಲಿ ನನಗೆ ಸಿಕ್ಕಿದ್ದ ಮೈತ್ರೀನಿಷ್ಠ ಒಡನಾಡಿಗಳ ಪೈಕಿ ಚಿತ್ತರಂಜನರಿಗೆ ಸಮಾನರಾದವರು ಬೇರೊಬ್ಬರಿರಲಿಲ್ಲ.

ಅಮೃತಸರದ ಕಾಂಗ್ರೆಸ್ ಸಭೆಯಲ್ಲಿ ನನಗೆ ತಂತ್ರ-ನಿಷ್ಠೆಯ ಅಧಿಕಾರ ಸಿಕ್ಕುವಂತಿರಲಿಲ್ಲ. ಅಲ್ಲಿ ನಾವು ಪರಸ್ಪರ ಯೋಧರು. ಪ್ರತಿಯೊಬ್ಬರೂ ತಮ್ಮ ತಮ್ಮ ಯೋಗ್ಯತೆಗೆ ಅನುಸಾರವಾಗಿ ರಾಷ್ಟ್ರಹಿತ ಸಂಬಂಧದ ತಮ್ಮ ಹಿತ ರಕ್ಷಿಸಿಕೊಳ್ಳಬೇಕಾಗಿತ್ತು. ತರ್ಕ ಅಥವಾ ತನ್ನ ಪಕ್ಷದ ಆವಶ್ಯಕತೆಯನ್ನುಳಿದು ಬೇರೆ ಯಾವ ಮಾತನ್ನು ಕೇಳುವ ಹಾಗೆಯೇ ಇರಲಿಲ್ಲ. ಕಾಂಗ್ರೆಸ್ ಸಭೆಯ ವೇದಿಕೆಯಿಂದ ನನ್ನ ಮೊದಲ ಹೋರಾಟ ನಡೆಸುವುದು ನನಗೆ ಆನಂದ ಹಾಗೂ ಸಮಾಧಾನದ ವಿಷಯವಾಗಿತ್ತು. ಬಹಳ-ಸಭ್ಯರೂ, ಹಾಗೆಯೆ ಯಾವ ರೀತಿಯಲ್ಲೂ ಜಗ್ಗದವರೂ ಆದ ಮಹಾನ್ ಮಾಲವೀಯರು ಬಲಾಬಲವನ್ನು ಪರೀಕ್ಷಿಸುವ ಪ್ರಯತ್ನ ನಡೆಸಿದ್ದರು. ಒಮ್ಮೆ ಒಬ್ಬರ ಬಳಿಗೆ, ಇನ್ನೊಮ್ಮೆ ಇನ್ನೊಬ್ಬರ ಬಳಿಗೆ ಹೋಗುತ್ತಿದ್ದರು. ಕಾಂಗ್ರೆಸ್ ಅಧ್ಯಕ್ಷ ಪಂ. ಮೋತಿಲಾಲರು ಇನ್ನೇನು ಆಟ ಮುಗಿದ ಹಾಗೆಯೇ ಅಂದು ಕೊಂಡರು. ನನಗಂತೂ ಲೋಕಮಾನ್ಯ ಹಾಗೂ ದೇಶಬಂಧುಗಳೊಡನೆ ಹೊಂದಾಣಿಕೆ ಬರಲಿಲ್ಲ. ಸುಧಾರಣೆ-ಸಂಬಂಧದಲ್ಲಿ ಅವರು ಒಂದೇ ಸೂತ್ರವನ್ನು ರೂಪಿಸಿದ್ದರು. ನಾವು ಒಬ್ಬರಿಗೊಬ್ಬರು ತಿಳಿಹೇಳಲು ಬಯಸುತ್ತಿದ್ದೆವು. ಆದರೆ ಒಬ್ಬರ ಮಾತು ಒಬ್ಬರಿಗೆ ಮನವರಿಕೆ

ಆಗುತ್ತಿರಲಿಲ್ಲ. ಇನ್ನೇನೂ ದಾರಿಯೇ ಇಲ್ಲ; ಅನಿಷ್ಟ ಪರಿಣಾಮ ತಪ್ಪಿದ್ದಲ್ಲ ಎಂಬುದಾಗಿ ಅನೇಕರಿಗೆ ಅನಿಸಿತು. ಅಲೀ ಬಂಧುಗಳು [ಅವರನ್ನು ಬಲ್ಲವನಾಗಿದ್ದೆ; ಪ್ರೀತಿಸುತ್ತಲೂ ಇದ್ದೆ—ಆದರೆ ಈಗಿನಷ್ಟು ಪರಿಚಯ ಆಗಿರಲಿಲ್ಲ] ದೇಶಬಂಧುಗಳ ನಿರ್ಣಯದ ಬಗೆಗೆ ನನ್ನ ಮನವೊಲಿಸಲು ಪ್ರಯತ್ನಿಸಿದರು. ಮೊಹಮ್ಮದ್ ಅಲೀ ತಮ್ಮ ಆಕರ್ಷಕವಾದ ನಮ್ರತೆಯಿಂದ ನುಡಿದರು—"ವಿಚಾರಣಾ ಸಮಿತಿಯಲ್ಲಿ ನೀವು ಮಾಡಿರುವ ಮಹತ್ಕಾರ್ಯವನ್ನು ಹಾಳು ಮಾಡಬೇಡಿ." ಅವರ ಮಾತೂ ನನಗೆ ಹಿಡಿಸಲಿಲ್ಲ. ಸೌಮ್ಯ ಬುದ್ಧಿಯ ಸಿಂಧೀ ಜಯರಾಮದಾಸರು ಬಂದು ರಾಜಿಯ ಸೂಚನೆಯನ್ನೂ ಅದಕ್ಕೆ ಬೆಂಬಲವನ್ನೂ ವ್ಯಕ್ತಪಡಿಸಿ ಒಂದು ಚೀಟಿ ಬರೆದು ಕೊಟ್ಟರು. ಅವರ ಪರಿಚಯ ನನಗೆ ಇರಲಿಲ್ಲ. ಆದರೆ ಅವರ ಕಣ್ಣು ಹಾಗೂ ಮುಖದ 'ಚರ್ಯೆ' ನನ್ನನ್ನು ಆಕರ್ಷಿಸಿತು. ನಾನು ಆ ಸೂಚನೆಯನ್ನು ಓದಿದೆ; ಚೆನ್ನಾಗಿತ್ತು. ಅದನ್ನು ದೇಶಬಂಧುಗಳಿಗೆ ಕೊಟ್ಟೆ. ಅವರು ಉತ್ತರಿಸಿದರು—"ನಮ್ಮ ಪಕ್ಷದವರು ಒಪ್ಪಿದರೆ ಆಗತ್ಯವಾಗಿ ಆಗಬಹುದು." ಇಲ್ಲಿ ಅವರ ಗಾಢತನವನ್ನು ಗಮನಿಸಬೇಕು. ತಮ್ಮ ಪಕ್ಷದವರನ್ನು ತೃಪ್ತಿಪಡಿಸದೆ ಅವರು ಇರಲೊಲ್ಲರು. ಜನತೆಯ ಹೃದಯದ ಮೇಲೆ ಅವರು ಸ್ಥಾಪಿಸಿಕೊಂಡಿದ್ದ ಅಧಿಕಾರದ ರಹಸ್ಯ ಅದುವೇ. ಅದು ಎಲ್ಲರಿಗೂ ಒಪ್ಪಿಗೆಯಾಯಿತು. ಲೋಕಮಾನ್ಯರು ಗರುಡಪಕ್ಷಿಯ ಕಣ್ಣುಗಳಂತೆ ತೀಕ್ಷ್ಣವಾಗಿದ್ದ ತಮ್ಮ ಕಣ್ಣುಗಳಿಂದ ಅಲ್ಲಿ ನಡೆಯುತ್ತಿದ್ದುದನ್ನೆಲ್ಲ ನೋಡುತ್ತಿದ್ದರು. ವ್ಯಾಖ್ಯಾನ-ವೇದಿಕೆಯಿಂದ ಪಂಡಿತ ಮಾಲವೀಯರ ಗಂಗಾಧಾರೆಯಂಥ ವಾಗ್ಧಾರೆ ಸಾಗಿತ್ತು. ಅವರ ಒಂದು ಕಣ್ಣು ಸಾಧಾರಣ ಮನುಷ್ಯರಾದ ನಾವು ಕುಳಿತು ರಾಷ್ಟ್ರದ ಭಾಗ್ಯವನ್ನು ನಿರ್ಣಯಿಸುತ್ತಿದ್ದ ಸಭಾ ಮಂಚದತ್ತ ಹೊರಳಿತ್ತು. ಲೋಕಮಾನ್ಯರು ಹೇಳಿದರು—"ಅದನ್ನು ನಾನು ನೋಡುವ ಆವಶ್ಯಕತೆಯೇ ಇಲ್ಲ. ದಾಸರು ಅದನ್ನು ಒಪ್ಪಿದ್ದರೆ ನಾನು ಒಪ್ಪಿದ ಹಾಗೆ." ಮಾಲವೀಯರು ಆ ಮಾತನ್ನು ಕೇಳಿದರೋ ಇಲ್ಲವೋ ನನ್ನ ಕೈಯಿಂದ ಚೀಟಿಯನ್ನು ಕಸಿದುಕೊಂಡು, ಕರತಾಡನ ಆಗತ್ತಿರುವಲ್ಲಿ ರಾಜಿ ಆಯಿತೆಂದು ಘೋಷಿಸಿದರು. ಈ ಘಟನೆಯನ್ನು ನಾನು ಇಷ್ಟು ವಿಸ್ತಾರವಾಗಿ ವರ್ಣಿಸಿರುತ್ತಿರುವುದಕ್ಕೆ ಕಾರಣವಿದು:

ಇದರಲ್ಲಿ ದೇಶಬಂಧುಗಳ ಮಹತ್ವ, ಅವರ ನಿರ್ವಿವಾದ ನೇತ್ರತ್ವ, ಕಾರ್ಯ ವಿಷಯಕ ದೃಢತೆ, ನಿರ್ಣಯ ಸಂಬಂಧದ ತಿಳಿವಳಿಕೆ ಹಾಗೂ ಪಕ್ಷ-ನಿಷ್ಠೆಯ ಕಾರಣಗಳ ಅಂಶ ಅಡಕವಾಗಿದೆ.

ಇನ್ನು ಮುಂದಿನ ಕಥೆ ಕೇಳಿ. ನಾವು ಜುಹೂ, ಅಹ್ಮದಾಬಾದ್, ದಿಲ್ಲಿ ಹಾಗೂ ದಾರ್ಜಲಿಂಗ್‌ಗಳಿಗೆ ಭೇಟಿಕೊಟ್ಟೆವು. ನಾನು ಜುಹೂವಿನಲ್ಲಿದ್ದಾಗ, ನನ್ನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವ ಉದ್ದೇಶದಿಂದ ಅವರು (ದೇಶಬಂಧುಗಳು) ಮತ್ತು ಪಂ. ಮೋತಿಲಾಲರು ನನ್ನ ಬಳಿಗೆ ಬಂದರು. ಅವರಿಬ್ಬರೇನೋ ಅವಳಿ ಜವಳಿ ಸಹೋದರರಂತೆ ಇದ್ದರು. ಆದರೆ, ನಮ್ಮ-ನಮ್ಮ ದೃಷ್ಟಿಕೋನ ಬೇರೆಬೇರೆ ಇತ್ತು. ನನ್ನೊಡನೆ ಮತ-ಭೇದವಿರುವುದು ಅವರಿಗೆ ರುಚಿಸುತ್ತಿರಲಿಲ್ಲ. ಸ್ವಂತ ವಿಷಯವೇನಾದರೂ ಆಗಿದ್ದರೆ ರಾಜಿಗಾಗಿ ನಾನು ಕಾಲುಪಾಲು ಜಗ್ಗಬೇಕೆಂದು ಬಯಸಿದರೆ, ಅವರು ಅರ್ಧಭಾಗ ಜಗ್ಗಲಿಕ್ಕೂ ಸಿದ್ಧವಾಗುತ್ತಿದ್ದರು. ಆದರೆ, ದೇಶದ ಹಿತಾಹಿತದ ಪ್ರಶ್ನೆಯ ಸಂಬಂಧದಲ್ಲಿ ತಮ್ಮ ಪ್ರಿಯ ಮಿತ್ರನ ಮುಂದೆಯೂ ಎಳ್ಳಷ್ಟೂ ಜಗ್ಗಲು ಅವರು ಬಯಸಲಿಲ್ಲ. ನಾವು ಒಂದು ರೀತಿಯ ರಾಜಿ ಮಾಡಿಕೊಂಡೆವು. ನಮ್ಮ ಮನಸ್ಸಿಗೇನೋ ತೃಪ್ತಿಯಾಗಲಿಲ್ಲ. ಆದರೆ, ನಾವು ನಿರಾಶರಾಗಲಿಲ್ಲ. ಒಬ್ಬರನ್ನೊಬ್ಬರು ಗೆಲ್ಲಬೇಕೆಂದು ನಿಶ್ಚಯಮಾಡಿಕೊಂಡಿದ್ದೆವು. (ಪಟ್ಟು ಹಿಡಿದಿದ್ದೆವು) ಪುನಃ ಅಹ್ಮದಾಬಾದಿನಲ್ಲಿ ಸೇರಿದೆವು. ದೇಶಬಂಧುಗಳ ಬಣ್ಣ ಪೂರಾ ಏರಿತ್ತು. ಚತುರ ಆಟಗಾರರಂತೆ ಎಲ್ಲ ವರಸೆಯನ್ನೂ ತೋರಿದರು. ಅವರಿಂದ ನಾನು ಸೊಗಸಾದ ಸೋಲನ್ನು ಅನುಭವಿಸಿದೆ. ಅವರಂಥ ಮಿತ್ರರಿಂದ ಅಂಥ ಎಷ್ಟು ಸೋಲುಗಳನ್ನಾದರೂ ಅನುಭವಿಸಿಯೇನು! ಆದರೆ, ಅಕಟಾ! ಆ ಶರೀರ ಈಗ ಈ ಪ್ರಪಂಚದಲ್ಲಿ ಉಳಿದಿಲ್ಲ. ಈ ನಿರ್ಣಯದ ದೆಸೆಯಿಂದ ನಾವು ಪರಸ್ಪರ ಶತ್ರುಗಳಾದೆವೆಂದು ಯಾರೂ ಭಾವಿಸದಿರಲಿ. ಒಬ್ಬರದು ತಪ್ಪೆಂದು ಇನ್ನೊಬ್ಬರು ತಿಳಿಯುತ್ತಿದ್ದೆವು. ಆದರೆ, ಆ ಮತಭೇದ ಸ್ನೇಹಿತರ ಮತಭೇದ. ಪ್ರಾಮಾಣಿಕರಾದ ಪತಿ ಪತ್ನಿಯರು ತಮ್ಮ ಪವಿತ್ರವಾದ ಮತಭೇದದ ದೃಶ್ಯಗಳನ್ನು ನೆನಪು ಮಾಡಿಕೊಳ್ಳಲಿ—ತಮ್ಮ ಪುನರ್ಮಿಲನದ ಸುಖ ಹೆಚ್ಚಲೆಂದು ಅವರು ತಮ್ಮ ಮತಭೇದದ ದೆಸೆಯಿಂದ ಹೇಗೆ ಕಷ್ಟ ಸಹಿಸುತ್ತಾರೆ?

ನಮ್ಮದೂ ಅದೇ ಸ್ಥಿತಿಯಾಗಿತ್ತು. ಪುನಃ ಭೀಷಣ ದವಡೆಯ ಶಿಷ್ಟ ಪಂಡಿತರು ಹಾಗೂ ಅವಸರದಲ್ಲಿ ನೋಡಿದರೆ ಯಾರ ಹೊರರೂಪ ಅಶಿಷ್ಟ ರಂತೆ ಕಾಣುತ್ತಿದ್ದಿತೋ ಆ ನಮ್ಮ-ದಾಸರೊಡನೆ ದಿಲ್ಲಿಯಲ್ಲಿ ನನ್ನ ಭೆಟ್ಟಿ. ನನ್ನ ಅವರ ನಿರ್ಣಯದ ಕರಡು ಅಲ್ಲಿಯೇ ಸಿದ್ಧವಾಗಿ, ಒಪ್ಪಿಗೆಯಾಯಿತು. ಅದೊಂದು ದೃಢವಾದ ಪ್ರೇಮ-ಬಂಧನ. ಅವರ ಮೂಲಕ ಒಂದು ಪಕ್ಷ ತನ್ನ ಮೃತ್ಯುವಿನ ಮುದ್ರೆ ಹಾಕಿದೆ.

ಅವರು ಅನೇಕ ವೇಳೆ ಆಧ್ಯಾತ್ಮಿಕತೆಯ ಮಾತುಗಳನ್ನು ಆಡು ತ್ತಿದ್ದರು. "ಧರ್ಮದ ವಿಷಯದಲ್ಲಿ ನಿಮಗೂ ನಮಗೂ ಭಿನ್ನಭಿಪ್ರಾಯ ವಿಲ್ಲ" ಎಂದೂ ಹೇಳುತ್ತಿದ್ದರು. ಅವರು ಬಾಯಿಬಿಟ್ಟು ಹಾಗೆ ಹೇಳ ದಿದ್ದರೂ ನಾನು ಪರಸ್ಪರರ ಏಕಾತ್ಮತೆಯನ್ನು ಕಂಡುಕೊಳ್ಳಲಾರದಷ್ಟು ಕಾವ್ಯಹೀನನಾದ ವ್ಯಕ್ತಿ ಎಂಬುದಾಗಿ ಅವರಿಗೆ ಅನಿಸಿರಬಹುದು. ಅವರ ಭಾವನೆ ಸರಿಯೇ. ಆ ಐದು ದಿನಗಳಲ್ಲಿ ಅವರು ಎಷ್ಟು ಧರ್ಮನಿಷ್ಠ ವ್ಯಕ್ತಿ ಎಂಬುದನ್ನು ಕಂಡುಕೊಂಡೆ. ಅವರು ದೊಡ್ಡವರು ಮಾತ್ರವಲ್ಲ, ಒಳ್ಳೆ ಯವರೂ ಹೌದು ಎಂಬುದರ ಅರಿವು ನನಗಾಯಿತು. ಅವರ ಸಜ್ಜನತೆ ದಿನೇ ದಿನೇ ವೃದ್ಧಿಯಾಗುತ್ತಲೂ ಇತ್ತು. ಆದರೆ ಆ ಐದು ದಿನಗಳ ಅಮೌಲ್ಯ ಅನುಭವಗಳ ವಿಚಾರವನ್ನು ನಾನು ಇನ್ನೊಂದು ದಿನ ಹೇಳಬೇಕು. ಕ್ರೂರ ವಿಧಿ ಲೋಕಮಾನ್ಯರನ್ನು ನಮ್ಮಿಂದ ಕಸುಗೊಂಡಾಗಿನಿಂದ ನಾನು ಅಸಹಾಯನಾಗಿದೇನೆ. ಇನ್ನೂ ನನ್ನ ನೋವು ಹೋಗಿಲ್ಲ. ಕಾರಣ ಇದುವರೆಗೆ ಅವರ ಪ್ರೀಯ-ಶಿಷ್ಯರ ಆರಾಧನೆ ಮಾಡಬೇಕಾಗಿದೆ. ಆದರೆ, ದೇಶಬಂಧುಗಳ ಮರಣದಿಂದ ನನ್ನ ಪ್ರೀತಿ ಇನ್ನೂ ಕೆಟ್ಟಿತು. ಲೋಕ ಮಾನ್ಯರು ನಮ್ಮನ್ನು ಅಗಲಿ ಹೋದಾಗ ದೇಶದಲ್ಲಿ ಆಶೋತ್ಸಾಹ ತುಂಬಿ ತುಳುಕುತ್ತಿತ್ತು; ಹಿಂದೂ-ಮುಸಲ್ಮಾನರು ಎಂದೆಂದಿಗೂ ಒಂದಾಗುವಂತೆ ಕಂಡಿತು. ಯುದ್ಧದ ಶಂಖ ಊದುವ ಸಿದ್ಧತೆಯಲ್ಲಿದ್ದೆವು. ಆದರೆ, ಈಗ?೬೦

ಬಂಗಾಳದ ಮೇಲೆ, ಏಕೆ, ಇಡೀ ಭಾರತದ ಹೃದಯದ ಮೇಲೆ ದೇಶ ಬಂಧುಗಳ ಅಧಿಕಾರ ಎಷ್ಟಿತ್ತೆಂಬುದನ್ನು ಕಲ್ಕತ್ತೆ ನಿನ್ನೆ ತೋರಿಕೊಟ್ಟಿದೆ.

ಕಲ್ಕತ್ತೆ ಮುಂಬಯಿಯ ಹಾಗೆ ಲಕ್ಷೋಪಲಕ್ಷ ಪ್ರಜೆಗಳ ನಗರ. ಎಲ್ಲ ಪ್ರಾಂತಗಳ ಜನ ಇಲ್ಲಿ ಇದಾರೆ. ಎಲ್ಲ ಪ್ರಾಂತಗಳವರೂ ಬಂಗಾಳಗಳಂತೆಯೇ ಹೃತ್ಪೂರ್ವಕವಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ದೇಶದ ಮೂಲೆ ಮೂಲೆಗಳಿಂದ ಬಂದು ಬೀಳುತ್ತಿರುವ ತಾರುಗಳ ರಾಶಿಯೂ ಅವರು ಇಡೀ ದೇಶದಲ್ಲಿ ಎಷ್ಟು ಲೋಕಪ್ರಿಯರಾಗಿದ್ದರೆಂಬುದನ್ನು ಎತ್ತಿ ತೋರಿಸುತ್ತದೆ.

ಕೃತಜ್ಞತೆಯಿಂದ ತುಂಬಿದ ಹೃದಯದ ಮಂದಿಯ ಅನುಭವ ಇನ್ನು ಬೇರೆಯಾಗಿರುವುದು ಹೇಗೆ ಸಾಧ್ಯ? ದೇಶಬಂಧುಗಳು ಆ ಎಲ್ಲ ಕೃತಜ್ಞತೆಗೆ ಪಾತ್ರರೂ ಹೌದು. ಅವರು ಮಹಾ ತ್ಯಾಗಿಗಳು. ಅವರ ಔದಾರ್ಯ ಅಸೀಮ. ಅವರ ಕೈ ಕೊಡುಗೈ. ದಾನಮಾಡುವುದರಲ್ಲಿ ಹಿಂದೆ ಮುಂದೆ ನೋಡುತ್ತಿರಲಿಲ್ಲ. “ನೀವು ದಾನಮಾಡುವ ಮುನ್ನ ಸ್ವಲ್ಪ ವಿಚಾರಮಾಡಿ ಮಾಡುವುದಿದ್ದರೆ ಒಳಿತಾಗುತ್ತಿತ್ತು”—ಎಂಬುದಾಗಿ ಅಂದು ಮಧುರಭಾವದಿಂದಲೇ ಹೇಳಿದಾಗ ಅವರು ಫಕ್ಕನೆ ಉತ್ತರವಿತ್ತರು: “ಆದರೆ ನನ್ನ ಅವಿಚಾರದಿಂದ ನನಗೇನೂ ಹಾನಿಯಾದಂತೆ ತೋರುವುದಿಲ್ಲ”. ಅವರ ಅಡಿಗೆ ಮನೆಯಲ್ಲಿ ಬಡವ–ಬಲ್ಲಿದರೆಲ್ಲರಿಗೂ ಸ್ವಾಗತವಿತ್ತು. ಯಾರೇ ಕಷ್ಟದಲ್ಲಿರಲಿ, ಅವರಿಗೆ ಸಹಾನುಭೂತಿ ತೋರುತ್ತಿದ್ದರು. ದೇಶಬಂಧುಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಕೃತಜ್ಞನಾಗಿರದ ನವಯುವಕ ಇಡೀ ಬಂಗಾಳದಲ್ಲಿ ಯಾವನಿದಾನೆ? ಅವರ ಅನುಪಮವಾದ ನ್ಯಾಯಶಾಸ್ತ್ರದ ಪ್ರತಿಭೆಯೂ ಬಡವರ ಸೇವೆಗೆ ಸದಾ ಸಿದ್ಧವಾಗಿರುತ್ತಿತ್ತು. ಬಹುಮಂದಿ ರಾಜಕೀಯ ಕೈದಿಗಳ (ಎಲ್ಲರದೂ ಅಲ್ಲದಿದ್ದರೆ) ರಕ್ಷಣೆಯನ್ನು ಅವರು ಒಂದು ಬಿಡಿಕಾಸೂ ತೆಗೆದುಕೊಳ್ಳದೆ ಮಾಡುತ್ತಿದ್ದರೆಂದು ನನಗೆ ತಿಳಿದು ಬಂದಿದೆ. ಪಂಜಾಬ್ ವಿಚಾರಣೆಯ ಸಂದರ್ಭದಲ್ಲಿ ಅಲ್ಲಿಗೆ ಹೋದಾಗ ತಮ್ಮ ಖರ್ಚನ್ನೆಲ್ಲ ಕೈಯಿಂದಲೇ ಕೊಟ್ಟರು. ಆಗ ಅವರು ಒಬ್ಬ ರಾಜನಂತೆ ‘ಬಳಗ’ ಕಟ್ಟಿಕೊಂಡು ಹೋಗಿದ್ದರು. ಪಂಜಾಬಿನ ಆ ಯಾತ್ರೆಗೆ ೫೦,೦೦೦ ರೂ. ಖರ್ಚಾಯಿತೆಂದು ನನಗೆ ಹೇಳಿದರು. ತಮ್ಮ ಬಾಗಿಲಿಗೆ ಯಾರು ಬಂದರೂ, ಬಿಚ್ಚುಗೈಯಿಂದ ದಾನ ಮಾಡುತ್ತಿದ್ದರು. ಆ ಗುಣದಿಂದಲೇ ಅವರು ಅನೇಕ ನವ ಯುವಕರ ಹೃದಯ-ರಾಜರಾದರು.

ಅವರು ಎಷ್ಟು ಉದಾರಿಗಳೋ ಅಷ್ಟೇ ನಿರ್ಭೀಕರೂ ಹೌದು. ಅಮೃತಸರದಲ್ಲಿ ಅವರ ಉಜ್ಜ್ವಲ ವಾಗ್ಧಾರೆ ನನ್ನ ಗಂಟಲನ್ನು ಒಣಗಿಸಿ ಬಿಟ್ಟಿತ್ತು. ದೇಶದ ಸ್ವಾತಂತ್ರ್ಯ ಕೂಡಲೇ ದೊರೆಯಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಅದರಲ್ಲಿ ಒಂದು 'ಚಕಾರ'ವನ್ನೂ ಬದಲಿಸಲು ಅವರು ತಯಾರಿರಲಿಲ್ಲ. ಹಾಗೆಂದ ಮಾತ್ರಕ್ಕೆ ಅವರು ಹಠಮಾರಿಗಳೆಂದಲ್ಲ. ಅವರ ದೇಶ-ಪ್ರೇಮ ಅಷ್ಟು ಉತ್ಕಟವಾಗಿತ್ತು. ವಿಶಾಲ ಶಕ್ತಿಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರು. ತಮ್ಮ ಅದಮ್ಯ ಉತ್ಸಾಹ ಹಾಗೂ ಅಧ್ಯವಸಾಯದ ಮೂಲಕ ತಮ್ಮ ಪಕ್ಷವನ್ನು ಬಲಪಡಿಸಿದರು. ಆದರೆ, ಆ ಭೀಷಣ ಶಕ್ತಿಪ್ರವಾಹ ಅವರ ಪ್ರಾಣವನ್ನೇ ತೆಗೆದುಕೊಂಡಿತು. ಅವರ ಬಲಿದಾನ ಸ್ವೇಚ್ಛಾಪೂರ್ವಕವಾದುದು; ಉಚ್ಚವಾದುದು; ಉದಾತ್ತವಾದುದು.

ಫರೀದಪುರದಲ್ಲಿ ಅವರಿಗೆ ಜಯವೇ ಆಯಿತು. ಅಲ್ಲಿ ಅವರು ತೆಗೆದ ಉದ್ಗಾರ ಅವರ ಅಪಾರ ತಿಳಿವಳಿಕೆ ಹಾಗೂ ರಾಜ-ನೀತಿಜ್ಞತೆಯ ದ್ಯೋತಕವಾಗಿತ್ತು. ಹಾಗೂ ವಿಚಾರ ಪೂರ್ಣವಾಗಿಯೂ, ಅಸಂದಿಗ್ಧವಾಗಿಯೂ ಇತ್ತು. ಅವರೇ ನನಗೆ ತಿಳಿಸಿದಂತೆ ಅವರು ಅಹಿಂಸೆಯನ್ನು ತಮ್ಮ ಪಾಲಿಗೆ ಏಕಮಾತ್ರ ನೀತಿಯಾಗಿ—ಆ ಕಾರಣದಿಂದ ಭಾರತ ವರ್ಷದ ರಾಜನೈತಿಕ ಧರ್ಮವಾಗಿ ಸ್ವೀಕರಿಸಿದ್ದರು.

ಪಂ. ಮೋತೀಲಾಲ ನೆಹರೂ ಹಾಗೂ ಮಹಾರಾಷ್ಟ್ರದ ತಂತ್ರನಿಷ್ಠ ಸೈನಿಕರೊಡನೆ ಸಖ್ಯ ಬೆಳೆಸಿ, ಅವರು ಸ್ವರಾಜ್ಯ ಪಕ್ಷವನ್ನು ಶೂನ್ಯದಿಂದ ಮಹಾನ್ ಹಾಗೂ ಪ್ರಗತಿಶೀಲ ಪಕ್ಷವಾಗಿ ಮಾಡಿದರು. ಆ ಮೂಲಕ ತಮ್ಮ ಸಂಕಲ್ಪ-ಶಕ್ತಿ, ಮೌಲಿಕತೆ, ಸಾಧನ-ಸಂಪನ್ನತೆ ಹಾಗೂ ಒಂದು ವಸ್ತುವನ್ನು ಒಳ್ಳೆಯದೆಂದು ಕಂಡುಕೊಂಡಮೇಲೆ ಪರಿಣಾಮದ ಚಿಂತೆಯನ್ನೇ ಮಾಡದಿರುವ ಗುಣಗಳನ್ನು ತೋರಿಕೊಂಡರು. ಇಂದು ಸ್ವರಾಜ್ಯ ಪಕ್ಷ ಒಂದು ಸಂಯುಕ್ತ, ಸುಸಂಘಟಿತ ಪಕ್ಷವಾಗಿರುವುದನ್ನು ಕಾಣಬಹುದಾಗಿದೆ. ಶಾಸನ ಸಭಾ ಪ್ರವೇಶದ ಸಂಬಂಧದಲ್ಲಿ ನನಗೆ ಭಿನ್ನಾಭಿಪ್ರಾಯ ಇದ್ದೇ ಇತ್ತು; ಈಗಲೂ ಇದೆ. ಆದರೆ ಸರಕಾರಕ್ಕೆ ತೊಂದರೆಕೊಡುವ ಹಾಗೂ ಸತತವಾಗಿ ಅದರ ಸ್ಥಿತಿಯನ್ನು ವಿಷಮಗೊಳಿಸುವ ಸಂಬಂಧದಲ್ಲಿ

ಶಾಸನ ಸಭೆಯ ಉಪಯುಕ್ತತೆಯನ್ನು ನಾನೆಂದೂ ಅಲ್ಲಗಳೆದಿಲ್ಲ. ಶಾಸನ ಸಭೆಯಲ್ಲಿ ಈ ಪಕ್ಷಮಾಡಿರುವ ಮಹತ್ಕಾರ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅದರ ಕೀರ್ತಿ ಮುಖ್ಯವಾಗಿ ದೇಶಬಂಧುಗಳಿಗೇ ಸಲ್ಲತಕ್ಕುದು. ನಾನು ಕಣ್ಣಲ್ಲಿ ಕಣ್ಣಿಟ್ಟುಕೊಂಡೇ ಅವರೊಡನೆ ಕೂಡಿ ನಿರ್ಣಯವನ್ನು ರೂಪಿಸಿದೆ. ಆಗಿನಿಂದ ಅವರ ಪಕ್ಷಕ್ಕೆ ನನ್ನ ಕೈಯಲ್ಲಾದ ಸಹಾಯ ಮಾಡಿದೇನೆ. ಈಗ ಅವರ ಅವಸಾನದ ನಂತರ ಅವರ ಪಕ್ಷದ ನಾಯಕನ ನಿರ್ಗಮನದ ನಂತರ ಅವರ ಪಕ್ಷಕ್ಕೆ ಸಹಾಯ ಮಾಡುವುದು ನನ್ನ ದ್ವಿಗುಣ—ಕರ್ತವ್ಯ ಒಂದು ವೇಳೆ ಅದಕ್ಕೆ ಸಹಾಯ ಮಾಡಲು ಆಗದಿದ್ದರೂ ಅದರ ಪ್ರಗತಿಗೆ ಯಾವುದೇ ರೀತಿಯಲ್ಲಿ ನಾನು ಅಡ್ಡಿಯಾಗಲೊಲ್ಲೆ.

ಪುನಃ ಅವರ ಫರೀದ್‌ಪುರದ ಭಾಷಣದ ವಿಷಯ. ಮಾಜಿ ವೈಸ್ ರಾಯರು ಶ್ರೀಮತಿ ವಾಸಂತೀದೇವಿ ಅವರಿಗೆ ಕಳುಹಿಸಿಕೊಟ್ಟಿರುವ ಶೋಕ ಸಂದೇಶದ ಗುಣವನ್ನು ರಾಷ್ಟ್ರ ಗ್ರಹಿಸದೆ ಇರದು. ಆಂಗ್ಲೋ-ಇಂಡಿಯನ್ ಪತ್ರಿಕೆಗಳು ಸ್ವರ್ಗೀಯ ದೇಶಬಂಧುಗಳ ಸ್ಮರಣಾರ್ಥವಾಗಿ ಮಾಡಿರುವ ಯಶೋಗಾನವನ್ನು ನಾನು ಕೃತಜ್ಞತಾಪೂರ್ವಕವಾಗಿ ಉಲ್ಲೇಖಿಸುವೆನು. ಫರೀದಪುರ ಭಾಷಣದಲ್ಲಿಯ ದೂರದರ್ಶಿತ್ವ ಹಾಗೂ ಶುದ್ಧ ಹೃದಯದ ಭಾವ ಆಂಗ್ಲೇಯರ ಹೃದಯದ ಮೇಲೆ ಒಳಿತಾದ ಪ್ರಭಾವ ಬೀರಿದಂತೆ ತೋರುತ್ತದೆ. ಆದರೆ ಈ ಶಿಷ್ಟಾಚಾರ ಪ್ರದರ್ಶನದೊಡನೆಯೇ ಆ ಪ್ರಭಾವವೂ ಅಳಿದು ಹೋದೀತೇನೋ ಎಂಬ ಚಿಂತೆಯೂ ನನಗೆ ಹತ್ತಿದೆ. ಫರೀದ್‌ಪುರದ ಭಾಷಣದ ಮೂಲದಲ್ಲಿ ಒಂದು ಮಹಾನ್ ಉದ್ದೇಶವಿತ್ತು. ದೇಶಬಂಧುಗಳು ತಮ್ಮ ನಿಲುವನ್ನು ಸ್ಪಷ್ಟೀಕರಿಸಿ ಮುಂದೆ ಹೆಜ್ಜೆ ಇಡಲೆಂಬ ಅಪೇಕ್ಷೆಯನ್ನು ಆಂಗ್ಲೋ-ಇಂಡಿಯನ್ ಮಿತ್ರರು ವ್ಯಕ್ತಪಡಿಸಿದ್ದರು. ಆ ಮಾತಿಗೆ ಉತ್ತರವಾಗಿಯೇ ದೇಶಬಂಧುಗಳು ಆ ಮಹತ್ವದ ಭಾಷಣಮಾಡಿ ತಮ್ಮ ನಿಲುವನ್ನು ವಿಶದೀಕರಿಸಿದ್ದರು. ಆದರೆ ಕ್ರೂರ ವಿಧಿ ಆ ಭಾಷಣದ ಕರ್ತನನ್ನು ನಮ್ಮಿಂದ ಕಸಿದುಕೊಂಡು ಹೋಯಿತು. ಆದರೆ, ದೇಶಬಂಧುಗಳ ಉದ್ದೇಶದ ಬಗೆಗೆ ಈಗಲೂ ಸಂಶಯ ಪಡುವ ಆಂಗ್ಲೇಯರಿಗೆ ನಾನು ಇಷ್ಟು ಭರವಸೆ ನೀಡಬಲ್ಲೆ: ನಾನು ಡಾರ್ಜಲಿಂಗಿನಲ್ಲಿ ಇದ್ದ ಕಾಲದಲ್ಲಿ ನನ್ನ ಹೃದಯದ ಮೇಲೆ ಎಲ್ಲಕ್ಕಿಂತ ಹೆಚ್ಚಾಗಿ

ಅಂಕಿತವಾದ ಅಂಶವೆಂದರೆ ದೇಶಬಂಧುಗಳ ಮಾತಿನ ಶುದ್ಧ-ಭಾವ. ನಮ್ಮ ಗಾಯಗಳನ್ನು ಮಾಯಿಸಿಕೊಳ್ಳಲು ಸಂಶಯವನ್ನು ನೀಗಿಸಿಕೊಳ್ಳಲು ಅವರ ಗೌರವಮಯವಾದ ಅವಸಾನದ ಸದುಪಯೋಗ ಮಾಡಿಕೊಳ್ಳಲಾದೀತೆ? ಒಂದು ಸಾಧಾರಣವಾದ ಸೂಚನೆಯನ್ನೆ ಮಂಡಿಸುತ್ತೇನೆ: ತಮ್ಮ ಪಕ್ಷದ ಸಮರ್ಥನೆ ಮಾಡಿಕೊಳ್ಳಲು ಈ ಪ್ರಪಂಚದಲ್ಲಿ ಇನ್ನಿಲ್ಲವಾಗಿರುವ ದೇಶ ಬಂಧು ಚಿತ್ತರಂಜನ ದಾಸರ ನೆನಪಿನಲ್ಲಿ—ಅವರು ನಿರ್ದೋಷಿಗಳೆಂದು ಸಾರಿದ್ದ ಎಲ್ಲ ರಾಜಕೀಯ ಕೈದಿಗಳನ್ನು ಸರಕಾರ ಬಿಡುಗಡೆ ಮಾಡಲಿ. ಅಪರಾಧರಾಹಿತ್ಯದ ಆಧಾರದ ಮೇಲೆಯೇ ಅವರನ್ನು ಬಿಡಬೇಕೆಂದು ನಾನು ಹೇಳುವುದಿಲ್ಲ. ಅವರ ಅಪರಾಧದ ಬಗೆಗೆ ಸರಕಾರದವರ ಬಳಿ ಒಳ್ಳೊಳ್ಳೆ ಪುರಾವೆ ಇದ್ದೀತು. ಕೇವಲ ಆ ದಿವಂಗತರ ಗುಣ-ಸ್ಮೃತಿಯಲ್ಲಿ, ಪೂರ್ವಾ ಗ್ರಹವೇನನ್ನೂ ಇಟ್ಟುಕೊಳ್ಳದೆ ಕೈದಿಗಳನ್ನು ಬಿಟ್ಟುಬಿಡಬೇಕೆಂದು ಹೇಳು ತ್ತೇನೆ. ಸರಕಾರ ಭಾರತೀಯ ಜನಾಭಿಪ್ರಾಯವನ್ನು ಒಲಿಸಿಕೊಳ್ಳಲು ಏನಾದರೂ ಮಾಡಬಯಸುವುದಾದರೆ, ಇದಕ್ಕಿಂತ ಅನುಕೂಲವಾದ ಸಂದರ್ಭ ಇನ್ನು ಸಿಕ್ಕಲಿಕ್ಕಿಲ್ಲ. ಅನುಕೂಲ ವಾತಾವರಣ ನಿರ್ಮಾಣಕ್ಕೆ ರಾಜಕೀಯ ಕೈದಿಗಳ ಬಿಡುಗಡೆಗಿಂತ ಉತ್ತಮತರವಾದ ಶುಭಾರಂಭ ಬೇರೊಂದಿಲ್ಲ. ನಾನು ಬಹುತೇಕ ಇಡೀ ಬಂಗಾಳದಲ್ಲಿ ಪ್ರವಾಸಮಾಡಿ ದ್ದೇನೆ. ಈ ವಿಷಯದಲ್ಲಿ ಜನ ಮನನೊಂದಿರುವುದನ್ನು ನಾನು ಕಂಡಿ ದೇನೆ. ಇವರೆಲ್ಲರೂ ಸ್ವರಾಜ್ಯ ಪಕ್ಷದವರೇ ಎನ್ನಲಿಕ್ಕೆ ಬರುವುದಿಲ್ಲ. ನಿನ್ನೆ ದೇಶಬಂಧುಗಳ ನಶ್ವರ ಶರೀರವನ್ನು ಭಸ್ಮಮಾಡಿದ ಬೆಂಕಿ, ನಮ್ಮ ನಶ್ವರ ಅವಿಶ್ವಾಸ, ಸಂಶಯ ಹಾಗೂ ಭಯವನ್ನು ಭಸ್ಮಮಾಡುವಂತೆ ಭಗವಂತನು ಅನುಗ್ರಸಲಿ. ಮತ್ತೆ ಸರಕಾರ ಇಚ್ಛಿಸಿದರೆ, ಭಾರತೀಯರ ಬೇಡಿಕೆಗಳನ್ನು ಈಡೇರಿಸಲು ಸರ್ವೋತ್ತಮ ಉಪಾಯಗಳಾವುವೆಂಬುದನ್ನು ಕುರಿತು ವಿಚಾರಮಾಡಲು ಒಂದು ಸಮ್ಮೇಳನವನ್ನು ಏರ್ಪಡಿಸಬಹುದು.

ಸರಕಾರ ತನ್ನ ಪಾಲಿನ ಜವಾಬದಾರಿಯನ್ನು ನಿರ್ವಹಿಸಿದರೆ, ನಾವೂ ನಮ್ಮ ಪಾಲಿನ ಕರ್ತವ್ಯ ಮಾಡಬೇಕಾಗುವುದು. ನಮ್ಮ ನಾಕೆ ಒಬ್ಬನೇ ವ್ಯಕ್ತಿಯ ಬಲದಿಂದ ನಡೆಯುತ್ತಿಲ್ಲವೆಂಬುದನ್ನು ನಾವು ತೋರಿಸಬೇಕು. ಎಲ್ಲ ಕೆಲಸವೂ ಎಂದಿನಂತೆ ಸಾಗುವುದೆಂದು ಹೇಳಲು ನಾವು ಸಮರ್ಥ

ರಾಗಬೇಕು''—ಎಂಬುದಾಗಿ ಯುದ್ಧದ ಸಮಯದಲ್ಲಿ ವಿನ್ಸ್ಟನ್ ಚರ್ಚಿಲರು ಹೇಳಿದ್ದರು. ನಾವೂ ಆ ಮಾತನ್ನು ಗಮನದಲ್ಲಿಟ್ಟುಕೊಂಡು ನಡೆಯಬೇಕು. ಸ್ವರಾಜ್ಯ ಪಕ್ಷದ ಪುನರ್ರಚನೆ ತತ್‌ಕ್ಷಣವೇ ಆಗಬೇಕು. ಪಂಜಾಬಿನ ಹಿಂದೂ ಹಾಗೂ ಮುಸಲ್ಮಾನರೂ ಕೂಡ ಈ ದೈವಿಕ ಕೋಪಪ್ರಹಾರವನ್ನು ಕಂಡು ತಮ್ಮ ಜಗಳ-ಕಿತ್ತಾಟವನ್ನು ಮರೆತಿರುವಂತೆ ತೋರುತ್ತದೆ. ತಮ್ಮ ಜಗಳ-ಕಿತ್ತಾಟವನ್ನು ಕೊನೆಗಾಣಿಸಬಲ್ಲ ದೃಢತೆ ಹಾಗೂ ಪರಿಜ್ಞಾನವನ್ನು ಎರಡೂ ಪಕ್ಷದವರು ತೋರುವರೆ? ದೇಶಬಂಧುಗಳಿಗೆ ಹಿಂದೂ-ಮುಸಲ್ಮಾನರ ಒಗ್ಗಟ್ಟು ಪ್ರೀಯವಾಗಿತ್ತು. ಅದರಲ್ಲಿ ಅವರಿಗೆ ವಿಶ್ವಾಸವೂ ಇತ್ತು. ಅತ್ಯಂತ ವಿಕಟ ಪರಿಸ್ಥಿತಿಯಲ್ಲೂ ಅವರು ಹಿಂದೂ-ಮುಸಲ್ಮಾನರನ್ನು ಒಂದುಗೂಡಿಸಿ ಇಟ್ಟಿದ್ದರು. ಅವರ ಚಿತಾಗ್ನಿ ನಮ್ಮ ಅನೈಕ್ಯತೆಯನ್ನು ಭಸ್ಮಮಾಡಲಾರದೇನು? ಅದಕ್ಕೆ ಮುನ್ನ ಪ್ರಾಯಶಃ ಎಲ್ಲ ಪಕ್ಷಗಳೂ ಒಂದೇ ಪಕ್ಷದಲ್ಲಿ ಅಂತರ್ಗತವಾಗುವುದು ಆವಶ್ಯಕವಾದೀತು. ಆ ಬಗೆಗೆ ದೇಶಬಂಧುಗಳು ಉತ್ಸುಕರಾಗಿದ್ದರು. ದೇಶಬಂಧುಗಳು ಪ್ರತಿಪಕ್ಷದವರ ಬಗೆಗೆ ಬೇಕಾದಷ್ಟು ಆಡಿಕೊಳ್ಳುತ್ತಿದ್ದುದುಂಟು. ಆದರೆ, ಡಾರ್ಜಲಿಂಗಿನಲ್ಲಿ ಪ್ರತಿಪಕ್ಷದವರ ಬಗೆಗೆ ಒಂದಾದರೂ ಕಟು ಶಬ್ದ ಅವರ ಬಾಯಿಂದ ಹೊರಟುದನ್ನು ನಾನು ಕೇಳಲಿಲ್ಲ. 'ಎಲ್ಲ ಪಕ್ಷದವರನ್ನೂ ಒಂದುಗೂಡಿಸಲು ನೀವು ಶಕ್ಯವಾದಷ್ಟು ಸಹಾಯ ಮಾಡಿ'—ಎಂಬುದಾಗಿ ಅವರು ನನಗೆ ಹೇಳಿದರು. ಆದಕಾರಣ, ದೇಶಬಂಧಗಳ ಆ ವಿಚಾರವನ್ನು ಕಾರ್ಯರೂಪಕ್ಕಿಳಿಸಿ, ಅವರ ಜೀವನದ ಮಹತ್ವಾಕಾಂಕ್ಷೆಯೊಂದನ್ನು ಪೂರ್ಣಗೊಳಿಸುವುದು ಶಿಕ್ಷಿತ ಭಾರತೀಯರಾದ ನಮ್ಮ ಕರ್ತವ್ಯ. ಸದ್ಯದಲ್ಲಿ ನಾವು ಸ್ವರಾಜ್ಯದ ನಿಚ್ಚಣಿಗೆಯನ್ನು ತುತ್ತುತುದಿಯವರೆಗೆ ಏರಲು ಶಕ್ಯವಾಗದಿದ್ದರೂ, ತತ್‌ಕ್ಷಣ ಹಲವು ಮೆಟ್ಟಲುಗಳನ್ನಾದರೂ ಹತ್ತಿದರೆ ಸರಿ. ಆಗಲೀಗ ನಾವು ಹೃದಯಾಂತರಾಳದಿಂದ "ದೇಶಬಂಧು ಸ್ವರ್ಗವಾಸಿಗಳಾದರು; ದೇಶಬಂಧು ಚಿರಾಯುವಾಗಲಿ"—ಎಂಬುದಾಗಿ ಘೋಷಣೆಮಾಡಬಹುದು.೬೧

ಪರ್ವತ ಸದೃಶರಾದ ದೇಶಬಂಧುಗಳು ತೀರಿಕೊಂಡರು; ಪತ್ರಿಕೆ

ಗಳೆಲ್ಲ ಅವರ ಸುದ್ದಿಗಳಿಂದಲೇ ತುಂಬಿವೆ. ದೇಶಬಂಧುಗಳಿಗೆ ಸಂಬಂಧಿಸಿದ ಅತಿ ಸಣ್ಣ ವಿಷಯವನ್ನೂ ಪತ್ರಿಕೆಗಳು ಉತ್ಸುಕತೆಯಿಂದ ಪ್ರಕಟಿಸುತ್ತಿವೆ. 'ಸರ್ವೆಂಟ್' ಪತ್ರಿಕೆ ವಿಶೇಷ ಸಂಚಿಕೆಯನ್ನು ಹೊರಡಿಸಿದೆ. "ಬಸುಮತಿ" ಬಂಗಾಳದ ಅತ್ಯಂತ ದೊಡ್ಡ ಪತ್ರಿಕೆ. ಅದೂ ವಿಶೇಷ ಸಂಚಿಕೆಯ ಸಿದ್ಧತೆ ನಡೆಸಿದೆ. ಸಾವಿರಕ್ಕೂ ಮಿಕ್ಕು ಶೋಕ-ಸೂಚಕ ತಂತಿಗಳು ಶ್ರೀಮತಿ ವಾಸಂತೀದೇವಿ ಅವರಿಗೆ ಬಂದಿವೆ; ದೂರ ದೇಶಗಳಿಂದಲೂ ಬರುತ್ತಲೇ ಇವೆ. ಎಲ್ಲೆಲ್ಲೂ ಸಭೆಗಳು ನಡೆದಿವೆ. ಕಾಂಗ್ರೆಸ್ ಧ್ವಜ ಹಾರಾಡುವ ಪ್ರತಿಯೊಂದು ಗ್ರಾಮದಲ್ಲೂ ಸಭೆ ತಪ್ಪದೆ ನಡೆದಿದೆ.

ಹದಿನೆಂಟನೆಯ ತಾರೀಖಿನ ದಿನ ಕಲ್ಕತ್ತೆಗೆ ಹುಚ್ಚೇಹಿಡಿದಿತ್ತು. ಎರಡು ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಜನ ಕೂಡಿದ್ದರೆಂದು ಎಣಿಕೆ ಮಾಡಿದವರು ಹೇಳುತ್ತಾರೆ. ರಸ್ತೆಗಳಲ್ಲಿ ನಿಂತವರು, ಟೆಲಿಗ್ರಾಫ್ ಕಂಬದಮೇಲೆ ಏರಿದವರು, ಟ್ರಾಮ್ ಗಾಡಿಯ ಮೇಲ್ಭಾಗದಲ್ಲಿ ನಿಂತವರು, ಕಿಟಕಿ-ಕವಾಟಗಳಲ್ಲಿ ನೋಡುತ್ತ ಕುಳಿತವರು ಆ ಲೆಕ್ಕದಲ್ಲಿ ಸೇರಿಲ್ಲ.

ಭಜನೆ, ಕೀರ್ತನೆಯಂತೂ ನಡೆದೇ ಇತ್ತು. ಪುಷ್ಪವೃಷ್ಟಿ ಆಗುತ್ತಿತ್ತು. ಶವವನ್ನು ಕಾಣಿಸುವಂತೆ ತೆರೆದಿಟ್ಟಿದ್ದರು. ಆದರೆ ಅದರ ಮೇಲೆ ಪುಷ್ಪ ರಾಶಿ ಹರಡಿತ್ತು.

ಶವಯಾತ್ರೆಯ ಮುಂಭಾಗದಲ್ಲಿ ಸ್ವಯಂ ಸೇವಕರು ಪುಷ್ಪ ಗುಚ್ಛಗಳನ್ನು ಹಿಡಿದು ನಡೆದಿದ್ದರು. ಅದರಲ್ಲಿ ಪುಷ್ಪಾಲಂಕೃತವಾದ ಚರಖವೂ ಇತ್ತು. ಮೆರವಣಿಗೆ ೭-೩೦ ಕ್ಕೆ ಸ್ಟೇಷನ್ನಿನಿಂದ ಹೊರಟು ೩ ಘಂಟೆಗೆ ಸ್ಮಶಾನ ಮುಟ್ಟಿತು. ೩-೩೦ ಕ್ಕೆ ಅಗ್ನಿ-ಸಂಸ್ಕಾರ ಆರಂಭವಾಯಿತು.

ಸ್ಮಶಾನ ಘಟ್ಟದಲ್ಲಿ ಗುಂಪು ಕಿಕ್ಕಿರಿದು ನೆರೆದಿತ್ತು. ಹಿಂದಿನಿಂದ ನುಗ್ಗಿ ಬರುತ್ತಿದ್ದ ಗುಂಪನ್ನು ತಡೆಗಟ್ಟುವುದು ಕಷ್ಟವಾಯಿತು. ಹೃಷ್ಟ-ಪುಷ್ಟರಾದ ಮಂದಿ ನನ್ನನ್ನು ಹೆಗಲಿನಮೇಲೆ ಕೂಡಿಸಿಕೊಂಡು, ನುಗ್ಗಿ ಬರುತ್ತಿದ್ದ ಗುಂಪಿನ ಮುಂದೆ ಎತ್ತಿಕೊಂಡು ಹೋಗದಿದ್ದಲ್ಲಿ, ದುರ್ಘಟನೆಯೇ ಆಗುತ್ತಿತ್ತು. ಇಬ್ಬರು ಕಟ್ಟಾಳುಗಳು ನನ್ನನ್ನು ಹೆಗಲಿನಮೇಲೆ ಕೂಡಿಸಿಕೊಂಡರು. ನಾನು ಆ ಸ್ಥಿತಿಯಲ್ಲೇ ಜನರನ್ನು ತಡೆಯುತ್ತ ಕುಳಿತುಕೊಳ್ಳುವಂತೆ ಪ್ರಾರ್ಥಿಸುತ್ತಿದ್ದೆ. ನನ್ನ ಮುಖ ಕಾಣುವವರೆಗೆ ಜನ

ಕುಳಿತುಕೊಂಡಿರುತ್ತಿದ್ದರು; ಅಶಾಂತಿಯ ಸೂಚನೆ ಕಂಡ ಕಡೆಗೆ ನಾನು ಹೊರಳಿದೆನೋ ಇಲ್ಲವೋ ಜನ ಎದ್ದು ನಿಂತುಬಿಡುತ್ತಿದ್ದರು. ಎಲ್ಲರೂ ಹುಚ್ಚರೇ ಆಗಿಬಿಟ್ಟಿದ್ದರು. ಸಹಸ್ರಾರು ಕಣ್ಣುಗಳು ಚಟ್ಟದ ಕಡೆಗೆ ಹೊರಳಿದ್ದವು. ದಹನ ಕಾರ್ಯ ಆರಂಭವಾಗುತ್ತಲೇ ಎಲ್ಲರೂ ತಾಳ್ಮೆಗೆಟ್ಟು, ರಭಸದಿಂದ ಎದ್ದುನಿಂತು, ಚಿತೆಯ ಕಡೆಗೆ ಸಾಗಿದರು. ಒಂದೇ ಕ್ಷಣ ಸಾವಕಾಶವಾಗಿದ್ದರೂ, ಎಲ್ಲರೂ ಚಿತೆಯ ಮೇಲೆಯೇ ಬಿದ್ದುಬಿಡುವ ಸಂಭವವಿತ್ತು. ಆಗ ಮಾಡುವುದೇನು? "ಇನ್ನು ಕೆಲಸವೆಲ್ಲ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಗಬಹುದು" ಎಂಬುದಾಗಿ ಜನರಿಗೆ ಹೇಳಿದೆ. ನನ್ನನ್ನು ಎತ್ತಿಕೊಂಡಿದ್ದವರಿಗೆ "ಇನ್ನು ನನ್ನನ್ನು ಗುಂಪಿನಿಂದ ಆಚೆ ಕರೆದುಕೊಂಡು ಹೋಗಿ" ಎಂಬುದಾಗಿ ಹೇಳಿದೆ. ಮಂದಿಗೆ ಕೂಗಿ ಕೂಗಿ ಮತ್ತು ಸಂಜ್ಞೆಮಾಡಿ, ನನ್ನ ಹಿಂದೆ ಬರುವಂತೆ ಹೇಳಿದೆ. ಅದರ ಪ್ರಭಾವ ಬಹಳ ಒಳ್ಳೆಯದಾಯಿತು. ಸಹಸ್ರಾರು ಮಂದಿಯ ಗುಂಪು ಹಿಂತಿರುಗಿತು. ದುರ್ಘಟನೆ ಆಗುವುದು ತಪ್ಪಿತು.

ಚಿತೆಯನ್ನು ಗಂಧದ ಕಟ್ಟಿಗೆಯಿಂದ ಮಾಡಿದ್ದರು.

ಜನ ವನಭೋಜನಕ್ಕೆ ಬಂದಿದ್ದರೋ ಎಂಬಂತೆ ತೋರುತ್ತಿತ್ತು. ಎಲ್ಲರ ಮುಖದ ಮೇಲೂ ಗಾಂಭೀರ್ಯ ಇದ್ದರೂ, ಅವರು ಶೋಕ ಭಾರದಿಂದ ಕುಗ್ಗಿ ಹೋದಂತೆ ಕಾಣುತ್ತಿರಲಿಲ್ಲ. ಅವರ ಕುಟುಂಬದವರ ಮತ್ತು ನನ್ನ ಶೋಕ ಸ್ವಾರ್ಥಯುಕ್ತವಾದುದೆಂದು ತೋರುತ್ತಿತ್ತು. ನಮ್ಮ ತತ್ವಜ್ಞಾನವೇ ಕೈಕೊಟ್ಟಿತು. ಜನರ ತತ್ವಜ್ಞಾನ ಸ್ಥಿರವಾಯಿತು. ಕಾರಣ ಅವರು ತಟಸ್ಥವೃತ್ತಿಯವರಾಗಿದ್ದರು. ಅವರ ಹೃದಯಲ್ಲಿ ಗೌರವ ಭಾವನೆ ತುಂಬಿದ್ದಿತು. ಅವರ ಪೂಜೆ ಸ್ವಾರ್ಥರಹಿತವಾದುದು. ಭಾರತಪುತ್ರನಿಗೆ ತಮ್ಮ ಬಂಧುವಿಗೆ ಪ್ರಮಾಣ ಪತ್ರ ಕೊಡುವುದಕ್ಕಾಗಿ ಬಂದಿದ್ದರು. ಅವರ ಕಣ್ಣು ಹಾಗೂ ಚರ್ಯೆಯನ್ನು ನೋಡಿದರೆ "ನೀವು ದೊಡ್ಡ ಕೆಲಸ ಮಾಡಿದಿರಿ, ನಿಮ್ಮಂಥವರು ಸಾವಿರ ಮಂದಿ ಆಗಲಿ" ಎಂಬುದಾಗಿ ಅವರು ಹೇಳುತ್ತಿದ್ದಂತೆ ತೋರುತ್ತಿತ್ತು.

ದೇಶಬಂಧುಗಳು ಎಷ್ಟು ಭವ್ಯ ವ್ಯಕ್ತಿಯೋ ಅಷ್ಟೊ ಒಳ್ಳೆಯವರೂ ಹೌದು. ಈ ಮಾತಿನ ಅನುಭವ ನನಗೆ ಡಾರ್ಜಲಿಂಗಿನಲ್ಲಿ ಒಳಿತಾಗಿ

ಆಯಿತು. ಅವರು ಧರ್ಮದ ವಿಷಯದಲ್ಲಿ ಮಾತನಾಡಿದರು. ತಮ್ಮ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿದ್ದ ವಿಷಯಗಳನ್ನು ಕುರಿತು ಮಾತನಾಡಿದರು. ಧರ್ಮದ ಅನುಭವ ಜ್ಞಾನ ಪಡೆದುಕೊಳ್ಳಲು ಉತ್ಸುಕರಾಗಿದ್ದರು. "ಬೇರೆ ದೇಶಗಳ ವಿಷಯ ಏನಾದರೂ ಆಗಲಿ, ಈ ದೇಶದ ಉದ್ಧಾರವಂತೂ ಶಾಂತಿಮಾರ್ಗದಿಂದಲೇ ಆದೀತು. ಶಾಂತಿ ಮಾರ್ಗದಿಂದಲೇ ನಾವು ಸ್ವರಾಜ್ಯ ಗಳಿಸಿಯೇವು ಎಂಬುದನ್ನು ಇಲ್ಲಿಯ ನವಯುವಕರಿಗೆ ತೋರಿ ಕೊಡುವೆನು." "ನಾವು ಒಳ್ಳೆಯವರಾದರೆ, ಆಂಗ್ಲೇಯರನ್ನೂ ಒಳ್ಳೆಯವರನ್ನಾಗಿ ಮಾಡಬಹುದು." "ಈ ಅಂಧಕಾರ ಹಾಗೂ ದಂಭದ ನಡುವೆ ನನಗೆ ಸತ್ಯದ ಹೊರತು ಬೇರೆ ಮಾರ್ಗ ಕಾಣದು. ಬೇರೆ ಮಾರ್ಗದ ಆವಶ್ಯಕತೆಯೂ ನಮಗಿಲ್ಲ" "ಎಲ್ಲ ಪಕ್ಷಗಳನ್ನು ಒಂದುಗೂಡಿಸಬೇಕೆಂಬುದು ನನ್ನ ಇಚ್ಛೆ. ನಮ್ಮ ಜನ ಭೀರುಗಳಾಗಿರುವುದೊಂದೇ ಕೊರತೆ. ಅವರನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ನಾವೇ ಭೀರುಗಳಾಗಬೇಕಾಗುತ್ತದೆ. ಎಲ್ಲರನ್ನೂ ಒಂದುಗೂಡಿಸಲು ನೀವು ಪ್ರಯತ್ನ ಮಾಡಬೇಕು. ನನ್ನನ್ನೂ ಸ್ವರಾಜ್ಯ ಪಕ್ಷವನ್ನೂ ನಿಂದಿಸುತ್ತಲೇ ಇರುವುದರಿಂದ ಏನು ಪ್ರಯೋಜನ ಎಂಬುದಾಗಿ ಪತ್ರಿಕಾ ಸಂಪಾದಕರಿಗೆ ತಿಳಿ ಹೇಳಬೇಕು. ನಾನು ತಪ್ಪುಮಾಡಿದ್ದರೆ ತಿಳಿಸಲಿ. ಅವರಿಗೆ ನಾನು ಸಮಾಧಾನ ಹೇಳದಿದ್ದರೆ ಬೇಕಾದ ಹಾಗೆ ನನ್ನನ್ನು ನಿಂದಿಸಲಿ." "ನಿಮ್ಮ ಚರಖದ ಮಹತ್ವವನ್ನು ನಾನು ದಿನೇ ದಿನೇ ಹೆಚ್ಚೆಚ್ಚು ಅರ್ಥಮಾಡಿಕೊಳ್ಳುತ್ತಿರುವೆ. ನನಗೆ ಹೆಗಲು ನೋವು ಇರದೆ ಇದ್ದಿದ್ದರೆ ಅದರಿಂದ ನನ್ನ ಗತಿ ಕುಂಠಿತವಾಗದೆ ಇದ್ದಿದ್ದರೆ ನಾನು ಕೂಡಲೇ ಕಲಿತು ಬಿಡುತ್ತಿದ್ದೆ. ಕಲಿತುಬಿಟ್ಟ ಮೇಲೆ ನಿಯಮ ಪೂರ್ವಕವಾಗಿ ನೂಲಲು ನನಗೇನೂ ಬೇಸರವಿಲ್ಲ. ಆದರೆ, ಕಲಿಯುವಾಗಲೇ ಮನಸ್ಸಿಗೆ ಬೇಸರ ಬಂದು ಬಿಡುತ್ತದೆ. ನೋಡಿ, ಎಳೆ ಕಿತ್ತು ಕಿತ್ತು ಹೋಗುತ್ತಲೇ ಇರುತ್ತದೆ." ಆದರೆ ನೀವು ಹೀಗೆಂದು ಹೇಳೀರಿ. ಸ್ವರಾಜ್ಯಕ್ಕಾಗಿ ನೀವು ಏನನ್ನು ತಾನೆ ಮಾಡುವುದಿಲ್ಲ ?..., "ಹೌದು, ಹೌದು-ಈ ಮಾತು ಸರಿ. ನಾನು ಕಲಿಯುವುದಿಲ್ಲವೆಂದು ಎಲ್ಲಿ ಹೇಳಿದೆ ? ನನ್ನ ತೊಂದರೆಯನ್ನು ತಿಳಿಸಿದೆ, ಅಷ್ಟೆ. ಈ ಕೆಲಸದಲ್ಲಿ ವಾಸಂತೀದೇವಿಗಿಂತ ನನ್ನ ಬುದ್ಧಿ ಎಷ್ಟು ಮಂದ ?"....ವಾಸಂತೀದೇವಿ

ಅವರ ನೆರವಿಗೆ ಬಂದರು—"ಇವರು ಹೇಳುವುದು ನಿಜ. ಇವರು ಮಸಿ ಕುಡಿಕೆ ತೆಗೆದು ಕುಳಿತರೆಂದರೆ, ಅದನ್ನು ಮುಚ್ಚಿಡಲು ನಾವೇ ಬರಬೇಕು. ನಾನು ಹೇಳಿದೆ—"ಇದು ನಿಮ್ಮ ಕೌಶಲವೇ. ದೇಶಬಂಧುಗಳನ್ನು ಹೆಳವರನ್ನಾಗಿ ಮಾಡಿ ಸದಾ ನಿಮ್ಮನ್ನು ಓಲೈಸುವಂತೆ ನಿಮ್ಮನ್ನೇ ಅವಲಂಬಿಸುವಂತೆ ಮಾಡಿಕೊಂಡಿದೀರಿ. ಕೋಣೆ ನಗೆಯಿಂದ ಪ್ರತಿಧ್ವನಿತವಾಯಿತು. ದೇಶಬಂಧುಗಳು ಮಧ್ಯಸ್ಥಿಕೆ ವಹಿಸಿದರು—"ಒಂದು ತಿಂಗಳ ನಂತರ ನನ್ನನ್ನೆ ಪರೀಕ್ಷೆ ತೆಗೆದುಕೊಳ್ಳಿರಿ. ಅಷ್ಟು ಹೊತ್ತಿಗೆ ಎಳೆ ಕಿತ್ತು ಬರದಂತೆ ನೂಲಲು ಕಲಿತಿರುತ್ತೇನೆ." ನಾನು ಹೇಳಿದೆ "ಒಳ್ಳೆಯದು. ನಿಮ್ಮ ಸಲುವಾಗಿ ಸತೀಶಬಾಬುಗಳು ಶಿಕ್ಷಕರನ್ನು ಕಳುಹಿಸಿಕೊಡುವರು. ಇದರಲ್ಲಿ ನೀವು ಉತ್ತೀರ್ಣರಾದರೆ, ಸ್ವರಾಜ್ಯ ಸನಿಯಕ್ಕೆ ಬಂದಂತೆಯೇ ಎಂದು ತಿಳಿಯಿರಿ." ಹೀಗೆ ವಿನೋದ ಪೂರ್ಣ ವಿಷಯಗಳನ್ನೆಲ್ಲ ವರ್ಣಿಸುತ್ತ ಹೋದರೆ, ಅದಕ್ಕೆ ಕೊನೆ ಎಲ್ಲಿ?

ನಾನು ಬಣ್ಣಿಸುವುದಕ್ಕೆ ಆಗದಂಥ ಎಷ್ಟೋ ಸಂಸ್ಮರಣೆಗಳಿವೆ.

ಅಲ್ಲಿ ನನಗೆ ಆದ ಪ್ರೇಮದ ಅನುಭವದ ನೋಟವನ್ನು ಇಲ್ಲಿ ಒಂದಿಷ್ಟು ಕಾಣಿಸದಿದ್ದರೆ, ನಾನು ಕೃತಘ್ನನಾದೇನು. ಅವರು ಸಣ್ಣ ಸಣ್ಣ ವಿಷಯಗಳಿಗೂ ಗಮನ ಕೊಡುತ್ತಿದ್ದರು. ಹಣ್ಣು-ಹಂಪಲುಗಳನ್ನು ಕಲ್ಕತ್ತೆಯಿಂದಲೇ ತರಿಸುತ್ತಿದ್ದರು. ದಾರ್ಜಲಿಂಗಿನಲ್ಲಿ ಮೇಕೆ ಅಥವಾ ಮೇಕೆ ಹಾಲು ದೊರೆಯುವುದು ಕಷ್ಟವಾಗುತ್ತಿತ್ತು. ಆದಕಾರಣ, ಬೆಟ್ಟದ ತಪ್ಪಲಿನಿಂದಲೇ ಐದು ಮೇಕೆಗಳನ್ನು ತರಿಸಿ ಇಟ್ಟಿದ್ದರು. ನನಗೆ ಬೇಕಾದ ಯಾವ ಒಂದು ವಸ್ತುವಿಗೂ ವ್ಯವಸ್ಥೆಮಾಡದೆ ಬಿಡುತ್ತಿರಲಿಲ್ಲ. ನಮ್ಮ ಕೋಣೆಗಳ ನಡುವೆ ಇದ್ದುದು ಒಂದೇ ಗೋಡೆ. ಬೆಳಗ್ಗೆ ಏಳುತ್ತಲೇ ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿ, ನನ್ನ ದಾರಿ ನೋಡುತ್ತ ಕೂಡುತ್ತಿದ್ದರು. ಮಂಚದ ಮೇಲೆ ಕುಳಿತುಕೊಳ್ಳುತ್ತಿದ್ದರು. ಮಂಚದ ಸಹವಾಸ ಇನ್ನೂ ಬಿಟ್ಟಿರಲಿಲ್ಲ. ಚಕ್ಕಳ-ಮುಕ್ಕಳ ಹಾಕಿ ಕೂಡುವ ನನ್ನ ರೂಢಿಯ ಪರಿಚಯ ಅವರಿಗಿತ್ತು. ಆದಕಾರಣ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಬಿಡುತ್ತಿರಲಿಲ್ಲ. ಮಂಚದ ಮೇಲೆಯೇ ತಮ್ಮ ಎದುರಿಗೆ ಕೂಡಿಸಿಕೊಳ್ಳುತ್ತಿದ್ದರು. ಗಾಡಿಯಮೇಲೂ ಏನಾದರೂ ಹಾಕಿಸಿ ತಲೆದಿಂಬನ್ನು

ಇಡಿಸುತ್ತಿದ್ದರು. ನನಗೆ ಹಾಸ್ಯದ ಚಟಾಕಿ ಹಾರಿಸದಿರಲು ಸಾಧ್ಯವಾಗಲಿಲ್ಲ. "ಈ ದೃಶ್ಯ ನನಗೆ ನಲವತ್ತು ವರುಷ ಹಿಂದಿನ ನೆನಪು ಕೊಡುತ್ತದೆ. ನನ್ನ ಮದುವೆಯ ಸಮಯದಲ್ಲಿ ವಧೂ-ವರರು ಹೀಗೆಯೇ ಕುಳಿತಿದ್ದೆವು. ಇಲ್ಲಿ ಪ್ರಾಣಿಗ್ರಹಣಕ್ಕೆ ಮಾತ್ರವೇ ಕೊರತೆ" ನಾನು ಆ ಮಾತು ಆಡುತ್ತಲೇ ದೇಶಬಂಧುಗಳು ಗಹಗಹಿಸಿ ನಕ್ಕರು. ಅವರ ನಗೆಯಿಂದ ಮನೆಯೆಲ್ಲ ಪ್ರತಿಧ್ವನಿತವಾಯಿತು. ದೇಶಬಂಧುಗಳು ನಗೆಯಾಡಿದರೆ ಬಹು ದೂರದವರಿಗೆ ಕೇಳಿಸುತ್ತಿತ್ತು.

ದೇಶಬಂಧುಗಳ ಹೃದಯ ದಿನೇ ದಿನೇ ಕೋಮಲವಾಗುತ್ತಿತ್ತು. ರೂಢಿಯಂತೆ ಮಾಂಸ-ಮೀನು ತಿನ್ನುವ ಬಗೆಗೆ ವಿಧಿ-ನಿಷೇಧವೇನೂ ಇರಲಿಲ್ಲ. ಆದರೆ, ಅಸಹಕಾರ ಆರಂಭವಾದಾಗಿನಿಂದ ಮಾಂಸಾಹಾರ ಮದ್ಯಪಾನ ಹಾಗೂ ಚುಟ್ಟಾ-ಮೂರನ್ನು ಬಿಟ್ಟಿದ್ದರು. ಹಿಂದಿನಿಂದ ಮೂರು ಅಭ್ಯಾಸಗಳೂ ಪುನಃ ಬೆನ್ನು ಹತ್ತಿದವು. ಆದರೆ ಅವರ ಬಲವು ಅವುಗಳನ್ನು ತ್ಯಾಜ್ಯ ಮಾಡುವುದರ ಕಡೆಗೇ ಇತ್ತು. ಇದೇ ಕೆಲವು ದಿನಗಳ ಹಿಂದೆ ರಾಧಾಸ್ವಾಮಿ ಸಂಪ್ರದಾಯದ ಒಬ್ಬರು ಸಾಧುಗಳ ಸಹವಾಸ ಅವರಿಗೆ ಸಿಕ್ಕಿತ್ತು. ಆಗ ನಿರಾಮಿಷ ಭೋಜನದ ಉತ್ಸುಕತೆ ಹೆಚ್ಚಿತು. ಹೀಗಾಗಿ ದಾರ್ಜಲಿಂಗಿಗೆ ಬಂದಾಗಿನಿಂದ ಅವರು ನಿರಾಮಿಷ ಭೋಜನವನ್ನೇ ಆರಂಭಿಸಿದ್ದರು. ನಾನು ಇರುವವರೆಗೆ ಮಾಂಸ - ಮೀನುಗಳನ್ನು ಮನೆಯೊಳಗೆ ಬರಗೊಡಲಿಲ್ಲ. ಅವರು ನನಗೆ ಅನೇಕ ಬಾರಿ ಹೀಗೆ ಹೇಳಿದ್ದರು—"ನನ್ನ ಕೈಯಲ್ಲಿ ಆಗುವಂತಿದ್ದರೆ ಮಾಂಸ—ಮೀನು ಬಿಟ್ಟುಬಿಡುತ್ತಿದ್ದೆ. ನನಗೆ ಇದು ರುಚಿಸುವುದೂ ಇಲ್ಲ. ಆಧ್ಯಾತ್ಮಿಕ ಉನ್ನತಿಗೆ ಇದು ಬಾಧಕವೆಂದೂ ನನ್ನ ಭಾವನೆ. ಸಾಧನೆಯ ದೃಷ್ಟಿಯಿಂದ ಮಾಂಸಾಹಾರವನ್ನು ಖಂಡಿತವಾಗಿ ಬಿಟ್ಟುಬಿಡಬೇಕೆಂದು ನನ್ನ ಗುರುಗಳೂ ಹೇಳಿದರು."೬೨

ದೇಶಬಂಧುಗಳ ಆತ್ಮಕ್ಕೆ ಶಾಂತಿ ದೊರೆಯಬೇಕೆಂದು ನಾವು ಬಯಸುವುದಾದರೆ, ಅದಕ್ಕೆ ಇರುವುದು ಒಂದೇ ಮಾರ್ಗ. ಅವರ ಸಕಲ ಸದ್ಗುಣಗಳನ್ನೂ ನಾವು ಮೈಗೂಡಿಸಿಕೊಳ್ಳಬೇಕು. ಕೆಲವು ಸದ್ಗುಣಗಳನ್ನಂತೂ ಧಾರಾಳವಾಗಿ ಮೈಗೂಡಿಸಿಕೊಳ್ಳಬಹುದು. ಅವರ ಹಾಗೆ ಇಂಗ್ಲೀಷ್

ನಮಗೆ ಬರದಿರಬಹುದು; ಅವರಂತೆ ವಕೀಲರಾಗಲು ನಮಗೆ ಆಗದಿರಬಹುದು; ಶಾಸನ ಸಭೆಗೆ ಹೋಗುವ ಶಕ್ತಿ ನಮ್ಮಲ್ಲಿ ಇಲ್ಲದಿರಬಹುದು ; ಆದರೆ ಅವರ ಹಾಗೆಯೇ ದೇಶಪ್ರೇಮವನ್ನು ಬೆಳೆಸಿಕೊಳ್ಳಲು ಸಾಧ್ಯವಿದೆ. ಅವರಂತೆಯೇ ಔದಾರ್ಯವನ್ನು ಅಭ್ಯಸಿಸಲು ಸಾಧ್ಯವಿದೆ. ಅವರಂತೆ ಹಣ ಕೊಡಲು ನಮ್ಮಿಂದ ಸಾಧ್ಯವಿಲ್ಲದಿರಬಹುದು ಆದರೆ ಯಥಾಶಕ್ತಿ ಕೊಡಲು ಬರುತ್ತದೆ. ವಿಧವೆಯೊಬ್ಬಳು ಕೊಡುವ ತಾಮ್ರದ ಬಿಲ್ಲೆಯ ಬೆಲೆ ರಾಜ-ಮಹಾರಾಜರು ಕೊಡುವ ಸಹಸ್ರಾರು ರೂಪಾಯಿಗಳಿಗಿಂತ ಹೆಚ್ಚು. ದೇಶಬಂಧುಗಳು ಖಾದಿ ಧರಿಸಲು ಆರಂಭಿಸಿದ ಮೇಲೆ, ಮನೆಯಲ್ಲಾಗಲಿ ಹೊರಗಾಗಲಿ ಅದನ್ನು ಬಿಡಲಿಲ್ಲ. ನಾವು ಖಾದಿ ಧರಿಸಿಯೇವೆ? ದೇಶಬಂಧುಗಳು ತೆಳುವಾದ ಖಾದಿಯನ್ನು ಎಂದೂ ಅಪೇಕ್ಷಿಸಲಿಲ್ಲ. ದಪ್ಪ ಖಾದಿಯೇ ಅವರಿಗೆ ರುಚಿಸಿತು. ಅವರು ನೂಲುವುದನ್ನು ಆರಂಭಿಸಿದ್ದರು. ಇದುವರೆಗೆ ನೂಲಲು ಆರಂಭಿಸದಿರುವವರು ಇನ್ನಾದರೂ ಆರಂಭಿಸಿಯಾರೆ?೬೩

ಗೋಪಾಲಕೃಷ್ಣ ದೇವಧರ್

ಶ್ರೀ ಗೋಪಾಲಕೃಷ್ಣ ದೇವಧರರ ನಿಧನದಿಂದಾಗಿ ಓರ್ವ ಮಹಾನ್ ಸಮಾಜಸೇವಕರೂ, ಹರಿಜನರ ಸ್ಥಿರಚಿತ್ತರೂ, ವಿಶ್ವಸನೀಯರೂ ಆದ ಓರ್ವ ಬಂಧುಗಳೂ ಇಲ್ಲದಂತಾಯಿತು. ಶ್ರೀ ದೇವಧರರು ಸ್ವರ್ಗೀಯ ಗೋಖಲೆಯವರು ಸ್ಥಾಪಿಸಿದ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ" ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಪ್ರಾಂತೀಯ ಹರಿಜನ ಸೇವಕ ಸಂಘದ ಅಧ್ಯಕ್ಷರೂ ಆಗಿದ್ದರು. ದೇಶದಲ್ಲಿ ಎಲ್ಲಿಯೇ ಕ್ಷಾಮಸಂಭವಿಸಲಿ, ಪ್ರವಾಹ ಬರಲಿ—ದೇವಧರರು ಅಲ್ಲಿ ಸೇವೆಗೆ ಸಿದ್ಧವಾಗಿರುತ್ತಿದ್ದರು. ಅವರು ಇಚ್ಛೆಪಟ್ಟಿದ್ದರೆ ಸುಲಭವಾಗಿ ಹಣ ಗಳಿಸಬಹುದಾಗಿತ್ತು. ಆದರೆ ಅವರು ಬಡತನದ ಬಾಳುವೆಯನ್ನೇ ಆಯ್ದುಕೊಂಡರು ; ಕಾರಣ, ಬಡತನವೇ ಲೋಕಸೇವಕನ ಜೀವನಸಿದ್ಧಾಂತ. ಅವರ ದಣಿವರಿಯದ ಕಾರ್ಯಶಕ್ತಿ ಸಾಂಕ್ರಾಮಿಕವಾದುದು. ಸಮಾಜಸೇವೆಗೆ ಕರೆಬಂದಾಗ ಅವರು ಎಂದೂ

ಹಿಂದುಳಿಯಲಿಲ್ಲ. ಅವರ ಜೀವನ ನಿಷ್ಕಳಂಕವಾದುದು; ಪವಿತ್ರವಾದುದು. ಅವರಿಗೆ ಪ್ರಿಯವಾಗಿದ್ದ ಪುಣೆಯ ಸೇವಾಸದನಕ್ಕೆ ಅವರು ಪ್ರಾಣಪ್ರಾಯರಾಗಿದ್ದರು. ಅದರ ಸಲುವಾಗಿ ಅವರು ಬಹಳ ಪರಿಶ್ರಮ ಮಾಡಿದರು. ಅದರ ಫಲವಾಗಿ ಅತಿ ಚಿಕ್ಕ ಸಂಸ್ಥೆಯಾಗಿ ಆರಂಭವಾದ ಆ ಸಂಸ್ಥೆ ಬೆಳೆಯತ್ತ ಬೆಳೆಯುತ್ತ ಇಂದು ಭಾರತದಲ್ಲಿರುವ ಅಂಥ ಸಂಸ್ಥೆಗಳಲ್ಲಿ ಯಾವುದಕ್ಕೂ ಕಡಿಮೆಯಿಲ್ಲದಂಥ ಉತ್ತಮ ಸಂಸ್ಥೆಯಾಗಿದೆ. ದಿವಂಗತರ ಕುಟುಂಬವರ್ಗದರಿಗೆ ನನ್ನ ಸಾದರ ಸಮವೇದನೆಯನ್ನು ವ್ಯಕ್ತಪಡಿಸುತ್ತೇನೆ.೬೪

ಭುಲಾಭಾಯಿ ದೇಸಾಯಿ

ಬಾರಡೋಲಿ ರೈತರ ಪರಾಕ್ರಮ ಹಾಗೂ ಅವರ ಕಷ್ಟ—ಸಂಕಟಗಳು ಶ್ರೀ ಭುಲಾಭಾಯಿ ದೇಸಾಯಿ ಅಂಥವರಿಗೆ ಜನತೆಯ ಸೇವೆ ಮಾಡುವ ಪ್ರೇರಣೆ ನೀಡಿದವು. ಇಲ್ಲದಿದ್ದರೆ ಅವರು ಪ್ರಸಿದ್ಧ ಸರಕಾರಿ ನೌಕರರಾಗಿ, ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶರಾಗಿ ತಮ್ಮ ಕೆಲಸ ಮಾಡಿಕೊಂಡು ಇದ್ದು ಬಿಡುತ್ತಿದ್ದರು. ನ್ಯಾಯಶಾಸ್ತ್ರದ ಪ್ರಕಾಂಡ ಪಂಡಿತರಾದ ಅವರ ಜಾಣ್ಮೆಯಿಂದ ಆಜಾದ್ ಹಿಂದ್ ಸೇನೆಯ ಖೈದಿಗಳು ಬಿಡುಗಡೆ ಮಾಡಲ್ಪಟ್ಟಾಗ ಅವರ ಕೀರ್ತಿ ಪರಾಕಾಷ್ಠತೆಯನ್ನು ಮುಟ್ಟಿತು. ಅವರ ಮಗ ಹಾಗೂ ಸೊಸೆಯ ಶೋಕದಲ್ಲಿ ನನ್ನಂಥ ಅನೇಕ ಮಂದಿ ಸಹಭಾಗಿಗಳು. ಇವರಿಬ್ಬರೂ ಸ್ವರ್ಗೀಯ ಭುಲಾಭಾಯಿ ಅವರಲ್ಲಿದ್ದ ದೇಶಸೇವಾಪ್ರೇಮವನ್ನು ಪಿತ್ರಾರ್ಜಿತ ಆಸ್ತಿಯಾಗಿ ಪಡೆದು, ತಮ್ಮ ದುಃಖವನ್ನು ಆನಂದವಾಗಿ ಪರಿವರ್ತಿಸಿಕೊಳ್ಳುವರೆಂದು ಆಶಿಸುತ್ತೇನೆ. ಬಾಳನ್ನು ಬಾಳಲು ಯೋಗ್ಯವಾದುದನ್ನಾಗಿ ಮಾಡುವ ವಿಷಯವೆಂದರೆ ಇದುವೇ.೬೫

ಮಹಾದೇವ ದೇಸಾಯಿ

ಮಹಾದೇವ್ ಅಕಸ್ಮಾತ್ ಮೃತ್ಯುವಶರಾದರು. ಮೊದಲು ಏನೇನೂ ಸೂಚನೆಯೇ ಸಿಕ್ಕಲಿಲ್ಲ. ರಾತ್ರಿ ಚೆನ್ನಾಗಿಯೇ ನಿದ್ರೆ ಮಾಡಿದ್ದರು. ಬೆಳಗ್ಗೆ ಉಪಾಹಾರವನ್ನು ಮಾಡಿದರು. ನನ್ನೊಡನೆ ಅಡ್ಡಾಡಲಿಕ್ಕೆ ಬಂದಿದ್ದರು. ಸುಶೀಲಾ ಮತ್ತು ಜೈಲಿನ ಡಾಕ್ಟರರು ಸಾಧ್ಯವಿದ್ದುದನ್ನೆಲ್ಲ ಮಾಡಿದರು- ಆದರೆ, ಭಗವಂತನ ಇಚ್ಛೆ ಬೇರೆಯಾಗಿತ್ತು. ಸುಶೀಲಾ ಮತ್ತು ನಾನು ಶವಕ್ಕೆ ಸ್ನಾನಮಾಡಿಸಿದೆವು. ಶರೀರ ಶಾಂತಿಯಿಂದ ಪವಡಿಸಿದೆ. ಹೂವಿನಿಂದ ಮುಚ್ಚಲ್ಪಟ್ಟಿದೆ. ಧೂಪ ಉರಿಯುತ್ತಿದೆ. ಸುಶೀಲಾ, ನಾನು ಗೀತಾಪಾಠ ಮಾಡುತ್ತಿದೇವೆ. ಮಹಾದೇವ್ ಯೋಗಿಯಂತೆ, ದೇಶಭಕ್ತರಂತೆ ನಿಧನರಾದರು. ದುರ್ಗಾ, ಬಾಬಲಾ ಹಾಗೂ ಸುಶೀಲಾ ಇವರಿಗೆ ದುಃಖ ಪಡುವುದು ಸಲ್ಲದು ಎಂದು ಹೇಳು. ಇಂಥ ಮಹಾ ಮೃತ್ಯುವಿನ ಬಗೆಗೆ ಹರ್ಷಿಸಬೇಕು. ಅಂತ್ಯಕ್ರಿಯೆ ನನ್ನ ಎದುರಿಗೇ ನಡೆಯುತ್ತಿದೆ. ಭಸ್ಮವನ್ನು ತೆಗೆದಿಟ್ಟುಕೊಳ್ಳುವೆನು. ದುರ್ಗಾಗೆ ಆಶ್ರಮದಲ್ಲಿಯೇ ಇರುವಂತೆ ಸೂಚಿಸು. ಆದರೆ, ಆಕೆ ಹೋಗಬೇಕೆಂದೇ ಬಯಸಿದರೆ, ಮನೆಯವರ ಬಳಿಗೆ ಹೋಗಲಿ. ಬಾಬಲಾ ದಿಟ್ಟತನದಿಂದ ವರ್ತಿಸುವನೆಂದೂ, ಮಹಾದೇವ್ ಅವರ ಸುಯೋಗ್ಯ ಉತ್ತರಾಧಿಕಾರಿಯಾಗಲು ತಯಾರಿ ಮಾಡಿಕೊಳ್ಳುವನೆಂದೂ ಆಶಿಸುವೆ.೬೬

ಭಾವನೆಯೇ ಮಹಾದೇವರ ಆಹಾರವಾಗಿತ್ತು. ಮಹಾದೇವ್ ಬಲಿದಾನ ಸಾಮಾನ್ಯವಾದುದಲ್ಲ.೬೭

ನನ್ನ ಅಭಿಪ್ರಾಯದಲ್ಲಿ ಆವಶ್ಯಕತೆ ಒದಗಿದಾಗ ತಮ್ಮನ್ನು ತಾವು ಮರೆತು 'ಶೂನ್ಯ'ವಾಗುವ ಶಕ್ತಿಯೇ ಮಹಾದೇವರ ಸರ್ವಶ್ರೇಷ್ಠ ಗುಣ.೬೮

ಜಮನಾಲಾಲ್, ಮಗನಲಾಲ್, ಮಹಾದೇವ—ಇವರಲ್ಲಿ ಒಬ್ಬೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅಸಾಧಾರಣ ವ್ಯಕ್ತಿಗಳು. ಅವರ

ಸ್ಥಾನವನ್ನು ಬೇರೊಬ್ಬರು ತೆಗೆದುಕೊಳ್ಳುವುದು ಶಕ್ಯವಿಲ್ಲ. ಆದರೆ ಆ ಮೂವರಲ್ಲಿ ಮಹಾದೇವ್ ಸಂಪೂರ್ಣವಾಗಿ ನನ್ನಲ್ಲಿ ಲೀನವಾಗಿ ಹೋಗಿದ್ದ ರೆಂಬುದನ್ನು ನಾನು ಒಪ್ಪಿಕೊಳ್ಳಬೇಕು. ನನ್ನನ್ನು ಬಿಟ್ಟು ಅವರಿಗೆ ಬೇರೆ ಅಸ್ತಿತ್ವವೇ ಇರಲಿಲ್ಲ.

ಮಹಾದೇವರ ಒಂದು ಹಿರಿಯ ಗುಣವೆಂದರೆ, ಅವರಿಗೆ ವಹಿಸಿದ ಕಾರ್ಯವನ್ನು ಮಾಡಲು ಅವರು ಸದಾ ಸಿದ್ಧವಾಗಿರುತ್ತಿದ್ದರು ; ಅದನ್ನು ಬಹಳ ಉತ್ಸಾಹದಿಂದಲೂ ಮಾಡುತ್ತಿದ್ದರು. ಈ ಪ್ರಕಾರವೇ ಅವರು ಒಳ್ಳೆಯ ಸೇವಕರಾಗಲು, ಒಳ್ಳೆ ಅಡಿಗೆಭಟ್ಟರಾಗಲು, ಒಳ್ಳೆ ಕೂಲಿಯಾಗಲು ಸಾಧ್ಯವಾಯಿತು. ಬಹುತೇಕ ನನ್ನ ಬಳಿ ಕೆಲಸಮಾಡಲು ಬರುವವರೆಲ್ಲರೂ ಹಾಗೆಯೇ ಆಗುತ್ತಾರೆ.[೬೯]

ಮಹಾದೇವ್ ಒಂದು ಗುಲಾಬಿ ಹೂ.[೭೦]

ಅವರು ನನ್ನ ಜೀವನ ಚರಿತ್ರೆ ಬರೆಯಲು ಅಪೇಕ್ಷಿಸುತ್ತಿದ್ದರು ; ಆದರೂ ನನಗಿಂತ ಮೊದಲು ಸಾಯಲು ಅಪೇಕ್ಷಿಸುತ್ತಿದ್ದರು. ಅದಕ್ಕಿಂತ ಉತ್ತಮವಾದುದನ್ನು ಅವರು ಏನು ಮಾಡಿಯಾರು? ಸರಿ—ಅವರು ಹೊರಟುಹೋದರು. ಅವರ ಜೀವನ ಚರಿತ್ರೆಯನ್ನು ಬರೆಯಲು ನನಗೆ ಬಿಟ್ಟುಹೋದರು....ಮಕ್ಕಳು ತಂದೆತಾಯಿಗಳಿಗಿಂತ ಮೊದಲು ಸಾಯಲು ಬಯಸುವುದಕ್ಕಿಂತ ಹೆಚ್ಚಿನ ನಿರ್ದಯತೆ ಮತ್ತಾವುದುಂಟು ? ಇದು ಅವರ ಶುದ್ಧ ಸ್ವಾರ್ಥ. ಬೇರೆಯವರಿಗೆ ಮನವರಿಕೆ ಮಾಡಿಕೊಡಲು ಆಗದಿದ್ದರೂ ನನಗೆ ಅನಿಸುವುದು ಹೀಗೆ—ಮರಣ ಎಂದಿಗೂ ಕಾಲಕ್ಕೆ ಮುಂಚೆ ಬರುವುದಿಲ್ಲ.

ಮಹಾದೇವ್ ಅವರ ಮಿತ್ರರು ಮತ್ತು ಪ್ರಶಂಸಕರು, ಅವರ ಕಾರ್ಯವನ್ನು ಮಾಡುವುದರ ಮೂಲಕವೇ ಅವರ ವಾರ್ಷಿಕವನ್ನು ಆಚರಿಸಬೇಕು. ಅವರು ಶಕ್ತಿಶಾಲಿ ವ್ಯಕ್ತಿ. ಸುಂದರವಾದ ಲಕ್ಷಣವಾದ ಅಕ್ಷರ ಬರೆಯುತ್ತಿದ್ದರು. ಅವರಿಗೆ ಅನೇಕ ವಸ್ತುಗಳು ಪ್ರಿಯವಾಗಿದ್ದವು. ಅವುಗಳಲ್ಲಿ ಚರಖಕ್ಕೆ ಮೊದಲ ಸ್ಥಾನ. ಅವರು ಕಲಾಕಾರರಂತೆ ನಿಯಮಪ್ರಕಾರವಾಗಿ

ಸುಂದರವಾಗಿ ನೂಲು ತೆಗೆಯುತ್ತಿದ್ದರು. ಕೆಲಸ ಕಾರ್ಯಗಳ ಗುರುತರವಾದ ಹೊರೆಯಿಂದ ಬಳಲಿ ಬೆಂಡಾಗಿ ಹೋಗುತ್ತಿದ್ದರೂ, ನಿತ್ಯ ನೂಲಲು ಸಮಯವನ್ನು ಹುಡುಕಿ ತೆಗೆಯುತ್ತಿದ್ದರು. ಚರಖದಿಂದ ಅವರಿಗೆ ನವ ಚೇತನ ಉಂಟಾಗುತ್ತಿತ್ತು.

ಅವರ ಅನೇಕ ಗುಣಗಳಲ್ಲಿ ಅವರ ಅನುಪಮ ಅಕ್ಷರದ ಮಹತ್ವ ಕಡಿಮೆಯದಲ್ಲ. ಆ ವಿಷಯದಲ್ಲಿ ಅವರಿಗೆ ಯಾರೂ ಸಾಟಿಯಿಲ್ಲ. ರಾಮ ದಾಸ ಸ್ವಾಮಿಗಳು ತಮ್ಮದೊಂದು 'ಪದ' ದಲ್ಲಿ ಸುಂದರವಾದ ಅಕ್ಷರ ಗಳನ್ನು ಹೊಳೆಯುವ ಮುತ್ತಿಗೆ ಹೋಲಿಸಿದಾರೆ. ಮಹಾದೇವರ ಲೇಖಣಿ ಯಿಂದ ಹೊರಟ ಅಕ್ಷರಗಳು ಶುದ್ಧ ಮುತ್ತಿನಂತೆಯೇ ಇರುತ್ತಿದ್ದವು.

ಅವರ ಮೂರನೆಯ ಗುಣವೆಂದರೆ, ಹಿಂದೂಸ್ತಾನಿಯ ಬಗೆಗೆ ಅವರಿ ಗಿದ್ದ ಪ್ರೇಮ. ಎಲ್ಲರೂ ಆ ಗುಣವನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸ ಬೇಕು. ಅವರು ಭಾಷಾಶಾಸ್ತ್ರಜ್ಞರು. ಬಂಗಾಳಿ, ಮರಾಠಿ ಹಾಗೂ ಹಿಂದಿಯ ಮೇಲೆ ಅವರಿಗೆ ಪೂರ್ಣ ಅಧಿಕಾರವಿತ್ತು. ಉರ್ದುವನ್ನು ಕಲಿತಿದ್ದರು. ಜೈಲಿನಲ್ಲಿ ತಮ್ಮ ಸಂಗಾತಿಯಾಗಿದ್ದ ಖ್ವಾಜಾಸಾಹೆಬ್ ಎಂ. ಎ. ಮಜೀದರಿಂದ ಫಾರಸಿ, ಅರಬ್ಬಿ ಭಾಷೆಗಳನ್ನೂ ಕಲಿಯುವ ಪ್ರಯತ್ನ ಮಾಡಿದ್ದರು.೭೧

ಜಯರಾಮ್‌ದಾಸ್ ದೌಲತ್‌ರಾಮ್

ಯಾರ ಬಗೆಗೆ ನನಗೆ ಎಚ್ಚರಿಕೆ ಕೊಡಲಾಗಿದೆಯೋ ಅಂಥವರಲ್ಲಿ ಶ್ರೀ ಜಯರಾಮದಾಸ ಹಾಗೂ ಡಾ. ಚೋಯಿತರಾಮರು ಕಡೆಯವರು. ಜಯರಾಮದಾಸರ ಹೆಸರಿನಲ್ಲಿ ನಾನು ಆಣೆಯನ್ನೆ ಇಟ್ಟುಕೊಳ್ಳಬಲ್ಲೆ. ಇವರಿ ಗಿಂತ ಹೆಚ್ಚು ಪ್ರಾಮಾಣಿಕರಾದ ವ್ಯಕ್ತಿಗಳನ್ನು ನಾನು ಜೀವನದಲ್ಲಿಯೇ ಕಂಡಿಲ್ಲ. ಜೈಲಿನಲ್ಲಿ ಇವರ ನಡೆನುಡಿ ನಮ್ಮ ಮನವನ್ನು ಸೂರೆ ಗೊಂಡಿತ್ತು.೭೨

ಗುಲ್ಜಾರಿಲಾಲ್ ನಂದಾ

ಗುಜರಾತಿನೊಡನೆ ಹಾಸು ಹೊಕ್ಕಾಗಿ ಹೋಗಿರುವ ಪ್ಯಾರೇಲಾಲರ ಹಾಗೆ ಇವರು ಇನ್ನೊಬ್ಬ ಪಂಜಾಬಿಗಳು. ಒಂದು ರೀತಿಯಲ್ಲಿ ಪ್ಯಾರೇಲಾಲರಿಗಿಂತ ಇವರದು ಹೆಗ್ಗಳಿಕೆ; ಕಾರಣ ಪ್ಯಾರೇಲಾಲರ ದಾರಿಯಲ್ಲಿ ಅಡ್ಡ ಬರುವವರು ಯಾರೂ ಇಲ್ಲ. ಆದರೆ ಇವರಿಗೆ ಸ್ತ್ರೀಯರು, ಮಕ್ಕಳು ಮೊದಲಾದವರ ವಿರೋಧವಿದೆ. ಇವರು ಬಹಳ ವ್ಯವಸ್ಥಾ-ನಿಪುಣರು ಸತ್ಯದ ಉಗ್ರ ಉಪಾಸಕರು.೨೩

ದಾದಾಭಾಯಿ ನವರೋಜೀ

ದಾದಾಭಾಯಿ ನವರೋಜೀ ಅವರ ಶತಮಾನೋತ್ಸವ ಬರುವ ಸೆಪ್ಟೆಂಬರ್ ಳಕ್ಕೆ ಬೀಳುತ್ತದೆ. ಶ್ರೀ ಭರೂಚಾ ಅವರು ಸಕಾಲದಲ್ಲಿ ನನಗೆ ಅದರ ನೆನಪು ಮಾಡಿಕೊಟ್ಟಿದ್ದಾರೆ. ದಾದಾಭಾಯಿ ಅವರನ್ನು ನಾವು ಭಾರತದ ಪಿತಾಮಹ ಎನ್ನುತ್ತಿದ್ದೆವು. ಅವರು ತಮ್ಮ ಇಡೀ ಜೀವನವನ್ನು ಭಾರತಕ್ಕೆ ಸಮರ್ಪಣೆ ಮಾಡಿದ್ದರು ; ಭಾರತದ ಸೇವೆ ಅವರಿಗೆ ಒಂದು ಧರ್ಮವಾಗಿದ್ದಿತು. ಸ್ವರಾಜ್ಯಶಬ್ದ ನಮಗೆ ಅವರಿಂದಲೇ ದೊರೆತಿದೆ. ಅವರು ಭಾರತದ ಬಡವರ ಮಿತ್ರರು. ಭಾರತದ ದಾರಿದ್ರ್ಯ ದರ್ಶನವನ್ನು ನಮಗೆ ಮೊಟ್ಟಮೊದಲು ಮಾಡಿಸಿದವರು ಅವರೇ. ಅವರು ತಯಾರಿಸಿದ ಅಂಕಿ ಅಂಶಗಳನ್ನು ತಪ್ಪೆಂದು ತೋರಿಸಿಕೊಡಲು, ಇದುವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ. ಹಿಂದೂ, ಮುಸಲ್ಮಾನ್, ಪಾರಸಿ, ಕ್ರೈಸ್ತ—ಯಾರಲ್ಲಿಯೂ ಅವರು ಭೇದಭಾವ ಇಟ್ಟುಕೊಂಡಿರಲಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲರೂ ಭಾರತದ ಮಕ್ಕಳು. ಅಂತಲೆ ಎಲ್ಲರೂ ಸಮಾನರೂಪದಲ್ಲಿ ಅವರ ಸೇವೆಗೆ ಪಾತ್ರರಾಗಿದ್ದರು. ಅವರ ಈ ಸ್ವಭಾವ ಅವರ ಇಬ್ಬರು ಪೌತ್ರಿಯರಲ್ಲಿ ಹದಿನಾರು ಆಣೆಯಷ್ಟು ಕಂಡುಬರುತ್ತದೆ.

ಈ ಮಹಾನ್ ಭಾರತ ಸೇವಕರ ಶತಾಬ್ಧಿಯನ್ನು ನಾವು ಹೇಗೆ ಆಚ

ರಿಸಬೇಕು? ಸಭೆಗಳಂತೂ ನಗರಗಳಲ್ಲಿ ಮಾತ್ರವಲ್ಲ, ಕಾಂಗ್ರೆಸ್ ಸುದ್ದಿ ಮುಟ್ಟಿರುವ ಎಲ್ಲ ಹಳ್ಳಿಗಳಲ್ಲೂ ನಡೆಯುವುವು. ಸಭೆಗಳಲ್ಲಿ ಮಾಡುವು ದೇನು? ಅವರ ಸ್ತುತಿಪಾಠವೆ? ಅಷ್ಟನ್ನೇ ಮಾಡುವುದಾದರೆ, ಹೊಗಳು ಭಟ್ಟರನ್ನು ಕರೆಸಿ, ಅವರ ಕಲ್ಪನಾಶಕ್ತಿ ಹಾಗೂ ವಾಕ್‌ಪ್ರವಾಹದ ಉಪ ಯೋಗ ಮಾಡಿಕೊಂಡು, ಸುಮ್ಮನೆ ಕೂಡಬಹುದಲ್ಲ? ಅವರ ಗುಣಗಳನ್ನು ಅನುಸರಿಸಲು ಬಯಸುವುದಾದರೆ, ಅವುಗಳ ಪರೀಕ್ಷಣ ಮಾಡಿ, ನಮ್ಮ ಅನುಕರಣ ಶಕ್ತಿಯನ್ನು ಅಳೆದುನೋಡಬೇಕು.

ದಾದಾಭಾಯಿ ಅವರು ಭಾರತದ ಬಡತನವನ್ನು ಕಂಡರು. ಅದಕ್ಕೆ 'ಸ್ವರಾಜ್ಯ'ವೇ ಔಷಧಿ ಎಂಬುದನ್ನು ತಿಳಿಸಿದರು. ಆದರೆ ಸ್ವರಾಜ್ಯ ಪ್ರಾಪ್ತಿಯ ಸಾಧನದ ಶೋಧನೆಯ ಜವಾಬದಾರಿಯನ್ನು ನಮ್ಮ ಮೇಲೆಯೇ ಬಿಟ್ಟುಹೋದರು. ದಾದಾಭಾಯಿ ಅವರು ಪೂಜ್ಯರಾಗುವುದಕ್ಕೆ ಅವರ ದೇಶಕ್ತಿಯೇ ಮುಖ್ಯ ಕಾರಣ, ಆ ಭಕ್ತಿಯಲ್ಲಿ ಅವರು ಬಹಳ ಲೀನರಾಗಿ ಹೋಗಿದ್ದರು.

ಸ್ವರಾಜ್ಯ ಗಳಿಸಲು ಎಲ್ಲಕ್ಕಿಂತ ದೊಡ್ಡಸಾಧನ ಚರಖಾ ಎಂಬುದು ನಮಗೆ ಗೊತ್ತು. ರೈತರು ವರ್ಷದಲ್ಲಿ ಆರು ಅಥವಾ ನಾಲ್ಕುತಿಂಗಳು ಕೆಲಸ ವಿಲ್ಲದೆ ಇರುವುದೇ ಭಾರತದ ಬಡತನಕ್ಕೆ ಮುಖ್ಯ ಕಾರಣ. ಈ ಅನಿವಾರ್ಯ ನಿರುದ್ಯೋಗ ಐಚ್ಛಿಕ ನಿರುದ್ಯೋಗವಾಗಿಬಿಟ್ಟಿದೆ. ಅಂದರೆ ಸೋಮಾರಿ ತನವೇ ನಮ್ಮ ಸ್ವಭಾವವಾಗಿಬಿಟ್ಟರೆ ಈ ದೇಶದ ಮುಕ್ತಿಗೆ ದಾರಿಯೇ ಇರು ವುದಿಲ್ಲ. ಅಷ್ಟೇ ಅಲ್ಲ, ಸರ್ವನಾಶವೇ ಇದರ ನಿಶ್ಚಿತ ಭವಿಷ್ಯವಾಗುವುದು. ಈ ಸೋಮಾರಿತನವನ್ನು ಓಡಿಸುವುದಕ್ಕೆ ಚರಖವೊಂದೇ ಸಾಧನ. ಆದ ಕಾರಣ, ಚರಖಾಕ್ಕೆ ಪ್ರೋತ್ಸಾಹ ಕೊಡುವ ಪ್ರತಿಯೊಂದು ಕಾರ್ಯವೂ ದಾದಾಭಾಯಿ ಅವರ ಗುಣಗಳ ಅನುಕರಣೆಯೇ ಆಗುವುದು.

ಚರಖಾ ಅಂದರೆ ಖಾದಿ. ಚರಖಾ ಅಂದರೆ ವಿದೇಶೀ ವಸ್ತ್ರದ ಬಹಿ ಷ್ಕಾರ. ಚರಖಾ ಅಂದರೆ ಬಡವರ ಗುಡಿಸಲುಗಳಿಗೆ ೬೦ ಕೋಟಿ ರೂಪಾ ಯಿಯ ಪ್ರವೇಶ.

ಅಖಿಲ-ಭಾರತ-ದೇಶಬಂಧು ಸ್ಮಾರಕಕ್ಕೂ ಚರಖಾದ ವ್ಯವಸ್ಥೆ ಯನ್ನೇ ಮಾಡಲಾಗಿದೆ. ಆದಕಾರಣ ಆ ನಿಧಿಗೆ ಧನ ಕೂಡಿಸುವು

ದೆಂದರೆ, ದಾದಾಭಾಯಿ ಅವರ ಜಯಂತಿಯನ್ನು ಆಚರಿಸಿದಂತೆಯೇ. ಆದಿನ ಮಂದಿ ಒಂದುಗೂಡಿ, ವಿದೇಶೀ—ವಸ್ತ್ರವನ್ನು ಪೂರ್ಣವಾಗಿ ತ್ಯಜಿಸಲಿ; ಕೈಯಿಂದ ನೂತ ನೂಲಿನ ಖಾದೀಬಟ್ಟೆಯನ್ನೇ ಧರಿಸಲಿ; ಕನಿಷ್ಠ ಪಕ್ಷ ದಿನಕ್ಕೆ ಅರ್ಧಘಂಟೆಕಾಲ ನೂಲುವ ಸಂಕಲ್ಪಮಾಡಲಿ; ಹಾಗೂ ಖಾದೀ ಪ್ರಚಾರಕ್ಕಾಗಿ ಧನ-ಸಂಗ್ರಹ ಮಾಡಲಿ ಹತ್ತಿ ಬೆಳೆಯುವವರು ತಮಗೆ ಬೇಕಾಗುವಷ್ಟು ಹತ್ತಿಯನ್ನು ಮನೆಯಲ್ಲೇ ಇಟ್ಟುಕೊಳ್ಳಲಿ.

ಚರಖಾ ಹೆಸರೇ ಸೇರದವರು ಏನು ಮಾಡಬೇಕು? ಅವರಿಗೆ ನಾನು ಏನು ಉಪಾಯ ಸೂಚಿಸಲಿ? ಸ್ವರಾಜ್ಯದ ಹೆಸರೇ ಹಿಡಿಸದ ಮಂದಿಗೆ ಜಯಂತಿಯನ್ನು ಆಚರಿಸಲು ಯಾವ ಮಾರ್ಗ ಸೂಚಿಸಲಿ? ಅಂಥವರು ಸ್ವತಃ ಏನಾದರೂ ಮಾರ್ಗ ಕಂಡುಕೊಳ್ಳಬೇಕು. ನನ್ನ ಸೂಚನೆ ಸಾರ್ವಜನಿಕವಾದುದು. ದಾದಾಭಾಯಿ ಅವರ ಇತರ ಗುಣಗಳನ್ನು ಶೋಧನೆ ಮಾಡಿ, ಅವುಗಳನ್ನು ಅನುಸರಿಸುವುದಾದರೆ, ಅದು ಬೇರೆ ಮಾತು ಹಾಗೆ ಬೇರೆ ರೀತಿಯಲ್ಲಿ ಜಯಂತಿಯನ್ನು ಆಚರಿಸುವ ಹಕ್ಕು ಅವರಿಗೆ ಇದ್ದೇ ಇದೆ. ಅದನ್ನು ಕರ್ತವ್ಯವೆನ್ನಲೂಬಹುದು. ಸ್ವರಾಜ್ಯ ಪಕ್ಷ ನಗರಗಳಲ್ಲಿ ಏನಾದರೂ ವಿಶೇಷ ಕಾರ್ಯಕ್ರಮ ಏರ್ಪಡಿಸುವುದಾದರೆ, ಅಗತ್ಯವಾಗಿ ಹಾಗೆ ಮಾಡಬಹುದು. ನಾನು ತಿಳಿಸುವ ಕಾರ್ಯಕ್ರಮವಾದರೋ ಪಟ್ಟಣಿಗರೇನು—ಹಳ್ಳಿಗರೇನು, ಮಕ್ಕಳೇನು, ಮುದುಕರೇನು, ಹೆಂಗಸರೇನು—ಗಂಡಸರೇನು, ಹಿಂದೂಗಳೇನು—ಮುಸಲ್ಮಾನರೇನ,—ಎಲ್ಲರೂ ನಡೆಸಬಹುದಾದಂಥದು.

ನನ್ನ ವಿಚಾರದ ಮೇರೆಗೆ ದಾದಾಭಾಯಿ ಅವರ ಜಯಂತಿಯನ್ನು ಮಂದಿ ಆಚರಿಸಲು ಬಯಸುವುದಾದರೆ, ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು. ಇಂದಿನಿಂದಲೇ ಚರಖಾ ನಡೆಸಲು ತೊಡಗಬೇಕು. ಇಂದಿನಿಂದಲೇ ಅದರ ಸಲುವಾಗಿ ಖಾದೀ-ಉತ್ಪತ್ತಿ ಮಾಡಬೇಕು. ನಮಗೂ ದೇಶಕ್ಕೂ ಒಪ್ಪುವಂಥ ಸಭೆಗಳನ್ನು ಅಲ್ಲಲ್ಲಿ ನಡೆಸಬೇಕು.೭೪

ಮದ್ಯ ನಿಷೇಧ ವಿರೋಧಿ ಶಿಷ್ಯಮಂಡಲದೊಡನೆ ಮಾತನಾಡುತ್ತ, ಗಾಂಧೀಜಿ ಹೀಗೆಂದರು—

ಮದ್ಯ ನಿಷೇಧದ ವಿಷಯವನ್ನು ನನಗೆ ಕಲಿಸಿದವರು ಸ್ವರ್ಗೀಯ

ದಾದಾಭಾಯಿ ನವರೋಜಿ ಅವರೇ, ಮದ್ಯ ನಿಷೇಧ ಹಾಗೂ ಮಿತಪಾನದ ನಡುವೆ ಭೇದ ಮಾಡುವುದನ್ನು ಅವರೇ ನನಗೆ ಕಲಿಸಿದ್ದರು.೭೫

ಕಮಲಾ ನೆಹರೂ

ಕಳೆದ ದಿನಾಂಕ ೧೯ ರಂದು ಕಮಲಾ ನೆಹರೂ ಸ್ಮಾರಕ ಆಸ್ಪತ್ರೆಯ ಶಂಕುಸ್ಥಾಪನೆಮಾಡುವ ಸೌಭಾಗ್ಯ ನನಗೆ ಲಭಿಸಿತ್ತು. ಆ ಆಸ್ಪತ್ರೆ ಓರ್ವ ಒಳ್ಳೆ ದೇಶಸೇವಿಕೆ ಹಾಗೂ ಆಧ್ಯಾತ್ಮಿಕ ಗುಣಸಂಪನ್ನೆಯಾದ ಮಹಾನ್ ಮಹಿಳೆಯ ಉಪಯುಕ್ತ ಸ್ಮಾರಕವಂತೂ ಆಗಿಯೇ ಆಗುವುದು. ಜತೆಗೆ ನಾನು ಆಕೆಗೆ ಕೊಟ್ಟದ್ದ ವಚನದ ಪಾಲನೆಯೂ ಇದರಿಂದ ಆದಂತಾಗುವುದು. ಆಕೆ ಯಾವ ಕಾರ್ಯದ ಹೊಣೆಗಾರಿಕೆಯನ್ನು ಹೊತ್ತಿದ್ದಳೋ ಆ ಕಾರ್ಯ ಆಕೆಯ ಮರಣದ ನಂತರವೂ ಸರಿಯಾಗಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳಲು ಪ್ರಯತ್ನಿಸುವುದಾಗಿ ನಾನು ಆಕೆಗೆ ಮಾತು ಕೊಟ್ಟದ್ದೆ. ಆಕೆ ಆರೋಗ್ಯ ಸುಧಾರಣೆಗಾಗಿ ಯೂರೋಪಿಗೆ ಹೊರಟಿದ್ದಳು. ಆದರೆ ಯೂರೋಪು ಯಾತ್ರೆ ಆಕೆಯ ಪಾಲಿಗೆ ಸ್ಮಶಾನಯಾತ್ರೆಯಾಗಿಯೇ ಪರಿಣಮಿಸಿತು. ನಾನು ತನ್ನೊಡನೆ ಬೊಂಬಾಯಿಗೆ ಹೊರಡಬೇಕೆಂದೂ ಇಲ್ಲವೆ ನೇರವಾಗಿ ಬೊಂಬಾಯಿಗೆ ಹೋಗಿದ್ದು, ಅಲ್ಲಿ ತನ್ನನ್ನು ನೋಡಲು ಬರಬೇಕೆಂದೂ ಬರೆದು ತಿಳಿಸಿದ್ದಳು. ನಾನು ಆಕೆಗೆ ಸ್ವಲ್ಪವೇ ಕಾಲ ಕೊಡಲು ಸಾಧ್ಯವಾಯಿತು. ಆಗ ಆಕೆ ಹೀಗೆ ಹೇಳಿದಳು— "ಯೂರೋಪಿನಲ್ಲಿ ನನ್ನ ದೇಹಾಂತವಾದರೆ ಜವಾಹರಲಾಲರು ಸ್ವರಾಜ್ಯ ಭವನದಲ್ಲಿ ಯಾವ ಆಸ್ಪತ್ರೆಯನ್ನು ತೆರೆದಿರುವರೋ ಯಾವುದನ್ನು ಸ್ಥಾಯಿಯಾಗಿರಲು ಇಷ್ಟು ಪರಿಶ್ರಮ ಮಾಡಿರುವೆನೋ ಆ ಆಸ್ಪತ್ರೆ ಬುಡಭದ್ರವಾಗಿ ನೆಲೆಸುವಂತೆ ನೋಡಿಕೊಳ್ಳಲು ನೀವು ಪ್ರಯತ್ನಿಸುವಿರಷ್ಟೆ?" ನನ್ನ ಕೈಯಿಂದ ಆಗುವುದನ್ನೆಲ್ಲ ಅಗತ್ಯವಾಗಿ ಮಾಡುವುದಾಗಿ ಆಕೆಗೆ ಮಾತು ಕೊಟ್ಟೆ. ಈ ಸ್ಮಾರಕ ನಿಧಿಯ ಸಲುವಾಗಿ ಹೊರಡಿಸಿರುವ ಪ್ರಾರ್ಥನೆಯಲ್ಲಿ ನಾನು ಸೇರಿಕೊಂಡಿರುವುದಕ್ಕೆ ನಾನು ಆಕೆಗೆ ಕೊಟ್ಟಿರುವ ವಚನ ಆಂಶಿಕ ಆಧಾರ.೭೬

ಜವಾಹರಲಾಲ್ ನೆಹರೂ

ವಯಸ್ಸಾದ ನಾಯಕರು ಈಗ ತಮ್ಮ ಕಾರ್ಯ ಕಾಲವನ್ನು ಮುಗಿಸಿದ್ದಾರೆ. ಭಾವೀ ಸಂಗ್ರಾಮದಲ್ಲಿ ಧುಮ್ಮಿಕ್ಕುವುದು ನವತರುಣರ ಹಾಗೂ ನವತರುಣಿಯರ ಕೆಲಸ. ಅವರ ನೇತೃತ್ವವನ್ನು ವಹಿಸಲು ಅವರಲ್ಲೇ ಒಬ್ಬರನ್ನು ನಿಲ್ಲಿಸುವುದೇ ಉಚಿತ. ವಯಸ್ಸಾದವರು ಸಮಯದ ಗತಿಯನ್ನು ಪರುಕಿಸಬೇಕು; ಇಲ್ಲದಿದ್ದರೆ ಅವರು ಸಹಜ ಔದಾರ್ಯದಿಂದ ಕೊಡದುದನ್ನು ತರುಣರು ಬಲಾತ್ಕಾರವಾಗಿ ಕಸಿದುಕೊಳ್ಳುವರು. ಹೊಣೆಗಾರಿಕೆ ತಲೆಯ ಮೇಲೆ ಬಿದ್ದಾಗ ನವತರುಣರಲ್ಲಿ ಸೌಮ್ಯತೆ ಹಾಗೂ ಗಾಂಭೀರ್ಯ ತಾನಾಗಿಯೇ ಮೂಡಿಬರುವುದು; ಹಾಗೂ ತಾವೇ ನಿರ್ವಹಿಸಬೇಕಾದ ಜವಾಬುದಾರಿಯನ್ನು ಹೊರಲು ಅವರು ಸಿದ್ಧರಾಗುವರು. ಪಂ. ಜವಾಹರಲಾಲರು ಎಲ್ಲ ರೀತಿಯಿಂದಲೂ ಯೋಗ್ಯರು. ಅನೇಕ ವರ್ಷಗಳ ಕಾಲ ಅವರು ಕಾಂಗ್ರೆಸ್ ಕಾರ್ಯದರ್ಶಿಯ ಕೆಲಸವನ್ನು ಅನನ್ಯ ಯೋಗ್ಯತೆ ಹಾಗೂ ನಿಷ್ಠೆಯಿಂದ ಮಾಡಿದಾರೆ. ತಮ್ಮ ಪರಾಕ್ರಮ, ದೃಢಸಂಕಲ್ಪ, ನಿಷ್ಠೆ, ಸರಳತೆ, ಪ್ರಾಮಾಣಿಕತೆ ಹಾಗೂ ಧೈರ್ಯ—ಈ ಗುಣಗಳಿಂದ ಅವರು ದೇಶದ ನವತರುಣರ ಮನಸ್ಸನ್ನು ಸೂರೆಗೊಂಡಿದ್ದಾರೆ. ಅವರು ಕೂಲಿಗಾರರು ಹಾಗೂ ರೈತರ ಸಂಪರ್ಕವನ್ನು ಬೆಳೆಸಿದ್ದಾರೆ. ಅವರಿಗೆ ಯುರೋಪಿನ ರಾಜನೀತಿಯ ಸೂಕ್ಷ್ಮ ಪರಿಚಯವಿದೆ. ಅದರಿಂದಾಗಿ ಸ್ವದೇಶದ ರಾಜನೀತಿಯನ್ನು ಅರಿತುಕೊಳ್ಳಲು ಹಾಗೂ ರೂಪಿಸಲು ಹೆಚ್ಚಿನ ಸಹಾಯವಾಗುವುದು.

ಜವಾಹರಲಾಲರಿಗೂ ನನಗೂ ಇರುವ ಸಂಬಂಧ ಎಂಥದು ಎಂಬುದನ್ನು ತಿಳಿದಿರುವವರಿಗೆ ನಾನು ಅಧ್ಯಕ್ಷನಾದರೂ ಒಂದೇ, ಜವಾಹರಲಾಲರು ಅಧ್ಯಕ್ಷರಾದರೂ ಒಂದೇ ಎಂಬುದೂ ತಿಳಿದಿದೆ. ವಿಚಾರ ಹಾಗೂ ಬುದ್ಧಿಯ ದೃಷ್ಟಿಯಿಂದ ನಮ್ಮಲ್ಲಿ ಮತಭೇದ ಇರಬಹುದಾದರೂ ನಮ್ಮ ಹೃದಯ ಒಂದೇ. ಎರಡನೆಯದಾಗಿ ವಯೋನುಗುಣವಾದ ಉಗ್ರತೆ ಇದ್ದರೂ ಕಟ್ಟುನಿಟ್ಟಾದ ಶಿಸ್ತು, ಏಕನಿಷ್ಠೆ ಮೊದಲಾದ ಗುಣಗಳಿಂದ ಅವರು ಪೂರ್ಣ ವಿಶ್ವಾಸಕ್ಕೆ ಅರ್ಹರಾದ ಅದ್ವಿತೀಯ 'ಸಖ' ಆಗಿದಾರೆ.

ಆಂಗ್ಲರ ದೃಷ್ಟಿಯಲ್ಲಿ ಪ್ರಾಮಾಣಿಕತೆ, ವೀರತೆ, ಧೈರ್ಯ ಹಾಗೂ

ಸ್ಪಷ್ಟವಾದಿತ್ವ ಅಮೂಲ್ಯ ಗುಣಗಳು. ಆ ಗುಣಗಳು ಜವಾಹರಲಾಲರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ.೭೭

ಪರಾಕ್ರಮದಲ್ಲಿ ಅವರನ್ನು ಯಾರೂ ಮೀರಿಸಲಾರರು. ದೇಶಪ್ರೇಮದಲ್ಲಿ ಅವರಿಗಿಂತ ಮುಂದೆ ಸಾಗಬಲ್ಲವರಾರು? ಅವರು ಆತುರದ ಪ್ರಕೃತಿಯವರೆಂದೂ, ತಾಳ್ಮೆಯಿಲ್ಲದವರೆಂದೂ ಕೆಲವರು ಹೇಳುತ್ತಾರೆ. ಈ ಸಮಯಕ್ಕೆ ಅದು ಒಂದು ಗುಣವೇ ಅಲ್ಲದೆ, ವೀರ ಯೋಧನ ತೀವ್ರತೆ ಹಾಗೂ ಅಸಹನ ಇರುವಂತೆಯೇ ರಾಜನೀತಿಜ್ಞನ ವಿವೇಕವೂ ಇದೆ. ಅವರು ಸ್ಫಟಿಕ ಮಣಿಯಂತೆ ಪವಿತ್ರರು. ಅವರ ಸತ್ಯಶೀಲತೆ ಸಂಶಯಾತೀತ. ಅವರ ಅಹಿಂಸಕ ಹಾಗೂ ಅಭಿನಂದನೀಯ ಯೋಧರು. ಅವರ ಕೈಯಲ್ಲಿ ರಾಷ್ಟ್ರ ಸುರಕ್ಷಿತವಾಗಿದೆ.೭೮

....ಜವಾಹರಲಾಲರಂಥ ನವತರುಣರಾದ ರಾಷ್ಟ್ರಪತಿಗಳು ನಮಗೆ ಮೇಲಿಂದ ಮೇಲೆ ಸಿಕ್ಕುವುದಿಲ್ಲ. ಭಾರತದಲ್ಲಿ ತರುಣರಿಗೇನೂ ಕಡಿಮೆ ಇಲ್ಲ. ಆದರೆ, ಜವಾಹರಲಾಲರಿಗೆ ಸರಿಗಟ್ಟಬಲ್ಲ ಯಾವ ತರುಣನನ್ನೂ ನಾನು ನೋಡಿಲ್ಲ. ಅವರಲ್ಲಿ ನನಗೆ ಅಷ್ಟು ಪ್ರೇಮ; ಮೋಹವೆಂದಾದರೂ ಅನ್ನಿ. ಆದರೆ ಅವರ ಬಗೆಗೆ ಈ ಪ್ರೇಮ ಅಥವಾ ಮೋಹ ನನ್ನಲ್ಲಿ ಮೂಡಿರುವುದು ಅವರ ಶಕ್ತಿಯ ಆಧಾರದ ಮೇಲೆ. ಅಂತಲೆ ನಾನು ಹೇಳುವೆ— ಅವರ ಕೈಯಲ್ಲಿ ಲಗಾಮು ಇರುವಾಗಲೇ ನಾವು ನಮ್ಮ ಇಷ್ಟಾರ್ಥಸಿದ್ಧಿ ಮಾಡಿಕೊಂಡರೆ ಎಷ್ಟು ಚೆಂದ?೭೯

ಪಂ. ನೆಹರೂ ತಮ್ಮ ದೇಶ ಹಾಗೂ ಅದರ ವೇದಿಕೆಯ ಮೇಲೆ ತನ್ನ ಜೀವನದ ಸಮಸ್ತ ಆಶೆ-ಆಕಾಂಕ್ಷೆಗಳನ್ನು ಆಹುತಿಕೊಟ್ಟಿದ್ದಾರೆ. ಎಲ್ಲಕ್ಕಿಂತ ವಿಶೇಷವಾದ ವಿಷಯವೆಂದರೆ, ಬೇರೆ ಯಾವುದೇ ದೇಶದ ಸಹಾಯದಿಂದ ಸಿಕ್ಕಬಹುದಾದ ನಮ್ಮ ಸ್ವಾತಂತ್ರ್ಯ ಗೌರವ ಪೂರ್ಣವಾದುದಲ್ಲವೆಂದು ಅವರು ಭಾವಿಸಿದಾರೆ.

ಜವಾಹರಲಾಲರ ಮಟ್ಟಿಗೆ ಹೇಳುವುದಾದರೆ, ಒಬ್ಬರನ್ನೊಬ್ಬರು ಬಿಟ್ಟು

ನಮ್ಮ ಕೆಲಸ ಸಾಗುವ ಹಾಗೆಯೇ ಇಲ್ಲ. ಕಾರಣ, ಯಾವುದೇ ಬೌದ್ಧಿಕ ಮತಭೇದ ನಾಶಪಡಿಸಲಾರದಂಥ ಆತ್ಮೀಯತೆ ನಮ್ಮಲ್ಲಿ ಮೂಡಿದೆ.೬೦

ಕೇವಲ ಮತಭೇದ ನಮ್ಮನ್ನು ಬೇರ್ಪಡಿಸಲಾರದು. ನಾವು ಸಹ ಕರ್ಮಚಾರಿಗಳಾದಾಗಿನಿಂದಲೂ ನಮ್ಮಲ್ಲಿ ಮತಭೇದ ನಡದೇ ಬಂದಿದೆ. ಆದರೂ ಅನೇಕ ವರುಷಗಳಿಂದ ಈ ಮಾತು ಹೇಳುತ್ತ ಬಂದಿದೇನೆ; ಈಗಲೂ ಹೇಳುತ್ತೇನೆ: "ನನ್ನ ಉತ್ತರಾಧಿಕಾರಿ ಜವಾಹರಲಾಲರು ಆದಾರೇ ಹೊರತು, ರಾಜಾಜಿ ಅಲ್ಲ" ನನ್ನ ಭಾಷೆ ತಮಗೆ ಅರ್ಥವಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಅವರ ಭಾಷೆಯ ಪರಿಚಯ ನನಗೆ ಇಲ್ಲವೆಂದು ಹೇಳುತ್ತಾರೆ. ಇದು ಸರಿಯೋ, ಅಲ್ಲವೋ ನನಗೆ ತಿಳಿಯದು. ಆದರೆ ಹೃದಯದ ಏಕತೆಗೆ ಭಾಷೆ ಬಾಧಕವಾಗದು.

ನಾನು ಕಣ್ಮರೆಯಾದ ಮೇಲೆ, ಜವಾಹರಲಾಲರು ನನ್ನ ಭಾಷೆಯಲ್ಲಿಯೇ ಮಾತನಾಡುವರೆಂಬುದನ್ನು ನಾನು ಬಲ್ಲೆ.೬೧

ಜನ ಸ್ವಲ್ಪ ಬುದ್ಧಿವಂತಿಕೆಯಿಂದ ನಡೆದುಕೊಂಡರೆ ಸ್ವರಾಜ್ಯ ಹಸ್ತಗತವಾದ ಹಾಗೆಯೇ; ಕಾರಣ ನಮ್ಮ ಸರಕಾರದ ಉಪ ಪ್ರಧಾನರು ಜವಾಹರಲಾಲರು. ವೈಸರಾಯರು ಪ್ರಧಾನರೆಂಬುದೇನೋ ಸರಿ. ಆದರೆ ಈಗ ತೆಪ್ಪಗೆ ಕೂಡುವುದು ಅವರ ಕೆಲಸ. ನಿಮ್ಮ ನಿಜವಾದ ಬಾದಶಹರು ಜವಾಹರಲಾಲರೇ. ಅವರು ಹಿಂದೂಸ್ತಾನಕ್ಕೆ ಸೇವೆ ಸಲ್ಲಿಸ ಬಯಸುವ ಬಾದಶಹರಂತೂ ಹೌದೇ ಹೌದು; ಆ ಮೂಲಕ ಅವರು ಇಡೀ ಪ್ರಪಂಚಕ್ಕೂ ಸೇವೆ ಸಲ್ಲಿಸ ಬಯಸುತ್ತಾರೆ. ಅವರು ಎಲ್ಲ ದೇಶಗಳ ಜನರ ಪರಿಚಯ ಮಾಡಿಕೊಂಡಿದಾರೆ. ದೇಶ ದೇಶಗಳ ರಾಜದೂತರನ್ನು ಸತ್ಕರಿಸುವುದರಲ್ಲಿ ಅವರು ಬಹಳ ನಿಪುಣರು. ಆದರೆ, ಅವರೊಬ್ಬರೇ ಎಷ್ಟು ಕೆಲಸ ಮಾಡಿಯಾರು?

ಆ ಕಿರೀಟ ರಹಿತ ಚಕ್ರವರ್ತಿ ನಿಮ್ಮ ಸೇವಕರು ಅವರು ನಿಮ್ಮ ಅರಾಜಕತೆಯನ್ನು ಬಂದೂಕದಿಂದ ಅಡಗಿಸುವರೇನು? ಒಬ್ಬರನ್ನು ಹಾಗೆ ಅಡಗಿಸಿದರೆ, ನಾಳೆ ಇನ್ನೊಬ್ಬರನ್ನೂ ಹಾಗೆಯೇ ಅಡಗಿಸಬೇಕಾಗುವುದು.

ಅದು ಸ್ವರಾಜ್ಯ ಎನಿಸಿಕೊಳ್ಳುವುದಿಲ್ಲ. ಪಂಚಾಯತಿ ರಾಜ್ಯವೂ ಆಗುವುದಿಲ್ಲ. ನೀವು ಶಿಸ್ತಿನಿಂದ ನಡೆದರೆ ಮಾತ್ರ ಜವಾಹರಲಾಲರ 'ಬಾದಶಾಹಿ' ನಡೆಯುವುದು; ನಮ್ಮ ಸ್ವರಾಜ್ಯ ಸುಖಮಯವಾಗುವುದು.

ಸ್ವತಃ ಜವಾಹರಲಾಲರು ಹೇಗೆ ಶಿಸ್ತಿನಿಂದ ನಡೆಯುತ್ತಾರೆಂಬುದಕ್ಕೆ ಒಂದು ಉದಾಹರಣೆ ಕೇಳಿ. ಹಿಂದಿನ ವರುಷ ಅವರು ಕಾಶ್ಮೀರಕ್ಕೆ ಹೋಗಿದ್ದಾಗ, ವೇವೆಲ್ ಸಾಹೇಬರಿಗೆ ಅವರ ಆವಶ್ಯಕತೇ ಉಂಟಾಯಿತು. ಮೌಲಾನಾ ಸಾಹೇಬರು ಅವರನ್ನು ಕರೆಸಲು ಬಯಸಿದರು. ನನ್ನ ಸಂಧಾನದಿಂದಾಗಿ ಜವಾಹರಲಾಲರು ಕಾಶ್ಮೀರದಲ್ಲಿಯ ಹೋರಾಟವನ್ನು ತೊರೆದು ರಾಷ್ಟ್ರಪತಿ (ಕಾಂಗ್ರೆಸ್ ಅಧ್ಯಕ್ಷರು) ಯ ಆಜ್ಞೆಗೆ ತಲೆಬಾಗಿ ವಾಪಸು ಬಂದು ಬಿಟ್ಟರು.೮೨

ನಿನ್ನೆ ನಾನು ಜವಾಹರಲಾಲರ ಅಮೂಲ್ಯ ಕಾರ್ಯದ ಬಗೆಗೆ ಪ್ರಸ್ತಾಪ ಮಾಡಿದ್ದೆ. ನಾನು ಅವರನ್ನು ಹಿಂದೂಸ್ತಾನದ ಕಿರೀಟರಹಿತ ಚಕ್ರವರ್ತಿ ಎಂದು ಕರೆದಿದ್ದೆ. ಇಂಗ್ಲೀಷರು ಇಲ್ಲಿಂದ ಅಧಿಕಾರ-ಸತ್ತೆಯನ್ನು ಉಪಸಂಹರಿಸಿಕೊಳ್ಳುತ್ತಿರುವ ಸಮಯದಲ್ಲಿ ಜವಾಹರಲಾಲರ ಸ್ಥಾನಕ್ಕೆ ತೆಗೆದುಕೊಳ್ಳುವವರು ಬೇರೆ ಯಾರೂ ಇಲ್ಲ. ವಿಲಾಯತಿಯ ಪ್ರಸಿದ್ಧವಾದ ಹ್ಯಾರೋ ಮತ್ತು ಕೇಂಬ್ರಿಡ್ಜ್ ವಿದ್ಯಾಪೀಠಗಳಲ್ಲಿ ಶಿಕ್ಷಣಪಡೆದು, ಬ್ಯಾರಿಸ್ಟರ್ ಸಹ ಆಗಿರುವ ಜವಾಹರಲಾಲರು ಇಂದು ಆಂಗ್ಲೇಯರೊಡನೆ ಮಾತುಕತೆ ಆಡಬೇಕಾದ ಆವಶ್ಯಕತೆಯಿದೆ.೮೩

ನಾಳಿದ್ದು ಹರಿದ್ವಾರಕ್ಕೆ ಹೊರಡನೆ. ನನ್ನೊಡನೆ ಜವಾಹರಲಾಲರೂ ಬರುವರು. ಅವರಾದರೋ ಸಂಯುಕ್ತ ಪ್ರಾಂತದಲ್ಲಿ ಅದ್ವಿತೀಯರು. ಇಂದು ಇಡೀ ಹಿಂದೂಸ್ತಾನದಲ್ಲಿಯೂ ಅದ್ವಿತೀಯರಾಗುತ್ತಿರುವರು.೮೪

... ಇನ್ನೊಂದು ಮಾತು. ಜವಾಹರರನ್ನು ನಾನು ಚೆನ್ನಾಗಿ ಬಲ್ಲೆ. ದುಃಖಿತರಾದ ಜನರ ಪಾಲಿಗೆ ಅವರು ಎಂಥವರು ಬಲ್ಲಿರಾ? ಇತರರನ್ನು ಮಲಗಿಸಿ ಕೊನೆಗೆ ತಾವು ಮಲಗುವವರು, ಅವರು. ಒಣಗಿದ ಹಾಸಿಗೆ ಒಂದೇ ಇದ್ದು ಉಳಿದುದು ಒದ್ದೆಯಾಗಿದ್ದರೆ, ಒಣಗಿದ ಹಾಸಿಗೆಯಲ್ಲಿ

ದುಃಖಿತನಾದವನನ್ನು ಮಲಗಿಸಿ, ತಾವು ಬೇಕಾದರೆ ಅಲೆದಾಡಿಕೊಂಡೇ ಇದ್ದು ಬಿಡುವರು. ಈ ಮಾತು ಕೇಳಿ ನನಗೆ ಸಂತೋಷವಾಯಿತು—ಅವರ ಮನೆಯಲ್ಲಿ ಸ್ಥಳವೇ ಇಲ್ಲವಂತೆ; ಬೇರೆ ಜನ ಮನೆಗೆ ಬರುತ್ತಲೇ ಇರುವುದ ರಿಂದ ಹಾಗೆ. ಅವರು ಪ್ರಧಾನ ಮಂತ್ರಿಗಳಾದುದರಿಂದ, ಅವರನ್ನು ಭೆಟ್ಟಿ ಯಾಗಲಿಕ್ಕೆಂದು ಸ್ನೇಹಿತರು, ಆಂಗ್ಲೇಯರೂ ಸಹ ಬರುತ್ತಾರೆ. ಅಂಥವ ರನ್ನು ಮನೆಯಿಂದ ಹೊರಹಾಕಲು ಸಾಧ್ಯವೆ? ಆದರೂ ಅವರು ಹೀಗೆ ಹೇಳುತ್ತಾರೆ "ನನ್ನ ಮನೆಯಲ್ಲಿ ಒಂದೋ ಎರಡೋ ಎಷ್ಟು ಸಾಧ್ಯವೋ ಅಷ್ಟು ಕೋಣೆಗಳನ್ನು ದುಃಖಿತರ ಸಲುವಾಗಿ ಮೀಸಲಾಗಿಡುವೆನು. ಮತ್ತೆ ಇತರ ಮಂತ್ರಿಗಳೂ, ಸೈನ್ಯದ ಅಧಿಕಾರಿಗಳೂ ಹಾಗೆಯೇ ಮಾಡಲಿ. ಹೀಗೆ ಎಲ್ಲರೂ ತಮ್ಮ ಧರ್ಮವನ್ನು ಪಾಲನೆ ಮಾಡಿದರೆ, ಯಾರೂ ದುಃಖಿತ ರಾಗಿ ಉಳಿಯುವುದಿಲ್ಲ." ಜವಾಹರರು ಹೀಗೆ ಮಾಡಿದುದನ್ನು ನಾನು ನೋಡಿದೆ. ಅವರನ್ನೂ ನಿಮ್ಮನ್ನೂ ನಾನು ವಂದಿಸಬೇಕು—ಅಂಥ ರತ್ನ ನಮ್ಮಲ್ಲಿ ಇರುವುದಕ್ಕಾಗಿ.[೮೫]

ಅವರು ತಂದೆಯಾಗಿ ಸಹೋದರನಾಗಿ ಲೇಖಕನಾಗಿ ಯಾತ್ರಿಕನಾಗಿ ದೇಶಭಕ್ತನಾಗಿ ಅಥವಾ ಅಂತರ ರಾಷ್ಟ್ರೀಯ ವ್ಯಕ್ತಿಯಾಗಿ ಪ್ರಕಾಶಿಸು ತ್ತಿದಾರೆ. ಆದರೆ, ಈ ಲೇಖನಗಳಲ್ಲಿ ಅವರು ದೇಶದ ವೇದಿಯ ಮೇಲೆ ತಮ್ಮ ಇತರ ಆಶೆ–ಆಕಾಂಕ್ಷೆಗಳನ್ನೆಲ್ಲ ಬಲಿಗೊಟ್ಟು ದೇಶ ಹಾಗೂ ಸ್ವಾತಂ ತ್ರ್ಯದ ನಿಷ್ಠಾವಂತ ಭಕ್ತನ ರೂಪದಲ್ಲಿ ಕಾಣಿಸಿಕೊಳ್ಳುವರು. ಬೇರೆ ಯಾವುದೇ ದೇಶದ ಸಹಾಯದಿಂದ ತಮ್ಮ ದೇಶದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದು ತಮ್ಮ ಗೌರವಕ್ಕೆ ಕಳಂಕಪ್ರಾಯವೆಂದು ಭಾವಿಸಿದ ಶ್ರೇಯಸ್ಸು ಅವರಿಗೇ ಸಲ್ಲುತ್ತದೆ. ಅವರ ರಾಷ್ಟ್ರೀಯತೆ ಅಂತರ ರಾಷ್ಟ್ರೀ ಯತೆಯೇ ಆಗಿದೆ.[೮೬]

ಮೋತೀಲಾಲ್ ನೆಹರು

ನಮ್ಮ ದೇಶದ ಈ ಸಾಹಸಿ ವೀರರ ಶವದ ಮುಂದೆ ನಿಂತುಕೊಂಡು, ಗಂಗಾ - ಯುಮುನಾ ತೀರದಲ್ಲಿ ಪ್ರತಿಯೋರ್ವ ಸ್ತ್ರೀ - ಪುರುಷರು “ ಹಿಂದೂಸ್ತಾನ ಸ್ವತಂತ್ರವಾಗುವವರೆಗೆ ನಾವು ವಿರಮಿಸುವುದಿಲ್ಲ ” ಎಂಬ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು. ಕಾರಣ, ಈ ಕಾರ್ಯವೇ ಮೋತೀಲಾಲರ ಹೃದಯದ ಬಯಕೆ ಆಗಿತ್ತು. ಅದರ ಸಲುವಾಗಿಯೇ ಅವರು ಆಸುನೀಗಿದರು.೮೭

ನನ್ನ ಸ್ಥಿತಿ ವಿಧವೆಯ ಸ್ಥಿತಿಗಿಂತ ಕೆಟ್ಟದೆ. ವಿಧವೆಯಾದರೋ ತನ್ನ ಪತಿಯ ಮರಣಾನಂತರ ಪ್ರಾಮಾಣಿಕತೆಯಿಂದ ಜೀವನ ನಡೆಸಿ, ತನ್ನ ಪತಿಯ ಸತ್ಕಾರ್ಯಗಳ ಫಲವನ್ನು ಹೊಂದಬಹುದು. ನನಗೆ ಏನೂ ಸಿಕ್ಕುವಂತಿಲ್ಲ. ಮೋತೀಲಾಲರ ನಿಧನದಿಂದ ನನಗೆ ಆಗಿರುವ ಹಾನಿ ಶಾಶ್ವತವಾದ ಹಾನಿ.೮೮

ಮೋತೀಲಾಲರ ಮರಣ ಪ್ರತಿಯೊಬ್ಬ ದೇಶಭಕ್ತನ ಪಾಲಿಗೆ ಈರ್ಷ್ಯಾಸ್ಪದವೆನಿಸಬೇಕು. ಕಾರಣ, ಅವರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ತೀರಿಕೊಂಡರು ; ಕೊನೆಯವರೆಗೆ ದೇಶದ ಧ್ಯಾನವನ್ನೇ ಮಾಡುತ್ತಿದ್ದರು. ಆ ವೀರರ ಮರಣದಿಂದ ನಮ್ಮಲ್ಲೂ ಬಲಿದಾನದ ಭಾವನೆ ಮೂಡಬೇಕು. ಯಾವ ಸ್ವಾತಂತ್ರ್ಯಕ್ಕಾಗಿ ಅವರು ಚಡಪಡಿಸುತ್ತಿದ್ದರೋ ಯಾವ ಸ್ವಾತಂತ್ರ್ಯ ನಮಗೆ ಬಹಳ ಸನಿಯಕ್ಕೆ ಬಂದಿದೆಯೋ, ಅದನ್ನು ಗಳಿಸಿಕೊಳ್ಳಲು ನಮ್ಮ ಸರ್ವಸ್ವವನ್ನು ಅಲ್ಲದಿದ್ದರೆ, ಕನಿಷ್ಠ ಪಕ್ಷ ಸ್ವಾತಂತ್ರ್ಯಪ್ರಾಪ್ತಿಗೆ ಎಷ್ಟು ಅವಶ್ಯಕವೋ ಅಷ್ಟು ಬಲಿದಾನವಾದರೂ ನಾವೆಲ್ಲರೂ ಮಾಡಬೇಕು.೮೯

ಸ್ವರ್ಗೀಯ ಮೋತೀಲಾಲರ ಭಾವಚಿತ್ರವನ್ನು ಉದ್ಘಾಟಿಸುವ ಗೌರವವನ್ನು ನನಗೆ ಕೊಟ್ಟಿರುವುದಕ್ಕಾಗಿ ನಿಮಗೆ ಆಭಾರಿ ಆಗಿದೇನೆ. ಅವರ

ಚಿತ್ರ ನಿಮ್ಮ ಬಳಿ ಇರುವುದು, ಅವರ ಪವಿತ್ರವಾದ ಭಾವನೆಗಳನ್ನು ನಿಮ್ಮ ಹೃದಯದಲ್ಲಿ ಅಂಕಿತಗೊಳಿಸಿಕೊಳ್ಳುವುದು ಉಚಿತವೇ ಸರಿ. ಸ್ವಂತ ಅಣ್ಣ-ತಮ್ಮಂದಿರಗಿರುವ ಪ್ರಗಾಢ ಪ್ರೇಮ-ಸಂಬಂಧವೇ ನನಗೂ ಮೋತೀಲಾಲರಿಗೂ ಇದ್ದಿತೆಂದರೆ, ಅದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಮೋತೀಲಾಲರ ದೇಶಸೇವೆ, ಅವರ ತ್ಯಾಗ, ಪುತ್ರ-ಪುತ್ರಿಯರಲ್ಲಿ ಅವರಿಗಿದ್ದ ಅನುಪಮ ಪ್ರೇಮ-ಇವುಗಳ ಪರಿಚಯ ನನಗೆ ಇದ್ದಂತೆಯೇ ನಿಮಗೂ ಇರಬೇಕು. ಮೋತೀಲಾಲರ ಪ್ರಥಮ ಪರಿಚಯ ಆದಾಗಿನಿಂದ ಅವರ ಜೀವನದ ಅಂತಿಮ ಸಮಯದವರೆಗೆ ಅವರ ನಿಕಟ ಸಂಪರ್ಕ ಹೊಂದಿರುವ ಸೌಭಾಗ್ಯವನ್ನು ಪರಮಾತ್ಮ ನನೆಗೆ ನೀಡಿದ್ದ. ಅವರು ಪ್ರತಿಕ್ಷಣವೂ ಸ್ವದೇಶ ಹಿತದ ಚಿಂತನವನ್ನೇ ಮಾಡುತ್ತಿದ್ದರು. ಸ್ವರಾಜ್ಯ ಅವರ ಪಾಲಿಗೆ ಸ್ವಪ್ನವಾಗಿರಲಿಲ್ಲ; ಪ್ರಾಣವಾಗಿತ್ತು. ಸ್ವರಾಜ್ಯದ ಹಸಿವು, ದಾಹ ಅವರಿಗೆ ಸದಾ ಇರುತ್ತಿತ್ತು; ದಿನದಿನಕ್ಕೆ ಅದು ಹೆಚ್ಚುತಲೂ ಇತ್ತು. ಅಂಥ ಆದರ್ಶ ದೇಶಭಕ್ತರ ಚಿತ್ರವನ್ನು ನಮ್ಮೆದುರಿಗೆ ಇಟ್ಟುಕೊಳ್ಳುವುದು ಉಚಿತವೇ ಸರಿ....ಸ್ವರ್ಗೀಯ ಪಂಡಿತಜಿ ಅವರ ಗುಣಗಳನ್ನು ನೀವು ಅಗತ್ಯವಾಗಿ ಅನುಸರಿಸುವರೆಂಬ ಆಶೆಯೇನೋ ನನಗಿದೆ....ಮೋತೀಲಾಲರ ಸದ್ಗುಣಗಳಲ್ಲಿ ಅಸ್ಪೃಶ್ಯತೆಯನ್ನು ಮಾನ್ಯ ಮಾಡದಿರುವುದೂ ಒಂದು ಗುಣವಾಗಿತ್ತು. ಅವರೊಬ್ಬ ರಾಜಪುರುಷರು. ಅವರು ಅಪಾರ ಹಣಗಳಿಸಿದರು. ಅದನ್ನು ಸತ್ಕಾರ್ಯಗಳಿಗೆ, ಸ್ವರಾಜ್ಯದ ಕಾರ್ಯಗಳಿಗೆ ಧಾರಾಳವಾಗಿ ವಿನಿಯೋಗಿಸಿದರು. ಅವರ ಹೃದಯದಲ್ಲಿ ಉಚ್ಚ-ನೀಚ ಭಾವಕ್ಕೆ ಎಡೆಯೇ ಇರಲಿಲ್ಲ.

ಆ ಕಾಲದಲ್ಲಿ ನಾವು ವಿದೇಶೀ ಬಟ್ಟೆಯನ್ನು ರಾಶಿರಾಶಿಯಾಗಿ ಕೂಡಿಸಿ ಸುಟ್ಟುಬಿಡುತ್ತಿದ್ದೆವು. ಆಗ ಯಾರೂ ಅದರಿಂದ ರಾಷ್ಟ್ರದ ಸಂಪತ್ತು ನಾಶವಾಗುತ್ತಿದೆಯೆಂದು ಹೇಳಲಿಲ್ಲ. ಶ್ರೀಮತಿ ನಾಯಿಡು ಅವರು ತಮ್ಮ ಪ್ಯಾರಿಸ್ ಸೀರೆಯನ್ನು ಸುಟ್ಟುಹಾಕಿದರು. ಸ್ವರ್ಗೀಯ ಮೋತೀಲಾಲರೂ ಕೂಡ ತಮ್ಮ ವಿದೇಶಿ ಬಟ್ಟೆಗಳಿಗೆ ಬೆಂಕಿಯಿಟ್ಟರು. ಅವರ ಬಳಿ ಬೀರು-ಬೀರುಗಳಲ್ಲಿ ವಿದೇಶೀ ಬಟ್ಟೆಗಳು ತುಂಬಿದ್ದವು. ಅನಂತರ ಅವರು ಜೈಲಿಗೆ ಹೋದಮೇಲೆ ನನಗೊಂದು ಪತ್ರ ಬರೆದರು—ಆ

ಪತ್ರ ಈಗ ನನ್ನ ಕೈಗೆ ಸಿಕ್ಕುತ್ತಿಲ್ಲ—ಅದರಲ್ಲಿ ಈ ಮಾತುಗಳಿದ್ದವು— “ನಾನು ನಿಜವಾದ ಬಾಳುವೆಯನ್ನು ಈಗಲೇ ಬಾಳುತ್ತಿದೇನೆ. ಆನಂದ ಭವನದಲ್ಲಿ ಬೇಕಾದಷ್ಟು ಐಶ್ವರ್ಯವಿದ್ದರೂ ಅದರಿಂದ ಈ ಸುಖ ನನಗೆ ದೊರೆಯುತ್ತಿರಲಿಲ್ಲ.” ಜೈಲಿನಲ್ಲಿ ಅವರಿಗೆ ಸಿಗರೇಟು, ಶರಾಬು, ಮೇಕೆ ಮಾಂಸ – ಯಾವುದೂ ಸಿಕ್ಕುತ್ತಿರಲಿಲ್ಲ. ಆದರೂ ಅದರಲ್ಲೇ ಅವರು ಸುಖವನ್ನು ಕಂಡರು.೯೦

ವಲ್ಲಭಭಾಯಿ ಪಟೇಲ್

ಶ್ರೀಯುತ ವಲ್ಲಭಭಾಯಿ ಪಟೇಲರು ಹಳೆಯ ಸೈನಿಕರು. ಸೇವೆಯನ್ನು ಬಿಟ್ಟು, ಅವರಿಗೆ ಬೇರೆ ಕೆಲಸವೇ ಇಲ್ಲ.೯೧

ಈಗ ಹಬ್ಬಿರುವ ಭಯಂಕರವಾದ ವದಂತಿಗಳನ್ನು ಗಮನಿಸಿದರೆ, ಬಾರಡೋಲೀಯೊಡನೆ ನನಗಿರುವ ಸಂಬಂಧವನ್ನು ಸ್ಪಷ್ಟಪಡಿಸುವುದು ಅವಶ್ಯಕವೆನಿಸುತ್ತದೆ. ಬಾರಡೋಲೀ ಸತ್ಯಾಗ್ರಹ ಆರಂಭವಾದಾಗಿನಿಂದ ಅದರಲ್ಲಿ ನಾನು ಸೇರಿದೇನೆಂಬುದನ್ನು ಓದುಗರು ತಿಳಿಯಲಿ. ಅದರ ನಾಯಕರು ವಲ್ಲಭಭಾಯಿಯವರು. ಅವರಿಗೆ ಆವಶ್ಯಕತೆ ಕಂಡಾಗಲೆಲ್ಲ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಬಹುದು. ನನ್ನ ಸಲಹೆಯ ಆವಶ್ಯಕತೆ ಇರಲಿ, ಇಲ್ಲದಿರಲಿ–ಯಾವುದೇ ದೊಡ್ಡ ಕೆಲಸವನ್ನು ಮಾಡು ವಾಗ ಅವರು ನನ್ನೊಡನೆ ವಿಚಾರ ವಿನಿಮಯ ಮಾಡುತ್ತಾರೆ. ಅಲ್ಲಿಯ ಕೆಲಸ ದೊಡ್ಡದಿರಲಿ, ಸಣ್ಣದಿರಲಿ – ಎಲ್ಲ ಕೆಲಸವನ್ನೂ. ಅವರು ತಮ್ಮ ಜವಾಬದಾರಿಯ ಮೇಲೆಯೇ ಮಾಡುತ್ತಾರೆ. ಒಂದು ವಿಷಯದಲ್ಲಿ ಅವ ರೊಡನೆ ಒಪ್ಪಂದಮಾಡಿಕೊಂಡು ಬಿಟ್ಟದೇನೆ—ಸಭೆ ಮೊದಲಾದುವುಗಳಿಗೆ ಹೋಗಲು ನನ್ನಿಂದ ಆಗುವುದಿಲ್ಲ; ಎಲ್ಲ ವಿಷಯದಲ್ಲೂ ಆಸಕ್ತಿವಹಿಸಲು ನನ್ನ ಆರೋಗ್ಯ ಅನುಕೂಲವಾಗಿಲ್ಲ, ಆದಕಾರಣ ಅಹ್ಮದಾಬಾದ್ ಅಥವಾ ಗುಜರಾತಿನ ಬೇರೆ ಭಾಗಕ್ಕೆ ಕಾರಣವಿಲ್ಲದೆ ನನ್ನನ್ನು ಕರೆದುಕೊಂಡು

ಹೋಗುವುದಿಲ್ಲವೆಂದು ಅವರು ಪ್ರತಿಜ್ಞೆಯನ್ನೇ ಮಾಡಿದ್ದಾರೆ; ಅದನ್ನು ಅಕ್ಷರಶಃ ಪಾಲಿಸಿಯೂ ಇದ್ದಾರೆ. ಈ ಸತ್ಯಾಗ್ರಹದಲ್ಲಿ ಅವರೊಡನೆ ನನ್ನ ಸಂಪೂರ್ಣ ಸಹಾನುಭೂತಿಯಿದೆ. ಇದೀಗ ಗಂಭೀರ ಪರಿಸ್ಥಿತಿ ಉಂಟಾಗುವ ಸಂಭವವಿದ್ದು, ಅದನ್ನು ಎದುರಿಸಲು ವಲ್ಲಭಭಾಯಿ ಅವರು ಕೈಗೊಳ್ಳುವ ಎಲ್ಲ ಕ್ರಮಗಳಲ್ಲಿ ನನ್ನ ಸಹಾನುಭೂತಿ ಇದ್ದೇ ಇರುತ್ತದೆ. ಅವರ ಬಂಧನವೇನಾದರೂ ಆದರೆ, ನಾನು ಬಾರಡೋಲಿಗೆ ಹೋಗುವುದಕ್ಕೂ ಸಿದ್ಧವಾಗಿದೇನೆ. ಅವರು ಬಾರಡೋಲಿಯಲ್ಲಿ ಇರುವಾಗ ನಾನು ಅಲ್ಲಿಗೆ ಹೋಗುವ, ಅಥವಾ ಬೇರೆ ಯಾವುದೇ ರೀತಿಯಲ್ಲಿ ಶಕ್ತಿಯ ಭಾಗ ವಹಿಸುವ ಅವಶ್ಯಕತೆ ನನಗಾಗಲಿ, ಅವರಿಗಾಗಲಿ ಕಂಡುಬರುವುದಿಲ್ಲ. ಪರಸ್ಪರರಲ್ಲಿ ಸಂಪೂರ್ಣ ವಿಶ್ವಾಸ ಇರುವಲ್ಲಿ ಶಿಷ್ಟಾಚಾರ ಅಥವಾ ಬೇರೆ ಯಾವುದೇ ರೀತಿಯ ಬಾಹ್ಯ ಆಡಂಬರದ ಆವಶ್ಯಕತೆ ಇರುವುದಿಲ್ಲ.[೯೨]

ಯಾವ ಸರದಾರರ ಸೇನಾಪತಿತ್ವದಲ್ಲಿ ಈ ಪ್ರತಿಜ್ಞೆಯನ್ನು ಇಷ್ಟು ಚೆನ್ನಾಗಿ ಪಾಲನೆಮಾಡಿದರೋ ಅವರದೇ ಸೇನಾಪತಿತ್ವದಲ್ಲಿ ಈ ಕೆಲಸವನ್ನು ಮಾಡಿರಿ. ಇಂಥ ಸ್ವಾರ್ಥತ್ಯಾಗಿಗಳಾದ ಸರದಾರರು ಬೇರೆ ಯಾರೂ ನಿಮಗೆ ಸಿಕ್ಕುವುದಿಲ್ಲ. ಇವರು ನನ್ನ ಸ್ವಂತ ಸಹೋದರರಂತೆ ಇದಾರೆ. ಆದರೂ ಇಷ್ಟು ಪ್ರಮಾಣ ಪತ್ರವನ್ನು ಅವರಿಗೆ ಕೊಡಲು ನನಗೆ ಸ್ವಲ್ಪವೂ ಸಂಕೋಚವಿಲ್ಲ.[೯೩]

ವಲ್ಲಭಭಾಯಿ ಅವರು ಹೆಸರಿನಿಂದ ಹೇಗೆ ಪಟೇಲರೋ ಕೀರ್ತಿಯಿಂದಲೂ ಹಾಗೆಯೇ ಪಟೇಲರು. ಬಾರಡೋಲಿಯಲ್ಲಿ ಜಯಗಳಿಸಿ ಅವರು ತಮ್ಮ ಕೀರ್ತಿಯನ್ನು ಕಾಪಾಡಿಕೊಂಡರು.[೯೪]

ತಮ್ಮ ಹಸ್ತರೇಖೆಯಲ್ಲಿ ಜೈಲುರೇಖೆ ಇಲ್ಲವೆಂದು ಸರದಾರ ವಲ್ಲಭಭಾಯಿ ಅವರು ವಿನೋದವಾಗಿ ಹೇಳುತ್ತಿದ್ದರು. ಯಾರ ದೃಷ್ಟಿಯಲ್ಲಿ ಜೈಲೇ ಅರಮನೆಗೆ ಸಮಾನವೋ, ಯಾರು ಜೈಲು ಅರಮನೆಗಳಲ್ಲಿ ಭೇದವನ್ನೇ ಎಣಿಸುವುದಿಲ್ಲವೋ ಅಂಥವರಿಗೆ ಜೈಲು ಎಲ್ಲಿ ಬಂತು? ಇಂದು

ಸರದಾರರು ಎಲ್ಲಿ ವಿರಾಜಿಸುತ್ತಿರುವರೋ ಅಲ್ಲಿಗೆ ನಾವೆಲ್ಲರೂ ಹೋಗ ಬೇಕಾಗುವುದು. ಆದರೆ ಯೋಗ್ಯತೆಯನ್ನು ಸಂಪಾದಿಸದೆ, ಜೈಲು ಸಿಕ್ಕುವುದಿಲ್ಲ. ವಲ್ಲಭಭಾಯಿ ಅವರ ಅಮೂಲ್ಯ ಸೇವೆಗೆ ನಾವು ಪಾತ್ರರೋ ಎಂಬುದನ್ನು ತೋರುವ ಕಾಲ ಈಗ ಬಂದಿದೆ. ಅವರು ಗುಜರಾತಿನ ಬಗೆಗೆ ನಿರೀಕ್ಷಣೆ ಏಕೆ ಇಟ್ಟುಕೊಳ್ಳಬಾರದು? ಅವರು ಕೂಲಿಗಾರರಿಗೆ ಮಾಡಿರುವ ಸೇವೆ ಕಡಿಮೆಯೆ? ಅಂಚೆ ಮತ್ತು ರೈಲ್ವೆ ನೌಕರರು ಅವರಿಂದ ಕಲಿತಿರುವ ಸ್ವರಾಜ್ಯದ ಪಾಠ ಕಡಿಮೆಯೆ? ಅವರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ, ನಗರದ ಸೇವೆ ಮಾಡಿರುವ ವಿಷಯವನ್ನು ಅರಿಯದ ಅಹ್ಮದಾಬಾದಿನ ನಾಗರಿಕರು ಯಾರಾದರೂ ಇರುವರೆ? ನಗರದಲ್ಲಿ ಭೀಷಣವಾದ 'ಪ್ಲೇಗ್' ರೋಗ ಕಾಣಿಸಿಕೊಂಡಾಗ, ಬಡವರ ಸೇನೆಯ ವ್ಯವಸ್ಥೆ ಮಾಡಿದವರು ಯಾರು? ಕ್ಷಾಮ ತಲೆದೋರಿದಾಗ ಕ್ಷಾಮಪೀಡಿತರ ನೆರವಿಗಾಗಿ ಧಾವಿಸಿದವರು ಯಾರು? ಗುಜರಾತಿನಲ್ಲಿ ಇತಿಹಾಸ ಪ್ರಸಿದ್ಧವಾದ ಮಹಾಪೂರ (ಪ್ರವಾಹ) ಸಂಭವಿಸಿ ಲಕ್ಷಾಂತರ ಮಂದಿ ಮನೆಮಾರು ಕಳೆದುಕೊಂಡು, ಹೊಲದ ಬೆಳೆ ಪ್ರವಾಹದಲ್ಲಿ ಕೊಚ್ಚಿಹೋದಾಗ, ಇಡೀ ಗುಜರಾತಿನ ಸಂಕಟವನ್ನು ನಿವಾರಿಸಲು ನೂರಾರು ಮಂದಿ ಸ್ವಯಂಸೇವಕರನ್ನು ತಯಾರು ಮಾಡಿದವರು, ಜನರಿಗಾಗಿ ಸರಕಾರದ ಬೊಕ್ಕಸದಿಂದ ಒಂದು ಕೋಟಿ ರೂಪಾಯಿ ಕೊಡಿಸಿಕೊಟ್ಟವರು ಯಾರು? ಬಾರಡೋಲಿಯಲ್ಲಿ ಜಯಭೇರಿಹೊಡೆದು, ಕೃತಜ್ಞರಾದ ಜನರಿಂದ 'ಸರದಾರ' ಎಂದು ಕರೆಸಿಕೊಂಡು, ಸಂಪೂರ್ಣ ಸ್ವರಾಜ್ಯದ ಕೊನೆಯ ಹೋರಾಟಕ್ಕೆ ಜನತೆಯನ್ನು ಸಿದ್ಧಗೊಳಿಸಿದವರಾರು? ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತ ಜೈಲಿಗೆ ಹೋದವರಾರು?— ಈ ಎಲ್ಲ ಪ್ರಶ್ನೆಗಳಿಗೆ ಒಂದೇ ಉತ್ತರ—ವಲ್ಲಭಭಾಯಿ. ಈಗ ನಾವು ಮಾಡಬೇಕಾದುದೇನು? ಉತ್ತರ ಸ್ಪಷ್ಟವಾಗಿಯೇ ಇದೆ— ನಾವೆಲ್ಲರೂ ಧೈರ್ಯಗೆಡದೆ, ಪ್ರತಿಯಾಗಿ ದ್ವಿಗುಣ ಉತ್ಸಾಹ ಹಾಗೂ ದ್ವಿಗುಣ ಧೈರ್ಯದಿಂದ ಸವಿನಯ ಕಾಯದೇ ಭಂಗಮಾಡಲು ತಯಾರಾಗಬೇಕು. ಜೈಲಿನ ದಾರಿಯನ್ನು, ಮರಣವೇ ದೊರೆಯುವುದಾದರೆ, ಮರಣದ ದಾರಿಯನ್ನು ಹಿಡಿಯಬೇಕು. ಸರದಾರರು ಹೋದಮೇಲೆ ನಾಯಕರು ಯಾರಾಗಬೇಕು—ಎಂಬಂಥ ಅಧೈರ್ಯದಿಂದ ಕೂಡಿದ ಪ್ರಶ್ನೆ ಯಾರ ಮನಸ

ಸ್ಸಿನಲ್ಲೂ ಹುಟ್ಟದಿರಲಿ, ಸವಿನಯ ಶಾಸನ ಭಂಗ ಮಾಡುವಾತನ ಬಳಿ ಇಂದು ಅನೇಕಾನೇಕ ಸಾಧನಗಳು ಸಿದ್ಧವಾಗಿರುತ್ತವೆ. ಹಾಗೂ ಸರಕಾರ ಹೊಸ ಹೊಸ ಸಾಧನಗಳನ್ನು ಸೃಷ್ಟಿಸುತ್ತಲೂ ಇದೆ. ಇದು ನಮಗೆ ಹೇಗೆ ಜೀವನ ಮರಣದ ಪ್ರಶ್ನೆಯೋ ಹಾಗೆಯೇ ಸರಕಾರಕ್ಕೆ ಜೀವನ ಮರಣದ ಪ್ರಶ್ನೆ. ಸರದಾರರಂಥ ಸ್ವತಂತ್ರ ವೃತ್ತಿಯ ಮನುಷ್ಯರನ್ನು ದಮನಮಾಡುವುದೇ ಸರಕಾರದ ಅಸ್ತಿತ್ವದ ಆಧಾರವೆಂಬಂತೆ ತೋರುತ್ತದೆ. ಹಾಗಿಲ್ಲದಿದ್ದರೆ ಶಾಂತಿರಕ್ಷಣಾ ಕಾರ್ಯಕ್ಕೆ ಪ್ರಸಿದ್ಧರಾದ ವಲ್ಲಭಭಾಯಿ ಅವರಂಥ ಮನುಷ್ಯರನ್ನು ಬಂಧಿಸಿದುದೇಕೆ?[೯೫]

ಸರದಾರರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಭಂಗಿ–ಬ್ರಾಹ್ಮಣ, ಮದರಾಸಿ–ಗುಜರಾತಿ ಎಂಬ ಭೇದವಣಿಸದೆ, ಬಡವರ ಸೇವೆ ಮಾಡುವುದೇ ಅವರ ಕರ್ತವ್ಯ. ರಾಷ್ಟ್ರ ಅವರ ಈ ಯೋಗ್ಯತೆಯನ್ನು ಅರಿತು, ಅವರನ್ನು ರಾಷ್ಟ್ರಪತಿಯನ್ನಾಗಿಮಾಡಿತು.[೯೬]

ವಲ್ಲಭಭಾಯಿ ಅವರ ಲಕೋಟಿಮಾಡುವ ಸಾಮರ್ಥ್ಯ ಹಾಗೂ ಸಂಸ್ಕೃತ ಶಿಕ್ಷಣದ ಬಗೆಗೆ ಪ್ರತಿಯೊಂದು ಕಾಗದದಲ್ಲೂ ಪ್ರಸ್ತಾವವಿರುತ್ತದೆ :—

ವಲ್ಲಭಭಾಯಿ ಅವರ ಶಿಕ್ಷಣ ಉಚ್ಚೈಶ್ರವಸ್ಸಿನ ವೇಗದಲ್ಲಿ ಸಾಗುತ್ತಿದೆ.

ಇಂದು ಪ್ಯಾರೇಲಾಲರಿಗೆ ಬರೆದಿದ್ದರು.

ವಲ್ಲಭಭಾಯಿ ಅರಬ್ಬಿ ಕುದುರೆಯಷ್ಟು ಚುರುಕಾಗಿ ಓಡುತ್ತಿದ್ದಾರೆ. ಸಂಸ್ಕೃತದ ಪುಸ್ತಕವನ್ನು ಕೈಬಿಡುವುದೇ ಇಲ್ಲ. ಅವರು ಹಾಗೆ ಮಾಡುವರೆಂದು ನಾನು ನಿರೀಕ್ಷಿಸಿರಲಿಲ್ಲ. ಲಕೋಟಿ ಮಾಡುವುದರಲ್ಲಿ ಅವರನ್ನು ಯಾರೂ ಮೀರಿಸುವಂತೆಯೇ ಇಲ್ಲ. ಲಕೋಟೆಯನ್ನು ಅಳತೆಮಾಡದೆಯೇ ಮಾಡುತ್ತಾರೆ – ಅಂದಾಜಿನಿಂದ ಕತ್ತರಿಸುತ್ತಾರೆ. ಆದರೆ ಅದು ಸರಿಯಾಗಿಯೇ ಇರುತ್ತದೆ. ಅದಕ್ಕೆ ಬಹಳ ಸಮಯ ಹಿಡಿಯುವಂತೆಯೂ ತೋರುವುದಿಲ್ಲ. ಅವರ ವ್ಯವಸ್ಥಾಶಕ್ತಿ ಆಶ್ಚರ್ಯಜನಕ. ಮಾಡಬೇಕಾಗಿ

ರುವ ಕೆಲಸವನ್ನು ಆಗಿಂದಾಗಲೇ ಮಾಡಿಬಿಡುತ್ತಾರೆ. ನೂಲುವುದನ್ನು ಆರಂಭಿಸಿದಾಗಿನಿಂದ, ಕ್ರಮವಾಗಿ ನೂಲುತ್ತಿದ್ದಾರೆ. ದಾರದಲ್ಲಿಯೂ ವೇಗ ದಲ್ಲಿಯೂ ದಿನದಿನಕ್ಕೆ ಸುಧಾರಣೆ ಆಗುತ್ತಿದೆ. ಕೈಹಾಕಿದ ಕೆಲಸವನ್ನು ಮರೆಯುವ ಮಾತೇ ಅವರಲ್ಲಿಲ್ಲ. ಇಷ್ಟು ವ್ಯವಸ್ಥೆ ಇರುವಲ್ಲಿ ದಾಂಧಲೆ ಆಗುವುದೆಂದರೇನು ?[೯೭]

ಸರ್‌ದಾರ್ ವಲ್ಲಭಭಾಯಿ ಅವರ ಜತೆಯಲ್ಲಿ ಇರುವುದು ನನ್ನ ಅಹೋಭಾಗ್ಯ. ಅವರ ಅನುಪಮ ವೀರತೆಯ ಪರಿಚಯ ನನಗೆ ಮೊದಲಿ ನಿಂದಲೂ ಇತ್ತು. ಆದರೆ, ಕಳೆದ ಹದಿನಾರು ತಿಂಗಳು ಅವರೊಡನೆ ಇದ್ದಾಗ ಸಿಕ್ಕಂತ ಸೌಭಾಗ್ಯ ಇನ್ನಾವಾಗಲೂ ಸಿಕ್ಕಿರಲಿಲ್ಲ. ಅವರು ನನ್ನ ಬಗೆಗೆ ತೋರಿದ ಅತೀವ ಸ್ನೇಹ ನನಗೆ ನನ್ನ ಮಾತೆಯ ನೆನಪನ್ನು ತರು ತ್ತಿತ್ತು. ಅವರಲ್ಲಿ ತಾಯಿಯ ಗುಣವೂ ಇದೆಯೆಂಬುದು ನನಗೆ ತಿಳಿದಿರ ಲಿಲ್ಲ. ಬಾರಡೋಲಿ ಮತ್ತು ಖೇಡಾದ ರೈತರ ಬಗೆಗೆ ಅವರ ಚಿಂತನವನ್ನು ನಾನು ಎಂದಿಗೂ ಮರೆಯುವ ಹಾಗಿಲ್ಲ.[೯೮]

ಇನ್ನೊಂದು ಮಾತು. ಎಲ್ಲ ಕಡೆಗಳಿಂದಲೂ ದೂರುಗಳು ಬರುತ್ತಿವೆ. ಆಂಗ್ಲರ ಕಾಲದಲ್ಲಿ ಇದ್ದ ದೇಶೀಯ ಸಂಸ್ಥಾನಗಳು ಮನಬಂದಂತೆ ನಡೆ ಯುತ್ತಿದ್ದವೆಂಬುದು ದಿಟ. ಆಂಗ್ಲರ ಆಡಳಿತದಲ್ಲಿ ಸ್ವಲ್ಪವಾದರೂ 'ಅಂಕುಶ' ಇರುತ್ತಿತ್ತು. ರಾಜ್ಯ ನಡೆಸಬೇಕಾಗಿದ್ದುದರಿಂದ ಅದು ಬೇಕಾ ಗಿತ್ತು. ಆದರೆ, ಅವರ ಶಾಸನ ಇಂದು ತೊಲಗಿಹೋಗಿದೆ. ಇಂದು ಸರ ದಾರ ಪಟೇಲರ ಕೈಗೇ ಆ ಇಲಾಖೆ (ದೇಶೀಯ ಸಂಸ್ಥಾನಗಳು) ಬಂದಿರು ವುದರಿಂದ ಅವರು ಏನಾದರೂ ಮಾಡಲಿ ಎಂದು ನಿರೀಕ್ಷಿಸುವುದು ಸರಿಯೆ. ಆದರೆ, ಆ ಬಡಪಾಯಿ ಏನು ಮಾಡಿಯಾರು? ಹಿಂದೂಸ್ಥಾನದ ಸೇವೆಯೇ ಅವರ ಮಂತ್ರ–ಜಪ. ಅದನ್ನು ಮಾಡಿಯೇ ಸರದಾರರಾದರು. ಅವರ ಬಳಿ ಕತ್ತಿ, ಬಂದೂಕು, ಸೈನ್ಯ ಯಾವುದೂ ಇಲ್ಲ. ಅವರ ಆಜ್ಞೆ ನಡೆಯಲಿ ಎಂಬುದಕ್ಕೆ ಅವರು ಕಮ್ಯಾಂಡರರೂ ಅಲ್ಲ.[೯೯]

ಸರದಾರರು ನೇರವಾಗಿ ಮಾತನಾಡುವವರು. ಅವರ ಮಾತು ಸ್ವಲ್ಪ ಕಹಿಯಾಗಿಯೇ ತೋರುತ್ತದೆ. "ನಿಮ್ಮ ನಾಲಿಗೆಯಿಂದ ಮಾತು ಹೊರಟಿತೋ, ಅದು ಮುಳ್ಳೇ ಆಗಿಬಿಡುತ್ತದೆ" ಎಂಬುದಾಗಿ ಅವರಿಗೆ ಹೇಳಿದೆ. ಅವರ ನಾಲಿಗೆ ಮುಳ್ಳಿನಂತಿದ್ದರೂ, ಹೃದಯ ಹಾಗಿಲ್ಲ. ಅದಕ್ಕೆ ನಾನೇ ಸಾಕ್ಷಿ.೧೦೦

ಸರದಾರರು ಮಾತನಾಡುವ ರೀತಿಯಲ್ಲಿ ಸ್ವಲ್ಪ 'ಒರಟುತನ' ವಿದೆ. ಅದರಿಂದಾಗಿ, ಯಾರಿಗೇ ಆಗಲಿ ನೋವನ್ನು ಉಂಟುಮಾಡುವ ಉದ್ದೇಶ್ಯ ಸರದಾರರಿಗೆ ಇರದಿದ್ದರೂ, ಆಗಾಗ ಮಂದಿಯ ಮನಸ್ಸಿಗೆ ನೋವಾಗುತ್ತದೆ. ಅವರ ಹೃದಯ ವಿಶಾಲವಾದುದು. ಅದರಲ್ಲಿ ಎಲ್ಲರಿಗೂ ಸ್ಥಾನವಿದೆ. ಸರದಾರರನ್ನು ಜನ ನನ್ನ 'ಹೌದಪ್ಪ' ನೆಂದು ಭಾವಿಸಿಯಾರೆಂಬ ಭಯವೂ ನನಗಿತ್ತು. ಸರದಾರರನ್ನು ಪ್ರೀತಿಯಿಂದ ನನ್ನ "ಹೌದಪ್ಪ" ನೆಂದು ಕರೆಯುತ್ತಿದ್ದುದುಂಟು. ಆದಕಾರಣ, ಸರದಾರರನ್ನು ಪ್ರಶಂಸಿಸುವಾಗ, ಅವರು ಯಾರ 'ಹೌದಪ್ಪ' ನೂ ಆಗಬೇಕಾದ ಆವಶ್ಯಕತೆಯಿಲ್ಲದಷ್ಟು ಶಕ್ತಿಶಾಲಿಗಳೂ, ದೃಢಮನಸ್ಕರೂ ಆಗಿದಾರೆಂದು ಹೇಳಿದೆ. ಅವರು ನನ್ನ 'ಹೌದಪ್ಪ' ಎನಿಸಿಕೊಂಡಿದ್ದಾಗ, ಹಾಗೆ ಕರೆಸಿಕೊಳ್ಳಲು ಅವರ ಅಡ್ಡಿ ಇರಲಿಲ್ಲ. ಕಾರಣ, ಅಗ ನಾನು ಏನು ಹೇಳಿದರೂ ಅದು ಅವರ ಗಂಟಲಲ್ಲಿ ಇಳಿಯುತ್ತಿತ್ತು. ತಮ್ಮ ಕ್ಷೇತ್ರದಲ್ಲಿ ಅವರು ಬಹಳ ದೊಡ್ಡವರಾಗಿದ್ದರು. ಅಹ್ಮದಾಬಾದ್ ನಗರ ಸಭೆಯಲ್ಲಿ ಶಾಸನ ನಡೆಸುವುದರಲ್ಲಿ ಅವರು ಬಹಳ ಸಾಮರ್ಥ್ಯವನ್ನು ತೋರಿಕೊಂಡಿದ್ದರು. ಆದರೂ, ಅವರು ಎಷ್ಟು ನಮ್ರರೆಂಬುದಕ್ಕೆ ಅವರು ತಮ್ಮ ರಾಜನೈತಿಕ ಶಿಕ್ಷಣವನ್ನು ನನ್ನ ಕೈಕೆಳಗೆ ಆರಂಭಿಸಿದುದೇ ಸಾಕ್ಷಿ.೧೦೧

ವಿಠಲಭಾಯಿ ಪಟೇಲ್

ವಿಠಲಭಾಯಿ ಪಟೇಲರು ತಮ್ಮ ಕಟ್ಟಕಡೆಯ ಕರ್ತವ್ಯಶೀಲತೆ, ಕಾರ್ಯದಕ್ಷತೆಯ ಮೂಲಕ ತಮ್ಮ ಅಪೂರ್ವ ಸಾಹಸ ಹಾಗೂ ಜಾಗರೂಕ ವೃತ್ತಿಯನ್ನು ತೋರಿಕೊಂಡಿದಾರೆ. ಶಾಸನ ಸಭೆಯ ಬಗೆಗೆ ನನಗೆ ಎಂದೂ ಮೋಹ ಉಂಟಾಗಿಲ್ಲ. ಈಗಂತೂ ಅದು ಮೊದಲಿಗಿಂತ ಕೆಟ್ಟದು ಎನಿಸುತ್ತದೆ. ಈ ಶಾಸನ ಸಭೆಯ ದೆಸೆಯಿಂದ ಹಿಂದೂ-ಮುಸಲ್ಮಾನರಲ್ಲಿ ಶತ್ರುತ್ವ ಬೆಳೆದಿದೆ. ನಾಯಕರ ಬುದ್ಧಿಯೂ ಸ್ವಾರ್ಥವೂ ಹೆಚ್ಚಿದೆ. ಹೀಗಿದ್ದೂ ಯಾರದಾದರೂ ಶಾಸನ ಸಭಾ ಪ್ರವೇಶ ಸಾರ್ಥಕ ಹಾಗೂ ಸಫಲವಾಗಿದ್ದರೆ, ಅದು ವಿಠಲಭಾಯಿ ಅವರದೇ. ಶಾಸನ ಸಭೆಯ ಅಧ್ಯಕ್ಷರಾಗಿ ಅವರು ತಮ್ಮ ಘನತೆಯನ್ನು ತೋರಿಕೊಂಡಿದಾರೆ ; ಭಾರತದ ಗೌರವವನ್ನು ಹೆಚ್ಚಿಸಿದಾರೆ.೧೦೨

ಸನ್ ೧೯೧೭ ರಲ್ಲಿ ಗೋಧರಾ ರಾಜಕೀಯ ಸಮ್ಮೇಳನದ ಸಂದರ್ಭದಲ್ಲಿ ಹರಿಜನ ವಸತಿಯಲ್ಲಿ ವಿಠಲಭಾಯಿ ಅವರನ್ನು ನೋಡಿದಾಗಿನ ಆ ದೃಶ್ಯ ಎಂದಿಗೂ ಮರೆಯುವಂಥದಲ್ಲ. ರಾಜಕೀಯ ಸಮ್ಮೇಳನದ ಜತೆಗೆ ಗೋಧರಾದಲ್ಲಿ ಬೇರೆ ಸಮ್ಮೇಳನಗಳು ನಡೆಯುತ್ತಿದ್ದವು. ಅವುಗಳ ಪೈಕಿ 'ಸುಧಾರಣಾ ಸಮ್ಮೇಳನವು' ಒಂದು. ಅದರಲ್ಲಿ ಹರಿಜನರಿಗೆ ಸಂಬಂಧಿಸಿದ ಒಂದು ನಿರ್ಣಯವಿತ್ತು. ಬೆರಳಮೇಲೆ ಎಣಿಸುವಷ್ಟು ಹರಿಜನರು ಹಾಜರಿಲ್ಲದ ಸಮ್ಮೇಳನದಲ್ಲಿ ಆ ನಿರ್ಣಯವನ್ನು ಮಾಡಿಸುವುದು ವ್ಯರ್ಥ; ಹಾಗೆ ಮಾಡುವ ಬದಲು ರಾತ್ರಿ ಹರಿಜನ ವಸತಿಗೆ ಹೋಗಿ, ಆ ನಿರ್ಣಯವನ್ನು ಅಂಗೀಕರಿಸಬಹುದು-ಎಂಬುದಾಗಿ ನಾನು ಹೇಳಿದೆ. ಸಭಿಕರಿಗೆ ಆ ಮಾತು ಹಿಡಿಸಿತು ಹರಿಜನ ವಸತಿ ಸವರ್ಣ ಹಿಂದೂಗಳಿಂದ ತುಂಬಿಹೋಯಿತು. ಗೋಧರಾದ ಇತಿಹಾಸದಲ್ಲಿ ಅದು ಅಪೂರ್ವ ಘಟನೆ. ಸಭೆಯಲ್ಲಿ ಎಳ್ಳಷ್ಟು ಎಡೆಯಿರಲಿಲ್ಲ. ಅಬ್ಬಾಸ್‌ಸಾಹೇಬರು, ಅವರ ಬೇಗಂ ಮೊದಲಾದವರೂ ಸಭೆಯಲ್ಲಿ ಹಾಜರಿದ್ದರು. ಆ ಸಭೆಯಲ್ಲಿ ಸೊಂಟಪಟ್ಟಿ, ಧೋತ್ರ, ಸಾಧುಗಳು ಧರಿಸುವಂಥ ಕುಲಾವಿ ಧರಿಸಿದ ಗಡ್ಡದ ವ್ಯಕ್ತಿಯೊಂದನ್ನು ಕಂಡೆ.

ವಿಠಲ ಭಾಯಿ ಅವರನ್ನು ಆ ವಿಚಿತ್ರವಾದ ವೇಷದಲ್ಲಿ ನಾನು ಹಿಂದೆಂದೂ ನೋಡಿರಲಿಲ್ಲ. ಆದಕಾರಣ ಅವರನ್ನು ಪಕ್ಕನೆ ಗುರಿತಿಸಲು ಸಾಧ್ಯವಾಗ ಲಿಲ್ಲ. ಅವರ ಗುರುತು ಹತ್ತಿದಮೇಲೆ, ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿ ಕೊಂಡೆವು; ಒಳಿತಾಗಿ ನಗೆಯಾಡಿದೆವು. ಆ ವೇಷದಲ್ಲಿ ವಿಠಲಭಾಯಿ ಅವರ ನಾಟಕೀಯ ಅನುಕರಣೆ ಇದ್ದಿತೇನೋ ಸರಿ, ಆದರೆ ಅದರ ಅಂತರ್ಯ ದಲ್ಲಿ ಅವರ ಸರಳತೆ ಹಾಗೂ ಜನ ಸಾಮಾನ್ಯರಲ್ಲಿ ಮಿಳಿತರಾಗುವ ಕಲೆಯೂ ಇತ್ತು. ವಿಠಲಭಾಯಿ ಅವರ ಹರಿಜನ ಪ್ರೇಮದ ಪರಿಚಯ ಅಲ್ಲಿ ನನಗಾ ಯಿತು. ಅವರ ಪರಿಚಯ ನನಗೆ ಹೆಚ್ಚು ಹೆಚ್ಚಾಗಿ ಆದಂತೆ, ಅಂದು ಅವರು ಹರಿಜನ ವಸತಿಗೆ ಬಂದಿದ್ದುದು ಶುದ್ಧ ಹೃದಯದಿಂದ ಎಂಬುದು ಅನುಭವವಾಯಿತು.

ಅವರ ಹೃದಯದಲ್ಲಿ ಸ್ಪೃಶ್ಯಾಸ್ಪೃಶ್ಯ ಭಾವನೆಗೆ ಸ್ವಲ್ಪವೂ ಎಡೆಯಿರ ಲಿಲ್ಲ. ಸವರ್ಣ ಹಿಂದುಗಳಿಗೆ ದೊರೆಯಬಹುದಾದ ಅಧಿಕಾರ ಅಥವಾ ಪದವಿಗಳು ಹರಿಜನರಿಗೂ ದೊರೆಯಬೇಕೆಂಬುದು ಅವರ ದೃಢ ವಿಶ್ವಾಸ ವಾಗಿತ್ತು. ವಿಶ್ವಾಸವಷ್ಟೇ (ನಂಬಿಕೆ) ಅಲ್ಲ, ಅವರ ಆಚರಣೆಯು ಅದಕ್ಕೆ ಅನುಗುಣವಾಗಿತ್ತು. ಇದರಿಂದಾಗಿ ನವಂಬರ್ ೯ ರಂದು ಭಾರತದಲ್ಲಿ ಅವರ ಶವಸಂಸ್ಕಾರ ನಡೆಯುವಂದು ಸಮಸ್ತ ಜನತೆಯೊಂದಿಗೆ ಹರಿಜನರು ಶ್ರದ್ಧಾ ಪೂರ್ಣ ಅಶ್ರು ತರ್ಪಣ ನೀಡುವರೆಂದು ಆಶಿಸುವೆನು.೧೦೩

ವಿಠಲ್‌ಭಾಯಿ ಅವರ ಚಿತ್ರವನ್ನು ಕಾಲೇಜ್ ಹಾಲಿನಲ್ಲಿ ತಗಲು ಹಾಕಿದ ಮಾತ್ರಕ್ಕೆ ನೀವು ಉತ್ತೀರ್ಣರಾಗಲಾರಿರಿ. ಅವರ ನಿಃಸ್ವಾರ್ಥತೆ, ಸೇವಾಭಾವನೆ ಹಾಗೂ ಸರಳ ಜೀವನವನ್ನು ನೀವು ಗ್ರಹಿಸಿದಾಗಲೇ ಅವರ ಋಣದಿಂದ ಮುಕ್ತರಾದೀರಿ. ಅವರು ಇಚ್ಛಿಸಿದ್ದರೆ, ವಕೀಲಿ ವೃತ್ತಿ ಅಥವಾ ಬೇರೆ ಯಾವುದಾದರೂ ಒಳ್ಳೆಯ ವೃತ್ತಿಯಿಂದ ಲಕ್ಷಾಂತರ ರೂಪಾಯಿ ಗಳಿಸಿ, ಸಿರಿವಂತರಾಗಬಹುದಾಗಿತ್ತು. ಆದರೆ, ಅವರು ತಮ್ಮ ಇಡೀ ಜೀವನ ವನ್ನು ಸರಳತೆಯಿಂದಲೇ ಕಳೆದು, ಕೊನೆಗೆ ಬಡತನದಲ್ಲೇ ಅಳಿದರು. ನೀವೂ ಸ್ವರ್ಗೀಯ ವಿಠಲಭಾಯಿ ಪದಚಿಹ್ನೆಗಳನ್ನು ಅನುಸರಿಸಿದರೆ, ಎಷ್ಟು ಚೆಂದ?೧೦೪

ನಾಗೇಶ್ವರರಾವ್ ಪಂತಲು

ನಾಗೇಶ್ವರರಾಯರಲ್ಲಿ ವಿನಯವಿದೆ; ಪ್ರಾಮಾಣಿಕತೆ ಅಡಕವಾಗಿ ತುಂಬಿದೆ. ಅವರ ಮಿತ್ರ ಹಾಗೂ ಒಡನಾಡಿಯಾಗಿರುವುದು ನನಗೆ ಹೆಮ್ಮೆ. ನನಗೆ ಅವರ ಪರಿಚಯವಾದಾಗಿನಿಂದ ಅವರಲ್ಲಿ ನಾನು ಒಂದು ವಿಶೇಷವನ್ನು ಕಂಡುಕೊಂಡಿದೇನೆ; ತಮ್ಮ ಅಥವಾ ತಮ್ಮ ಸಹಾಯದ ಆವಶ್ಯಕತೆ ಯಾರಿಗೆ ಉಂಟಾಗುವುದೋ, ಅವರಿಗೆ ತಮ್ಮ ಕುತ್ತಿಗೆಯನ್ನೇ ಕೊಟ್ಟು ಬಿಡುಸಂಥವರು ಅವರು. ಅವರ ಬಲಗೈ ನೀಡಿದುದು ಅವರ ಎಡಗೈಗೆ ಗೊತ್ತಾಗುವುದಿಲ್ಲ.೧೦೫

ಜಮನಾಲಾಲ್ ಬಜಾಜ್

ಸೇಠ್ ಜಮ್ನಾಲಾಲ್ ಬಜಾಜರನ್ನು ನಮ್ಮಿಂದ ಕಸುಗೊಳ್ಳುವುದರ ಮೂಲಕ ಕಾಲ ಪುರುಷ ಶಕ್ತಿಶಾಲಿ ವ್ಯಕ್ತಿಯೊಬ್ಬರನ್ನು ಕೊಂಡು ಹೋಗಿ ದಾನೆ. ಶ್ರೀಮಂತರು ಲೋಕಕಲ್ಯಾಣದ ದೃಷ್ಟಿಯಿಂದ ತಮ್ಮ ಐಶ್ವರ್ಯಕ್ಕೆ ಟ್ರಸ್ಟಿಗಳಾಗಿರಬೇಕು ಎಂಬ ಮಾತನ್ನು ನಾನು ಬರೆಯುವಾಗಲೆಲ್ಲ ಈ ವಣಿಕ್–ಶಿರೋಮಣಿಯ ಉದಾಹರಣೆಯೇ ನನ್ನ ಮುಂದಿರುತ್ತಿತ್ತು. ಅವರು ತಮ್ಮ ಸಂಪತ್ತಿಗೆ ಆದರ್ಶ ಟ್ರಸ್ಟಿ ಆಗದೆ ಹೋಗಿದ್ದರೆ, ದೋಷ ಅವರದಲ್ಲ. ನಾನೇ ವಿಚಾರ ಪೂರ್ವಕವಾಗಿ ಅವರನ್ನು ತಡೆಗಟ್ಟಿದ್ದೆ. ಉತ್ಸಾಹದ ಭರದಲ್ಲಿ ಯಾವುದೇ ಒಂದು ಕೆಲಸಮಾಡಿ, ಹಿಂದಿಂದ ಆ ಬಗೆಗೆ ಶಾಂತ ಮನಸ್ಸಿನಿಂದ ವಿಚಾರಮಾಡಿ ಪಶ್ಚಾತ್ತಾಪ ಪಡುವಂತೆ ಆಗ ಬಾರದೆಂಬುದು ನನ್ನ ಉದ್ದೇಶವಾಗಿತ್ತು. ಸರಳ ಜೀವನವಂತು ಅವರದೇ ವೈಶಿಷ್ಟ್ಯ. ಅವರು ತಮಗಾಗಿ ಕಟ್ಟಿಕೊಂಡ ಮನೆಗಳಾವುವೂ ಅವರ ವಾಗಿ ಉಳಿಯದೆ, ಧರ್ಮಶಾಲೆಗಳಾದವು. ಸತ್ಯಾಗ್ರಹಿಯಾಗಿ ಅವರು ಮಾಡಿದ ದಾನ ಸರ್ವೋತ್ತಮವಾದುದು. ರಾಜಕೀಯ ಪ್ರಶ್ನೆಗಳ ಚರ್ಚೆಯ ಕಾಲದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ದೃಢತಾಪೂರ್ವಕ

ವಾಗಿ ವ್ಯಕ್ತಪಡಿಸುತ್ತಿದ್ದರು. ಅವರ ತೀರ್ಮಾನಗಳು ಪರಿಪಕ್ವವಾಗಿರುತ್ತಿದ್ದವು. ತ್ಯಾಗದ ದೃಷ್ಟಿಯಿಂದ ಅವರ ಕೊನೆಯ ಕೆಲಸ ಸರ್ವಶ್ರೇಷ್ಠವಾದುದಾಗಿತ್ತು. ತಮ್ಮ ಉಳಿದ ಆಯುಷ್ಯವನ್ನು ಯೋಗ್ಯತಾಪೂರ್ವಕವಾಗಿ, ತನ್ಮಯರಾಗಿ ಕಳೆಯಲು ಬರುವಂಥ ರಚನಾತ್ಮಕ ಕಾರ್ಯವೊಂದರಲ್ಲಿ ತೊಡಗಬೇಕೆಂಬುದು ಅವರ ಇಚ್ಛೆಯಾಗಿತ್ತು. ದೇಶದ ಪಶು–ಧನದ ರಕ್ಷಣಾ ಕಾರ್ಯವನ್ನು ಅವರು ತಮ್ಮ ಜೀವನದ ದೀಕ್ಷೆಯಾಗಿಸಿಕೊಂಡಿದ್ದರು. ಗೋವನ್ನು ಅದರ ಪ್ರತೀಕವಾಗಿ ಮಾಡಿಕೊಂಡಿದ್ದರು. ಆ ಕಾರ್ಯದಲ್ಲಿ ಅವರು ಎಷ್ಟು ಏಕಾಗ್ರತೆ ಹಾಗೂ ತನ್ಮಯತೆಯಿಂದ ತೊಡಗಿದ್ದರೆಂದರೆ, ಅದಕ್ಕೆ ಎಣೆಯಾದ ಉದಾಹರಣೆ ಬೇರೊಂದು ದೊರೆಯುವಂತಿಲ್ಲ. ಜಾತಿ, ಧರ್ಮ ಅಥವಾ ವರ್ಣದ ಸಂಕುಚಿತ ಭಾವಕ್ಕೆ ಎಡೆಯಿಲ್ಲದ ಔದಾರ್ಯ ಅವರದು. ಉದ್ಯೋಗಿ ಪುರುಷನಿಗೆ ಅಪರೂಪವಾದಂಥ ಸಾಧನೆಯಲ್ಲಿ ಅವರು ತೊಡಗಿದ್ದರು. ವಿಚಾರ ಸಂಯಮ ಅವರದೊಂದು ಹಿರಿಯ ಸಾಧನೆ. ಅವರು ಸದಾ ತಸ್ಕರ ವಿಚಾರದಿಂದ ಮುಕ್ತರಾಗಿರಲು ಪ್ರಯತ್ನಿಸುತ್ತಿದ್ದರು. ಅವರ ನಿಧನದಿಂದ ವಸುಂಧರೆಯ ರತ್ನವೊಂದು ಕಡಿಮೆಯಾಯಿತು. ದೇಶ ವೀರಾಧಿ ವೀರರೊಬ್ಬರನ್ನು ಕಳೆದುಕೊಂಡಿತು. ಯಾವ ಕಾರ್ಯಕ್ಕಾಗಿ ಅವರು ತಮ್ಮ ಜೀವನದ ಉಳಿದ ಭಾಗವನ್ನು ಸಮರ್ಪಿಸಿದ್ದರೋ; ಆ ಕಾರ್ಯವನ್ನು ಅವರ ಪತ್ನಿ ಜಾನಕೀದೇವಿ ಸ್ವತಃ ಮಾಡಲು ನಿಶ್ಚಯಿಸಿದ್ದಾರೆ. ಅವರು ಸಮಸ್ತ ವ್ಯಕ್ತಿಗತ ಸಂಪತ್ತನ್ನು ಸುಮಾರು ಎರಡುಕಾಲು ಲಕ್ಷ-ಕೃಷ್ಣಾರ್ಪಣೆ ಮಾಡಿದಾರೆ. ತಾವು ವಹಿಸಿಕೊಂಡಿರುವ ಈ ಕಾರ್ಯದಲ್ಲಿ ಸಫಲರಾಗುವಂಥ ಶಕ್ತಿಯನ್ನು ಭಗವಂತನು ಅವರಿಗೆ ನೀಡಲಿ.೧೦೬

[ಜಮುನಾಲಾಲರು ಕೇವಲ ಓರ್ವ ವ್ಯಕ್ತಿಯಾಗಿರಲಿಲ್ಲ. ನಿಜವಾದ ಅರ್ಥದಲ್ಲಿ ದೇಶದ ಒಂದು ಸಂಸ್ಥೆಯೇ ಆಗಿದ್ದರು. ಅವರ ಆಕಸ್ಮಿಕ ನಿಧನದ ನಂತರ, ಅವರ ಸಮಸ್ತ ಸಾರ್ವಜನಿಕ ಪ್ರವೃತ್ತಿಗಳನ್ನು ಮೊದಲಿನಂತೆ ಅಖಂಡವಾಗಿ ನಡೆಸಿಕೊಂಡು ಹೋಗುವುದೇ ಅವರ ನಿಜವಾದ ಸ್ಮಾರಕವಾಗುವುದೆಂದು ಗಾಂಧೀಜಿ ತೀರ್ಮಾನಿಸಿದರು. ಆ ಉದ್ದೇಶ್ಯವನ್ನು ಸಫಲಗೊಳಿಸುವ ಸಲುವಾಗಿ, ಜಮುನಾಲಾಲರ ಜೀವನ-ಕಾರ್ಯದಲ್ಲಿ ಸಹಾನು

ಭೂತಿ ಹೊಂದಿದ್ದ ಸುಮಾರು ಇನ್ನೂರು ಮಂದಿ ಮಿತ್ರರನ್ನು ವಿಚಾರ-ವಿನಿಮಯಕ್ಕಾಗಿ ಆಮಂತ್ರಣ ಕೊಟ್ಟು ವರ್ಧಾಕ್ಕೆ ಕರೆಸಿಕೊಂಡರು. ಜಮನಾಲಾಲ್‌ರ ರಾಷ್ಟ್ರಭಾಷಾ ಪ್ರಚಾರದ ಸಿದ್ಧಾಂತಗಳನ್ನು ಗಮನದಲ್ಲಿರಿಸಿಕೊಂಡು, ಆಮಂತ್ರಣ ಪತ್ರವನ್ನು ಹಿಂದೀ ಮತ್ತು ಉರ್ದು-ಎರಡೂ ಲಿಪಿಗಳಲ್ಲಿ ಮುದ್ರಿಸಲಾಗಿತ್ತು. ವರ್ಧಾದ ನವಭಾರತ ವಿದ್ಯಾಲಯದಲ್ಲಿ ಫೆಬ್ರವರಿ ೨೦ ಮತ್ತು ೨೧ ರಂದು ತದುದ್ದೇಶದಿಂದ ಬಂದಿದ್ದ ಸಹೋದರ-ಸಹೋದರಿಯರ ಎರಡು ಸಭೆಗಳು ನಡೆದವು. ಆ ಸಂದರ್ಭದಲ್ಲಿ ಗಾಂಧೀಜಿ ಮಾಡಿದ ಭಾಷಣ ಅಸದೃಶವಾದುದು. ಹಿಂದೆಂದೂ ಅಂಥ ಪ್ರಸಂಗಗಳಲ್ಲಿ ಅಂಥ ಮಾತುಗಳು ಅವರ ಬಾಯಿಂದ ಹೊರಟಿರಲಿಕ್ಕಿಲ್ಲ. ಹಣ-ಕಾಸಿನ ಮೂಲಕ ಕಲ್ಲು ಇಟ್ಟಿಗೆಗಳ ಸ್ಮಾರಕ ರಚಿಸುವ ವಿಚಾರ ತೊರೆದು, ಜಮನಾಲಾಲರ ಮೃತ್ಯುವನ್ನು ಆತ್ಮೋನ್ನತಿಯ ಹಾಗೂ ಅವರ ಜೀವನ ಕಾರ್ಯವನ್ನು ಮುಂಬರಿಸುವ ಸಾಧನವಾಗಿಸಿಕೊಳ್ಳಬೇಕೆಂಬ ಸಲಹೆ ನೀಡುತ್ತ, ಮಿತ್ರ ಮಂಡಲವನ್ನು ಕುರಿತು ಹೀಗೆಂದರು :—]

ಇಂದಿನಂಥ ಸಂದರ್ಭ ನನ್ನ ಜೀವನದಲ್ಲಿ ಹಿಂದೆಂದೂ ಒದಗಿರಲಿಲ್ಲ; ಹಾಗೂ ನನಗೆ ತೋರುವಂತೆ ಮುಂದೆಯೂ ಒದಗಲಾರದು. ಇಂದು ನಾವು ಇಲ್ಲಿ ನಡೆಸಲಿರುವ ಕಾರ್ಯಕಲಾಪಗಳಿಗೆ ಅಧ್ಯಕ್ಷರನ್ನೇ ಆರಿಸಿಲ್ಲವೆಂಬುದನ್ನು ನೀವು ಗಮನಿಸಿರಬೇಕು. ನಾನಂತು ಅಧ್ಯಕ್ಷನಲ್ಲ; ಏಕೆ ಅಲ್ಲ ಎಂಬುದು ಸ್ವಲ್ಪ ಕಾಲದಲ್ಲೇ ನಿಮಗೆ ತಿಳಿಯುವುದು.

ಸ್ವಲ್ಪ ಹೆಚ್ಚು ಕಡಿಮೆ ನಾನು ಭಾರತದ ಸಾರ್ವಜನಿಕ ಜೀವನದಲ್ಲಿ ಪ್ರವೇಶಮಾಡಿದಾಗಿನಿಂದಲೇ ಜಮನಾಲಾಲರೊಡನೆ ನನ್ನ ಸಂಬಂಧ ಆರಂಭವಾಯಿತೆಂದು ಹೇಳುತ್ತಾರೆ. ಅವರು ನನ್ನ ಎಲ್ಲ ಕಾರ್ಯಗಳನ್ನು ತನ್ನದಾಗಿಸಿಕೊಂಡಿದ್ದರು ; ನನಗೆ ಮಾಡಲು ಏನೂ ಉಳಿಯುತ್ತಲೇ ಇರಲಿಲ್ಲ. ನಾನು ಯಾವುದೇ ಹೊಸ ಕೆಲಸವನ್ನು ಆರಂಭಿಸಿದರೂ, ಅದರ ಹೊರೆಯನ್ನು ಅವರೇ ಹೊತ್ತುಕೊಂಡುಬಿಡುತ್ತಿದ್ದರು. ಹೀಗೆ ನನ್ನನ್ನು ನಿಶ್ಚಿಂತನನ್ನಾಗಿ ಇರಿಸುವುದೇ ಅವರ ಜೀವನ-ಕಾರ್ಯವೆಂಬಂತೆ ಆಗಿಹೋಗಿತ್ತು. ನಮ್ಮ ಕಾರ್ಯ ಆ ರೀತಿ ಮೋಜಿನಿಂದ ಸಾಗಿತ್ತು; ಈಗ ಅವರೇ ಸಾಗಿಹೋದರು ; ಅಂದಮೇಲೆ ಅವರ ಕಾರ್ಯದ ಭಾರವೆಲ್ಲ ನನ್ನ ಹೆಗಲಮೇಲೆ ಬಿದ್ದಿದೆ. ಅಂತಲೆ

ಅವರ ಅನೇಕಾನೇಕ ಸೇವಾಕಾರ್ಯಗಳಲ್ಲಿ ನೆರವಾಗುತ್ತಿದ್ದ ಮಿತ್ರರನ್ನೆಲ್ಲ ಕರೆಸಿ, ನನ್ನ ಹೊರಲಾಗದ ಹೊರೆಯನ್ನು ಹಗುರವಾಗಿಸಲು ತಮ್ಮ ತಮ್ಮ ಶಕ್ತ್ಯನುಸಾರ ಸಹಾಯಮಾಡುವಂತೆ ಕೇಳಿಕೊಳ್ಳಬೇಕೆಂದು ಅನಿಸಿತು. ಇಂದು ನಾನು ನಿಮ್ಮೆದುರಿಗೆ ಓರ್ವ ಭಿಕ್ಷುಕನಂತೆ ನಿಂತಿದೇನೆ. ಇಂಥ ನಾನು ಸಭಾಧ್ಯಕ್ಷನಾಗುವುದು ಹೇಗೆ?

ನನ್ನ ಭಿಕ್ಷಾಪಾತ್ರೆ ಹಿಡಿದು, ನಿಮ್ಮೆದುರಿಗೆ ನಿಂತಿದೇನೆ. ಆದರೆ ನಾನು ಬೇಡುವುದು ಹಣ-ಕಾಸಿನ ಬಿಕ್ಷೆಯಲ್ಲ. ಅಂಥ ಭಿಕ್ಷೆಯನ್ನು ನನ್ನ ಜೀವನದಲ್ಲಿ ಸಾಕಷ್ಟು ಬೇಡಿದೇನೆ. ಬಡವರ ಬಿಡಿಗಾಸು, ಶ್ರೀಮಂತನ ಕೋಟಿ-ಕೋಟಿ ರೂಪಾಯಿ—ಎರಡರ ಆವಶ್ಯಕತೆಯೂ ನನಗಿಲ್ಲ.

ಇಂದು ನಾನು ಮಾಡಬೇಕಾಗಿರುವ ಕಾರ್ಯಕ್ಕೆ ಹಣ-ಕಾಸಿನ ಆವಶ್ಯಕತೆ ಏನಿಲ್ಲ. ನಾನು ಹಾಗೆ ಇಚ್ಛಿಸಿದ್ದರೆ, ಜಮನಾಲಾಲರ ಧನಿಕ ಮಿತ್ರರನ್ನೆಲ್ಲ ಕರೆಸಿ, ಅವರ ಮೇಲೆ ಒತ್ತಾಯ ಹಾಕಿ, ಅವರ ಮುಖಸ್ತುತಿಮಾಡಿ, ಅವರ ಭಾವನೆಗಳನ್ನು ದ್ರವಿತಗೊಳಿಸಿ, ಗಂಟುಬಿಚ್ಚಿಸಿಬಿಡುತ್ತಿದ್ದೆ. ಆ ದಂಧೆಯನ್ನು ನನ್ನ ಜೀವನದಲ್ಲಿ ಮನಃಪೂರ್ತಿಯಾಗಿ ಮಾಡಿದೇನೆ. ಆ ಕೆಲಸ ನನಗೆ ಚೆನ್ನಾಗಿಯೇ ಬರುತ್ತದೆ. ಆದರೆ, ಅದೇ ಕೆಲಸವನ್ನು ನಾನು ಇಲ್ಲಿ ಮಾಡುತ್ತ ಕುಳಿತಿದ್ದಲ್ಲಿ, ಆ ವ್ಯಕ್ತಿಯ ಹೆಸರಿಗೆ ಭಾರಿ ಕಳಂಕ ಹತ್ತುತ್ತಿತ್ತು. ಆತ ತನ್ನ ಕಾರ್ಯವನ್ನು ನನಗೆ ವಹಿಸಿ, ಹೊರಟು ಹೋಗಿದಾನೆ. ನನ್ನನ್ನು ಪರೀಕ್ಷಿಸಲೆಂದು ಬಂದವನು ನನ್ನ ಮಗನಾಗಿ ಹೋಗಿ, ನನ್ನ ಹೊರೆಯನ್ನೆಲ್ಲ ತಾನೇ ಹೊತ್ತುಕೊಂಡ. ಇಂದು ನಿಮ್ಮನ್ನು ನಾನು ಬೇಡಬೇಕಾಗಿರುವ ಭಿಕ್ಷೆಯೆಂದರೆ ಇದು ಜಮನಾಲಾಲರು ಹೊರಟು ಹೋದುದರಿಂದ ಬೆಳೆದು ಕುಳಿತಿರುವ ಕೆಲಸದ ಹೊರೆಯನ್ನು ಹೊರಲು ಯಾರು ಯಾರು ಎಷ್ಟು ಎಷ್ಟು ನೆರವು ನೀಡುವಿರೋ ತಿಳಿಸಿರಿ. ಒಬ್ಬನೇ ಮನುಷ್ಯನ ಸಹಾಯದಿಂದ ಕೆಲಸ ಆಗದು. ಎಲ್ಲರೂ ಕೂಡಿ ಸಹಾಯ ಮಾಡಬೇಕು; ಕೆಲಸವನ್ನು ಎಲ್ಲರೂ ಹಂಚಿಕೊಳ್ಳಬೇಕು.

ಈ ಸಂಬಂಧದಲ್ಲಿ ಮುಂದಿನ ಮಾತು ಆಡುವ ಮುನ್ನ ಈ ವರೆಗೆ ನಾನೇನು ಮಾಡಿರುವೆನೆಂಬುದನ್ನು ತಿಳಿಸುವೆನು. ಫೆಬ್ರವರಿ ೧೧ ಕ್ಕೆ ನಾನು ಜಮನಾಲಾಲರ ಮನೆಗೆ ಹೋಗುವ ಹೊತ್ತಿಗೆ ಅವರು ತೀರಿಕೊಂಡಿದ್ದರು.

ರಕ್ತ ಸ್ರಾವವನ್ನು ನಿಲ್ಲಿಸುವ ಔಷಧಿ ಕಳುಹಿಸಬೇಕೆಂಬ ಸಂದೇಶವಷ್ಟೆ ನನಗೆ ವರ್ಧಾದಿಂದ ಬಂದಿತ್ತು. ನಾನು ಔಷಧಿ ಕಳುಹಿಸಿ ಮನಸ್ಸಮಾಧಾನ ಪಟ್ಟುಕೊಳ್ಳಬಹುದಾಗಿತ್ತು. ಆದರೆ, ಅಂದು ನನಗೆ ಅಷ್ಟೇ ಸಾಲದು, ನಾನೇ ಹೋಗಬೇಕು ಎಂದೆನಿಸಿತು. ಅಲ್ಲಿಗೆ ಮುಟ್ಟಿದಾಗ ನಾನು ಕಂಡ ವಿದ್ಯಮಾನವೇ ಬೇರೆ. ಅಂಥ ಸಂದರ್ಭದಲ್ಲೂ ನಾನು ನಿಷ್ಕರುಣಿಯಾದೆ. ಜಾನಕೀದೇವಿ ಪತಿಯ ದೇಹದೊಡನೆ ಸಹಗಮನ ಮಾಡುವ ವಿಚಾರ ನಡೆಸಿದ್ದರು. ನಾನು ಆಕೆಗೆ ಹೇಳಿದೆ: ನಿಜಕ್ಕು ಸಹಗಮನ ಮಾಡಬೇಕೆಂದಿದ್ದರೆ, ಜೀವಿತ-ಜಾಗೃತ ಸಹಗಮನವನ್ನೆ ಮಾಡಬೇಕು. ಹಣದ ತ್ಯಾಗ ಎಷ್ಟು ಸಾಧ್ಯವೋ ಅಷ್ಟು ಮಾಡು. ಅವರಿಗೆ ಅದು ಸಾಧಾರಣವಾದ ಮಾತೇ ಆಗಿತ್ತು. ಇಷ್ಟಕ್ಕು ಧನದಿಂದ ಅವರು ಅನುಭವಿಸಬಹುದಾಗಿದ್ದ ಸುಖ, ಸಂತೋಷ ಎಷ್ಟು? ಆದರೆ, ಎರಡನೆಯ ಮಾತು ಅಷ್ಟು ಸುಲಭವಾಗಿರಲಿಲ್ಲ. ತನ್ನ ಪತಿಯ ಸ್ಥಾನವನ್ನು ತೆಗೆದುಕೊಳ್ಳಬೇಕೆಂದು ಅವರಿಗೆ ಹೇಳಿದೆ. ಅವರಿಗೆ ಸಂಕೋಚವೇ ಆಯಿತು. ಆದರೂ ನಾನು ಅವರಿಂದ ಪ್ರತಿಜ್ಞೆಯನ್ನೇ ಮಾಡಿಸಿಬಿಟ್ಟೆ. ಅಷ್ಟು ಕಠಿನ ಹೃದಯದವನಾದೆ, ನಾನು.

ಹೀಗೆ, ಜಾನಕೀದೇವಿಯವರೇನೋ ತ್ಯಾಗದ ಪ್ರತಿಜ್ಞೆಯನ್ನು ತೆಗೆದುಕೊಂಡರು. ಅವರ ಪುತ್ರ ಪುತ್ರಿಯರು, ಅಳಿಯಂದಿರು ಕೂಡ ಹಾಗೆಯೇ ತ್ಯಾಗ ಮಾಡಬೇಕೆಂಬ ವಿಚಾರ ನನ್ನ ಮನಸ್ಸಿಗೆ ಬಂದಿತು. ಅವರ ವಿಷಯದಲ್ಲೂ ಕಠೋರವಾಗಿಯೇ ವರ್ತಿಸಿದೆ. ಅವರಿಗೆ ಹೇಳಿದೆ— "ಜಮನಾಲಾಲರಂತೆ ನೀವೂ ಅಗತ್ಯವಾಗಿ ವ್ಯಾಪಾರ ಮಾಡಿ, ಆದರೆ, ಅದರಲ್ಲೂ ಜಮನಾಲಾಲರ ವೈಶಿಷ್ಟ್ಯವನ್ನು ಉಳಿಸಿಕೊಂಡು ಬನ್ನಿ; ಅಂದರೆ ವ್ಯಾಪಾರವನ್ನು ಸೇವಾಭಾವನೆಯಿಂದ ಅಥವಾ ಧರ್ಮಭಾವನೆಯಿಂದ ಮಾಡಿರಿ. ಸಂಪಾದಿಸುವುದನ್ನೆಲ್ಲ ನೀತಿಮಾರ್ಗದಿಂದಲೇ ಸಂಪಾದಿಸಿ. ಅದನ್ನು ಪುಣ್ಯಕಾರ್ಯಕ್ಕಾಗಿಯೇ ಖರ್ಚುಮಾಡಿ.—ನಿಮ್ಮ ಸುಖ-ವಿಲಾಸಕ್ಕಾಗಿ ಅಲ್ಲ. ಅಂದರೆ, ನೀವು ಸಂಪಾದಿಸುವ ಸಿರಿ-ಸಂಪತ್ತಿಗೆ ಧರ್ಮದರ್ಶಿಗಳಾಗಿರಿ."

ಜಮನಾಲಾಲರು ಸೇವಾಕಾರ್ಯಕ್ಕಾಗಿ ಉಪಯೋಗಿಸಲಿಕ್ಕೆಂದು ತಮ್ಮ ಮಕ್ಕಳ ಬಳಿ ೬ ಲಕ್ಷ ರೂಪಾಯಿ ಕೂಡಿಸಿಟ್ಟಿದ್ದರು. ಅಂದರೆ, ನನ್ನಂಥ

ಭಿಕ್ಷುಕರ ಜೋಳಿಗೆ ತುಂಬುವ ಉದ್ದೇಶ. "ಈ ಬಾರಿಗೆ ನಮ್ಮನ್ನು ಮನಃಪೂರ್ತಿಯಾಗಿ ಸುಖ-ವಿಲಾಸದಿಂದಿರಲು ಬಿಟ್ಟುಬಿಡಿ. ಮತ್ತೆ ನಾವು ತ್ಯಾಗವನ್ನು ಮಾಡುತ್ತಿರುವೆವು"—ಎಂಬುದಾಗಿ ಮಕ್ಕಳು ಹೇಳಬಹುದಾಗಿತ್ತು. ಆದರೆ, ಅವರು ಹಾಗೆ ಮಾಡಲಿಲ್ಲ. ಒಂದೆರಡು ದಿನಗಳ ಗಂಭೀರ ವಿಚಾರದ ನಂತರ ತಮ್ಮ ಹಣವನ್ನೆಲ್ಲ ಸೇವಾಕಾರ್ಯಕ್ಕೆ ಕೊಟ್ಟುಬಿಟ್ಟರು. ಇದಲ್ಲದೆ ಜಮುನಾಲಾಲರ ಜೀವನ ಕಾಲದಲ್ಲಿ ಕಾಂಗ್ರೆಸ್ ಜನರ ಹಾಗೂ ಇತರ ಕಾರ್ಯಕರ್ತರ ಆತಿಥ್ಯದ ಸಲುವಾಗಿ ಪ್ರತಿವರ್ಷ ಸುಮಾರು ೨೦,೦೦೦ ರೂ. ಖರ್ಚಾಗುತ್ತಿತ್ತು. ಅದನ್ನು ಮೊದಲಿನಂತೆಯೇ ನಡೆಸಿಕೊಂಡು ಬರಲು ನಿಶ್ಚಯಿಸಿ, ಇಡೀ ಖರ್ಚಿನ ಜವಾಬದಾರಿಯನ್ನು ವಚ್ಛರಾಜ್ ಜಮುನಾಲಾಲ್ ಕಂಪೆನಿಯ ವತಿಯಿಂದ ತಮ್ಮ ಹೆಗಲಮೇಲೆಯೇ ಹೊತ್ತುಕೊಂಡರು. ಸೇತ್‌ಜೀ ಬಜಾಜವಾಡಿಯ ಒಂದು ಭಾಗವನ್ನು ಜಾನಕೀದೇವಿ ಹಾಗೂ ಮಕ್ಕಳ ಸಲುವಾಗಿ ಉಳಿಸಿಕೊಂಡಿದ್ದರು. ಆದರೆ, ಅವರ ಕುಟುಂಬದವರು ತಾವಾರೂ ಬಂಗಲೆಗಳಲ್ಲಿ ವಾಸಮಾಡುವುದಿಲ್ಲವೆಂದು ತೀರ್ಮಾನಿಸಿದರು. ಬಂಗಲೆಗಳನ್ನು ಕೇವಲ ಅತಿಥಿ ಸತ್ಕಾರ ಅಥವಾ ಸಾರ್ವಜನಿಕ ಕಾರ್ಯಕ್ಕಾಗಿಯೇ ಉಪಯೋಗಿಸಲಾಗುವುದು. ಸ್ವತಃ ಅವರು ಗೋಪುರಿಯಲ್ಲೇ ವಾಸಮಾಡಲು ಅಪೇಕ್ಷಿಸಿದ್ದಾರೆ.

ಹೀಗೆ ಶುಭಸಂಕಲ್ಪಗಳೊಡನೆ ಈ ಕಾರ್ಯ ಆರಂಭವಾಗಿದೆ. ಜಮುನಾಲಾಲರು ಕಣ್ಣುಮುಚ್ಚಿಕೊಂಡ ಕೂಡಲೇ ಅವರ ಹೊರೆಯನ್ನು ನಾನು ಹಂಚಿಟ್ಟಿದೇನೆ. ಜಮುನಾಲಾಲರ ಕಾರ್ಯಗಳ ಸೂಚಿಯೊಂದನ್ನು ನಿಮಗೆ ಕಳುಹಿಸಲಾಗಿದೆ. ಅದರಲ್ಲಿ ಅನೇಕ ಕೊನೆಯ ಕಾರ್ಯಗಳಿಗೆ ಮೊದಲ ಸ್ಥಾನ ದೊರೆತಿದೆ. ಇದು ಸ್ವರಾಜ್ಯ ಪ್ರಾಪ್ತಿಯ ಕಾರ್ಯಕ್ಕಿಂತ ಕಠಿಣವಾದುದು. ಸ್ವರಾಜ್ಯ ಸಿಕ್ಕಿಬಿಟ್ಟ ಮಾತ್ರಕ್ಕೆ ಈ ಕೆಲಸ ತನ್ನಿಂದ ತಾನೆ ಆಗಿಬಿಡುವುದಿಲ್ಲ. ಇದು ಕೇವಲ ಹಣದಿಂದ ಆಗುವಂಥ ಕೆಲಸವಲ್ಲ. ಆಜೀವ ಪರ್ಯಂತ ಅಲೌಕಿಕ ನಿಷ್ಠೆಯಿಂದ ಕೆಲಸ ಮಾಡುವ ಆ ವ್ಯಕ್ತಿ ಈ ಕೆಲಸವನ್ನು ಎಂಥ ಅಪೂರ್ವ ನಿಷ್ಠೆಯಿಂದ ಆರಂಭಿಸಿದರೆಂಬುದಕ್ಕೆ ನಾನೇ ಸಾಕ್ಷಿ. ಆ ರೀತಿ ಅವರು ಕೆಲಸ ಮಾಡುವುದನ್ನು ನೋಡಿ ಒಂದು ದಿನ ಸಹಜವಾಗಿಯೇ ನನ್ನ ಬಾಯಿಂದ ಹೀಗೆ ಮಾತು ಹೊರಟುಬಿಟ್ಟಿತು—

"ಇಷ್ಟು ವೇಗದಿಂದ ಇವರು ಮಾಡುತ್ತಿರುವ ಕೆಲಸವನ್ನು ಇವರ ಶರೀರ ಸಹಿಸಿ ಕೊಂಡೀತೆ? ಇದ್ದ ಕಿದ್ದಂತೆಯೇ ಮೋಸಮಾಡದೆ?" ಅಂದು ನಾನು ಆಡಿದ ಮಾತು ಭಗವಂತನೇ ನನ್ನ ಮೂಲಕ ಆಡಿದ ಮಾತೋ ಎಂಬಂತೆ ಇಂದು ಭವಿಷ್ಯವಾಣಿಯಾಗಿ ತೋರಿಕೊಂಡಿದೆ. ಸಾರಾಂಶ ಇಷ್ಟು—ಇದು ಹಣ ದಿಂದ ಆಗುವ ಕೆಲಸವಲ್ಲ; ನಿಷ್ಠೆಯಿಂದ ಆಗುವಂಥದು. ಜಾನಕೀದೇವಿ ಯವರು ದಾನಮಾಡಿರುವ ಎರಡೂವರೆ ಲಕ್ಷ ರೂಪಾಯಿಯಲ್ಲಿ ಎರಡೂವರೆ ಸಾವಿರ ರೂಪಾಯಿಯನ್ನು ಖಾದೀ ಕಾರ್ಯಕ್ಕಾಗಿ ವೆಚ್ಚಮಾಡಲು ಅವರು ಮೊದಲೇ ನಿಶ್ಚಯಿಸಿದ್ದರು. ಅದಲ್ಲದೆ, ವರ್ಧಾದಲ್ಲಿ ಒಂದು ಪ್ರಸೂತಿ ಗೃಹವನ್ನು ಸ್ಥಾಪಿಸುವ ಇಚ್ಛೆಯೂ ಅವರಿಗಿತ್ತು. ಅದಕ್ಕೂ ಸ್ವಲ್ಪ ಹಣ ಖರ್ಚಾಗುವುದು. ಸುಮಾರು ಎರಡೂಕಾಲು ಲಕ್ಷ ರೂಪಾಯಿ ಗೋಮಾ ತೆಯ ಸೇವೆಗಾಗಿ ಉಳಿಯುತ್ತದೆ. ಅಖಿಲ ಭಾರತ ಗೋ ಸೇವಾ ಸಂಘದ ಇಪ್ಪತ್ತು ಇಪ್ಪತ್ತೈದು ಸಾವಿರ ರೂಪಾಯಿಯೂ ನಮ್ಮ ಬಳಿಯಲ್ಲಿಯೇ ಇವೆ. ಜಾನಕೀದೇವಿಯವರ ಹಣ ಈ ಹಣ ಎರಡೂ ಕೂಡಿ ಈಗಿನ ಕೆಲ ಸಕ್ಕೆ ಸಾಕಾಗುವುದು. ಆದರೆ ನಮ್ಮಲ್ಲಿ ಕಾರ್ಯಕರ್ತರು ಸಾಕಷ್ಟಿಲ್ಲ. ಈ ವರೆಗೆ ಯಾವ ರೀತಿಯಿಂದ ಗೋ ಸೇವಾ ಕಾರ್ಯ ನಡೆದುಕೊಂಡು ಬಂದಿ ದೆಯೋ ಅದರಿಂದ ಜಮನಾಲಾಲರಿಗೆ ತೃಪ್ತಿಯಾಗಿರಲಿಲ್ಲ; ನನಗೂ ತೃಪ್ತಿ ಯಾಗಿಲ್ಲ. ಈ ಕಾರ್ಯವನ್ನು ತೃಪ್ತಿಕರವಾಗಿ ನಡೆಸಲು ನನಗೆ ತಮ್ಮ ತನು, ಮನ, ಧನದಿಂದ ಸಹಾಯ ಸಿಕ್ಕಬೇಕು. ಇದು ಆಗುವವರೆಗೆ ನನಗೆ ನೆಮ್ಮದಿ ಇರುವುದಿಲ್ಲ. ವಾಸ್ತವವಾಗಿ ಅವರು ನನ್ನ ಉತ್ತರಾಧಿಕಾರಿ ಆಗ ಬೇಕಾಗಿತ್ತು; ಆದರೆ, ಅವರು ಮರಣಹೊಂದಿ, ಅಮರರಾದರು. ಈಗ ಪರೀಕ್ಷೆ ಆಗಬೇಕಾಗಿರುವುದು ನನ್ನದು. ನಾನು ಹೊಸ ರೂಪದಲ್ಲಿ ಅವರ ಉತ್ತರಾಧಿಕಾರಿ ಆಗಿದೇನೆ. ಅಂದರೆ, ಅವರ ಸಮಸ್ತ ಕಾರ್ಯದ ಜವಾಬ ದಾರಿಯನ್ನೂ ನಾನು ಹೊತ್ತುಕೊಂಡಿದೇನೆ. ಆದರೆ, ಈ ಕಾರ್ಯ ಎಂಥ ದೆಂದರೆ, ನೀವೆಲ್ಲರೂ ಇದರ ಉತ್ತರಾಧಿಕಾರಿಗಳಾಗಬಹುದು. ನೀವೆಲ್ಲರೂ ಕೂಡಿ ಈ ಕಾರ್ಯವನ್ನು ಕೈಗೊಂಡರೆ ಇದು ಮೊದಲಗಿಂತ ಹೆಚ್ಚು ವ್ಯವಸ್ಥಿತ ವಾಗಿಯೂ ತೃಪ್ತಿಕರವಾಗಿಯೂ ನಡೆಯುವುದು. ಆಗಲೇ ನಾನು ಈ ಪರೀಕ್ಷೆಯಲ್ಲಿ ಉತ್ತೀರ್ಣನಾದೇನು.

ಜಮುನಾಲಾಲರು ಮಹಾ ಭಾಗ್ಯಶಾಲಿಗಳು. ಅವರು ಬದುಕಿದ್ದಾಗ ನಮಗೆ ಸ್ಪಷ್ಟವಾಗಿ ಕಾಣಿಸದಿದ್ದ ಅಂಶಗಳು ಅವರು ಹೋದನಂತರ ಸ್ಪಷ್ಟವಾಗಿ ಕಾಣಿಸ ಹತ್ತಿದರೆ, ಅವರು ಜೀವಂತರಾಗಿದ್ದಾಗ ನಮ್ಮಲ್ಲಿ ಮೂಡದಿದ್ದ ಜಾಗೃತಿ ಈಗ ನಮ್ಮಲ್ಲಿ ಮೂಡಿದರೆ, ಅವರಂತೆಯೇ ನಾವೂ ಮಹಾ ಭಾಗ್ಯಶಾಲಿಗಳಾಗಬಹುದು. ಇದೆಲ್ಲವೂ ಕಷ್ಟದ ಕೆಲಸ. ಆದರೆ, ಒಂದು ರೀತಿಯಿಂದ ಸುಲಭವಾದ ಕೆಲಸವೂ ಹೌದು. ಈ ಕಷ್ಟವಾದ ಕೆಲಸವನ್ನು ಮಾಡಲಿಕ್ಕಾದರೆ ಮಾಡಿರಿ. ಆದರೆ, ಈ ಮೀನ-ಮೇಷ ಎಣಿಸುವುದು ಮಾತ್ರ ಬೇಡ. ಅದರಿಂದ ನೀವು ಜಮುನಾಲಾಲರ ಬಗೆಗೆ ನಿಜವಾದ ಶ್ರದ್ಧೆಯನ್ನು ತೋರಿಸಿದಂತಾಗುವುದಿಲ್ಲ. ಯಾವ ಸಂಶಯವೂ ಇಲ್ಲದೆ, ಒಳಿತಾಗಿ ವಿಚಾರಮಾಡಿ, ಅವರ ಕಾರ್ಯದಲ್ಲಿ ಸ್ವಲ್ಪ ಸಹಾಯ ಮಾಡುವುದಾದರೆ, ಇಲ್ಲಿಗೆ ಬಂದುದಕ್ಕೆ ದೊಡ್ಡ ಕೆಲಸ ಮಾಡಿದಂತಾದೀತು.

ಗೋಸೇವೆಯ ಕಾರ್ಯವೇ ಅವರ ಎಲ್ಲಕ್ಕಿಂತ ದೊಡ್ಡ ಕಾರ್ಯ. ಹಾಗೆ ನೋಡಿದರೆ ಈ ಕೆಲಸ ಮೊದಲಿನಿಂದಲೂ ನಡೆಯುತ್ತಲೇ ಇತ್ತು. ಆದರೆ ಮಂದಗತಿಯಿಂದ ಸಾಗಿತ್ತು. ಇದರಿಂದ ಅವರಿಗೆ ತೃಪ್ತಿ ಇರಲಿಲ್ಲ. ಇದನ್ನು ತೀವ್ರಗತಿಯಿಂದ ಸಾಗಿಸುವುದು ಅವರ ಇಚ್ಛೆಯಾಗಿತ್ತು ; ತೀವ್ರಗತಿಯಿಂದ ಸಾಗಿಸಿ, ಕೊನೆಗೆ ತಾವೇ ಸಾಗಿಹೋದರು! ಗೋವನ್ನು ಜೀವಂತವಾಗಿ ಇಡಬೇಕೆಂದರೆ, ನಾವೂ ಅದರ ಸೇವೆಯಲ್ಲಿ ನಮ್ಮ ಪ್ರಾಣವನ್ನು ಆಹುತಿಕೊಡಬೇಕು. ಅಷ್ಟು ತೀವ್ರತೆಯಿಂದ ಕಾರ್ಯ ಮಾಡಬೇಕಾಗುವುದು. ಗೋವನ್ನು ನಾವು ಉಳಿಸಬಲ್ಲೆವಾದರೆ ನಾವೂ ಉಳಿದೇವು. ಒಂದುಮಾರ್ಗ, ಪಾಶ್ಚಾತ್ಯರು ತೋರಿಸಿಕೊಟ್ಟಿರುವುದು; ಅದನ್ನು ಮಾರಾಟ ಮಾಡಿ, ಅದರ ಬೂದಿಯಿಂದ ನಮ್ಮ ಹೊಟ್ಟೆ ತುಂಬಿಸಿಕೊಂಡು ಹೃಷ್ಟ-ಪುಷ್ಟರಾಗಿ ಬೆಳೆಯುವುದು ಅನ್ಯಾಯ. ನನಗೂ ಒಪ್ಪಿಗೆಯಿಲ್ಲ; ನಿಮಗೂ ಒಪ್ಪಿಗೆಯಿಲ್ಲ; ಜಮುನಾಲಾಲರಿಗೂ ಒಪ್ಪಿಗೆ ಇರಲಿಲ್ಲ. ಆದಕಾರಣ ಅವರು ಹಾಕಿಕೊಟ್ಟಿದ್ದ ಚೌಕಟ್ಟಿನಲ್ಲಿಯೇ ನಾವು ಕೆಲಸ ಮಾಡಬೇಕಾಗುವುದು. ಜಮುನಾಲಾಲರು ನಮಗೆ ತಮ್ಮ ಮಾರ್ಗವನ್ನು ತೋರಿಸಿಕೊಟ್ಟಿದಾರೆ. ಇಡೀ ದೇಶಕ್ಕಾಗಿ ಒಂದು ಯೋಜನೆ, ವರ್ಧಾಕ್ಕಾಗಿ ಒಂದು ಯೋಜನೆ-ಹೀಗೆ ಗೋಸೇವೆಯ ಸಲುವಾಗಿ ಅವರು ಎರಡು ಯೋಜನೆಗಳನ್ನು ತಯಾರಿಸಿದ್ದದು ಬಹುಶಃ ನಿಮಗೆ ತಿಳಿದಿರಬೇಕು.

* * *

ಈಗ ಇನ್ನೊಂದು ವಿಷಯ. ಖಾದೀ ಕಾರ್ಯದಲ್ಲಿ ಅವರಿಗಿದ್ದ ಆಸಕ್ತಿ ನನ್ನದಕ್ಕಿಂತ ಕಡಿಮೆಯೇನಲ್ಲ. ಖಾದಿಯ ಕೆಲಸಕ್ಕಾಗಿ ನಾನು ಕೊಟ್ಟಷ್ಟೇ ಕಾಲವನ್ನು ಅವರೂ ಕೊಟ್ಟರು. ಈ ಕಾರ್ಯಕ್ಕಾಗಿ ಅವರು ನನಗಿಂತ ಕಡಿಮೆ ಬುದ್ಧಿಯನ್ನೇನೂ ಖರ್ಚು ಮಾಡಲಿಲ್ಲ. ಆದಕಾರಣ ಕಾರ್ಯಕರ್ತರನ್ನು ಅವರೇ ಹುಡುಕಿಕೊಂಡು ಬರುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ, ನಾನು ಖಾದಿಯ ಮಂತ್ರವನ್ನು ಕೊಟ್ಟರೆ ಅವರು ಖಾದಿಗೆ ಮೂರ್ತರೂಪ ಕೊಟ್ಟರು. 'ಸ್ವಲ್ಪ ಖಾದಿಯ ಕೆಲಸ ಆದಮೇಲೆ ನಾನು ಜೈಲಿಗೆ ಹೋಗಿ ಕುಳಿತೆ. ಖಾದಿಯಿಂದಲೇ ಸ್ವರಾಜ್ಯ ಎಂಬುದು ಅವರಿಗೆ ತಿಳಿದಿತ್ತು. ಅವರು ಆ ಕಾರ್ಯದಲ್ಲಿ ನಿಮಗ್ನರಾಗಿ ಅದನ್ನು ಸಂಘಟಿಸದೆ ಹೋಗಿದ್ದರೆ, ನನ್ನ ಅನುಪಸ್ಥಿತಿಯಲ್ಲಿ ಅದು ಮೂರುದಾರಿ ಹಿಡಿಯುತ್ತಿತ್ತು.

ಗ್ರಾಮೋದ್ಯೋಗದ ಮಾತೂ ಹೀಗೆಯೇ. ಆ ಕಾರ್ಯಕ್ಕೆ ಅವರು ಮಗನವಾಡಿಯನ್ನು ಕೊಟ್ಟೇ ಇದ್ದರು. ಜತೆಗೆ ಅದರ ಮುಂದಿನ ಜಮೀನನ್ನು ಮಗನವಾಡಿಗಾಗಿ ಕೊಂಡುಕೊಳ್ಳಲು ನಿಶ್ಚಯಿಸಿದ್ದರು. ಈಗ ಚಿ. ಕಮಲನಯನ ಆ ಜಮೀನನ್ನು ಮಗನವಾಡಿಗೆ ಕೊಟ್ಟುಬಿಟ್ಟಿದ್ದಾನೆ. ಗ್ರಾಮೋದ್ಯೋಗದ ಕೆಲಸ ಎಷ್ಟು ವ್ಯಾಪಕವಾದುದೆಂದರೆ, ಇದಕ್ಕೆ ಎಷ್ಟು ಹಣ ಹಚ್ಚಿದರೂ ಸಾಲದು.

* * *

ಇನ್ನು ಒಂದು ಮಾತು. "ಜನ ಬೇರೆ ಎಲ್ಲಕಡೆಗಳಿಗೂ ಖಾದಿ ಹಾಕಿಕೊಂಡು ಹೋಗುತ್ತಾರೆ; ಬ್ಯಾಂಕಿಗೆ ಮಾತ್ರ ಖಾದಿ ಧರಿಸಿ ಹೋಗುವುದಿಲ್ಲ. ಬ್ಯಾಂಕಿಗೆ ಮಾರವಾಡಿ ಪೇಟಾ ಹಾಕಿಕೊಂಡು ಹೋಗದಿದ್ದರೆ ತಮ್ಮ ಗೌರವಕ್ಕೆ ಹಾನಿ ತಟ್ಟುವುದೆಂದು ಅವರ ಭಾವನೆ"—ಎಂಬುದಾಗಿ ಜಮನಾಲಾಲರು ಅನೇಕ ಬಾರಿ ಹೇಳಿದ್ದರು. ಆದರೆ, ಜಮನಾಲಾಲರು ಸ್ವತಃ ಆ ಬಗೆಗೆ ಚರ್ಚೆ ಮಾಡಿರಲಿಲ್ಲ. ಸ್ವಲ್ಪವೂ ಸಂಕೋಚವಿಲ್ಲದೆ ಎಲ್ಲಸ್ಥಳಗಳಿಗೂ ಖಾದಿ ಹಾಕಿಕೊಂಡು ಹೋಗುವಂಥ ಸ್ವತಂತ್ರವೃತ್ತಿ ಹಾಗೂ ಆತ್ಮಗೌರವದ ಭಾವನೆ ನಮ್ಮಲ್ಲಿ ಮೂಡಬೇಕು ಎಂಬುದು ನನ್ನ ಇಚ್ಛೆ.

ಇಂದು ನಮ್ಮ ತಲೆಯ ಮೇಲೆ ಮಹಾ ಸಂಕಟ ಹೆಡೆಯಾಡುತ್ತಿದೆ. ಸಿಂಗಪುರ ಹೋಯಿತು; ರಂಗೂನ್ ಹೋಗುವಂತೆ ಕಾಣುತ್ತದೆ. ಕಲ್ಕ

ತ್ತಿಯೂ ಅಪಾಯಕ್ಕೆ ಗುರಿಯಾಗಿದೆ. ಇಂಥ ಸ್ಥಿತಿಯಲ್ಲ ಬೇರೆ ಯಾವುದಾದರೂ ರಾಷ್ಟ್ರದವರು ಹಿಂದೂಸ್ತಾನವನ್ನು ಪ್ರವೇಶಿಸಿದರೆ, ನಾವು ಮೊದಲಿನಂತೆಯೇ ವ್ಯಾಪಾರದ ಪ್ರಲೋಭನೆಯಿಂದ ಅವರ ಮುಖಸ್ತುತಿ ಮಾಡತೊಡಗಿ, ನಮ್ಮ ಸ್ವಾತಂತ್ರ್ಯವನ್ನು ಅವರಿಗೆ ಮಾರಿಬಿಡುವೆವೆ? ಅಥವಾ ಈಗಿರುವವರ ದಾಸ್ಯದಿಂದ ಬಿಡುಗಡೆಯಾಗಿ ನಿಮ್ಮ ಯಾಜಮಾನ್ಯವನ್ನು ಒಪ್ಪುವುದಿಲ್ಲೆಂದು ಅವರಿಗೂ ಹೇಳುವೆವೋ? ಜಮುನಾಲಾಲರ ಆತ್ಮ ಈ ಪ್ರಶ್ನೆಯನ್ನು ಕೇಳುತ್ತಿದೆ. ಈ ಪ್ರಶ್ನೆಗೆ ಜಮುನಾಲಾಲರ ಜವಾಬು ಏನಿರುತ್ತಿದ್ದಿರಬಹುದೆಂಬುದನ್ನು—ನಾನು ನನ್ನ ಉತ್ತರವನ್ನು ಅರಿತಿರುವಷ್ಟೆ ಒಳಿತಾಗಿ ಅರಿತಿರುವೆನು.

* * *

ಇದುವರೆಗೆ ಈ ದೇಶದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದರಲ್ಲಿ ವ್ಯಾಪಾರಿ ವರ್ಗದವರು ವಿಶಿಷ್ಟಪಾತ್ರ ವಹಿಸಿದಾರೆ. ಈ ಮಾತು ಜಮುನಾಲಾಲರಿಗೆ ಬಹಳೇ ಕೆಟ್ಟದೆನಿಸುತ್ತಿತ್ತು. ಅಂತಲೆ ನಿಮ್ಮೆದುರಿಗೆ ಈ ಮಾತುಗಳನ್ನೆಲ್ಲ ಆಡಬೇಕಾಗಿದೆ :

ಜಮುನಾಲಾಲರ ಇತರ ಕಾರ್ಯಗಳ ಬಗೆಗೆ ಈಗ ಹೆಚ್ಚು ಪ್ರಸ್ತಾಪಿಸಲು ಬಯಸುವುದಿಲ್ಲ. ಅವೆಲ್ಲವೂ ನಿಮ್ಮ ಕಣ್ಣೆದುರಿಗೇ ಇವೆ. ಮಹಿಳಾಶ್ರಮವನ್ನೆ ತೆಗೆದುಕೊಳ್ಳಿ. ಅದು ಅವರದೊಂದು ವಿಶಿಷ್ಟ ಕೃತಿ. ಅವರ ಕಲ್ಪನೆಗೆ ಅನುಗುಣವಾಗಿಯೇ ಅದು ಈವರೆಗೆ ಕೆಲಸ ಮಾಡಿಕೊಂಡು ಬರುತ್ತಿದೆ. ದೇಶಕಾರ್ಯದಲ್ಲಿ ನಿರತನಾಗಿ ಭಿಕಾರಿಗಳಾಗುವವರ ಮಕ್ಕಳು ಮರಿಗಳಿಗೆ ಶಿಕ್ಷಣದ ವ್ಯವಸ್ಥೆ ಹೇಗೆ—ಎಂಬ ಪ್ರಶ್ನೆ ಜಮುನಾಲಾಲರ ಮನಸ್ಸಿನಲ್ಲಿ ಮೂಡಿತು. ಕನಿಷ್ಟಪಕ್ಷ ಅವರ ಹೆಣ್ಣುಮಕ್ಕಳಿಗೆ ಸರಕಾರಿ ಶಾಲೆಗಳಲ್ಲಿ ಸಿಕ್ಕುವುದಕ್ಕಿಂತ ಉತ್ತಮತರ ಶಿಕ್ಷಣವನ್ನು ಕೊಡಲು ಆಗದೆ—ಎಂದು ಅವರಿಗೆ ಅನಿಸಿತು. ಸರಿ—ಆ ವಿಚಾರದಿಂದಲೇ ಮಹಿಳಾಶ್ರಮದ ಸ್ಥಾಪನೆ ಆಯಿತು. ಇಂದು ಈ ಆಶ್ರಮಕ್ಕೆ ತ್ಯಾಗಿಯೂ ಸುಶಿಕ್ಷಿತೆಯೂ ಆದ ಮಹಿಳೆಯೊಬ್ಬಳ ಆವಶ್ಯಕತೆಯಿದೆ. ಈ ಆವಶ್ಯಕತೆಯನ್ನು ಪೂರೈಸಲು ನೀವು ಸಹಾಯ ಮಾಡಬಹುದು. ಮೂಲಶಿಕ್ಷಣ ಹಾಗೂ ಹರಿಜನ ಸೇವಕ ಸಂಘದ ಸ್ಥಿತಿಯೂ ಹೀಗೆಯೇ ಇದೆ. ನೀವು ಈ ಕಾರ್ಯಗಳಲ್ಲಿ ಪಾಲುಗೊ

ಳ್ಳಬಹುದು. ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಅವರ ಹೃದಯದಲ್ಲಿ ಆಸೆ ಯಿತ್ತು. ಅವರಲ್ಲಿ ಕೋಮುವಾರು ದ್ವೇಷದ ವಾಸನೆ ಸಹ ಇರಲಿಲ್ಲ. ಅವರ ಜೀವನದಿಂದ ನೀವು ಈ ಗುಣವನ್ನು ಗ್ರಹಿಸಬಹುದು.

ಜಮುನಾಲಾಲರ ಸ್ಮೃತಿ-ಸ್ತಂಭವನ್ನು ಸ್ಥಾಪಿಸಿ ನಾವು ಅವರ ನೆನಪನ್ನು ಚಿರಸ್ಥಾಯಿಯಾಗಿಸಲಾರೆವು. ಸ್ತಂಭದ ಮೇಲೆ ಕೆತ್ತಿರುವ ಶಿಲಾ-ಲೇಖವನ್ನು ಜನ ಓದಿ, ಸ್ವಲ್ಪ ಸಮಯದಲ್ಲೇ ಮರೆತುಬಿಡುವರು; ಪ್ರಪಂಚದ ಸಲುವಾಗಿ ಇಷ್ಟೆಲ್ಲ ಕಾರ್ಯ ಮಾಡಿರುವ ವ್ಯಕ್ತಿಯ ಕಾರ್ಯವನ್ನು ಚಿರಸ್ಥಾಯಿಯಾಗಿಸುವ ಸಂಕಲ್ಪವನ್ನು ಯಾರಾದರೂ ಮಾಡಿದರೆ, ಅದು ಅವರ ನಿಜವಾದ ಸ್ಮಾರಕವಾದೀತು. ಆದರೆ, ಇದರ ಸಲುವಾಗಿ ನಾನು ಬಲಾತ್ಕಾರ ಮಾಡಲಾರೆ; ನಿಮ್ಮಿಂದಲೂ ಅಂಥದನ್ನು ನಿರೀಕ್ಷಿಸಲೊಲ್ಲೆ. ಯಾರು ಏನು ಮಾಡಬೇಕಾಗಿದ್ದರೂ ಆತ್ಮೋನ್ನತಿಗಾಗಿಯೇ ಮಾಡಬೇಕು, ತೋರಿಕೆಗಾಗಿ ಏನಾದರೂ ನಡೆದರೆ, ಅದರಿಂದ ನಮಗೂ, ಜಮುನಾಲಾಲರ ಆತ್ಮಕ್ಕೂ ತೊಂದರೆಯೇ ಆಗುವುದು.

[ಇದರನಂತರ ಅನೇಕ ಸಲಹೆಗಳು ಗಾಂಧೀಜಿ ಅವರ ಮುಂದೆ ಮಂಡಿಸಲ್ಪಟ್ಟವು. ಆದರೆ, ಅವು ಅವರಿಗೆ ರುಚಿಸಲಿಲ್ಲ. ತಮ್ಮ ಮನಸ್ಥಿತಿಯನ್ನು ಇನ್ನೂ ಸ್ಪಷ್ಟೀಕರಿಸುತ್ತ, ಅವರು ಪ್ರಭಾವಶಾಲಿಯಾದ ಮಾತುಗಳಿಂದ ಇಂತೆಂದರು :—]

ಇಂದು ನಾನು ವಿಚಾರಪೂರ್ವಕವಾಗಿಯೇ ಅನಿಯಮಿತ ರೀತಿಯಲ್ಲಿ ಎಲ್ಲ ಕಾರ್ಯಕಲಾಪವನ್ನು ನಡೆಸಿದೇನೆ. ಕಾರಣ, ಇದರಲ್ಲಿ ಎಳ್ಳಷ್ಟು ಕೃತ್ರಿಮತೆ ಮೂಡಿಬರಬಾರದೆಂಬುದು ನನ್ನ ಇಚ್ಛೆ. ನನ್ನ ಜೀವನದಲ್ಲಿ ಇದೊಂದು ಗಂಭೀರ ಪ್ರಸಂಗವೆಂದು ನನ್ನ ಭಾವನೆ. ಅಂತಿಮಸಮಯದಲ್ಲಿ ಜಮುನಾಲಾಲರಲ್ಲಿ ಇದ್ದ ಧರ್ಮಭಾವನೆಯನ್ನು ನಾನು ಚಿರಸ್ಥಾಯಿಯಾಗಿಸಲು ಬಯಸುತ್ತೇನೆ. ಆದಕಾರಣ, ಯಾರು ಏನು ಮಾಡುವುದಾದರೂ ಇದೇ ಭಾವನೆಯಿಂದ ಮಾಡಿರಿ. ಏಕಾಂತದಲ್ಲಿ ಕುಳಿತು ಅಂತರ್ಮುಖಿಗಳಾಗಿ ಭಗವಂತನನ್ನು ಸಾಕ್ಷಿಯಾಗಿಟ್ಟುಕೊಂಡು ಮಾಡಬೇಕಾದ ಸಂಕಲ್ಪವನ್ನು ಮಾಡಿರಿ.೧೦೭

ನಾನು ಏನು ಸಂದೇಶ ಕಳುಹಿಸಲಿ? ಜಮನಾಲಾಲರನ್ನು ಸ್ತುತಿಸಲೆ? ಹೇಗೆ ಸ್ತುತಿಸಲಿ? ನನ್ನ ಕೈಗಳೇ ಮುರಿದುಹೋಗಿವೆ. ಯಾರ ದ್ವಾರಪಾಲಕ ಹೊರಟುಹೋಗಿದಾನೋ ಆತ ದ್ವಾರಪಾಲಕನ ಬಗೆಗೆ ಏನು ಬರೆಯಬಲ್ಲ ?೧೦೮

ಸರ್ ಸುರೇಂದ್ರನಾಥ ಬ್ಯಾನರ್ಜಿ

ಸರ್ ಸುರೇಂದ್ರನಾಥ ಬ್ಯಾನರ್ಜಿ ಅವರ ನಿಧನದಿಂದಾಗಿ ತನ್ನ ವ್ಯಕ್ತಿತ್ವದಿಂದ ಭಾರತದ ರಾಜನೈತಿಕ ಜೀವನದ ಮೇಲೆ ಆಳವಾದ ಪ್ರಭಾವ ಬೀರಿದ್ದ ವ್ಯಕ್ತಿಯೊಂದು ಕಣ್ಮರೆಯಾದಂತೆ ಆಯಿತು. ಹೊಸ ಆದರ್ಶ ಹಾಗೂ ಹೊಸ ಆಕಾಂಕ್ಷೆ ಇಟ್ಟುಕೊಂಡ ಜನತೆಯ ದೃಷ್ಟಿಯಲ್ಲಿ ಅವರು ಹಿಂದೆ ಸರಿದಂತೆ ಕಂಡರೆ ತಾನೆ ಏನು? ನಮ್ಮ ವರ್ತಮಾನ ನಮ್ಮ ಭೂತ ಕಾಲದ ಪರಿಣಾಮವಷ್ಟೆ. ಸರ್ ಸುರೇಂದ್ರನಾಥರಂಥ ಪಥಪ್ರದರ್ಶಕರ ಅಮೂಲ್ಯ ಕಾರ್ಯಗಳ ಹೊರತು ಈಗಿನ ಕಾಲದ ಆದರ್ಶ ಹಾಗೂ ಉಚ್ಚ ಆಕಾಂಕ್ಷೆ ಉಂಟಾಗುವ ಸಂಭವವೇ ಇರುತ್ತಿರಲಿಲ್ಲ. ವಿದ್ಯಾರ್ಥಿಗಳು ಅವರನ್ನು ಆರಾಧ್ಯದೈವವೆಂದು ಭಾವಿಸಿದ್ದ ಒಂದು ಕಾಲವಿತ್ತು; ಆಗ ರಾಷ್ಟ್ರೀಯ ಕಾರ್ಯಗಳಲ್ಲಿ ಅವರ ಸಲಹೆ ತೆಗೆದುಕೊಳ್ಳುವುದು ಅನಿವಾರ್ಯವೆನಿಸಿತ್ತು; ಅವರ ಭಾಷಣವೆಂದರೆ, ಜನ ಮಂತ್ರ–ಮುಗ್ಧರಾಗಿ ಹೋಗುತ್ತಿದ್ದರು. ವಂಗ-ಭಂಗದ ಸಮಯದ ಆ ಎದೆನಡುಗಿಸುವ ಘಟನೆಗಳ ನೆನಪಾದಾಗ, ಅದರ ಜತೆಗೇ ಸರ್ ಸುರೇಂದ್ರರು ಆ ಸಮಯದಲ್ಲಿ ಸಲಿಸಿದ ಅನುಪಮ ಸೇವೆಯ ಸ್ಮರಣೆಯನ್ನು ಕೃತಜ್ಞತೆ ಹಾಗೂ ಅಭಿಮಾನದಿಂದ ಮಾಡಿಕೊಳ್ಳದಿರಲು ಆಗುವುದಿಲ್ಲ. ಅಂಥ ಸಮಯದಲ್ಲೇ ಸರ್ ಸುರೇಂದ್ರರಿಗೆ ಕೃತಜ್ಞರಾದ ದೇಶಬಾಂಧವರು 'ಎಂದಿಗೂ ಬಾಗದ ವ್ಯಕ್ತಿ'–ಎಂಬ ಬಿರುದನ್ನು ಕೊಟ್ಟಿದ್ದರು. ವಂಗ-ಭಂಗ ಯುದ್ಧದ ಭೀಷಣ ಸ್ಥಿತಿಯಲ್ಲಿ ಸುರೇಂದ್ರರು ಎಂದೂ ಅಳುಕಲಿಲ್ಲ; ಎಂದೂ ನಿರಾಶರಾಗಲಿಲ್ಲ. ತಮ್ಮ ಪೂರ್ಣಶಕ್ತಿಯೊಡನೆ ಆಂದೋಲನದಲ್ಲಿ ಧುಮ್ಮಿಕ್ಕಿದ್ದರು. ಅವರ ಉತ್ಸಾಹ

ದಿಂದ ಇದೇ ಬಂಗಾಳದಲ್ಲಿ ಉತ್ಸಾಹ ಹಬ್ಬಿತು. ಸರಕಾರದ ' ಬಿಗಿ ಮುಷ್ಟಿ ' ಯನ್ನು ಸಡಲಿಸುವ ದೃಢ ಸಂಕಲ್ಪದಲ್ಲಿ ಅವರು ಅಚಲರಾಗಿದ್ದರು. ಅವರು ನಮಗೆ ಧೈರ್ಯ ಹಾಗೂ ದೃಢತೆಯ ಶಿಕ್ಷಣ ಕೊಟ್ಟರು ; ಮದಾಂಧ ಅಧಿಕಾರಿಗಳ ಮುಂದೆ ' ನಕಾರ ' ಎತ್ತುವುದನ್ನು ಕಲಿಸಿದರು.

ರಾಜ್ಯಕೀಯ ಕ್ಷೇತ್ರದಲ್ಲಿ ಹೇಗೋ ಹಾಗೆ ಶಿಕ್ಷಣ-ಕ್ಷೇತ್ರದಲ್ಲೂ ಅವರ ಕೆಲಸ ಉತ್ತಮ ದರ್ಜೆಯದೇ ಆಗಿತ್ತು. ರಿಪನ್ ಕಾಲೇಜಿನಲ್ಲಿ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ಅವರ ಪ್ರತ್ಯಕ್ಷ ನಿರೀಕ್ಷಣೆ ಹಾಗೂ ಸತತ ಪ್ರಭಾವದಿಂದಾಗಿ ಉದಾರ ಶಿಕ್ಷಣ ದೊರೆಯಿತು. ತಮ್ಮ ನಿಯಮಿತ ಜೀವನದ ದೆಸೆಯಿಂದ ಅವರು ಆರೋಗ್ಯಶಾಲಿಗಳಾಗಿಯೂ, ಸಶಕ್ತರಾಗಿಯೂ ಇದ್ದರು ; ಅವರಿಗೆ ದೀರ್ಘ ಜೀವನವೇ – ಭಾರತೀಯರ ಅರ್ಥದಲ್ಲಿ—ದೊರೆಯಿತು. ಕೊನೆಯ ಘಳಿಗೆಯವರೆಗೆ ಅವರ ಮಾನಸಿಕ ಶಕ್ತಿ ಸ್ಥಿರವಾಗಿಯೇ ಇತ್ತು. ೭೫ ನೆಯ ವಯಸ್ಸಿನಲ್ಲಿ ' ಬಂಗಾಳಿ ' ದಿನ ಪತ್ರಿಕೆಯ ಸಂಪಾದಕನ ಕಾರ್ಯದ ಭಾರ ಹೊರುವುದೆಂದರೆ, ಸಾಮಾನ್ಯವಾದ ಮಾತಲ್ಲ. ಮಾನಸಿಕ ಹಾಗೂ ಶಾರೀರಕ ಶಕ್ತಿ ದೃಢವಾಗಿರುವ ಬಗೆಗೆ ಅವರ ಭಾವನೆ ಏನಿದ್ದಿತೆಂಬುದು ನಾನು ಅವರನ್ನು ಎರಡು ತಿಂಗಳ ಹಿಂದೆ ಬಾರಕಪುರದಲ್ಲಿ ಭೆಟ್ಟಿಯಾದಾಗ ತಿಳಿಯಿತು. ಆಗ ಅವರು ನನಗೆ ಹೇಳಿದರು :—“ ನನಗೆ ೯೧ ವರುಷ ಬದುಕುವ ಆಸೆಯಿದೆ. ಆನಂತರ ಬದುಕುವ ಇಚ್ಛೆಯಿಲ್ಲ ; ಕಾರಣ ಆನಂತರ ನನ್ನ ಶಕ್ತಿ ದೃಢವಾಗಿರುವುದಿಲ್ಲ.” ಆದರೆ, ವಿಧಿ ಅವರ ಯೋಜನೆಯನ್ನು ತಲೆಕೆಳಗುಮಾಡಿತು. ಪೂರ್ವಸೂಚನೆ ಕೊಡದೆಯೇ ಅವರನ್ನು ನಮ್ಮಿಂದ ಕಸುಗೊಂಡಿತು. ಯಾರಿಗೂ ಅದರ ಕಲ್ಪನೆಕೂಡ ಇರಲಿಲ್ಲ. ೬ ನೆಯ ತಾರೀಖು ಪ್ರಾತಃ ಕಾಲದವರೆಗೆ ಅವರ ಮರಣದ ಸೂಚನೆಯೇ ಕಂಡು ಬರಲಿಲ್ಲ. ಇಂದು ಅವರ ಶರೀರ ನಮ್ಮೊಡನೆ ಇಲ್ಲವೇನೋ ಸರಿ ; ಆದರೆ, ಅವರ ದೇಶಸೇವೆಯನ್ನು ನಾವು ಎಂದಿಗೂ ಮರೆಯುವಹಾಗಿಲ್ಲ, ವರ್ತಮಾನ ಭಾರತದ ನಿರ್ಮಾಪಕರಲ್ಲಿ ಅವರ ಹೆಸರು ಸದಾ ಅಮರವಾಗಿರುವುದು.೧೯

ಸುಭಾಷ್‌ಚಂದ್ರ ಬೋಸ್

ತಮ್ಮ ಅನುಯಾಯಿಗಳಲ್ಲಿ ಐಕ್ಯ-ಭಾವನೆಯನ್ನು ಮೂಡಿಸುವ ಸ್ಫೂರ್ತಿಶಕ್ತಿ 'ನೇತಾಜಿ' ಅವರಲ್ಲಿದ್ದಿತು. ಅದೇ ಅವರ ಜೀವನದಿಂದ ನಾವು ಕಲಿಯಬಹುದಾದ ಎಲ್ಲಕ್ಕಿಂತ ದೊಡ್ಡ ಪಾಠ. ಅದರಿಂದಾಗಿ ಅವರ ಅನುಯಾಯಿಗಳು ಸಾಂಪ್ರದಾಯಕ ಹಾಗೂ ಪ್ರಾಂತೀಯ ಬಂಧನದಿಂದ ಮುಕ್ತರಾದ ಸಮಾನ ಉದ್ದೇಶಕ್ಕಾಗಿ ರಕ್ತ ಹರಿಸಲು ಶಕ್ಯವಾಗುತ್ತಿತ್ತು. ನೇತಾಜಿ ಅವರ ಅನುಪಮ ಸಫಲತೆಯಿಂದಾಗಿ ಇತಿಹಾಸದ ಪುಟಗಳಲ್ಲಿ ಅವರ ಹೆಸರು ಅಮರವಾಗಿ ಉಳಿಯುವುದು.

ಭಾರತಕ್ಕೆ ಹಿಂತಿರುಗಿದ ಮೇಲೆ ನನ್ನನ್ನು ಭೆಟ್ಟಿಯಾದ ಅದರ ಪ್ರತಿಯೊಬ್ಬ ಅನುಯಾಯಿಯೂ, ನೇತಾಜಿ ಅವರ ಪ್ರಭಾವ ತನ್ನನ್ನು ಮಂತ್ರಮುಗ್ಧವಾಗಿಸುತಿದ್ದಿತೆಂದೂ, ಅವರ ಅಧೀನದಲ್ಲಿ ಭಾರತ ಸ್ವಾತಂತ್ರ್ಯಪ್ರಾಪ್ತಿಯ ಏಕಮಾತ್ರ ಉದ್ದೇಶದಿಂದ ಹೋರಾಡುತ್ತಿದ್ದುದಾಗಿಯೂ ತಿಳಿಸಿದನು. ಅವರ ಹೃದಯದಲ್ಲಿ ಸಾಂಪ್ರದಾಯಿಕ, ಪ್ರಾಂತೀಯ ಅಥವಾ ಇನ್ನಾವುದೇ ಭೇದಭಾವ ಎಂದಿಗೂ ಮೂಡುತ್ತಿರಲಿಲ್ಲ.

ನೇತಾಜಿ ಮಹಾನ್ ಗುಣಶಾಲಿ ವ್ಯಕ್ತಿ. ಸೃಜನಾತ್ಮಕ ಶಕ್ತಿ-ಸಂಪನ್ನರು; ಪ್ರತಿಭಾವಂತರು. ಐ.ಸಿ.ಎಸ್. ಪರೀಕ್ಷೆ ಮಾಡಿದ್ದರೂ, ನೌಕರಿಗೆ ಸೇರಲಿಲ್ಲ. ಭಾರತಕ್ಕೆ ಮರಳಿದ ಮೇಲೆ ಅವರು ದೇಶಬಂಧು ದಾಸರ ಪ್ರಭಾವಕ್ಕೆ ಒಳಗಾದರು, ಹಾಗೂ ಕಲ್ಕತ್ತಾ ಕಾರ್ಪೊರೇಷಿನ್ನಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕವಾದರು. ಮುಂದೆ ಎರಡು ಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆದರೆ, ಅವರ ಉಲ್ಲೇಖನೀಯವಾದ ಸಾಧನೆಯೆಂದರೆ, ಭಾರತದ ಆಚೆ ಅವರು ನಡೆಸಿದ ಕಾರ್ಯ; ಭಾರತದಿಂದ ಧಾವಿಸಿ, ಕಾಬೂಲ್, ಇಟಲಿ, ಜರ್ಮನಿ ಹಾಗೂ, ಇತರ ದೇಶಗಳ ಮೂಲಕ ಕೊನೆಗೆ ಜಪಾನ್ ಮುಟ್ಟಿ ಅಲ್ಲಿ ನಡೆಸಿದ ಕಾರ್ಯ; ವಿದೇಶೀಯರು ಏನೇ ಹೇಳಲಿ, ಅವರು ಆ ರೀತಿ ದೇಶದಿಂದ ಓಡಿಹೋದುದು ಅಪರಾಧವೆಂದು ಹೇಳುವವರು ಇಂದು ಭಾರತದಲ್ಲಿ ಯಾರೊಬ್ಬರೂ ಇಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. "ಸಮರಥ ಕೋ ನಹಿ ದೋಷ

ಗುಸಾಯಿಾ "—ಎಂಬ ಸಂತ ತುಲಸೀದಾಸರ ವಚನದ ಮೇರೆಗೆ ನೇತಾಜಿ ಅವರ ಮೇಲೆ ಪಲಾಯನ ಮಾಡಿದ ದೋಷವನ್ನು ಹೊರಿಸಲಿಕ್ಕೆ—ಬರುವುದಿಲ್ಲ. ಮೊಟ್ಟಮೊದಲು ಅವರು ಸೇನೆಯನ್ನು ಕಟ್ಟಿದಾಗ, ಅತ್ಯಲ್ಪ ಮಂದಿ ಇದ್ದುದರ ಬಗೆಗೆ ಅವರು ಚಿಂತೆ ಮಾಡಲಿಲ್ಲ. ಸಂಖ್ಯೆ ಎಷ್ಟೇ ಕಡಿಮೆಯಿರಲಿ, ಭಾರತವನ್ನು ಸ್ವತಂತ್ರಗೊಳಿಸಲು ಶಕ್ತಿಯಿದ್ದಷ್ಟು ಶ್ರಮಿಸಬೇಕು ಎಂಬುದು ಅವರ ಸಂಕಲ್ಪವಾಗಿತ್ತು.

ಎಲ್ಲ ಬಗೆಯ ಜಾತಿ ಭೇದ—ವರ್ಗಭೇದದ ನಿರ್ಮೂಲನವೇ ಅವರ ಎಲ್ಲಕ್ಕಿಂತ ದೊಡ್ಡದಾದ, ಸ್ಥಿರವಾದ ಕಾರ್ಯ. ಅವರು ಕೇವಲ ಬಂಗಾಳಿಗಳಾಗಿರಲಿಲ್ಲ. ತಾವು ಸವರ್ಣ ಹಿಂದೂ ಎಂದು ಯಾವಾಗಲೂ ಹೇಳಿಕೊಂಡಿರಲಿಲ್ಲ. ಅವರು ನಖಶಿಖಾಂತ ಭಾರತೀಯರು: ಹೆಚ್ಚುಮಾತೇಕೆ, ತಮ್ಮ ಅನುಯಾಯಿಗಳಲ್ಲೂ ಅವರು ಅದೇ ಅಗ್ನಿಯನ್ನು ಪ್ರಜ್ವಲಗೊಳಿಸಿದರು; ಅನುಯಾಯಿಗಳು ಅದರಿಂದ ಪ್ರೇರಿತರಾಗಿ, ಅವರ ನೇತೃತ್ವದಲ್ಲಿ ಏಕಸೂತ್ರರಾಗಿ ಕೆಲಸಮಾಡಿದರು.೧೧೦

ಇನ್ನೂ ಒಂದು ಮಾತು. ಸುಭಾಷ್ ಬಾಬುಗಳು ಕಟ್ಟಿದ ಅಜಾದ್ ಹಿಂದ್ ಸೇನೆಯ ಮಾತು. ಅದರ ದೆಸೆಯಿಂದಲೇ ನಾವೆಲ್ಲರೂ ಸುಭಾಷ ಬಾಬುಗಳ ಬುದ್ಧಿವಂತಿಕೆ, ಪರಾಕ್ರಮವನ್ನು ಪ್ರಶಂಸಿಸುವುದು, ಅದು ಪ್ರಶಂಸಾರ್ಹವಾದುದು ಹೌದು, ಹಿಂದೂಸ್ತಾನ ಬಿಟ್ಟು ಹೋದಮೇಲೆ, ಸೈನ್ಯದ ಕೆಲಸವನ್ನೂ ಮಾಡೋಣವೆಂದು ಅವರಿಗೆ ಅನಿಸಿತು. ಆದರೇನು ಯೋಧರಾಗಿರಲಿಲ್ಲ. ಸಾಮಾನ್ಯ ಭಾರತೀಯರಾಗಿದ್ದರು. ಬೇರೆ ವಕೀಲರು ಬ್ಯಾರಿಸ್ಟರರು ಇರುವಂತೆಯೇ ಅವರೂ ಇದ್ದರು. ಅವರಿಗೆ ಸೈನ್ಯಶಿಕ್ಷಣವೇನೂ ಇರಲಿಲ್ಲ. ಸಿವಿಲ್‌ಸರ್ವಿಸ್ಸಿನವರು ಸಾಮಾನ್ಯವಾಗಿ ಕಲಿತಿರುವ ಕುದುರೆ ಸವಾರಿಯನ್ನು ಅವರೂ ಕಲಿತಿರಲಿಕ್ಕೆ ಸಾಕು. ಹಿಂದಿನಿಂದ ಸೈನ್ಯಶಾಸ್ತ್ರವನ್ನು ಸ್ವಲ್ಪ ಅಭ್ಯಾಸಮಾಡಿರಬಹುದು. ಹೀಗೆ ಅವರ ಅಧೀನದಲ್ಲಿ ರಚಿತವಾದ ಸೇನೆಯ ಇಬ್ಬರು ದೊಡ್ಡ ಅಧಿಕಾರಿಗಳು—ಅವರನ್ನು ನಾನು ಜೈಲಿನಲ್ಲೂ ಹೊರಗೂ ಭೆಟ್ಟಿಯಾಗಿದ್ದೆ.—ಕಾಶ್ಮೀರದ ಮೇಲೆ ಆಕ್ರಮಣ ಮಾಡುವವರೊಡನೆ ಕೂಡಿಕೊಂಡಿದಾರೆಂದು ಕೇಳಿ ನನಗೆ ಬಹಳ ದುಃಖವಾಗು

ತ್ತದೆ. ಇವರು ಸುಭಾಷ್‌ಬಾಬುಗಳ ಅಧೀನದಲ್ಲಿ ಕೆಲಸಮಾಡುವವರಿದ್ದು, ಸದಾ ಅವರ ಜತೆಯಲ್ಲೇ ಇರುತ್ತಿದ್ದರು. ಸುಭಾಷ್ ಬಾಬುಗಳು ದಂಡಿನವರಿಂದ ಯಾವ ವಿಷಯವನ್ನೂ ಮುಚ್ಚಿಡುವುದು ಆಗುತ್ತಿರಲಿಲ್ಲ; ಕಾರಣ ಅವರ ಮುಖಾಂತರವೇ ಕೆಲಸ ಮಾಡಿಸಿಕೊಳ್ಳಬೇಕಾಗಿತ್ತು. ಅಂಥವರು ಇಂದು ಲೂಟಿಗಾರರ ಸರದಾರರಾಗಿ ಹೋಗುವುದೆಂದರೆ, ನನಗೆ ಕಷ್ಟವೆನಿಸುತ್ತದೆ. ಅವರಿಗೆ ಪತ್ರಿಕೆಗಳು ಸಿಕ್ಕುವಂತಿದ್ದರೆ, ಅಥವಾ ನೀನು ಹೇಳುವುದನ್ನು ಅವರು ಕೇಳುವಂತಿದ್ದರೆ, ನನ್ನ ನಿರ್ಬಲ ವಾಣಿಯನ್ನು ಅವರಿಗೆ ಮುಟ್ಟಿಸ ಬಯಸುವೆ: ಇಂಥ ಕೆಲಸದಲ್ಲಿ ತೊಡಗಿ ಸುಭಾಷ್ ಬಾಬುಗಳ ಹೆಸರಿಗೆ ಕಳಂಕ ತರುವಿರೇಕೆ? ಹಿಂದೂ ಅಥವಾ ಮುಸಲ್ಮಾನರ ಪಕ್ಷ ವಹಿಸುವಿರೇಕೆ? ನೀವು ಜಾತಿ ಭೇದವನ್ನೆ ಮಾಡಬಾರದಲ್ಲವೆ? ಸುಭಾಷ್ ಬಾಬುಗಳು ಹೀಗೆ ಮಾಡುತ್ತಿದ್ದರೆ? ಅವರೊಡನೆ ಹಿಂದೂಗಳು, ಮುಸಲ್ಮಾನರು, ಸಿಕ್ಕರು ಕ್ರೈಸ್ತರು, ಪಾರಸಿಗಳು, ಹರಿಜನರು—ಎಲ್ಲರೂ ಇರುತ್ತಿದ್ದರು. ಅಲ್ಲಿ ಹರಿಜನರು ಇತರರು ಎಂಬ ಭೇದವೂ ಇರಲಿಲ್ಲ. ಹಿಂದೂಸ್ತಾನದವರಲ್ಲಿ ಜಾತಿ ಪಂಥದ ಭೇದ ಭಾವನೆಯೇ ಇರಲಿಲ್ಲ. ಆದರೂ ಯಾರೂ ತಮ್ಮ ತಮ್ಮ ಧರ್ಮವನ್ನು ಬಿಟ್ಟು ಕುಳಿತಿರಲಿಲ್ಲ; ಅವರವರ ಧರ್ಮವನ್ನು ಅನುಸರಿಸುತ್ತಲೇ ಇದ್ದರು. ಸುಭಾಷ್ ಬಾಬುಗಳು ಅವರನ್ನು ವಶಪಡಿಸಿಕೊಂಡಿದ್ದರು, ಅವರ ಮನಸ್ಸನ್ನು ಹರಣಮಾಡಿದ್ದರು, ಆದರೆ, ಶರೀರವನ್ನು ಹರಣ ಮಾಡಿರಲಿಲ್ಲ. ಆಜಾದ್ ಹಿಂದ್ ಸೇನೆಗೆ ಸೇರದಿದ್ದರೆ, ಕತ್ತರಿಸಿಹಾಕಿಬಿಡುತ್ತೇವೆ—ಎಂಬ ಮಾತು ನಡೆಯುತ್ತಿರಲಿಲ್ಲ. ಹಾಗೆ ಅವರು ಮಂದಿಯನ್ನು ಕೊಂದು, ಹಿಂದೂಸ್ತಾನವನ್ನು ಸ್ವತಂತ್ರಗೊಳಿಸುವವರಾಗಿದ್ದಿಲ್ಲ. ಆ ರೀತಿ ಅವರು ದೊಡ್ಡವರಾದರು; ದೊಡ್ಡಸ್ತಿಕೆ ಗಳಿಸಿದರು. ಅಂಥದರಲ್ಲಿ ನೀವು ಇಷ್ಟು ಸಣ್ಣವರಾಗುವುದೇಕೆ? ಇಷ್ಟು ಸಣ್ಣ ಕೆಲಸದಲ್ಲಿ ತೊಡಗುವುದೇಕೆ? ಏನಾದರೂ ಮಾಡುವುದಿದ್ದರೆ, ಇಡೀ ಹಿಂದೂಸ್ತಾನದ ಸಲುವಾಗಿ ಮಾಡಿ. ಅಲ್ಲಿರುವ ಮುಸಲ್ಮಾನರಿಗೆ, ಆಫ್ರಿದಿಗಳಿಗೆ ಹೀಗೆ ಹೇಳಿ—ಈ ಅತ್ಯಾಚಾರವೇಕೆ? ಜನರನ್ನು ಲೂಟಿಮಾಡುವುದು, ಹಳ್ಳಿಗಳಿಗೆ ಬೆಂಕಿ ಹಚ್ಚುವುದು ಏಕೆ? ಮಹಾರಾಜರನ್ನು ಭೇಟಿ ಮಾಡೋಣ; ಷೇಕ್ ಅಬ್ದುಲ್ಲಾ ಅವರನ್ನು ಭೇಟಿ ಮಾಡೋಣ. ನಾವು

ನಿಮ್ಮನ್ನು ಭೆಟ್ಟಿಯಾಗಲು ಇಚ್ಛಿಸುತ್ತೇವೆ—ನಾವು ಲೂಟಿಮಾಡಲು ಬಂದಿಲ್ಲ. ನೀವು ಇಸ್ಲಾಮನ್ನು ದಮನ ಮಾಡುತ್ತೀರಿ—ಅದರಿಂದ ನಿಮಗೆ ತಿಳಿಸಲು ಬಂದಿದ್ದೇನೆ—ಎಂಬುದಾಗಿ ಅವರಿಗೆ ಪತ್ರ ಬರೆಯೋಣ. ಹಾಗೆ ಮಾಡಿದರೆ ನಾನು ಅರ್ಥಮಾಡಿಕೊಳ್ಳಬಲ್ಲೆ, ಆಗ ನೀವು ಸುಭಾಷ್ ಬಾಬುಗಳ ಹೆಸರನ್ನು ಉಜ್ವಲಗೊಳಿಸಿದಂತಾಗುವುದು. ಆಫ್ರಿದಿ ಜನರಿಗೆ ಒಳ್ಳೆ ಶಿಕ್ಷಣ ಕೊಟ್ಟಂತೆ ಆಗುವುದು. ಆಫ್ರಿದಿ ಜನ ಹೇಗೆ ಬಾಳುವೆ ನಡೆಸುತ್ತಾರೋ ನನಗೆ ತಿಳಿಯದು. ಅವರಲ್ಲೂ ಲೂಟಿಗಾರರು ಇದಾರೋ ಹೇಗೋ ನಾನು ಅರಿಯೆ. ಅಂತೂ ನನ್ನ ದೃಷ್ಟಿಯಲ್ಲಿ ಅವರೂ ಮನುಷ್ಯರು. ಅವರ ಹೃದಯದಲ್ಲೂ ಅದೇ ಈಶ್ವರ, ಖುದಾ ಇದಾನೆ. ಆದ ಕಾರಣ, ಅವರೂ ನನ್ನ ಸಹೋದರರೇ. ಅವರೊಡನೆ ನಾನು ಇರುವೆನಾದರೆ ಅವರಿಗೂ ಇದೇ ಮಾತು ಹೇಳುವೆನು—ಈ ಲೂಟಿ ಮಾಡುವುದೇನು? ಒಬ್ಬರ ಮೇಲೊಬ್ಬರು ಕೋಪಮಾಡುವುದೇನು? ನಿಮ್ಮ ಬಳಿ ಇರುವ ಕತ್ತಿ, ಬಂದೂಕ ಬಿಟ್ಟುಬಿಡಿರೆಂದು ನಾನು ಹೇಳುವುದಿಲ್ಲ; ಅವನ್ನು ಇಟ್ಟುಕೊಳ್ಳಿ. ಭೀತರಾಗಿರುವವರನ್ನು, ಬಡವರನ್ನು, ಸ್ತ್ರೀಯರನ್ನು. ಮಕ್ಕಳನ್ನು ರಕ್ಷಿಸಲು ಅವನ್ನು ಉಪಯೋಗಿಸಿ. ಅವರು ಹಿಂದೂಗಳಾದರೇನು, ಮುಸಲ್ಮಾನರಾದರೇನು ?....” ಈ ಇಬ್ಬರು ಅಧಿಕಾರಿಗಳು—ಅವರ ಹೆಸರುಗಳನ್ನು ನಾನು ಬಲ್ಲೆ—ಸುಭಾಷ್ ಬಾಬುಗಳ ಹೆಸರನ್ನು ನೆನೆಸಿಕೊಳ್ಳಲಿ. ಅವರು ಅಳಿದರು, ಆದರೆ ಅವರ ಹೆಸರು ಅಳಿಯಲಿಲ್ಲ; ಅವರ ಕೆಲಸ ಅಳಿಯಲಿಲ್ಲ.೧೧೧

ಇಂದು ಸುಭಾಷ್ ಬಾಬುಗಳ ಹುಟ್ಟುಹಬ್ಬ. ನಾನು ಯಾರ ಜನ್ಮ ದಿನವನ್ನಾಗಲಿ, ಮೃತ್ಯು—ದಿನವನ್ನಾಗಲಿ ನೆನಪಿನಲ್ಲಿಟ್ಟುಕೊಳ್ಳುವವನಲ್ಲವೆಂದು ಮೊದಲೇ ಹೇಳಿದೇನೆ. ನನಗೆ ಆ ಅಭ್ಯಾಸವೇ ಇಲ್ಲ. ಸುಭಾಷರ ಜನ್ಮದಿನವೆಂದು ನನಗೆ ನೆನಪು ಮಾಡಿದರು. ಒಪ್ಪಿಕೊಂಡೆ. ಅದಕ್ಕೆ ವಿಶೇಷ ಕಾರಣವಿದೆ. ಅವರು ಹಿಂಸೆಯ ಉಪಾಸಕರು; ನಾನು ಅಹಿಂಸೆಯ ಉಪಾಸಕ. ಆದರೇನು? ಗುಣಕ್ಕೆ ಬೆಲೆಕೊಡುವವ ನಾನು. ತುಲಸೀದಾಸರು ಹೇಳಿಲ್ಲವೆ?

"ಜಡಚೇತನ ಗುಣದೋಷಮಯ ವಿಶ್ವತೋನ್ಹ ಕರತಾರ್ ।
ಸಂತಹಂಸಗುಣ ಗಹಹಿ ಪಯ ಪರಿಹರಿ ಬಾರಿವಿಕಾರ್ ॥

ಹಂಸ ನೀರನ್ನು ಬಿಟ್ಟು, ಹಾಲನ್ನು ಸ್ವೀಕರಿಸುವಂತೆಯೇ ನಾವೂ ಮಾಡಬೇಕು. ಮನುಷ್ಯ ಮಾತ್ರರಲ್ಲಿ ಗುಣ ದೋಷಗಳೆರಡೂ ತುಂಬಿರುತ್ತವೆ. ನೀವು ಗುಣಗಳನ್ನು ಗ್ರಹಿಸಬೇಕು. ದೋಷಗಳನ್ನು ಮರೆತು ಬಿಡಬೇಕು. ಸುಭಾಷ್ ಬಾಬುಗಳು ದೊಡ್ಡ ದೇಶ-ಪ್ರೇಮಿಗಳು ಅವರು ದೇಶಕ್ಕಾಗಿ ತಮ್ಮ ಪ್ರಾಣವನ್ನು ಪಣ ವೊಡ್ಡಿದ್ದರು. ಅದನ್ನು ಕೃತಿಗೂ ಇಳಿಸಿದರು. ಅವರು ಸೇನಾಪತಿಗಳು. ಅವರ ಸೇನೆಯಲ್ಲಿ ಹಿಂದೂಗಳು, ಮುಸಲ್ಮಾನರು, ಪಾರಸಿಗಳು, ಸಿಕ್ಕರು ಎಲ್ಲರೂ ಇದ್ದರು. ಅವರೆಲ್ಲರೂ ಬಂಗಾಳಿಗಳೇ ಆಗಿರಲಿಲ್ಲ. ಅವರಲ್ಲಿ ಪ್ರಾಂತೀಯತೆಯಾಗಲಿ, ವರ್ಣಭೇದವಾಗಲಿ, ಜಾತಿ–ಭೇದವಾಗಲಿ ಇರಲಿಲ್ಲ. ಸೇನಾಪತಿಗಳಾದುದರಿಂದ ತಾವು ಹೆಚ್ಚಿನ ಸೌಕರ್ಯ ತೆಗೆದುಕೊಳ್ಳಬೇಕೆಂದಾಗಲಿ, ತಮಗೆ ಹೆಚ್ಚಿನ ಸೌಕರ್ಯ ಕೊಡಬೇಕೆಂದಾಗಲಿ ಅವರು ಬಯಸಿರಲಿಲ್ಲ.೧೧೨

ಬಾಬೂ ಭಗವಾನ್‌ದಾಸ್*

ಕಾಶೀ ವಿದ್ಯಾಪೀಠದ ಅಧ್ಯಾಪಕರಾದ ಶ್ರೀ ಕೃಪಲಾನಿ ಹಾಗೂ ಅವರ ವಿದ್ಯಾರ್ಥಿಗಳು ಬಂಧಿತರಾದಾಗ ನಾನು ನನ್ನ ಮಿತ್ರರಿಗೆ ಹೀಗೆ ಹೇಳಿದೆ—"ಬಾಬೂ ಭಗವಾನ್‌ದಾಸರೂ ಬಂಧಿತರಾದರೆ ಎಷ್ಟು ಚೆನ್ನ? ಅಧ್ಯಾಪಕ ಶ್ರೀ ಕೃಪಲಾನಿ ಅವರಂತೂ ಕಾಶಿಯಲ್ಲಿಯೇ ವಾಸಮಾಡುವವರು, ಆದರೆ, ಬಾಬು ಭಗವಾನ್‌ದಾಸರನ್ನು ಬಂಧಿಸುವುದಿಲ್ಲ." ಅಧ್ಯಾಪಕ ಕೃಪಲಾನಿ ಅವರು ಮಾರಾಟ ಮಾಡುತ್ತಿದ್ದ ಪುಸ್ತಕವನ್ನು ಬರೆದವರು ಬಾಬೂ ಭಗವಾನ್‌ದಾಸರೇ ಎಂಬುದು ಆಗ ನನಗೆ ತಿಳಿದಿರಲಿಲ್ಲ. ಗ್ರಂಥಕರ್ತರು ಪುಸ್ತಕವನ್ನು ಬಹಳ ವಿವೇಚನೆಯಿಂದ ಬರೆದಿದ್ದರು. ಮರುದಿನವೇ

* ದಿವಂಗತ 'ಭಾರತರತ್ನ' ಭಗವಾನ್‌ದಾಸರು.

ಬಾಬೂಜಿ ಬಂಧಿತರಾದ ಶುಭಸಮಾಚಾರ ಅವರ ಪುತ್ರರಿಂದ ನನಗೆ ತಿಳಿಯಿತು. ಬಂಧನವಾದುದರಿಂದ ಅವರ ಮನಸ್ಸಿಗೆ ತೃಪ್ತಿಯಾಯಿತು. ಬಾಬೂ ಭಗವಾನ್‌ದಾಸರು ಮನಸಾ, ವಾಚಾ, ಕಾಯಾ ಸದಾ ಹಿಂಸೆಯಿಂದ ದೂರವಿರುವಂಥ ಅಸಹಯೋಗಿಗಳು. ಅವರು ಸಂಸ್ಕೃತ ಸಾಹಿತ್ಯದಲ್ಲಿ ಒಳ್ಳೆಯ ಪಂಡಿತರು. ಬಹಳ ಧರ್ಮನಿಷ್ಠರು. ಜಮೀನ್ದಾರರು. ಶ್ರೀಮತಿ ಬೆಸೆಂಟ್ ಸೆಂಟ್ರಲ್ ಹಿಂದೂ ಕಾಲೇಜಿನ ಜನ್ಮದಾತೆಯಾದರೆ, ಬಾಬೂ ಭಗವಾನ್‌ದಾಸರು ಅದರ ನಿರ್ಮಾಪಕರು. ಆದಕಾರಣ ಅವರ ಬಂಧನ ಭಗವಂತನಿಗೂ ರುಚಿಸುವಂಥ ಬಲಿದಾನವೇ ಸರಿ. '**ಪತಿತಪಾವನ**' ಪತಿತರನ್ನು ಪಾವನಗೊಳಿಸುವಂಥ ವಿಶ್ವನಾಥಪುರ ಅದಕ್ಕಿಂತ ಹೆಚ್ಚಿನ ಬಲಿದಾನ ಇನ್ನೇನು ಮಾಡೀತು? ಬಾಬೂ ಭಗವಾನ್‌ದಾಸರು ಕಾಂಗ್ರೆಸ್ ಮೂಲಕ ಸ್ವರಾಜ್ಯ ಯೋಜನೆ ತಯಾರಿಸುವ ಪ್ರಯತ್ನ ಮಾಡುತ್ತಿದ್ದರೆಂಬುದು ಪತ್ರಿಕೆಗಳನ್ನು ಓದುವವರು ಬಲ್ಲರು. ಅದರ ಸಲುವಾಗಿ ಅವರು ದೀರ್ಘ ಪರಿಶ್ರಮ ಮಾಡುತ್ತಿದ್ದರು. ಅವರು ಸಂಜ್ಞಾರ್ಥಕ ಪ್ರಶ್ನೆಗಳ ಒಂದು ದೊಡ್ಡ ಪಟ್ಟಿಯನ್ನೇ ನನಗೆ ಕಳುಹಿಸಿದಾರೆ. ಆದರೆ ಈಗಿನ ಘಟನೆಗಳ ದೆಸೆಯಿಂದ ಆ ಬಗೆಗೆ ನಾನು ಯಾವ ಕ್ರಮ ತೆಗೆದುಕೊಳ್ಳುವುದಕ್ಕೂ ಸಾಧ್ಯವಾಗಿಲ್ಲ. ದಂಗೆ ಗಲಭೆ ಆಗದಂತೆ ನೋಡಿಕೊಳ್ಳುವ ಬಗೆಗೆ ಅವರಿಗೆ ಬಹಳ ಚಿಂತೆಯಿತ್ತು. ಅವರ ಬಂಧನದಿಂದಲೂ ಹಿಂಸಾಕಾಂಡವನ್ನು ಆಹ್ವಾನಿಸಲು ಸರಕಾರಕ್ಕಿರುವ ಉತ್ಸುಕತೆಯ ಪರಿಚಯ ಆಗದಿದ್ದರೆ, ಇನ್ನಾವುದರಿಂದ ಆದೀತೋ ನಾನು ಹೇಳಲಾರೆ.೧೧೩

ಭನ್ಸಾಲಿ

ಬೆಳಿಗ್ಗೆ ಅಡ್ಡಾಡುವ ಸಮಯದಲ್ಲಿ ಭನ್ಸಾಲಿ ಅವರ ವಿಷಯದಲ್ಲಿ ಮಾತು ನಡೆದಿತ್ತು. ಅವರ ಸಾಧುತ್ವದ ಬಗೆಗೆ ನನಗೆ ಬಹಳ ಗೌರವ. ಬಾಪು ಅವರನ್ನು ಬಿಟ್ಟರೆ, ನನ್ನ ದೃಷ್ಟಿಯಲ್ಲಿ ಭನ್ಸಾಲಿಯವರೇ ಸಾಧುಗಳು. ಬಾಪೂ ಹೇಳಿದರು:

ಅವರು ನನಗಿಂತ ಉಚ್ಚರು ಎಂಬುದಾಗಿ ನನ್ನ ಭಾವನೆ. ತ್ರಿಕಾಲ ದಲ್ಲೂ ಅವರು ನಿರ್ಭೀತರಾಗಿರುತ್ತಾರೆ. ಅದು ಸಾಧು ಲಕ್ಷಣ. ಅವರು ಮಾಡುವುದನ್ನು ನಾನು ಮಾಡಲಾರೆ.

ನಾನು ಕೇಳಿದೆ—"ಭನ್ಸಾಲಿ ಅವರಿಗೆ ಏನು ಅನಿಸುತ್ತಿರಬಹುದು?" ಬಾಪೂ ಹೇಳಿದರು. —"ಏನೂ ಇಲ್ಲ. ಅವರು ಮಹಾಭಾರತವನ್ನು ಕೂಡ ಅರೆದು ನುಂಗಿಬಿಟ್ಟಿದಾರೆ. ಮಹಾರಾಷ್ಟ್ರದಲ್ಲಿ ಧರ್ಮಗ್ರಂಥಗಳಿಂದ ಅದ್ಭುತ ಪರಿಣಾಮ ಹೊರಡಿಸುವ ವಿಲಕ್ಷಣ ದಕ್ಷತೆಯಿದೆ.೧೧೪

ಭನ್ಸಾಲಿ ಅವರ ಮರಣದ ಸುದ್ದಿ ಬಂದರೆ, ನನ್ನ ಹೃದಯ ಗಡಗಡ ನಡುಗುವುದರ ಜೊತೆಗೆ ಸಂತೋಷದಿಂದ ನೃತ್ಯವನ್ನೂ ಮಾಡುವುದು. ಇಂಥ ಸಂಪೂರ್ಣ ಅಹಿಂಸಕ ಮರಣ ಇದುವರೆಗೆ ಆಗಿಲ್ಲ. ಅವರ ಹೃದಯ ದಲ್ಲಿ ವೈರಭಾವ ಲೇಶಮಾತ್ರವೂ ಇಲ್ಲ. ನಮ್ಮ ಜನರಲ್ಲಿ ಎಷ್ಟು ಕೊಳೆ ತುಂಬದೆಯೆಂದರೆ, ಅದನ್ನು ಹೊರತೆಗೆಯಲು ಅನೇಕರು ಪ್ರಾಣತ್ಯಾಗ ಮಾಡಲೇಬೇಕಾಗುವುದು.೧೧೫

ಕಿಶೋರ್‌ಲಾಲ್ ಮಶ್ರೂವಾಲಾ

ಇವರು ಹಳೆಯ ಕಾರ್ಯಕರ್ತರು. ಮೊನ್ನೆ ಮೊನ್ನೆಯ ವರೆಗೆ ಗುಜ ರಾತ್ ವಿದ್ಯಾಪೀಠದ ರೆಜಿಸ್ಟ್ರಾರ್‌ರಾಗಿದ್ದರು. ಆದರೆ ಕಾಯಿಲೆಯ ದೆಸೆ ಯಿಂದ ಆ ಸ್ಥಾನವನ್ನು ಬಿಟ್ಟುಕೊಡಬೇಕಾಯಿತು. ಭಾರತದಲ್ಲಿ ಮೂಕ ಸೇವೆ ಮಾಡುವ ಕಾರ್ಯಕರ್ತರಲ್ಲಿ ಇವರು ಅತ್ಯಂತ ವಿಚಾರ ಶೀಲ ವ್ಯಕ್ತಿ. ಇವರು ಒಂದೊಂದು ಮಾತನ್ನೂ ತೂಕಮಾಡಿ ಬರೆಯುತ್ತಾರೆ; ಆಡು ತ್ತಾರೆ.೧೧೬

ಕಿಶೋರಲಾಲ ಮಶ್ರೂವಾಲರು ನಮ್ಮ ಅಪೂರ್ವ ಕಾರ್ಯಕರ್ತರಲ್ಲಿ ಒಬ್ಬರು. ಎಷ್ಟು ಕೆಲಸಮಾಡಿದರೂ ಅವರಿಗೆ ದಣಿವೇ ಆಗದು. ಅವರು

ಅತ್ಯಂತ ಜಾಗರೂಕರಾಗಿರುವಂಥವರು. ಅವರ ಜಾಗ್ರತ ದೃಷ್ಟಿಯಿಂದ ವಿವರಣೆಯ ಯಾವ ಮಾತೂ ಕಳಚಿಕೊಳ್ಳುವ ಹಾಗೆಯೇ ಇಲ್ಲ. ಅವರು ತತ್ವವೇತ್ತರು ಹಾಗೂ ಗುಜರಾತಿಯಲ್ಲಿ ಜನ-ಪ್ರಿಯ ಲೇಖಕರು. ಗುಜರಾತಿಯಲ್ಲಿ ಹೇಗೋ ಮರಾಠಿಯಲ್ಲಿಯೂ ಹಾಗೆಯೇ ವಿದ್ವಾಂಸರು. ಜಾತಿ, ಸಂಪ್ರದಾಯ ಅಥವಾ ಪ್ರಾಂತೀಯತೆಯ ಅಹಂಕಾರ ಅಥವಾ ದುರಾಗ್ರಹದಿಂದ ಮುಕ್ತರು. ಸ್ವತಂತ್ರ ಚಿಂತನ ಶೀಲರು. ರಾಜನೀತಿಜ್ಞರಲ್ಲ; ಹುಟ್ಟು ಸಮಾಜ ಸುಧಾರಕರು. ಎಲ್ಲ ಧರ್ಮಗಳನ್ನು ಅಧ್ಯಯನ ಮಾಡಿದಾರೆ. ಧಾರ್ಮಿಕ ಅಂಧ ವಿಶ್ವಾಸದ ಚಿಹ್ನೆ ಕೂಡ ಇಲ್ಲ. ಜವಾಬದಾರಿ ಹೊರುವುದು, ಪ್ರಚಾರ ತಂತ್ರ–ಎಂದರೆ ಅವರು ದೂರ ಸರಿಯುತ್ತಾರೆ. ಆದರೂ, ಯಾವುದಾದರೊಂದು ಜವಾಬದಾರಿಯನ್ನು ವಹಿಸಿಕೊಂಡ ಮೇಲೆ, ಅದನ್ನು ಅವರಷ್ಟು ಪರಿಪೂರ್ಣ ರೀತಿಯಿಂದ ನಿರ್ವಹಿಸುವ ಬೇರೊಬ್ಬ ವ್ಯಕ್ತಿಯನ್ನು ಕಾಣುವುದು ಕಷ್ಟ. ಗಾಂಧೀ ಸೇವಾಸಂಘದ ಅಧ್ಯಕ್ಷರಾಗಲು ಅವರನ್ನು ಒಪ್ಪಿಸಬೇಕಾದರೆ ನನಗೆ ಸಾಕು ಸಾಕಾಗಿ ಹೋಯಿತು. ಅವರ ಪರಿಶ್ರಮ ಶೀಲತೆ ಹಾಗೂ ಸರಳ ಶ್ರದ್ಧೆಯ ಕಾರಣದಿಂದಲೇ ಸಂಘಕ್ಕೆ ಇಷ್ಟೊಂದು ಮಹತ್ವ ದೊರೆತಿದೆ; ಅದು ಉಪಯುಕ್ತವೆನಿಸಿದೆ. ಅವರು ತಮ್ಮ ಆರೋಗ್ಯದ ಬಗೆಗೆ ಪೂರ್ಣ ಅಲಕ್ಷ್ಯದಿಂದಿದ್ದು (ಇದು ಸಾರ್ವಜನಿಕ ಕಾರ್ಯಕರ್ತರಲ್ಲಿ, ಗುಣವಲ್ಲ, ಅವಗುಣ ಎಂದೇ ನನ್ನ ಭಾವನೆ) ಸತ್ಯಶೋಧನೆಯಲ್ಲಿ ತೊಡಗಿದ್ದರು. ಇದಲ್ಲದರ ಪರಿಣಾಮವಾಗಿ ಅವರು ಸಂಘದ ಅಭಿನ್ನ ಅಂಗವೇ ಆಗಿಹೋಗಿದಾರೆಂಬುದರಲ್ಲಿ ಅಚ್ಚರಿಯೇನು? ಅವರು ಅಪಾರ ಎಚ್ಚರಿಕೆಯಿಂದ ಸಂಘಕ್ಕೊಂದು 'ಅಂಗ ರಚನೆ' ಯನ್ನು ತಯಾರಿಸಿದರು; ಅದು ಇಂಥ ಯಾವುದೇ ಸಂಸ್ಥೆಗೆ ನಮೂನೆ (ಮಾದರಿ) ಆಗಬಲ್ಲದು.೧೧೭

ಶ್ರೀ ಕಿಶೋರಲಾಲರು ಒಂದು ಸ್ವತಂತ್ರ ಗ್ರಂಥವನ್ನು ಬರೆದಿದಾರೆ. ಅವರ ಅರೋಗ್ಯ ಅವಕಾಶ ಕೊಟ್ಟರೆ, ಇನ್ನು ಇಂಥ ಗ್ರಂಥಗಳನ್ನು ಅವರು ಬರೆಯಬಲ್ಲರು. ಅವರ ಗ್ರಂಥವನ್ನು ಶಾಸ್ತ್ರವೆಂದು ಕರೆಯವುದು ಸರಿಯಾಗಲಿಕ್ಕಿಲ್ಲ; ಆದರೆ, ಅದನ್ನು ಶಾಸ್ತ್ರದ ಸನಿಯದ ವಸ್ತು ಎನ್ನಲಿಕ್ಕೆ



ಆಕ್ಸ್‌ಫರ್ಡ್‌ನಲ್ಲಿ—ಸಿ. ಎಫ್. ಆಂಡ್ರೂಸ್, ಬಾಪೂ, ಮೀರಾಬೆಹನ್

(ತೆಂಡುಲ್ಕರರ 'ಮಹಾತ್ಮಾ' ಗ್ರಂಥದಿಂದ)



ಮಾಲವೀಯಾಜೀ, ಬಾಪೂ, ಸರೋಜಿನೀ ದೇವಿ ಮತ್ತು ಕಸ್ತೂರ ಬಾ

(ತೆಂಡುಲ್‌ಕರರ 'ಮಹಾತ್ಮಾ' ಗ್ರಂಥದಿಂದ)

ಅಡ್ಡಿಯಿಲ್ಲ. ಅವರ ಈಗಿನ ಶರೀರ–ಸ್ಥಿತಿಯನ್ನು ನೋಡಿದರೆ, ಈ ಹೊರೆಯನ್ನು ಅವರು ಹೊರಲಾರರೆಂದು ತೋರುತ್ತದೆ. ಅವರು ಹೊರಬೇಕೆಂದು ನಾನು ಹೇಳುವುದೂ ಇಲ್ಲ. ಅವರು ತಮ್ಮ ಕಾಲವನ್ನು ವ್ಯರ್ಥವಾಗಿ ಕಳೆಯುವವರಲ್ಲ. ಅನೇಕ ಮಿತ್ರರ ಜೀವನದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಅವರ ಹೆಚ್ಚಿನ ಸಮಯ ವ್ಯಯವಾಗುತ್ತದೆ. ಸರಿ, ಹೊತ್ತು ಮುಳುಗುವ ಹೊತ್ತಿಗೆ ಅವರು ಸುಸ್ತಾಗಿ ಮಲಗಿಬಿಡುತ್ತಾರೆ.೧೧೮

ಮದನ ಮೋಹನ ಮಾಲವೀಯ

ಪಂ. ಮದನ ಮೋಹನ ಮಾಲವೀಯರ ಹೆಸರು ಜನರ ಮೇಲೆ 'ಯಕ್ಷಿಣಿ' ಯನ್ನೇ ಮಾಡುತ್ತದೆ. ದೇಶಸೇವೆಯಲ್ಲಿ ಅವರು ಮಾಡಿರುವ ಆತ್ಮತ್ಯಾಗ ಹಾಗೂ ಪರಿಶ್ರಮದ ಪರಿಚಯ ಎಲ್ಲರಿಗೂ ಇದೆ.೧೧೯

ಇದೇ ಸಮಯಕ್ಕೆ ನನಗೆ ಕಾಶಿಯ ಘಟನೆಯ ನೆನಪೂ ಆಗಿದೆ. ಪಂ. ಮದನ ಮೋಹನ ಮಾಲವೀಯರ ಮೇಲೆ ಬೀಳುತ್ತಿರುವ 'ಕಟಾಕ್ಷ' ದಿಂದಾಗಿ ಜನತೆಯ ರೀತಿಯ ಅರಿವಾಗುತ್ತದೆ. ಈ ದೇಶದಲ್ಲಿ ಕನಸಿನಲ್ಲಿ ಕೂಡ ಅಗೌರವಕ್ಕೆ ಗುರಿಯಾಗಬಾರದ ವ್ಯಕ್ತಿ ಯಾರಾದರೂ ಇದ್ದರೆ, ಅವರೇ ಪಂ. ಮಾಲವೀಯರು. ಪಂಜಾಬಿಗೆ ಅವರು ಸಲ್ಲಿಸಿರುವ ಸೇವೆ ಇನ್ನೂ ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಕಾಶೀ ವಿಶ್ವವಿದ್ಯಾಲಯದ ಸ್ಥಾಪನೆ ಆಗಿರುವುದು ಅವರ ಪರಿಶ್ರಮದ ಫಲವಾಗಿಯೇ. ಅವರ ದೇಶಭಕ್ತಿ ಯಾರದಕ್ಕೂ ಕಡಿಮೆಯಿಲ್ಲ. ತಪ್ಪೇ ಮಾಡದಂಥ ಸಜ್ಜನರು. ನಮ್ಮ ಮಾತು ಅವರ ಮನಸ್ಸಿಗೆ ಬರುತ್ತಿಲ್ಲವಾದರೆ, ತಮ್ಮ ಆದರ್ಶವನ್ನು ಬಿಟ್ಟು ನಮ್ಮ ಪಕ್ಷಕ್ಕೆ ಅವರು ಸೇರುತ್ತಿಲ್ಲವಾದರೆ, ಅದು ದೇಶದ ದೌರ್ಭಾಗ್ಯ. ಅದರಲ್ಲಿ ಅವರದೇನೂ ದೋಷವಿಲ್ಲ. ಅವರಿಗೆ ಯಾವ ರೀತಿ ಅಪಮಾನ ಮಾಡಲಾಯಿತೆಂಬುದನ್ನು ಓದಿ, ಮನಸ್ಸಿಗೆ ಬಹಳ ದುಃಖವಾಗಿದೆ. ಸಂಸ್ಕೃತದ ವಿದ್ಯಾರ್ಥಿಗಳು ಅಥವಾ ಸಂನ್ಯಾಸಿ ವಿದ್ಯಾರ್ಥಿಗಳು ಸರ್ಪ

ಕಾವಲು ನಡೆಸಿ, ತರಗತಿಗಳಿಗೆ ಅಡ್ಡಿಪಡಿಸುವುದು ಉಚಿತವೆಂದು ಬಗೆದಾಗ, ಆ ಪ್ರಕರಣದಲ್ಲಿ ಪ್ರವೇಶಮಾಡಿ ತರಗತಿಗಳಿಗೆ ಹಾಜರಾಗಬಯಸುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಪಂಡಿತರ ಕರ್ತವ್ಯವೂ ಆಗಿತ್ತು. ಪೋಲೀಸರು ಪ್ರಧಾನ ಕಾರ್ಯಕರ್ತರನ್ನು ಬಂಧಿಸಿದುದರಲ್ಲಿ ತಪ್ಪೇನೂ ಇಲ್ಲ. ಅವರು ಕೈಗೊಂಡ ಕ್ರಮ ಸರ್ವಥಾ ಉಚಿತವಾದುದೇ ಆಗಿತ್ತು.೧೨೦

ಪಂಡಿತ ಮಾಲವೀಯರ ವಿಷಯದಲ್ಲಿ ನನಗೆ ಎಚ್ಚರಿಕೆ ಕೊಟ್ಟಿದಾರೆ. ಅವರ ಮಾತು ಬಹಳ ಗಾಢವಾಗಿಯೂ, ಗೂಢವಾಗಿಯೂ ಇರುವುದಾಗಿ ಆಕ್ಷೇಪಿಸಲಾಗಿದೆ. ಅವರು ಮುಸಲ್ಮಾನರ ಹಿತಚಿಂತಕರಲ್ಲವೆಂದೂ, ನನ್ನ ಸ್ಥಾನದ ಬಗೆಗೆ ಅವರಿಗೆ ಅಸೂಯೆ ಸಹ ಇದೆಯೆಂದೂ ಹೇಳಲಾಗಿದೆ. ನಾನು ೧೯೧೫ ರಲ್ಲಿ ಹಿಂದೂಸ್ಥಾನಕ್ಕೆ ಬಂದಾಗಿನಿಂದ ಅವರೊಡನೆ ಹೆಚ್ಚಿನ ಸಂಪರ್ಕ ಇಟ್ಟುಕೊಂಡಿದೇನೆ. ನಾನು ಅವರನ್ನು ಒಳಿತಾಗಿ ಬಲ್ಲೆ; ಅವರಿಗೂ ನನ್ನ ಪರಿಚಯ ಚೆನ್ನಾಗಿದೆ. ಹಿಂದೂ ಸಮಾಜದ ಶ್ರೇಷ್ಠ ವ್ಯಕ್ತಿಗಳಲ್ಲಿ ಅವರೊಬ್ಬರು. ಉಗ್ರನಿಷ್ಠೆ ಹಾಗೂ ಹಳೆಯ ವಿಚಾರದವರಾದರೂ, ಬಹಳ ಉದಾರ ಭಾವನೆಯುಳ್ಳವರು. ಅವರು ಮುಸಲ್ಮಾನರ ಶತ್ರುಗಳಲ್ಲ. ಅವರಿಗೆ ಯಾರ ಮೇಲೂ ಅಸೂಯೆ ಇರುವ ಸಂಭವವಿಲ್ಲ. ಶತ್ರುಗಳಿಗೂ ಎಡೆಗೊಡುವಂಥ ಔದಾರ್ಯ ಅವರದು, ಅವರಿಗೆ ಅಧಿಕಾರದ ಆಸೆ ಇಲ್ಲ. ಇಂದು ಅವರ ಬಳಿ ಇರಬಹುದಾದ ಆಧಿಕಾರವಾದರೂ ಇದುವರೆಗೆ ಅವರು ಮಾತೃಭೂಮಿಗೆ ಸಲಿಸಿರುವ ದೀರ್ಘ ಹಾಗೂ ಅಖಂಡ ಸೇವೆಯ ಫಲ. ಅಂಥ ಸೇವೆಮಾಡಿರುವವರು ನಮ್ಮಲ್ಲಿ ಕಡಿಮೆ. ಅವರ, ನನ್ನ ವಿಶೇಷತೆ ಬೇರೆ ಬೇರೆ. ಆದರೆ, ನಾವು ಒಬ್ಬರನ್ನೊಬ್ಬರು ಸ್ವಂತ ಸಹೋದರರಂತೆ ಪ್ರೀತಿಸುತ್ತೇವೆ. ನನಗೂ ಅವರಿಗೂ ಸ್ವಲ್ಪವೂ ವಿರಸ ಬಂದಿಲ್ಲ. ನಮ್ಮ ಮಾರ್ಗಗಳೇ ಬೇರೆ ಬೇರೆ. ಆದಕಾರಣ ನಮ್ಮ ನಮ್ಮಲ್ಲಿ ಸ್ಪರ್ಧೆ ಅಥವಾ ದ್ವೇಷ ಉಂಟಾಗಲು ಕಾರಣವೇ ಇಲ್ಲ.೧೨೧

ಓರ್ವ ಓದುಗರು ಪ್ರಶ್ನಿಸುತ್ತಾರೆ :—

"ನೀವು ದಕ್ಷಿಣ ಭಾರತದ ಸದಸ್ಯರನ್ನು ಕಾರ್ಯಸಮಿತಿಯಲ್ಲಿ ಸೇರಿಸದಿರಲು ಕಾರಣವೇನೆಂಬುದನ್ನು ಕರಾಚಿಯಲ್ಲಿ ವಿಷಯ-ನಿಯಾಮಕ ಸಮಿತಿಗೆ ತಿಳಿಸಿದಿರಿ. ಆದರೆ, ಮಾಲವೀಯರನ್ನು ದೂರವಿಟ್ಟುದೇಕೆಂಬುದನ್ನು ಏಕೆ ತಿಳಿಸಲಿಲ್ಲ"?

ವಿಷಯ ಎಷ್ಟು ಸ್ಪಷ್ಟವಾಗಿದ್ದಿತೆಂದರೆ, ಯಾರೂ ಏನೂ ಕೇಳಲೇ ಇಲ್ಲ. ಇದರಲ್ಲಿ ಮಾಲವೀಯರಿಗೆ ಅಪಮಾನ ಮಾಡುವ ಪ್ರಶ್ನೆಯೇ ಇಲ್ಲ. ಅವರು ಅಪಮಾನದಿಂದ ಅತೀತರು. ಯಾವುದೇ ಸಂಸ್ಥೆಯಾಗಲಿ, ಅವರನ್ನು ಸದಸ್ಯರನ್ನಾಗಿ ಮಾಡಿ ಅವರ ಸ್ಥಿತಿ ಅಥವಾ ಮಹತ್ವವನ್ನು ಹೆಚ್ಚಿಸುವುದು ಶಕ್ಯವಿಲ್ಲ. ಅವರನ್ನು ಸದಸ್ಯರನ್ನಾಗಿ ಮಾಡಿಕೊಂಡಿದ್ದರೆ, ಸಂಸ್ಥೆಯ ಗೌರವ ಹೆಚ್ಚುತ್ತಿದ್ದಿತೆಂಬುದೇನೋ ನಿಜ. ಕಾರ್ಯಸಮಿತಿ ವಿಚಾರಪೂರ್ವಕವಾಗಿಯೇ ಅವರನ್ನು ದೂರವಿಟ್ಟಿತು: ಸಮಯ ಒದಗಿದಾಗ ಬಳಸಲು ಅವರಿಗೆ ವಿಚಾರ ಹಾಗೂ ಕೃತಿಸ್ವಾತಂತ್ರ್ಯ ಇರಲೆಂದೇ ಹಾಗೆ ಮಾಡಲಾಯಿತು. ಸದಸ್ಯರಾಗಿರದಿದ್ದರೂ ನಾಯಕರಾದವರು ಕಾರ್ಯಸಮಿತಿಯ ಸಭೆಗಳಿಗೆ ಹಾಜರಾಗುತ್ತಲೇ ಬಂದಿದಾರೆ: ಕಾರ್ಯಸಮಿತಿಯಲ್ಲಿ ಅವರು ಬೆಲೆಯುಳ್ಳ ಕೆಲಸವನ್ನೇ ಮಾಡಿದಾರೆ. ಆದರೂ ಸಮಿತಿಯ ಅನುಶಾಸನದಲ್ಲಿ ಅವರನ್ನು ಬಂಧಿಸುವುದರಿಂದ ಅವರಿಗೆ ತೊಂದರೆಯಾಗಬಹುದೆಂದು ಸಮಿತಿ ವಿಚಾರಮಾಡಿತು. ಡಾ॰ ಅನ್ಸಾರಿ ಅವರು ಮಾಲವೀಯರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಲು ಎಷ್ಟು ಉತ್ಸುಕರಾಗಿದ್ದರೆಂದರೆ, ಅವರಿಗಾಗಿ ತಾವು ಹೊರಬಿಳಲಿಕ್ಕೂ ಸಿದ್ಧರಾಗಿದ್ದರು. ಆದರೆ, ನಾನು ಮೇಲೆ ಪ್ರಸ್ತಾಪಿಸಿರುವ ವಿಚಾರವನ್ನು ಜಮನಾಲಾಲರು ಪ್ರಭಾವಶಾಲಿಯಾದ ರೀತಿಯಿಂದ ಸಮಿತಿಯ ಮುಂದೆ ಮಂಡಿಸಿದರು ; ಅದರ ಪರಿಣಾಮವಾಗಿ ಮಾಲವೀಯರು ಸಮಿತಿಯಿಂದ ಹೊರಗಿರುವುದೇ ಸರಿಯೆಂದು ಡಾ॰ ಅನ್ಸಾರಿ ಅವರೂ ಒಪ್ಪಿಕೊಳ್ಳಬೇಕಾಯಿತು. ಈ ವ್ಯವಸ್ಥೆಯಿಂದ ಮಾಲವೀಯರ ಸಲಹೆಯ–ಲಾಭ ತೆಗೆದುಕೊಳ್ಳಲಿಕ್ಕೂ ಸಾಧ್ಯವಾಗುತ್ತದೆ ; ಜತೆಗೆ ಅವರ ಕೃತಿಸ್ವಾತಂತ್ರ್ಯಕ್ಕೆ ಯಾವುದೇ ಪ್ರಕಾರದ ಅಡ್ಡಿಯೂ ಉಂಟಾಗುವುದಿಲ್ಲ. ಚಕ್ರಗೋಷ್ಠಿಗೆ ಅವರನ್ನು ಪ್ರತ್ಯೇಕವಾಗಿ ಆಹ್ವಾನಿಸಿ ಸರಕಾರವೂ ಸಹ ಸಮಾಜದಲ್ಲಿ ಅವರಿಗೆ ಇರುವ ಅದ್ವಿತೀಯ ಸ್ಥಾನವನ್ನು

ಮಾನ್ಯ ಮಾಡಿದೆ.೧೨೨

ಬಿರ್ಲಾ ಅವರಿಗೆ ಹಿಂದಿಯಲ್ಲಿ ಹೀಗೆ ಪತ್ರ ಬರೆದರು—

ಆಶಾವಾದಕ್ಕೂ ಭೋಳೆ ಪ್ರಭಾವಕ್ಕೂ ವ್ಯತ್ಯಾಸವಿದೆ. ಮಾಲವೀಯರಲ್ಲಿ ಎರಡೂ ಇವೆ. ದೃಷ್ಟಿಕೋಣದಲ್ಲಿ ನಿರಾಶೆಯ ಚಿಹ್ನೆಗಳಿದ್ದರೂ. ಅವುಗಳ ಇರುವಿಕೆಯನ್ನು ಅರಿತಿದ್ದರೂ ಆಶೆ ಇಟ್ಟುಕೊಂಡಿರುವವನು ಆಶಾವಾದಿ. ಈ ಗುಣ ಪಂಡಿತರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇದೆ. ಆಶೆಯ ಮಾತನ್ನು ಯಾರಾದರೂ ಹೇಳಿದರೆ ಅದನ್ನು ನಂಬಿಬಿಡುವುದು ಭೋಳೆ ಸ್ವಭಾವ. ಆ ಗುಣವೂ ಪಂಡಿತರಲ್ಲಿದೆ. ಅದು ತ್ಯಾಜ್ಯವೆಂದು ನನ್ನ ಭಾವನೆ. ಪಂಡಿತಜಿ ಮಹಾನ್ ವ್ಯಕ್ತಿ ಆಗಿರುವುದರಿಂದ ಇಂಥ ಭೋಳೆ ಸ್ವಭಾವದಿಂದ ಅವರಿಗೆ ಹಾನಿಯಾಗಿಲ್ಲ. ಅಂಥ ಭೋಳೆ ಸ್ವಭಾವವನ್ನು ನಾವು ಎಂದಿಗೂ ಅನುಸರಿಸಬಾರದು. ಆಶಾವಾದ ಅಂತರ್ವಾಣಿಯನ್ನು ಅವಲಂಬಿಸಿರುತ್ತದೆ ; ಭೋಳೆ ಸ್ವಭಾವ ಹೊರಗಿನ ಅಂಶಗಳನ್ನು ಅವಲಂಬಿಸಿರುತ್ತದೆ.೧೨೩

ದೇಶದ ಸಾರ್ವಜನಿಕ ಜೀವನಕ್ಕೆ ಅವರು ಕೊಟ್ಟಿರುವ ಕೊಡುಗೆ ಮಹತ್ವಪೂರಿತವಾದದು. ಅವರು ಮಾಡಿರುವ ಕೆಲಸಗಳಲ್ಲಿ ಎಲ್ಲಕ್ಕಿಂತ ದೊಡ್ಡದೆಂದರೆ, ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯ. ಆ ವಿದ್ಯಾಲಯದ ಮೇಲೆ ನನಗೆ ಹಾರ್ದಿಕ ಪ್ರೇಮ. ಮಾಲವೀಯರು ಅಪೇಕ್ಷಿಸಿದಾಗಲೆಲ್ಲ ನಾನು ಅದಕ್ಕೆ ಸೇವೆ ಸಲ್ಲಿಸಿದೇನೆ.

ಮಾಲವೀಯರು ಯಶಸ್ವಿ ಹಾಗೂ ಮಹತ್ ಭಿಕ್ಷುಕರಲ್ಲಿ ಒಬ್ಬರು. ಐದು ಕೋಟಿ ರೂಪಾಯಿ ಸಹಾಯಕ್ಕಾಗಿ ಅವರು ಹೊರಡಿಸಿದ್ದ 'ಪ್ರಾರ್ಥನೆ' ಯ ಮೇಲಿಂದಲೇ ಅವರು ವಿಶ್ವವಿದ್ಯಾಲಯಕ್ಕಾಗಿ ಎಷ್ಟು ಚಂದಾ ಸೇರಿಸಬಲ್ಲರೆಂಬುದನ್ನು ಊಹಿಸಬಹುದು.೧೨೪

ಮಾಲವೀಯರೊಡನೆ ನನಗೆ ಎಷ್ಟು ಗಾಢವಾದ ಸಂಬಂಧವಿದೆಯೆಂಬುದನ್ನು ನೀವು ಬಲ್ಲಿರಿ. ಅವರ ಯಾವುದೇ ಕೆಲಸ ನನ್ನಿಂದ ಆಗು

ವಂತಿದ್ದರೆ, ನನಗೆ ಹೆಮ್ಮೆಯೆನಿಸುತ್ತದೆ. ಅದನ್ನು ಮಾಡಬಲ್ಲೆನಾದರೆ ನಾನು ಕೃತಾರ್ಥ. ಆದಕಾರಣ ಸರ್ ರಾಧಾಕೃಷ್ಣನ್ ಅವರ ಪತ್ರ ಮುಟ್ಟಿದೊಡನೆಯೇ ನಾನು ಆಹ್ವಾನವನ್ನು ಅಂಗೀಕರಿಸಿದೆ. ಇಲ್ಲಿಗೆ ಬರುವುದು ನನ್ನ ಪಾಲಿಗೆ ತೀರ್ಥಕ್ಷೇತ್ರಕ್ಕೆ ಬಂದಂತೆ.

ಈ ವಿಶ್ವವಿದ್ಯಾಲಯ ಮಾಲವೀಯರ ಎಲ್ಲಕ್ಕಿಂತ ದೊಡ್ಡದಾದ, ಪ್ರಾಣಪ್ರಿಯವಾದ ಕಾರ್ಯ. ಅವರು ಹಿಂದೂಸ್ಥಾನಕ್ಕೆ ಅಗಾಧ ಸೇವೆ ಮಾಡಿದಾರೆಂಬುದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ಆದರೆ ಅವರು ಮಾಡಿರುವ ದೊಡ್ಡ ಕೆಲಸಗಳಲ್ಲಿ ಈ ಕೆಲಸದ ಮಹತ್ವ ಎಲ್ಲಕ್ಕಿಂತ ಹೆಚ್ಚಿನದಾಗಿ ಉಳಿಯುವುದೆಂದು ನನ್ನ ಭಾವನೆ. ಇಪ್ಪತ್ತೈದು ವರ್ಷಗಳ ಹಿಂದೆ ಈ ವಿಶ್ವವಿದ್ಯಾಲಯವು ಸ್ಥಾಪಿತವಾದಾಗ ಮಾಲವೀಯರ ಆಗ್ರಹ ಹಾಗೂ ಆಕರ್ಷಣೆಯಿಂದ ನಾನು ಇಲ್ಲಿಗೆ ಬಂದಿದ್ದೆ. ಆಗ, ದೊಡ್ಡ ದೊಡ್ಡ ರಾಜಮಹಾರಾಜರು, ಸ್ವತಃ ವೈಸ್‌ರಾಯರು ಬರುವಲ್ಲಿ ನನ್ನಂಥ 'ಫಕೀರ' ನ ಆವಶ್ಯಕತೆಯೇನು ಎಂಬುದನ್ನು ವಿಚಾರ ಮಾಡಲಿಕ್ಕೂ ಶಕ್ಯವಿರಲಿಲ್ಲ. ಆಗ ನಾನಿನ್ನೂ 'ಮಹಾತ್ಮಾ' ಕೂಡ ಆಗಿರಲಿಲ್ಲ.

ಆ ಸಮಯದಲ್ಲೂ ಮಾಲವೀಯರ ಕೃಪಾದೃಷ್ಟಿ ನನ್ನ ಮೇಲಿತ್ತು. ಎಲ್ಲಿಯಾದರೂ ಯಾವ ಸೇವಕನಾದರೂ ಇರಲಿ, ಆತನನ್ನು ಪತ್ತೆಹಚ್ಚಿ ಹೇಗಾದರೂ ಮಾಡಿ ತಮ್ಮ ಬಳಿಗೆ ಆಕರ್ಷಿಸುತ್ತಾರೆ. ಇದು ಅವರ ನಿತ್ಯ ಕಸಬು.

ಜನ ಮಾಲವೀಯರನ್ನು ಬಹಳವಾಗಿ ಪ್ರಶಂಸಿಸುತ್ತಾರೆ. ಇಂದೂ ಅವರ ಪ್ರಶಂಸೆಯನ್ನು ಸ್ವಲ್ಪಮಟ್ಟಿಗೆ ಕೇಳಿದೀರಿ. ಅವರು ಅದಕ್ಕೆ ಸರ್ವಥಾ ಯೋಗ್ಯರು. ಹಿಂದೂ ವಿಶ್ವವಿದ್ಯಾಲಯ ಎಷ್ಟು ದೊಡ್ಡದಾಗಿ ಬೆಳೆದಿದೆಯೆಂಬುದನ್ನು ನಾನು ಬಲ್ಲೆ. ಮಾಲವೀಯರಿಗಿಂತ ದೊಡ್ಡ ಭಿಕ್ಷುಕರು ಈ ಪ್ರಪಂಚದಲ್ಲಿ ಬೇರೊಬ್ಬರಿಲ್ಲ. ಅವರು ಯಾವದೇ ಕಾರ್ಯವನ್ನು ಕೈಗೊಳ್ಳಲಿ–ಅದರ ಸಲುವಾಗಿ, ಅವರ ಸಲುವಾಗಿ ಅಲ್ಲ–ಅವರ ಭಿಕ್ಷಾ ಜೋಳಿಗೆ ಸದಾ ತೆರೆದೇ ಇರುತ್ತದೆ. ಅವರು ಯಾವಾಗಲೂ ಬೇಡುತ್ತಲೇ ಇರುತ್ತಾರೆ; ದೇವರ ಕೃಪೆಯೂ ಅವರ ಮೇಲೆ ಒಳಿತಾಗಿ ಇದೆ–ಎಲ್ಲಿ ಹೋದರೂ ಅವರಿಗೆ ಹಣ ಸಿಗುತ್ತದೆ; ಎಷ್ಟು ಸಿಕ್ಕಿದರೂ ಅವರ ಹಸಿವು

ಮಾತ್ರ ಹಿಂಗುವುದಿಲ್ಲ. ಅವರ ಭಿಕ್ಷಾ-ಪಾತ್ರೆ ಸದಾ ಖಾಲಿಯಾಗಿಯೇ ಇರುತ್ತದೆ. ಅವರು ವಿಶ್ವವಿದ್ಯಾಲಯಕ್ಕಾಗಿ ಒಂದು ಕೋಟಿ ರೂಪಾಯಿ ಸಂಗ್ರಹಿಸಲು ಪ್ರತಿಜ್ಞೆ ಮಾಡಿದ್ದರು. ಒಂದು ಕೋಟಿಗೆ ಬದಲು ಒಂದೂ ವರೆ ಕೋಟಿ, ಹತ್ತು ಲಕ್ಷ ರೂ. ಕೂಡಿತು ; ಆದರೂ ಅವರ ಹೊಟ್ಟೆ ತುಂಬ ಲಿಲ್ಲ. ಈಗತಾನೆ ಅವರು ನನ್ನ ಕಿವಿಯಲ್ಲಿ ಪಿಸುಗುಟ್ಟಿದಾರೆ-ಇಂದಿನ ನಮ್ಮ ಅಧ್ಯಕ್ಷರಾದ ದರ್ಭಾಂಗಾ ಮಹಾರಾಜರು ಭಾರಿ ಮೊಬಲಗನ್ನು ಮತ್ತೊಮ್ಮೆ ದಾನಮಾಡಿದಾರಂತೆ.

ಮಾಲವೀಯರು ಸ್ವತಃ ಹೇಗೆ ಬಾಳು ಸಾಗಿಸುವರೆಂಬುದನ್ನು ನಾನು ಬಲ್ಲೆ. ಅವರ ಜೀವನದ ಯಾವ ಮುಖವೂ ನನ್ನಿಂದ ಮರೆಯಾಗಿಲ್ಲದಿರು ವುದು ನನ್ನ ಸೌಭಾಗ್ಯ. ಅವರ ಸರಳತೆ, ಪವಿತ್ರತೆ ಹಾಗೂ ಪ್ರೇಮದ ಪರಿಚಯ ನನಗೆ ಒಳಿತಾಗಿ ಇದೆ. ಅವರ ಈ ಗುಣಗಳಲ್ಲಿ ಎಷ್ಟನ್ನು ತೆಗೆದುಕೊಳ್ಳಲು ಸಾಧ್ಯವೋ ತೆಗೆದುಕೊಳ್ಳಿರಿ. ವಿದ್ಯಾರ್ಥಿಗಳಂತೂ ಅವರ ಜೀವನದಿಂದ ಕಲಿಯಬೇಕಾದುದು ಬಹಳವಿದೆ. ಆದರೆ, ವಿದ್ಯಾರ್ಥಿಗಳು ಕಲಿಯಬೇಕಾದಷ್ಟು ಕಲಿತಿಲ್ಲವೆಂದು ನನಗೆ ಅನಿಸುತ್ತದೆ. ಇದು ನಿಮ್ಮ-ನಮ್ಮ ದೌರ್ಭಾಗ್ಯ. ಅವರದೇನೂ ದೋಷವಿಲ್ಲ. ಬಿಸಿಲಿನಲ್ಲಿ ಇದ್ದೂ ಸೂರ್ಯನ ತೇಜವನ್ನು ಪಡೆದುಕೊಳ್ಳಲು ನಮ್ಮಿಂದ ಆಗದಿದ್ದರೆ, ಅದು ಬಡಪಾಯಿ ಸೂರ್ಯನ ತಪ್ಪೆ? ಅವನೇನೊ ಎಲ್ಲರಿಗೂ ಶಾಖ ಮುಟ್ಟಿಸುತ್ತಾನೆ; ಆದರೂ ಯಾವನಾದರೂ ಅದನ್ನು ತೆಗೆದುಕೊಳ್ಳಲು ಇಚ್ಛಿಸದೆ ನಡುಗತ್ತಲೇ ತಿರುಗುವುದಾದರೆ, ಅದಕ್ಕೆ ಸೂರ್ಯ ಏನು ಮಾಡಿಯಾನು? ಮಾಲವೀಯರಿಗೆ ಇಷ್ಟು ಸಮೀಪದಲ್ಲಿ ಇದ್ದುಕೊಂಡೂ ಅವರ ಸರಳತೆ, ತ್ಯಾಗ, ದೇಶಭಕ್ತಿ ಔದಾರ್ಯ, ವಿಶ್ವವ್ಯಾಪಿ ಪ್ರೇಮ ಮೊದಲಾದ ಗುಣಗಳನ್ನು ಅನುಸರಿಸುವುದು ಆಗದಿದ್ದರೆ ನಿಮಗಿಂತ ನಿರ್ಭಾಗ್ಯರು ಇನ್ನಾರು? ೧೨೫

ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ:-"ರಾಜ ಸತ್ತ; ರಾಜ ಚಿರಾಯುವಾಗಲಿ" ಮಾಲವೀಯರ ವಿಷಯದಲ್ಲಿ ಇದೇ ಮಾತನ್ನು ಹೇಳ ಬಹುದು. "ಮಾಲವೀಯರು ಹೋದರು ; ಮಾಲವೀಯರು ಅಮರ ರಾಗಲಿ ". ಮಾಲವೀಯರು ಹಿಂದೂಸ್ತಾನದ ಸಲುವಾಗಿಯೇ ಜನ್ಮ ತಾಳಿ

ದರು ; ಹಿಂದೂಸ್ಥಾನದ ಸಲುವಾಗಿ ಮಾಡಿದ ತಮ್ಮ ಕಾರ್ಯಗಳ ಮೂಲಕ ಜೀವಂತರಾಗಿದಾರೆ. ಅವರು ಮಾಡಿರುವ ಕಾರ್ಯಗಳು ಬಹಳ ; ಬಹಳ ದೊಡ್ಡವು. ಅವುಗಳಲ್ಲಿ ಎಲ್ಲಕ್ಕಿಂತಲೂ ದೊಡ್ಡದೆಂದರೆ, ಹಿಂದೂ ವಿಶ್ವ ವಿದ್ಯಾಲಯ. ಅದನ್ನು ನಾವು 'ಬನಾರಸ್ ಹಿಂದೂ ಯೂನಿವರ್ಸಿಟಿ' ಎಂದು ತಪ್ಪಾಗಿ ಕರೆಯುತ್ತೇವೆ. ಅದು ಮಾಲವೀಯರ ದೋಷವಲ್ಲ, ಅವರ ಅನುಯಾಯಿಗಳದ್ದು. ಮಾಲವೀಯರು ದಾಸಾನುದಾಸರಾಗಿದ್ದರು. ದಾಸರು ಹೇಗೆ ಮಾಡಲು ಬಯಸಿದರೆ ಹಾಗೆ ಮಾಡಲು ಅವರು ಬಿಡು ತ್ತಿದ್ದರು. ಇದು ಅವರ ಸ್ವಭಾವ-ಗುಣವಾಗಿತ್ತು. ಕೆಲವು ವೇಳೆ ಅದು 'ದೋಷ'ದ ರೂಪವನ್ನೂ ತಾಳುತ್ತಿತ್ತು. ಆದರೆ "ಸಮರಥ ಕೋ ನಹಿ ದೋಷ ಗುಸಾಯಿ"—ಎಂಬ ಮಾತನ್ನು ಮಾಲವೀಯರ ವಿಷಯಕ್ಕೂ ಅನ್ವಯಿಸಿ ಹೇಳಬಹುದು. 'ಹಿಂದೂ ವಿಶ್ವವಿದ್ಯಾಲಯ' ಎಂಬುದೇ ಅವರಿಗೆ ಪ್ರಿಯವಾದ ಹೆಸರಾಗಿತ್ತು. ಇಂದಿಗೂ ಆ ಸುಧಾರಣೆ ಮಾಡುವುದು ಯೋಗ್ಯ. ಈ ವಿಶ್ವವಿದ್ಯಾಲಯದ ಪ್ರತಿಯೊಂದು ಕಲ್ಲೂ ಶುದ್ಧ-ಹಿಂದೂ ಧರ್ಮದ ಪ್ರತಿಬಿಂಬವಾಗಬೇಕು. ಯಾವುದೊಂದು ಕಟ್ಟಡವೂ ಪಾಶ್ಚಾತ್ಯ ಪ್ರಾಪಂಚಿಕವಾದ (ಜಡವಾದ-Materialism)ದ ಪ್ರತೀಕವಾಗದೆ, ಆಧ್ಯಾತ್ಮಿಕವಾದದ ಪ್ರತೀಕವಾಗಬೇಕು, ಕಟ್ಟಡದಂತೆಯೇ ವಿದ್ಯಾರ್ಥಿಗಳೂ, ಶಿಕ್ಷಕರೂ ಜೀವಿತ ಪ್ರತಿಮೆ ಆಗಿದಾರೆಯೆ ? ಆಗಿಲ್ಲವಾದರೆ, ಏಕೆ ಆಗಿಲ್ಲ? ಈ ವಿಶ್ವವಿದ್ಯಾಲಯದ ಪರೀಕ್ಷೆ ವಿದ್ಯಾರ್ಥಿಗಳ ಸಂಖ್ಯೆಯಿಂದಲ್ಲ, ಅವರು ಹಿಂದೂ ಧರ್ಮದ ಪ್ರತಿಮೆಗಳಾಗುವುದರಿಂದಲೇ ಆದೀತು. ಅವರ ಸಂಖ್ಯೆ ಎಷ್ಟು ಕಡಿಮೆ ಇದ್ದರೆ ತಾನೆ ಏನು ?

ಈ ಕಾರ್ಯ ಕಠಿಣವೆಂಬುದನ್ನು ನಾನು ಬಲ್ಲೆ. ಆದರೆ ವಿದ್ಯಾಲಯದ ಮೂಲವೇ ಅದು. ಹಾಗಲ್ಲದಿದ್ದರೆ, ಅದು ಏನೂ ಅಲ್ಲ. ಆದಕಾರಣ ದಿವಂಗತ ಮಾಲವೀಯರ ಹಾಗೂ ಅವರ ಅನುಯಾಯಿಗಳ ಧರ್ಮ ಸ್ಪಷ್ಟವಾಗಿಯೇ ಇದೆ. ಜಗತ್ತಿನಲ್ಲಿ ಹಿಂದೂ ಧರ್ಮದ ಸ್ಥಾನವೇನು ? ಇಂದು ಅದರಲ್ಲಿ ಏನು ದೋಷವಿದೆ ? ಅದನ್ನು ನಿವಾರಿಸುವುದು ಹೇಗೆ ? ಈ ಸಮಸ್ಯೆಯನ್ನು ಬಿಡಿಸುವುದು ಮಾಲವೀಯರ ಭಕ್ತರ ಕರ್ತವ್ಯ. ಮಾಲವೀಯರು ತಮ್ಮ ಸ್ಮೃತಿಯನ್ನು (ಸ್ಮಾರಕ) ಬಿಟ್ಟುಹೋಗಿದಾರೆ. ಅದಕ್ಕೂ ಸ್ಥಾಯಿರೂಪ

ಕೊಡುವುದರಿಂದ ಅದನ್ನು ವಿಕಾಸಗೊಳಿಸುವುದರಿಂದ, ಅದರ ಸರ್ವಶ್ರೇಷ್ಠ ಸ್ಮೃತಿಸ್ತಂಭವನ್ನು ಸ್ಥಾಪಿಸಿದಂತೆ ಆಗುವುದು.

ವಿಶ್ವವಿದ್ಯಾಲಯಕ್ಕಾಗಿ ಮಾಲವೀಯರು ಬೇಕಾದಷ್ಟು ಧನ ಸಂಗ್ರಹ ಮಾಡಿದ್ದರು. ಆದರೆ ಬಾಕಿಯೂ ಸಾಕಷ್ಟು ಉಳಿದಿದೆ. ಈ ಕಾರ್ಯದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬಹುದು.

ಇದು ಅವರ ಬಾಹ್ಯ ಪ್ರವೃತ್ತಿಯ ಮಾತಾಯಿತು. ಅವರ ಆಂತರಿಕ ಜೀವನ ಪರಿಶುದ್ಧವಾಗಿತ್ತು. ಅವರು ದಯೆಯ ಭಂಡಾರವಾಗಿದ್ದರು. ಅವರ ಶಾಸ್ತ್ರಜ್ಞಾನ ಅಗಾಧ. ಭಾಗವತ ಅವರ ಪ್ರಿಯ ಗ್ರಂಥ. ಅವರು ಜಾಗ್ರತ ಕಥಾಕಾರರು. ಅವರ ಸ್ಮರಣೆಯ ಶಕ್ತಿ ತೇಜೋಪೂರ್ಣ. ಜೀವನ ಶುದ್ಧ ಸರಳ.

ಅವರ ರಾಜನೀತಿ ಹಾಗೂ ಇತರ ಅನೇಕ ಪ್ರವೃತ್ತಿಗಳನ್ನು ಈಗ ಪ್ರಸ್ತಾಪಿಸುವುದಿಲ್ಲ. ತಮ್ಮ ಇಡೀ ಜೀವನವನ್ನು ಸೇವೆಗಾಗಿಯೇ ಸಮರ್ಪಣೆ ಮಾಡಿದ್ದ, ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದ ಅವರ ಪ್ರವೃತ್ತಿಗೆ ಮಿತಿಯೆಲ್ಲಿ, ಮೇರೆಯೆಲ್ಲಿ? ಅವರಲ್ಲಿದ್ದ ಚಿರಸ್ಥಾಯೀ ಅಂಶಗಳನ್ನೆ ಪ್ರಸ್ತಾಪಿಸುವುದು ನನ್ನ ಸಂಕಲ್ಪವಾಗಿತ್ತು. ವಿಶ್ವವಿದ್ಯಾಲಯವನ್ನು ಶುದ್ಧಗೊಳಿಸುವುದರಲ್ಲಿ ನೆರವು ನೀಡಬಯಸುವವರು ಮಾಲವೀಯರ ಆಂತರಿಕ ಜೀವನವನ್ನು ಮನನ ಮಾಡಲು, ಅನುಸರಿಸಲು ಪ್ರಯತ್ನಿಸಲಿ.೧೨೬

ಮಾಲವೀಯರೂ ಹಿಂದಿಯ ಸಲುವಾಗಿ ಹೆಚ್ಚಿನ ಕೆಲಸ ಮಾಡಿದ್ದರು. ಆದರೆ, ಉರ್ದು ಭಾಷೆಯನ್ನು ತುಂಡರಿಸಿಬಿಡಿ—ಎಂಬುದಾಗಿ ಅವರು ಹೇಳಿದುದನ್ನು ನಾನೆಂದೂ ಕೇಳಿಲ್ಲ.೧೨೭

ಮೀರಾಬೆನ್

ಮೀರಾ ಬಹನಳ ಜೀವನ ಎಲ್ಲ ಹೆಣ್ಣು ಮಕ್ಕಳ ಪಾಲಿಗೆ ಚಿಂತನ ಯೋಗ್ಯ ವಸ್ತುವಾಗಿದೆ.೧೨೮

ಮೀರಾ ಬೆನ್‌ಳೇನೋ ಆಶ್ರಮವಾಸಿ. ಮನೆ–ಮಾರು, ತಂದೆ ತಾಯಂದಿರನ್ನು ಬಿಟ್ಟು ಬಂದಳು. ಪ್ಯಾರೇಲಾಲರಿಗೆ ಅನ್ವಯಿಸುವ ವಿಷಯ ಈಕೆಗೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಆಕೆ ತನ್ನನ್ನು ನನ್ನ ಮಗಳೆಂದು ಹೇಳಿಕೊಂಡರೂ, ಆಕೆಗೆ ತನ್ನದೇ ಆದ ಸ್ವತಂತ್ರ ಸ್ಥಾನವಿದೆ. ಬರೆಯ ಬಾರದೆಂದು ಆಕೆಗೆ ತನ್ನಿಂದ ತಾನೇ ಅನಿಸಿದ್ದರೆ ಆ ಬೇರೆ ಮಾತು.೧೨೯

ಬೆಳಗ್ಗೆ ಅಡ್ಡಾಡುವ ಸಮಯದಲ್ಲಿ ನಾನು ಬಾಪುವಿಗೆ ಮೀರಾ ಬೇನಳ ಕುರಿಯ ಕಥೆ ಹೇಳಿದೆ ;—ಅವರು ಹೇಳಿದರು:—

'ಮೀರಾ ಬೇನಳಲ್ಲಿ ಒಂದು ಹಿರಿಯ ಗುಣವಿದೆ. ಆಕೆಯ ದೃಷ್ಟಿಯಲ್ಲಿ ಮನುಷ್ಯ, ಪಶು, ವೃಕ್ಷ ಹಾಗೂ ಹೂಗಳಲ್ಲಿ ಭೇದವೇ ಇಲ್ಲ. ಆಕೆ ಕುರಿಗಳೊಡನೆ ಮಾತನಾಡುವುದನ್ನು ನೀನು ಕೇಳಿರಬಹುದು. ಹಣ್ಣು ಹೂಗಳೊಡನೆಯೂ ಆಕೆ ಮಾತನಾಡುವುದುಂಟು. ನಿನ್ನೆ ರಾತ್ರಿ ಯಾರೂ ಹೇಳದೆಯೇ ಅದೆಲ್ಲವನ್ನು ನನಗಾಗಿ ಮಾಡಿದಳು.

ನಾನು ಹೇಳಿದೆ—"ಆಕೆ ಗುಣದಗಣಿ ಆಗಿರದಿದ್ದರೆ, ರಾಜ ಸಮಾನವಾದ ತಂದೆಯ ಮನೆಯನ್ನು ಬಿಟ್ಟು, ಇಲ್ಲಿಗೇಕೆ ಧಾವಿಸಿ ಬರುತ್ತಿದ್ದಳು ?" ಬಾಪೂ ಹೇಳಿದರು—"ಅಲ್ಲವೆ, ಮತ್ತೆ? "೧೩೦

ಇಡೀ ಪ್ರಪಂಚದಲ್ಲಿ ಕ್ರಾಂತಿ ಹೇಗೆ ಆದೀತೆಂಬ ಬಗೆಗೆ ಇಂದು ಮೀರಾ ವಿಚಾರ ನಡೆಸಿದಾಳೆ; ಮೊದಲು ಹಲವು ನಾಯಕರು ರಷ್ಯಕ್ಕೆ ಹೋಗಬೇಕು, ಆಮೇಲೆ ಪ್ರತಿಯೊಂದು ಗ್ರಾಮದಿಂದಲೂ ಹಲವು ರೈತರನ್ನು ಅಲ್ಲಿಗೆ ಕಳುಹಿಸಬೇಕು, ಅವರು ವಾಪಸು ಬಂದು ಮಂದಿಯಲ್ಲಿ ಪ್ರಚಾರ ಮಾಡಬೇಕು. ಮೀರಾಬೇನಳ ತಲೆತುಂಬ ಇಂದು ರಷ್ಯಾ, ಮಾರ್ಕ್ಸ್ ವಿಚಾರಗಳೇ ಇವೆ. ಬಾಪೂ ಹೇಳತೊಡಗಿದರು—

ಆಕೆಯ ಮನಸ್ಸು ಓರ್ವ ಬಾಲಕಿಯ ಮನಸ್ಸಿನಂತೆ ಕಲ್ಪನೆಯ ಕುದುರೆಯ ಮೇಲೆ ಸವಾರಿ ಮಾಡುತ್ತ ಎತ್ತಂದತ್ತ ಸಾಗುವುದೆಂಬುದಕ್ಕೆ ಇದೊಂದು ಸಣ್ಣ ಉದಾಹರಣೆ. ಇಲ್ಲದಿದ್ದರೆ, ಈ ಜೈಲಿನಲ್ಲಿ ಕುಳಿತು ರಷ್ಯಕ್ಕೆ ಹೋಗುವ ಪ್ರಶ್ನೆ ಆಕೆಯ ಮನಸ್ಸಿನಲ್ಲಿ ಏಕೆ ಹುಟ್ಟುತ್ತಿತ್ತು?

ರಸ್ಯಕ್ಕೆ ಹೋಗುವುದು ಬಿಟ್ಟು, ಇನ್ನೇನೂ ಮಾಡಲಾರದಷ್ಟು ಕಂಗಾಲ ರಾಗಿದೇವೆಯೇ ನಾವು ?೧೩೦

ಈಕೆಯ ಭೋಳೆ ಸ್ವಭಾವ ಹಾಗೂ ಕಲ್ಪನಾಶಕ್ತಿಗೆ ಪಾರವೇ ಇಲ್ಲ.೧೩೧

ನಮ್ಮಲ್ಲಿ ಪೂರ್ಣ ಆಹಾರ ಬೆಳೆಯುವುದಿಲ್ಲವೆಂಬ ಮಾತು ಇದ್ದೇ ಇದೆ. ಜನರಿಗೆ ಜಮೀನು ಸಾಗುವಳಿಮಾಡಿ ಬೆಳೆ ತೆಗೆಯಿರಿ—ಎಂದು ಹೇಳುವುದೇನೋ ಸರಿ. ಆದರೆ, ಅದರ ಸಲುವಾಗಿ ಹೊರಗಿನಿಂದ ತಯಾರಾಗಿ ಬರುವ ಗೊಬ್ಬರವನ್ನು—ಅದನ್ನು ರಾಸಾಯನಿಕ ಗೊಬ್ಬರ ಎನ್ನುತ್ತಾರೆ—ಕೋಟ್ಯಂತರ ರೂಪಾಯಿ ನಮ್ಮದಲ್ಲವೆಂದು ಚೆಲ್ಲಿ ಕೊಂಡುಕೊಳ್ಳುತ್ತೇವೆ; ಅಥವಾ ಜಮೀನು ಕೆಡಿಸಿಕೊಳ್ಳುವುದಕ್ಕೆ ಹಣ ಕೊಡುತ್ತೇವೆಂದೂ ಹೇಳಬಹುದು. ಈ ಮಾತು ನನ್ನದಲ್ಲ—ಈ ವಿಷಯ ನನಗೆ ತಿಳಿಯದು—ತಿಳಿದವರು ಹೀಗೆ ಹೇಳುತ್ತಾರೆ. ಮೀರಾಬೇನಳು ಇದೆಲ್ಲವನ್ನು ಮಾಡಿ ನೋಡಿದಾಳೆ; ಈ ವಿಷಯವನ್ನು ಅರಿತ ಮಂದಿಯನ್ನು ಕಲೆಹಾಕಿದಾಳೆ. ಆಕೆಗೆ ಈ ವಿಷಯದಲ್ಲಿ ಆಸ್ಥೆಯಿದೆ; ನಿಜಕ್ಕೂ ಆಕೆ ಒಕ್ಕಲಗಿತ್ತಿಯೇ (ರೈತಳು) ಆಗಿಹೋಗಿದಾಳೆ.೧೩೨

ಬೇಗಂ ಮೊಹಮ್ಮದ್ ಅಲೀ

ಮೌಲಾನಾ ಮೊಹಮ್ಮದ್ ಅಲೀಯವರ ಬೇಗಂ ಸಾಹಿಬಾರ ಧೈರ್ಯವನ್ನು ಕಂಡು ನನಗೆ ಆಚ್ಚರಿಯಾಗುತ್ತದೆ. ವಾಲ್ಟೇರಿನಲ್ಲಿ ಅವರ ಪತಿ ಮೌಲಾನಾ ಸಾಹೇಬರು ದಸ್ತಗಿರಿಯಾದಾಗ, ಅವರನ್ನು ಭೆಟ್ಟಿಯಾಗಲು ಈಕೆ ಹೋಗಿದ್ದರು. ಭೆಟ್ಟಿಯಾಗಿ ವಾಪಸು ಬಂದಾಗ, “ನಿಮ್ಮ ಮನಸ್ಸಿಗೆ ಕಳವಳವಾಗಿದೆಯೇನು ?”—ಎಂದು ಕೇಳಿದೆ. ಆಕೆ ಹೇಳಿದರು—

"ನನಗೆ ಸ್ವಲ್ಪವೂ ಕಳವಳವಿಲ್ಲ. ಅವರ ಬಂಧನ ಆಗುವುದೇ ಇತ್ತು. ಅದು ಅವರ ಧರ್ಮವಷ್ಟೆ."

ಆಕೆಯ ಧ್ವನಿಯಲ್ಲೂ ಕಳವಳ ಕಂಡುಬರಲಿಲ್ಲ. ಆನಂತರ ಆಕೆ ನಮ್ಮೊಡನೆ ಪ್ರವಾಸಮಾಡುತ್ತಾ, ತಮ್ಮ ಧೈರ್ಯ ಗುಣವನ್ನು, ತೋರುತ್ತಿದಾರೆ. ಸ್ತ್ರೀಯರ ಹಾಗೂ ಪುರುಷರ ಸಭೆಗಳಿಗೆ ಆಕೆ 'ಬುರಕಾ' ಹಾಕಿಕೊಂಡೇ ಬರುತ್ತಾರೆ; ಹಾಗೂ ಸ್ವಲ್ಪದರಲ್ಲೇ ಹೃದಯ ತಲವನ್ನೂ ಸ್ಪರ್ಶಿಸುವಂಥ ಭಾಷಣ ಮಾಡುತ್ತಾರೆ. ಎಲ್ಲರೂ ಶಾಂತಿ ಪಾಲನೆ ಮಾಡಬೇಕು, ಚರಖದಿಂದ ನೂಲಬೇಕು, ಖಾದಿಯನ್ನೇ ಧರಿಸಬೇಕು, ಎಂಬುದಾಗಿ ಹೇಳುತ್ತಾರೆ. ಮುಸಲ್ಮಾನರಿಂದ ಚಂದಾ ಬೇಡುತ್ತಾರೆ. ಕೆಲವೇ ತಿಂಗಳ ಹಿಂದೆ ಆಕೆ ಮಿತಿಮೀರಿ ಸಿಂಗಾರ-ಅಲಂಕಾರ ಮಾಡಿಕೊಳ್ಳುತ್ತಿದ್ದರು. ನವುರಾದ ಬಟ್ಟೆಯನ್ನಲ್ಲದೆ, ಬೇರೆಯದನ್ನು ಮುಟ್ಟುತ್ತಿರಲಿಲ್ಲ. ಆದರೆ, ಇಂದು ಒರಟಾದ ಹಸುರು ಬಣ್ಣದ ಖಾದಿ ಗುಡ್ಡೆ ಉಡುತ್ತಾರೆ. ಹಿಂದೂ ಸ್ತ್ರೀಯರಿಗಿಂತ ಮುಸಲ್ಮಾನರ ಸ್ತ್ರೀಯರಿಗೆ ಹೆಚ್ಚು ಬಟ್ಟೆ ಬೇಕು. ಅದರಲ್ಲೂ ಬೇಗಂ ಸಾಹಿಬಾರ ದೇಹ ಹಗುರವಾದುದೇನಲ್ಲ. ಆದರೂ ಧರ್ಮದ ಸಲುವಾಗಿ ಆಕೆ ಈ ರೀತಿಯ ತಪಸ್ಸು ಮಾಡುತ್ತಿದಾರೆ. ತತ್ಫಲವಾಗಿ ಅವರ ದರ್ಶನ ಮಾಡಲು ಅಲ್ಲಲ್ಲಿ ಮುಸಲ್ಮಾನ ಸ್ತ್ರೀಯರೂ ಬರುತ್ತಿದಾರೆ.೧೩೪

•

ಬೇಗಂ ಮೊಹಮ್ಮದ್ ಅಲೀ ಅಂಗೋರಾ ನಿಧಿಗಾಗಿ ಹಣ ಕೂಡಿಸುತ್ತಿರುವ ಮೂಲಗಳಿಂದ ಬಹುಶಃ ಮೌಲಾನಾ ಸಾಹೇಬರಿಗೂ ಹಣ ಸಿಕ್ಕುತ್ತಿದ್ದಿಲ್ಲ. ಅವರ ಭಾಷಣ ಮೌಲಾನಾ ಸಾಹೇಬರ ಭಾಷಣಕ್ಕಿಂತ ಸುಂದರವಾಗಿರುವುದೆಂಬ ಮಾತನ್ನು ನಾನು ಮೊದಲೇ ಹೇಳಿದೇನೆ.೧೩೫

ಡಾ. ಮೆಹ್ತಾ

ಡಾ. ಮೆಹ್ತಾ ಅವರ ಕಾಲಿನ ಗಾಯಕ್ಕೆ ನಂಜುಹತ್ತಿ, ಕಾಲನ್ನೇ

ಕತ್ತರಿಸಿಬಿಡಬೇಕಾಗಿ ಬಂದಿತು. ಅದರಿಂದ ಅವರ ಸ್ಥಿತಿ ಗಂಭೀರವಾಗಿದೆಯೆಂದು ತಾರು ಬಂದಿತು. ಬೆಳಗ್ಗೆ ಆಪರೇಷನ್ (ಶಸ್ತ್ರಕ್ರಿಯೆ) ಚೆನ್ನಾಗಿಯೇ ನಡೆಯಿತು. ಸ್ಥಿತಿ ಸಮರ್ಪಕವಾಗಿದೆಯೆಂಬುದಾಗಿ ತಂತಿಬಂದಿತು. ಅದಕ್ಕೆ ಬಾಪೂ ಉತ್ತರ ಕಳುಹಿಸಿದರು—"ಬಹಳ ಸಂತೋಷ, ಪ್ರತಿದಿನವೂ ತಂತಿ ಕಳುಹಿಸುತ್ತಿರಿ." ಶಸ್ತ್ರಕ್ರಿಯೆಯ ಪರಿಣಾಮವನ್ನು ಸಹಿಸುವ ಶಕ್ತಿ ಡಾಕ್ಟರಿಗೆ ಇರುವುದೆಂಬ ಮಾತು ನಡೆದಿರುವಾಗಲೇ "ಡಾಕ್ಟರಿಗೆ ಬಹಳ ಜ್ವರ" ಎಂಬುದಾಗಿ ತಾರು ಬಂದಿತು. ಅದರ ಹಿಂದೆಯೇ ಇನ್ನೂ ಒಂದು ತಾರು—"ಡಾಕ್ಟರಿಗೆ ನ್ಯುಮೋನಿಯಾ ಸ್ಥಿತಿ ಸೂಕ್ಷ್ಮ...." ಅದರ ನಂತರವೂ ಬಾಪೂ ಹೇಳಿದರು—"ರತಿಲಾಲ್ ಹಾಗೂ ಮಗನರ ಮಾತಿನ ಮೇಲಿಂದ ಡಾಕ್ಟರ್ ಈಗಲೂ ಬದುಕಿಕೊಂಡಾರು ಎನಿಸುತ್ತದೆ" —ಹೀಗೆ ಬಾಪುವಿನ ಬಾಯಿಂದಲೂ ಮಾನವೋಚಿತವಾದ ಮಾತುಗಳು ಹೊರಬೀಳುತ್ತಿದ್ದವು.

ಇಂದು ಡಾ. ಮೆಹ್ತಾ ನಿಧನರಾದರೆಂದು ತಾರು ಬಂದಿತು. ನಿನ್ನೆ ರಾತ್ರಿ ೯-೪೫ ಕ್ಕೆ ತೀರಿಕೊಂಡರು. ಬಾಪೂಗೆ ಎಷ್ಟು ದುಃಖವಾಯಿತೆಂಬುದನ್ನು ಈ ತಂತಿಯ ಮೇಲಿಂದ ಊಹಿಸಬಹುದು.

"ಈಶ್ವರನ ಇಚ್ಛೆ. ನಿನಗೂ ನಿನ್ನ ಮಾತೆಗೂ ಆಶ್ವಾಸನ. ತಂದೆಯವರ ಉದಾತ್ತ ಪರಂಪರೆಗಳನ್ನು ಅಂದರೆ, ವ್ಯಾಪಾರದಲ್ಲಿ ಪ್ರಾಮಾಣಿಕತೆ, ಅತಿಥ್ಯದಲ್ಲಿ ಔದಾರ್ಯ, ದಾನಶೀಲ ಸ್ವಭಾವ—ಇವೆಲ್ಲವನ್ನು ರಕ್ಷಿಸಿಕೊಂಡು ಬರಬೇಕು. ಸರದಾರರೂ, ಮಹಾದೇವರೂ ನನ್ನ ಶೋಕದಲ್ಲಿ ಭಾಗಿಗಳು, ನನ್ನ ಮಾತೇನು ಹೇಳಲಿ? ಆಜೀವ ಪ್ರಾಮಾಣಿಕ ಮಿತ್ರರೊಬ್ಬರು ಅಗಲುವಿಕೆಯಿಂದ ಹೃದಯ ಚುರುಚುರು ಆಗುತ್ತಿದೆ. ನನಗೆ ವಿದ್ಯಮಾನವನ್ನೆಲ್ಲ ತಿಳಿಸುತ್ತಿರಿ. ಭಗವಂತ ಎಲ್ಲರಿಗೂ ಒಳಿತು ಮಾಡಲಿ."

ಬಡಪಾಯಿ ಎರಡು ತಿಂಗಳ ಹಿಂದೆ ತಾನೆ ಸತ್ಯಾಗ್ರಹಕ್ಕೆ ಸೇರಲು ಅನುಮತಿ ಬೇಡಿದ್ದರು. ನವೆಂಬರ್ ತಿಂಗಳಲ್ಲಿ ಬಾಪುವನ್ನು ಭೆಟ್ಟಿಯಾಗುವ ಆಶೆ ಇಟ್ಟುಕೊಂಡಿದ್ದರು. ಮಣಿಲಾಲ್, ರೇವಾಶಂಕರ್, ಜಗಜೀವನರಿಗೆ ಪತ್ರ ಬರೆದರು—

'ಸುಂದರ ಭವನ ಇದೀಗ ನಾಶವಾಗುವ ಅಪಾಯ ಕಾಣಿಸಿಕೊಂಡಿದೆ.

ನಿಮ್ಮೆಲ್ಲರಿಗೂ ಡಾಕ್ಟರರ ವಿಯೋಗದಿಂದ ಕೆಟ್ಟೆನಿಸುವುದು ಖಂಡಿತ. ಆದರೆ, ನನ್ನ ಸ್ಥಿತಿ ವಿಚಿತ್ರವಾಗಿದೆ. ಈ ಜಗತ್ತಿನಲ್ಲಿ ಡಾಕ್ಟರರಿಗಿಂತ ಹೆಚ್ಚಿನ ಮಿತ್ರರು ನನಗಾರೂ ಇರಲಿಲ್ಲ. ನನ್ನ ಪಾಲಿಗೆ ಅವರು ಜೀವಂತರಾಗಿಯೇ ಇದ್ದಾರೆ. ಆದರೆ, ಇಲ್ಲಿ ಕುಳಿತಿರುವ ನಾನು ಅವರ ಮನೆಯನ್ನು ಅವಿಚ್ಛಿನ್ನ ವಾಗಿಡಲು ಸ್ವಲ್ಪವಾದರೂ ನೆರವಾಗಲು ಆಗುತ್ತಿಲ್ಲವಲ್ಲಾ ಎಂಬುದಾಗಿ ನನ್ನ ಮನಸ್ಸಿಗೆ ಕಸಿವಿಸಿಯಾಗುತ್ತಿದೆ. ನಿಮ್ಮ ಕೈಯ್ಯಲ್ಲಾದುದೆಲ್ಲವನ್ನು ಮಾಡಿರಿ. ಡಾಕ್ಟರರ ಹೆಸರನ್ನು ಅಮರವಾಗಿಸುವುದರಲ್ಲಿ ನೀವು ಎಷ್ಟರ ಮಟ್ಟಿಗೆ ಭಾಗವಹಿಸಬಲ್ಲಿರೆಂಬುದನ್ನು ತಿಳಿಸಿ."

ನಾನಾಲಾಲ್ ಮೆಹ್ತಾ ಅವರಿಗೆ ಹೀಗೆ ಬರೆದರು :

ಡಾಕ್ಟರರು ತೀರಿಕೊಂಡುದರಿಂದ ನನ್ನ ಸ್ಥಿತಿ ನಿಮ್ಮೆಲ್ಲರಿಗಿಂತ ಹೆಚ್ಚಾಗಿ ಕೆಟ್ಟದೆ. ಯಾರನ್ನು ನಾನು ನನ್ನ ಎಲ್ಲರಿಗಿಂತ ಹಳೆಯ ಮಿತ್ರರೆಂದು ಹೇಳಿಕೊಳ್ಳುವೆನೋ, ಅವರು ಪಯಣ ಬೆಳೆಸುತ್ತಿದ್ದರೆ, ನಾನು ಪಂಜರದಲ್ಲಿ ಸಿಕ್ಕಿಕೊಂಡು ಏನು ಮಾಡುವುದಕ್ಕೂ ಸಾಧ್ಯವಿಲ್ಲದೆ ಹೋಗಿರುವುದರಿಂದ ಬಹಳ ಸಂಕಟವಾಗುತ್ತದೆ. ಆದರೆ, ಇದರಲ್ಲೂ ಭಗವಂತನ ರಹಸ್ಯ ಇದ್ದೀತು ; ಡಾಕ್ಟರರ ಭವನವನ್ನು ನಡೆಸಿಕೊಂಡು ಹೋಗಲು ನಿಮಗೆ ಎಷ್ಟು ಶಕ್ತಿ ಇದೆಯೋ ನನಗೆ ತಿಳಿಯದು. ಇದ್ದಷ್ಟು ಶಕ್ತಿಯನ್ನು ಉಪ ಯೋಗಿಸಿರಿ. ಡಾಕ್ಟರರ ಹೆಸರು ನಿಷ್ಕಳಂಕವಾಗಿ ಇರಬೇಕು, ಅವರ ಗುಣ ಗಳನ್ನು ಅವರ ಮಕ್ಕಳು ಉಳಿಸಿಕೊಳ್ಳಬೇಕು—ಇದೇ ಆಗಬೇಕಾಗಿರುವ ಕೆಲಸ.

ದೊಡ್ಡ ಮಗ ಛಗನ್‌ಲಾಲರಿಗೆ ಹೀಗೆ ಬರೆದರು :

ಡಾಕ್ಟರರ ಸ್ವರ್ಗವಾಸದ ನಿಜವಾದ ವಿಚಾರ ಈಗ ನಿಮ್ಮ ನಡವಳಿಕೆ ಯಲ್ಲಿ ಕಂಡುಬರಬೇಕು. ಡಾಕ್ಟರರ ಹಲವು ಸದ್ಗುಣಗಳೇ ಅವರ ನಿಜ ವಾದ ಕುಲಧನ. ಅದೇ ನಿಮ್ಮ ಆಸ್ತಿ. ನಿಮ್ಮ ತಮ್ಮಂದಿರಿಗೆ ಸ್ವಲ್ಪವೂ ದುಃಖವಾಗದಂತೆ ನೋಡಿಕೊಳ್ಳಬೇಕು. ನನ್ನ ಆಜೀವ ಸಂಗಾತಿ ಹೋಗುತ್ತಿರುವಾಗ ನಾನು ಹೆಳುವನ ಸ್ಥಿತಿಯಲ್ಲಿ (ಜೈಲಿನಲ್ಲಿ) ಇರುವುದು ನನಗೆ ಕೆಟ್ಟೆನಿಸುತ್ತಿದೆ. ಹಾಗಿಲ್ಲದಿದ್ದರೆ, ಈಗ ನಿಮ್ಮ ಜತೆಗೆ ಇರುತ್ತಿದ್ದೆ. ಆಗ ಬಹುಶಃ ಡಾಕ್ಟರು ತಮ್ಮ ಕೊನೆಯ ಉಸಿರನ್ನು ನನ್ನ ತೊಡೆಯ

ಮೇಲೆಯೇ ಬಿಡುತ್ತಿದ್ದರು. ಆದರೆ, ನಾವೊಂದು ಬಗೆದರೆ, ವಿಧಿ ತಾ ಬೇರೊಂದು ಬಗೆವುದು. ಆದಕಾರಣ, ಟಪಾಲು ಮೂಲಕ ಏನು ಮಾಡಲು ಸಾಧ್ಯವೋ ಅಷ್ಟನ್ನೇ ನಾನು ಮಾಡಬಲ್ಲೆ.

ಪೋಲಕರಿಗೆ ಹೀಗೆ ಬರೆದರು :

ಡಾ. ಮೆಹ್ತಾ ಸಾಗಿಹೋದರು. ನಾನು ನನ್ನ ಆಜೀವ, ಪ್ರಾಮಾಣಿಕ ಮಿತ್ರರನ್ನು ಕಳೆದುಕೊಂಡೆ. ನನ್ನ ಪಾಲಿಗೆ ಅವರು ಜೀವಂತರಾಗಿ ಇದ್ದಾಗ ಇದ್ದುದಕ್ಕಿಂತ ಸತ್ತಮೇಲೆಯೇ ಹೆಚ್ಚು ಜೀವಂತರಾಗಿರುವಂತೆ ಅನಿಸುತ್ತದೆ, ಕಾರಣ ಈಗ ನೀವು ಅವರ ಎಲ್ಲ ಸದ್ಗುಣಗಳನ್ನು ಹೆಚ್ಚಾಗಿ ನೆನಪು ಮಾಡಿಕೊಳ್ಳುವಿರಿ. ಈ ಸ್ಮರಣೆ ಪವಿತ್ರವಾದ 'ನಿಧಿ.' ಮಗನಲಾಲರಿಗೆ ಪತ್ರವನ್ನು ಇದರೊಡನೆ ಕಳುಹಿಸಿದ್ದೇನೆ. ಆತನನ್ನು ತಂದೆಗೆ ಯೋಗ್ಯನಾದ ಮಗನನ್ನಾಗಿ ಮಾಡಲು ನೀವು ಸಹಾಯ ಮಾಡಬೇಕು. ಚಿಂತೆಮಾಡದೆ ವ್ಯಾಸಂಗದಲ್ಲಿ ತೊಡಗಬೇಕೆಂದು ಆತನಿಗೆ ಸಲಹೆ ಕೊಟ್ಟಿದ್ದೇನೆ. ಡಾ. ಮೆಹ್ತಾ ಅವರ ಶರೀರ ಎಷ್ಟೋ ಕಾಲದಿಂದ ಜರ್ಝರಿತವಾಗಿತ್ತು. ಆದರೂ ಅವರ ವ್ಯವಹಾರ-ದಕ್ಷತೆ ಮೊದಲಿದ್ದಂತೆಯೇ ಕೊನೆಯವರೆಗೂ ಇತ್ತು. ಆದಕಾರಣ ಮಗನಲಾಲನಿಗೆ ಮಗನಲಾಲನ ವಿದ್ಯಾಭ್ಯಾಸಕ್ಕೆ ಅವರು ವ್ಯವಸ್ಥೆ ಮಾಡಿಯೇ ಇರಬೇಕು. ಅದು ಗೊತ್ತಿರಬೇಕು. ಈ ವೇಳೆಯಲ್ಲಿ ನಿಮ್ಮೊಡನೆ ಇರಲು ಶಕ್ಯವಿಲ್ಲವಲ್ಲಾ ಎಂಬುದೇ ನನ್ನದುಃಖ. ಆದರೆ, ನಾನು ಬಗೆದಂತೆ ಆದೀತೆ? ಆತ (ಭಗವಂತ) ಬಗೆದಂತೆಯೇ ಆಯಿತು.

ರಾತ್ರಿ ಮಲಗುವಾಗ ಬಾಪೂ ಹೇಳಿದರು—

ಬುದ್ಧಿಯ ಪ್ರಭಾವ ಮನಸ್ಸಿನ ಮೇಲೆ ಆಗದಂತೆ ಜ್ಞಾನ ಪರಿಪಕ್ವವಾಗಬೇಕಾದುದು ಆವಶ್ಯಕ. ಡಾಕ್ಟರರು ಬದುಕುವ ಹಾಗಿರಲಿಲ್ಲ; ಅವರ ಶರೀರ ನಾಶವಾಗಲು ಯೋಗ್ಯವಾಗಿತ್ತು-ಎಂಬುದನ್ನು ತಿಳಿದೂ ತಿಳಿದೂ ಇಷ್ಟೇಕೆ ಕಸಿವಿಸಿ?

ನಾನು ಕೇಳಿದೆ—"ತಮ್ಮ ಪ್ರಿಯ ಜನರ ಅಥವಾ ಅನೇಕ ವರುಷಗಳ ಕಾಲ ನಿಕಟ ಪರಿಚಯ ಹೊಂದಿದ್ದವರ ಮರಣದ ಸುದ್ದಿ ಕೇಳಿ,

ಮೇಲಿಂದ ಮೇಲೆ ಅವರ ನೆನಪು ಬಂದರೆ, ಅದರಲ್ಲಿ ಅಸ್ವಾಭಾವಿಕವಾದು ದೇನು?" ಬಾಪೂ ಹೇಳಿದರು:—

"ನೆನಪು ಆಗಲಿ. ಆದರೆ ದುಃಖ ಏಕೆ? ಮರಣಕ್ಕೂ ವಿವಾಹಕ್ಕೂ ಭೇದ ಏಕೆ? ವಿವಾಹ ಪ್ರಸಂಗದ ನೆನಪು ಬಂದರೆ ಆನಂದವೇ ಆನಂದ ವಾಗುತ್ತದೆ; ಹಾಗೆಯೇ ಮರಣದ ಸ್ಮರಣೆಯಿಂದಲೂ ಆನಂದ ಏಕೆ ಆಗ ಬಾರದು? ಮಗನಲಾಲರು ತೀರಿಕೊಂಡಾಗ ಆದುದಕ್ಕಿಂತ ಹೆಚ್ಚಿನ ಕಳವಳ ಈಗ ನನಗೆ ಆಗಿದೆ. ಅದಕ್ಕೆ ಕಾರಣ ಇಷ್ಟೆ: ನಾನು ಹೊರಗೆ ಇದ್ದಿದ್ದರೆ ಈ ಕುಟುಂಬವನ್ನು ಒಳಿತಾಗಿ ಸಂಭಾಳಿಸುತ್ತಿದ್ದೆ. ಆದರೆ, ಇದೂ ತಪ್ಪೇ. ಈ ಹೆಳವನ ಸ್ಥಿತಿಯೇ ಏಕೆ ಸರಿಯಿರಬಾರದು?"

ಡಾಕ್ಟರರ ಉದಾತ್ತ ಗುಣಗಳನ್ನು ಸ್ಮರಿಸಿ, ತರ್ಪಣಕೊಟ್ಟರು.೧೩೬

ಹಜರತ್ ಮೋಹಾನಿ

ಮೌಲಾನಾ ಹಜರತ್ ಮೋಹಾನಿ ನಮ್ಮ ಪೈಕಿ ಬಹಳ ಧೈಯಶಾಲಿ ಗಳು. ಎಷ್ಟು ಧೈರ್ಯಶಾಲಿಗಳೋ ಅಷ್ಟೇ ದೃಢಚಿತ್ತರೂ ಹೌದು; ಸ್ಪಷ್ಟ ವಾದಿಗಳೂ ಹೌದು. ಬ್ರಿಟಿಷ್ ಸರಕಾರದ ಹಾಗೂ ಆಂಗ್ಲೇಯರ ಹೃದಯದಲ್ಲಿರುವ ತಿರಸ್ಕಾರದಮುಂದೆ, ಮಾಪಿಳ್ಳೆಗಳಲ್ಲಿ ಅವರಿಗೆ ಯಾವ ದೋಷವೂ ಕಂಡುಬರುವುದಿಲ್ಲ. ಯುದ್ಧ ಸಮಯದಲ್ಲಿ ಏನು ಮಾಡಿದರೂ ಸರಿ–ಎಂಬುದು ಮೌಲಾನಾ ಸಾಹೇಬರ ಅಭಿಪ್ರಾಯ. ಮಾಪಿಳ್ಳೆಗಳು ಧರ್ಮದ ಸಲುವಾಗಿಯೇ ಈ ಸಂಗ್ರಾಮ ಹೂಡಿರುವುದರಿಂದ ಅವರ ಮೇಲೆ ಯಾವುದೇ ಬಗೆಯ ದೋಷಾರೋಪಣೆ ಮಾಡಲಿಕ್ಕಾಗದೆಂದು ಅವರ ಭಾವನೆ. ಇದು ಧರ್ಮ ಹಾಗೂ ಸದಾಚಾರದ ವಿಭಕ್ತ–ರೂಪ. ಮೌಲಾನರ ದೃಷ್ಟಿಯಲ್ಲಿ ಧರ್ಮದ ಹೆಸರಿನಲ್ಲಿ ಅಧರ್ಮಾಚರಣೆಯೂ ಧಾರ್ಮಿಕವೆನಿಸಿಕೊಳ್ಳುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಇಸ್ಲಾಮ್ ಈ ರೀತಿಯ ವಿಚಾರಗಳನ್ನು ಪ್ರತಿಪಾದಿಸುವುದಿಲ್ಲ. ಈ ವಿಷಯದಲ್ಲಿ ನಾನು ಅನೇಕ ಮುಸಲ್ಮಾನರೊಡನೆಯೂ ಮಾತನಾಡಿದೇನೆ. ಅವರು ಮೌಲಾನರ ಅಭಿ

ಪ್ರಾಯವನ್ನು ಒಪ್ಪುವುದಿಲ್ಲ. ಮೌಲಾನರ ಮಾತನ್ನು ಕೇಳಬಾರದೆಂದೇ ನಾನು ಮಲಬಾರಿನ ಸಂಗಾತಿಗಳಿಗೆ ಹೇಳುವೆ. ಧರ್ಮದ ವಿಷಯದಲ್ಲಿ ಇಂಥ ವಿಚಿತ್ರವಾದ ಅಭಿಪ್ರಾಯವನ್ನು ಹೊಂದಿದ್ದರೂ, ಹಿಂದು-ಮುಸ್ಲಿಂ ಐಕ್ಯತೆ, ರಾಷ್ಟ್ರೀಯ ಭಾವನೆಗಳನ್ನು ಅವರಿಗಿಂತ ಹೆಚ್ಚು ನಿಷ್ಠೆಯಿಂದ ಸಮರ್ಥಿಸುವವರು ಬೇರೊಬ್ಬರಿಲ್ಲ. ಅವರ ಹೃದಯ ಅವರ ಬುದ್ಧಿಗಿಂತ ಉತ್ತಮವಾದದು. ಆದರೆ, ಈಗ ಅದು ತಪ್ಪು ಮಾರ್ಗ ಹಿಡಿದಿದೆ.೧೩೭

ಎನ್. ಜಿ. ರಂಗಾ

ಪ್ರೊಫೆಸರ್ ರಂಗಾ ಅವರ ಪರಿಚಯ ಭಾಗ್ಯ ನನಗೆ ಬಹುಕಾಲದಿಂದ ಇದೆ. ಅವರು ಧೈರ್ಯಶಾಲಿಗಳೂ, ಸುಸ್ವಭಾವದವರೂ ಆದ ವ್ಯಕ್ತಿ; ಒಳ್ಳೆಯ ಸಂಗಾತಿಗಳು ; ಕಾರ್ಯಕರ್ತರು ೧೩೮

ಚಕ್ರವರ್ತಿ ರಾಜಗೋಪಾಲಾಚಾರ್ಯ

ರಾಜಾಜಿ ಎಂದರೆ ಬಂಗಾರ. ಅವರ ಮಾತಿಗೆ ಪ್ರಪಂಚದ ಯಾವುದೇ ಭಾಗದಲ್ಲಾದರೂ ಮಾನ್ಯತೆ ಉಂಟು.೧೩೯

ರಾಜಾಜಿ ಅವರ ನಿಕಟ ಪರಿಚಯ ಬಹುಕಾಲದಿಂದ ನನಗಿದೆ. ಅವರು ವೀರಪುರುಷರು ; ಅವರಿಗೆ ಯಾರ ಸಹಾಯದ ಆವಶ್ಯಕತೆಯೂ ಇಲ್ಲ. ಅನೇಕ ಘಂಟೆಗಳ ಮಾತಿರಲಿ, ಅನೇಕ ನಿಮಿಷಗಳವರೆಗೆ ಸಹ ಮಾನಹಾನಿಯ ಗ್ಲಾನಿಯನ್ನು ಹೃದಯದಲ್ಲಿ ಇಟ್ಟುಕೊಳ್ಳದಂಥ ಅನಾಸಕ್ತರು ಅವರು. ಅವರಲ್ಲಿ ಒಳ್ಳೆಯ ವಿನೋದ ಪ್ರವೃತ್ತಿಯೂ ಇರುವುದರಿಂದ, ಯಾರಾದರೂ ಅಪಹಾಸ್ಯಮಾಡಿದರೂ, ಅನ್ಯಥಾ ಭಾವಿಸುವುದಿಲ್ಲ.

ರಾಜಾಜಿ ನನ್ನ ಅತ್ಯಂತ ಹಳೆಯ ಮಿತ್ರರಲ್ಲಿ ಒಬ್ಬರು. ಹಾಗೂ

ನನ್ನ ಆದರ್ಶಗಳನ್ನು ಎಲ್ಲರಿಗಿಂತ ಹೆಚ್ಚಾಗಿ ಅವರೇ ಪಾಲಿಸುತ್ತಿದ್ದರೆಂದು ಹೇಳಲಾಗುತ್ತಿತ್ತು. ೧೯೪೨ರಲ್ಲಿ ನನಗೂ ಅವರಿಗೂ ಮತಭೇದ ಉಂಟಾದುದನ್ನು ನಾನು ಬಲ್ಲೆ. ಬಹಿರಂಗ ಸಭೆಯಲ್ಲಿ ನನ್ನನ್ನು ವಿರೋಧಿಸಿದುದಕ್ಕಾಗಿ ಅವರಲ್ಲಿ ನನಗೆ ಗೌರವವಿದೆ. ಅವರು ದೊಡ್ಡ ಸಮಾಜ-ಸುಧಾರಕರು, ತಮಗೆ ಒಪ್ಪಿಗೆಯಾದುದನ್ನು ನಿರ್ಭಯವಾಗಿ ಮಾಡಿ ತೋರುವವರು. ಅವರ ಪ್ರಾಮಾಣಿಕತೆ ಹಾಗೂ ರಾಜನೈತಿಕ ಬುದ್ಧಿವಂತಿಕೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ.೧೪೦

ರಾಜೇಂದ್ರ ಪ್ರಸಾದ್

ನನ್ನೊಡನೆ ಕೆಲಸಮಾಡುವ ಅತ್ಯಂತ ಉದಾತ್ತ ಮಂದಿಯಲ್ಲಿ ರಾಜೇಂದ್ರ ಬಾಬು ಒಬ್ಬರು. ಹರಿಜನ ಕಾರ್ಯ ಎಷ್ಟರಮಟ್ಟಿಗೆ ನನ್ನದೋ, ಅಷ್ಟರಮಟ್ಟಿಗೆ ಅವರದೂ ಹೌದು; ಹಾಗೆಯೇ ಬಿಹಾರಿನ ಕೆಲಸ ಎಷ್ಟರಮಟ್ಟಿಗೆ ಅವರದೋ ಅಷ್ಟರಮಟ್ಟಿಗೆ ನನ್ನದೂ ಹೌದು; ಆದರೆ ಪರಮಾತ್ಮ ನನ್ನನ್ನು ಹೇಗೆ ಹರಿಜನ ಕಾರ್ಯಕ್ಕಾಗಿಯೇ ಕರೆಸಿಕೊಂಡಿದಾನೋ ಹಾಗೆಯೇ ಅವರನ್ನು ಬಿಹಾರಿನ ಕೆಲಸಕ್ಕಾಗಿಯೇ ಕರೆಸಿಕೊಂಡಿದಾನೆ.೧೪೧

ರಾಜೇಂದ್ರ ಬಾಬು ನಮ್ಮ ಉತ್ಕೃಷ್ಟ ಸಹ-ಕಾರ್ಯಕರ್ತರಲ್ಲಿ ಒಬ್ಬರು.೧೪೨

ರಾಜೇಂದ್ರಬಾಬುಗಳ ತ್ಯಾಗ ನಮ್ಮ ದೇಶಕ್ಕೆ ಗೌರವಾಸ್ಪದವಾದ ವಿಷಯ. ನೇತೃತ್ವದ ಸಲುವಾಗಿ ಅವರಂಥ ಆಚರಣೆಯೇ ಬೇಕು. ರಾಜೇಂದ್ರಪ್ರಸಾದರಲ್ಲಿ ಇರುವಂಥ ನಮ್ರತಾಪೂರ್ವಕವಾದ ವ್ಯವಹಾರ ಹಾಗೂ ಪ್ರಭಾವ ಬೇರೆ ಯಾವ ನಾಯಕರಲ್ಲೂ ಕಂಡುಬರುವುದಿಲ್ಲ.೧೪೩

ಮಹಾದೇವ ಗೋವಿಂದ ರಾನಡೆ

ದಿವಂಗತ ಗೋಖಲೆಯವರು ಹೇಳುತ್ತಿದ್ದಂತೆ ರಾನಡೆಯವರ ತೀಕ್ಷ್ಣ ದೃಷ್ಟಿಯಿಂದ ಯಾವೊಂದು ವಸ್ತುವೂ ನುಸುಳಿಕೊಂಡಿರಲಿಲ್ಲ. ತಮ್ಮ ಜನಕ್ಕೆ ಸ್ವಲ್ಪವಾದರೂ ಉಪಯೋಗವಾಗುವಂಥ ಯಾವೊಂದು ವಸ್ತುವನ್ನೂ ಅವರು ಗೌಣವೆಂದು ಭಾವಿಸಿರಲಿಲ್ಲ.೧೪೪

ರಮಾಬಾಯಿ ರಾನಡೆ

ರಮಾಬಾಯಿ ರಾನಡೆ ಅವರ ಹೆಸರು ದಕ್ಷಿಣದಲ್ಲಿ ಪ್ರಸಿದ್ಧವಾಗಿರುವಷ್ಟು ಹಿಂದೂಸ್ಥಾನದಲ್ಲಿ ಆಗಿಲ್ಲ. ಈ ದೇವಿಯರು ದಿವಂಗತ ನ್ಯಾಯಮೂರ್ತಿ ರಾನಡೆ ಅವರ ಹೆಸರಿಗೆ ಕಳೆಕಟ್ಟಿದ್ದಾರೆ. ಅವರ ಮರಣದಿಂದ ಹಿಂದೂ ಸಮಾಜಕ್ಕೆ ಬಹಳ ಹಾನಿಯಾಗಿದೆ.

ರಮಾಬಾಯಿಯವರಂತೆ ತಮ್ಮ ವೈಧವ್ಯಕ್ಕೆ ಕಳೆಕಟ್ಟಿರುವ ಹೆಣ್ಣು ಮಕ್ಕಳು ಅಪರೂಪ. ಪುಣೆಯ ಸೇವಾಸದನದಲ್ಲಿ ಒಂದು ಸಾವಿರ ಮಂದಿ ಬಾಲಿಕೆಯರು ಮತ್ತು ಮಹಿಳೆಯರು ಶಿಕ್ಷಣ ಪಡೆಯುತ್ತಿದ್ದಾರೆ. ಈ ಸೇವಾಸದನ ಈಗ ಗಳಿಸಿರುವ ಗೌರವವನ್ನು ರಮಾಬಾಯಿಯವರ ಅನನ್ಯ ಭಕ್ತಿಯಿಂದಲ್ಲದೆ–ಎಲ್ಲರಿಗೂ ಎಂದಿಗೂ ಗಳಿಸುತ್ತಿರಲಿಲ್ಲ. ರಮಾಬಾಯಿ ಅವರು ಇದೊಂದೇ ಕಾರ್ಯಕ್ಕೆ ತಮ್ಮ ಜೀವನವನ್ನು ಅರ್ಪಣೆ ಮಾಡಿದ್ದರು.

ಅನನ್ಯ ಭಕ್ತಿ ಎಂಬುದೇ ವೈದವ್ಯದ ಅರ್ಥ. ಪತಿವ್ರತೆ ಎಂದರೆ ಶುದ್ಧ ಪ್ರಾಮಾಣಿಕತೆ–ಸ್ವಾಮಿಭಕ್ತಿ. ಸಾಮಾನ್ಯ ಪ್ರಾಮಾಣಿಕತೆಯ ಸಂಬಂಧ ಶರೀರದೊಡನೆ; ಅಂತೆಯೆ, ದೇಹದೊಡನೇ ಅದು ಕೊನೆಗೊಳ್ಳುತ್ತದೆ. ವೈಧವ್ಯದಲ್ಲಿರುವ ಪ್ರಾಮಾಣಿಕತೆ ಆತ್ಮಕ್ಕೆ ಸಂಬಂಧಿಸಿದುದು. ಹಿಂದೂ ಧರ್ಮ ವೈಧವ್ಯಕ್ಕೆ ಧರ್ಮದ ಸ್ಥಾನಕೊಟ್ಟು, ವಿವಾಹ ವಸ್ತುತಃ ದೇಹದೊಡನೆ ಆಗದೆ ಆತ್ಮದೊಡನೆ ಆಗುತ್ತದೆ–ಎಂಬುದನ್ನು ಸಿದ್ಧಪಡಿಸಿದೆ. ರಮಾಬಾಯಿ ರಾನಡೆ ಆತ್ಮದೊಡನೆ ವಿವಾಹ ಮಾಡಿಕೊಂಡಿದ್ದರು. ಅಂತಲೆ,

ಅವರು ಆತ್ಮಸಂಬಂಧವನ್ನು ಆಖಂಡಿತವಾಗಿರಿಸಿದರು. ಅಂತಲೆ ಅವರು ರಾನಡೆ ಅವರಿಗೆ ಪ್ರಿಯವಾಗಿದ್ದ ಕೆಲಸಗಳಲ್ಲಿ ತಮ್ಮಿಂದ ಮಾಡಲು ಸಾಧ್ಯವಿದ್ದ ಒಂದು ಕಾರ್ಯವನ್ನು ಕೈಗೊಂಡರು; ತಮ್ಮ ಸರ್ವಸ್ವವನ್ನು ಅದಕ್ಕೆ ಅರ್ಪಣೆ ಮಾಡಿ ವೈಧವ್ಯದ ಪೂರ್ಣ ಅರ್ಥವನ್ನು ಸಮಾಜಕ್ಕೆ ತಿಳಿಸಿಕೊಟ್ಟರು. ತನ್ಮೂಲಕ ರಮಾಬಾಯಿ ಅವರು ಸ್ತ್ರೀ ಜಾತಿಗೆ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ನಾನು ಸಾಸೂನ್ ಆಸ್ಪತ್ರೆಯಲ್ಲಿದ್ದಾಗ, ಕರ್ನಲ್ ಮ್ಯಾಡಕ್– ಉತ್ತಮವಾದ ಭಾರತೀಯ ದಾದಿಯರು ಈ ಆಸ್ಪತ್ರೆಯಲ್ಲಿಯೇ ಶಿಕ್ಷಣ ಪಡೆಯುವರೆಂದೂ, ಅವರೆಲ್ಲರೂ ಸೇವಾಸದನದಲ್ಲಿಯೇ ತಯಾರಾಗುವರೆಂದೂ ಇಡಿ ಭಾರತದಿಂದ ಅವರಿಗೆ ಬೇಡಿಕೆ ಬರುವುದೆಂದೂ—ನನಗೆ ತಿಳಿಸಿದರು.೧೪೫

ದಿಲೀಪ ಕುಮಾರ ರಾಯ್

"ಮನ ಮಂದಿರಮೆ ಪ್ರೀತಿ ಬಸಾಲೇ"—ಎಂಬ ಭಜನೆಯನ್ನು ಇಂದಿನ ಪ್ರಾರ್ಥನಾ ಸಭೆಯಲ್ಲಿ ಹಾಡಿದ ಶ್ರೀ ದಿಲೀಪ ಕುಮಾರ ರಾಯರ ಕಂಠ–ಮಾಧುರ್ಯ ಹಾಗೂ ಗಾಯನ–ಕಲೆ ನನಗೆ ರುಚಿಸಿತು. ಹಾಗೆ ನೋಡಿದರೆ ಇದು ಸಾಮಾನ್ಯ ವಿಷಯ. ಆದರೆ, ಇದಕ್ಕೆ ಸೊಬಗು ನೀಡುವ ಪರಿಗೇ ಕಲೆ ಎನ್ನುವುದು.೧೪೬

ಇಂದು ನೀವು ಬಹಳ ಮಧುರವಾದ ಭಜನೆಯನ್ನು ಕೇಳಿದಿರಿ. ಈ ಮಧುರವಾದ ಭಜನೆಯನ್ನು ಹಾಡಿದ ವ್ಯಕ್ತಿಯ ಪರಿಚಯ ನಿಮ್ಮೆಲ್ಲರಿಗೂ ಇರಲಿಕ್ಕಿಲ್ಲ. ಅವರ ಹೆಸರು ದಿಲೀಪ ಕುಮಾರ ರಾಯ್. ಅವರು ಎಲ್ಲೆಲ್ಲೂ ಪ್ರವಾಸಮಾಡಿದ್ದಾರೆ ಅವರಿಗೆ ಇರುವಂಥ ಕಂಠ ಮಾಧುರ್ಯ ಹಿಂದೂಸ್ತಾನದಲ್ಲಿ ಬಹಳ ಕಡಿಮೆ ಮಂದಿಗೆ ಇದ್ದೀತು. ಇಡೀ ಪ್ರಪಂಚದಲ್ಲೂ ಬಹಳ ಕಡಿಮೆ ಮಂದಿಗೆ ಇದ್ದೀತು ಎಂದು ಹೇಳಬಲ್ಲೆ. ಇವರು ಮಧ್ಯಾಹ್ನ ನನ್ನ ಬಳಿಗೆ ಬಂದರು. ನನಗೆ ಹೆಚ್ಚು ಕಾಲಾವಕಾಶ ಇರಲಿಲ್ಲ; ಹತ್ತು ನಿಮಿಷ

ಮಾತ್ರ ಇತ್ತು. ಆಗ ಅವರು ತಮ್ಮ ಮಧುರವಾದ ಸ್ವರಕ್ಕೆ ' ವಂದೇ ಮಾತರಂ' ಗೀತೆಯನ್ನು ಸೇರಿಸಿ, ಹಾಡಿದರು. ಬಂಗಾಳಿಯಾದುದರಿಂದ ಅವರಿಗೆ ತಿಳಿದಿರಲೇಬೇಕು. ಅವರು ಹಾಡಿ ತೋರಿಸಲು ಇಚ್ಛಿಸಿದುದರಿಂದ ಕೇಳಿದೆ. ಆದರೆ, ನಾನು ಸಂಗೀತ ಶಾಸ್ತ್ರಜ್ಞನಲ್ಲ. ಆಮೇಲೆ ಇಕ್ಬಾಲರ ' ಸಾರೆ ಜಹಾಸೆ ಅಚ್ಛಾ'—ಹಾಡಿದರು. ಅದನ್ನು ಒಂದು ಸ್ವರಕ್ಕೆ ಅಳವಡಿಸಿಕೊಂಡರು. ಅದು ನನಗೆ ಬಹಳ ಚೆನ್ನಾಗಿ ಕಂಡಿತು. ಇವರು ಋಷಿ ಅರವಿಂದರ ಆಶ್ರಮದಲ್ಲಿ (ಪುದುಚೇರಿಯಲ್ಲಿದೆ) ಅನೇಕ ವರುಷಗಳಿಂದ ಇದಾರೆ. ಆದರೆ ಅಲ್ಲಿ ಯಾವ ಶಿಕ್ಷಣವನ್ನೂ ಪಡೆಯಲಿಲ್ಲ. ಅಲ್ಲಿಗೆ ಹೋದಾಗಲೂ ಸಂಗೀತಶಾಸ್ತ್ರಜ್ಞರೇ ಆಗಿದ್ದರು. ಹಿಂದಿನಿಂದ ತಮ್ಮ ಕಲೆಯನ್ನು ಬೆಳೆಸಿ ಕೊಳ್ಳುತ್ತ ಬಂದಿದಾರೆ.೧೪೭

ಪ್ರಫುಲ್ಲಚಂದ್ರ ರಾಯರು

ಬಂಗಾಳದ ಜನ ಹುಚ್ಚರು. ದಾಸರ ಹಾಗೆಯೇ ಪ್ರಫುಲ್ಲ ಚಂದ್ರ ರಾಯರೂ ಹುಚ್ಚರು. ಅವರು ವೇದಿಕೆಯ ಮೇಲೇರಿ ಭಾಷಣ ಮಾಡ ತೊಡಗಿದರೆ, ನರ್ತನ ಮಾಡುತ್ತಿರುವಂತೆಯೇ ತೋರುತ್ತದೆ. ಅವರು ಜ್ಞಾನಿಗಳು ಎಂಬುದಾಗಿ ಯಾರಿಗೂ ಅನಿಸುವುದೇ ಇಲ್ಲ. ಭಾಷಣ ಮಾಡುವಾಗ ಅವರು ಕೈಬೀಸುವುದನ್ನು, ಕಾಲು ಝಾಡಿಸುವುದನ್ನು ನೋಡ ಬೇಕು ! ಮನಸ್ಸಿಗೆ ಬಂದಂತೆ ಬಂಗಾಳಿಯಲ್ಲಿ ಇಂಗ್ಲೀಷನ್ನು ತೂರಿಸಿಬಿಡು ತ್ತಾರೆ. ಮಾತನಾಡುವಾಗ ಮೈಮರೆತುಬಿಡುತ್ತಾರೆ. ತಮ್ಮ ವಿಚಾರದ ಆವೇಶದಲ್ಲಿಯೇ ಮಗ್ನರಾಗುತ್ತಾರೆ. ಜನರು ನಗೆಮಾಡಿಯಾರೆ ಅಥವಾ ಏನಾದರೂ ಅಂದಾರೆಯೇ—ಎಂಬುದರ ಪರಿವೆಯೂ ಅವರಿಗಿರುವುದಿಲ್ಲ. ಅವರ ಮಾತು ಕೇಳಿದಲ್ಲದೆ, ದೃಷ್ಟಿಸಿ ನೋಡಿದಲ್ಲದೆ ಅವರ ಮಹತ್ವ ಗೊತ್ತಾಗುವುದಿಲ್ಲ. ಒಂದು ಘಟನೆ ನನಗಿನ್ನೂ ನೆನಪಿದೆ; ನಾನು ಕಲ್ಕತ್ತೆಯಲ್ಲಿ ಗೋಖಲೆಯವರೊಡನೆ ಇದ್ದ ಕಾಲ; ಆಚಾರ್ಯ ರಾಯರು ಅವರ ನೆರೆಯವರಾಗಿದ್ದರು. ಒಂದು ದಿನ ಮೂವರೂ ಕೂಡಿ ಸ್ಟೇಷನ್ನಿಗೆ

ಹೊರಟೆವು. ನನ್ನ ಬಳಿ ಮೂರನೆಯ ದರ್ಜೆಯ 'ಟಿಕೆಟ್' ಇತ್ತು. ಅವರಿಬ್ಬರೂ ನನ್ನನ್ನು ಕಳುಹಿಸಿಕೊಡಲು ಬಂದಿದ್ದರು. ಮೂರನೆಯ ತರಗತಿಯ ಪ್ರಯಾಣಿಕರನ್ನು ಕಳುಹಿಸಿಕೊಡಲು ಬರುವವರು ಭಿಕಾರಿಗಳೇ ತಾನೇ? ಗೋಖಲೆ ಅವರ ತುಂಬಿದ ಮುಖ; ರೇಶ್ಮೆ ಪೇಟಾ, ರೇಶ್ಮೆ ಅಂಚಿನ ಧೋತ್ರ—ಟಿಕೆಟ್ ಬಾಬುಗಳ ಲೆಕ್ಕಕ್ಕೆ ಸರಿಹೋಯಿತು. ಆದರೆ, ಈ ಬಡಕಲು ಮೈ ಬ್ರಹ್ಮಚಾರಿಯನ್ನು, ಕೊಳೆ ಕೊಳೆಯಾಗಿ ಕಾಣುವ ಷರಟು ಧರಿಸುವ ಭಿಕಾರಿಯಂತೆ ತೋರುವ ವ್ಯಕ್ತಿಯನ್ನು ಟಿಕೆಟ್ ಇಲ್ಲದೆ ಒಳಕ್ಕೆ ಯಾರು ಬಿಡಬೇಕು? ನನಗೆ ನೆನಪಿರುವ ಮಟ್ಟಿಗೆ ಪ್ರಫುಲ್ಲ ಚಂದ್ರರಾಯರು ಸ್ವಲ್ಪವೂ ವ್ಯಸನಪಡದೆ, ಹೊರಗಡೆಯೇ ಉಳಿದರು. ಕಿಕ್ಕಿರಿದು ತುಂಬಿದ್ದ ಗಾಡಿಯೊಳಕ್ಕೆ ಹೇಗೋ ನುಗ್ಗಿದಮೇಲೂ ಗೋಖಲೆ ಯವರು ಆ ಹಠವಾದಿಯನ್ನು ಟೀಕಿಸುತ್ತ, ತಮ್ಮ ಒಡನಾಡಿಯನ್ನು ಹೋಗಿ ಕೂಡಿಕೊಂಡರು. ಆಚಾರ್ಯ ರಾಯರು ವಿದ್ಯಾರ್ಥಿಗಳ ಹೃದಯದ ಮೇಲೆ ಆಧಿಪತ್ಯ ಸ್ಥಾಪಿಸಿಕೊಂಡಿರುವುದು ಹೇಗೆ? ಅವರು ತ್ಯಾಗಿಗಳಂತೂ ಸರಿ; ಈಗ ಖಾದೀ-ಹುಚ್ಚರೂ ಆಗಿದಾರೆ. ಶಿಕ್ಷಾ ವಿಭಾಗದ ಬಂಗಾಳಿ ಅಧಿಷ್ಠಾತ್ರಿಯೊಬ್ಬರಿಗೆ "ಖಾದಿ ಧರಿಸದಿದ್ದರೆ ನೀವು ಯಾವ ಕೆಲಸಕ್ಕೆ?" —ಎಂಬುದಾಗಿ ಹೇಳಲು ಅವರಿಗೆ ಸ್ವಲ್ಪವೂ ಸಂಕೋಚವಾಗಲಿಲ್ಲ. ಹಾಗೆ ಹೇಳದಿದ್ದರೆ, ಅವರ ಖುಲ್‌ನಾದ ಭಿಕಾರಿಗಳು ತಯಾರುಮಾಡಿದ ಖಾದಿ ಯನ್ನು ಯಾರು ಕೊಂಡುಕೊಳ್ಳಬೇಕು? ೧೯೪೮

ಆಚಾರ್ಯ ಸುಶೀಲ ರುದ್ರ

ಆಚಾರ್ಯ ಸುಶೀಲ ರುದ್ರರು ಜೂನ್ ೩ ರಂದು ನಿಧನರಾದರು. ಅವರು ನನ್ನ ಆದರಣೀಯ ಮಿತ್ರರಲ್ಲೊಬ್ಬರು; ಹಾಗೂ ಮೂಕ-ಸಮಾಜ ಸೇವಕರು. ಅವರ ಮರಣದಿಂದ ನನಗೆ ಆಗಿರುವ ದುಃಖದಲ್ಲಿ ಓದುಗರು ಪಾಲುಗೊಳ್ಳಲಿ. ಭಾರತದ ಮುಖ್ಯವಾದ ರೋಗವೆಂದರೆ, ರಾಜನೈತಿಕ ಪರಾಧೀನತೆ. ಆದಕಾರಣ, ಜಲ ಹಾಗೂ ಭೂ ಸೇನೆಯಿಂದ, ಧನಬಲ

ಹಾಗೂ ಕೂಟನೀತಿಯಿಂದ ಬಲವಾದ ಕೋಟಿಕೊತ್ತಲಗಳನ್ನು ನಿರ್ಮಿಸಿಕೊಂಡಿರುವ ಸರಕಾರದೊಡನೆ ದಾಸ್ಯವನ್ನು ದೂರಮಾಡಲು ಬಹಿರಂಗವಾಗಿ ಹೋರಾಡುವವರನ್ನೇ ದೇಶ ಗೌರವಿಸುವುದು. ರಾಜನೀತಿಗಿಂತ ಕಡಿಮೆ ಉಪಯುಕ್ತವೇನೂ ಅಲ್ಲದ, ಜೀವನದ ಇತರ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತ, ಅದಕ್ಕಾಗಿಯೇ ಜೀವನ ಸಮರ್ಪಣ ಮಾಡುವ ಇತರ ಕಾರ್ಯಕರ್ತರ ಸುದ್ದಿ ಸ್ವಾಭಾವಿಕವಾಗಿಯೇ ಹತ್ತುವುದಿಲ್ಲ. ದಿಲ್ಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನ ಪ್ರಿನ್ಸಿಪಲ್ ಸುಶೀಲಕುಮಾರ ರುದ್ರ ಅವರು ಅಂಥ ವಿನೀತ ಕಾರ್ಯಕರ್ತರಲ್ಲೊಬ್ಬರು. ಅವರು ಪ್ರಥಮ ಶ್ರೇಣಿಯ ಶಿಕ್ಷಣ ಶಾಸ್ತ್ರಜ್ಞರು. ಪ್ರಿನ್ಸಿಪಲ್ ಆಗಿ ಅವರು ಸರ್ವತ್ರ ಜನಪ್ರಿಯರಾಗಿದ್ದರು. ಅವರಿಗೂ ಅವರ ವಿದ್ಯಾರ್ಥಿಗಳಿಗೂ ಒಂದು ರೀತಿಯ ಆಧ್ಯಾತ್ಮಿಕ ಸಂಬಂಧವಿತ್ತು. ಅವರು ಕ್ರೈಸ್ತರಾಗಿದ್ದರೂ, ಹಿಂದೂ ಹಾಗೂ ಮುಸ್ಲಿಂ ಧರ್ಮಗಳಿಗೂ ಅವರ ಹೃದಯದಲ್ಲಿ ಸ್ಥಾನವಿತ್ತು; ಆ ಧರ್ಮಗಳನ್ನು ಗೌರವಿಸುತ್ತಿದ್ದರು. ಅವರ ಕ್ರೈಸ್ತ ಧರ್ಮ ಬೇರೆಯವರಿಂದ ಸಿಡಿದುಹೋಗಿ, ಪ್ರತ್ಯೇಕವಾಗಿ ಇರುವಂಥದಾಗಿರಲಿಲ್ಲ; ಯೇಸುಕ್ರಿಸ್ತನೊಬ್ಬನೇ ಪ್ರಪಂಚದ ಉದ್ಧಾರಕನೆಂದು ನಂಬದವರಿಗೆ ಸರ್ವನಾಶವೇ ಸಿದ್ಧವೆಂದು ಸಾರುವಂಥದಾಗಿರಲಿಲ್ಲ. ತಮ್ಮ ಧರ್ಮದಲ್ಲಿ ದೃಢನಿಷ್ಠೆ ಇಟ್ಟುಕೊಂಡೂ ಇತರರನ್ನು ಸಹಿಷ್ಣುತೆಯಿಂದ ನೋಡುತ್ತಿದ್ದರು. ಅವರ ರಾಜನೀತಿಯ ತೀಕ್ಷ್ಣ ಹಾಗೂ ಚಿಂತನಶೀಲ ಅಭ್ಯಾಸಿಗಳೂ ಆಗಿದ್ದರು. ಅಗ್ರಗಾಮಿಗಳೆನಿಸಿಕೊಂಡ ಮಂದಿಯ ಬಗೆಗೆ ತಮ್ಮ ಸಹಾನುಭೂತಿಯ ಪ್ರದರ್ಶನ ಮಾಡದಿದ್ದರೂ ಅದನ್ನು (ಸಹಾನುಭೂತಿ) ಮುಚ್ಚಿಡುತ್ತಲೂ ಇರಲಿಲ್ಲ. ೧೯೧೫ರಿಂದ ಈಚೆಗೆ ಆಫ್ರಿಕಾದಿಂದ ಹಿಂತಿರುಗಿದಮೇಲೆ ನಾನು ಯಾವಾಗ ದಿಲ್ಲಿಗೆ ಹೋದರೂ ಅವರ ಅತಿಥಿಯೇ ಆಗುತ್ತಿದ್ದೆ. ರೌಲೆಟ್ ಕಾನೂನಿನ ಸಂಬಂಧದಲ್ಲಿ ನಾನು ಸತ್ಯಾಗ್ರಹವನ್ನು ಹೂಡುವವರೆಗೆ ಅವರಲ್ಲಿ ನನ್ನ ಆತಿಥ್ಯ ನಿರ್ವಿಘ್ನವಾಗಿ ನಡೆದು ಬಂದಿತು. ಉನ್ನತ ಕ್ಷೇತ್ರಗಳಲ್ಲಿ ಅವರಿಗೆ ಎಷ್ಟೋ ಆಂಗ್ಲೇಯ ಮಿತ್ರರಿದ್ದರು. ಒಂದು ಆಂಗ್ಲೇಯ ಪಾದರಿ–ಸಂಸ್ಥೆಯೊಡನೆ ಅವರು ಸಂಬಂಧ ಇಟ್ಟುಕೊಂಡಿದ್ದರು. ಸ್ಟೀಫನ್ ಕಾಲೇಜಿಗೆ ಅವರೇ ಮೊಟ್ಟಮೊದಲನೆಯ ಭಾರತೀಯ ಪ್ರಿನ್ಸಿಪಾಲರು. ಆದಕಾರಣ ನಾನು

ಅವರೊಡನೆ ಸಂಪರ್ಕ ಬೆಳಸಿ ಅವರ ಮನೆಯಲ್ಲಿಯೇ ಇಳಿದುಕೊಳ್ಳುವುದರಿಂದ ಬಹುಶಃ ನನಗೂ ಅವರಿಗೂ ಏಕಾಭಿಪ್ರಾಯವಿರುವುದೆಂಬ ತಪ್ಪು ಭಾವನೆ ಮಂದಿಯಲ್ಲಿ ಮೂಡಿ, ಅವರ ಸಹಕರ್ಮಚಾರಿಗಳಿಗೆ ಅನಾವಶ್ಯಕವಾಗಿ ತೊಂದರೆಯಾದೀತೆಂದು ನನಗೆ ಅನಿಸಿತು. ಆ ದೃಷ್ಟಿಯಿಂದ ನಾನು ಬೇರೆ ಕಡೆ ಇಳಿದುಕೊಳ್ಳಲು ಬಯಸಿದೆ. ಅವರು ಕೊಟ್ಟ ಉತ್ತರ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದ್ದಿತು—"ನನ್ನ ಧರ್ಮ ಜನ ಊಹಿಸುವುದಕ್ಕಿಂತ ಹೆಚ್ಚು ಗಹನವಾದುದು; ನನ್ನ ಹಲವು ಅಭಿಪ್ರಾಯಗಳಂತೂ ನನ್ನ ಜೀವನದ ಅಭಿನ್ನ ಅಂಗವೇ ಆಗಿವೆ. ಅವು ಗಹನವಾಗಿದ್ದು, ದೀರ್ಘಕಾಲದ ಮನನ ಹಾಗೂ ಪ್ರಾರ್ಥನೆಯ ನಂತರ ನಿಶ್ಚಿತವಾದುದಾಗಿವೆ. ನನ್ನ ಆಂಗ್ಲೇಯ ಮಿತ್ರರು ಅದನ್ನು ಬಲ್ಲರು. ನನ್ನ ಮಾನನೀಯ ಮಿತ್ರ ಹಾಗೂ ಅತಿಥಿಯಾಗಿ ನಿಮ್ಮನ್ನು ನನ್ನ ಮನೆಯಲ್ಲಿ ಇಟ್ಟುಕೊಂಡರೆ ಅವರು ತಪ್ಪು ತಿಳಿದುಕೊಳ್ಳುವುದಿಲ್ಲ. ಇಂಗ್ಲೀಷರಲ್ಲಿ ನನಗೆ ಇರುವ ಅಲ್ಪಸ್ವಲ್ಪ ಪ್ರಭಾವ ಹಾಗೂ ನೀವು—ಇವೆರಡರಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಬಂದರೆ, ಏನು ಮಾಡಬೇಕೆಂಬುದು ನನಗೆ ಗೊತ್ತು. ನೀವು ನನ್ನ ಮನೆಯನ್ನು ಬಿಟ್ಟು ಹೋಗಬಾರದು". "ಆದರೆ ನನ್ನನ್ನು ಕಾಣಲು ಎಲ್ಲ ಬಗೆಯ ಜನ ಬರುತ್ತಾರೆ. ನೀವು ನಿಮ್ಮ ಮನೆಯನ್ನು 'ಛತ್ರ ಮಾಡಲಾರಿರಿ'—ಎಂದು ನಾನು ಹೇಳಿದೆ. ಅವರು ಉತ್ತರವಿತ್ತರು—"ನಿಜಕ್ಕೂ ಇದೆಲ್ಲವೂ ನನಗೆ ಇಷ್ಟ. ನಿಮ್ಮ ಮಿತ್ರರು ಬರುವುದು ಹೋಗುವುದು ನನಗೆ ರುಚಿಸುತ್ತದೆ. ನಿಮ್ಮನ್ನು ನಮ್ಮ ಮನೆಯಲ್ಲಿ ಇರಿಸಿಕೊಳ್ಳುವುದರ ಮೂಲಕ ನನ್ನಿಂದಲೂ ಸ್ವಲ್ಪ ದೇಶಸೇವೆ ಆಗುತ್ತಿರುವುದನ್ನು ಕಂಡು ನನಗೆ ಆನಂದವಾಗುತ್ತದೆ." ಖಿಲಾಫತ್ ಬೇಡಿಕೆಗೆ ಪ್ರತ್ಯಕ್ಷ ರೂಪ ಕೊಡಲು ನಾನು ವೈಸ್‌ರಾಯರಿಗೆ ಬರೆದ ಪತ್ರದ ವಿಷಯ ಹಾಗೂ ಒಕ್ಕಣಿ ಪ್ರಿನ್ಸಿಪಾಲ್ ರುದ್ರರ ಮನೆಯಲ್ಲಿಯೇ ಸಿದ್ಧವಾಯಿತೆಂಬುದು ಓದುಗರಿಗೆ ತಿಳಿದಿರಲಿಕ್ಕಿಲ್ಲ. ಅವರು ಮತ್ತು ಚಾರ್ಲಿ ಆಂಡ್ರೂಸ್ ಅದನ್ನು ಪರಿಷ್ಕರಿಸಿದರು. ಅವರ ಮನೆಯ ನೆಳಲಿನಲ್ಲಿ ಕುಳಿತೇ ಅಸಹಯೋಗದ ಕಲ್ಪನೆ ಹುಟ್ಟಿತು. ಹಾಗೂ ಪ್ರವರ್ತಿತವಾಯಿತು. ಮೌಲಾನಾಗಳು, ಇತರ ಮುಸಲ್ಮಾನರು ಹಾಗೂ ಬೇರೆ ಮಿತ್ರರೊಡನೆ ನಾನು ನಡೆಸಿದ ಅಂತರಂಗದ

ಸಮಾಲೋಚನೆಯನ್ನು ಅವರು ಅತೀವ ಆಸಕ್ತಿಯಿಂದ ಮೌನವಾಗಿ ಕೇಳುತ್ತಿದ್ದರು. ಅವರ ಎಲ್ಲ ಕಾರ್ಯವೂ ಧರ್ಮಭಾವದಿಂದಲೇ ಪ್ರೇರಿತವಾಗಿರುತ್ತಿತ್ತು. ಅಂಥ ಸ್ಥಿತಿಯಲ್ಲಿ ಅವರು ಪ್ರಾಪಂಚಿಕ ಸತ್ತೆಯನ್ನು ಕಳಕೊಳ್ಳುವ ಭಯವೇನೂ ಇರಲಿಲ್ಲ; ಮೇಲಾಗಿ ಅದೇ ಧರ್ಮಭಾವವೇ ಪ್ರಾಪಂಚಿಕ ಸತ್ತೆಯ ಅಸ್ತಿತ್ವ ಉಪಯೋಗ ಹಾಗೂ ಮಿತ್ರತ್ವದ ಮೌಲ್ಯವನ್ನು ಅರಿತುಕೊಳ್ಳಲು ಅವರಿಗೆ ಸಹಾಯಕವಾಯಿತು. ಯಾವ ಧಾರ್ಮಿಕ ಭಾವದಿಂದ ಮನುಷ್ಯನಿಗೆ ವಿಚಾರ ಹಾಗೂ ಆಚಾರದ ಸುಂದರ ಸಮನ್ವಯದ ಯಥಾರ್ಥ ಜ್ಞಾನ ಲಭಿಸುವುದೋ ಅದರ ಸತ್ಯತೆಯನ್ನು ಅವರು ತಮ್ಮ ಜೀವನದಲ್ಲಿ ಚರಿತಾರ್ಥಗೊಳಿಸಿ ಕೋರಿದರು. ಆಚಾರ್ಯ ರುದ್ರರು ಅನೇಕ ಉಚ್ಚ ಚಾರಿತ್ರದ ವ್ಯಕ್ತಿಗಳನ್ನು ಆಕರ್ಷಿಸಿದ್ದರು. ಅಂಥವರ ಸಹವಾಸ ಯಾರಿಗಾದರೂ ಬೇಕಾದುದೇ. ಶ್ರೀ ಸಿ. ಎಫ್. ಆಂಡ್ರೂಸರು ನಮಗೆ ಲಭ್ಯವಾದುದು ಆಚಾರ್ಯ ರುದ್ರರ ದೆಸೆಯಿಂದಲೇ ಎಂಬುದು ಅನೇಕರಿಗೆ ತಿಳಿಯದು. ಅವರು ಯಮಳ ಸೋದರರಂತೆ ಇದ್ದರು. ಅವರ ಸ್ನೇಹ ಆದರ್ಶ ಮೈತ್ರಿಯ ಅಧ್ಯಯನದ ವಿಷಯವಾಗಿತ್ತು. ಆಚಾರ್ಯ ರುದ್ರರು ಇಬ್ಬರು ಗಂಡು ಮಕ್ಕಳನ್ನೂ, ಓರ್ವ ಹೆಣ್ಣುಮಗಳನ್ನೂ ಬಿಟ್ಟುಹೋಗಿದ್ದಾರೆ. ಅವರೆಲ್ಲರೂ ವಯಸ್ಕರಾಗಿದ್ದು ತಮ್ಮ ಕಾರ್ಯಗಳಲ್ಲಿ ತೊಡಗಿದಾರೆ. ತಮ್ಮ ಉಚ್ಚ ಹೃದಯದ ತಂದೆಯವರ ಅನೇಕ ಮಿತ್ರರು ಭಾಗಿಗಳಾಗಿದ್ದಾರೆಂಬುದನ್ನು ಅವರು ಬಲ್ಲರು.೧೯೯

ಪಾರಸಿ ರುಸ್ತುಮ್‌ಜಿ

ಬೀ ಅಮ್ಮ ಅವರು ತೀರಿಕೊಂಡಾಗ ಮೌ. ಶೌಕತ್ ಅಲಿ ಅವರು ಹಿಂದೂಸ್ಥಾನದ ಓರ್ವ ನಿಜವಾದ ಸಿಪಾಯಿ ಕಡಿಮೆಯಾದಂತೆ ಆಯಿತು —ಎಂದು ಹೇಳಿದ್ದರು. ಪಾರಸಿ ರುಸ್ತುಮ್‌ಜಿ ಅವರು ತೀರಿಕೊಂಡುದರಿಂದಲೂ ಓರ್ವ ನಿಜವಾದ ಸಿಪಾಯಿ ಕಡಿಮೆ ಆದಂತಾಯಿತು. ಅಷ್ಟೇ

ಇಲ್ಲ, ನನ್ನ ಪರಮ ಮಿತ್ರನೊಬ್ಬ ಕಡಿಮೆಯಾದಂತೆ ಆಯಿತು. ಪಾರಸಿ ರುಸ್ತುಮ್‌ಜಿ ಅವರಂಥ ಮನುಷ್ಯರನ್ನು ನಾನು ನೋಡಿರುವುದು ಅಪರೂಪ. ಅವರು ಪಡೆದಿದ್ದ ಶಿಕ್ಷಣ ನಾಮಮಾತ್ರದ್ದು. ಅವರಿಗೆ ಬರುತ್ತಿದ್ದ ಇಂಗ್ಲೀಷ್ ಸಹ ಬಹಳ ಕಡಿಮೆ. ಗುಜರಾತಿಯೂ ಸಾಮಾನ್ಯವಾಗಿ ಬರುತ್ತಿತ್ತು. ಓದುವುದರಲ್ಲಿ ಅಭಿರುಚಿ ಇರಲಿಲ್ಲ. ತರುಣ ವಯಸ್ಸಿನಲ್ಲೇ ವ್ಯಾಪಾರದಲ್ಲಿ ತೊಡಗಿದರು. ಕೇವಲ ತನ್ನ ಪರಿಶ್ರಮದಿಂದ ಸಾಧಾರಣ ಗುಮಾಸ್ತೆಯ ಸ್ಥಿತಿಯಿಂದ ದೊಡ್ಡ ವ್ಯಾಪಾರಿಯ ಅಂತಸ್ತನ್ನು ಏರಿದರು. ಆದರೂ ಅವರ ವ್ಯವಹಾರ ಬುದ್ಧಿ ತೀಕ್ಷ್ಣವಾಗಿತ್ತು; ಅವರಲ್ಲಿ ಹಾತೀಮನಂಥ ಔದಾರ್ಯ ವಿತ್ತು. ಅವರಲ್ಲಿ ಸಹಿಷ್ಣುತೆ ಎಷ್ಟರಮಟ್ಟಿಗೆ ಇದ್ದಿತೆಂದರೆ, ತಾವು ಪಾರಸಿ ಗಳಾಗಿದ್ದರೂ, ಹಿಂದೂ–ಮುಸಲ್ಮಾನ್, ಕ್ರೈಸ್ತ ಮೊದಲಾದವರನ್ನು ಏಕ ರೀತಿಯಾಗಿ ಪ್ರೀತಿಸುತ್ತಿದ್ದರು. ಚಂದಾ ಬೇಡುವವರು ಅಥವಾ ಕೈ ಚಾಚುವವರು ಯಾರೂ ಅವರ ಮನೆಗೆ ಹೋಗಿ ಬರಿಗೈಯಿಂದ ವಾಪಸಾದು ದನ್ನು ನಾನು ನೋಡಿಲ್ಲ. ಮಿತ್ರರ ಬಗೆಗೆ ಅವರ ನಿಷ್ಠೆ ಎಷ್ಟು ಸೂಕ್ಷ್ಮ ವಾಗಿದ್ದಿತೆಂದರೆ, ಅನೇಕರು ಅವರಿಗೇ 'Power of attorney' (ವಕೀಲ ಅಧಿಕಾರ) ಕೊಟ್ಟುಬಿಡುತ್ತಿದ್ದರು. ಅನೇಕ ದೊಡ್ಡ ದೊಡ್ಡ ಮುಸಲ್ಮಾನ ವ್ಯಾಪಾರಿಗಳು ತಮ್ಮ ಬಂಧು–ಬಳಗದವರನ್ನು ಬಿಟ್ಟು, ಇವರನ್ನೇ ತಮ್ಮ ರಾಯಭಾರಿಯಾಗಿ ಮಾಡಿಕೊಳ್ಳುತ್ತಿದ್ದರು. ಯಾವನೇ ಬಡ ಪಾರಸಿ ಅವರ ಅಂಗಡಿಯಿಂದ ಬರಿಗೈಯಲ್ಲಿ ಹಿಂತಿರುಗುತ್ತಿರಲಿಲ್ಲ. ರುಸ್ತುಮ್‌ಜಿ ಮಂದಿಯ ವಿಷಯದಲ್ಲಿ ಎಷ್ಟು ಉದಾರಿಗಳಾಗಿದ್ದರೋ, ತಮ್ಮ ವಿಷಯದಲ್ಲಿ ಅಷ್ಟು ಜಿಪುಣರಾಗಿದ್ದರು. ಆಮೋದ–ಪ್ರಮೋದದ ಹೆಸರೂ ಅವರಿಗೆ ತಿಳಿದಿರಲಿಲ್ಲ. ತಮಗೆ ಅಥವಾ ತಮ್ಮ ಸ್ವಜನರಿಗೆಂದರೆ ವಿಚಾರಪೂರ್ವಕ ವಾಗಿ ಖರ್ಚುಮಾಡುತ್ತಿದ್ದರು. ಮನೆಯಲ್ಲಿ ಕಡೆಯ ತನಕ ಸರಳ ಜೀವನ ವನ್ನೇ ನಡೆಸಿಕೊಂಡು ಬಂದಿದ್ದರು. ಗೋಖಲೆ, ಆಂಡ್ರೂಸ್, ಸರೋಜಿನಿ ದೇವಿ ಮೊದಲಾದವರು ರುಸ್ತುಮ್‌ಜಿ ಅವರಲ್ಲಿ ಇಳಿದುಕೊಳ್ಳುತ್ತಿದ್ದರು. ಸಣ್ಣ ಸಣ್ಣ ವಿಷಯಗಳಿಗೂ ಅವರು ಗಮನಕೊಡದೆ ಇರುತ್ತಿರಲಿಲ್ಲ. ಗೋಖಲೆ ಅವರ ಅಸಂಖ್ಯ ಅಭಿನಂದನ ಪತ್ರಗಳೇ ಮೊದಲಾದ ಮೂವ ತ್ತೇಳರಷ್ಟು ದೊಡ್ಡದೊಡ್ಡ ಪ್ಯಾಕೆಟುಗಳನ್ನುಮಾಡಿಸಿ, ಅವುಗಳನ್ನು ಹಡಗಿಗೆ

ಹಾಕಿಸುವುದೇ ಮೊದಲಾದ ಭಾರವನ್ನು ರುಸ್ತಮ್‌ಜಿ ಅವರಲ್ಲದೆ ಮತ್ತಾರು ಹೊರಬೇಕು?

ತಮ್ಮ ಪ್ರಿಯ ಧರ್ಮಪತ್ನಿ ತೀರಿಕೊಂಡಮೇಲೆ, ಅವರ ಹೆಸರಿನಲ್ಲಿ ಜೇವರ್‌ಬಾಯಿ ಟ್ರಸ್ಟ್ ಏರ್ಪಡಿಸಿ, ತಮ್ಮ ಸಂಪತ್ತಿನ ಬಹು ಭಾಗವನ್ನು ಧರ್ಮಕಾರ್ಯಕ್ಕಾಗಿ ಮೀಸಲಿಟ್ಟರು. ತಮ್ಮ ಮಕ್ಕಳಿಗೆ ಆಡಂಬರದ ವಾಸನೆ ಹತ್ತಲಿಕ್ಕೂ ಅವರು ಅವಕಾಶ ಕೊಡಲಿಲ್ಲ. ಅವರಿಗೆ ಸಾದಾ ಜೀವನ ವನ್ನೇ ಕಲಿಸಿದರು. ಹೊಟ್ಟೆಪಾಡಿಗೆ ಬೇಕಾದಷ್ಟು ಆಸ್ತಿಯನ್ನು ಮಾತ್ರ ಬಿಟ್ಟುಹೋಗಿದಾರೆ. ತಮ್ಮ ಉಯಿಲಿನಲ್ಲಿ ತಮ್ಮ ಎಲ್ಲ ಬಂಧುಗಳನ್ನು ನೆನಪು ಮಾಡಿಕೊಂಡಿದಾರೆ.

ಮೇಲೆ ತಿಳಿಸಿದಂತೆ, ಜಾಗರೂಕತೆ ಹಾಗೂ ದೃಢತೆಯಿಂದ ಸಾರ್ವ ಜನಿಕ ಚಟುವಟಿಕೆಗಳಿಗೆ ಸಹಾಯ ಮಾಡಿದಾರೆ. ಸತ್ಯಾಗ್ರಹದ ಸಮಯ ದಲ್ಲಿ ತಮ್ಮ ಸರ್ವಸ್ವವನ್ನು ಆಹುತಿಕೊಡಲು ಸಿದ್ಧರಾಗಿದ್ದ ವ್ಯಾಪಾರಿಗಳಲ್ಲಿ ಪಾರಸಿ ರುಸ್ತಮ್‌ಜಿ ಮೊಟ್ಟಮೊದಲಿಗರು.

ಒಪ್ಪಿಕೊಂಡ ಕಾರ್ಯವನ್ನು ಎಷ್ಟೇ ಸಂಕಟ ಬಂದರೂ ಬಿಡದೆ ನಡೆಸುವ ವೃತ್ತಿ ಅವರದು. ನಿರೀಕ್ಷಿಸಿದುದಕ್ಕಿಂತ ಹೆಚ್ಚುದಿನ ಜೈಲಿನಲ್ಲಿ ಇರಬೇಕಾಗಿ ಬಂದರೂ ಅವರು ಧೈರ್ಯಗೆಡಲಿಲ್ಲ. ಹೋರಾಟ ಎಂಟು ವರುಷಗಳ ಕಾಲ ನಡೆಯಿತು. ಎಷ್ಟೋ ಗಟ್ಟಿಗರಾದ ಹೋರಾಟಗಾರರು ಉರುಳಿದರು; ಆದರೆ, ರುಸ್ತಮ್‌ಜಿ ನಿಶ್ಚಲರಾಗಿಯೇ ಇದ್ದರು. ತನ್ನ ಮಗನಾದ ಸಾರೋಬಜಿ ಯನ್ನೂ ಹೋರಾಟದಲ್ಲಿ ಆಹುತಿ ಕೊಟ್ಟರು.

ಈ ಭಾರತೀಯ ಸಜ್ಜನರ ಭೇಟಿ ನನಗೆ ೧೮೯೩ರಲ್ಲಿ ಆಯಿತು. ನಾನು ಸಾರ್ವಜನಿಕ ಕಾರ್ಯಗಳಲ್ಲಿ ಹೆಚ್ಚು ಹೆಚ್ಚು ತೊಡಗಿದಂತೆ, ಪಾರಸೀ ರುಸ್ತಮ್‌ಜಿ ಅವರಲ್ಲಿದ್ದ ಒಡವೆಗಳನ್ನು ಗೌರವಿಸಲು ಕಲಿತೆ. ಅವರು ನನ್ನ ಕಕ್ಷಿಗಾರರಾಗಿದ್ದರು. ಸಾರ್ವಜನಿಕ ಕಾರ್ಯಗಳಲ್ಲಿ ನನ್ನ ಸಂಗಾತಿ ಗಳಾಗಿದ್ದರು. ಕೊನೆಗೆ ನನ್ನ ಮಿತ್ರರೂ ಆದರು. ಅವರು ತಮ್ಮ ದೋಷ ಗಳನ್ನು ನನ್ನ ಮುಂದೆ ಬಾಲಕನಂತೆ ಹೇಳಿಕೊಳ್ಳುತ್ತಿದ್ದರು. ಅವರು ನನ್ನ ಮೇಲೆ ತೋರುತ್ತಿದ್ದ ವಿಶ್ವಾಸದಿಂದಾಗಿ ನಾನು ಚಕಿತನಾಗುತ್ತಿದ್ದೆ. ೧೮೯೭ರಲ್ಲಿ ಬಿಳಿಯರು ನನ್ನ ಮೇಲೆ ಹಲ್ಲೆಮಾಡಿದಾಗ, ರುಸ್ತಮ್‌ಜಿ

ಅವರ ಮನೆಯೇ ನನ್ನ ಹಾಗೂ ನನ್ನ ಮಕ್ಕಳ ಆಶ್ರಯಸ್ಥಾನವಾಯಿತು. ಬಿಳಿಯರು ಅವರ ಮನೆ, ಆಸ್ತಿಪಾಸ್ತಿಗಳಿಗೆ ಬೆಂಕಿ ಇಡುವುದಾಗಿ ಬೆದರಿಸಿದರು. ಆದರೆ, ಪಾರಸಿ ರುಸ್ತಮರು ಸ್ವಲ್ಪವೂ ಹೆದರಲಿಲ್ಲ. ದಕ್ಷಿಣ ಆಫ್ರಿಕಾದೊಡನೆ ಅವರು ಬೆಳೆಸಿಕೊಂಡ ಸಂಬಂಧ ಅವರ ಕೊನೆಯ ದಿನದವರೆಗೂ ಉಳಿದುಕೊಂಡು ಬಂದಿತ್ತು. ಸಾರ್ವಜನಿಕ ಕಾರ್ಯಗಳಿಗೆ ಇಲ್ಲಿಗೂ ಹಣ ಕಳುಹಿಸುತ್ತಿದ್ದರು. ಡಿಶೆಂಬರ್‌ನಲ್ಲಿ ಕಾಂಗ್ರೆಸ್ ಮಹಾಧಿವೇಶನಕ್ಕೆ ಅವರು ಬರುವ ಸಂಭವವಿತ್ತು. ಆದರೆ, ಭಗವಂತನ ಇಚ್ಛೆಯೇ ಬೇರೆಯಾಗಿತ್ತು. ರುಸ್ತಮ್‌ಜಿ ಸೇಠರ ಮರಣದಿಂದ ದಕ್ಷಿಣ ಆಫ್ರಿಕದ ಭಾರತೀಯರಿಗೆ ಬಹಳ ಹಾನಿಯಾಗಿದೆ. ಸೋರಾಬ್‌ಜಿ ಅಡಾಜಣಿಯಾ ಹೋದರು; ಅಹಮದ್ ಮಹಮದ್ ಕಾಛಲಿಯಾ ಹೋದರು, ಮೊನ್ನೆ ಮೊನ್ನೆ ಪಿ. ಕೆ. ನಾಯಿಡು ಹೋದರು, ಇದೀಗ ಪಾರಸೀ ರುಸ್ತಮ್‌ಜಿ ಅವರೂ ಹೋದರು. ಈಗ ದಕ್ಷಿಣ ಆಫ್ರಿಕಾದಲ್ಲಿ ಈ ಸೇವಕರ ಶ್ರೇಣಿಗೆ ಸೇರಿದ ಭಾರತೀಯರು ಯಾರೂ ಇರಲಿಕ್ಕಿಲ್ಲ. ಭಗವಂತ ನಿರಾಧಾರಿಗಳ ರಕ್ಷಕ. ಆತ ದಕ್ಷಿಣ ಆಫ್ರಿಕದ ಭಾರತೀಯರನ್ನು ರಕ್ಷಿಸುವನು. ಆದರೆ, ಪಾರಸೀ ರುಸ್ತಮ್‌ಜಿ ಅವರ ಸ್ಥಾನವಂತೂ ಸದಾ ತೆರವಾಗಿಯೇ ಇರುವುದು.೧೫೦

ಲಾಲಾ ಲಜಪತ್‌ರಾಯ್

ಲಾಲಾ ಲಜಪತರಾಯರನ್ನು ಬಂಧಿಸಿದುದರಿಂದ ಸರಕಾರ ನಮ್ಮ ಅತ್ಯಂತ ಹಿರಿಯ ಮುಖಂಡರೊಬ್ಬರನ್ನು ಹಿಡಿದುಹಾಕಿದಂತಾಯಿತು. ಅವರ ಹೆಸರು ಭಾರತದಲ್ಲಿ ಮಕ್ಕಳು-ಮರಿಗಳಿಗೆ ಕೂಡ ಗೊತ್ತು. ತಮ್ಮ ಸ್ವಾರ್ಥತ್ಯಾಗದಿಂದಾಗಿ, ಅವರು ತಮ್ಮ ದೇಶ-ಬಾಂಧವರ ಹೃದಯದಲ್ಲಿ ಉಚ್ಚಸ್ಥಾನಗಳಿಸಿಕೊಂಡಿದಾರೆ. ಅಹಿಂಸೆಯನ್ನು ಪ್ರಚಾರಮಾಡುವುದಕ್ಕೆ, ಅದರೊಡನೆಯೇ ಜನಾಭಿಪ್ರಾಯವನ್ನು ಸಂಘಟಿಸಿ ವ್ಯಕ್ತಪಡಿಸುವುದಕ್ಕೂ-ಅವರು ಮಾಡಿರುವಷ್ಟು ಪರಿಶ್ರಮವನ್ನು ಮಾಡಿರುವ ಮಂದಿ ಬಹಳ ಕಡಿಮೆ

ಇದ್ದಾರು. ಅವರ ಬಂಧನದಿಂದ ಸರಕಾರದ ನೀತಿ ಅಥವಾ ವ್ಯಕ್ತಿಯ ನಿಜವಾದ ಅರಿವು ಆಗುವಷ್ಟು ಇನ್ನಾವುದರಿಂದಲೂ ಆಗಲಿಕ್ಕಿಲ್ಲ.

ಪಂಜಾಬ್ ತಕ್ಷಣವೇ ಅವರ ಸ್ಥಾನಕ್ಕೆ ಬೇರೊಬ್ಬ ನಾಯಕರನ್ನು ಆರಿಸಿಕೊಂಡಿತು. ಆಗಾ ಸಫ್ದರ್ ಈಗ ನಾಯಕರು. ಪಂಜಾಬಿ ಸೋದರರಿಗೆ ಅವರಿಗಿಂತ ಉತ್ತಮ ನಾಯಕರು ಸಿಕ್ಕುವಂತಿರಲಿಲ್ಲ. ಆವರು ನಿಜವಾದ ಮುಸಲ್ಮಾನರು; ವೀರ ಭಾರತೀಯರು. ಅವರು ಮಾಡಿರುವ ಸೇವೆಯನ್ನೆಲ್ಲ ಅಜ್ಞಾತರೂಪದಲ್ಲಿಯೇ ಮಾಡಿದಾರೆ. ಜನ ಲಾಲಾಜಿ ಅವರಿಗೆ ನೆರವಾದಂತೆಯೇ ಇವರಿಗೂ ಹೃತ್ಪೂರ್ವಕವಾಗಿ ನೆರವಾಗುವರೆಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಪಂಜಾಬಿನ ಸೋದರರು ಲಾಲಾಜಿ ಅವರಿಗೆ ಸಲ್ಲಿಸಬಹುದಾದ ಅತ್ಯಂತ ದೊಡ್ಡ ಗೌರವವೆಂದರೆ ಇದು—ಲಾಲಾಜಿ ನಮ್ಮ ಜನತೆಯಲ್ಲಿಯೇ ಇರುವರೆಂದು ಭಾವಿಸಿ, ಅವರ ಕಾರ್ಯವನ್ನು ಮುಂಬರಿಸಬೇಕು.೧೫೧

ನನ್ನ ಮಟ್ಟಿಗೆ ಲಾಲಾಜಿ ತೆರೆದ ಹೃದಯದ ಬಾಲಕನಂತೆ ಕಂಡಿದಾರೆ. ಅವರ ತ್ಯಾಗಕ್ಕೆ ಎಣೆಯೇ ಇಲ್ಲವೆನ್ನಬಹುದು. ಹಿಂದೂ ಮುಸಲ್ಮಾನರ ವಿಷಯದಲ್ಲಿ ಅನೇಕ ಬಾರಿ ಅವರೊಡನೆ ಮಾತನಾಡಿದೇನೆ. ಮುಸಲ್ಮಾನರ ಮೇಲೆ ಅವರಿಗೆ ಸ್ವಲ್ಪವೂ ವೈರವಿಲ್ಲ. ಆದರೆ ಜೇಗ ಐಕ್ಯತೆ ಕುದುರುವ ಬಗೆಗೆ ಅವರಿಗೆ ಸಂದೇಹವಿದೆ. ಭಗವಂತನಿಂದ 'ಬೆಳಕು' ಪಡೆಯಲು ಪ್ರಾರ್ಥನೆ ಮಾಡುತ್ತಾರೆ. ಸ್ವತಃ ಸಂದೇಹಗ್ರಸ್ತರಾಗಿದ್ದರೂ, ಸ್ವರಾಜ್ಯವನ್ನು ಒಪ್ಪುವವರಾಗಿರುವುದರಿಂದ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಒಪ್ಪುವವರಾಗಿದಾರೆ. ಅಂಥ ಐಕ್ಯತೆಯ ಹೊರತು ಸ್ವರಾಜ್ಯ ಸ್ಥಾಪನೆ ಆಗಲಿಕ್ಕಿಲ್ಲವೆಂದು ಅವರು ಒಪ್ಪುತ್ತಾರೆ. ಆದರೂ ಈ ಐಕ್ಯತೆ ಯಾವಾಗ, ಹೇಗೆ ಆದೀತೆಂಬುದು ಅವರಿಗೆ ತಿಳಿಯದು. ನನ್ನ 'ವಿಧಾನ' ವೇನೋ ಅವರಿಗೆ ಒಪ್ಪಿಗೆ. ಆದರೆ ಹಿಂದೂಗಳು ಅದರ ಮರ್ಮವನ್ನು ಅರಿಯುವರೋ ಇಲ್ಲವೋ, ಅರಿತರೂ ಸಹೃದಯದಿಂದ ಗೌರವಿಸುವರೋ ಇಲ್ಲವೋ ಎಂಬ ಸಂಶಯ ಅವರಿಗಿದೆ. ನನ್ನದು ಕೇವಲ ಆದರ್ಶ–ಯೋಜನೆಯೆಂದು ನಾನು ಭಾವಿಸುವುದಿಲ್ಲ. ಇದು ನಿಜಕ್ಕೂ ವ್ಯವಹಾರಯೋಗ್ಯವಾದ ಯೋಜನೆ.

ಲಾಲಾ ಲಜಪತರಾಯರು ತೀರಿಕೊಂಡರು. ಅವರು ಚಿರಂಜೀವಿಯಾಗಲಿ. ಭಾರತದ ಆಗಸದಲ್ಲಿ ಸೂರ್ಯ ಪ್ರಕಾಶಿಸುತ್ತ ಇರುವವರೆಗೆ ಲಾಲಾಜಿ ಅವರು ಸಾಯುವುದಿಲ್ಲ. ಲಾಲಾಜಿ ಅವರು ಒಂದು ಸಂಸ್ಥೆಯೇ ಆಗಿದ್ದರು. ಚಿಕ್ಕ ವಯಸ್ಸಿನಿಂದಲೇ ಅವರು ದೇಶಸೇವೆಯನ್ನು ತಮ್ಮ ಧರ್ಮವನ್ನಾಗಿ ಮಾಡಿಕೊಂಡಿದ್ದರು. ಅವರ ದೇಶಪ್ರೇಮದಲ್ಲಿ ಸಂಕೀರ್ಣತೆ ಎಂಬುದು ಇರಲಿಲ್ಲ. ಅವರು ಪ್ರಪಂಚವನ್ನು ಪ್ರೀತಿಸುತ್ತಿದ್ದುದರಿಂದಲೇ ಭಾರತವನ್ನೂ ಪ್ರೀತಿಸುತ್ತಿದ್ದರು. ಅವರ ರಾಷ್ಟ್ರೀಯತೆ ಅಂತರರಾಷ್ಟ್ರೀಯತೆಯಿಂದ ತುಂಬಿದ್ದಿತು. ಆದಕಾರಣ ಯೂರೋಪಿರ್ಯ ಜನರ ಮೇಲೂ ಅವರ ಪ್ರಭಾವ ಅಧಿಕವಾಗಿದ್ದಿತು. ಯೂರೋಪ್, ಅಮೇರಿಕೆಗಳಲ್ಲಿ ಅವರಿಗೆ ಅನೇಕ ಮಿತ್ರರಿದ್ದರು. ಆ ಮಿತ್ರರು ಲಾಲಾಜಿ ಅವರನ್ನು ಅರಿತಿದ್ದುದರಿಂದ ಅವರನ್ನು ಪ್ರೀತಿಸುತ್ತಿದ್ದರು.

ಅವರ ಸೇವೆ ಬಹುಮುಖವಾದುದು. ಅವರು ಬಹಳ ಉತ್ಸಾಹಶಾಲಿಗಳಾದ ಧರ್ಮ ಹಾಗೂ ಸಮಾಜದ ಸೇವಕರು. ನಮ್ಮಲ್ಲಿ ಅನೇಕರ ಹಾಗೆ ಅವರೂ ರಾಜನೀತಿಜ್ಞರಾದುದಕ್ಕೆ ಕಾರಣವಾದರೂ ಇಷ್ಟೆ—ಸಮಾಜ ಹಾಗೂ ಧರ್ಮ ಸುಧಾರಣೆಯ ಬಗೆಗೆ ಅವರಿಗಿದ್ದ ತೀವ್ರಾಸಕ್ತಿ ರಾಜನೀತಿಯಲ್ಲಿ ಕೂಡಿಕೊಳ್ಳದೆ ಪೂರ್ಣವಾಗುವುದು ಸಾಧ್ಯವೇ ಇರಲಿಲ್ಲ. ಸಾರ್ವಜನಿಕ ಜೀವನ ಆರಂಭವಾದ ಸ್ವಲ್ಪವೇ ಸಮಯದ ನಂತರ, ದೇಶವನ್ನು ಪಾರತಂತ್ರ್ಯದಿಂದ ಪಾರುಮಾಡಿದಲ್ಲದೆ, ನಾವು ಇಚ್ಚಿಸುವ ಸುಧಾರಣೆಗಳಲ್ಲಿ ಅನೇಕವನ್ನು ಆಗಗೊಳಿಸಲು ಸಾಧ್ಯವಿಲ್ಲೆಂಬುದನ್ನು ಅವರು ಕಂಡುಕೊಂಡರು. ನಮ್ಮಲ್ಲಿ ಅನೇಕರಿಗೆ ಗೊತ್ತಾಗಿರುವಂತೆ ಪ್ರಾರತಂತ್ರ್ಯದ ವಿಷ ದೇಶದ ನರನಾಡಿಗಳಲ್ಲಿ ವ್ಯಾಪಿಸಿದೆಯೆಂಬುದು ಅವರಿಗೂ ತಿಳಿದಿತ್ತು.

ಲಾಲಾಜಿ ಅವರು ಪಾತ್ರವಹಿಸದ ಯಾವುದೇ ಸಾರ್ವಜನಿಕ ಕಾರ್ಯ ಇರಲಿಲ್ಲ. ಸೇವೆ ಮಾಡಬೇಕೆಂಬ ಅವರ ಹಸಿವು ಎಂದೂ ಹಿಂಗುತ್ತಲೇ ಇರಲಿಲ್ಲ. ಶಿಕ್ಷಣ ಸಂಸ್ಥೆಗಳನ್ನುಸ್ಥಾಪಿಸಿದರು; ದಲಿತರ ಮಿತ್ರರಾದರು; ದುಃಖ—ದಾರಿದ್ರ್ಯ ಎಲ್ಲಿ ಕಂಡರೆ, ಅಲ್ಲಿಗೆ ಧಾವಿಸುತ್ತಿದ್ದರು. ನವಯುವಕರನ್ನು ಅಸಾಧಾರಣ ಪ್ರೇಮದಿಂದ ತಮ್ಮ ಬಳಿ ಕಲೆಹಾಕಿಕೊಳ್ಳುತ್ತಿದ್ದರು. ಸಹಾಯ ಬಯಸಿ ಅವರ ಬಳಿಗೆ ಹೋದವರಾರೂ ಬರಿಗೈಯಲ್ಲಿ ಹಿಂತಿರುಗುತ್ತಿರಲಿಲ್ಲ.

ರಾಜನೈತಿಕ ಕ್ಷೇತ್ರದಲ್ಲಿ ಅವರಿಲ್ಲದೆ ಯಾವುದೇ ಕೆಲಸ ಆಗುತ್ತಿರಲಿಲ್ಲ. ತಮ್ಮ ವಿಚಾರವನ್ನು ವ್ಯಕ್ತಪಡಿಸುವುದರಲ್ಲಿ ಅವರು ಎಂದೂ ಅಳುಕುತ್ತಿರಲಿಲ್ಲ. ನಿರ್ಭಯವಾಗಿ ವಿಚಾರ ವ್ಯಕ್ತ ಮಾಡಿದುದಕ್ಕಾಗಿ ಅವರು ಕಷ್ಟವನ್ನು ಅನುಭವಿಸಬೇಕಾಯಿತು. ಆಗ ಇನ್ನೂ ಕಷ್ಟ ಸಹಿಸುವುದು ವಾಡಿಕೆಯಾಗಿರಲಿಲ್ಲ. ಅವರ ಜೀವನದಲ್ಲಿ ರಹಸ್ಯವಾದ ವಿಷಯ ಯಾವುದೂ ಇರಲಿಲ್ಲ. ಅವರ ಸ್ಪಷ್ಟವಾದಿತ್ವದಿಂದಾಗಿ ಅವರ ಮಿತ್ರರು 'ಫಜೀತಿ'ಯಲ್ಲಿ ಸಿಕ್ಕಿಕೊಳ್ಳುತ್ತಿದ್ದರೆ, ಅವರ ಟೀಕಾಕಾರರೂ ದಿಗ್ಭ್ರಾಂತರಾಗುತ್ತಿದ್ದರು. ಆದರೆ ಆ ಅಭ್ಯಾಸವನ್ನು ಅವರು ಬಿಡುವಂತೆಯೇ ಇರಲಿಲ್ಲ.

ಮುಸಲ್ಮಾನ ಮಿತ್ರರ ಬಗೆಗೆ ಗೌರವ ಇಟ್ಟುಕೊಂಡೇ ನಾನು ಒಂದು ಮಾತನ್ನು ಹೇಳಬೇಕು-ಲಾಲಾಜಿ ಅವರು ಇಸ್ಲಾಮಿನ ವೈರಿಗಳಾಗಿರಲಿಲ್ಲ. ಹಿಂದೂ ಧರ್ಮವನ್ನು ಸಬಲವಾದುದನ್ನಾಗಿಯೂ ಶುದ್ಧವಾದುದನ್ನಾಗಿಯೂ ಮಾಡಬೇಕೆಂಬ ಅವರ ಪ್ರಬಲ ಇಚ್ಛೆಯನ್ನು ಮುಸ್ಲಿಮರ ಅಥವಾ ಇಸ್ಲಾಮದ ಬಗೆಗೆ ತಿರಸ್ಕಾರಭಾವ ಎಂಬುದಾಗಿ ತಪ್ಪು ತಿಳಿಯಬಾರದು. ಹಿಂದೂ-ಮುಸಲ್ಮಾನರ ಐಕ್ಯತೆಯನ್ನು ಸಾಧಿಸುವ ಹಾರ್ದಿಕ ಇಚ್ಛೆ ಅವರಿಗಿತ್ತು. ಅವರು ಅಪೇಕ್ಷಿಸುತ್ತಿದ್ದುದು ಹಿಂದುರಾಜ್ಯವನ್ನಲ್ಲ; ಹಿಂದೂಸ್ತಾನೀ ರಾಜನನ್ನು. ಹಿಂದೂಸ್ತಾನಿಗಳೆಂದು ಕರೆದುಕೊಳ್ಳುವ ಎಲ್ಲ ಜನರಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಅವರ ಇಚ್ಛೆಯಾಗಿತ್ತು. ಲಾಲಾಜಿ ಅವರ ಮರಣದಿಂದಲಾದರೂ ನಾವು ಒಬ್ಬರಲ್ಲೊಬ್ಬರು ವಿಶ್ವಾಸವಿಡುವುದನ್ನು ಕಲಿತರೆ, ನಿರ್ಭೀತರಾದರೆ, ಕೂಡಲೇ ಅದು ಸಾಧ್ಯವಾಗುವುದು.

ಅವರಿಗೊಂದು ರಾಷ್ಟ್ರೀಯ ಸ್ಮಾರಕವನ್ನು ಏರ್ಪಡಿಸುವ ವಿಚಾರ ಬಂದೇ ಬರುವುದು ; ಬರಲೇಬೇಕು. ಆದರೆ, ಯಾವ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಅವರು ದುಡಿದರೋ, ಮತ್ತು ಮಡಿದರೋ ಅದನ್ನು ಗಳಿಸುವುದು ಅವಶ್ಯಕವೆಂಬ ದೃಢವಿಶ್ವಾಸ ನಮ್ಮಲ್ಲಿ ಮೂಡುವವರೆಗೆ ಯಾವ ಸ್ಮಾರಕವೂ ಪೂರ್ಣವಾದುವಾಗುವುದಿಲ್ಲವೆಂಬುದು ನನ್ನ ನಮ್ರ ಅಭಿಪ್ರಾಯ. ಅವರ ಅಂತಿಮ ಇಚ್ಛೆ ಏನಿದ್ದಿತೆಂಬುದನ್ನು ನೆನಪುಮಾಡಿಕೊಳ್ಳೋಣ. ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಗಳಿಸುವ ಹಾಗೂ ಅದರ ಗೌರವವನ್ನು ರಕ್ಷಿಸುವ ಭಾರವನ್ನು ಹೊಸ ಪೀಳಿಗೆಯವರಿಗೆ ಅವರು ವಹಿಸಿ ಹೋಗಿದಾರೆ. ಹೊಸ

ಪೀಳಿಗೆಯವರಲ್ಲಿ ಅವರು ಇಟ್ಟದ್ದ ವಿಶ್ವಾಸಕ್ಕೆ ತಾವು ಪಾತ್ರರೆಂಬುದನ್ನು ಅವರು (ಹೊಸ ಪೀಳಿಗೆಯವರು) ಸಿದ್ಧಪಡಿಸುವರೆ? ಭಾರತ ಸ್ವತಂತ್ರ ವಾಗುವುದನ್ನು ನೋಡಬೇಕೆಂಬ ಲಾಲಾಜಿ ಹಾಗೂ ಇನ್ನೂ ಅನೇಕ ಸ್ವರ್ಗೀಯ ದೇಶಭಕ್ತರ ಕನಸನ್ನು ನನಸಾಗಿಸಲು ಇನ್ನೂ ಉಳಿದು ಕೊಂಡಿರುವ ನಮ್ಮಂಥ ಮುದುಕರೆಲ್ಲರೂ ಒಮ್ಮೆ ಒಟ್ಟುಗೂಡಿ, ಪ್ರಚಂಡ ಪ್ರಯತ್ನಮಾಡಿ, ಲಾಲಾಜಿ ಅವರಂತೆ ದೇಶಬಂಧುಗಳಾಗುವ ಅಧಿಕಾರ ವನ್ನು ಸಿದ್ಧಪಡಿಸಬಾರದೆ?

ಜನ ಸೇವಕ ಸಂಘವನ್ನೂ (Servants of People Society) ನಾವು ಮರೆಯುವಂತಿಲ್ಲ. ತಮ್ಮ ಬೇರೆ ಬೇರೆ ಕಾರ್ಯಗಳ ಉನ್ನತಿ ಗಾಗಿಯೇ ಆ ಸಂಘವನ್ನು ಅವರು ಸ್ಥಾಪಿಸಿದ್ದರು. ಆ ಎಲ್ಲ ಕಾರ್ಯ ಗಳನ್ನೂ ಅವರು ಆರಂಭಿಸಿದುದು ದೇಶಸೇವೆಯ ಸಲುವಾಗಿಯೇ, ಸಂಘದ ಸಂಬಂಧದಲ್ಲಿ ಅವರು ಬಹಳ ಉಚ್ಚವಾದ ಆಶೆ. ಆಕಾಂಕ್ಷೆ ಇಟ್ಟುಕೊಂಡಿದ್ದರು. ಇಡೀ ಭಾರತದ ಹಲವು ನವಯುವಕರು ಒಂದು ಕಾರ್ಯದಲ್ಲಿ ತೊಡಗಿ, ಏಕ ಹೃದಯದಿಂದ ದುಡಿಯಬೇಕೆಂಬುದು ಅವರ ಇಚ್ಛೆಯಾಗಿತ್ತು. ಆ ಸಂಘ ಸ್ಥಾಪಿತವಾಗಿ ಬಹಳ ದಿನಗಳಾಗಿಲ್ಲ. ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಆ ಸಂಸ್ಥೆಗೆ ಭದ್ರ ಬುನಾದಿಯನ್ನು ಕಟ್ಟಲು ಅವರಿಗೆ ಸಮಯವೇ ಸಿಕ್ಕಲಿಲ್ಲ. ಆ ಭಾರ ರಾಷ್ಟ್ರದ ಮೇಲಿದೆ. ರಾಷ್ಟ್ರ ಅದರ ಚಿಂತೆಮಾಡಬೇಕು.೧೫೨

ಲಾಲಾಜಿ ಅವರು ಕೊನೆಗಾಲದವರೆಗೆ ನನ್ನಲ್ಲಿ ವಿಶ್ವಾಸ ಇಟ್ಟದ್ದರು. ಅವರ ಅನೇಕ ಗುಣಗಳಲ್ಲಿ ಇಂದು ನಮ್ಮ ಪಾಲಿಗೆ ಎಲ್ಲಕ್ಕಿಂತ ಹೆಚ್ಚು ಬೆಲೆ ಯುಳ್ಳದಾಗಬಲ್ಲ ಗುಣವೆಂದರೆ ಅವರ ಹರಿಜನ ಪ್ರೇಮ, ಅಸ್ಪೃಶ್ಯತೆಯ ವಿರುದ್ಧ ಅವರ ಅಖಂಡ ಯುದ್ಧ. ಹರಿಜನರ ಬಗೆಗೆ ತಮ್ಮ ಕರ್ತವ್ಯವನ್ನು ನೆರವೇರಿಸುವ ಭಾವನೆ ಹಿಂದೂಗಳ ಹೃದಯದಲ್ಲಿ ಇನ್ನೂ ಉದಯವಾಗದೆ ಇದ್ದ ಸಮಯದಲ್ಲಿಯೇ ಅವರು ಈ ಯುದ್ಧವನ್ನು ಹೂಡಿದ್ದರು. ಅಸ್ಪೃ ಶ್ಯತೆ ಹಿಂದೂಧರ್ಮಕ್ಕೆ ಕಳಂಕ—ಎಂಬುದನ್ನು ಪ್ರಭಾವಶಾಲಿಯಾದ ಭಾಷೆ ಯಲ್ಲಿ ಸತತವಾಗಿ ಹೇಳುತ್ತಲೇ ಇದ್ದರು. ಲಾಲಾಜಿ ಅವರು ಈ ಯುದ್ಧ

ವನ್ನು ಬಿಟ್ಟು ಬೇರಾವ ಕೆಲಸವನ್ನು ಮಾಡದೇ ಇದ್ದಿದ್ದರೂ, ಹಿಂದೂಗಳ ಹೃದಯದಲ್ಲಿ ಲಾಲಾಜಿ ಅವರ ಪವಿತ್ರವಾದ ನೆನಪು ಸದಾ ಇರುತ್ತಿತ್ತು. ಆದರೆ, ಲಾಲಾಜಿ ಅವರ ದೇಶವ್ಯಾಪಿಯಾದ ಗುಣಗಳನ್ನೂ, ಅವರ ಅಖಿಲ ಭಾರತೀಯ ಸೇವೆಯನ್ನು ತಿಳಿಯದವರಾರು ? ಅವರಿಗೆ " ಪಂಜಾಬ್ ಕೇಸರಿ " ಎಂಬ ಬಿರುದು ಸುಮ್ಮನೆ ಸಿಕ್ಕಿರಲಿಲ್ಲ ?೧೫೩*

*[ಎಲ್ಲೋರಿನಲ್ಲಿ ಲಾಲಾಜಿ ಅವರ ಭಾವಚಿತ್ರವನ್ನು ಉದ್ಘಾಟಿಸಿದಾಗ ೨೭–೧೨-೩೩ರಂದು ಮಾಡಿದ ಭಾಷಣ.]

ಜನ ರಾಜನೀತಿಯನ್ನು ಮರೆತುಬಿಟ್ಟಮೇಲೂ ಜನತೆಯ ಗಮನವನ್ನು ಸೆಳೆಯುವ ಅನೇಕ ಕ್ಷಣ–ಭಂಗುರವಾದ ವಸ್ತುಗಳು ಸ್ಮೃತಿಪಥದಿಂದ ಮರೆಯಾದಮೇಲೂ ಲಾಲಾಜಿ ಅವರ ಗಂಭೀರ-ವಿಶಾಲ-ಹರಿಜನ ಪ್ರೇಮವನ್ನೂ, ಅವರ ತತ್ಸಂಬಂಧದ ಸೇವೆಯನ್ನೂ ಕೋಟ್ಯಂತರ ಹಿಂದೂಗಳೇ ಅಲ್ಲ, ಕೋಟಿಶಃ ಸವರ್ಣಹಿಂದೂಗಳೂ ಸಹ—ಹಿಂದೂಗಳೇಕೆ, ಇಡೀ ಭಾರತದ ಜನ—ಬಹಳ ಶ್ರದ್ಧಾಭಕ್ತಿಯಿಂದ ನೆನಪು ಮಾಡಿಕೊಳ್ಳುವರು. ಲಾಲಾಜಿ ಅವರು ಮಹಾ ಮಾನವ ಪ್ರೇಮಿಗಳಾಗಿದ್ದರು. ಅವರ ಮಾನವಪ್ರೇಮ ವಿಶ್ವವ್ಯಾಪಿಯಾಗಿತ್ತು. ಅವರ ಒಂದೊಂದು ವಾರ್ಷಿಕ ಬಂದಾಗಲೂ, ಅದರ ಹಿಂದಿನ ವಾರ್ಷಿಕಕ್ಕಿಂತ ಹೆಚ್ಚುಹೆಚ್ಚಾಗಿ ನಮ್ಮ ಜೀವನದಲ್ಲಿ ಲಾಲಾಜಿ ಅವರನ್ನು ಸಜೀವವಾಗಿಸಿಕೊಳ್ಳುತ್ತ ಹೋಗಬೇಕು. ಲಾಲಾಜಿ ಅವರಂಥ ಸಮಾಜ ಸುಧಾರಕರ ನಿಧನವಾದರೆ, ಅವರ ದೇಹ ಮಾತ್ರ ನಾಶವಾಗುತ್ತದೆ. ದೇಹದೊಡನೆ ಅವರ ವಿಚಾರ ಹಾಗೂ ಕಾರ್ಯ ನಾಶವಾಗುವುದಿಲ್ಲ. ಅವರ ಶಕ್ತಿ ಉತ್ತರೋತ್ತರ ಹೆಚ್ಚುತ್ತಲೇ ಹೋಗುತ್ತದೆ. ಸಮಯ ಕಳೆದಂತೆ, ಜೀರ್ಣ ಶರೀರದ ಹೊರಗೆ ಅದರ ಪ್ರಭಾವ ಸ್ವತಃ ಪ್ರಕಟವಾದಂತೆ ಅದರ ಅನುಭವವೂ ನಮಗೆ ಹೆಚ್ಚುಹೆಚ್ಚು ಆಗುತ್ತ ಹೋಗುತ್ತದೆ. ಮನುಷ್ಯನ ಒಳಗಿರುವ ಕ್ಷಣಭಂಗುರ ಅಂಶ ದೇಹದೊಡನೆ ನಾಶವಾಗುತ್ತದೆ. ಆದರೆ, ಮನುಷ್ಯನಲ್ಲಿರುವ ಶಾಶ್ವತವಾದ ಅವಿನಾಶಿಯಾದ ಅಂಶ ದೇಹ ಭಸ್ಮೀಭೂತವಾದಮೇಲೂ ಜೀವಂತವಾಗಿರುತ್ತದೆ. ಹಾಗೂ ದೇಹಬಂಧನ ದೂರವಾದಮೇಲೆ ಮತ್ತೂ ಹೆಚ್ಚು ಪ್ರಕಾಶಮಾನ

ವಾಗುತ್ತದೆ. ಈ ವಿಚಾರವನ್ನು ಗಮನದಲ್ಲಿರಿಸಿಕೊಂಡು, ಲಾಲಾಜಿ ಅವರ ನೆನಪನ್ನು ಚಿರಂತನವಾಗಿಸಬೇಕು. ಹರಿಜನ ಹಿಂದೂಗಳೂ ಸವರ್ಣ ಹಿಂದೂಗಳೂ ಸ್ವರ್ಗೀಯ ಲಾಲಾಜಿ ಅವರ ಪುಣ್ಯಸ್ಮರಣೆ ಮಾಡಿ, ಹಿಂದೂ ಸಮಾಜದಿಂದ ಅಸ್ಪೃಶ್ಯತೆಯ ಪಾಪ-ಕಳಂಕವನ್ನು ತೊಳೆದುಬಿಡಲು ಹೊಸದಾಗಿ ಸಂಕಲ್ಪ ಮಾಡಬೇಕು. ಅತ್ಯಾಚಾರವನ್ನು ಸಹಿಸಿಕೊಂಡೇ ಬಂದಿರುವುದರ ಪರಿಣಾಮವಾಗಿ ತಮ್ಮಲ್ಲಿ ಮೂಡಿರುವ ದೋಷಗಳನ್ನು ಹರಿಜನರು ದೂರೀಕರಿಸಲಿ ; ಹರಿಜನರು ಹುಟ್ಟು ಅಸ್ಪೃಶ್ಯರೆಂದೂ, ತಾವು ಹುಟ್ಟು ಉತ್ತಮರೆಂದೂ ಭಾವಿಸಿ ತಾವು ಮಾಡುತ್ತ ಬಂದಿರುವ ಪಾಪ ವನ್ನು ತೊಳೆದುಕೊಂಡು ಸವರ್ಣೀಯರು ಶುದ್ಧರಾಗಲಿ.೧೫೪

ಲಾಲಾ ಲಜಪತರಾಯರು 'ಪಂಜಾಬಿನ ಸಿಂಹ' ಎನಿಸಿಕೊಂಡಿದ್ದರು. ಅವರೇನೋ ತೀರಿಕೊಂಡರು. ನಾನು ಅವರ ಮಿತ್ರ. "ನೀವು ಹಿಂದಿಯಲ್ಲಿ ಮಾತನಾಡುವುದನ್ನು ಯಾವಾಗ ಕಲಿಯುವಿರಿ ?"—ಎಂದು ಅವರೊಡನೆ ತಮಾಷೆ ಮಾಡುತ್ತಿದ್ದೆ. "ಅದು ಆಗದ ಮಾತು"—ಎಂದು ಅವರು ಹೇಳುತ್ತಿದ್ದರು. ಅವರು ಆರ್ಯಸಮಾಜದವರು. ಮನೆಯಲ್ಲಿ ಹವನ ಮೊದಲಾದುವನ್ನು ಮಾಡಿಸುತ್ತಿದ್ದರು—ಎಂಬುದನ್ನು ನೆನಪು ಮಾಡಿಕೊಳ್ಳಿ. ಅವರ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದುದರಿಂದ ಇದೆಲ್ಲ ವನ್ನೂ ನೋಡಿದ್ದೆ. ಹವನದಲ್ಲಿ ಸಂಸ್ಕೃತದ್ದೇ ಉಪಯೋಗ. ವಿಚಿತ್ರ ವಿಷಯವೆಂದರೆ, ಇದೆಲ್ಲ ನಡೆದಿದ್ದರೂ ದೇವನಾಗರೀ ಲಿಪಿಯಲ್ಲಿ ಅಲ್ಪ-ಸ್ವಲ್ಪ ಓದುತ್ತಿದ್ದರೂ ಅವರ ಮಾತೃಭಾಷೆ ಉರ್ದುವೇ ಆಗಿತ್ತು. ಉರ್ದು ವಿನಲ್ಲಿ ಬೇಕಾದರೆ ಘಂಟೆಗಟ್ಲೆ ಮಾತನಾಡುವೆ—ಎನ್ನುತ್ತಿದ್ದರು ; ಆಡು ತ್ತಲೂ ಇದ್ದರೆನ್ನಿ. ಅವರ ಉರ್ದುವಿನ ವಿಷಯ ಏನು ಹೇಳಲಿ ?— ಅವರು ದೊಡ್ಡ ವಿದ್ವಾಂಸರಿದ್ದು, ವೇಗವಾಗಿ ಬರೆಯುತ್ತಲೂ ಇದ್ದರು. ಇಂಗ್ಲೀಷಿನಲ್ಲೂ ಘಂಟೆಗಟ್ಲೆ ಮಾತನಾಡುತ್ತಿದ್ದರು. ಆದರೆ, ಸಂಸ್ಕೃತ ಮಯ ಹಿಂದಿ ಅವರಿಗೆ ತಿಳಿಯುತ್ತಲೇ ಇರಲಿಲ್ಲ. ನಾನು ಆಯ್ದು ಆಯ್ದು ಅರಬ್ಬಿ-ಫಾರಸೀ ಶಬ್ದಗಳನ್ನು ಬಳಸಿದರೆ, ಅವರಿಗೆ ಅರ್ಥವಾಗುತ್ತಿತ್ತು.೧೫೫

ಗಣೇಶ ಶಂಕರ ವಿದ್ಯಾರ್ಥಿ

ಗಣೇಶ ಶಂಕರ ವಿದ್ಯಾರ್ಥಿಗಳ ಮರಣ ನಮ್ಮೆಲ್ಲರಿಗೂ ಅಸೂಯೆಯನ್ನು ಉಂಟುಮಾಡುವಂಥದು. ಅವರ ರಕ್ತ, ಅಂತಿಮವಾಗಿ ಎರಡೂ ಜಾತಿಗಳನ್ನು ಒಂದುಗೂಡಿಸುವ ' ಸಿಮೆಂಟ್ '. ಯಾವುದೆ, ಪ್ಯಾಕ್ಟ್ ಅಥವಾ ಒಪ್ಪಂದ ನಮ್ಮ ಹೃದಯಗಳನ್ನು ಒಂದು ಗೂಡಿಸಲಾರದು. ಆದರೆ, ಗಣೇಶ ಶಂಕರ ವಿದ್ಯಾರ್ಥಿಗಳು ತೋರಿರುವಂಥ ವೀರತೆ, ಕಟ್ಟಕಡೆಗೆ ಅತೀವ ಪಾಷಾಣ-ಹೃದಯಗಳನ್ನೂ ಕರಗಿಸಿ, ಒಂದುಗೂಡಿಸುವುದು ಖಂಡಿತ. ಆದರೆ, ಈ ವಿಷ, ಯಾವುದೇ ರೀತಿಯಿಂದ ಆಗಿರಲೊಲ್ಲದೇಕೆ, ಎಷ್ಟು ಆಳವಾಗಿ ವ್ಯಾಪಿಸಿದೆಯೆಂದರೆ, ಗಣೇಶ ಶಂಕರ ವಿದ್ಯಾರ್ಥಿಗಳಂಥ ಮಹಾನ್ ಆತ್ಮತ್ಯಾಗ ಹಾಗೂ ಅತೀವ ವೀರಪುರುಷರ ರಕ್ತವೂ ಕೂಡ ಇದನ್ನು ತೊಳೆದುಹಾಕಲು ಪ್ರಾಯಶಃ ಸಾಕಾಗಲಿಕ್ಕಿಲ್ಲ. ಮುಂದೆ ಅಂಥದೇ ಪ್ರಸಂಗ ಒದಗಿದರೆ, ಈ ಭವ್ಯ ಬಲಿದಾನದಿಂದ ಅಂಥದೇ ಪ್ರಯತ್ನ ಮಾಡುವ ಪ್ರೇರಣೆಯನ್ನು ನಾವು ಪಡೆಯಬಹುದು. ಅವರ ದುಃಖಿತ ವಿಧವೆ ಹಾಗೂ ಮಕ್ಕಳಿಗೆ ನಾನು ನನ್ನ ಆಂತರಿಕ ಸಮವೇದನೆಯನ್ನು ವ್ಯಕ್ತಪಡಿಸುವುದಿಲ್ಲ; ಆದರೆ, ಗಣೇಶ ಶಂಕರ ವಿದ್ಯಾರ್ಥಿಗಳ ಯೋಗ್ಯ ಪತ್ನಿ ಹಾಗೂ ಮಕ್ಕಳಾಗಿರುವ ಬಗೆಗೆ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಸತ್ತಿಲ್ಲ. ಅವರನ್ನು ನಾವು ಭೌತಿಕ ಶರೀರದಲ್ಲಿ ನೋಡುತ್ತಿದ್ದರೂ ಅರ್ಥಮಾಡಿಕೊಳ್ಳದೆ ಇದ್ದಾಗ ಜೀವಿಸಿದ್ದುದಕ್ಕಿಂತ ಹೆಚ್ಚು ನೈಜವಾದ ರೂಪದಲ್ಲಿ ಇಂದು ಅವರು ಜೀವಿಸಿದಾರೆ.೧೫೯

ಮೂವರು ಕಾರ್ಯಕರ್ತರು—ಇಬ್ಬರು ಹಿಂದೂಗಳು, ಒಬ್ಬ ಮುಸಲ್ಮಾನ್—ದಂಗೆಯನ್ನು ನಿಲ್ಲಿಸುವ ಉದ್ದೇಶದಿಂದ ಹೊರಟರು; ಅದೇ ಪ್ರಯತ್ನದಲ್ಲಿ ಮಡಿದರು. ಅವರು ಸತ್ತರೆಂದು ನಾನು ದುಃಖಿಸುವುದಿಲ್ಲ; ನನಗೆ ಅಳು ಬರುವುದಿಲ್ಲ. ಇದೇ ರೀತಿ ಶ್ರೀ ಗಣೇಶ ಶಂಕರ ವಿದ್ಯಾರ್ಥಿಗಳು ಕಾನಪುರದ ದಂಗೆಯಲ್ಲಿ ತಮ್ಮ ಪ್ರಾಣವನ್ನು ಬಲಿಕೊಟ್ಟರು.
* ದಂಗೆಯ ಸ್ಥಳಕ್ಕೆ ಹೋಗಬೇಡಿ; ಅಲ್ಲಿ ಜನ ಹುಚ್ಚರಾಗಿ ಹೋಗಿದಾರೆ.

ನಿಮ್ಮನ್ನು ಹೊಡೆದು ಹಾಕಿ ಬಿಟ್ಟಾರು"—ಎಂದು ಹೇಳಿ, ಅವರನ್ನು ತಡೆದರು. ಆದರೆ, ಗಣೇಶ ಶಂಕರ ವಿದ್ಯಾರ್ಥಿಗಳು ಹಾಗೆ ಹೆದರಿ ಕೂಡು ವವರಲ್ಲ. ತಾವು ಹೋದರೆ, ದಂಗೆ ನಿಲ್ಲುವುದೆಂಬ ನಂಬಿಕೆ ಅವರಿಗಿತ್ತು. ಅಲ್ಲಿಗೆ ಹೋದರು. ದಂಗೆಯ ಆವೇಶದಲ್ಲಿ ಹುಚ್ಚರಾಗಿದ್ದ ಜನರ ಕೈ ಯಿಂದ ಕೊಲ್ಲಲ್ಪಟ್ಟರು. ಅವರ ಮರಣದ ಸುದ್ದಿ ಕೇಳಿ ನನಗೆ ಸಂತೋ ಷವೇ ಆಗಿತ್ತು. ನಿಮ್ಮನ್ನು ಪ್ರಚೋದಿಸುವುದಕ್ಕಾಗಿ ಇದೆಲ್ಲವನ್ನು ಹೇಳು ತ್ತಿಲ್ಲ. ಸಾಯುವ ಪಾಠ ಕಲಿತರೆ ಎಲ್ಲವೂ ನೆಟ್ಟಗಾಗುವುದು ಎಂಬ ಮಾತನ್ನು ತಿಳಿಸಿಕೊಡುತ್ತಿರುವೆನಷ್ಟೇ. ಗಣೇಶ ಶಂಕರ ವಿದ್ಯಾರ್ಥಿ, ವಸಂತರಾವ್ ಹಾಗೂ ರಜ್ಜಬ್ ಆಲಿ ಅವರಂಥ ಹಲವು ನವಯುವಕರು ಹೊರಬಿದ್ದರೆ, ದಂಗೆ ಸದಾಕಾಲಕ್ಕೂ ನಿಂತು ಹೋಗುವುದು.೧೫೨

ವಿನೋಬಾ ಭಾವೆ

ಶ್ರೀ ವಿನೋಬಾ ಭಾವೆ ಯಾರು? ನಾನು ಈ ಸತ್ಯಾಗ್ರಹಕ್ಕೆ ಅವ ರನ್ನೇ ಆರಿಸಿದುದುದೇಕೆ? ಬೇರೆ ಯಾರನ್ನೂ ಆರಿಸಲಿಲ್ಲವೇಕೆ? ನಾನು ಭಾರತಕ್ಕೆ ಮರಳಿದ ಮೇಲೆ ೧೯೧೬ ರಲ್ಲಿ ಅವರು ಕಾಲೇಜ್ ಬಿಟ್ಟಿ ದ್ದರು. ಅವರು ಸಂಸ್ಕೃತ ಪಂಡಿತರು. ಪ್ರಾರಂಭದಿಂದಲೇ ಆಶ್ರಮಕ್ಕೆ ಸೇರಿಕೊಂಡಿದ್ದರು. ಆಶ್ರಮದ ಪ್ರಪ್ರಥಮ ಸದಸ್ಯರಲ್ಲಿ ಅವರೊಬ್ಬರು. ತಮ್ಮ ಸಂಸ್ಕೃತದ ಅಧ್ಯಯನವನ್ನು ಮುಂಬರಿಸಲಿಕ್ಕೆಂದು ಒಂದು ವರುಷ ರಜಾ ತೆಗೆದುಕೊಂಡು ಹೊರಟರು. ಒಂದು ವರುಷದ ನಂತರ—ಒಂದು ವರುಷದ ಹಿಂದೆ ಆಶ್ರಮ ಬಿಟ್ಟುಹೋಗಿದ್ದ ಗಳಿಗೆಗೇ ಸರಿಯಾಗಿ—ಸದ್ದಿಲ್ಲದೆ ಆಶ್ರಮಕ್ಕೆ ಮರಳಿದರು. ಆ ದಿನ ಅವರು ಆಶ್ರಮಕ್ಕೆ ವಾಪಸು ಬರಬೇಕಾ ಗಿದ್ದಿತೆಂಬುದನ್ನು ನಾನು ಮರೆತೇಬಿಟ್ಟಿದ್ದೆ. ಅವರು ಆಶ್ರಮದ ಎಲ್ಲ ಬಗೆಯ ಸೇವಾವೃತ್ತಿಗಳಲ್ಲಿ—ಅಡಿಗೆ ಮಾಡುವುದರಿಂದ ಹಿಡಿದು ಕಕ್ಕಸು ಸ್ವಚ್ಛಮಾಡುವುದರವರೆಗೆ—ಭಾಗವಹಿಸಿದಾರೆ. ಅವರ ಸ್ಮರಣ-ಶಕ್ತಿ ಆಶ್ಚರ್ಯಜನಕವಾದುದು. ಅವರು ಸ್ವಭಾವತಃ ಅಧ್ಯಯನ ಶೀಲರು.

ತಮ್ಮ ಕಾಲದಲ್ಲಿ ಹೆಚ್ಚೆಚ್ಚು ಭಾಗವನ್ನು ನೂಲುವುದರಲ್ಲೇ ಕಳೆಯುತ್ತಾರೆ; ಅದರಲ್ಲಿ ಒಳ್ಳೆ ನಿಷ್ಣಾತರೂ ಆಗಿದಾರೆ. ಆ ವಿಷಯದಲ್ಲಿ ಅವರಿಗೆ ಸರಿಗಟ್ಟ ಬಲ್ಲವರು ಬಹಳ ಕಡಿಮೆ. ನೂಲುವುದನ್ನು ಇಡೀ ಕಾರ್ಯಕ್ರಮದ ಕೇಂದ್ರವಾಗಿ ಮಾಡಿಕೊಳ್ಳುವುದರಿಂದಲೇ ಗ್ರಾಮಗಳ ಬಡತನ ದೂರವಾಗು ವುದೆಂದು ಅವರ ನಂಬಿಕೆ. ಸ್ವಭಾವತಃ ಶಿಕ್ಷಕರಾಗಿರುವುದರಿಂದ, ಕೈಕಸ ಬಿನ ಮೂಲಕ ಮೂಲ ಶಿಕ್ಷಣದ ಯೋಜನೆಯನ್ನು ವಿಕಾಸಗೊಳಿಸು ವುದರಲ್ಲಿ ಶ್ರೀಮತಿ ಆಶಾದೇವಿಯವರಿಗೆ ಬಹಳ ನೆರವು ನೀಡಿದಾರೆ. ಶ್ರೀ ವಿನೋಬಾ ನೂಲುವುದನ್ನೇ ಮೂಲ ಕೈಕಸಬಾಗಿ ಪರಿಗಣಿಸಿ ಒಂದು ಪುಸ್ತಕವನ್ನು ಬರೆದಿದಾರೆ. ಅದು ಪೂರ್ಣ ಮೌಲಿಕ ಗ್ರಂಥ. ನೂಲು ವುದು ಮೂಲಶಿಕ್ಷಣದಲ್ಲಿ ಪರಿಪೂರ್ಣವಾಗಿ ಉಪಯೋಗಮಾಡಿಕೊಳ್ಳಲು ಬರುವಂಥ ಉತ್ತಮವಾದ ಕೈಕಸಬು ಎಂಬುದನ್ನು ಅವರು ಪರಿಹಾಸ್ಯ ಮಾಡುವವರಿಗೂ ಸಿದ್ಧಪಡಿಸಿ, ತೋರಿದಾರೆ; ತಕಲಿಯಿಂದ ನೂಲುವುದರಲ್ಲಿ ಅವರು ಕ್ರಾಂತಿಯನ್ನೇ ಮಾಡಿದಾರೆ ; ಅದರಲ್ಲಿ ಅಡಗಿರುವ ಸಮಸ್ತ ಶಕ್ತಿ ಯನ್ನು ಶೋಧಿಸಿಬಿಟ್ಟಿದಾರೆ. ಹಿಂದೂಸ್ಥಾನದಲ್ಲಿ ಕೈನೂಲಿಕೆಯಲ್ಲಿ ಇವರು ಸಾಧಿಸಿರುವಷ್ಟು ಪರಿಪೂರ್ಣತೆಯನ್ನು ಬೇರೆ ಯಾರೂ ಸಾಧಿಸಿಲ್ಲ.

ಅವರ ಹೃದಯದಲ್ಲಿ ಸ್ಪೃಶ್ಯಾಸ್ಪೃಶ್ಯತೆಯ ಗಂಧ ಸಹ ಇಲ್ಲ. ಸಾಂಪ್ರದಾಯಿಕ ಐಕ್ಯತೆಯಲ್ಲಿ ನನಗಿರುವಷ್ಟೇ ವಿಶ್ವಾಸ ಅವರಿಗೂ ಇದೆ. ಇಸ್ಲಾಂಧರ್ಮದ 'ಗುಣ ವೈಶಿಷ್ಟ್ಯ'ವನ್ನು ಅರಿತುಕೊಳ್ಳಲಿಕ್ಕಾಗಿ ಒಂದು ವರುಷ ಕಾಲ 'ಕೊ ರಾ ನ್ ಶ ರೀ ಫ'ನ್ನು ಅರಬ್ಬಿ-ಮೂಲದಲ್ಲಿಯೇ ಅಭ್ಯಾಸ ಮಾಡಿದಾರೆ. .ಅದರ ಸಲುವಾಗಿಯೇ ಅರಬ್ಬಿ ಭಾಷೆಯನ್ನು ಕಲಿ ತರು. ತಮ್ಮ ನೆರೆಯ ಮುಸಲ್ಮಾನ—ಸೋದರರೊಡನೆ ಸಜೀವ ಸಂಪರ್ಕ ಬೆಳೆಸಿಕೊಳ್ಳಲು ಅದು ಆವಶ್ಯಕವೆಂದು ಅವರಿಗೆ ಅನಿಸಿತು.

ಅವರ ಬಳಿ ಶಿಷ್ಯರ, ಕಾರ್ಯಕರ್ತರ ಒಂದು ತಂಡವೇ ಇದೆ. ಅವರು ಸಂಜ್ಞೆಮಾಡಿದರೆ ಸಾಕು, ಯಾವ ರೀತಿಯ ಬಲಿದಾನಮಾಡುವುದಕ್ಕೂ ತಯಾರಾಗಿರುವಂಥವರ ತಂಡ ಅದು ! ಒಬ್ಬ ಯುವಕ ಕುಷ್ಠರೋಗಿಗಳ ಸೇವೆಗಾಗಿಯೇ ತನ್ನ ಜೀವನವನ್ನು ಸಮರ್ಪಣೆಮಾಡಿದಾನೆ. ಆತನನ್ನು ಆ ಕಾರ್ಯಕ್ಕೆ ತಯಾರು ಮಾಡಿದ ಕೀರ್ತಿ ಶ್ರೀ ವಿನೋಬಾ ಅವರಿಗೇ ಸಲ್ಲ

ತಕ್ಕದು. ಔಷಧಿಗಳ ಜ್ಞಾನ ಸ್ವಲ್ಪವೂ ಇರದಿದ್ದರೂ, ತನ್ನ ಕಾರ್ಯದಲ್ಲಿ ಅಚಲ ಶ್ರದ್ಧೆ ಇರುವುದರಿಂದ ಆತ ಕುಷ್ಠರೋಗದ ಚಿಕಿತ್ಸೆಯನ್ನು ಸಂಪೂರ್ಣವಾಗಿ ತಿಳಿದುಕೊಂಡಿದಾನೆ. ಅವರ ಸೇವೆಗಾಗಿ ಅನೇಕ ಚಿಕಿತ್ಸಾಲಯಗಳನ್ನು ತೆರೆದಿದಾನೆ. ಆತನ ಪರಿಶ್ರಮದಿಂದ ನೂರಾರು ಮಂದಿ ಕುಷ್ಠರೋಗಿಗಳು ಗುಣ ಹೊಂದಿದಾರೆ. ಈಚೆಗೆ ಕುಷ್ಠರೋಗಿಗಳ ಚಿಕಿತ್ಸೆಯ ವಿಷಯದಲ್ಲಿ ಮರಾಠಿಯಲ್ಲಿ ಒಂದು ಪುಸ್ತಕವನ್ನು ಬರೆದಿದಾರೆ.

ವಿನೋಬಾ ಅವರು ಅನೇಕ ವರುಷಗಳ ಕಾಲ ಮಹಿಳಾಶ್ರಮದ ಸಂಚಾಲಕರಾಗಿಯೂ ಇದ್ದರು. ದರಿದ್ರನಾರಾಯಣನ ಸೇವೆಯ ಮೇಲಿನ ಪ್ರೇಮ ಅವರನ್ನು ವರ್ಧಾ ಸಮೀಪದಲ್ಲಿರುವ ಹಳ್ಳಿಯೊಂದಕ್ಕೆ ಒಯ್ದಿತು. ಈಗ ವರ್ಧಾಕ್ಕೆ ಐದು ಮೈಲಿ ದೂರದಲ್ಲಿರುವ ಪವನಾರ್ ಎಂಬ ಗ್ರಾಮಕ್ಕೆ ಹೋಗಿ ನೆಲೆಸಿದಾರೆ. ಅಲ್ಲಿ ತಾವು ತಯಾರಿಸಿರುವ ಶಿಷ್ಯರ ಮೂಲಕ ಗ್ರಾಮಸ್ಥರೊಡನೆ ಸಂಪರ್ಕ ಸ್ಥಾಪಿಸಿಕೊಂಡಿದಾರೆ. ಹಿಂದೂ ಸ್ಥಾನಕ್ಕೆ ರಾಜಕೀಯ ಸ್ವಾತಂತ್ರ್ಯ ಆವಶ್ಯಕ ಎಂಬುದನ್ನು ಅವರು ಒಪ್ಪುತ್ತಾರೆ. ಅವರು ಪಕ್ಷಪಾತರಹಿತರಾದ ಇತಿಹಾಸದ ವಿದ್ವಾಂಸರು. ರಚನಾತ್ಮಕ ಕಾರ್ಯಕ್ರಮದ ಹೊರತು ಗ್ರಾಮಸ್ತರಿಗೆ ನಿಜವಾದ ಸ್ವಾತಂತ್ರ್ಯ ದೊರೆಯುವುದಿಲ್ಲವೆಂಬುದೂ, ರಚನಾತ್ಮಕ ಕಾರ್ಯಕ್ರಮದ ಕೇಂದ್ರ ಖಾದಿಯೇ ಎಂಬುದೂ ಅವರ ನಿಶ್ಚಿತ ಅಭಿಪ್ರಾಯ. ಚರಖಾ ಅಹಿಂಸೆಯ ಬಹಳ ಉಪಯುಕ್ತವಾದ ಬಾಹ್ಯಚಿಹ್ನೆ ಎಂಬುದು ಅವರ ವಿಶ್ವಾಸ. ಚರಖಾ ಅವರ ಜೀವನದ ಅಂಗವೇ ಆಗಿಬಿಟ್ಟಿದೆ. ಅವರು ಹಿಂದಿನ ಸತ್ಯಾಗ್ರಹ ಸಮರಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಅವರು ರಾಜನೀತಿಯ ವೇದಿಕೆಯಲ್ಲಿ ಎಲ್ಲರ ಮುಂದೆ ಬಂದವರಲ್ಲ. ಮೊದಲೇ ರಾಜನೈತಿಕ ಭಾಷಣಗಳ ಅಖಂಡ ಪ್ರವಾಹ ಸಾಗಿರುವಲ್ಲಿ ಹೋಗಿ ಇನ್ನೂ ಅಷ್ಟು ಭಾಷಣ ಬಿಗಿದು ಬರುವುದರಿಂದ ಶಾಂತ-ಭಂಗದ ಪ್ರಯೋಗ ಹೆಚ್ಚು ಪ್ರಭಾವಶಾಲಿಯಾಗುವುದೆಂಬುದು ಇತರ ಹಲವು ಸಂಗಾತಿಗಳ ಹಾಗೆ ಇವರ ವಿಶ್ವಾಸವೂ ಆಗಿದೆ. ಚರಖಾದಲ್ಲಿ ಹಾರ್ದಿಕ ಶ್ರದ್ಧೆ ಇಟ್ಟಿಲ್ಲದೆ, ರಚನಾತ್ಮಕ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸದೆ, ಅಹಿಂಸಕ ಪ್ರತೀಕಾರ ಸಾಧ್ಯವಿಲ್ಲವೆಂಬುದು ಅವರ ಸಂಪೂರ್ಣ ವಿಶ್ವಾಸ.೧೫೮

ಶ್ರೀ ವಿನೋಬಾ ಅವರು ಯುದ್ಧಕ್ಕೆ ವಿರೋಧಿಗಳು. ಆದರೂ, ತಮ್ಮ ಅಂತರಾತ್ಮಕ್ಕೆ ಕೊಡುವಷ್ಟೇ ಗೌರವವನ್ನು, ಯುದ್ಧಕ್ಕೇ ವಿರೋಧಿಗಳಲ್ಲದಿದ್ದರೂ, ಈಗಿನ ಯುದ್ಧದಲ್ಲಿ ಭಾಗವಹಿಸಲು ಯಾರ ಅಂತರಾತ್ಮ ಒಪ್ಪುವುದಿಲ್ಲವೋ ಅಂಥವರ ಅಂತರಾತ್ಮಕ್ಕೂ ಕೊಡುತ್ತಾರೆ. ಶ್ರೀ ವಿನೋಬಾ ಅವರು ಎರಡೂ ಪಕ್ಷಗಳ ಪ್ರತಿನಿಧಿಗಳಂತಿದ್ದರೂ ಈಗಿನ ಯುದ್ಧವನ್ನು ಮಾತ್ರ ವಿರೋಧಿಸುವ ಪಕ್ಷಕ್ಕೆ ಓರ್ವ ವಿಶೇಷ ಪ್ರತಿನಿಧಿಯನ್ನು ಆಯ್ಕೆಮಾಡುವ ಆವಶ್ಯಕತೆಯ ಅರಿವು ಆದರೂ ಆಗಬಹುದು.

ವಿನೋಬಾ ಅವರು ಬರೆಯಬಲ್ಲರು. ಆದರೆ, ಎಂದೂ ಬರೆಯಲೊಲ್ಲರು. ಶಾಸ್ತ್ರರಚನೆಗಾಗಿ ಕಾಲ ಬಳಸುವುದು ಅವರ ದೃಷ್ಟಿಯಲ್ಲಿ ಅಧರ್ಮ. ನಾನೂ ಅದನ್ನು ಅಧರ್ಮವೆಂದೇ ಭಾವಿಸುತ್ತೇನೆ. ಪ್ರಪಂಚಕ್ಕೆ ಶಾಸ್ತ್ರದ ಹಸಿವಿಲ್ಲ. ಪ್ರಾಮಾಣಿಕ ಕರ್ಮದ ಹಸಿವಿದೆ; ಸದಾ ಇರುವುದು. ಈ ಹಸಿವನ್ನು ಹಿಂಗಬಲ್ಲವನು, ಶಾಸ್ತ್ರರಚನೆಯಲ್ಲಿ ತೊಡಗದಿರಲಿ.೧೫೯

ಸ್ವಾಮೀ ವಿವೇಕಾನಂದ

ರಾಮಕೃಷ್ಣ ಹಾಗೂ ವಿವೇಕಾನಂದರ ವಿಷಯದಲ್ಲಿ ರೋಲಾ ಅವರ ಪುಸ್ತಕಗಳನ್ನು ಧ್ಯಾನಪೂರ್ವಕವಾಗಿಯೂ, ಅಭಿರುಚಿಯಿಂದಲೂ ಓದಿದೇನೆ. ರಾಮಕೃಷ್ಣರ ವಿಷಯದಲ್ಲಿ ಸದಾ ಪೂಜ್ಯಭಾವ ಇದ್ದೇಇತ್ತು. ಅವರ ವಿಷಯದಲ್ಲಿ ಓದಿದುದು ಸ್ವಲ್ಪವೇ ಆಗಿದ್ದರೂ, ಭಕ್ತರಿಂದ ಅನೇಕ ವಿಷಯಗಳನ್ನು ಕೇಳಿದ್ದೆ. ಅದರ ಮೇಲಿಂದ ಭಾವ ಹುಟ್ಟಿತ್ತು. ರೋಲಾ ಅವರ ಪುಸ್ತಕಗಳನ್ನು ಓದಿದುದರಿಂದ ಭಾವ ಹೆಚ್ಚಿತೆಂದು ಹೇಳಲಾರೆ. ವಸ್ತುತಃ ರೋಲಾ ಅವರ ಎರಡು ಪುಸ್ತಕಗಳೂ ಪಾಶ್ಚಾತ್ಯರ ಸಲುವಾಗಿ ಬರೆದಂಥವು. ನಮಗೆ ಅವುಗಳಲ್ಲಿ ಏನೂ ಸಿಕ್ಕುವುದೇ ಇಲ್ಲವೆನ್ನಲಾರೆ; ಆದರೆ ನನಗೆ ಸಿಕ್ಕಿರುವುದು ಬಹಳ ಕಡಿಮೆ. ಯಾವ ವಿಷಯಗಳ ಪ್ರಭಾವ ನನ್ನ ಮೇಲೆ ಬಿದ್ದಿದ್ದಿತೋ, ಅವುಗಳೂ ರೋಲಾ ಅವರ ಪುಸ್ತಕ

ಗಳಲ್ಲಿರುವ ಹೊಸ ವಿಷಯಗಳಿಂದ ಪ್ರಭಾವ ಹೆಚ್ಚಲಿಲ್ಲ. ರಾಮಕೃಷ್ಣರು ಎಷ್ಟು ಭಕ್ತರಾಗಿದ್ದರೋ ವಿವೇಕಾನಂದರೂ ಅಷ್ಟೇ ಭಕ್ತರಾಗಿದ್ದರೆಂದು ನನಗೆ ಅನಿಸಲಿಲ್ಲ, ವಿವೇಕಾನಂದರ ಪ್ರೇಮ ವಿಸ್ತೃತವಾದುದು ; ಅವರು ಭಗವನ್ಮಯವಾಗಿದ್ದರು ; ಭಾವನಾಪರವಶರೂ ಆಗುತ್ತಿದ್ದರು. ಆ ಭಾವನೆ ಅವರ ಜ್ಞಾನಕ್ಕೆ ಹಿರಣ್ಮಯ ಪಾತ್ರೆಯಾಗಿತ್ತು. ಧರ್ಮ ಹಾಗೂ ರಾಜನೀತಿಗಳಿಗೆ ಅವರು ಕಲ್ಪಿಸಿದ್ದ ಭೇದ ಸರಿಯಲ್ಲ. ಆದರೆ, ಅಂಥ ಮಹಾನ್ ವ್ಯಕ್ತಿಯನ್ನು ಟೀಕಿಸುವುದು ಹೇಗೆ? ಟೀಕೆಮಾಡುತ್ತ ಕುಳಿತರೆ, ಹೇಗೆ ಬೇಕಾದರೂ ಟೀಕೆಮಾಡಬಹುದು. ಅಂಥ ವ್ಯಕ್ತಿಗಳಿಂದ ತೆಗೆದುಕೊಳ್ಳಬಹುದಾದುದನ್ನು ತೆಗೆದುಕೊಳ್ಳುವುದಷ್ಟೇ ನಮ್ಮ ಧರ್ಮ. ತುಲಸೀದಾಸರ ಜಡ–ಚೇತನ ಸಂಬಂಧದ 'ದೋಹಾ' ನನ್ನ ಜೀವನದಲ್ಲಿ ಒಳಿತಾಗಿ ನೆಲೆಸಿದೆ; ಆದಕಾರಣ ಟೀಕೆಮಾಡುವುದು ನನಗೆ ರುಚಿಸುವುದೇ ಇಲ್ಲ. ಆದರೆ, ನನ್ನ ಮನಸ್ಸಿನಲ್ಲಿ ಯಾವುದಾದರೂ ಟೀಕೆ ಉಳಿದು ಹೋಗಿದ್ದರೆ, ಅದನ್ನು ತಿಳಿಯುವ ಇಚ್ಛೆ ನಿಮಗೆ ಇದ್ದೀತೆಂಬುದನ್ನು ಬಲ್ಲೆ. ಅಂತಲೆ, ಇಷ್ಟು ಬರೆದಿದೇನೆ : 'ವಿವೇಕಾನಂದರು ಮಹಾನ್‌ಸೇವಕರಾಗಿದ್ದರು ಎಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ತಾವು ಯಾವುದನ್ನು ಸತ್ಯವೆಂದು ಭಾವಿಸಿದ್ದರೋ ಅದಕ್ಕಾಗಿ ತಮ್ಮ ಶರೀರವನ್ನೇ ಸವೆಸಿದುದನ್ನು ನಾವು ಪ್ರತ್ಯಕ್ಷವಾಗಿಯೇ ನೋಡಿದೆವು. ೧೯೦೧ ರಲ್ಲಿ ನಾನು ಬೇಲೂರು ಮಠವನ್ನು ನೋಡಲು ಹೋಗಿದ್ದಾಗ, ವಿವೇಕಾನಂದರ ದರ್ಶನ ಮಾಡಲು ಬಹಳ ಇಚ್ಛೆಯಿತ್ತು. ಆದರೆ ಮಠದಲ್ಲಿದ್ದ ಸ್ವಾಮಿಗಳು, ಅವರು ರೋಗಗ್ರಸ್ತರಾಗಿ ಪಟ್ಟಣದಲ್ಲಿ ಇರುವುದಾಗಿಯೂ, ಯಾರೂ ಅವರನ್ನು ನೋಡುವ ಹಾಗಿಲ್ಲವೆಂದೂ ತಿಳಿಸಿದರು. ಆದರಿಂದ ನನಗೆ ನಿರಾಶೆಯಾಯಿತು. ನನ್ನಲ್ಲಿ ಪೂಜ್ಯಭಾವನೆ ಇರುವುದರ ದೆಸೆಯಿಂದ ಅನೇಕ ಸಂಕಟಗಳಿಂದ ಪಾರಾಗಿದೇನೆ. ನಾನು ಭಾವನಾಪೂರಿತನಾಗಿ ಧಾವಿಸಿ ಹೋಗಿ ಭೆಟ್ಟಿಯಾಗದ ಪ್ರಸಿದ್ಧ ವ್ಯಕ್ತಿ ಯಾರೂ ಆಗ ಇರಲಿಲ್ಲ. (ಆ ಸಮಯದಲ್ಲಿದ್ದ ಎಲ್ಲ ಪ್ರಸಿದ್ಧ ವ್ಯಕ್ತಿಗಳನ್ನೂ ನಾನು ಭಾವನಾಪೂರಿತನಾಗಿ ಧಾವಿಸಿ ಹೋಗಿ ಭೆಟ್ಟಿಯಾಗಿದ್ದೆ). ಬಹುತೇಕ ಸ್ಥಳಗಳಲ್ಲಿ ನಾನೂ ಕಲ್ಕತ್ತೆಯ ಉದ್ದವಾದ ರಸ್ತೆಗಳಲ್ಲಿ ಪಾದಯಾತ್ರೆಯನ್ನೇ ಮಾಡು

ತ್ತಿದ್ದೆ. ಅದರಲ್ಲಿ ಭಕ್ತಿಭಾವವಿತ್ತು ; ಹಣ ಉಳಿಸುವ ವೃತ್ತಿ ಇರಲಿಲ್ಲ. ಹಾಗೆ ನೋಡಿದರೆ, ನನ್ನ ಸ್ವಭಾವದಲ್ಲಿ ಈ ವಸ್ತು ಸದಾ ಇದ್ದೇ ಇದೆ.೧೬೦

ಸ್ವಾಮೀ ಶ್ರದ್ಧಾನಂದರು

ಸ್ವಾಮಿಾ ಶ್ರದ್ಧಾನಂದರ ಭಾಷಣಗಳು ಹಲವು ವೇಳೆ ಅನೇಕರಿಗೆ ಕೋಪ ಬರಿಸುವಂಥದಾಗಿರುವುದೆಂಬುದನ್ನು ನಾನು ಬಲ್ಲೆ. ಆದರೆ, ಅವರಿಗೂ ಹಿಂದೂ–ಮುಸ್ಲಿಂ ಐಕ್ಯತೆ ಆವಶ್ಯಕವಾಗಿ ಬೇಕು. ಆದರೆ ಒಂದು ದುರದೃಷ್ಟ—ಬಹುಶಃ ಒಂದಲ್ಲ ಒಂದು ದಿನ ಪ್ರತಿಯೊಬ್ಬ ಮುಸಲ್ಮಾನೇತರನೂ ಇಸ್ಲಾಂಧರ್ಮವನ್ನು ಸ್ವೀಕರಿಸುವನು ಎಂಬುದಾಗಿ ಬಹುಮಂದಿ ಮುಸಲ್ಮಾನರು ಭಾವಿಸುವಂತೆ, ಪ್ರತಿಯೊಬ್ಬ ಮುಸಲ್ಮಾನನನ್ನೂ ಆರ್ಯ ಸಮಾಜಕ್ಕೆ ಸೇರಿಸಬಹುದು–ಎಂಬುದಾಗಿ ಇವರು ಭಾವಿಸುತ್ತಾರೆ. ಶ್ರದ್ಧಾನಂದರು ನಿರ್ಭೀತರು; ಧೈರ್ಯಶಾಲಿಗಳು. ಅವರು ಏಕಾಕಿಯಾಗಿ ಗಂಗಾ ತೀರದ ಅರಣ್ಯ ಪ್ರದೇಶವನ್ನು ಜಗಜಗಿಸುವ ಗುರುಕುಲವಾಗಿ ಪರಿವರ್ತಿಸಿದರು. ಅವರಿಗೆ ತಮ್ಮಲ್ಲೂ, ತಮ್ಮ ಕಾರ್ಯದಲ್ಲೂ ಶ್ರದ್ಧೆಯಿದೆ; ಆದರೆ ಅವರು ಆತುರ-ಪ್ರಕೃತಿಯವರು; ಸಣ್ಣಸಣ್ಣ ಮಾತಿಗೂ ಉದ್ರೇಕಗೊಳ್ಳುತ್ತಾರೆ. ಇಷ್ಟೆಲ್ಲ ದೋಷಗಳಿದ್ದರೂ, ಅವರು ತಿಳಿಹೇಳಿದರೆ ಕೇಳುವವರಲ್ಲವೆನ್ನಲಾರೆ. ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಿನಿಂದಲೇ ಸ್ವಾಮಿಾಜಿ ಅವರ ಬಗೆಗೆ ನನಗೆ ಅಕ್ಕರೆ ಮೂಡಿಬಂದಿದೆ. ಈಗೀಗ ಅವರನ್ನು ಹೆಚ್ಚೆಚ್ಚು ಒಳಿತಾಗಿ ಅರ್ಥಮಾಡಿಕೊಳ್ಳಲು ತೊಡಗಿದೇನೆಂಬುದು ದಿಟ; ಆದರೆ ಆ ಕಾರಣದಿಂದ ಅವರ ಮೇಲಿನ ಪ್ರೇಮವೇ ನನ್ನಿಂದ ಈ ಮಾತನ್ನು ಆಡಿಸುತ್ತಿದೆ.೧೬೧

ನಿರೀಕ್ಷಿಸಿದ್ದುದು ನಡೆದುಹೋಯಿತು. ಆರು ತಿಂಗಳ ಹಿಂದೆ ಸ್ವಾಮಿಾ ಶ್ರದ್ಧಾನಂದರು ಸತ್ಯಾಗ್ರಹಾಶ್ರಮಕ್ಕೆ ಬಂದು ಒಂದೆರೆಡು ದಿನ ತಂಗಿದ್ದರು. ಮಾತುಕತೆಯ ಸಂದರ್ಭದಲ್ಲಿ, ಹೊಡೆದು ಹಾಕಿ ಬಿಡು

ವುದಾಗಿ ಬೆದರಿಸುವ ಪತ್ರಗಳು ತಮಗೆ ಆಗಾಗ ಬರುತ್ತಿರುವುದಾಗಿ ತಿಳಿಸಿದರು. ಯಾವ ಸುಧಾರಕನನ್ನು ತಾನೆ ಕೆಣಕದೆ ಬಿಟ್ಟಿದ್ದಾರೆ? ಆದ ಕಾರಣ, ಅವರಿಗೆ ಆ ರೀತಿಯ ಪತ್ರ ಬರುತ್ತಿದ್ದುದರಲ್ಲಿ ಅಚ್ಚರಿಯೇನಿರಲಿಲ್ಲ. ಅವರನ್ನು ಹೊಡೆದು ಹಾಕಿದುದೂ ಅಸಾಧಾರಣವಾದ ವಿಷಯವೇನಲ್ಲ.

ಸ್ವಾಮಿಾಜಿ ಸುಧಾರಕರಾಗಿದ್ದರು. ಕರ್ಮವೀರರಾಗಿದ್ದರು ; ವಚನವೀರರಲ್ಲ. ತಮಗೆ ಯಾವುದರಲ್ಲಿ ವಿಶ್ವಾಸವಿತ್ತೋ ಅದನ್ನು ಪಾಲಿಸುತ್ತಿದ್ದರು. ಆ ವಿಶ್ವಾಸದಿಂದಾಗಿ ಅವರು ಕಷ್ಟ ಅನುಭವಿಸಬೇಕಾಯಿತು. ಅವರು ವೀರತ್ವದ ಅವತಾರವೇ ಆಗಿದ್ದರು. ಭಯಕ್ಕೆ ಎಂದೂ ತಲೆತಗ್ಗಿಸಿದವರಲ್ಲ. ಅವರು ಯೋಧರಾಗಿದ್ದರು. ಯೋಧನಾದವನು ರುಗ್ಣಶಯ್ಯೆಯಲ್ಲಿ ಸಾಯಲಚ್ಛಿಸುವುದಿಲ್ಲ. ಆತ ಯುದ್ಧಭೂಮಿಯಲ್ಲೇ ಸಾಯಲಿಚ್ಛಿಸುವನು.

ಸುಮಾರು ಒಂದು ತಿಂಗಳಿಂದ ಸ್ವಾಮಿಾ ಶ್ರದ್ಧಾನಂದರಿಗೆ ಬಹಳ ಖಾಯಿಲೆಯಾಗಿತ್ತು. ಡಾ. ಅನ್ಸಾರಿ ಅವರು ಅವರಿಗೆ ಚಿಕಿತ್ಸೆಮಾಡುತ್ತಿದ್ದರು ; ಸಾಧ್ಯವಿದ್ದಷ್ಟೂ ಆಕ್ಕರೆಯಿಂದ ಅವರ ಸೇವೆಮಾಡುತ್ತಿದ್ದರು. ಈ ತಿಂಗಳ ಆದಿಯಲ್ಲಿ ನಾನು ವಿಚಾರಿಸಿದಾಗ ಅವರ ಪುತ್ರರಾದ ಪ್ರೊ. ಇಂದ್ರ ಅವರು ಸ್ವಾಮಿಾಜಿ ಚೆನ್ನಿಗಿರುವುದಾಗಿಯೂ ನನ್ನ ಪ್ರೇಮಾಶೀರ್ವಾದಗಳನ್ನು ಬೇಡುವುದಾಗಿಯೂ ತಾರು ಮೂಲಕ ತಿಳಿಸಿದರು. ಅವರು ಕೇಳದೆಯೇ ಅವರನ್ನು (ಸ್ವಾಮಿಾಜಿ) ನಾನು ಪ್ರೀತಿಸುತ್ತಿದ್ದೆ ; ಅವರ ಸಲುವಾಗಿ ಭಗವಂತನಲ್ಲಿ ಪ್ರಾರ್ಥನೆಯನ್ನು ಸಲಿಸುತ್ತಲೂ ಇದ್ದೆ.

ಭಗವಂತ ಅವರಿಗೆ 'ಹುತಾತ್ಮ' ನ ಮರಣವನ್ನೇ ಕೊಡುವುದಿತ್ತು. ಅಂತಲೆ ಖಾಯಿಲೆಯಿಂದ ಮಲಗಿದ್ದಾಗಲೇ ಹಂತಕನಿಂದ ಕೊಲ್ಲಲ್ಪಟ್ಟರು. ಆ ಹಂತಕ ಇಸ್ಲಾಮಿನ ಬಗೆಗೆ ಧಾರ್ಮಿಕ ಚರ್ಚೆಮಾಡುವ ನೆಪದಿಂದ ಅವರ ಭೆಟ್ಟಿಕೋರಿದ ; ಸ್ವಾಮಿಾಜಿ ಅವರ ಪ್ರೇರಣೆಯಿಂದಲೇ ಆತನಿಗೆ ಭೆಟ್ಟಿ ಆಗುವ ಅವಕಾಶ ಸಿಕ್ಕಿತು. ಹಂತಕ ಬಾಯಾರಿಕೆ ತೀರಿಸಿಕೊಳ್ಳಲು ನೀರು ಬೇಡುವ ನೆಪದಲ್ಲಿ ಸ್ವಾಮಿಾಜಿ ಅವರ ಪ್ರಾಮಾಣಿಕ ನೌಕರನಾದ ಧರ್ಮಸಿಂಹನನ್ನು ನೀರುತರಲು ಹೊರಗೆ ಕಳುಹಿಸಿ, ಆತನ ಗೈರುಹಾಜರಿ

ಯಲ್ಲಿ ಹಾಸಿಗೆಯ ಮೇಲೆ ಮಲಗಿದ್ದ ರೋಗಿಯ ಎದೆಗೆ ಪ್ರಾಣಾಂತಕ ವಾದ ಎರಡು ಗುಂಡುಗಳನ್ನು ಹೊಡೆದನು. ಸ್ವಾಮಿಜಿ ಅವರ ಕೊನೆಯ ಮಾತುಗಳ ಸುದ್ದಿ ನಮಗೆ ತಿಳಿಯದು. ಆದರೆ, ಸ್ವಾಮಿಜಿ ಅವರನ್ನು ನಾನು ಸ್ವಲ್ಪವಾದರೂ ಅರ್ಥಮಾಡಿಕೊಂಡಿದ್ದರೆ, ಈ ಮಾತು ಸಂಪೂರ್ಣ ವಾಗಿ ನಿಸ್ಸಂದೇಹವಾದುದು—ತಾನು ಪಾಪ ಮಾಡುತ್ತಿರುವೆನೆಂಬುದನ್ನು ಅರಿಯದ ಆ ಹಂತಕನನ್ನು ಕ್ಷಮಿಸುವಂತೆ ಸ್ವಾಮಿಜಿ ಅವರು ಭಗವಂತ ನನ್ನು ಪ್ರಾರ್ಥಿಸಿರಬೇಕು. ಆದ ಕಾರಣ, ಗೀತೆಯ ಮಾತಿನಲ್ಲಿ ಹೇಳ ಬೇಕಾದರೆ, ಇಂಥ ಮರಣವನ್ನು ಪಡೆಯುವ ಯೋಧ ಧನ್ಯ.

ಮೃತ್ಯು ಯಾವ ಕಾಲಕ್ಕಾದರೂ ಶ್ರೇಯಸ್ಕರವಾದುದೆ. ತನ್ನ ಕರ್ತವ್ಯ-ಕರ್ಮ ಅಂದರೆ ಸತ್ಯಕ್ಕಾಗಿ ಪ್ರಾಣತ್ಯಾಗ ಮಾಡುವವನ ಪಾಲಿ ಗಂತೂ ಅದು ಮತ್ತೂ ಶ್ರೇಯಸ್ಕರವಾದುದು. ಮೃತ್ಯುವೆಂಬುದು ಪಿಶಾಚಿಯಲ್ಲ; ಎಲ್ಲರಿಗಿಂತ ದೊಡ್ಡ ಮಿತ್ರ. ಅದು ನಮ್ಮನ್ನು ಕಷ್ಟ ಗಳಿಂದ ಪಾರುಮಾಡುತ್ತದೆ. ನಮಗೆ ಸದಾ ಹೊಸ ಆಶೆ, ಹೊಸ ಅವಕಾಶ ವನ್ನು ನೀಡುತ್ತದೆ. ಅದು ನಿದ್ರೆಯ ಹಾಗೆ ಪುನಶ್ಚೇತನಕಾರಕವಾದುದು. ಆದರೂ ಮಿತ್ರನೊಬ್ಬ ತೀರಿಕೊಂಡರೆ, ದುಃಖಿಸುವ ಪದ್ಧತಿಯಿದೆ. ಆದರೆ ಹುತಾತ್ಮನಾದವನ ಮರಣಕ್ಕೆ ಇದು ಅನ್ವಯಿಸದು. ಆದಕಾರಣ, ಈ ಮೃತ್ಯುವಿನ ಬಗೆಗೆ ನಾನು ದುಃಖಿಸಲೊಲ್ಲೆ. ಸ್ವಾಮಿಜಿ ಹಾಗೂ ಅವರು ಸಂಬಂಧೀಕರು ಅಸೂಯೆಗೆ ಪಾತ್ರರು; ಕಾರಣ ಶ್ರದ್ಧಾನಂದಜಿ ಅವರು ನಿಧನರಾಗಿಯೂ ಜೀವಂತರಾಗಿದಾರೆ. ನಮ್ಮ ನಡುವೆ ತಮ್ಮ ಭೀಮಕಾಯ ಶರೀರವನ್ನು ಹೊತ್ತು ತಿರುಗುತ್ತಿದ್ದಾಗ ಎಷ್ಟರ ಮಟ್ಟಿಗೆ ಜೀವಂತ ರಾಗಿದ್ದರೋ ಅದಕ್ಕಿಂತ ಹೆಚ್ಚು ವಾಸ್ತವಿಕ ರೂಪದಲ್ಲಿ ಜೀವಿಸಿದಾರೆ. ಯಾವ ಕುಲದಲ್ಲಿ ಅವರು ಜನ್ಮತಾಳಿದರೋ, ಯಾವ ಜಾಡಿಗೆ ಅವರು ಸೇರಿದ್ದರೊ ಆ ಕುಲ, ಆ ಜಾತಿಯವರೆಲ್ಲರೂ ಈ ಮಹಿಮಾಮಯಿ ಮೃತ್ಯು ವಿನ ಸಂಬಂಧದಲ್ಲಿ ಅಭಿನಂದನೆಗೆ ಅರ್ಹರು. ಅವರು ವೀರಪುರುಷರು; ವೀರಗತಿಯನ್ನೇ ಹೊಂದಿದರು.೧೬೨

ಪತ್ರಿಕೆಯವರು ಬಂದು ಏನಾದರೂ ಹೇಳಬೇಕೆಂದು ಕೇಳಿದರು.

ಏನಾದರೂ ಹೇಳಬೇಕೆನಿಸುವ ಸ್ಥಿತಿಯಲ್ಲಿ ನಾನಿಲ್ಲವೆಂದೆ. ಶ್ರೀಮತಿ ನಾಯಿಡು ಅವರೂ ಏನಾದರೂ ಸಂದೇಶ ಕೊಡಬೇಕೆಂದು ಹೇಳಿದರು. ಅವರ ಮಾತಿಗೂ ನಾನು ಒಲ್ಲೆನೆಂದೆ. ಆದರೂ ಅದೇ ಆಜ್ಞೆ ಆಗುತ್ತಿದೆ. ಆದಕಾರಣ, ನನ್ನ ಉದ್ಗಾರವನ್ನು ವ್ಯಕ್ತಪಡಿಸಲು ಪ್ರಯತ್ನಿಸುವೆನು. ಆದರೂ ಏನೂ ಹೇಳುವ ಸ್ಥಿತಿಯಲ್ಲಿ ನಾನಿಲ್ಲ. ತತ್ಕಾಲದಲ್ಲಿ ನನ್ನ ಮನಸ್ಸಿನ ಮೇಲೆ ಆಗಿರುವ ಪ್ರಭಾವವನ್ನು ವ್ಯಕ್ತಪಡಿಸಲು ಆದೀತೇನೋ. ಲಾಲಾಜಿ ಅವರ ತಂತಿ ನನಗೆ ಮುಟ್ಟಿದೊಡನೆಯೇ, ಮಾಲವೀಯಜಿ ಮೊದಲಾದವರಿಗೆ ಸುದ್ದಿ ಕಳುಹಿಸಿದೆ. ಲಾಲಾಜೀ ಹಾಗೂ ಸ್ವಾಮಿಜಿ ಅವರ ಸುಪುತ್ರ ಇಂದ್ರರಿಗೆ ತಂತಿ ಕಳುಹಿಸಿದೆ. ತಂತಿಯಲ್ಲಿ ದುಃಖ ಅಥವಾ ಶೋಕವನ್ನು ಪ್ರಕಟಿಸದೆ, ಇದು ಸಾಮಾನ್ಯ ಮೃತ್ಯುವಲ್ಲ; ಈ ಮರಣದ ಬಗೆಗೆ ನಾನು ಅಳಲೊಲ್ಲೆ; ಈ ಮೃತ್ಯು ಸಹಿಸಲಾರದುದಾಗಿದ್ದರೂ, ದುಃಖಿಸಬೇಕೆಂದು ನನ್ನ ಮನಸ್ಸಿಗೆ ಅನಿಸುವುದಿಲ್ಲ. ಇಂಥದೇ ಮರಣ ನಮ್ಮೆಲ್ಲರಿಗೂ ದೊರೆತಲ್ಲಿ ಎಷ್ಟು ಚಂದ ಅನಿಸುತ್ತದೆ.

ಸ್ವಾಮಿ ಶ್ರದ್ಧಾನಂದರ ದೃಷ್ಟಿಯಿಂದ ಇದನ್ನು ಧರ್ಮಪ್ರಸಂಗವೆನ್ನಬಹುದು. ಅವರಿಗೆ ಖಾಯಿಲೆ ಆಗಿತ್ತು. ನನಗಂತೂ ಸುದ್ದಿ ಇರಲಿಲ್ಲ. ಆದರೆ, ಮಿತ್ರರೊಬ್ಬರು ಸ್ವಾಮಿಜಿ ಅದೃಷ್ಟವಶದಿಂದ ಉಳಿದುಕೊಂಡರೆ ಉಳಿದುಕೊಂಡ ಹಾಗೆ ಎಂದು ಸುದ್ದಿ ಕೊಟ್ಟಿದ್ದರು. ಹಿಂದಿನಿಂದ ನನ್ನ ತಂತಿಗೆ ಉತ್ತರವಾಗಿ ಅವರ ಮಗ ಕ್ರಮೇಣ ಅವರ ಸ್ಥಿತಿ ಸುಧಾರಿಸುತ್ತಿರುವುದಾಗಿ ಮರುತಂತಿ ಕಳುಹಿಸಿದ್ದರು. ಡಾ. ಅನ್ಸಾರಿ ಅವರು ಬಹಳ ಒಳಿತಾಗಿ ಸೇವಾ ಶುಶ್ರೂಷೆ ಮಾಡುತ್ತಿರುವುದಾಗಿಯೂ ಗೊತ್ತಾಯಿತು. ಇಂಥ ಉಗ್ರವಾದ ಖಾಯಿಲೆಯಿಂದ ಅವರು ಹಾಸಿಗೆ ಹಿಡಿದಿದ್ದರು. ಹಾಸಿಗೆಯ ಮೇಲೆಯೇ ಅವರ ಪ್ರಾಣ ಹೋಯಿತು. ಸಾಯುವುದಂತೂ ಯಾರಿಗೂ ತಪ್ಪಿದ್ದಲ್ಲ. ಆದರೆ, ಸುಮ್ಮನೆ ಸಾಯುವುದು ಯಾವ ಪುರುಷಾರ್ಥಕ್ಕೆ? ಇಡೀ ಹಿಂದೂಸ್ತಾನದಲ್ಲಿ, ಅಷ್ಟೇ ಏಕೆ, ಪೃಥ್ವಿಯಲ್ಲಿ ಎಲ್ಲೆಲ್ಲಿ ಹಿಂದೂಸ್ತಾನದ ಜನ ಇದಾರೋ ಅಲ್ಲೆಲ್ಲ ಸ್ವಾಮಿಜಿ ಅವರು ಸ್ವಾಭಾವಿಕವಾದ ರೋಗದಿಂದ ತೀರಿಕೊಂಡಿದ್ದರೆ ಆಗುತ್ತಿದ್ದುದಕ್ಕಿಂತ ಹೆಚ್ಚಿನ ವಿಲಕ್ಷಣ ಪ್ರಭಾವ ಈ ಅಪೂರ್ವ ಮರಣದಿಂದ ಆಗಿದೆ.

ನಾನು ಸಹೋದರ ಇಂದ್ರರಿಗೆ ಒಂದಾದರೂ ಸಮವೇದನೆಯ ತಾರು ಕೊಟ್ಟಿಲ್ಲ; ಪತ್ರಬರೆದಿಲ್ಲ. ಅವರಿಗೆ ಬೇರೆ ಏನೂ ಹೇಳಲಾರೆ. ಇಷ್ಟೇ ಹೇಳ ಬಲ್ಲೆ—ಅವರ ತಂದೆಗೆ ದೊರೆತ ಮರಣ ಶ್ರೇಯಸ್ಕರವಾದ ಮರಣ.

ಆದರೆ, ಈ ಮಾತನ್ನು ನಾನು ಸ್ವಾಮಿಜಿ ಅವರ ದೃಷ್ಟಿಯಿಂದ, ನನ್ನ ದೃಷ್ಟಿಯಿಂದ ಹೇಳಿದೇನೆ. ಹಿಂದೂ—ಮುಸಲ್ಮಾನರು ನನ್ನ ದೃಷ್ಟಿ ಯಲ್ಲಿ ಒಂದೇ ಎಂಬುದಾಗಿ ಅನೇಕ ಬಾರಿ ಹೇಳಿದೇನೆ. ನಾನು ಜನ್ಮತಃ ಹಿಂದೂ; ಹಿಂದೂ ಧರ್ಮದಿಂದಲೇ ನನಗೆ ಶಾಂತಿ ಸಿಕ್ಕಿದೆ. ನಾನು ಬೇರೆ ಧರ್ಮಗಳನ್ನು ಅವಲೋಕನ ಮಾಡಿದೇನೆ; ಈ ಧರ್ಮದಲ್ಲಿ ಎಷ್ಟೇ ಲೋಪ ದೋಷಗಳು ಇರಲೊಲ್ಲವೇಕೆ, ನನ್ನ ಪಾಲಿಗೆ ಈ ಧರ್ಮವೇ ಉತ್ತಮ. ಅಂತಲೆ, ನಾನು ನನ್ನನ್ನು ಸನಾತನಿ ಹಿಂದೂ ಎಂದು ಕರೆದುಕೊಳ್ಳುತ್ತೇನೆ. ಅನೇಕ ಸನಾತನಿಗಳಿಗೆ ಈ ನನ್ನ ಪ್ರತಿಪಾದನೆ ಕೆಟ್ಟದೆನಿಸುತ್ತದೆ. ವಿಲಾ ಯತಿಗೆ ಹೋಗಿ ಬಂದಿರುವ ಈ ಸುಧಾರಿತ ವ್ಯಕ್ತಿ ಹಿಂದೂ ಹೇಗೆ ಆದಾನು ಎಂಬುದಾಗಿ ಅವರಿಗೆ ಅನಿಸುತ್ತದೆ. ಆದರೆ, ಅದರಿಂದ ಹಿಂದೂವಾಗಿ ಇರಲು ನನಗಿರುವ ಹಕ್ಕು ಕಡಿಮೆಯಾಗದು. ಈ ಧರ್ಮ ಎಲ್ಲರೊಡನೆ ಮೈತ್ರಿಯಿಂದ ಇರಬೇಕೆಂದೇ ನನಗೆ ಕಲಿಸುತ್ತದೆ. ಇದರಿಂದಲೇ ನಾನು ಮುಸಲ್ಮಾನರ ದೃಷ್ಟಿಯನ್ನು ನೋಡಬೇಕು.

ಮುಸಲ್ಮಾನರ ದೃಷ್ಟಿಯಿಂದ ಈ ವಿಷಯವನ್ನು ವಿಚಾರ ಮಾಡಿದಾಗ ನನಗೆ ಬೇರೊಂದು ವಿಷಯವೇ ಹೊಳೆಯುತ್ತದೆ. ಈ ಕಾಂಡ ಮುಸಲ್ಮಾ ನರ ಹಂಚಿಕೆ. ಆತ ಧರ್ಮ ಚರ್ಚೆಮಾಡುವ ನೆಪದಿಂದ ಮನೆಯೊಳಗೆ ಪ್ರವೇಶಿಸಿ, ಈ ಕೊಲೆ ಮಾಡಿದ. "ಸ್ವಾಮಿಜಿಗೆ ಖಾಯಿಲೆ ಈಗ ಅವ ರನ್ನು ನೋಡಲಿಕ್ಕಾಗದು" ಎಂದು ಅವರ ನೌಕರ ಹೇಳಿದ. ಬಾಗಿಲಲ್ಲಿ ಮಾತಿಗೆ ಮಾತು ಹತ್ತಿತು. ಸ್ವಾಮಿಜಿ ಅದನ್ನು ಕೇಳಿ, "ಒಳ್ಳೆಯದು; ಒಳಗೆ ಬರಲು ಬಿಡು" ಎಂದರು. ಮಾತನಾಡುವ ಶಕ್ತಿ ತಮ್ಮಲ್ಲಿ ಇರ ದಿದ್ದರೂ ಸ್ವಾಮಿಜಿ ಆತನೊಡನೆ ಮಾತನಾಡಿದರು. ಮಾತನಾಡುವ ಶಕ್ತಿ ಎಲ್ಲಿಯದು, ಆತನನ್ನು ಸಮಾಧಾನಮಾಡಿ ಕಳುಹಿಸಿಕೊಡಲಿಕ್ಕಾಗಿ ಒಳಕ್ಕೆ ಕರೆಸಿಕೊಂಡರು. "ತಮ್ಮ! ಖಾಯಿಲೆ ವಾಸಿಯಾದ ಮೇಲೆ, ನನ್ನೊಡನೆ ಎಷ್ಟು ಬೇಕಾದರೂ ಚರ್ಚೆ ಮಾಡಬಹುದು. ಈಗಂತೂ ಹಾಸಿಗೆ ಹಿಡಿ

ದಿರುವೆನು" ಎಂದರು. ಆ ಹೊತ್ತಿಗೆ ಆತ ಕುಡಿಯಲು ನೀರು ಬೇಡಿದ. ನೀರು ತಂದುಕೊಡುವಂತೆ ಧರ್ಮಸಿಂಹನಿಗೆ ಸ್ವಾಮಿಜಿ ಆಜ್ಞೆಮಾಡಿದರು. ಆಜ್ಞಾಧಾರಕನಾದ ನೌಕರ ನೀರು ತರಲು ಹೋದನೋ ಇಲ್ಲವೋ, ಈತ ರಿವಾಲ್ವರ್ ಈಚೆಗೆ ತೆಗೆದ. ಒಂದರಿಂದ ತೃಪ್ತಿಯಾಗದೆ ಎರಡು ಗುಂಡು ಹೊಡೆದ. ಕೂಡಲೇ ಸ್ವಾಮಿಜಿ ಅವರ ಪ್ರಾಣಹೋಯಿತು. ಧರ್ಮಸಿಂಹ ಸದ್ದು ಕೇಳಿ ತನ್ನ ಒಡೆಯನನ್ನು ರಕ್ಷಿಸಲು ಧಾವಿಸಿದ. ಆದರೆ, ರಕ್ಷಿಸಬಲ್ಲವರು ಯಾರು? ಸ್ವಾಮಿಜಿ ಅವರ ಶರೀರವನ್ನು ರಕ್ಷಿಸುವುದು ಭಗವಂತನಿಗೆ ಇಷ್ಟವಿರಲಿಲ್ಲ. ಧರ್ಮಸಿಂಹನ ಮೇಲೂ ಪ್ರಹಾರವಾಯಿತು, ಗಾಯವಾಯಿತು. ಆತ ಆಸ್ಪತ್ರೆಯಲ್ಲಿ ಇದಾನೆ. ಹಂತಕ ಅಬ್ದುಲ್ ರಶೀದ್ ಬಂಧನದಲ್ಲಿದಾನೆ. ಇಂಥ ಪರಿಸ್ಥಿತಿಯಲ್ಲಿ ನಡೆದಿರುವೆ ಕೊಲೆಯಿಂದಾಗಿ ಮುಸಲ್ಮಾನರ ವಿಷಯದಲ್ಲಿ ಹಿಂದೂಗಳಿಗೆ ಯಾವ ಭಾವನೆ ಮೂಡೀತೆಂಬುದೇ ನನಗೆ ಚಿಂತೆ. ಹಿಂದೂಗಳಿಗೆ ಮುಸಲ್ಮಾನರ ಬಗೆಗೆ ವಿರೋಧ ಭಾವನೆಯೇ ಹುಟ್ಟುವುದೆಂಬುದರಲ್ಲಿ ಸಂದೇಹವೂ ಇಲ್ಲ. ಕಾರಣ ಇಂದು ಎರಡು ಜಾತಿಯವರಲ್ಲಿ ಪ್ರೇಮವಾಗಲಿ, ವಿಶ್ವಾಸವಾಗಲಿ ಇಲ್ಲ.

ಅಬ್ದುಲ್ ರಶೀದನ ಕೈಯಿಂದ ಸ್ವಾಮಿಜಿ ಅವರ ಹತ್ಯೆ ಆಗಿರುವುದರಿಂದ ನಾವು ಒಳ್ಳೆಯ ಪಾಠ ಕಲಿಯಬೇಕು. ಒಬ್ಬರನ್ನೊಬ್ಬರು ಅರಿತುಕೊಳ್ಳಬೇಕು.

ಈ ಘಟನೆ (ಅಬ್ದುಲ್ ರಶೀದನ ಕೈಯಿಂದ ಸ್ವಾಮಿಜೀ ಅವರ ಹತ್ಯೆ) ನಮ್ಮ ಪಾಲಿಗೆ ನೀತಿ-ಪಾಠವೇ ಆಗಬೇಕು.

ಶ್ರದ್ಧಾನಂದಜಿ ಅವರಿಗೂ ನನಗೂ ಎಂಥ ಸಂಬಂಧವಿದ್ದಿತೆಂಬುದನ್ನು ಈಗ ಹೇಳುವುದಿಲ್ಲ. ಅವರು ನನ್ನೊಡನೆ ಮನಬಿಚ್ಚಿ ಮಾತನಾಡುತ್ತಿದ್ದರು. ಸುಮಾರು ಆರು ತಿಂಗಳ ಕೆಳಗೆ ಆಶ್ರಮಕ್ಕೆ ಬಂದಿದ್ದಾಗ ಅವರು ಹೇಳಿದರು—"ನನಗೆ ಎಷ್ಟೋ ಬೆದರಿಕೆಯ ಪತ್ರಗಳು ಬರುತ್ತಿರುತ್ತವೆ. ನಿಮ್ಮ ಪ್ರಾಣ ತೆಗೆದುಬಿಟ್ಟೇವು—ಎಂಬುದಾಗಿ ಜನ ಬೆದರಿಕೆ ಹಾಕುತ್ತಾರೆ. ನನಗಂತೂ ಆದರ ಚಿಂತೆಯಿಲ್ಲ". ಅವರು ಧೈರ್ಯಶಾಲಿಗಳು. ಅವರಿಗಿಂತ ಧೈರ್ಯಶಾಲಿಗಳನ್ನು ನಾನು ಈ ಪ್ರಪಂಚದಲ್ಲಿ ನೋಡಿಲ್ಲ. ಸಾವಿನ ಭಯವನ್ನು ಅವರು ಕಂಡರಿಯರು. ಕಾರಣ ಅವರು ನಿಜವಾದ ಆಸ್ತಿಕರು,

ದೈವಭಕ್ತರು ಆಗಿದ್ದರು. ಅಂತಲೆ ಅವರು ಹೇಳಿದರು—“ನನ್ನ ಪ್ರಾಣ ವನ್ನು ತೆಗೆದುಕೊಂಡರೆ, ಆಗುವುದಾದರೂ ಏನು ? ”೧೬೩

ಸ್ವಾಮಿ ಶ್ರದ್ಧಾನಂದರ ಸ್ಮಾರಕಕ್ಕಾಗಿ ಹಿಂದೂ ಮಹಾಸಭೆಯ ಕಡೆಯಿಂದ ಧನ ಸಹಾಯ ಬೇಡುವುದು ಉಚಿತವಾದುದೆ. ಸ್ವಾಮಿಜಿ ಅವರು ಸನ್ಯಾಸಿಗಳಾದಮೇಲೆ ಯಾವ ಕಾರ್ಯಗಳಲ್ಲಿ ತೊಡಗಿದ್ದರೋ, ಆ ಕಾರ್ಯಗಳಿಗಾಗಿ ಚಂದಾ ವಸೂಲು ಮಾಡಲು ಹಿಂದೂ ಮಹಾಸಭೆ ನಿಶ್ಚಯಿಸಿದೆ. ಈ ನಿಶ್ಚಯದ ಬಗೆಗೆ ನಾನು ಅವರನ್ನು ಅಭಿನಂದಿಸುತ್ತೇನೆ. ಅಸ್ಪೃಶ್ಯತಾ ನಿವಾರಣೆ, ಶುದ್ಧಿ ಹಾಗೂ ಸಂಘಟನೆಯೇ ಆ ಕೆಲಸಗಳು. ೫ ಲಕ್ಷ ರೂಪಾಯಿ ನಿಧಿಗಾಗಿ ಮನವಿಮಾಡಿಕೊಳ್ಳಲಾಗಿದೆ. ಅಸ್ಪೃಶ್ಯತಾ ನಿವಾರಣೆಗಾಗಿಯೂ, ಶುದ್ಧಿ ಹಾಗೂ ಸಂಘಟನೆಗಾಗಿಯೂ ಅಷ್ಟೇ ನಿಧಿಗಾಗಿ ಮನವಿಮಾಡಿಕೊಳ್ಳಲಾಗಿದೆ. ಶುದ್ಧಿಯಲ್ಲಿ ವಿಶ್ವಾಸವಿರುವವರಿಗೆ ನಿಧಿಗೆ ಸಹಾಯ ಮಾಡಲು ಪೂರ್ಣ ಅಧಿಕಾರವಿದೆ.

....ನನ್ನಮಟ್ಟಿಗೆ ಅಸ್ಪೃಶ್ಯೋದ್ಧಾರದ ನಿಧಿಗೇ ಬೆಲೆ. ಇವರದು ತನ್ನದೇ ಆದ ವಿಲಕ್ಷಣ ಶಕ್ತಿ; ಹಿಂದೂ ಧರ್ಮದ ಸುಧಾರಣೆ ಹಾಗೂ ಅದರ ನಿಜವಾದ ರಕ್ಷಣಾ ಶಕ್ತಿ. ಹಿಂದೂಧರ್ಮದ ಸುಧಾರಣೆ ಹಾಗೂ ಅದರ ನಿಜವಾದ ರಕ್ಷಣೆಗೆ ಅಸ್ಪೃಶ್ಯೋದ್ದಾರ ಅತಿ ಮುಖ್ಯ. ಇದರಲ್ಲಿ ಎಲ್ಲವೂ ಸೇರಿ ಹೋಗಿದೆ. ಅಸ್ಪೃಶ್ಯತೆ ಹಿಂದೂ ಧರ್ಮದ ದೊಡ್ಡ ಕಳಂಕ. ಅದು ನಾಶವಾದರೆ, ಶುದ್ಧಿ ಹಾಗೂ ಸಂಘಟನೆಯಿಂದ ದೊರೆಯುವ ಫಲ ತಾನಾಗಿಯೇ ದೊರೆಯುವುದು. ಪ್ರತಿಯೊಬ್ಬ ಸವರ್ಣ ಹಿಂದೂವೂ ಪ್ರೀತಿಯಿಂದ ಆಲಂಗಿಸಿಕೊಳ್ಳಬೇಕಾದ ಅಸ್ಪೃಶ್ಯರ ಸಂಖ್ಯೆ ಹೆಚ್ಚಾಗಿದೆಯೆಂಬ ಕಾರಣದಿಂದ ನಾನು ಈ ಮಾತು ಆಡುತ್ತಿಲ್ಲ; ಹಳೆಯ ಹಾಗೂ ಅಸಭ್ಯ ಪದ್ಧತಿಯೊಂದನ್ನು ತೊಡೆದುಹಾಕಬೇಕೆಂಬ ಜ್ಞಾನ ಹಾಗೂ ಅದರಿಂದ ಆಗುವ ಶುದ್ಧಿಯಿಂದ ಅದಮ್ಯ ಶಕ್ತಿ ಹುಟ್ಟುವುದು. ಆದಕಾರಣ, ಅಸ್ಪೃಶ್ಯತಾ ನಿವಾರಣೆ ಒಂದು ಆಧ್ಯಾತ್ಮಿಕ ಕ್ರಿಯೆ. ಸ್ವಾಮಿಜಿ ಅವರು ಆ ಸುಧಾರಣೆಯ ಜೀವಿತ ಮೂರ್ತಿಯಾಗಿದ್ದರು; ಇದರಲ್ಲಿ ಅರ್ಧಮರ್ಧ ಸುಧಾರಣೆಯೆಂದರೆ ರಾಜಿಮಾಡಿಕೊಳ್ಳುವುದೆಂದರೆ ಅವರಿಗೆ ಆಗುತ್ತಿರಲಿಲ್ಲ.

ಅವರನ್ನು ಹತ್ತಿಕ್ಕುವುದು ಯಾರಿಂದಲೂ ಶಕ್ಯವಿರಲಿಲ್ಲ. ಅವರದೇ ನಡೆಯು ವಂತಿದ್ದರೆ, 'ಹಾಹೂ' ಎನ್ನುವುದರೊಳಗೆ ಹಿಂದೂಧರ್ಮದಿಂದ ಅಸ್ಪೃಶ್ಯತೆಯನ್ನು ತೊಡೆದುಹಾಕಿಬಿಡುತ್ತಿದ್ದರು. ಸರ್ವರಿಗೂ ಸಮಾನಾಧಿಕಾರ ಎಂಬ ತತ್ವವನ್ನು ಎತ್ತಿಹಿಡಿದು, ಪ್ರತಿಯೊಂದು ದೇವಾಲಯ ಹಾಗೂ ಭಾವಿಯನ್ನು ಹರಿಜನರ ಉಪಯೋಗಕ್ಕಾಗಿ ತೆರೆಯಿಸುತ್ತಿದ್ದರು; ಹಾಗೂ ಅದರ ಫಲವನ್ನು ಅನುಭವಿಸುತ್ತಿದ್ದರು. ಇಂದಿನಿಂದಲೇ ಪ್ರತಿಯೊಬ್ಬ ಹಿಂದುವೂ ತನ್ನ ಹೃದಯದಿಂದ ಅಸ್ಪೃಶ್ಯತೆಯ ಅಪವಿತ್ರ ಭಾವನೆಯನ್ನು ತೊಡೆದುಹಾಕಿ, ಆ ಜನರೊಡನೆ ಸಮಾನತೆಯಿಂದ ವರ್ತಿಸುವುದಕ್ಕಿಂತ ಒಳಿತಾದ ಸ್ಮಾರಕವನ್ನು ಸ್ವಾಮಿ ಶ್ರದ್ಧಾನಂದರ ಬಗೆಗೆ ನಾನು ಯೋಚಿಸಲಾರೆ. ಹಣ ಸಹಾಯಮಾಡುವುದು ಅಸ್ಪೃಶ್ಯತೆಯನ್ನು ಹಿಂದೂಧರ್ಮದಿಂದ ಸದಾಕಾಲಕ್ಕೂ ತೊಡೆದುಹಾಕುವ ದೃಢನಿಶ್ಚಯದ ಚಿಹ್ನೆಮಾತ್ರ.

ಸ್ವಾಮಿಾಜೀ ಅವರಿಗೆ ಸಾಮೂಹಿಕ ಹಾಗೂ ಧಾರ್ಮಿಕ ರೂಪದಲ್ಲಿ ಗೌರವ ವ್ಯಕ್ತಪಡಿಸಲು ಜನವರಿ ಸೋಮವಾರದ ದಿನವನ್ನು ನಿಶ್ಚಿತಗೊಳಿಸಲಾಗಿದೆ. ಪ್ರತಿಯೊಂದು ಹಳ್ಳಿ-ಪಟ್ಟಣದಲ್ಲಿ ಇದು ನಡೆಯುವುದೆಂದು ನಾನು ಆಶಿಸುವೆ. ಆ ದಿನಾಚರಣೆಯಲ್ಲಿ ಭಾಗವಹಿಸುವ ಜನ ತಮ್ಮ ಹೃದಯದಿಂದ ಅಸ್ಪೃಶ್ಯತೆಯ ಅಪವಿತ್ರ ಭಾವನೆಯನ್ನು ತೊಡೆದುಹಾಕದಿದ್ದರೆ, ಪ್ರದರ್ಶನದ ನಿಜವಾದ ಉದ್ದೇಶವೇ ಮಾಯವಾದಂತಾಗುವುದು. ಪ್ರತಿಯೊಬ್ಬ ಅಸ್ಪೃಶ್ಯನೂ ಅದರಲ್ಲಿ ಭಾಗವಹಿಸಬೇಕು. ಅಂದು ದೇವಾಲಯಗಳನ್ನೆಲ್ಲ ಅಸ್ಪೃಶ್ಯರ ಸಲುವಾಗಿ ತೆರೆದುಬಿಟ್ಟರೆ, ಅದೆಷ್ಟು ಚೆನ್ನ? ಸಂಘಟಿತ ರೂಪದಲ್ಲಿ ಪ್ರಯತ್ನ ಮಾಡಿದರೆ, ಅಂದು ಸೂರ್ಯಾಸ್ತಮಯವಾಗುವುದರೊಳಗೆಯೇ ನಿಧಿ ತುಂಬೀತು.

ಸ್ವಾಮಿಾಜೀ ಅವರ ಪ್ರಥಮ ಪರಿಚಯ ನನಗೆ ಆದುದು ಅವರು ಮಹಾತ್ಮಾ ಮುನ್ಶೀರಾಮ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾಗ. ಆ ಪರಿಚಯ ಪತ್ರ ಮುಖೇನವೇ ಆಯಿತು. ಆ ಸಮಯಕ್ಕೆ ಅವರು ತಮ್ಮ ಎಲ್ಲಕ್ಕಿಂತ ದೊಡ್ಡ ಮತ್ತು ಮೊದಲಿನ ಶಿಕ್ಷಣ-ಕ್ಷೇತ್ರದ ಕೃತಿಯೆನಿಸಿದ್ದ ಕಾಂಗಡೀ ಗುರುಕುಲಕ್ಕೆ ಅಧಿಷ್ಠಾತರಾಗಿದ್ದರು. ಕೇವಲ ಪಾಶ್ಚಾತ್ಯ

ಶಿಕ್ಷಣದಿಂದ ಅವರಿಗೆ ತೃಪ್ತಿಯಾಗಿರಲಿಲ್ಲ. ವಿದ್ಯಾರ್ಥಿಗಳಲ್ಲಿ ವೇದ-ಶಿಕ್ಷಣದ ಪ್ರಚಾರ ಮಾಡುವುದು ಅವರು ಉದ್ದೇಶವಾಗಿತ್ತು ; ಅವರು ಶಿಕ್ಷಣವನ್ನು ಹಿಂದಿಯ ಮೂಲಕ—ಇಂಗ್ಲೀಷ್ ಮೂಲಕ ಅಲ್ಲ—ಕೊಡುತ್ತಿದ್ದರು. ಶಿಕ್ಷಣ ಕಾಲದಲ್ಲಿ ವಿದ್ಯಾರ್ಥಿಗಳು ಬ್ರಹ್ಮಚಾರಿಗಳಾಗಿ ಇರಬೇಕಾಗಿತ್ತು. ದಕ್ಷಿಣ ಆಫ್ರಿಕಾದ ಸತ್ಯಾಗ್ರಹಿಗಳಿಗಾಗಿ ನಿಧಿ-ಸಂಗ್ರಹಮಾಡುತ್ತಿದ್ದಾಗ, ಅದಕ್ಕೆ ಚಂದಾ ಕೂಡಿಸಲು ತಮ್ಮ ವಿದ್ಯಾರ್ಥಿಗಳನ್ನು ಅವರು ಪ್ರೇರಿಸಿದರು. ವಿದ್ಯಾರ್ಥಿಗಳು ಕೂಲಿಗಳಾಗಿ, ಕೂಲಿಮಾಡಿ ಬಂದ ಹಣವನ್ನು ನಿಧಿಗೆ ಅರ್ಪಿಸಬೇಕೆಂಬುದು ಅವರ ಉದ್ದೇಶವಾಗಿತ್ತು. ಕಾರಣ, ಆ ಯುದ್ಧ ಕೂಲಿಗಳದೇ ತಾನೆ? ವಿದ್ಯಾರ್ಥಿಗಳು ಹಾಗೆಯೇ ಮಾಡಿ ಕೂಲಿಯ ಹಣವನ್ನು ನನಗೆ ಕಳುಹಿಸಿಕೊಟ್ಟರು. ಆ ಸಂಬಂಧದಲ್ಲಿ ಸ್ವಾಮಿಜಿ ಅವರು ನನಗೆ ಬರೆದ ಪತ್ರ ಹಿಂದಿಯಲ್ಲಿತ್ತು. ಅವರು ನನ್ನನ್ನು “ ಪ್ರಿಯ ಸಹೋದರ ! ” ಎಂದು ಸಂಬೋಧಿಸಿ ಬರೆದಿದ್ದರು. ಆದರಿಂದಾಗಿ ನಾನು ಮಹಾತ್ಮಾ ಮುನ್ಶೀರಾಮರಿಗೆ ಪ್ರಿಯನಾದೆ. ಅದಕ್ಕೆ ಮುಂಚಿತವಾಗಿ ನಾವಿಬ್ಬರೂ ಎಂದೂ ಪರಸ್ಪರ ಕಲೆತಿರಲಿಲ್ಲ.

ನಮ್ಮಿಬ್ಬರ ನಡುವಣ ಸೂತ್ರ ಆಂಡ್ರೂಸ್ ಅವರು. ನಾನು ಭಾರತಕ್ಕೆ ಮರಳಿದಾಗಲೆಲ್ಲ ತಮ್ಮ ಮೂವರು ಮಿತ್ರರಾದ ಕವಿ ಠಾಕೂರ್, ಪ್ರಿನ್ಸಿಪಲ್ ರುದ್ರ ಹಾಗೂ ಮಹಾತ್ಮಾ ಮುನ್ಶೀರಾಮ ಇವರನ್ನು ಪರಿಚಯ ಮಾಡಿಕೊಳ್ಳಬೇಕೆಂಬುದು ಆಂಡ್ರೂಸರ ಇಚ್ಛೆಯಾಗಿತ್ತು.

ಆ ಪತ್ರ ಬಂದಮೇಲೆ ನಾವಿಬ್ಬರೂ ಒಂದೇ ಸೈನ್ಯದ ಸೈನಿಕರಾದೆವು. ೧೯೧೫ ರಲ್ಲಿ ಅವರಿಗೆ ಪ್ರಿಯವಾದ ಗುರುಕುಲದಲ್ಲಿ ಅವರನ್ನು ಭೆಟ್ಟಿಯಾದೆ. ಅದರ ನಂತರ ನಡೆದ ಪ್ರತಿಯೊಂದು ಭೇಟಿಯಲ್ಲಿಯೂ ನಾವಿಬ್ಬರೂ ಹತ್ತಿರ ಹತ್ತಿರಕ್ಕೆ ಬರತೊಡಗಿದೆವು. ಪ್ರಾಚೀನ ಭಾರತ, ಸಂಸ್ಕೃತ ಹಾಗೂ ಹಿಂದಿಯ ಬಗೆಗೆ ಅವರಿಗೆ ಅಸೀಮ ಪ್ರೇಮವಿತ್ತು. ಅಸಹಕಾರ ಪ್ರಾರಂಭವಾಗುವುದಕ್ಕಿಂತ ಬಹು ಮುಂಚಿತವಾಗಿಯೇ ಅವರು ಅಸಹಕಾರಿಗಳಾಗಿದ್ದರು. ಸ್ವರಾಜ್ಯದ ಬಗೆಗೆ ಅವರು ಕಾತರರಾಗಿದ್ದರು. ಅಸ್ಪೃಶ್ಯತೆಯ ಬಗೆಗೆ ಅವರಿಗೆ ತಿರಸ್ಕಾರವಿತ್ತು. ಹಾಗೂ ಅಸ್ಪೃಶ್ಯರ ಸ್ಥಿತಿಯನ್ನು ಉತ್ತಮಪಡಿಸಲು ಬಯಸುತ್ತಿದ್ದರು. ತಮ್ಮ ಸ್ವಾತಂತ್ರ್ಯದ ಮೇಲೆ

ಯಾವುದೇ ರೀತಿಯ ಪ್ರತಿಬಂಧಕವನ್ನು ಅವರು ಸಹಿಸುತ್ತಿದ್ದಿಲ್ಲ.

ರೌಲೆತ್ ಆಕ್ಟ್ ಆಂದೋಲನ ಆರಂಭವಾದಾಗ ಅದನ್ನು ಮೊಟ್ಟ ಮೊದಲು ಆರಂಭಿಸಿದವರಲ್ಲಿ ಅವರೊಬ್ಬರು. ಅವರು ನನಗೆ ಬಹಳ ಪ್ರೇಮ ಪುರಸ್ಸರವಾದ ಪತ್ರವೊಂದನ್ನು ಕಳುಹಿಸಿದರು. ಆದರೆ ವೀರಮಗಾವ್ ಹಾಗೂ ಅಮೃತಸರದ ಘಟನೆಗಳ ನಂತರ ಸತ್ಯಾಗ್ರಹ ನಿಲ್ಲಿಸುವುದು ಅವರ ಮನಸ್ಸಿಗೆ ಬರಲಿಲ್ಲ. ಆಗಿನಿಂದಲೇ ನಮ್ಮಲ್ಲಿ ಮತಭೇದ ಆರಂಭವಾಯಿತು. ಆದರೆ ಅದರ ದೆಸೆಯಿಂದ ನಮ್ಮ ಸಹೋದರ ಸಂಬಂಧದಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಆ ಮತಭೇದದಿಂದಾಗಿ ನನಗೆ ಅವರ ಬಾಲ-ಸಹಜ ಸ್ವಭಾವದ ಅರಿವಾಯಿತು. ಪರಿಣಾಮವನ್ನು ವಿಚಾರಮಾಡದೆಯೇ, ತಮಗೆ ತಿಳಿದಿದ್ದಂತೆ ನಿಜವಾದ ಮಾತನ್ನು ನನಗೆ ಹೇಳಿದರು. ಅವರು ಅತಿ ಸಾಹಸಿಗಳು. ದಿನಕಳೆದಂತೆ ನಮ್ಮಿಬ್ಬರ ಸ್ವಭಾವದಲ್ಲಿದ್ದ ಅಂತರವನ್ನು ನಾನು ಕಂಡುಕೊಳ್ಳುತ್ತ ಹೋದೆ; ಆದರೆ, ಅದರಿಂದ ಅವರ ಆತ್ಮ ಶುದ್ಧಿಯೇ ಪ್ರಕಟವಾಯಿತು. ಎಲ್ಲರಿಗೂ ತಿಳಿಸಿ ಹೇಳಿ ವಿಚಾರಮಾಡುವುದು ಪಾಪವೇನಲ್ಲ. ಅದು ಪ್ರಿಯತೆಯ ಪ್ರಮುಖ ಲಕ್ಷಣ. ಸ್ವಾಮಿಜೀ ಅವರು ತಮ್ಮ ವಿಚಾರವನ್ನು ಎಂದೂ ರಹಸ್ಯವಾಗಿ ಇಡುತ್ತಿರಲಿಲ್ಲ.

ಬಾರಡೋಲಿ ತೀರ್ಮಾನದಿಂದ ಅವರ ಹೃದಯ ಭಗ್ನವಾಯಿತು. ನನ್ನ ಬಗೆಗೆ ಅವರಿಗೆ ನಿರಾಶೆಯೂ ಉಂಟಾಯಿತು. ಅವರ ಪ್ರತ್ಯಕ್ಷ ವಿರೋಧ ಪ್ರಬಲವಾಗಿಯೇ ಇತ್ತು. ನನ್ನ ಹೆಸರಿಗೆ ಅವರು ಬರೆಯುತ್ತಿದ್ದ ಪತ್ರಗಳಲ್ಲಿ ಇನ್ನೂ ಹೆಚ್ಚಾಗಿ ವಿರೋಧ ಇರುತ್ತಿತ್ತು. ಆದರೆ, ನಮ್ಮ ಮತಭೇದದ ಮೇಲೆ ಹಾಕುತ್ತಿದ್ದಷ್ಟೇ ಸ್ವರಭಾರವನ್ನು ಅವರು ಪ್ರೇಮದ ಮೇಲೆಯೂ ಹಾಕುತ್ತಿದ್ದರು. ಪ್ರೇಮವನ್ನು ಕೇವಲ ಪತ್ರಗಳಲ್ಲಿ ತೋರಿಸುವುದರಿಂದ ಅವರಿಗೆ ತೃಪ್ತಿ ಆಗುತ್ತಿರಲಿಲ್ಲ. ಅವಕಾಶ ಸಿಕ್ಕಾಗ ನನ್ನನ್ನು ಹುಡುಕಿಕೊಂಡು ಬಂದು, ನನಗೆ ತಮ್ಮ ಅಭಿಪ್ರಾಯವನ್ನು ತಿಳಿಸಿ, ನನ್ನದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರು: ಆದರೆ ಅವರು ನನ್ನನ್ನು ಹುಡುಕಿಕೊಂಡು ಬಂದುದಕ್ಕೆ ನಿಜವಾದ ಕಾರಣ, ಆವಶ್ಯಕತೆಯೊದಗಿದರೆ, ನನ್ನ ಮೇಲಿನ ಪ್ರೀತಿ ಎಂದಿನಂತೆ ಇರುವುದಾಗಿ ಭರವಸೆಕೊಡುವುದೇ

ಆಗಿತ್ತೆಂದು ನನಗೆ ಗೊತ್ತಾಯಿತು.

ಆರ್ಯ ಸಮಾಜ ಹಾಗೂ, ಅದರ ಸಂಸ್ಥಾಪಕರಿಗೆ ನನ್ನ ಅಭಿಪ್ರಾಯಗಳಿಂದ ಬಹಳ ಕಷ್ಟವಾಯಿತು. ಆದರೆ ಆ ಧಕ್ಕೆಯನ್ನು ಸಹಿಸಿಕೊಳ್ಳುವ ಶಕ್ತಿ ನಮ್ಮ ಮೈತ್ರಿಯಲ್ಲಿತ್ತು. ಮಹರ್ಷಿಗಳ ವಿಷಯದಲ್ಲಿ ನನ್ನ ಅಭಿಪ್ರಾಯ ಹಾಗೂ ವ್ಯಕ್ತಿಗತ ಶತ್ರುಗಳ ಬಗೆಗೆ ಋಷಿಗಳ ಅಸೀಮ ಕ್ಷಮಾಗುಣ ಹೇಗೆ ಕೂಡಿಕೊಂಡಾವೆಂಬುದು ಅವರಿಗೆ ತಿಳಿಯುತ್ತಿರಲಿಲ್ಲ. ಮಹರ್ಷಿಗಳಲ್ಲಿ ಅವರಿಗೆ ಎಷ್ಟು ಶ್ರದ್ಧೆ ಇದ್ದಿತೆಂದರೆ, ಅವರ ಹಾಗೂ ಅವರ ಬೋಧನೆಯ ಬಗೆಗೆ ಯಾರೇ ಆಗಲಿ ಟೀಕೆಮಾಡುವುದನ್ನು ಅವರು ಸಹಿಸುತ್ತಿರಲಿಲ್ಲ.

ಶುದ್ಧಿ ಆಂದೋಲನಕ್ಕೆ ಸಂಬಂಧಿಸಿದಂತೆ ಇಸ್ಲಾಮಿ ಪತ್ರಿಕೆಗಳಲ್ಲಿ ಅವರ ಬಗೆಗೆ ಕಟುಟೀಕೆ ಹಾಗೂ ನಿಂದೆ ಮಾಡಲಾಗಿದೆ. ನಾನೇ ಅವರ ದೃಷ್ಟಿಬಿಂದುವನ್ನು ಒಪ್ಪಲಾರದವನಾಗಿದ್ದೆ. ಇಂದೂ ಒಪ್ಪಲಾರೆ. ಆದರೆ, ತಮ್ಮ ದೃಷ್ಟಿಯಿಂದ ಅವರು ತಮ್ಮ ನಿಲುವನ್ನು ಪೂರ್ಣತಃ ಪ್ರತಿಪಾದಿಸಿಕೊಳ್ಳುತ್ತಿದ್ದರು. ಶುದ್ಧಿ ಹಾಗೂ ಮತಪರಿವರ್ತನೆ ಎರಡೂ ಒಂದು ಮಿತಿ–ಮೇರೆಯೊಳಗೆ ಇರುವವರೆಗೆ ಎರಡಕ್ಕೂ ವಿನಾಯತಿ ಕೊಡಲಿಕ್ಕೆ ಬರುತ್ತದೆ.

ಹಿಂದೂ ಮುಸಲ್ಮಾನರಿಬ್ಬರೂ ಶುದ್ಧಿಯ ಅಂತರಿಕ ಅರ್ಥವನ್ನು ಅರಿತುಕೊಂಡರೆ, ಸ್ವಾಮಿಜೀ ಅವರ ಮರಣದಿಂದಲೂ ಲಾಭ ಪಡೆಯಬಹುದು.

ಕೆಲವು ತಿಂಗಳ ಹಿಂದೆ ಸತ್ಯಾಗ್ರಹಾಶ್ರಮದಲ್ಲಿ ಅವರೊಡನೆ ಆದ ಕೊನೆಯ ಭೇಟಿಯ ವಿಷಯವನ್ನು ಪ್ರಸ್ತಾಪಿಸದೆ, ಆ ಮಹಾನ್ ಸುಧಾರಕರ ಜೀವನ ಸಂಸ್ಮರಣೆಯನ್ನು ಮುಗಿಸಲಾರೆ. ಸ್ವಾಮಿಜೀ ಅವರು ಮುಸಲ್ಮಾನರ ಶತ್ರುಗಳಾಗಿರಲಿಲ್ಲವೆಂಬುದಾಗಿ ಅವರಿಗೆ ಭರವಸೆ ಕೊಡಬಲ್ಲೆ. ಹಲವು ಮುಸಲ್ಮಾನರನ್ನು ಅವರು ನಂಬುತ್ತಿರಲಿಲ್ಲವಾದರೂ, ಮುಸಲ್ಮಾನ ಜನತೆಯ ಬಗೆಗೆ ಅವರಿಗೂ ಸ್ವಲ್ಪವೂ ದ್ವೇಷವಿರಲಿಲ್ಲವೆಂದು ಭರವಸೆ ಕೊಡಬಲ್ಲೆ. ಹಿಂದೂಗಳು ಹತ್ತಿಕ್ಕಲ್ಪಟ್ಟಿರುವುದರಿಂದ ಅವರನ್ನು ಧೈರ್ಯಶಾಲಿಗಳನ್ನಾಗಿಯೂ ತಮ್ಮ ಗೌರವವನ್ನು ಕಾಪಾಡಿಕೊಳ್ಳಲು ಯೋಗ್ಯ

ಠನ್ನಾಗಿಯೂ ಮಾಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಆ ಸಂಬಂಧದಲ್ಲಿ ಅವರು ನನಗೆ ಹೀಗೆ ಹೇಳಿದ್ದರು—"ನನ್ನ ಬಗೆಗೆ ಬಹಳ ತಪ್ಪು ತಿಳಿವಳಿಕೆ ಹರಡಿದೆ. ನನ್ನ ವಿರುದ್ಧ ಹೇಳುವ ಅನೇಕ ಮಾತುಗಳ ಬಗೆಗೆ ನಾನು ಪೂರ್ಣ ನಿರ್ದೋಷಿ. ಎಷ್ಟೋ ಬೆದರಿಕೆಯ ಪತ್ರಗಳು ನನಗೆ ಬರುತ್ತವೆ". ಮಿತ್ರರು ಒಬ್ಬಂಟಿಗರಾಗಿ ಓಡಾಡಬಾರದೆಂದು ಅವರನ್ನು ತಡೆಯುತ್ತಿದ್ದರು. ಆದರೆ, ಆ ಪರಮ ಆಸ್ತಿಕ ಪುರುಷರು ಹೀಗೆ ಉತ್ತರ ಕೊಡುತ್ತಿದ್ದರು "ಭಗವಂತನ ಹೊರತು ಇನ್ನಾರ ರಕ್ಷಣೆ ಯಲ್ಲಿ ನಾನು ಭರವಸೆ ಇಡಲಿ?" ಆತನ ಆಜ್ಞೆಯ ಹೊರತು ಒಂದು ಹುಲ್ಲುಗರಿಕೆಯೂ ಅಲ್ಲಾಡುವುದಿಲ್ಲ. ಆತ ಈ ದೇಹದ ಮೂಲಕ ನನ್ನಿಂದ ಸೇವೆ ತೆಗೆದುಕೊಳ್ಳಲು ಇಚ್ಛಿಸುವ ವರೆಗೆ ಯಾರೂ ನನ್ನನ್ನು ಘಾತಿಸ ಲಾರರು.

ಆಶ್ರಮದಲ್ಲಿದ್ದಾಗ ಆಶ್ರಮದ ಪಾಠಶಾಲೆಯ ಬಾಲಕ ಬಾಲಕಿಯ ರೊಡನೆ ಮಾತನಾಡಿದರು. ಆತ್ಮಶುದ್ಧಿಯಿಂದಲೇ ಒಳಗಿನಿಂದಲೇ ಹಿಂದೂ ಧರ್ಮದ ರಕ್ಷಣೆ ಆದೀತೆಂಬುದು ಅವರ ಹೇಳಿಕೆಯಾಗಿತ್ತು. ಚಾರಿತ್ರ್ಯ ಹಾಗೂ ದೇಹ-ದಾರ್ಢ್ಯದ ಸಲುವಾಗಿ ಬ್ರಹ್ಮಚರ್ಯ ಅತಿ ಮುಖ್ಯವೆಂದು ಅವರು ಹೇಳುತ್ತಿದ್ದರು.೧೬೪

ಸ್ವಾಮಿಜೀ ವೀರಾಗ್ರಣಿಗಳು. ತಮ್ಮ ವೀರತೆಯಿಂದ ಅವರು ಭಾರತ ವನ್ನು ಚಕಿತಗೊಳಿಸಿದ್ದರು. ದೇಶಕ್ಕಾಗಿ ತಮ್ಮ ದೇಹವನ್ನು ಬಲಿದಾನ ಮಾಡಲು ಅವರು ಪ್ರತಿಜ್ಞೆ ಮಾಡಿದ್ದರು. ಅದಕ್ಕೆ ನಾನೇ ಸಾಕ್ಷಿ. ಅವರು ಅನಾಥ ಬಂಧುಗಳು. ಅಸ್ಪೃಶ್ಯರಿಗಾಗಿ ಅವರು ಮಾಡಿರುವಷ್ಟು ಕಾರ್ಯ ವನ್ನು ಹಿಂದೂಸ್ಥಾನದಲ್ಲಿ ಬೇರೆ ಯಾರೂ ಮಾಡಿಲ್ಲ. ಅವರ ಬೇರೆ ಬೇರೆ ಸೇವಾಕಾರ್ಯದ ವರ್ಣನೆಯನ್ನು ಇಲ್ಲಿ ಮಾಡಬಯಸುವುದಿಲ್ಲ. ಸ್ವಾಮಿಜೀ ಅವರಂಥ ವೀರರ, ದೇಶಭಕ್ತರ, ಅನನ್ಯ ದೈವಭಕ್ತರ ಹಾಗೂ ಸೇವಕರ ಹತ್ಯೆ ದೇಶದ ಪಾಲಿಗೆ ಹೇಗೆ ಲಾಭದಾಯಕವಲ್ಲವೋ ಹಾಗೆಯೇ ದುಃಖ ದಾಯವೂ ಆಗಿರುವುದು ಸ್ವಾಭಾವಿಕ; ಏಕೆಂದರೆ ನಾವೆಲ್ಲರೂ ಅಪೂರ್ಣರು.

ನಮ್ಮಲ್ಲಿ ಎರಡು ಜಾತಿಗಳಿವೆ. ದುರದೃಷ್ಟದಿಂದ ಅವು ಒಂದ

ನ್ನೊಂದು ವಿಷ-ದೃಷ್ಟಿಯಿಂದ ನೋಡುತ್ತಿವೆ. ಒಂದನ್ನೊಂದು ವೈರಿಗಳೆಂದು ಭಾವಿಸಿವೆ. ಈ ಹತ್ಯೆಗೆ ಅದುವೇ ಕಾರಣ. ಸ್ವಾಮಿಜೀ, ಲಾಲಾಜಿ ಹಾಗೂ ಮಾಲವೀಯರು-ಇವರನ್ನು ಮುಸಲ್ಮಾನರು ತಮ್ಮ ಶತ್ರುಗಳೆಂದು ಭಾವಿಸುತ್ತಾರೆ. ಅತ್ತ ಅಬ್ದುರ್‌ರಹೀಮ್ ಹಾಗೂ ಇತರ ಮುಸಲ್ಮಾನರನ್ನು ತಮ್ಮ ಶತ್ರುಗಳೆಂದು ಹಿಂದೂಗಳು ಭಾವಿಸುತ್ತಾರೆ. ಉಭಯರ ಭಾವನೆಯೂ ಶುದ್ಧ ಮಿಥ್ಯೆ. ಸ್ವಾಮಿಜೀ ಮಾಲವೀಯಾಜಿ, ಲಾಲಾಜಿ, ಯಾರೂ ಮುಸಲ್ಮಾನರ ಶತ್ರುಗಳಲ್ಲ. ಲಾಲಾಜಿ ಹಾಗೂ ಮಾಲವೀಯರಿಗೆ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಲು ಪೂರ್ಣ ಅಧಿಕಾರವಿದೆ. ಆದರೆ ಅವರ ಅಭಿಪ್ರಾಯಗಳು ತಮಗೆ ತಪ್ಪೆಂದು ಅನಿಸಿದ ಮಾತ್ರಕ್ಕೆ ಅವರನ್ನು ದೂಷಿಸಲು ಯಾರಿಗೂ ಅಧಿಕಾರವಿಲ್ಲ. ಹಿಂದೂಸ್ತಾನದ ನಮ್ರ ಸೇವಕನಾದ ನನ್ನ ಅಭಿಪ್ರಾಯವಿದು. ವರ್ತಮಾನ ಪತ್ರಿಕೆಗಳನ್ನು ತೆರೆದು ನೋಡಿದಾಗ, ಈ ದೇಶಸೇವಕರನ್ನು ದೂಷಿಸದೆ ಇರುವ ಇಸ್ಲಾಂ ಪತ್ರಿಕೆಗಳು ದೊರೆತರೆ ಅದು ವಿಧಿವಿಲಾಸ. ಅವರು ಮಾಡಿದ ಅಪರಾಧವಾದರೂ ಏನು? ಅವರು ಯಾವ ಬಗೆಯಿಂದ ಕೆಲಸಮಾಡಲು ಬಯಸುತ್ತಾರೋ ಅದರಲ್ಲಿ ಭಾಗವಹಿಸುವುದು ನಮಗೆ ಬೇಡವಾದರೆ ಬೇಡ. ಆದರೆ, ಮಾಲವೀಯರು ತಮ್ಮ ಸೇವೆಯಿಂದ ಭಾರತಭೂಷಣರಾಗಿದ್ದಾರೆಂದು ನನ್ನ ಅಭಿಪ್ರಾಯ. (ಚಪ್ಪಾಳೆ). ಚಪ್ಪಾಳೆಯಿಂದ ಸೇವೆ ಮಾಡಲಾರೆವು. ನಾನು ಹೇಳುತ್ತಿರುವುದೆಲ್ಲವನ್ನು ಭಗವಂತನ ಸಾಕ್ಷಿಯಾಗಿ ಹೇಳುತ್ತಿದ್ದೇನೆ. ನನ್ನ ಹೃದಯದಲ್ಲಿ ಬೆಂಕಿ ಉರಿಯುತ್ತಿದೆ. ಆ ಬೆಂಕಿಯ ಎರಡು ಮೂರು ಕಿಡಿಗಳನ್ನು ಮಾತ್ರವೇ ನಿಮ್ಮ ಮುಂದೆ ಇಡುತ್ತಿರುವೆನು. ಇದರಿಂದ ನಾವು ಅವರ ಆತ್ಮಬಲಿಯ ಪೂರ್ಣ ಲಾಭ ತೆಗೆದುಕೊಂಡು, ಅವರ ಪವಿತ್ರ ರಕ್ತದಿಂದ ನಮ್ಮ ಹೃದಯವನ್ನು ಶುದ್ಧಗೊಳಿಸಿಕೊಳ್ಳಬೇಕು. ಇಂದು ನಾನು ನಿಜವಾದ ಅರ್ಥದಲ್ಲಿ ಶ್ರದ್ಧಾನಂದರು ಅಪೇಕ್ಷಿಸುತ್ತಿದ್ದ ಶುದ್ಧಿಯನ್ನೇ ಅಪೇಕ್ಷಿಸುತ್ತಿರುವೆನು. ಮಾಲವೀಯರನ್ನು ಭಾರತಭೂಷಣರೆಂದು ಕರೆದಿದ್ದೇನೆ. ಲಾಲಾಜಿ ಅವರೂ ಸಹ ನಂಬುವುದನ್ನೇ ಆಡುವವರು. ಅವರ ದೇಶಸೇವೆಯೂ ಕಡಿಮೆಯದಲ್ಲ. ಮುಸಲ್ಮಾನರಿಗೆ ಬಂಗಾಳದಲ್ಲಿ ಹೆಚ್ಚು ನೌಕರಿಗಳು ಸಿಕ್ಕಬೇಕೆಂದು ಅಬ್ದುರ್ ರಶೀದರು ಹೇಳುತ್ತಾರೆ. ಅವರ ಅಭಿಪ್ರಾಯವನ್ನು

ನಾವು ಒಪ್ಪದಿರಬಹುದು; ಆದ ಮಾತ್ರಕ್ಕೆ ಅವರನ್ನು ದೂಷಿಸಬೇಕೆ? ಗಾಂಧಿಯವರಲ್ಲಿ ತಮಗೆ ಗೌರವ ಇರುವುದಾದರೂ ಕುರಾನ್ ಶರೀಫದಲ್ಲಿ ನಂಬಿಕೆ ಇಟ್ಟಿರುವ ಮುಸಲ್ಮಾನನ ಪ್ರಾಮಾಣಿಕತೆ ಗಾಂಧಿಯವರ ಪ್ರಾಮಾಣಿಕತೆಗಿಂತ ಹೆಚ್ಚಿನದು-ಎಂಬುದಾಗಿ ಮೊಹಮ್ಮದ್ ಅಲೀ ಹೇಳುತ್ತಾರೆ. ಅದಕ್ಕಾಗಿ ನಾವು ಕೆಟ್ಟವರೆನಿಸಬೇಕೆ? ಸ್ವಾಮಿಜೀ ತಮ್ಮ ಆತ್ಮ ಬಲಿದಾನದಿಂದ ನಮಗೆ ಬೇರೆ ಧರ್ಮವನ್ನೆ ಕಲಿಸಿದ್ದಾರೆ. ಅವರು ನನ್ನನ್ನು ಒಮ್ಮೆ ಪ್ರಶ್ನಿಸಿದ್ದರು– ''ಆರ್ಯ ಸಮಾಜದಲ್ಲಿ ಔದಾರ್ಯ ಇಲ್ಲವೆನ್ನುವುದು ಹೇಗೆ? ಮಹರ್ಷಿ ದಯಾನಂದರು ತಮಗೆ ವಿಷಕೊಟ್ಟವನಿಗೆ ಏನು ಮಾಡಿದರೆಂಬುದು ನಿಮಗೆ ಗೊತ್ತೆ?" ಅದಕ್ಕೆ ನಾನು ಹೀಗೆ ಉತ್ತರಕೊಟ್ಟೆ–"ಮಹರ್ಷಿಗಳ ಕ್ಷಮಾ ಶೀಲತೆಯನ್ನು. ನಾನು ಬಲ್ಲೆ." ಸ್ವಾಮಿಜೀ ಮಹರ್ಷಿಗಳ ಭಕ್ತರು. ಅವರು ಎಲ್ಲ ಕಥೆಯನ್ನು ಹೇಳಿದರು. ಮಹರ್ಷಿಗಳು ಕ್ಷಮಾಶೀಲರಾಗಿದ್ದರು; ಯುಧಿಷ್ಠಿರನ ಉಜ್ವಲ ಉದಾಹರಣೆ ಅವರ ಮುಂದಿತ್ತು. ಅವರು ಉಪನಿಷತ್ ಭಕ್ತರೂ ಹೌದು. ಶ್ರದ್ಧಾನಂದರೂ ಹಾಗೆಯೇ ಕ್ಷಮಾಶೀಲರು. ಶುದ್ಧಿಯ ವಿಷಯದಲ್ಲಿ ಮಾತನಾಡುತ್ತ ಒಮ್ಮೆ ನಾನು ಮುಸಲ್ಮಾನರನ್ನು ಹಿಂದೂಗಳ ಶತ್ರುಗಳೆಂದು ಭಾವಿಸುವುದಿಲ್ಲ "-ಎಂದು ಹೇಳಿದ್ದರು. "ಆತ್ಮವತ್ ಸರ್ವ ಭೂತೇಷು" ಎಂಬ ಸಿದ್ಧಾಂತವನ್ನು ಉಪದೇಶಮಾಡುವ ಗೀತೆಯ ಭಕ್ತರಾದ ಶ್ರದ್ಧಾನಂದರು ಯಾರನ್ನು ತಾನೆ ವೈರಿಗಳೆಂದು ಭಾವಿಸಿಯಾರು? ಅವರು ಹೇಳಿದರು– "ನಾನು ಮುಸಲ್ಮಾನನನ್ನು ಸಹೋದರನೆಂದು, ಮಿತ್ರನೆಂದು ಭಾವಿಸುತ್ತೇನೆ. ಹಾಗೆಯೇ ಹಿಂದುವನ್ನು ಸಹೋದರನೆಂದು ಭಾವಿಸುತ್ತೇನೆ; ಹಾಗೂ ಆತನ ಸೇವೆಯನ್ನು ಬಯಸುತ್ತೇನೆ.

ಯಾವನಾದರೂ ಮುಸಲ್ಮಾನ ನನ್ನ ಮೋರೆಯ ಮೇಲೆ ಉಗುಳಿದರೂ ಆತನನ್ನು ಸಹೋದರನೆಂದು, ಮಿತ್ರನೆಂದು ಭಾವಿಸಬೇಕಾಗಿ ನನ್ನ ಧರ್ಮ ತಿಳಿಸುತ್ತದೆ. ಈ ಮೂವರಲ್ಲಿ ಯಾರೂ ಮುಸಲ್ಮಾನರ ಶತ್ರುಗಳಲ್ಲವೆಂದು ಸಾರಿ ಹೇಳುವೆ. ಅದೇ ರೀತಿ ಅಬ್ದುರ್ ರಹೀಮ್ ಅಥವಾ ಮಿಯಾ ಫಜಲೀ ಹುಸೇನ್ ಹಿಂದೂಗಳ ಶತ್ರುಗಳೂ ಅಲ್ಲ. ಪಜಲೀ ಹುಸೇನರು ನನಗೆ ಹೀಗೆ ಹೇಳಿದ್ದರು– "ನಾನು ಕಾಂಗ್ರೆಸ್ಸಿಗ. ನನಗೆ ಹಿಂದೂಗಳಲ್ಲಿ ಪ್ರೇಮ

ವಿದೆ. ಆದ ಮಾತ್ರಕ್ಕೆ ನಾನು ಮುಸಲ್ಮಾನರ ಸೇವೆ ಮಾಡಬಾರದೆ?" ನೌಕರಿಗಳಲ್ಲಿ ಅರ್ಧಭಾಗ ಮುಸಲ್ಮಾನರಿಗೆ ದೊರೆಯಬೇಕೆಂಬುದು ಅವರ ಅಭಿಪ್ರಾಯ. ಒಂದು ನೌಕರಿಯನ್ನೂ ಅವರಿಗೆ ಕೊಡಬಾರದೆಂದು ಬೇಕಾದರೆ ಹೇಳಿ. ಆದರೆ, ಅವರನ್ನು ಹಿಂದುಗಳ ಶತ್ರು ಎನ್ನುವುದೇಕೆ? ನಾನು ಕಲ್ಪನಾ ಶಕ್ತಿಯ ದುರುಪಯೋಗ ಮಾಡಿಕೊಂಡು ಕಾಲ್ಪನಿಕ ಶತ್ರುಗಳನ್ನು ಮಾಡಿಕೊಳ್ಳುತ್ತೇವೆ. ಇನ್ನೂ ಒಮ್ಮೆ ಹೇಳುತ್ತೇನೆ-.ಅಬ್ದುರ್‌ರಹೀಮ್, ಜಿನ್ನಾ, ಆಲೀ ಸಹೋದರರು ಅವರಲ್ಲಿ ಯಾರೂ ಹಿಂದುಗಳ ಶತ್ರುಗಳಲ್ಲ. ಹಾಗೆಯೇ ಮಾಲವೀಯಜಿ, ಲಾಲಾಜಿ ಮುಸಲ್ಮಾನರ ಶತ್ರುಗಳೂ ಅಲ್ಲ. ಶ್ರದ್ಧಾನಂದರಲ್ಲಿ ಕೆಡಕು ಇರಲಿಲ್ಲ; ಅವರು ಕಲುಷಿತ ಹೃದಯದ ಮನುಷ್ಯರಾಗಿರಲಿಲ್ಲ; ತಮ್ಮ ಶತ್ರುಗಳೂ ಆಗಿರಲಿಲ್ಲ ಎಂಬುದಾಗಿ ಇಂದು ಮುಸಲ್ಮಾನರೂ ಒಪ್ಪುತ್ತಾರೆ.

ರಶೀದನನ್ನು ನಾನು ಸಹೋದರನೆಂದು ಏಕೆ ಹೇಳಿದೆನೆಂದು ಈಗ ನಿಮಗೆ ಅರ್ಥವಾಗಿರಬೇಕು. ಆತನನ್ನು ನಾನು ಅಪರಾಧಿ ಎಂಬುದಾಗಿಯೂ ಭಾವಿಸುವುದಿಲ್ಲ. ಅಪರಾಧಿ ನಾನು, ಮಾಲವೀಯಾಜಿ, ಲಾಲಾಜಿ, ಆಲಿ ಸಹೋದರರು ! 'ಸಮತ್ವಂ ಯೋಗ ಉಚ್ಯತೇ' ಎಂಬುದಾಗಿ ಗೀತೆಯಲ್ಲಿ ಹೇಳಿದೆ. ಮನುಷ್ಯ-ಮನುಷ್ಯರ ನಡುವೆ ಭೇದ ಮಾಡಬಾರದು. ಬ್ರಾಹ್ಮಣ ಚಂಡಾಲರ ನಡುವೆ, ಆನೆ-ಹಸುಗಳ ನಡುವೆ ಭೇದವೆಣಿಸಬಾರದು. ಅಂತಲೆ ನಾನು ಹೇಳಿದೆ- ರಶೀದ್ ನನ್ನ ಸಹೋದರ; ಆತ ತಪ್ಪಿತಸ್ಥನಲ್ಲ.

ಈಗ ಶ್ರದ್ಧಾನಂದರಿಗಾಗಿ ಕಣ್ಣೀರಿಡುವ ಸಮಯವಲ್ಲ. ಇದು ಕ್ಷಾತ್ರ ವೃತ್ತಿ ತೋರುವ ಕಾಲ. ಕ್ಷಾತ್ರ ವೃತ್ತಿ ಕ್ಷತ್ರಿಯನ ವಿಶಿಷ್ಟ ಗುಣವೇ ಆಗಿರಲೊಲ್ಲದೇಕೆ, ಬ್ರಾಹ್ಮಣರು, ವೈಶ್ಯರು, ಶೂದ್ರರು ಎಲ್ಲರೂ ಅದನ್ನು ತೋರಬಲ್ಲರು. ವಿಶೇಷತಃ ಇಂದಿನ "ಸ್ವರಾಜ್ಯ ಯುಗ" ನಮ್ಮೆಲ್ಲರ ಪಾಲಿಗೆ ಕ್ಷಾತ್ರವೃತ್ತಿಯ ಯುಗ. ಆದಕಾರಣ, ಅಳುವ ಮಾತು ಬಿಟ್ಟು, ಶ್ರದ್ಧಾನಂದರ ಬಲಿದಾನದಿಂದ, ರಶೀದನ ಮುರ್ಖತನದಿಂದ ಕಲಿಯಬಹುದಾದ ಪಾಠವನ್ನು ಹೃದಯದಲ್ಲಿ ನೆಲೆಗೊಳಿಸಿಕೊಳ್ಳೋಣ.೧೬೫

ಸ್ವಾಮೀಜೀ ಅವರ ದೇಹಾಂತ ಆಗಿಯೇ ಇಲ್ಲ. ಅವರ ನಿಜವಾದ

ದೇಹವನ್ನು ನಾಶಗೊಳಿಸಲು ನಾವು ಪ್ರಯತ್ನಿಸಿದ್ದಾಗಲೇ ಅವರ ದೇಹಾಂತ ಆಗುವುದಿಲ್ಲ. ಈ ಗುರುಕುಲ ಇರುವವರೆಗೆ, ಗುರುಕುಲದ ಒಬ್ಬನೆ ಒಬ್ಬ ಸ್ನಾತಕ ಸೇವೆ ಮಾಡುತ್ತಿರುವವರೆಗೆ ಸ್ವಾಮಿಾಜೀ ಬದುಕಿಯೇ ಇರುವರು. ಸ್ವಾಮಿಾಜೀ ಅವರ ಶರೀರ ಎಂದಾದರೊಂದು ದಿನ ಉರುಳಲೇ ಬೇಕಾಗಿತ್ತು. ಅವರ ಎಲ್ಲಕ್ಕಿಂತ ದೊಡ್ಡ ಕೃತಿಯೇ ಈ ಗುರುಕುಲ. ಅವರು ತಮ್ಮ ಸರ್ವ ಶಕ್ತಿಯನ್ನು ಇದಕ್ಕೆ ನಿವೇದಿಸಿದ್ದರು. ಅದನ್ನು ಸ್ಥಾಪಿಸಲು ಅವರು ಅತ್ಯಧಿಕ ತಪಶ್ಚರ್ಯೆಯನ್ನೇ ಮಾಡಿದ್ದರು. ನೀವು ಸತ್ಯಪಾಲನೆಯ ಪ್ರತಿಜ್ಞೆಯನ್ನು ಮಾಡಿದೀರಿ. ನಿಮ್ಮ ಮಾತನ್ನು ನೀವು ಪಾಲನೆ ಮಾಡುವುದಾದರೆ, ಗುರುಕುಲವನ್ನು ನಾಶಮಾಡುವ ಶಕ್ತಿ ಅದಾರಿಗೆ ?

ಆದರೆ, ಗುರುಕುಲವನ್ನು ಚಿರಸ್ಥಾಯಿಯಾಗಿಸಲು ಸ್ವಾಮಿಾಜೀ ಅವರಲ್ಲಿ ನಾವು ಕಂಡ ವೀರವೃತ್ತಿ, ಬ್ರಹ್ಮಚರ್ಯ ಹಾಗೂ ಕ್ಷಮಾಗುಣದ ಆವಶ್ಯಕತೆಯಿದೆ. ಕ್ಷಮೆ ವೀರತೆಯ ಲಕ್ಷಣ; ಸಂಯಮ ಬ್ರಹ್ಮಚರ್ಯ ಹಾಗೂ ವೀರತೆಯ ಲಕ್ಷಣ. ವೀರತೆ ಹಾಗೂ ವೀರ್ಯದ ರಕ್ಷಣೆಯಿಂದ ದೇಶ ಹಾಗೂ ಧರ್ಮವನ್ನು ಸಂಪೂರ್ಣವಾಗಿ ರಕ್ಷಿಸಬಹುದು. ಆ ಕೆಲಸ ಕಷ್ಟವೆಂಬುದನ್ನೂ ಬಲ್ಲೆ. ನಿಮ್ಮಲ್ಲಿಯ ಅನೇಕ ವಿದ್ಯಾರ್ಥಿಗಳ ಪತ್ರಗಳು ನನ್ನ ಬಳಿ ಬಿದ್ದಿವೆ. ಕೆಲವರು ನನ್ನನ್ನು ಸ್ತುತಿಸುತ್ತಾರೆ; ಕೆಲವರು ಶಪಿಸುತ್ತಾರೆ. ಸ್ತುತಿ ಕೆಲಸಕ್ಕೆ ಬಾರದ ವಸ್ತು. ಅದರ ಪ್ರಭಾವ ನನ್ನಮೇಲೆ ಏನೇನೂ ಆಗದು. ಆದರೆ, ವಿದ್ಯಾರ್ಥಿಗಳು ಸಿಟ್ಟಿಗೆದ್ದು ಬೈಯಲು ತೊಡಗಿದಾಗ ನನಗೆ ಚಿಂತೆ ಹತ್ತುತ್ತದೆ; ಕಾರಣ ಕೋಪ (ಕ್ರೋಧ) ದಿಂದ ವೀರ್ಯನಾಶವಾಗುತ್ತದೆ. ಬ್ರಹ್ಮಚರ್ಯದ ಬಗೆಗೆ ನನ್ನ ವ್ಯಾಖ್ಯೆಯನ್ನು ಸ್ವಾಮಿಾಜೀ ಅವರ ಮುಂದೆ ಮಂಡಿಸಿದ್ದೆ; ಅವರು ನನ್ನ ಮಾತನ್ನು ಒಪ್ಪಿದರು. ಯಾವಳೇ ಸ್ತ್ರೀಯ ಅಪವಿತ್ರ ಸ್ಪರ್ಶನ ಮಾಡದಿರುವುದಷ್ಟೇ ಬ್ರಹ್ಮಚರ್ಯವಲ್ಲ ನಿಜ. ನಿಜ ಬ್ರಹ್ಮಚರ್ಯ ಅಲ್ಲಿಂದ ಆರಂಭವಾಗುತ್ತದೆ. ಆದರೆ, ಕ್ಷಮೆಯ ಪರಾಕಾಷ್ಠೆಯೇ ಬ್ರಹ್ಮಚರ್ಯದ ಲಕ್ಷಣ. ಹಿಂದಿನ ವರುಷ ಸ್ವಾಮಿಾಜೀ ಅವರು ಟಂಕಾರಿಯಾದಿಂದ ಹಿಂತಿರುಗುವಾಗ "ನೀತಿಯಿಂದಲೇ ಹಿಂದೂ ಧರ್ಮದ ರಕ್ಷಣೆ ಆದೀತು"--ಎಂಬುದಾಗಿ ಹೇಳಿದ್ದರು. ವೈದಿಕ ಆಚಾರ-ವಿಚಾರವನ್ನು ರಕ್ಷಿಸಬಯಸುವುದಾದರೆ ಒಂದು ಮಾತನ್ನು ನೆನಪಿ

ನಲ್ಲಿ ಇಟ್ಟುಕೊಳ್ಳಬೇಕು--ಹೆಜ್ಜೆ ಹೆಜ್ಜೆಗೆ ಹಣ ಸಿಕ್ಕಿತು; ಆದರೆ, ಬ್ರಹ್ಮಚರ್ಯದ ನೀತಿಯ ಅಡಿಪಾಯ ಇಲ್ಲಿ ಬೀಳದಿದ್ದರೆ, ನಿಮ್ಮ ಗುರುಕುಲ ಮಣ್ಣು ಪಾಲಾಗುವುದು. ಈ ಭೂಮಿಗೆ ಆತ್ಮವೆಂಬುದಿಲ್ಲ; ನೀವೇ ಇದರ ಆತ್ಮ, ನೀವು ಆತ್ಮ-ಬಲವನ್ನು ಕಳೆದುಕೊಂಡು "ಉದರ ನಿಮಿತ್ತಂ ಬಹುಕೃತ ವೇಷಂ." ಎಂಬಂತೆ ಆಗಿಬಿಟ್ಟರೆ, ನೀವು ಪಡೆದ ಶಿಕ್ಷಣವೆಲ್ಲವೂ ವ್ಯರ್ಥ ವಾಗುವುದು."

ಇಂದು ನಾನು ನಿಮಗೆ ಚರಖಾ, ಖಾದಿಯ ಮಾತು ಹೇಳಲು ಬಂದಿಲ್ಲ. ಬ್ರಹ್ಮಚರ್ಯೆ, ವೀರತೆ–ಕ್ಷಮತೆಯದೇ ನಿಮ್ಮ ಮೊದಲ ಕೆಲಸ, ಅದನ್ನು ಮರೆತುಬಿಟ್ಟರೆ ಸ್ವಾಮಿಾಜೀ ಅವರ ಕಾರ್ಯ ಉಳಿಯದು. ರಶೀದನ ಗುಂಡಿನಿಂದ ಸ್ವಾಮಿಾಜೀ ಅವರಿಗೆ ಆದುದೇನು? ಆ ಗುಂಡಿನಿಂದಲೇ ಅವರು ಅಮರರಾದರು.

ಸ್ವಾಮಿಾಜೀ ಅವರ ಎರಡನೆಯ ಕೆಲಸ ಅಸ್ಪೃಶ್ಯೋದ್ಧಾರ. ಮಾಲವೀಯರು ಯಾವ ಶಬ್ದಗಳಿಂದ ಖಾದಿಯ ಪ್ರತಿಪಾದನೆ ಮಾಡಿದರೋ ನಾನು ಹಾಗೆ ಮಾಡಲಾರೆ. ಆದರೆ, ಇಷ್ಟುಮಾತ್ರ ಹೇಳಬಲ್ಲೆ — ನಮಗೆ ಬಡವರ, ಅಸ್ಪೃಶ್ಯರ ಚಿಂತೆ ನಮಗಿದ್ದರೆ, ಖಾದಿಯಿಂದ ದೂರವಿರುವುದು ಶಕ್ಯವಿಲ್ಲ.

ಭಗವಂತ ನಿಮ್ಮೆಲ್ಲರ ಬ್ರಹ್ಮಚರ್ಯ, ಸತ್ಯವನ್ನೂ, ನಿಮ್ಮ ಪ್ರತಿಜ್ಞೆಗಳನ್ನೂ ರಕ್ಷಿಸಲಿ. ಗುರುಕುಲಕ್ಕೆ ಒಳ್ಳೆಯದು ಮಾಡಲಿ. ಸ್ವಾಮಿಾಜೀ ಅವರ ಪ್ರತಿಯೊಂದು ಕಾರ್ಯವನ್ನೂ ಆತ ನಡೆಸಿಕೊಂಡು ಬರಲಿ.೧೬೬

ಯಾರಾದರೂ ನನ್ನನ್ನು 'ಮಹಾತ್ಮಾ' ಎಂದು ಕರೆದರೆ ಮಹಾತ್ಮಾ ಮುನ್ಶೀರಾಮರಿಗೆ ಬದಲು ತಪ್ಪಿ ನನ್ನನ್ನು ಹಾಗೆ ಕರೆಯುತ್ತಿರುವರೆಂದು ನನಗೆ ಅನಿಸುತ್ತಿತ್ತು. ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಲೇ ಅವರ ಕೀರ್ತಿಯನ್ನು ಕೇಳಿದ್ದೆ. ಹಿಂದೂಸ್ತಾನದಿಂದ ಧನ್ಯವಾದ ಹಾಗೂ ಸಹಾನುಭೂತಿಯ ಸಂದೇಶವನ್ನು ಕಳುಹಿಸಿದ್ದವರಲ್ಲಿ ಅವರೂ ಒಬ್ಬರು. ಹಿಂದೂಸ್ತಾನದ ಜನ ಅವರ ದೇಶ–ಸೇವೆಗಾಗಿ 'ಮಹಾತ್ಮಾ' ಎಂಬ ಪದವಿಯನ್ನು ಕೊಟ್ಟದ್ದಿತೆಂಬುದು ನನಗೆ ತಿಳಿದಿತ್ತು.೧೬೭

ಶ್ರೀನಿವಾಸಶಾಸ್ತ್ರೀ

ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳಂಥ ಪ್ರಾಮಾಣಿಕರಾದ ವ್ಯಕ್ತಿಗಳು ಬಹಳ ಕಡಿಮೆ. ಆದರೆ, ಅವರ ಆಚರಣೆ ಕಂಡು, ನನಗೆ ವಿಸ್ಮಯವಾಗುತ್ತದೆ. ನಾನು ಭಾರತವನ್ನು ಅಂಧಕಾರಮಯವಾದ ಹಳ್ಳಕ್ಕೆ ಕೊಂಡೊಯ್ಯುತ್ತಿರುವುದಾಗಿ ಅವರ ಅಭಿಪ್ರಾಯ. ಆದರೂ, ನನ್ನ ಮೇಲಿನ ಅವರ ಪ್ರೇಮ-ಅನುರಾಗ ಕಡಿಮೆ ಆಗಿರಲಿಕ್ಕಿಲ್ಲ. ನಾವು ಯಾವನೇ ಒಬ್ಬ ವ್ಯಕ್ತಿಗೆ ಅಗೌರವವನ್ನು ಉಂಟುಮಾಡದೆ, ಆತನ ಆಚರಣೆ, ಕಾರ್ಯಕ್ರಮ ಹಾಗೂ ಕಾರ್ಯಪದ್ಧತಿಯನ್ನು ಟೀಕಿಸಲಿಕ್ಕೂ, ವಿರೋಧಿಸಲಿಕ್ಕೂ ಶಕ್ಯ ಎಂಬುದನ್ನು ಅಸಹಕಾರ ಆಂದೋಲನ ಸಹಸ್ರಾರು ಮಂದಿಗೆ ತಿಳಿಸಿಕೊಟ್ಟಿದೆ ಯೆಂಬುದಾಗಿ ನಾನು ಆಶಿಸುವೆ. ಮನುಷ್ಯ ಅಪೂರ್ಣನಾಗಿಯೇ ಇರುತ್ತಾನೆ; ಆದಕಾರಣ ನಾವು ಇತರರ ಬಗೆಗೆ ಮೃದುವಾಗಿಯೇ ಇರಬೇಕು; ಸಾಧ್ಯವಾದಷ್ಟೂ ಏಕಾಏಕಿ ಯಾವುದೇ ರೀತಿಯ ದೋಷಾರೋಪಣೆ ಮಾಡಬಾರದು.೧೬೮

ಶ್ರೀ ಶ್ರೀನಿವಾಸ ಶಾಸ್ತ್ರಿಗಳು ಭಾರತದ ಓರ್ವ ಸರ್ವಶ್ರೇಷ್ಠ ವಿದ್ವಾಂಸರು. ಇವರಲ್ಲಿ ಅನೇಕರು ಇನ್ನೂ ಹುಟ್ಟದೆ ಇದ್ದಾಗಿನಿಂದ ಅಥವಾ ಬಾಲ್ಯಾವಸ್ಥೆಯಲ್ಲಿ ಇದ್ದಾಗಿನಿಂದ ಅವರು ಶಿಕ್ಷಕರೆಂದು ಖ್ಯಾತರಾಗಿದಾರೆ. ಅವರ ಮಹಾನ್ ವಿದ್ವತ್ತು, ಅವರ ಚಾರಿತ್ರ್ಯದ ಶ್ರೇಷ್ಠತೆ ಎರಡೂ ಎಂಥವೆಂದರೆ, ಪ್ರಪಂಚದ ಯಾವುದೇ ವಿಶ್ವವಿದ್ಯಾಲಯದವರು ಅವರನ್ನು ತಮ್ಮ 'ಕುಲಪತಿ' ಗಳನ್ನಾಗಿ ಮಾಡಿಕೊಂಡು ತಮ್ಮ ಗೌರವವನ್ನೇ ಹೆಚ್ಚಿಸಿಕೊಳ್ಳಬಹುದು.೧೬೯

ಮೃತ್ಯು ನಮ್ಮ ಮಧ್ಯದಿಂದ ಮಾತ್ರವಲ್ಲ, ಇಡೀ ಪ್ರಪಂಚದ ಮಧ್ಯದಿಂದ ಭಾರತಮಾತೆಯ ಅತ್ಯಂತ ದೊಡ್ಡ ಸುಪುತ್ರರೊಬ್ಬರನ್ನು ಕೊಂಡೊಯ್ದಿದೆ. ಅವರ ಪರಿಚಯವಿದ್ದವರೆಲ್ಲರಿಗೂ ಅವರು ಹಿಂದೂಸ್ತಾನವನ್ನು ಎಷ್ಟೊಂದು ಪ್ರೀತಿಸುತ್ತಿದ್ದರೆಂಬುದು ಗೊತ್ತು. ಕೆಲವು ದಿನಗಳ ಹಿಂದೆ

ನಾನು ಅವರನ್ನು ಮದ್ರಾಸಿನಲ್ಲಿ ಭೆಟ್ಟಿಯಾಗಿದ್ದಾಗ, ಅವರು ಹಿಂದೂಸ್ತಾನದ ಹಾಗೂ ಅದರ ಸಂಸ್ಕೃತಿಯ (ಅವರು ಇದ್ದುದು, ಹೋದುದು ಅದರ ಸಲುವಾಗಿಯೇ) ವಿಷಯವನ್ನು ಬಿಟ್ಟು ಇನ್ನಾವ ವಿಷಯವನ್ನೂ ಮಾತನಾಡಲೇ ಇಲ್ಲ. ಅವರು ಮೃತ್ಯುಶಯ್ಯೆಯಲ್ಲಿ ಮಲಗಿದಂತೆ ತೋರುತ್ತಿದ್ದಾಗಲೂ ಅವರಿಗೆ ತಮ್ಮದೇ ಚಿಂತೆ ಏನೇನೂ ಇರಲಿಲ್ಲವೆಂಬುದನ್ನು ನಾನು ಖಚಿತವಾಗಿ ಬಲ್ಲೆ. ಅವರ ಸಂಸ್ಕೃತಜ್ಞಾನ ಅವರ ಅಗಾಧ ಇಂಗ್ಲೀಷ್ ಜ್ಞಾನಕ್ಕಿಂತ ಹೆಚ್ಚಲ್ಲದಿದ್ದರೆ, ಕಡಿಮೆಯಂತೂ ಅಲ್ಲ. ನಾನು ಹೇಳಬೇಕಾದುದು ಇನ್ನು ಒಂದೇಮಾತು : ರಾಜನೀತಿಯಲ್ಲಿ ನಮ್ಮ ಅಭಿಪ್ರಾಯಗಳು ಒಂದರೊಡನೊಂದು ಕೂಡಿಬರದಿದ್ದರೂ ನಮ್ಮ ಹೃದಯಗಳು ಒಂದೇ ಆಗಿದ್ದವು ; ಅಲ್ಲದೆ ಅವರ ದೇಶಭಕ್ತಿ ನಮ್ಮಲ್ಲಿಯ ಅತಿ ದೊಡ್ಡ ದೇಶಭಕ್ತರ ದೇಶಭಕ್ತಿಗಿಂತ ಕಡಿಮೆಯಾದುದೆಂದು ಯೋಚಿಸಲಿಕ್ಕೂ ಶಕ್ಯವಿಲ್ಲ. ಅವರ ದೇಹ ಭಸ್ಮೀಭೂತವಾಗಿದ್ದರೂ, ಶಾಸ್ತ್ರಿಗಳು ಜೀವಂತರಾಗಿಯೇ ಇದಾರೆ.೧೭೦

ಸುಖದೇವ

'ಅನೇಕರಲ್ಲಿ ಒಬ್ಬ'—ಎಂದುಕೊಂಡು ಬರೆದಿರುವ ಪತ್ರ ದಿವಂಗತ ಸುಖದೇವರದು. ಶ್ರೀ ಸುಖದೇವರು ಭಗತ್‌ಸಿಂಗರ ಸಂಗಾತಿ. ಈ ಪತ್ರ ಅವರ ಮರಣದ ನಂತರ ನನಗೆ ಕೊಡಲ್ಪಟ್ಟಿತು. ಸಮಯಾಭಾವದಿಂದ ಇದನ್ನು ಬೇಗ ಪ್ರಕಟಿಸಲು ಆಗಲಿಲ್ಲ.

ಲೇಖಕರು 'ಅನೇಕರಲ್ಲಿ ಒಬ್ಬ'ರಲ್ಲ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಗಲ್ಲನ್ನು ಅಪ್ಪುವವರು ಅನೇಕರಿರುವುದಿಲ್ಲ. ರಾಜಕೀಯ ಕೊಲೆ ಎಷ್ಟೇ ನಿಂದ್ಯವಾದುದಾಗಿರಲಿ, ಇಂಥ ಭಯಂಕರ ಕಾರ್ಯ ಮಾಡುವವರ ದೇಶಪ್ರೇಮ ಹಾಗೂ ಸಾಹಸವನ್ನು ಗೌರವಿಸದೆ ಇರುವುದು ಶಕ್ಯವೇ ಇಲ್ಲ. ರಾಜನೈತಿಕ ಕೊಲೆಗಳ ಸಂಪ್ರದಾಯ ಹೆಚ್ಚಲಿಕ್ಕಿಲ್ಲೆಂದು ಆಶಿಸೋಣ. ಭಾರತವರ್ಷದ ಪ್ರಯೋಗ ಸಫಲವಾದರೆ—ಆಗಲೇಬೇಕು—ರಾಜಕೀಯ

ಕೊಲೆಗಳ ' ಕಸಬು ' ಸದಾಕಾಲಕ್ಕೂ ನಿಂತುಹೋದೀತು. ನಾನಂತೂ ಇದೇ ನಂಬಿಕೆಯಿಂದ ಕೆಲಸಮಾಡುತ್ತಿರುವೆ.೧೬೧

ಉಮರ್ ಸುಭಾನಿ

ಶ್ರೀ ಉಮರ್ ಸುಭಾನಿ ಅವರು ಬಹಳ ಆಕಸ್ಮಿಕ ಹಾಗೂ ಅಕಾಲಿಕ ಮರಣಕ್ಕೆ ತುತ್ತಾದರು. ದೊಡ್ಡ ದೇಶಭಕ್ತ ಹಾಗೂ ಕಾರ್ಯಕರ್ತ ರೊಬ್ಬರು ನಮ್ಮನ್ನು ಅಗಲಿ ಹೋದರು. ಒಂದು ಕಾಲಕ್ಕೆ ಬೊಂಬಾಯಿ ಯಲ್ಲಿ ಶ್ರೀ ಉಮರ್ ಸುಭಾನಿ ಅವರ ಪ್ರಭಾವವೇ ಪ್ರಭಾವವಾಗಿತ್ತು. ಶ್ರೀ ಸುಭಾನಿ ಅವರಿಗೆ ' ವಕ್ರದೆಸೆ ' ಕಾಣಿಸಿಕೊಳ್ಳುವ ಮುನ್ನ, ಅವರ ಕೈ ಇಲ್ಲದ ಯಾವೊಂದು ಸಾರ್ವಜನಿಕ ಕಾರ್ಯವೂ ಮುಂಬಯಿಯಲ್ಲಿ ನಡೆಯುತ್ತಿರ ಲಿಲ್ಲ. ಆದರೂ ಅವರು ರಂಗವನ್ನು ಸಜ್ಜುಗೊಳಿಸುತ್ತಿದ್ದರೇ ಹೊರತು, ರಂಗದ ಮೇಲೆ ಎಂದೂ ಕಾಣಿಸಿಕೊಳ್ಳುತ್ತಿರಲಿಲ್ಲ. ಬೊಂಬಾಯಿಯ ವ್ಯಾಪಾರಿ ಗಳಲ್ಲಿ ಅವರ ಪ್ರಜಾಪ್ರಿಯತೆ ಹೆಚ್ಚಿನದು. ಅವರ ವಿವೇಕಬುದ್ಧಿ ಬಹಳ ಮಾಡಿ ತೀಕ್ಷ್ಣವಾದುದೂ, ಸರಿಯಾದುದೂ ಆಗಿರುತ್ತಿತ್ತು. ಅವರ ಔದಾರ್ಯ ದೋಷದ ಮಟ್ಟವನ್ನು ಮುಟ್ಟಿತ್ತು. ಪಾತ್ರರು—ಅಪಾತ್ರರು ಎಲ್ಲರಿಗೂ ದಾನ ಮಾಡುತ್ತಿದ್ದರು. ಪ್ರತಿಯೊಂದು ಸಾರ್ವಜನಿಕ ಕಾರ್ಯಕ್ಕೂ ಧಾರಾಳವಾಗಿ ಸಹಾಯ ಮಾಡುತ್ತಿದ್ದರು. ಗಳಿಸುವುದರಲ್ಲಿ ಎಷ್ಟು ಮುಂದೋ ಖರ್ಚುಮಾಡುವುದರಲ್ಲೂ ಅಷ್ಟೇ ಮುಂದು. ಸುಭಾನಿ ಅವರದು ಎಲ್ಲದರಲ್ಲೂ ಅತಿ. ಸಟ್ಟಾ ವ್ಯಾಪಾರದಲ್ಲೂ ಅತಿಯೇ. ಆ ಅತಿಯೇ ಅವರ ದುರ್ಗತಿಗೆ ಕಾರಣವಾಯಿತು. ಒಂದೇ ತಿಂಗಳಲ್ಲಿ ತಮ್ಮ ಆದಾಯವನ್ನು ಎರಡರಷ್ಟು ಹೆಚ್ಚಿಸಿಕೊಂಡರು. ಮುಂದಿನ ತಿಂಗಳಲ್ಲೇ ದಿವಾಳಿಯೆಂದು ಸಾರಿಕೊಂಡರು. ತಮಗಾದ ಹಾನಿಯನ್ನು ಧೈರ್ಯದಿಂದಲೇ ಎದುರಿಸಿದರು. ಆದರೆ, ಅವರ ಅಭಿಮಾನ ಸಾರ್ವಜನಿಕ ಕಾರ್ಯದಿಂದ ದೂರ ಸರಿಯದಂತೆ ಮಾಡಿತು. ಕಾರಣ, ಸಾರ್ವಜನಿಕ ಕಾರ್ಯಗಳಿಗೆ ಮೊದಲಿನ ಹಾಗೆ ಲಕ್ಷಾಂತರ ರೂಪಾಯಿ ವೆಚ್ಚಮಾಡುವ ಸ್ಥಿತಿಯಲ್ಲಿ ಅವರು

ಇರಲಿಲ್ಲ. ಮಧ್ಯಮಾರ್ಗದಲ್ಲಿ ಹೋಗುವುದಂತೂ ಅವರಿಗೆ ತಿಳಿದೇ ಇರಲಿಲ್ಲ. ಚಂದಾಪಟ್ಟಿಯಲ್ಲಿ ತಮ್ಮ ಹೆಸರು ಮೊದಲನೆಯದಾಗುವುದು ಸಾಧ್ಯವಿಲ್ಲದಿದ್ದರೆ, ಪಟ್ಟಿಯ ಕಡೆಗೆ ತಿರುಗಿಯೂ ನೋಡುತ್ತಿರಲಿಲ್ಲ. ಆದಕಾರಣ, ಬಡತನ ಬಂದೊಡನೆಯೇ ಸಾರ್ವಜನಿಕ ಕಾರ್ಯದಿಂದ ಕೈತೊಳೆದುಕೊಂಡು ಕುಳಿತರು. ಎಲ್ಲಿ, ಯಾವ ಸಾರ್ವಜನಿಕ ಕಾರ್ಯವೇ ನಡೆಯಲಿ, ಉಮರ್ ಸುಭಾನಿ ಅವರ ನೆನಪು ಬರದೆ ಇರುವುದಿಲ್ಲ; ಅವರ ದೇಶಸೇವೆಯನ್ನು ಮರೆಯುವ ಹಾಗಿಲ್ಲ. ಅವರ ಜೀವನ ಪ್ರತಿಯೊಬ್ಬ ಶ್ರೀಮಂತ ತರುಣನ ಪಾಲಿಗೆ ಆದರ್ಶವೂ ಹೌದು; ಎಚ್ಚರಿಕೆಯೂ ಹೌದು. ಅವರ ಉತ್ಸಾಹಪೂರ್ಣ ದೇಶಭಕ್ತಿಯ ಕಾರ್ಯ ಆದರ್ಶಯೋಗ್ಯ. ಹಣ ಇಟ್ಟುಕೊಂಡೂ ಮನುಷ್ಯ ಯೋಗ್ಯನಾಗಬಹುದು; ಹಣವನ್ನು ಸಾರ್ವಜನಿಕ ಕಾರ್ಯಕ್ಕೆ ಅರ್ಪಿಸಬಹುದು—ಎಂಬುದನ್ನು ಅವರ ಜೀವನ ತೋರಿಸುತ್ತದೆ. ಹಾಗೆಯೇ ಮಹತ್ವಾಕಾಂಕ್ಷೆ ಇಟ್ಟುಕೊಂಡು ತೊಡಗುವ ಶ್ರೀಮಂತ ತರುಣರಿಗೆ ಅವರ ಜೀವನ ಎಚ್ಚರಿಕೆಯನ್ನು ಕೊಡುತ್ತದೆ.

ಉಮರ್ ಸುಭಾನಿ ತಿಳಿಗೇಡಿ (ಸಟ್ಟಾ) ವ್ಯಾಪಾರಿಗಳೇನಲ್ಲ. ಅವರಿಗೆ ಹಾನಿಯಾದಾಗಲೇ ಇತರ ವ್ಯಾಪಾರಿಗಳಿಗೂ ಹಾನಿಯಾಯಿತು. ಅವರು ವಿಫಲವಾಗಿ ಹತ್ತಿ ಕೊಂಡಿಟ್ಟುಕೊಂಡುದರ ವಿರುದ್ಧವಾಗಿ ಏನೂ ಹೇಳುವಂತಿಲ್ಲ. ಮುಂಬಯಿಯ ವ್ಯಾಪಾರಿಗಳಲ್ಲಿ ' ರಾಜ ' ರೇ ಆಗಿದ್ದೂ, ಅವರು ಸಟ್ಟಾ ವ್ಯಾಪಾರದಲ್ಲಿ ತೊಡಗಿದುದಾದರೂ ಏಕೆ? ದೇಶಭಕ್ತರಾಗಿ ಆಕಾಂಕ್ಷೆಯನ್ನು ಅಂಕುಶದಲ್ಲಿಟ್ಟುಕೊಳ್ಳುವುದು ಅವರ ಕರ್ತವ್ಯವಾಗಿತ್ತು. ಅವರ ಜೀವನ ಮತ್ತು ಹೆಸರು ಸಾರ್ವಜನಿಕ ನ್ಯಾಸಧನ (Trust) ವೆನಿಸಿತ್ತು. ಅಂದಮೇಲೆ ಅವರು ಎಚ್ಚರಿಕೆಯಿಂದ ಇರಬೇಕಾಗಿತ್ತು. " ಕೆಟ್ಟ ಮೇಲೆ ಬುದ್ಧಿ ಬಂತು " ಎಂಬ ನಾಣ್ಣುಡಿಯನ್ನು ನಾನು ಬಲ್ಲೆ. ಈಗ ನಾನು ಹೇಳುತ್ತಿರುವುದೆಲ್ಲವೂ ಹಾಗೆಯೇ ಆದೀತು. ಆದರೆ ಅವರ ದೋಷಗಳನ್ನು ಹೆಕ್ಕಿತೆಗೆಯುವ ಉದ್ದೇಶದಿಂದ ನಾನು ಟೀಕೆಮಾಡುತ್ತಿಲ್ಲ. ಆ ದೇಶಭಕ್ತರ ಜೀವನದಿಂದ ನಾವೆಲ್ಲರೂ ಪಾಠಕಲಿಯಬೇಕೆಂಬುದೇ ನನ್ನ ಉದ್ದೇಶ. ಮುಂಬರುವ ಪೀಳಿಗೆಯವರು ಕೆಟ್ಟುಹೋದ ಕಾರ್ಯ ನೋಡಿಯೇ ಸದ್ಗುಣದ ನಿಧಿಯನ್ನು ಬೆಳೆಸಿಕೊಳ್ಳಬಹುದು. ಒಬ್ಬರ

ತಪ್ಪಿನಿಂದೊಬ್ಬರು ಪಾಠ ಕಲಿಯಬಹುದು. ನಾವೆಲ್ಲರೂ ಉಮರ್ ಸುಭಾನಿ ಅವರಂತೆ ಉಜ್ವಲ ದೇಶಪ್ರೇಮಿಗಳಾಗಬೇಕು, ಹಣವಿದ್ದಲ್ಲಿ ಅದನ್ನು ದೇಶಕ್ಕಾಗಿ ಅವರಂತೆ ಕೊಡುಗೈಯಿಂದ ಕೊಡುವವರಾಗಬೇಕು. ಅವರಂತೆಯೇ ಜಾತೀಯತೆ ಅಥವಾ ಜಾತಿಭೇದದಿಂದ ದೂರವಾಗಿರಬೇಕು. ಅಲ್ಲದೆ, ಅವರ ಹುಚ್ಚು ಧೈರ್ಯ, ಹಾಗೂ ಅಜಾಗರೂಕತೆಯಿಂದಲೂ ದೂರವಾಗಿದ್ದು, ಅವರು ಬಿಟ್ಟು ಹೋಗಿರುವ ಕುಲಧನಕ್ಕೆ ಪಾತ್ರರಾಗಬೇಕು.

ಅವರ ವೃದ್ಧ ತಂದೆಯವರಿಗೂ, ಪರಿವಾರದವರಿಗೂ ನನ್ನ ಸಮವೇದನೆಯನ್ನು ಸಲ್ಲಿಸುವೆನು.೧೬೨

ಅಕ್ಬರ್ ಹೈದರಿ

ದಿವಂಗತ ಸರ್ ಅಕ್ಬರ್ ಹೈದರಿ ಅವರು ಅಪೂರ್ವ ಗುಣಗಳ ಗಣಿ. ಅವರು ದೊಡ್ಡ ವಿದ್ವಾಂಸರೂ, ದಾರ್ಶನಿಕರೂ ಸುಧಾರಕರೂ ಆಗಿದ್ದರು. ಅವರು ನಿಷ್ಠಾವಂತ ಮುಸಲ್ಮಾನರಾಗಿದ್ದರೂ, ಇಸ್ಲಾಮ್ ಹಾಗೂ ಹಿಂದೂ ಧರ್ಮಗಳಲ್ಲಿ ಅವರಿಗೆ ಪರಸ್ಪರ ವಿರೋಧವೇನೂ ಕಂಡುಬರಲಿಲ್ಲ. ಬೇರೆ ಧರ್ಮಗಳನ್ನೂ ಅವರು ಅಧ್ಯಯನ ಮಾಡಿದ್ದರು. ಅವರು ಮಿತ್ರಮಂಡಲಿಯ ವೈವಿಧ್ಯವೇ ಅವರ ಉದಾರ ವೃತ್ತಿಯ ದ್ಯೋತಕ. ಎರಡನೆಯ ಚಕ್ರಗೋಷ್ಠಿ ಮುಗಿಸಿಕೊಂಡು, ಇಬ್ಬರೂ ಒಂದೇ ಜಹಜಿನಲ್ಲಿ ಹಿಂತಿರುಗಿದೆವು. ಸಂಜೆಗೆ ನಾವು ಜಹಜಿನಲ್ಲಿ ನಡೆಸುತ್ತಿದ್ದ ಪ್ರಾರ್ಥನೆಗೆ ಅವರು ತಪ್ಪದೆ ಬರುತ್ತಿದ್ದರು. ಗೀತಾ ಶ್ಲೋಕ ಹಾಗೂ ನಮ್ಮ ಭಜನೆ ಹಾಡುತ್ತಿದ್ದರೆ ಅದರಲ್ಲಿ ಬಹಳ ಆಸಕ್ತಿ ತೋರುತ್ತಿದ್ದರು. ಮಹಾದೇವ ದೇಸಾಯಿ ಅವರಿಂದ ತಮ್ಮಸಲುವಾಗಿ ಎಲ್ಲದರ ಭಾಷಾಂತರವನ್ನು ಮಾಡಿಸಿಕೊಂಡರು. ಹಿಂದೂಸ್ತಾನಕ್ಕೆ ಹಿಂತಿರುಗಿದಮೇಲೆ ನನ್ನೊಡನೆ ಕೂಡಿ ಹಿಂದೂ–ಮುಸಲ್ಮಾನರ ಐಕ್ಯತೆಗಾಗಿ ಪ್ರವಾಸ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದರು. ಆದರೆ ಭಗವಂತನ ಇಚ್ಛೆಯೇ ಬೇರೆಯಾಗಿತ್ತು. ದಿವಂಗತ ಲಾರ್ಡ್ ವಿಲ್ಲಿಂಗ್‌ಡನ್ ಅವರು ನನಗಾಗಿ ಬೇರೊಂದು ಕಾರ್ಯಕ್ರಮವನ್ನೇ ಸಿದ್ಧಗೊಳಿಸಿ ಇಟ್ಟಿದ್ದರು.

ನಾನು ಸತ್ಯಾಗ್ರಹ ಆಂದೋಲನದಲ್ಲಿ ಧುಮ್ಮಿಕ್ಕಬೇಕಾಯಿತು. ಸರ್ ಅಕ್ಬರ್ ಮತ್ತು ನಾನು ಕೂಡಿ ಮಾಡಿಕೊಂಡಿದ್ದ ಕಾರ್ಯಕ್ರಮ ಹಾಗೆಯೇ ಉಳಿದುಹೋಯಿತು. ಅವರು ಶ್ರೀ ಅರವಿಂದರಿಂದಲೂ ಪ್ರಭಾವಿತರಾಗಿದ್ದರು. ಪುದುಚೇರಿಯ ಋಷಿ ಮೂರು ತಿಂಗಳಿಗೊಮ್ಮೆ ಭಕ್ತರಿಗೆ ದರ್ಶನ ಕೊಡುತ್ತಿದ್ದಾಗ ತಪ್ಪದೆ ಅಲ್ಲಿಗೆ ಹೋಗುತ್ತಿದ್ದರು.

ಸರ್ ಅಕ್ಬರರ ಮರಣದಿಂದ ದೇಶಕ್ಕೆ ಅಪಾರ ಹಾನಿಯಾಗಿದೆ. ಅವರ ದುಃಖ ಸಂಪತ್ತು ಕುಟುಂಬದವರಿಗೆ ನನ್ನ ಹೃತ್ಪೂರ್ವಕವಾದ ಸಮವೇದನೆಯನ್ನು ಸಲ್ಲಿಸುವೆನು.೧೭೩

ಲಾರ್ಡ್ ಇರ್ವಿನ್

ಇಂದು ಲಾರ್ಡ್ ಇರ್ವಿನ್ನರ ಮೇಲೆ, ಹಾರ್ನಿಮನ್ ಒಂದು ಲೇಖನ ಬರೆದಿದ್ದಾರೆ. ಅದರಲ್ಲಿ ಇರ್ವಿನ್ನರನ್ನು 'ಚತುರ ಸಮಯ ಸಾಧಕರು' ಎಂದು ಬಣ್ಣಿಸಿದಾರೆ.

[ಈತ ಜಾಣನಾದ ಸಮಯ ಸಾಧಕ. ತನ್ನ ಅಸಂಬದ್ಧತೆ, ಸಿದ್ಧಾಂತ ಹಾಗೂ ನೀತಿ ಪರಿವರ್ತನೆಯನ್ನು ಒಳ್ಳೆತನದ ಆಗ್ರಹ ಹಾಗೂ ಪ್ರಾಮಾಣಿಕತೆಯ ಡಾಂಭಿಕ ನಟನೆಯ ದಪ್ಪವಾದ ಪರದೆಯಿಂದ ಮುಚ್ಚಿಬಿಡಲು ಬಯಸುತ್ತಾನೆ].

"ಆತ ಒಮ್ಮೆ ಸೈಮನ್ ಕಮಿಷನ್ನಿನ ಸಮರ್ಥಕನಾಗಿ ಕಾಣಿಸಿಕೊಂಡ. ಆದರೆ ಸೌಮ್ಯವಾದಿಗಳ ವಿರೋಧ ನೋಡಿ, ಜಾರಿಕೊಂಡ. ಒಮ್ಮೆ ಸವಿನಯ ಶಾಸನಭಂಗದ ಸಮರವನ್ನು ಲಾಠೀ-ಆರ್ಡಿನೆನ್ಸ್ ವಿಶೇಷಾಜ್ಞೆಗಳು ಮೂಲಕ ಬಗ್ಗುಬಡಿಯುವ ಪ್ರಯತ್ನಮಾಡಿದ; ಮತ್ತೆ ಕಾಂಗ್ರೆಸ್ಸಿನ ಪ್ರಾಬಲ್ಯವನ್ನು ಕಂಡು, ಜಗ್ಗಿಹೋದ. ಆತನ ಪ್ರಾಮಾಣಿಕತೆಯ ಬಗೆಗೆ ಆಡುವ ಮಾತುಗಳಿಂದ ಬೇಸರಬರುತ್ತದೆ. ಈಗ ಅದು ನಿಂತುಹೋದರೇ ಒಳ್ಳೆಯದು. ಆತ ಚಕ್ರಗೋಷ್ಠಿಯನ್ನು ಪುನಃ ಜೀವಂತಗೊಳಿಸಿದಲ್ಲಿ, ಆತನ ಪ್ರಾಮಾಣಿಕತೆಯ ಬಗೆಗೆ ವಿಚಾರ ಮಾಡಬಹುದು".

ನಾನು ಮೇಲೆ ಸೂಚಿಸಿರುವ ಅಭಿಪ್ರಾಯದವನಲ್ಲ. ಈ ವ್ಯಕ್ತಿಯಲ್ಲಿ ಎಳೆದಾಟ–ಸೆಳೆದಾಟ, ಕುಸ್ತಿವರಸೆ ಇಲ್ಲವೆಂಬ ಅರ್ಥದಲ್ಲಿ ಅವರು ಪ್ರಾಮಾಣಿಕರು. ಅವರು ನೇರವಾಗಿ, ಸರಳವಾಗಿ ಮಾತನಾಡುವವರು. ಸೈಮನ್ ಕಮಿಷನ್ನಿನ ಮಾತು ಅವರಿಗೆ ಹಿಡಿಸದಿದ್ದರೂ ಸಂಪ್ರದಾಯ ಪಕ್ಷ ಕೈಗೊಂಡ ನೀತಿಗೆ ವಿರೋಧವಾಗಿ ಹೋಗಬಾರದೆಂದು ವಿಚಾರ ಮಾಡಿದರು. ಅವರ ಪ್ರಾಮಾಣಿಕತೆಗೂ ಒಂದು ಮಿತಿಯಿದೆ; ಬ್ರಿಟಿಷ್ ಸಾಮ್ರಾಜ್ಯ ಅಖಂಡವಾಗಿರಬೇಕೆಂಬುದೇ ಅದು. ಅದಕ್ಕೆ ಅಪಾಯ ಒದಗುವುದಾದರೆ ವಚನ ಭಂಗಕ್ಕೂ ಅವರು ಅಡ್ಡ ಬರುವುದಿಲ್ಲ. ಪ್ರತಿಯೊಬ್ಬ ಸಂಪ್ರದಾಯ ಪಕ್ಷದ ಸದಸ್ಯನೂ ಭಾವಿಸಿರುವಂತೆ ಬ್ರಿಟಿಷ್ ಸಾಮ್ರಾಜ್ಯವನ್ನು ಭಗವಂತನ ಅದ್ಭುತ ಕೃತಿ ಎಂಬುದಾಗಿ ಅವರು ಭಾವಿಸಿದಾರೆ. ಆ ದೃಷ್ಟಿಯಿಂದಲೇ ಅವರು ವಿಷಯಗಳನ್ನು ನೋಡುತ್ತಾರೆ. ಇದು ನಿಜವಾಗಿರಲಿ, ಇಲ್ಲದಿರಲಿ– ಅದನ್ನು ಕಟ್ಟಿಕೊಂಡು ನಮಗೇನು? ಇದರಿಂದ ನಮಗೆ ಬೇಕಾದುದು ಸಿಕ್ಕೀತೇ, ಇಲ್ಲವೇ ಎಂಬುದಷ್ಟೇ ನಮಗೆ ಸಂಬಂಧಿಸಿದುದು.೧೭೪

ಜನರಲ್ ಯೂ ಆಂಗ್ ಸಾಂಗ್

ಬರ್ಮಾ ದೇಶವೂ ಹಿಂದೂಸ್ತಾನದಂತೆಯೇ ಸ್ವತಂತ್ರವಾಗುತ್ತಿದೆ. ಅಲ್ಲಿಯ ನಾಯಕರಾದ ಜನರಲ್ ಯೂ ಆಂಗ್ ಸಾಂಗ್ ಆಧುನಿಕ ಬರ್ಮಾ ದೇಶಕ್ಕೆ ಜನ್ಮವಿತ್ತು, ಅದನ್ನು ಸ್ವಾತಂತ್ರ್ಯದ ಬಾಗಿಲಿಗೆ ತಂದು ಮುಟ್ಟಿಸಿದ್ದಾರೆ. ಅವರು ಸತ್ಯಾಗ್ರಹಿ ಅಲ್ಲದಿದ್ದರೆ ತಾನೆ ಏನು? ಅವರು ದಿಟ್ಟ ಹೋರಾಟಗಾರರು; ಅವರ ಪ್ರಯತ್ನದ ಪರಿಣಾಮವಾಗಿ ಇಂದು ಬರ್ಮಾ ಸ್ವತಂತ್ರವಾಗುತ್ತಲಿದೆ. ಸಶಸ್ತ್ರ ಸಮೂಹವೊಂದು ಅವರನ್ನು, ಅವರ ನಾಲ್ವರು ಸಂಗಾತಿಗಳನ್ನು ಕೊಲೆ ಮಾಡಿದುದು, ಸಾಮಾನ್ಯವಾದ ವಿಷಯವಲ್ಲ. ನಾವು ಅವರಿಂದ ಎಷ್ಟೇ ದೂರವಿರಲಿ, ನಮ್ಮ ಪಾಲಿಗೆ ಇದು ದುಃಖದ ಮಾತು. ಇಂಥ ಘಟನೆಗಳು ಆಗುತ್ತಲೇ ಇದ್ದರೆ, ಪ್ರಪಂಚದ ಸ್ಥಿತಿ ಏನಾದೀತು? ಹತ್ಯಾಕಾರಿಗಳು ನಿಜವಾದ ದರೋಡೆಗಾರರು ಎಂದು ನನಗೆ ಅನಿ

ಸುವುದಿಲ್ಲ. ನಾನು ಬರ್ಮಾದಲ್ಲಿ ಸಾಕಷ್ಟು ಕಾಲ ಇದ್ದೆ; ರಂಗೂನ್, ಮಾಂಡಲೆ ಮೊದಲಾದ ಸ್ಥಳಗಳೆಲ್ಲವನ್ನೂ ನೋಡಿದ್ದೇನೆ. ಅಲ್ಲಿ ಬೌದ್ಧ ಧರ್ಮ ಪ್ರಚಲಿತವಾಗಿದೆ. ಬರ್ಮದ ಜನರಲ್ಲಿ ಬಹು ಮಂದಿ ಬೌದ್ಧ ಮತದ ಅನುಯಾಯಿಗಳು. ಬೌದ್ಧಧರ್ಮ ಪ್ರಚಲಿತವಾಗಿರುವೆಡೆಯಲ್ಲಿ ಇಂಥ ಖೂನಿ–ಕೊಲೆ ಏಕೆ? ಈ ಹತ್ಯೆಗಳ ಗರ್ಭದಲ್ಲಿ ಅಡಗಿರುವುದು ಕೇವಲ ಕೊಳ್ಳಿ, ಸೂರೆ ಅಲ್ಲ.' ಪಕ್ಷೀಯ–ಭೂತಚೇಷ್ಟೆ. ಈ ರೀತಿಯ ಜಗಳ ಗಳಿಂದಾಗಿ ಪ್ರಪಂಚದ ಸತ್ಯ ನಾಶವಾಗಿದೆ. ಹೀಗೆ ನಮಗೆ ವಿರೋಧವಾಗಿ ರುವವರು ನಮ್ಮನ್ನು ಕೊಲೆ ಮಾಡಿಬಿಟ್ಟರೆ, ಕೆಲಸ ನಡೆಸುವುದು ಹೇಗೆ? ಬರ್ಮಾ ಸ್ವಾತಂತ್ರ್ಯದ ದ್ವಾರವನ್ನು ಮುಟ್ಟಿರುವ ಕಾಲದಲ್ಲಿ ಹೀಗಾದುದು ಬಹಳ ದುಃಖಕರ, ನಾವೇಕೆ ಇಂಥ ಪೈಶಾಚಿಕ ವೃತ್ತಿಯವರಾದೆವು?

ಹಿಂದೂಸ್ತಾನ ಇದರಿಂದ ಪಾಠ ಕಲಿಯುವುದೆಂದು ನಾನು ಆಶಿಸು ತ್ತೇನೆ. ಕಾರಣ, ಇದು ಕೇವಲ ಬರ್ಮಾದ ಪಾಲಿಗಲ್ಲ, ಇಡೀ ಏಷ್ಯಾದ ಪಾಲಿಗೆ, ಇಡೀ ಪ್ರಪಂಚದ ಪಾಲಿಗೆ ದುಃಖಕರ ಘಟನೆ. ಭಗವಂತನಲ್ಲಿ ಹೀಗೆ ಮೊರೆಯಿಡೋಣ; "ಹೇ, ಭಗವಂತ! ಬರ್ಮಾದ ಜನರೂ ನಮ್ಮಂ ತೆಯೇ ಸ್ವಾತಂತ್ರ್ಯಕ್ಕಾಗಿ ಚಡಪಡಿಸುತ್ತಿದ್ದಾರೆ. ಅವರಿಗೆ ಈ ದುಃಖದಲ್ಲಿ ಸಮಾಧಾನ ನೀಡು. ಮೃತರಾದ ವ್ಯಕ್ತಿಗಳ ಕುಟುಂಬದವರಿಗೆ ಶೋಕ ಸಹಿಸುವ ಶಕ್ತಿಯನ್ನು ಕೊಡು. ಕೊಲೆ ಮಾಡಿರುವವರ ಹೃದಯವನ್ನು ಪರಿವರ್ತಿಸು."೧೭೫

ಸಿ. ಎಫ್. ಆಂಡ್ರೂಸ್

ಶ್ರೀ ಆಂಡ್ರೂಸರು ಭಾರತದ ಹಾಗೂ ಮಾನವ ಸಮಾಜದ ಸೇವೆ ಯನ್ನು ಬಹುವಾಗಿ ಬೆಳೆಸಿದಾರೆ. ಇಂಗ್ಲಿಷರ ಹಾಗೂ ಭಾರತೀಯರ ಸಂಬಂಧವನ್ನು ಮಧುರಗೊಳಿಸಲು ಶ್ರೀ ಆಂಡ್ರೂಸರು ಮಾಡಿರುವಷ್ಟು ಪ್ರಯತ್ನವನ್ನು ಬೇರೆ ಯಾವ ಆಂಗ್ಲೇಯನೂ ಮಾಡಿಲ್ಲ. ಪರಸ್ಪರ ಆದರ ಹಾಗೂ ಸ್ವಾತಂತ್ರ್ಯ ಆಧಾರದ ಮೇಲೆ ಎರಡೂ ರಾಷ್ಟ್ರಗಳ ಜನರನ್ನು

ಅಭೇದ್ಯವಾದ ಬಂಧನದಲ್ಲಿ ಬಂಧಿಸುವುದೇ ಅವರ ಏಕ ಮಾತ್ರ ಆಶೆ. ಅವರ ಈ ಕನಸು ನನಸಾಗಲಿ.೧೭೬

ಇಲ್ಲಿಗೆ ಬಂದಮೇಲೆ ನನ್ನ ಮನಸ್ಸಿನಲ್ಲಿ ಹುಟ್ಟುತ್ತಿರುವ ಭಾವನೆಗಳಲ್ಲಿ ದೀನಬಂಧುಗಳ ವಿಷಯದ್ದೂ ಒಂದು. ನಿನ್ನೆ ಬಳಿಗ್ಗೆ ಕಲ್ಕತ್ತೆಯಲ್ಲಿ ಗಾಡಿಯಿಂದ ಇಳಿಯುತ್ತಲೇ ಆಸ್ಪತ್ರೆಗೆ ಹೋಗಿ ಅವರನ್ನು ಭೆಟ್ಟಿಯಾದುದೇ ನಾನು ಮಾಡಿದ ಮೊಟ್ಟಮೊದಲನೆಯ ಕೆಲಸ. ಗುರುದೇವರು ವಿಶ್ವಕವಿಗಳು, ದೀನಬಂಧುಗಳಲ್ಲೂ ಕವಿಯ ಭಾವನೆ ಹಾಗೂ ಪ್ರಕೃತಿಯೇ ಇದೆ. ಇಂದು ಅವರು ಇಲ್ಲಿ ಉಪಸ್ಥಿತರಿದ್ದರೆ, ಅವರಿಗೆ ಎಷ್ಟು ಸಂತೋಷವಾಗುತ್ತಿತ್ತು.... ಗುರುದೇವರ ಭೆಟ್ಟಿಯ ಸಂದರ್ಭದ ಒಂದೊಂದು ಶಬ್ದ, ಒಂದೊಂದು ಸಂಕೇತ ಹಾಗೂ ಒಂದೊಂದು ಘಟನೆಯನ್ನೂ ಹೇಗೆ ರಸಪಾನ ಮಾಡಿ ತಮ್ಮ ಸ್ಮೃತಿಭಂಡಾರದಲ್ಲಿ ಕೂಡಿಸಿಕೊಳ್ಳುತ್ತಿದ್ದರು—ಆದರೆ ಭಗವಂತನ ಇಚ್ಛೆಯೇ ಬೇರೆ. ಇಂದು ಅವರು ಕಲ್ಕತ್ತೆಯಲ್ಲಿ ರುಗ್ಣಶಯ್ಯೆಯಲ್ಲಿ ಮಲಗಿದಾರೆ.—ಸರಿಯಾಗಿ ಮಾತನಾಡುವುದಕ್ಕೂ ಆಗುವುದಿಲ್ಲ. ಭಗವಂತ ಬೇಗನೇ ಅವರನ್ನು ನಮಗೆ ವಾಪಸು ಕೊಡಲಿ ; ಎಂಥ ಸ್ಥಿತಿಯಲ್ಲಿ ಅವರಿಗೆ ಆತ್ಮ-ಶಾಂತಿ ನೀಡಲಿ-ಎಂಬ ನನ್ನ ಪ್ರಾರ್ಥನೆಯಲ್ಲಿ ಎಲ್ಲರೂ ಭಾಗಿಗಳಾಗಬೇಕೆಂಬುದೇ ನನ್ನ ಆಪೇಕ್ಷೆ.೧೭೭

•

ಚಾರ್ಲಿ ಆಂಡ್ರೂಸರ ಪರಿಚಯ ನನಗೆ ಇದ್ದಷ್ಟು ಬಹುಶಃ ಬೇರೆ ಯಾರಿಗೂ ಇರಲಿಲ್ಲ. ಗುರುದೇವರು ಅವರ ಪಾಲಿಗೆ ಗುರು ಸಮಾನರೆ. ನಾವು ದಕ್ಷಿಣ ಆಫ್ರಿಕಾದಲ್ಲಿ ಒಬ್ಬರನ್ನೊಬ್ಬರು ಸಂಧಿಸಿದಾಗ ಸಹೋದರರಂತೆಯೇ ಸಂಧಿಸಿದೆವು. ಆ ಸಂಬಂಧ ಕೊನೆಯವರೆಗೆ ನಡೆದುಬಂತು. ನಮ್ಮಿಬ್ಬರಲ್ಲಿ ಭೇದವೆಂಬುದೇ ಇರಲಿಲ್ಲ. ನಮ್ಮ ಒಬ್ಬ ಭಾರತೀಯ ಹಾಗೂ ಒಬ್ಬ ಆಂಗ್ಲೇಯನ ನಡುವಣ ಸಖ್ಯ–ಸಂಬಂಧವಾಗಿರದೆ, ಇಬ್ಬರು ಸತ್ಯಶೋಧಕರ, ಸತ್ಯ ಸೇವಕರ ನಡುವಣ ಅವಿಚ್ಛಿನ್ನ ಪ್ರೇಮ-ಬಂಧನವಾಗಿತ್ತು. ಆದರೆ, ಆಂಡ್ರೂಸರ ಪವಿತ್ರ ಸಂಸ್ಮರಣೆಗಳನ್ನು ಇಲ್ಲಿ ಬರೆಯುತ್ತಿಲ್ಲ.

ಆಂಡ್ರೂಸರ ಸ್ಮೃತಿ ಇನ್ನೂ ಹೊಸತಾಗಿರುವ ಈ ಸಮಯದಲ್ಲಿ,

ಅವರು ಬಿಟ್ಟು ಹೋಗಿರುವ ಪವಿತ್ರ ಕುಲಧನದತ್ತ ಭಾರತೀಯರ ಹಾಗೂ ಆಂಗ್ಲೇಯರ ಗಮನವನ್ನು ಸೆಳೆಯುತ್ತೇನೆ. ಇಂಗ್ಲೆಂಡಿನ ಬಗೆಗೆ ಅವರಿಗಿದ್ದ ಪ್ರೇಮ ಯಾವನೇ ಆಂಗ್ಲೇಯ ದೇಶಭಕ್ತನ ಪ್ರೇಮಕ್ಕೆ ಕಡಿಮೆಯಾದುದಲ್ಲ. ಹಾಗೆಯೇ ಭಾರತದ ಬಗೆಗೆ ಅವರಿಗಿದ್ದ ಪ್ರೇಮ ಯಾವನೇ ಭಾರತೀಯ ದೇಶಭಕ್ತನ ಪ್ರೇಮಕ್ಕೆ ಕಡಿಮೆಯಾದುದಲ್ಲ. ತಾವು ಸದಾ ಕಾಲಕ್ಕೂ ನಿದ್ರಿಸಿದ ರುಗ್ಣಶಯ್ಯೆಯ ಮೇಲಿಂದ ಈ ಮಾತು ಹೇಳಿದ್ದರು– "ಮೋಹನ್, ಸ್ವರಾಜ್ಯ ಬರುತ್ತಿದೆ" ಕಾಂಗ್ರೆಸ್ಸಿಗರೂ ಭಾರತೀಯರೂ ಒಟ್ಟುಗೂಡಿದಲ್ಲಿ ಅದು ಬಂದೇ ಬರುವುದು. ಈಗಿನ ಶಾಸಕರಿಗೂ, ಯಾರ ಅಭಿಪ್ರಾಯ ತೂಕವಾದುದೆಂದು ಭಾವಿಸಲ್ಪಡುವುದೋ ಅಂಥ ಆಂಗ್ಲೇಯರಿಗೂ ಆಂಡ್ರೂಸರು ಹೊಸಬರಲ್ಲ. ಹಾಗೆಯೇ ರಾಜನೀತಿಯಲ್ಲಿ ಆಸಕ್ತಿವಹಿಸುವ ಯಾವನೇ ಭಾರತೀಯನಿಗೂ ಅವರ ಪರಿಚಯ ಇಲ್ಲದಿಲ್ಲ. ಈ ಸಂಬಂಧದಲ್ಲಿ ಆಂಗ್ಲೇಯರು ಮಾಡಿರುವ ಅಕೃತ್ಯಗಳನ್ನು ನಾನು ನೆನಪು ಮಾಡಿಕೊಡಲು ಬಯಸುವುದಿಲ್ಲ. ಅವುಗಳನ್ನು ನಾವು ಮರೆಯಬಹುದು. ಆದರೆ, ಆಂಡ್ರೂಸರು ಮಾಡಿದ ಸಾಹಸಪೂರ್ಣವಾದ ಪ್ರಯತ್ನಗಳನ್ನು ಇಂಗ್ಲೆಂಡ್ ಹಾಗೂ ಭಾರತಗಳು ಬದುಕಿರುವವರೆಗೆ ಮರೆಯಲಾಗುವುದಿಲ್ಲ. ನಾವು ಆಂಡ್ರೂಸರನ್ನು ಪ್ರೀತಿಸುವುದಾದರೆ, ಆಂಗ್ಲೇಯರ ಬಗೆಗೆ–ಆಂಡ್ರೂಸರೂ ಮಹಾನ್ ಹಾಗೂ ಪವಿತ್ರರಾದ ಆಂಗ್ಲೇಯರೇ—ನಮ್ಮ ಹೃದಯದಲ್ಲಿ ತಿರಸ್ಕಾರ ಭಾವ ಇರಲೇಬಾರದು. ಒಳ್ಳೆಯ ಆಂಗ್ಲೇಯರೂ, ಒಳ್ಳೆಯ ಭಾರತೀಯರೂ ಒಂದುಗೂಡಿ, ಇಬ್ಬರಿಗೂ ತೃಪ್ತಿಕರವಾದ ಒಂದು ಮಾರ್ಗ ತೋರಿಬರುವವರೆಗೆ ಬೇರೆ ಆಗಲೇಬಾರದು. ಆಂಡ್ರೂಸರು ಬಿಟ್ಟು ಹೋಗಿರುವ ಕಾರ್ಯ ಪೂರ್ಣಗೊಳಿಸಲು ಯೋಗ್ಯವಾದುವು. ಆಂಡ್ರೂಸರ ದಯಾಪೂರ್ಣವಾದ ಮುಖವನ್ನೂ, ಅವರ ಅಗಣಿತ ಪ್ರೇಮಪೂರ್ಣ ಪ್ರಯತ್ನಗಳನ್ನೂ ನೆನಪು ಮಾಡಿಕೊಂಡಾಗ, ಪ್ರಪಂಚದ ರಾಷ್ಟ್ರಗಳ ನಡುವೆ ಭಾರತಕ್ಕೆ ಸ್ವತಂತ್ರ ಸ್ಥಾನ ಕೊಡಿಸಲು ಅವರು ಮಾಡಿದ ಕೆಲಸದ ವಿಚಾರವೇ ಮನಸ್ಸಿನಲ್ಲಿ ತುಂಬಿಬರುತ್ತದೆ.೧೭೮

ಸಿ. ಎಫ್. ಆಂಡ್ರೂಸರ ನಿಧನದಿಂದ ಭಾರತಮಾತ್ರವಲ್ಲ, ಇಡೀ

ಮಾನವ ಕುಲವೇ ತನ್ನ ನಿಜವಾದ ಸಂತಾನವನ್ನು, ಸೇವಕನನ್ನು ಕಳೆದು ಕೊಂಡಂತಾಗಿದೆ. ಆದರೂ ಅವರ ಮೃತ್ಯುವನ್ನು ಪೀಡೆಯಿಂದ ಮುಕ್ತಿ ಹಾಗೂ ಯಾವ ಕಾರ್ಯ ದೀಕ್ಷೆಯನ್ನು ಹೊತ್ತು ಅವರು ಈ ಪ್ರಪಂಚಕ್ಕೆ ಬಂದಿದ್ದರೋ ಅದರ ಸಿದ್ಧಿ, ಎಂಬುದಾಗಿ ಕರೆಯಬಹುದು. ಅವರ ಕೃತಿಗಳನ್ನು ಓದಿ, ಅಥವಾ ಅವರ ವೈಯಕ್ತಿಕ ಸಂಪರ್ಕ ಬೆಳೆಸಿ ಸ್ವಲ್ಪವಾದರೂ ಲಾಭ ಪಡೆದಿರುವ ಸಹಸ್ರಾರು ಮಂದಿಯ ಹೃದಯದಲ್ಲಿ ಅವರು ಜೀವಿತರಾಗಿಯೇ ಇರುವರು. ನನ್ನ ಅಭಿಪ್ರಾಯದಲ್ಲಿ ಚಾರ್ಲಿ ಆಂಡ್ರೂಸರು ಮಹಾನ್ ಹಾಗೂ ಸರ್ವೋತ್ತಮ ಆಂಗ್ಲೇಯರಲ್ಲಿ ಒಬ್ಬರು; ಅವರು ಇಂಗ್ಲೆಂಡಿನ ಉತ್ತಮ ಸಂತಾನವಾಗಿದ್ದುದರಿಂದ ಭಾರತದ ಉತ್ತಮ ಸಂತಾನವೂ ಆದರು. ಅವರು ಇಲ್ಲಿ ಮಾಡಿದುದೆಲ್ಲವೂ ಮಾನವತೆಯ ಸಲುವಾಗಿ; ಯೇಸುಕ್ರಿಸ್ತನ ಸಲುವಾಗಿ. ಈವರೆಗೆ ನಾನು ಸಿ. ಎಫ್. ಆಂಡ್ರೂಸರಿಗಿಂತ ಉತ್ತಮವಾದ ವ್ಯಕ್ತಿಯನ್ನು ಅಥವಾ ಕ್ರೈಸ್ತನನ್ನು ಕಂಡಿಲ್ಲ. ಭಾರತ ಅವರಿಗೆ 'ದೀನಬಂಧು' ಎಂಬ ಬಿರುದು ಕೊಟ್ಟಿದೆ; ದೀನ-ದಲಿತರ ನಿಜವಾದ ಮಿತ್ರರಾದುದರಿಂದ ಆ ಬಿರುದಿಗೆ ಅವರು ಎಲ್ಲ ರೀತಿಯಿಂದ ಪೂರ್ಣ ಪಾತ್ರರು; ಅಧಿಕಾರಿಗಳು.೧೭೯

ಯಾವಾಗಲೂ ಆಗುವಂತೆ ಈ ಸ್ಮಾರಕಕ್ಕೆ ತನ್ನಿಂದ ತಾನೆ ಚಂದಾ ಬರುವುದಿಲ್ಲ. ಅದಕ್ಕೆ ಸಂಘಟನೆ ಆವಶ್ಯಕ. ದೀನಬಂಧುಗಳ ಬಹು ಸಂಖ್ಯೆಯ ಭಕ್ತರು ಈ ಕಾರ್ಯವನ್ನು ಸ್ವತಃ ವಹಿಸಿಕೊಳ್ಳುವುದು ಸರ್ವಾಪೇಕ್ಷಣೀಯ. ಆಗ್ರಾದಲ್ಲಿ ಈ ಕೆಲಸವನ್ನು ಅಲ್ಲಿಯ ವಿದ್ಯಾರ್ಥಿಗಳು ಮಾಡಲಿರುವರೆಂಬುದನ್ನು ತಿಳಿಸಲು ಆನಂದವಾಗುತ್ತದೆ. ಇದಕ್ಕಿಂತ ಚೆಂದವಾದುದು ಇನ್ನಾವುದು? ಅವರು ಈ ಸಂಗ್ರಹಕ್ಕಾಗಿ–ಇಷ್ಟಕ್ಕೂ ನಿಧಿ ಬಹಳ ಸಣ್ಣದು–ಎಲ್ಲೆಡೆಯಲ್ಲೂ ಸಂಘಟನೆ ಮಾಡಬೇಕು. ಚಾರ್ಲಿ ಆಂಡ್ರೂಸರು ಉತ್ತಮ ಶ್ರೇಣಿಯ ಶಿಕ್ಷಾ-ಶಾಸ್ತ್ರಿಗಳಾಗಿದ್ದರು. ಶಿಕ್ಷಾ–ಶಾಸ್ತ್ರಿಗಳ ರೂಪದಲ್ಲೇ ಅವರು ತಮ್ಮ ಮಿತ್ರರೂ, ಪ್ರಧಾನ ಆಚಾರ್ಯರೂ ಆದ ರುದ್ರರಿಗೆ ಸಹಾಯ ಮಾಡುತ್ತಿದ್ದರು. ತಮ್ಮ ಅಂತಿಮಗೃಹದ ರೂಪದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಶಿಕ್ಷಣ ಸಂಸ್ಥೆಯೊಂದನ್ನು ಆಯ್ಕೆ ಮಾಡಿಕೊಂಡಿದ್ದರು. ಅದರ

ನಿರ್ಮಾಣಕ್ಕಾಗಿ ತಮ್ಮ ಜೀವನವನ್ನು ಸಮರ್ಪಣೆ ಮಾಡಿದರು. ಆಂಡ್ರೂಸರ ಘನಿಷ್ಠ ಸಂಪರ್ಕದ ವಿಚಾರ ಬಿಟ್ಟರೂ ಶಾಂತಿ ನಿಕೇತನವೇ ವಿದ್ಯಾರ್ಥಿ ಪ್ರಪಂಚದ ಭಕ್ತಿಯನ್ನು ಗಳಿಸಲು ಯೋಗ್ಯವಾಗಿದೆ. ಆದಕಾರಣ, ಹಿಂದೂಸ್ತಾನದ ವಿದ್ಯಾರ್ಥಿಗಳು ಚಂದಾ ಕೂಡಿಸುವ ಕಾರ್ಯದಲ್ಲಿ ಅಗ್ರಭಾಗವಹಿಸುವರೆಂದು ಆಶಿಸುವೆ. ಆಮೇಲೆ, ಆಂಡ್ರೂಸರ ಸೇವೆಯಿಂದ ವಿಶೇಷ ರೂಪದಲ್ಲಿ ಲಾಭ ಪಡೆದಿರುವ ದೀನ ಜನರ ಸರದಿ. ಈ ಐದು ಲಕ್ಷ ರೂಪಾಯಿ ದೀನಬಂಧುಗಳ ನಿಕಟ ಸಂಪರ್ಕ ಹೊಂದಿದ್ದು ಅವರ ಮಹತ್ವವನ್ನು ಒಳಿತಾಗಿ ಅರಿತ್ತಿದ್ದ ಅವರ ಹಲವು ವಿಶಿಷ್ಟ ಶ್ರೀಮಂತ ಮಿತ್ರರ ದಾನದಿಂದ ಭರ್ತಿಯಾಗುವುದಕ್ಕಿಂತ ಸಹಸ್ರಾರು ಮಂದಿ ವಿದ್ಯಾರ್ಥಿಗಳ ಹಾಗೂ ದೀನ ಜನರ ಕಾಣಿಕೆಗಳಿಂದಲೇ ಸಂಗ್ರಹವಾದರೆ, ಅದು ಬಹಳ ಮಹತ್ವಪೂರ್ಣವೆನಿಸುವುದು; ಉಚಿತವೆನಿಸುವುದು.೧೮೦

ಇಂದು ಆಂಡ್ರೂಸರ ಏಳನೆಯ ಪುಣ್ಯತಿಥಿ. ಅವರ ಗುಣಗಳನ್ನು ನಾವು ಸ್ಮರಿಸಿಕೊಳ್ಳಬೇಕು. ಅವರ ಜೀವನ ಬಹಳ ಸರಳವಾಗಿತ್ತು. ನಾವಿಬ್ಬರೂ ಆತ್ಮೀಯ ಮಿತ್ರರಾಗಿದ್ದೆವು. ಅವರು ಬಿಳಿಯ ತೊಗಲಿನವರೇನೋ ನಿಜ; ಆದರೆ, ಅವರ ಸರಳ ಜೀವನವನ್ನು ಹಳ್ಳಿಗರೊಡನೆ ತಾದಾತ್ಮ್ಯರಾಗುತ್ತಿದ್ದ ರೀತಿಯನ್ನೂ ನೋಡಿದರೆ, ಅವರನ್ನು ಆಂಗ್ಲೇಯರೆಂದು ಗುರುತಿಸುವುದಕ್ಕೆ ಕಷ್ಟವಾಗುತ್ತಿತ್ತು. ಬಟ್ಟೆ ಉಡುವುದರಲ್ಲೂ ಅವರಿಗೆ ಆಸಕ್ತಿ ಇರಲಿಲ್ಲ. ದಪ್ಪವಾದ ಶರೀರದ ಮೇಲೆ ದೊಗಲೆ ದೊಗಲೆಯಾದ ಧೋತ್ರ ಹೇಗೋ ಸುತ್ತಿಕೊಂಡು ಬಿಡುತ್ತಿದ್ದರು. ಹೊರಗಿನ ಆಡಂಬರ ಅವರಿಗೆ ಬೇಕಾಗಿರಲಿಲ್ಲ. ಅವರ ಹೃದಯ ಬಂಗಾರ.೧೮೧

ವಿನ್ಸ್ಟನ್ ಚರ್ಚಿಲ್

ನನ್ನ ಬಳಿ ಒಂದು ಉಚ್ಚವಸ್ತುವಿದೆ. ಅದೇ ಜನಮತ. ಜನಮತದಲ್ಲಿ ಪ್ರಪಂಡಶಕ್ತಿಯಿದೆ. ಇನ್ನೂ ನಮ್ಮಲ್ಲಿ ಈ ಶಬ್ದದ ಪ್ರಬಲ ಅರ್ಥ

ಪೂರ್ಣವಾಗಿ ಪ್ರಕಟವಾಗಿಲ್ಲ; ಇಂಗ್ಲೀಷಿನಲ್ಲಿ ಈ ಶಬ್ದದ ಅರ್ಥ ಬಹಳ ಸತ್ವಪೂರ್ಣವಾಗಿದೆ. ಇಂಗ್ಲೀಷಿನಲ್ಲಿ ಇದನ್ನು Public Opinion ('ಪಬ್ಲಿಕ್ ಒಪಿನಿಯನ್') ಎನ್ನುತ್ತಾರೆ. ಅದರ ಮುಂದೆ ಬಾದಶಹ ನದೂ ಏನೂ ನಡೆಯುವುದಿಲ್ಲ. ಚರ್ಚಿಲ್ ಬಹಳ ಧೈರ್ಯಶಾಲಿಗಳು, ಒಳ್ಳೆಯ ಮನೆತನದಲ್ಲಿ ಹುಟ್ಟಿದವರು, ಪ್ರಚಂಡ ವಾಗ್ಮಿಗಳು, ಮಹಾ ವಿದ್ವಾಂಸರು–ನನ್ನಂತೆ ಅರಿವಿಲ್ಲದವರಲ್ಲವೇ ಅಲ್ಲ—ಇಷ್ಟೆಲ್ಲಾ ಆಗಿದ್ದರೂ ತಮ್ಮ ಅಧಿಕಾರ ಪೀಠವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಿಯ ಜನಮತ ಬಹಳ ಜಾಗೃತವಾಗಿದೆಯೆಂದೇ ಅದರ ಅರ್ಥ. ಅಂತಲೆ, ಅದರ (ಜನಮತ) ಮುಂದೆ ಯಾರದೂ ಏನೂ ನಡೆಯುವುದಿಲ್ಲ.೧೮೨

ಇಂದಿನ ಪ್ರಾತಃಕಾಲದ ಪತ್ರಿಕೆಗಳಲ್ಲಿ ಪ್ರಕಟವಾಗಿರುವ (ರಾಯಿಟರ್ ಮೂಲಕ ಬಂದಿರುವ ತಂತಿ ಸುದ್ದಿ) ಚರ್ಚಿಲರ ಭಾಷಣದ ಸಾರವನ್ನು ಹಿಂದೂಸ್ಥಾನಿಯಲ್ಲಿ ತಿಳಿಸುವೆನು, ಅದರ ಸಾರ ಹೀಗಿದೆ :—

"ಇಂದು ರಾತ್ರಿ ಇಲ್ಲಿ ತಾವು ಮಾಡಿದ ಭಾಷಣವೊಂದರಲ್ಲಿ ಚರ್ಚಿಲ್ ಹೀಗೆಂದರು—ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ಭಯಂಕರ ವಿನಾಶಕೃತ್ಯದ ಬಗೆಗೆ ನನಗೆ ಆಶ್ಚರ್ಯವೇನೂ ಆಗುತ್ತಿಲ್ಲ. ಇದು ಇನ್ನೂ ಕ್ರೂರ ಹತ್ಯೆ ಹಾಗೂ ಭಯಂಕರ ಅತ್ಯಾಚಾರದ ಆರಂಭವಷ್ಟೆ. ಈ ರಾಕ್ಷಸೀ ಕೃತ್ಯವನ್ನು, ಭಯಂಕರ ಅತ್ಯಾಚಾರವನ್ನು ಅತ್ಯುಚ್ಚ ಸಂಸ್ಕೃತಿ ಹಾಗೂ ಸಭ್ಯತೆಗೆ ಜನ್ಮಕೊಡುವ ಶಕ್ತಿಯನ್ನು ಹೊಂದಿರುವ ಬ್ರಿಟಿಷ್ ಸಿಂಹಾಸನ ಹಾಗೂ ಬ್ರಿಟಿಷ್ ಪಾರ್ಲಿಮೆಂಟಿನ ಜವಾಬ್ದಾರಿಯುತವೂ, ಪಕ್ಷಪಾತರಹಿತವೂ ಆದ ಆಡಳಿತದಲ್ಲಿ ತಲೆತಲಾಂತರದಿಂದ ಶಾಂತಿ ಪೂರ್ವಕವಾಗಿ ಸಹ ಬಾಳುವೆ ನಡೆಸಿಕೊಂಡು ಬಂದಿರುವ ಜಾತಿಗಳವರೇ ನಡೆಸುತ್ತಲಿದಾರೆ. ಕಳೆದ ಅರವತ್ತು ವರುಷಗಳಿಂದ ಬಹಳ ಶಾಂತಿಯಿಂದ ಬಾಳುವೆ ಸಾಗಿಸಿಕೊಂಡು ಬಂದಿರುವ ಜನ-ಸಮೂಹದ ಸಂಖ್ಯೆ ಮುಂದೆ ಎಲ್ಲ ಭಾಗಗಳಲ್ಲಿ ಕಡಿಮೆಯಾಗುವುದೆಂದು ನನಗೆ ದುಃಖವಾಗುತ್ತದೆ. ಹಾಗೆ ಆಗುವುದರೊಡನೆಯೇ ಆ ವಿಶಾಲ ದೇಶದಲ್ಲಿ ಆಗುವ ಸಭ್ಯತೆಯ ಪತನ ಏಷ್ಯಾದ ಪಾಲಿಗೆ ವಿಶೇಷ ನಿರಾಶಾದಾಯಕವೂ, ದುಃಖಕರವೂ ಆದ

ವಿಷಯವಾಗುವುದು.

ಶ್ರೀ ಚರ್ಚಿಲರು ದೊಡ್ಡ ಮನುಷ್ಯರು ಎಂಬುದು ಎಲ್ಲರಿಗೂ ಗೊತ್ತು. ಇಂಗ್ಲೆಂಡಿನ ಉಚ್ಚಕುಲದಲ್ಲಿ ಹುಟ್ಟಿದವರು, ಅವರು. ಮಾರ್‍್ಲಬರೋ ಪರಿವಾರ ಇಂಗ್ಲೆಂಡಿನ ಇತಿಹಾಸದಲ್ಲಿ ಪ್ರಸಿದ್ಧವಾದದು. ಎರಡನೆಯ ಮಹಾಯುದ್ಧ ಆರಂಭವಾದಮೇಲೆ ಗ್ರೇಟ್ ಬ್ರಿಟನ್ ಅಪಾಯಕ್ಕೆ ಗುರಿಯಾದಾಗ ಶ್ರೀ ಚರ್ಚಿಲರು ಅದರ ಆಡಳಿತ ಸೂತ್ರವನ್ನು ಸಂಭಾಳಿಸಿದರು. ನಿಸ್ಸಂಶಯವಾಗಿ ಆಗ ಅವರು ಬ್ರಿಟಿಷ್ ಸಾಮ್ರಾಜ್ಯವನ್ನು ಅಪಾಯದಿಂದ ಪಾರುಮಾಡಿದರು. ಅಮೆರಿಕ ಅಥವಾ ಬೇರೆ ಮಿತ್ರ-ರಾಷ್ಟ್ರಗಳ ನೆರವಿಲ್ಲದೆ, ಗ್ರೇಟ್ ಬ್ರಿಟನ್ ಯುದ್ಧದಲ್ಲಿ ಗೆಲ್ಲುತ್ತಿರಲಿಲ್ಲವೆಂಬ ವಾದ ಸರಿಯಲ್ಲ; ಶ್ರೀ ಚರ್ಚಿಲರ ತೀಕ್ಷ್ಣ ರಾಜತಾಂತ್ರಿಕ ಬುದ್ಧಿಯ ಹೊರತು, ಮಿತ್ರರಾಷ್ಟ್ರಗಳನ್ನು ಒಂದುಗೂಡಿಸುವುದು ಯಾರಿಂದ ಸಾಧ್ಯವಾಗುತ್ತಿತ್ತು? ಶ್ರೀ ಚರ್ಚಿಲರು ಯುದ್ಧ ಕಾಲದಲ್ಲ ಯಾವ ಮಹಾನ್ ರಾಷ್ಟ್ರವನ್ನು ಅಷ್ಟೊಂದು ಪ್ರಭಾವಶಾಲಿಯಾಗಿ ಪ್ರತಿನಿಧಿಸಿದರೋ ಆ ರಾಷ್ಟ್ರ ಅವರ ಸೇವೆಯನ್ನು ಗೌರವಿಸಿತು. ಆದರೆ ಯುದ್ಧದಲ್ಲಿ ಗೆದ್ದಮೇಲೆ, ಯುದ್ಧದ ದೆಸೆಯಿಂದ ವಿಶೇಷ ಧನ-ಜನ ಹಾನಿಯನ್ನು ಅನುಭವಿಸಿದ ಬ್ರಿಟಿಷ್ ದ್ವೀಪಗಳಿಗೆ ನವಚೇತನವನ್ನು ನೀಡುವ ಸಲುವಾಗಿ ಚರ್ಚಿಲ್ ಸರಕಾರದ ಸ್ಥಾನದಲ್ಲಿ ಕೂಲಿಗಾರ ಸರಕಾರವನ್ನು ಅಧಿಕಾರಕ್ಕೆ-ಏರಿಸಲು ಹಿಂದೆ ಮುಂದೆ ನೋಡಲಿಲ್ಲ. ಇಂಗ್ಲಿಷರು ಕಾಲಗತಿಯನ್ನರಿತು ಸ್ವಇಚ್ಛೆಯಿಂದಲೇ ಸಾಮ್ರಾಜ್ಯವನ್ನು ಒಡೆದು, ಅದರ ಸ್ಥಾನದಲ್ಲಿ, ಹೊರ ನೋಟಕ್ಕೆ ಕಾಣದ, ಆದರೆ ಹೆಚ್ಚು ಮಹತ್ವಪೂರ್ಣವಾದ ಹೃದಯ-ಸಾಮ್ರಾಜ್ಯವನ್ನು ಸ್ಥಾಪಿಸಲು ನಿಶ್ಚಯಿಸಿದರು. ಹಿಂದೂಸ್ಥಾನ ಎರಡು ತುಂಡಾಗಿ ಒಡೆದುಹೋಗಿದೆಯಾದರೂ, ಎರಡೂ ಭಾಗಗಳು ಸ್ವಇಚ್ಛೆಯಿಂದಲೇ ಬ್ರಿಟಿಷ್ ಸಮುದಾಯ ಬಂಧ (Common Wealth) ದ ಸದಸ್ಯ-ರಾಷ್ಟ್ರಗಳಾಗಿ ಇರುವುದಾಗಿ ಘೋಷಿಸಿವೆ. ಹಿಂದೂಸ್ಥಾನವನ್ನು ಸ್ವತಂತ್ರಗೊಳಿಸುವ ಗೌರವಪೂರ್ಣವಾದ ಹೆಜ್ಜೆಯನ್ನು ಬಿಟ್ರಿಷ್ ರಾಜ್ಯದ ಎಲ್ಲ ಪಕ್ಷಗಳೂ ಕೂಡಿ ಇಟ್ಟವು. ಆ ಕಾರ್ಯದಲ್ಲಿ ಶ್ರೀ ಚರ್ಚಿಲ್ ಹಾಗೂ ಅವರ ಪಕ್ಷದವರೂ ಸೇರಿದ್ದರು. ಇಂಗ್ಲಿಷರು ಕೈಗೊಂಡ ಈ ಕ್ರಮವನ್ನು ಭವಿಷ್ಯ ಸರಿಯೆಂದು ಸಿದ್ಧಪಡಿಸು

ವುದೋ ಇಲ್ಲವೋ ಎಂಬ ಮಾತು ಬೇರೆ. ಅಧಿಕಾರ ವರ್ಗಾವಣೆಯ ಕಾರ್ಯ ದಲ್ಲಿ ಶ್ರೀ ಚರ್ಚಿಲರೂ ಭಾಗಿಗಳಾಗಿರುವುದರಿಂಧ ಆ ಕಾರ್ಯದ ಬೆಲೆ ಕಡಿಮೆ ಯಾಗುವಂಥ ಯಾವ ಮಾತನ್ನೂ ಅವರು ಆಡುವುದಿಲ್ಲವೆಂದೂ, ಯಾವ ಕಾರ್ಯವನ್ನೂ ಮಾಡುವುದಿಲ್ಲವೆಂದೂ ನಿರೀಕ್ಷಿಸಬಹುದಾಗಿದೆ. ಇಂಗ್ಲಿಷರು ಅಧಿಕಾರ ತೊರೆದುದು ಆಧುನಿಕ ಇತಿಹಾಸದಲ್ಲಿ ಅನುಪಮ ಘಟನೆ. ನನಗೆ ಪ್ರಿಯದರ್ಶಿ ಅಶೋಕನ ತ್ಯಾಗದ ನೆನಪಾಗುತ್ತದೆ. ಆದರೆ, ಅಶೋಕ ಅಸದೃಶ ವ್ಯಕ್ತಿ ; ಅಲ್ಲದೆ ಆತ ಆಧುನಿಕ ಇತಿಹಾಸದ ವ್ಯಕ್ತಿಯೂ ಅಲ್ಲ. ಆದಕಾರಣ ರಾಯಿಟರ್ ಮೂಲಕ ಪ್ರಕಟಿಸಲ್ಪಟ್ಟ ಶ್ರೀ ಚರ್ಚಿಲರ ಭಾಷ ಣದ ಸಾರವನ್ನು ಓದಿದಾಗ ನನಗೆ ದುಃಖವಾಯಿತು. ಪ್ರಸಿದ್ಧವಾದ ಈ ವಾರ್ತಾಸಂಸ್ಥೆ ಶ್ರೀ ಚರ್ಚಿಲರ ಭಾಷಣವನ್ನು ತಪ್ಪಾಗಿ ವರದಿಮಾಡಿರಲಾರ ದೆಂದು ನನ್ನ ನಂಬಿಕೆ. ತಮ್ಮ ಈ ಭಾಷಣದಿಂದ ತಾವು ಯಾವ ದೇಶದ ದೊಡ್ಡ ಸೇವಕರೋ ಅದಕ್ಕೆ ಶ್ರೀ ಚರ್ಚಿಲರು ಹಾನಿಯನ್ನೇ ಉಂಟುಮಾಡಿ ದಾರೆ. ಆಂಗ್ಲೇಯ ಶಾಸನದ ನೊಗದಿಂದ ಬಿಡುಗಡೆಯಾದ ಮೇಲೆ ಹಿಂದೂಸ್ಥಾನಕ್ಕೆ ಇಂಥ ದುರ್ಗತಿ ಬರುವುದೆಂಬುದು ಅವರಿಗೆ ತಿಳಿದಿದ್ದಲ್ಲಿ, ಇದರ ದೋಷವೆಲ್ಲವೂ ಸಾಮ್ರಾಜ್ಯ ನಿರ್ಮಾಪಕರ ತಲೆಗೇ ಅಂಟಿದುದು. ಅತ್ಯುಚ್ಚ ಸಂಸ್ಕೃತಿಗೆ ಜನ್ಮನೀಡಬಲ್ಲ ಶಕ್ತಿಯುಳ್ಳ (ಚರ್ಚಿಲ ಸಾಹೇಬರದೇ ಮಾತು) ಜಾತಿಗಳವರ ತಲೆಗಲ್ಲ—ಎಂಬ ಮಾತನ್ನು ಕುರಿತು ಒಂದು ನಿಮಿಷ ವಾದರೂ ಅವರು ವಿಚಾರ ಮಾಡಿದಾರೆಯೆ? ನನ್ನ ಅಭಿಪ್ರಾಯದಲ್ಲಿ ಶ್ರೀ ಚರ್ಚಿಲರು ತಮ್ಮ ಭಾಷಣದಲ್ಲಿ ಇಡೀ ಭಾರತವನ್ನು ಒಂದೇ ಸಲಕ್ಕೆ ಅವುಚಿಬಿಡುವುದರಲ್ಲಿ ಮಿತಿಮಾರಿ ಆತುರಪಟ್ಟಿದಾರೆ. ಹಿಂದೂಸ್ಥಾನದಲ್ಲಿ ಕೋಟ್ಯಂತರ ಜನ ಇದಾರೆ. ಅವರಲ್ಲಿ ಹಲವು ಲಕ್ಷ ಮಂದಿ ಕಾಡುಜನ ರೆನಿಸಿಕೊಂಡಿದ್ದಾರು. ಅವರದೇನೂ ಲೆಕ್ಕವಿಲ್ಲ. ಶ್ರೀ ಚರ್ಚಿಲರು ಹಿಂದೂಸ್ತಾನಕ್ಕೆ ಬಂದು, ಇಲ್ಲಿಯ ಸ್ಥಿತಿಯನ್ನು ಸ್ವತಃ ಅಧ್ಯಯನಮಾಡ ಲೆಂದು ಧೈರ್ಯವಾಗಿ ಆಹ್ವಾನಿಸುತ್ತೇನೆ. ಆದರೆ, ಅವರು ಮೊದಲೇ ಯಾವುದೋ ಒಂದು ವಿಷಯದಲ್ಲಿ ನಿಶ್ಚಿತ ಅಭಿಪ್ರಾಯವನ್ನು ರೂಪಿಸಿ ಕೊಂಡಿರುವ ಒಂದು ಪಕ್ಷದ ಪ್ರತಿನಿಧಿಯಾಗಿ ಬರದೆ, ಪಕ್ಷಪಾತರಹಿತ ಆಂಗ್ಲೇಯರಾಗಿ, ಯಾವುದೇ ಒಂದು ಪಕ್ಷದ ಗೌರವಕ್ಕಿಂತ ದೇಶದ ಗೌರ

ವಕ್ಕೆ ಆದ್ಯತೆ ಕೊಡುವವರಾಗಿ, ಆಂಗ್ಲ ಸರಕಾರದ ಈ ಕಾರ್ಯಕ್ಕೆ ಭವ್ಯ ಯಶಸ್ಸನ್ನು ದೊರೆಕಿಸುವ ಉದ್ದೇಶವುಳ್ಳವರಾಗಿ ಬರಲಿ. ಗ್ರೇಟ್ ಬ್ರಿಟನ್ನಿನ ಈ ಅಮೋಘ ಕಾರ್ಯದ ಯೋಗ್ಯತಾನಿರ್ಣಯ ಅದರ ಪರಿಣಾಮದಿಂದಲೇ ಆದೀತು. ಹಿಂದೂಸ್ತಾನದ ವಿಭಜನೆಯಿಂದಾಗಿ ಅದಿಲ್ಲದೆಯೇ ಎರಡು ಭಾಗಗಳಿಗೆ ಪರಸ್ಪರ ಹೋರಾಟ ನಡೆಸಲು ಆಮಂತ್ರಣ ನೀಡಿದಂತೆಯೇ ಆಯಿತು. ಎರಡು ಭಾಗಗಳಿಗೆ ಬೇರೆ ಬೇರೆಯಾಗಿ ಸ್ವಾತಂತ್ರ್ಯ ಕೊಟ್ಟುದು, ಸ್ವಾತಂತ್ರ್ಯದಾನಕ್ಕೆ ಒಂದು ಕಳಂಕವೆನಿಸಿದೆ. ಎರಡರಲ್ಲಿ ಯಾವುದೇ ಉಪನಿವೇಶವಾದರೂ ಬ್ರಿಟಿಷ್ ಕಾಮನ್‌ವೆಲ್ತಿನಿಂದ ದೂರವಾಗಲು ಸ್ವತಂತ್ರವಾಗಿದೆ ಎಂಬುದಾಗಿ ಹೇಳುವುದರಿಂದ ಪ್ರಯೋಜನವಿಲ್ಲ. ಹೀಗೆ ಮಾಡುವುದಕ್ಕಿಂತ ಆಡುವುದು ಸುಲಭ. ಈ ಬಗೆಗೆ ಇನ್ನು ಹೆಚ್ಚಾಗಿ ಹೇಳಲು ನನಗೆ ಇಚ್ಛೆಯಿಲ್ಲ. ಶ್ರೀ ಚರ್ಚಿಲರು ಈ ವಿಷಯದಲ್ಲಿ ಹೆಚ್ಚು ಎಚ್ಚರಿಕೆಯಿಂದ ಮಾತನಾಡುವುದು ಆವಶ್ಯಕ ಎಂಬುದನ್ನು ತಿಳಿಸಲು ಇಷ್ಟು ಸಾಕು. ಪರಿಸ್ಥಿತಿಯನ್ನು ಸ್ವತಃ ಪರೀಕ್ಷಿಸುವ ಮೊದಲೇ ಅವರು ತಮ್ಮ ಸಂಗಾತಿಗಳ ಕಾರ್ಯವನ್ನು ನಿಂದಿಸಿದಾರೆ.

ನಿಮ್ಮಲ್ಲಿ ಬಹುಮಂದಿ ಶ್ರೀ ಚರ್ಚಿಲರಿಗೆ ಈ ಮಾತು ಆಡಲು ಅವಕಾಶ ಕಲ್ಪಿಸಿಕೊಟ್ಟದೀರಿ. ಈಗಲೂ ನಿಮ್ಮ ಮಾರ್ಗವನ್ನು ಸುಧಾರಿಸಿಕೊಂಡು, ಚರ್ಚಿಲರ ಭವಿಷ್ಯವಾಣಿಯನ್ನು ಸುಳ್ಳಾಗಿಸಲು ಸಾಕಷ್ಟು ಸಮಯವಿದೆ. ಇಂದು ನನ್ನ ಮಾತನ್ನು ಯಾರೂ ಕೇಳುವುದಿಲ್ಲವೆಂಬುದು ನನಗೆ ಗೊತ್ತು. ಸ್ವಾತಂತ್ರ್ಯದ ಮಾತುಕತೆ ಆರಂಭವಾಗುವುದಕ್ಕೆ ಮೊದಲು ನನ್ನ ಮಾತನ್ನು ಕೇಳುತ್ತಿದ್ದಂತೆಯೇ ಜನ ಈಗಲೂ ಕೇಳುವುದಾಗಿದ್ದರೆ ಬಹಳ ಆಸಕ್ತಿಯಿಂದ ಉತ್ಪ್ರೇಕ್ಷೆ ಮಾಡಿ ಬಣ್ಣಿಸಿರುವ ಅನಾಗರಿಕ ವರ್ತನೆಯ ಮಾತಿಗೆ ಅವಕಾಶವೇ ಇರುತ್ತಿರಲಿಲ್ಲ; ಆಗ ನೀವು ನಿಮ್ಮ ಆರ್ಥಿಕ ಹಾಗೂ ಇತರ ಗೃಹ-ಸಮಸ್ಯೆಗಳನ್ನು ಬಿಡಿಸಲು ಸರಿಯಾದ ಮಾರ್ಗವನ್ನು ಹಿಡಿಯುತ್ತಿದ್ದಿರಿ—ಎಂಬುದನ್ನು ನಾನು ಬಲ್ಲೆ.೧೮೩

ಕೌಂಟ್‌ಲಿಯೋ ಟಾಲ್‌ಸ್ಟಾಯ್

ಟಾಲ್‌ಸ್ಟಾಯ್ ಅವರ ಲೇಖನಗಳು ಬಹಳ ಸರಸವಾಗಿ, ಸರಳವಾಗಿ ಇರುತ್ತವೆ. ಅದನ್ನು ಯಾವ ಧರ್ಮಪ್ರೇಮಿಗಳಾದರೂ ಓದಿ, ಲಾಭ ಹೊಂದಬಹುದು. ಅವರ ಪುಸ್ತಕಗಳನ್ನು ಓದಿದರೆ, ಸಾಧಾರಣವಾಗಿ ನುಡಿದಂತೆಯೇ ನಡೆಯುತ್ತಿದ್ದಿರಬಹುದು—ಎಂಬ ವಿಶ್ವಾಸ ಮೂಡುತ್ತದೆ.೧೮೪

ಪ್ರಶ್ನೆ : ಕೌಂಟ್ ಟಾಲ್‌ಸ್ಟಾಯ್ ಅವರನ್ನು ನೀವು ಯಾವ ದೃಷ್ಟಿಯಿಂದ ನೋಡುತ್ತೀರಿ ?

ಉತ್ತರ: ನಾನು ಅವರನ್ನು ಅತ್ಯಂತ ಗೌರವದ ದೃಷ್ಟಿಯಿಂದ ನೋಡುತ್ತೇನೆ. ನನ್ನ ಜೀವನದ ಎಷ್ಟೋ ವಿಷಯಗಳ ಬಗೆಗೆ ನಾನು ಅವರಿಗೆ ಋಣಿ.೧೮೫

ನನ್ನ ಇಂದಿನ ಮಾನಸಿಕ ಸ್ಥಿತಿಯಲ್ಲಿ ನಾನು ಯಾವುದೇ ಪರ್ವ, ಪುಣ್ಯತಿಥಿ, ಅಥವಾ ಉತ್ಸವವನ್ನು ಆಚರಿಸಲು ಯೋಗ್ಯನಾಗಿಲ್ಲ. ಕೆಲವು ದಿನಗಳ ಹಿಂದೆ 'ನವಜೀವನ' ಅಥವಾ 'ಯಂಗ್ ಇಂಡಿಯಾ' ದ ಓದುಗರೊಬ್ಬರು ಹೀಗೊಂದು ಪ್ರಶ್ನೆ ಕೇಳಿದ್ದರು—"ನೀವು ಶ್ರಾದ್ಧದ ವಿಷಯದಲ್ಲಿ ಬರೆಯುತ್ತ, ಪೂರ್ವಿಕರ ಪುಣ್ಯತಿಥಿಯ ದಿನ ಅವರ ಗುಣ-ಸ್ಮರಣೆಮಾಡಿ, ಅವರನ್ನು ನಮ್ಮ ಜೀವನದಲ್ಲಿ ಹಾಸು-ಹೊಕ್ಕಾಗಿಸಿಕೊಳ್ಳುವುದೇ ನಿಜವಾದ ಶ್ರಾದ್ಧ" ಎಂಬುದಾಗಿ ಹೇಳಿದ್ದಿರಿ. ಅಂತಲೆ, ನಿಮ್ಮ ಹಿರಿಯರ ಶ್ರಾದ್ಧವನ್ನು ನೀವು ಯಾವ ರೀತಿಯಲ್ಲಿ ಮಾಡುವಿರಿ ಎಂಬುದಾಗಿ ಕೇಳುವೆನು". ಹಿರಿಯರ ಪುಣ್ಯ ತಿಥಿಯನ್ನು ನಾನು ತರುಣನಾಗಿದ್ದಾಗ ಆಚರಿಸುತ್ತಿದ್ದೆ. ಆದರೆ, ಈಗ ನನಗೆ ನನ್ನ ಪೂಜ್ಯ ತಂದೆಯವರ ಶ್ರಾದ್ಧ ತಿಥಿಯ ನೆನಪೂ ಸಹ ಉಳಿದಿಲ್ಲವೆಂದು ಹೇಳಲು ನನಗೇನೂ ಸಂಕೋಚವಿಲ್ಲ. ಅನೇಕ ವರುಷಗಳು ಉರುಳಿದವು. ಒಂದೇ ಒಂದು ಶ್ರಾದ್ಧ ತಿಥಿಯನ್ನು ಆಚರಿಸಿದ ನೆನಪು ನನಗಿಲ್ಲ. ಕಡೆಗೆ ನನ್ನ ಕಠಿಣ ಸ್ಥಿತಿ ಅಥವಾ ಚೆಂದವಾದ ಸ್ಥಿತಿ

ಎನ್ನಿ—ಅಥವಾ ಮಿತ್ರರೊಬ್ಬರು ಹೇಳಿದಂತೆ ಮೋಹದ ಸ್ಥಿತಿ ಎಂದಾದರೂ ಹೇಳಿ-ಯಾವ ಕೆಲಸವನ್ನು ತಲೆಗೆ ಹಚ್ಚಿಕೊಳ್ಳುವೆನೋ ಅದರಲ್ಲಿಯೇ ತೊಡಗಿ, ಅದರ ಚಿಂತನವನ್ನೇ ಮಾಡುತ್ತ, ಅದನ್ನು ಸಾಧ್ಯವಾದಷ್ಟು ಸುವ್ಯವಸ್ಥಿತ ರೀತಿಯಲ್ಲಿ ಮಾಡುವುದರಲ್ಲೇ ಎಲ್ಲವೂ ಸೇರಿಹೋಗುತ್ತದೆ. ಎಂಬ ಅಭಿಪ್ರಾಯ ನನ್ನಲ್ಲಿ ಮೂಡಿದೆ. ಹಿರಿಯರ ಶ್ರಾದ್ಧ ತಿಥಿಯ ಆಚರಣೆಯೂ ಅದರಲ್ಲಿಯೇ ಬಂದುಬಿಡುತ್ತದೆ. ಟಾಲ್‌ಸ್ಟಾಯ್ ಅಂಥವರ ಉತ್ಸವವೂ ಬಂದು ಬಿಡುತ್ತದೆ.......ಮೂರು ತಿಂಗಳ ಕೆಳಗೆ ಟಾಲ್‌ಸ್ಟಾಯ್ ಅವರ ಸಾಹಿತ್ಯವನ್ನು ಸಂಗ್ರಹಿಸುತ್ತಿರುವ ಐಲ್ಮರ್‌ಮಾಡ್ ಹಾಗೂ ಇತರ ಸ್ನೇಹಿತರ ಪತ್ರಗಳು ಬಂದಿದ್ದವು: ಟಾಲ್‌ಸ್ಟಾಯ್ ಅವರ ಶತಾಬ್ದಿಯ ಸಂದರ್ಭಕ್ಕೆ ನಾನು ಏನಾದರೂ ಬರೆದು ಕಳುಹಿಸಬೇಕೆಂದೂ, ಭಾರತಕ್ಕೆ ಆ ದಿನದ ನೆನಪು ಮಾಡಿಕೊಡಬೇಕೆಂದೂ ಅವರು ಕೇಳಿದ್ದರು. ಐಲ್ಮರ್‌ಮಾಡ್‌ರ ಇಡೀ ಪತ್ರ ಅಥವಾ ಅದರ ಸಾರಾಂಶವನ್ನು ನೀವು ನನ್ನ ಪತ್ರಿಕೆಗಳಲ್ಲಿ ನೋಡಿರಬೇಕು. ಅನಂತರ ಈ ವಿಷಯವನ್ನು ಮರೆತೇ ಬಿಟ್ಟಿದ್ದೆ. ಈ ಪ್ರಸಂಗ ನನ್ನ ಪಾಲಿಗೆ ಒಂದು ಶುಭ ಸಂದರ್ಭ.

ನನ್ನ ಜೀವನದಲ್ಲಿ ವಿಶೇಷ ಪ್ರಭಾವ ಬೀರಿರುವವರು ಮೂರು ಮಂದಿ—ಮೊದಲನೆಯವರು ರಾಜಚಂದ್ರಕವಿ, ಎರಡನೆಯವರು ಟಾಲ್‌ಸ್ಟಾಯ್, ಮೂರವನೆಯವರು ರಸ್ಕಿನ್. ಟಾಲ್‌ಸ್ಟಾಯ್ ಹಾಗೂ ರಸ್ಕಿನ್ನರ ನಡುವೆ ಸ್ಪರ್ಧೆ ಉಂಟಾದರೆ, ಇಬ್ಬರ ಜೀವನದ ಬಗೆಗೂ ನನಗೆ ಹೆಚ್ಚು ವಿಷಯ ತಿಳಿದು ಬಂದರೆ, ಮೊದಲ ಸ್ಥಾನವನ್ನು ಯಾರಿಗೆ ಕೊಡುವೆನೋ ತಿಳಿಯದು. ಈಗಂತೂ ಟಾಲ್‌ಸ್ಟಾಯ್ ಅವರಿಗೇ ಎರಡನೆಯ ಸ್ಥಾನ. ಟಾಲ್‌ಸ್ಟಾಯ್ ಅವರ ಜೀವನದ ವಿಷಯದಲ್ಲಿ ಅನೇಕರು ಓದಿರುವಷ್ಟು ಕಡಿಮೆಯೇ ಎಂದು ಹೇಳಬಹುದು. ಅವರ ಪುಸ್ತಕಗಳಲ್ಲಿ ನನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಪುಸ್ತಕವೆಂದರೆ, "Kingdom of Heaven is within you" ಎಂಬುದು. ಭಗವಂತನ ರಾಜ್ಯ ನಿಮ್ಮ ಹೃದಯದಲ್ಲಿಯೇ ಇದೆ ಎಂಬುದು ಅದರ ಅರ್ಥ. ಅದನ್ನು ಹೊರಗಡೆ ಹುಡುಕಲು ಹೊರಟರೆ, ಎಂದಿಗೂ ಸಿಕ್ಕುವುದಿಲ್ಲ. ಆ ಪುಸ್ತಕವನ್ನು ನಾಲ್ವತ್ತು ವರುಷಗಳ ಹಿಂದೆ ಓದಿದ್ದೆ. ಆ ಕಾಲಕ್ಕೆ ಅನೇಕ ವಿಷಯಗಳಲ್ಲಿ ನನ್ನ ಅಭಿಪ್ರಾಯ

ಗಳು ಇತ್ತು. ಸಂಶಯಾತ್ಮಕವಾಗಿಯೇ ಇದ್ದವು. ಹಲವು ಬಾರಿ ನಾಸ್ತಿಕತೆಯ ವಿಷಯವೂ ಮನಸ್ಸಿಗೆ ಬರುತ್ತಿತ್ತು. ವಿಲಾಯತಿಗೆ ಹೋದ ಸಮಯದಲ್ಲಿಯಂತೂ ನಾನು ಹಿಂಸಕನಾಗಿದ್ದೆ; ಹಿಂಸೆಯಲ್ಲಿ ನನಗೆ ವಿಶ್ವಾಸವಿತ್ತು; ಅಹಿಂಸೆಯಲ್ಲಿ ಅವಿಶ್ವಾಸವಿತ್ತು. ಈ ಪುಸ್ತಕವನ್ನು ಓದಿದ ಮೇಲೆ ನನ್ನ ಆ ಅಶ್ರದ್ಧೆ ತೊಲಗಿತು. ಆಮೇಲೆ, ಅವರ ಇನ್ನೂ ಹಲವು ಗ್ರಂಥಗಳನ್ನು ಓದಿದೆ. ಆ ಪುಸ್ತಕಗಳಲ್ಲಿ ಒಂದೊಂದೂ ಏನು ಪ್ರಭಾವ ಬೀರಿತೆಂಬುದನ್ನು ಹೇಳಲಾರೆ; ಆದರೆ ಅವುಗಳಿಂದ ಜೀವನದ ಮೇಲೆ ಸಮಗ್ರ ಪ್ರಭಾವ ಏನಾಯಿತೆಂಬುದನ್ನು ಹೇಳಬಲ್ಲೆ.

ಅವರ ಜೀವನದಲ್ಲಿ ನನಗೆ ಕಂಡುಬಂದ ಮುಖ್ಯವಾದ ಮಾತುಗಳು ಎರಡು—ಅವರು ನುಡಿದಂತೆ ನಡೆಯುವ ವ್ಯಕ್ತಿ ಆಗಿದ್ದರು. ಅವರ ಸರಳ ಜೀವನ ಅದ್ಭುತವಾದುದು,; ಬಾಹ್ಯ ಸರಳತೆಯಂತೂ ಇದ್ದೇಇತ್ತು. ಅವರು ಶ್ರೀಮಂತ ವರ್ಗಕ್ಕೆ ಸೇರಿದವರು. ಈ ಪ್ರಪಂಚದ ಅಷ್ಟಭೋಗಗಳನ್ನೂ ಅನುಭವಿಸಿದವರು. ಧನ—ಸಂಪತ್ತಿನ ವಿಷಯದಲ್ಲಿ ಮನುಷ್ಯ ಎಷ್ಟು ಅಪೇಕ್ಷಿಸಬಹುದೋ, ಅಷ್ಟೂ ಅವರಿಗೆ ದೊರೆತಿತ್ತು. ಆದರೂ, ತುಂಬು ತಾರುಣ್ಯದಲ್ಲೇ ಅವರು ತಮ್ಮ ಧ್ಯೇಯವನ್ನು ಬದಲಿಸಿಕೊಂಡರು. ಪ್ರಪಂಚದ ಎಲ್ಲ ಭೋಗವನ್ನು ಭೋಗಿಸಿದಮೇಲೂ, ಎಲ್ಲ ಸ್ವಾದವನ್ನು ಆಸ್ವಾದಿಸಿದಮೇಲೂ ಅವುಗಳಲ್ಲಿ ಏನೂ ಸಾರವಿಲ್ಲವೆಂಬ ಅರಿವಾದಾಗ ಅವುಗಳಿಂದ ವಿಮುಖರಾದರು; ಹಾಗೂ ಕೊನೆಯವರೆಗೆ ತಮ್ಮ ಅಭಿಪ್ರಾಯಗಳಿಂದ ವಿಚಲಿತರಾಗಲಿಲ್ಲ. ಅಂತಲೆ, ಟಾಲ್‌ಸ್ಟಾಯ್ ಈ ಯುಗದ ಸತ್ಯದ ಮೂರ್ತಿ ಎಂಬುದಾಗಿ ಒಂದೆಡೆಯಲ್ಲಿ ಬರೆದಿದ್ದೇನೆ, ಸತ್ಯವನ್ನು ಹೇಗೆ ತಂದುಕೊಂಡರೋ ಅದನ್ನು ಹಾಗೆಯೇ ಪಾಲಿಸಲು ಅವರು ಉಗ್ರ ಪ್ರಯತ್ನ ಮಾಡಿದರು. ಸತ್ಯವನ್ನು ಮುಚ್ಚಿಡುವ ಅಥವಾ ನಿರ್ಬಲಗೊಳಿಸುವ ಪ್ರಯತ್ನವನ್ನು ಮಾಡಲಿಲ್ಲ. ಜನಕ್ಕೆ ಅದು ಕೆಟ್ಟದೆನಿಸೀತೆ ಅಥವಾ ಒಳಿತೆನಿಸೀತೆ ಎಂಬ ವಿಚಾರ ಮಾಡದೆ, ತಥ್ಯ ತಮಗೆ ಹೇಗೆ ಕಂಡಿತೋ ಹಾಗೆಯೇ ಜನರ ಮುಂದಿಟ್ಟರು. ಟಾಲ್‌ಸ್ಟಾಯ್ ತಮ್ಮ ಯುಗದ ಬಹಳ ದೊಡ್ಡ ಅಹಿಂಸಾ-ಪ್ರವರ್ತಕರಾಗಿದ್ದರು. ಅಹಿಂಸೆಯ ಬಗೆಗೆ ಅಭ್ಯಾಸ-ಅನುಷ್ಠಾನದ ಸಲುವಾಗಿ ಟಾಲ್‌ಸ್ಟಾಯ್ ಅವರು ಬರೆ

ದಷ್ಟು ಹೃದಯ ಸ್ಪರ್ಶಿಯಾದ ಸಾಹಿತ್ಯವನ್ನು ನನಗೆ ತಿಳಿದ ಮಟ್ಟಿಗೆ ಬೇರೆ ಯಾರೂ ಬರೆದಿಲ್ಲ. ಇನ್ನೂ ಮುಂದೆ ಹೋಗಿ ಹೀಗೆ ಹೇಳಬಲ್ಲೆ—ಟಾಲ್ಸ್ಟಾಯ್ ಅವರಷ್ಟು ಅಹಿಂಸೆಯ ಸೂಕ್ಷ್ಮದರ್ಶನ ಮಾಡಿದವರು, ಅದನ್ನು ಅನುಸರಿಸಲು ಅವರಷ್ಟು ಪ್ರಯತ್ನಮಾಡಿದವರು ಇಂದು ಭಾರತದಲ್ಲಿ ಯಾರೂ ಇಲ್ಲ. ಅಂಥ ಯಾವ ವ್ಯಕ್ತಿಯೂ ನನಗೆ ಕಂಡುಬಂದಿಲ್ಲ.

ಈ ಸ್ಥಿತಿ ನನ್ನ ಪಾಲಿಗೆ ಬಹಳ ದುಃಖದಾಯಕ. ಇದು ನನಗೆ ಒಪ್ಪುವುದಿಲ್ಲ. ಹಿಂದೂಸ್ಥಾನ ಕರ್ಮಭೂಮಿ. ಹಿಂದೂಸ್ತಾನದ ಋಷಿ-ಮುನಿಗಳು ಅಹಿಂಸೆಯ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಶೋಧನೆ ನಡೆಸಿದಾರೆ. ಆದರೆ, ನಾವು ಕೇವಲ ನಮ್ಮ ಹಿರಿಯರು ಗಳಿಸಿದ ಬಂಡವಾಳದ ಮೇಲೆಯೇ ಪಥ ಸಾಗಿಸಲು ಬರುವುದಿಲ್ಲ. ಅದನ್ನು ಬೆಳೆಸದಿದ್ದರೆ ನಮಗೆ ಹಾನಿ ತಪ್ಪಿದ್ದಲ್ಲ. ಈ ವಿಷಯದಲ್ಲಿ ನ್ಯಾಯಮೂರ್ತಿ ರಾನಡೆಯವರು ನಮಗೆ ಎಚ್ಚರಿಕೆ ಕೊಟ್ಟಿದಾರೆ. ವೇದ ಮೊದಲಾದ ಸಾಹಿತ್ಯದಿಂದ ಅಥವಾ ಜೈನ ಸಾಹಿತ್ಯದಿಂದ ಎಷ್ಟೇ ಮಾತುಗಳನ್ನು ಅಂದು ತೋರಿಸಿದರೂ, ಸಿದ್ಧಾಂತದ ವಿಷಯದಲ್ಲಿ ಎಷ್ಟೇ ಪ್ರಮಾಣಗಳನ್ನು ತೋರಿದರೂ ತಮ್ಮೊಮೂಲಕ ಪ್ರಪಂಚವನ್ನು ಅಚ್ಚರಿಗೊಳಿಸಿದರೂ, ಪ್ರಪಂಚ ನಮ್ಮನ್ನು ಪ್ರಾಮಾಣಿಕರೆಂದು ನಂಬುವುದಿಲ್ಲ. ಅಂತಲೆ ರಾನಡೆಯವರು ನಮ್ಮ ಬಂಡವಾಳವನ್ನು ಬೆಳೆಸಿಕೊಳ್ಳುವುದು ನಮ್ಮ ಧರ್ಮವೆಂದು ತಿಳಿಸಿದರು. ಬೇರೆ ಧರ್ಮ—ವಿಚಾರಶೀಲರು ಬರೆದುದನ್ನು ನಮ್ಮದರೊಡನೆ ತುಲನೆ ಮಾಡಿಕೊಂಡು, ಅದರಲ್ಲಿ ಹೊಸದೇನಾದರೂ ಸಿಕ್ಕಿದರೆ, ಹೊಸ ಬೆಳಕೇನಾದರೂ ಕಂಡರೆ ಅದನ್ನು ಸ್ವೀಕರಿಸಬೇಕು. ಆದರೆ ನಾವು ಹಾಗೆ ಮಾಡಲಿಲ್ಲ. ನಮ್ಮ ಧರ್ಮಾಚಾರ್ಯರು ಒಂದೇ ಪಕ್ಷದ ವಿಚಾರ ಮಾಡುತ್ತ ಬಂದಿದಾರೆ. ಅದರ ಪಠಣ, ಕಥನ ಹಾಗೂ ವರ್ತನೆಯಲ್ಲಿ ಸಾಮ್ಯವಿಲ್ಲ. ಜನಕ್ಕೆ ಒಳಿತೆನಿಸಲಿ, ಅನಿಸದಿರಲಿ—ತಾವು ಯಾವ ಸಮಾಜದಲ್ಲಿ ಕೆಲಸಮಾಡುತ್ತಿರುವರೋ ಆ ಸಮಾಜಕ್ಕೆ ರುಚಿಸಲಿ, ರುಚಿಸದಿರಲಿ ಟಾಲ್ಸ್ಟಾಯ್ ಅವರಂತೆ ಚೊಕ್ಕ ಸತ್ಯ ನುಡಿಯುವವರು ನಮ್ಮಲ್ಲಿ ದೊರೆಯುವುದಿಲ್ಲ. ನಮ್ಮ ಅಹಿಂಸಾ-ಪ್ರಧಾನ ದೇಶದ ಕರುಣಾಜನಕ ಸ್ಥಿತಿಯಿದು!

ನಮ್ಮ ಅಹಿಂಸೆ ನಿಂದಾಯೋಗ್ಯವಾದುದೆ. ತಿಗಣೆ, ಸೊಳ್ಳೆ, ಚೇಳು,

ಪಕ್ಷಿ ಹಾಗೂ ಪ್ರಾಣಿಗಳನ್ನು ಹೇಗೋ ಹಾಗೆ ನೋಡಿ ಕೊಲ್ಲುವುದರಲ್ಲೇ ನಮ್ಮ ಅಹಿಂಸೆ ಪೂರ್ಣವಾಗುತ್ತದೆ. ಆ ಪ್ರಾಣಿಗಳು ಸಂಕಟದಲ್ಲಿ ಚಡಪಡಿಸುತ್ತಿದ್ದರೂ ನಮಗೆ ಅದರ ಚಿಂತೆ ಇರುವುದಿಲ್ಲ. ಅವನ್ನು ಸಂಕಟಕ್ಕೆ ಗುರಿಪಡಿಸುವುದರಲ್ಲಿ ನಮ್ಮದೇ ಪಾತ್ರವಿದ್ದರೂ ಅದರ ಚಿಂತೆ ನಮಗಿರದು. ಆದರೆ, ಸಂಕಟಕ್ಕೆ ಸಿಲುಕಿರುವ ಪ್ರಾಣಿಯನ್ನು ಯಾರಾದರೂ ಪ್ರಾಣದಿಂದ ವಿಮುಕ್ತ ಗೊಳಿಸಿದರೆ ಅಥವಾ ನಾವು ಅದರಲ್ಲಿ ಭಾಗಿಗಳಾದರೆ, ಅದನ್ನು ನಾವು ಪಾಪವೆಂದು ಭಾವಿಸುತ್ತೇವೆ. ಇದು ಅಹಿಂಸೆಯಲ್ಲ—ಎಂಬುದಾಗಿ ಬರೆದೇ ಇದ್ದೇನೆ. ಟಾಲ್‌ಸ್ಟಾಯ್ ಸ್ಮರಣೆ ಮಾಡಿಕೊಳ್ಳುತ್ತ, ಅಹಿಂಸೆಯ ಅರ್ಥ ಇದಲ್ಲವೆಂದು ಪುನಃ ಹೇಳುತ್ತೇನೆ. ಅಹಿಂಸೆಯೆಂದರೆ, ಪ್ರೇಮದ ಸಮುದ್ರ; ಅಹಿಂಸೆಯೆಂದರೆ ಹಗೆತನದ ಪೂರ್ಣತ್ಯಾಗ. ಅಹಿಂಸೆಯಲ್ಲಿ ದೈನ್ಯತೆಗೆ ಪುಕ್ಕಲುತನಕ್ಕೆ ಸ್ಥಾನವಿಲ್ಲ. ಹೆದರಿ ಓಡುವುದಕ್ಕೂ—ಸ್ಥಾನವಿಲ್ಲ. ಅಹಿಂಸೆಯಲ್ಲಿ ದೃಢತೆ, ವೀರತೆ, ನಿಶ್ಚಲತೆ, ಇರಬೇಕು.

ಈ ಅಹಿಂಸೆ ಹಿಂದೂಸ್ತಾನದ ಕಲಿತ ಮಂದಿಯಲ್ಲಿ ಕಂಡು ಬರುವುದಿಲ್ಲ. ಅವರಿಗೆ ಟಾಲ್‌ಸ್ಟಾಯ್ ಜೀವನ ಪ್ರೇರಕವಾದುದು. ತಾವು ಮಾನ್ಯ ಮಾಡಿದುದನ್ನು ಪಾಲಿಸಲು ಅವರು ಪ್ರಬಲ ಪ್ರಯತ್ನ ಮಾಡಿದರು. ಆ ಬಗ್ಗೆ ಅವರು ಕಿಂಚತ್ತಾದರೂ ಅಳುಕಲಿಲ್ಲ. ಅವರಿಗೆ 'ಸಿದ್ಧಿ' ಸಿಕ್ಕಲಿಲ್ಲವೆಂಬುದನ್ನು ನಾ ಒಪ್ಪೆನು. 'ಸಿಕ್ಕಲಿಲ್ಲ' ಎಂಬುದಾಗಿ ಅವರೇನೋ ಹೇಳಿದ್ದಾರೆ. ಹಾಗೇ ಹೇಳುವುದು ಅವರಿಗೆ ಶೋಭಿಸಿತು; ಆದರೆ, ಅವರು ಟೀಕಾಕಾರರು ಬರೆಯುವಂತೆ ಅವರಿಗೆ 'ಸಿದ್ಧಿ' ಸಿಕ್ಕಲಿಲ್ಲವೆಂದು ನಾನು ಒಪ್ಪುವುದಿಲ್ಲ. ತಾವು ಕಂಡುಕೊಂಡಿದ್ದ ಅಹಿಂಸೆಯನ್ನು ಅವರು ಪೂರ್ಣರೂಪೇಣ ಅನುಸರಿಸಲು ಅವರಿಗೆ ಸಾಧ್ಯವಾಗಲಿಲ್ಲವೆಂದು ಯಾರಾದರೂ ಹೇಳಿದರೆ ಅದನ್ನು ನಾನು ಒಪ್ಪಬಲ್ಲೆ. ತನ್ನ ಸಿದ್ಧಾಂತವನ್ನು ಪೂರ್ಣರೀತಿಯಲ್ಲಿ ಅನುಷ್ಠಾನಕ್ಕೆ ತರಲು ಈ ಜಗತ್ತಿನಲ್ಲಿ ಯಾರಿಗೆ ತಾನೆ ಸಾಧ್ಯವಾಗಿದೆ? ದೇಹಧಾರಿಯಾದವನಿಗೆ ಸಂಪೂರ್ಣ ಅಹಿಂಸೆಯ ಪಾಲನೆ ಮಾಡುವುದು ಶಕ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ. ಶರೀರ ಇರುವವರೆಗೆ ಕಿಂಚಿತ್ತಾದರೂ ಅಹಂಭಾವ ಇದ್ದೇ ಇರುತ್ತದೆ. ಅಹಂಭಾವ ಇರುವವರೆಗೆ ಶರೀರ ಧಾರಣೆ ಮಾಡಲೇಬೇಕಾಗುತ್ತದೆ. ಆದಕಾರಣ, ಶರೀರದೊಡನೆ ಹಿಂಸೆ ಇದ್ದೇ

ಇರುತ್ತದೆ. ತಾನು ತನ್ನ ಆದರ್ಶವನ್ನು ಸಾಧಿಸಿರುವುದಾಗಿ ಭಾವಿಸಿರುವವನನ್ನು ನಷ್ಟಪ್ರಾಯನೆಂದೇ ಭಾವಿಸಬೇಕು–ಎಂಬುದಾಗಿ ಟಾಲ್‌ಸ್ಟಾಯ್ ಅವರೇ ಹೇಳಿದ್ದಾರೆ; ಅಲ್ಲಿಂದಲೇ ಆತನ ಅಧೋಗತಿ ಆರಂಭವಾಗುತ್ತದೆ. ನಾವು ಆದರ್ಶದತ್ತ ಸಾಗಿದಂತೆಲ್ಲ ಅದು ನಮ್ಮಿಂದ ದೂರದೂರ ಸರಿಯುತ್ತ ಹೋಗುತ್ತದೆ. ಅದರ ಶೋಧನೆಯಲ್ಲಿ ನಾವು ಮುಂಬರಿದಷ್ಟು ಇನ್ನೊಂದೇ ಮೆಟ್ಟಲು ಬಾಕಿ–ಅನಿಸುತ್ತಿರುತ್ತದೆ. ಯಾರೇ ಆಗಲಿ ವೇಗವಾಗಿ ಮೆಟ್ಟಲುಗಳನ್ನು ಕ್ರಮಿಸಲು ಆಗುವುದಿಲ್ಲವೆಂದು ಭಾವಿಸುವುದರಲ್ಲಿ ಹೀನತೆ, ನಿರಾಶೆ ಏನೂ ಇಲ್ಲ; ನಮ್ರತೆ ಅವಶ್ಯವಾಗಿ ಇದೆ. ಅಂತಲೆ ನಮ್ಮ ಋಷಿಗಳು ಮೋಕ್ಷವೆಂದರೆ ಶೂನ್ಯತೆ ಎಂದಿದ್ದಾರೆ. ಮೋಕ್ಷ ಬಯಸುವವರು ಶೂನ್ಯತೆಯನ್ನು ಪಡೆಯಲೇಬೇಕು. ಭಗವಂತನ ಅನುಗ್ರಹವಿಲ್ಲದೆ ಅದು ದೊರೆಯುವುದಿಲ್ಲ. ಶರೀರ ಇರುವವರೆಗೆ ಈ ಶೂನ್ಯತೆ ಆದರ್ಶರೂಪವಾಗಿಯೇ ಇರುತ್ತದೆ. ಈ ಮಾತನ್ನು ಟಾಲ್‌ಸ್ಟಾಯ್ ಅವರು ಸ್ಪಷ್ಟವಾಗಿ ಕಂಡುಕೊಂಡು ಬುದ್ಧಿಯಲ್ಲಿ ಅದನ್ನು ಅಂಕಿತಗೊಳಿಸಿಕೊಂಡು, ಎರಡು ಮೆಟ್ಟಲು ಮುಂಬರಿದರೋ ಇಲ್ಲವೋ ಅವರಿಗೆ 'ಸಿದ್ಧಿ' ದೊರೆಯಿತು. ಆ ಸಿದ್ಧಿಯನ್ನು ಅವರು ವರ್ಣಿಸಲಾರರು. 'ಸಿಕ್ಕಿತು' ಎಂದಷ್ಟೇ ಹೇಳಬಹುದು. ಆದರೂ 'ಸಿಕ್ಕಿತು ಎಂದು ಹೇಳಿಬಿಟ್ಟರೆ, ಅವರ ಜೀವನವೇ ಕೊನೆ ಮುಟ್ಟುತ್ತಿತ್ತು.

ಟಾಲ್‌ಸ್ಟಾಯ್ ಅವರ ಜೀವನದಲ್ಲಿ ಕಂಡುಬರುವ ವಿರೋಧಾಭಾಸ, ಅವರ ದೋಷ ಅಥವಾ ದೌರ್ಬಲ್ಯವಲ್ಲ; ನೋಡುವವರ ತಪ್ಪು. ಎಮರ್ಸನ್ ಹೀಗೆ ಹೇಳಿದ್ದಾನೆ- ಅವಿರೋಧ ಎಂಬುದು ಅಲ್ಪ ಮಾನವನ ಪಿಶಾಚಿ. ನಮ್ಮ ಜೀವನದಲ್ಲಿ ಎಂದೂ ವಿರೋಧ ಬರುವುದೇ ಇಲ್ಲವೆಂದು ತೋರಬಯಸುವುದಾದರೆ, ನಾವು ಸತ್ತಂತೆಯೇ ಲೆಕ್ಕ. ಹಾಗೆ ಮಾಡುವುದರಲ್ಲಿ ನಿನ್ನೆಯ ಕೆಲಸದ ನೆನಪು ಮಾಡಿಕೊಂಡು ಇಂದಿನ ಕೆಲಸದೊಡನೆ ಅದನ್ನು ಕೂಡಿಸಲು ಮಾಡುವ ಕೃತ್ರಿಮ ಸಮನ್ವಯದ ಪ್ರಕ್ರಿಯೆಯಲ್ಲಿ ಅತ್ಯಾಚಾರಣೆ ನುಸುಳಿಕೊಂಡು ಬರುವುದು. ಯಾವ ಸಮಯದಲ್ಲಿ ಯಾವ ಸತ್ಯ ಭಾಸವಾಗುವುದೋ ಅದನ್ನು ಅನುಸರಿಸುವುದೇ ನೇರ ಮಾರ್ಗ. ನಮ್ಮದು ಉತ್ತರೋತ್ತರ ಪ್ರಗತಿಯೇ ಆಗಿ, ನಮ್ಮ ಕಾರ್ಯದಲ್ಲಿ ಬೇರೆಯವರಿಗೆ ವಿರೋಧ ಕಂಡು ಬಂದರೆ, ನಮಗೇನಂತೆ? ನಿಜಕ್ಕೂ, ಅದು ನಮ್ಮ ವಿರೋಧವಲ್ಲ, ಉನ್ನತಿ. ಹಾಗೆಯೇ

ಟಾಲ್‌ಸ್ಟಾಯ್ ಅವರ ಜೀವನದಲ್ಲಿ ಕಂಡು ಬರುವ ವಿರೋಧ ವಿರೋಧವಲ್ಲ; ನಮ್ಮ ಮನಸ್ಸಿನ ವಿರೋಧಾಭಾಸ. ಮನುಷ್ಯನ ಹೃದಯದಲ್ಲಿ ಎಷ್ಟು ಹೊಯ್ದಾಟ ನಡೆಯುವುದೆಂಬುದು, ರಾಮ–ರಾವಣ ಯುದ್ಧದಲ್ಲಿ ಎಷ್ಟು ವಿಜಯ ಪ್ರಾಪ್ತಿಯಾಗುವುದೆಂಬುದು ಅವನಿಗೇ ತಿಳಿಯುವುದಿಲ್ಲ; ನೋಡು ವವರಿಗಂತೂ ತಿಳಿಯುವುದೇ ಇಲ್ಲ. ಆತ ಸ್ವಲ್ಪ ಜಾರಿ ಜಗತ್ತಿನ ದೃಷ್ಟಿಯಲ್ಲಿ ಯಃಕಶ್ಚಿತನೆನಿಸಿದರೆ, ಅದು ಒಳ್ಳೆಯದೆ. ಆಗ ಆತ ಜಗತ್ತನ್ನು ನಿಂದಿಸ ಬಾರದು, ಅಂತಲೆ ಸಂತರು ಇಂತೆಂದಿದ್ದಾರೆ– ಜಗತ್ತು ನಮ್ಮನ್ನು ನಿಂದಿಸಿ ದಾಗ ನಾವು ಆನಂದ ಪಡಬೇಕು; ಸ್ತುತಿಸಿದಾಗ ನಡುಗಬೇಕು ? ಜಗತ್ತು ಇನ್ನೇನು ಮಾಡೀತು? ಕೊಳೆ ಕಂಡಲ್ಲಿ ನಿಂದಿಸದೆ ಬಿಡದು, ಆದರೆ, ಮಹಾ ಪುರುಷರ ಜೀವನವನ್ನು ಪರಿಕಿಸಲು ತೊಡಗುವುದಾದರೆ, ನಾನು ಹೇಳಿದ ಮಾತನ್ನು ನೆನಪಿನಲ್ಲಿಡಬೇಕು. ಅವರು ತಮ್ಮ ಹೃದಯದಲ್ಲಿ ಎಷ್ಟು ಹೋರಾಟ ನಡೆಸಿದಾರೋ, ಎಷ್ಟು ಜಯ ಗಳಿಸಿದಾರೋ ಅದಕ್ಕೆ ಭಗವಂತನೇ ಸಾಕ್ಷಿ. ಇದೇ ನಿಷ್ಫಲತೆ–ಸಫಲತೆಯ ಚಿಹ್ನೆ.

ಹೀಗೆಂದ ಮಾತ್ರಕ್ಕೆ ನೀವು ದೋಷಗಳನ್ನು ಮುಚ್ಚಿಟ್ಟುಕೊಳ್ಳಬೇಕು, ಗುರುತರವಾದ ದೋಷವನ್ನು ತೃಣವೆಂದೆಣಿಸಬೇಕು-ಎಂಬುದು ನನ್ನ ಅಭಿ ಪ್ರಾಯವೆಂದು ತಿಳಿಯಬಾರದು. ಈ ಮಾತನ್ನು ನಾನು ಬೇರೆಯವರ ವಿಷ ಯಕ್ಕೆ ಹೇಳಿದೇನೆ. ಬೇರೆಯವರ ಪರ್ವತ ಸಮಾನವಾದ ದೋಷವನ್ನು ಸಾಸುವೆಯಷ್ಟು ದೋಷವೆಂದು ಭಾವಿಸಬೇಕು; ನಮ್ಮ ಸಾಸುವೆಯಷ್ಟು ದೋಷವನ್ನು ಪರ್ವತದಷ್ಟು ದೋಷವೆಂದು ಭಾವಿಸಬೇಕು. ನಮ್ಮಿಂದ ದೋಷವೇನಾನರೂ ಆದರೆ, ತಿಳಿದೋ ತಿಳಿಯದೆಯೋ ಅಸತ್ಯವೇನಾದ ರೂ ಕಾಣಿಸಿಕೊಂಡರೆ, ನಾವು ನೀರಿನಲ್ಲಿ ಮುಳುಗಿ ಸತ್ತೆನೆಂದು ತಿಳಿಯ ಬೇಕು. ಹೃದಯದಲ್ಲಿ ಬೆಂಕಿ ಉರಿಯತೊಡಗಬೇಕು. ಹಾವೂ ಚೇಳುಗಳ ವಿಷ ಏನೇನೂ ಅಲ್ಲ ; ಆ ವಿಷ ತೆಗೆಯುವವರು ಎಷ್ಟೋ ಮಂದಿ ಸಿಕ್ಕು ತ್ತಾರೆ. ಆದರೆ ಅಸತ್ಯ ಹಾಗೂ ಹಿಂಸೆಯ ವಿಷದಿಂದ ನಮ್ಮನ್ನು ರಕ್ಷಿಸುವವರು ಯಾರು ? ನಮ್ಮಲ್ಲಿ ಪುರುಷಾರ್ಥ ಇದ್ದಲ್ಲಿ ಮಾತ್ರ ನಮ್ಮನ್ನು ಭಗವಂತ ಅದರಿಂದ (ವಿಷ) ರಕ್ಷಿಸುವನು. ಆದಕಾರಣ, ನಮ್ಮ ದೋಷಗಳ ಬಗೆಗೆ ನಾವು ಎಚ್ಚರಿಕೆಯಿಂದಿರಬೇಕು. ಅವನ್ನು ಎಷ್ಟು ದೊಡ್ಡವೆಂದು ಕಾಣಲು

ಸಾಧ್ಯವೋ ಅಷ್ಟು ದೊಡ್ಡವೆಂದು ಕಾಣೋಣ. ಜಗತ್ತು ನಮ್ಮಲ್ಲಿ ದೋಷ ವೆನಿಸಿದರೆ, ನಮ್ಮ ಸಣ್ಣ ದೋಷಗಳನ್ನು ದೊಡ್ಡ ದೋಷಗಳಾಗಿ ಕಾಣು ವಷ್ಟು ಕಾರ್ಪಣ್ಯವೇಕೆ. ಈ ಜಗತ್ತಿಗೆ ಅನ್ನುವುದು ಬೇಡ. ಟಾಲ್‌ಸ್ಟಾಯ್ ಅವರಿಗೆ ಯಾರಾದರೂ ಅವರ ತಪ್ಪನ್ನು ತೋರಿಸಿಕೊಟ್ಟರೆ, ಅದಕ್ಕೆ ಅವರು ಭಯಂಕರ ರೂಪ ಕೊಡುತ್ತಿದ್ದರು. ಅವರ ದೋಷವನ್ನು ತೋರಿಸಿಕೊಡುವ ಪ್ರಸಂಗ ಬೇರೆಯವರಿಗೆ ಬರುತ್ತಿದ್ದುದೇ ಅಪರೂಪ. ಏಕೆಂದರೆ, ಅವರು ಬಹಳ ಆತ್ಮ-ನಿರೀಕ್ಷಣೆ ಮಾಡಿಕೊಳ್ಳುತ್ತಿದ್ದರು. ಬೇರೆಯವರು ತಿಳಿಸುವ ಮೊದಲೇ, ತಮ್ಮ ದೋಷವನ್ನು ತಾವೇ ಕಂಡುಕೊಂಡು, ಅದಕ್ಕೆ ಪ್ರಾಯ ಶ್ಚಿತ್ತವನ್ನು ಮಾಡಿಕೊಳ್ಳುತ್ತಿದ್ದರು. ಇದು ಸಾಧುತನದ ಲಕ್ಷಣ. ಅಂತಲೆ ಅವರಿಗೆ 'ಸಿದ್ಧಿ' ಸಿಕ್ಕಿತ್ತೆಂದು ನಾನು ಹೇಳುವೆ.

ಟಾಲ್‌ಸ್ಟಾಯ್ ಅವರು ಇನ್ನೂ ಒಂದು ಅದ್ಭುತ ವಿಷಯದ ಕಲ್ಪನೆ ಯನ್ನು ಬರೆದು, ಅದನ್ನು ತಮ್ಮ ಜೀವನದಲ್ಲಿ ಹಾಸು-ಹೊಕ್ಕಾಗಿಸಿಕೊಂಡಿ ದ್ದಾರೆ. 'ಬ್ರೆಡ್‌ಲೇಬರ್' ಎಂಬುದೇ ಆ ಕೃತಿ. ಅದು ಅವರೇ ಮಾಡಿದ ಶೋಧನೆಯಲ್ಲ. ಬೇರೆ ಯಾರೋ ಆ ವಿಷಯವನ್ನು ರಷ್ಯದ ಸರ್ವಸಂಗ್ರಹ ದಲ್ಲಿ ಬರೆದಿದ್ದರು. ಆ ಲೇಖಕರನ್ನು ಟಾಲ್‌ಸ್ಟಾಯ್ ಅವರು ಜಗತ್ತಿನ ಮುಂದೆ ತಂದು ನಿಲ್ಲಿಸಿ, ಅವರ ಮಾತನ್ನು ಬೆಳಕಿಗೆ ತಂದರು. ಜಗತ್ತಿನಲ್ಲಿ ಕಂಡುಬರುವ ಸಿರಿತನ ಬಡತನದ ವಿಷಮತೆಗೆ ನಾವು ಜೀವನದ ಧರ್ಮದ ವನ್ನು (ನೀತಿ) ಮರೆತಿರುವುದೇ ಕಾರಣ. ಆ ಧರ್ಮವೇ "ಬ್ರೆಡ್ ಲೇಬರ್" ಭಗವದ್ಗೀತೆಯ ಮೂರನೆಯ ಅಧ್ಯಾಯದ ಆಧಾರದ ಮೇಲೆ ನಾನು ಅದನ್ನು 'ಯಜ್ಞ' ಎನ್ನುತ್ತೇನೆ. ಯಜ್ಞ ಮಾಡದೆ ಉಣುವವನು ಚೋರ, ಪಾಪಿ- ಎಂಬುದಾಗಿ ಗೀತೆ ಹೇಳುತ್ತದೆ. ಟಾಲ್‌ಸ್ಟಾಯ್ ಅವರೂ ಅದೇ ಮಾತನ್ನು ಹೇಳಿದ್ದಾರೆ. 'ಬ್ರೆಡ್ ಲೇಬರ್'ಗೆ ತಿರುಗ-ಮುರುಗ ಅರ್ಥಮಾಡಿ, ಅದನ್ನು ಹಾರಿಸಿಬಿಡಬಾರದು. ಶರೀರವನ್ನು ಸವೆಸಿ ಕೂಲಿ ಮಾಡದವನಿಗೆ ಉಣುವ ಅಧಿಕಾರವಿಲ್ಲ-ಎಂಬದೇ ಅದರ ಸರಳವಾದ ಅರ್ಥ. ನಾವು ನಮ್ಮ ಅಶನದ ಬೆಲೆಗೆ ಸರಿತೂಗುವಷ್ಟು ಪರಿಶ್ರಮ ಮಾಡಿದರೆ, ಜಗತ್ತಿನಲ್ಲಿ ಕಂಡು ಬರುವ ಬಡತನ ದೂರವಾದೀತು. ಸೋಮಾರಿಯಾದವನು ಸ್ವತಃ ಕೆಲಸ ಮಾಡಿಕೊಳ್ಳಲಾರದೆ, ಬೇರೆ ಇಬ್ಬರನ್ನು (ಹಸಿದವರು) ಅವರ ಜೀವ

ಹಿಂಡುತ್ತಾನೆ. ಜನ ಪರೋಪಕಾರ ಮಾಡುವ ಪ್ರಯತ್ನಮಾಡಿ ಅದಕ್ಕಾಗಿ ಹಣ ಖರ್ಚುಮಾಡಿ ಕೀರ್ತಿ ಪಡೆಯುತ್ತಾರೆ. ಹಾಗೆ ಮಾಡುವ ಬದಲು ಅವರೇ ಸ್ವಲ್ಪ ಕಾಯಕಮಾಡಿದರೆ, ಅಂದರೆ ಬೇರೆಯವರ ಹೆಗಲಿನ ಮೇಲಿಂದ ಅವರು ಇಳಿದುಬಿಟ್ಟರೆ, ಅಷ್ಟೇ ಸಾಕು—ಎಂಬುದಾಗಿ ಟಾಲ್‌ಸ್ಟಾಯ್ ಅವರು ಹೇಳಿದಾರೆ. ಇದೇ ಸತ್ಯವಾದ ಮಾತು. ನಮ್ರತೆಯ ವಚನ ಮಾಡುವುದೇನೋ ಪರೋಪಕಾರ—ಆದರೆ, ತಮ್ಮ ಭೋಗ-ವಿಲಾಸದಲ್ಲಿ ಲವಲೇಶವೂ ಬಿಟ್ಟುಕೊಡುವುದಿಲ್ಲ-ಎಂದರೆ ಆಕೋ ಭಗತ್ ಹೇಳುವಂತೆಯೇ "ಅಪಾರ ಕಳ್ಳತನ ಸೂಜಿಯಷ್ಟು ಧಾನ"--ಆಗುವುದಿಲ್ಲವೆ? ಹೀಗೆ ಮಾಡಿದರೆ,.ಸಗ್ಗ ಸಿಕ್ಕೀತೆ?

ಟಾಲ್‌ಸ್ಟಾಯ್ ಅವರು ಹೇಳಿದುದನ್ನು ಬೇರೆಯವರು ಹೇಳಿಲ್ಲವೆಂದಲ್ಲ. ಆದರೆ, ಅವರ ಭಾಷೆಯಲ್ಲಿ ಚಮತ್ಕಾರವಿತ್ತು; ಕಾರಣ ಅವರು ನುಡಿದಂತೆ ನಡೆಯುತ್ತಿದ್ದರು. ಮೆತ್ತನೆಯ ಹಾಸಿಗೆಯ ಮೇಲೆ ಒರಗು ದಿಂಬು ಇಟ್ಟುಕೊಂಡು ಕೂಡುತ್ತಿದ್ದವರು, ಕೂಲಿಮಾಡತೊಡಗಿದರು; ದಿನಕ್ಕೆ ಎಂಟು ಘಂಟೆ ಕಾಲ ಹೊಲದ ಕೆಲಸ ಅಥವಾ ಬೇರೆ ಯಾವುದಾದರೂ ಕೆಲಸ ಮಾಡಲಾರಂಭಿಸಿದರು. ಅಂದ ಮಾತ್ರಕ್ಕೆ ಅವರು ಸಾಹಿತ್ಯದ ಕೆಲಸ ಮಾಡಲಿಲ್ಲವೆಂದು ಭಾವಿಸಬಾರದು. ಅವರು ಶರೀರ ಶ್ರಮದ ಕೆಲಸ ಆರಂಭಿಸಿದಾಗಿನಿಂದ ಅವರ ಸಾಹಿತ್ಯ ಹೆಚ್ಚು ಶೋಭಾಯಮಾನವಾಯಿತು. ತಮ್ಮ ಪುಸ್ತಕಗಳಲ್ಲೆಲ್ಲ ಸರ್ವೋತ್ತಮವಾದುದೆಂದು ಅವರು ಹೇಳಿರುವ ಪುಸ್ತಕ, "ಕಲೆ ಎಂದರೇನು?"--ಎಂಬುದು. ಯಜ್ಞಕಾಲದ ಕೂಲಿ ಕೆಲಸ ಮಾಡಿದಮೇಲೆ ಉಳಿದ ಸಮಯದಲ್ಲಿಯೇ ಅವರು ಅದನ್ನು ಬರೆದರು. ಕೂಲಿ (ಶ್ರಮ) ಮಾಡಿದುದರಿಂದ ಅವರ ಶರೀರ ಸವೆಯಲಿಲ್ಲ; ಪ್ರತಿಯಾಗಿ ಅದರಿಂದ ತಮ್ಮ ಬುದ್ಧಿ ಹೆಚ್ಚು ತೇಜೋಯುಕ್ತವಾಯಿತೆಂದು ಅವರೇ ಒಪ್ಪಿಕೊಂಡಿದ್ದಾರೆ. ಅವರ ಗ್ರಂಥಗಳನ್ನು ಓದುವವರಿಗೆ ಈ ಮಾತು ನಿಜವೆಂದು ತೋರುತ್ತದೆ.

ಟಾಲ್‌ಸ್ಟಾಯ್ ಅವರ ಜೀವನದಿಂದ ಲಾಭ ಪಡೆಯಬೇಕಾದರೆ, ಮೂರು ವಿಷಯಗಳನ್ನು ತಿಳಿಯಬೇಕು—ಯುವಕ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತ, ಅವರಿಗೆ ಈ ಮಾತನ್ನು ನೆನಪುಮಾಡಿಕೊಡಲು

ಬಯಸುವೆ—ನಿಮ್ಮ ಮುಂದಿರುವುದು ಎರಡು ಮಾರ್ಗ : ಒಂದು ಸ್ವೇಚ್ಛಾಚಾರದ್ದು ; ಇನ್ನೊಂದು ಸಂಯಮದ್ದು. ಟಾಲ್‌ಸ್ಟಾಯ್ ಅವರು ಉಳಿಯುವುದು ಅಳಿಯುವುದು ಎರಡನ್ನೂ ತಿಳಿದಿದ್ದರೆಂದು ನೀವು ಭಾವಿಸುವುದಾದರೆ, ಪ್ರಪಂಚದಲ್ಲಿ ಎಲ್ಲರಿಗೂ ವಿಶೇಷತಃ ತರುಣರಿಗೆ ಸಂಯಮದ ಮಾರ್ಗವೇ ಸರಿಯಾದ ಮಾರ್ಗ, ಎಂಬುದನ್ನು ಕಂಡುಕೊಳ್ಳಬಹುದು. ಹಿಂದೂಸ್ತಾನಕ್ಕೆ ವಿಶೇಷರೀತಿಯಲ್ಲಿ ಇದು ಅನ್ವಯಿಸುತ್ತದೆ. ಪಶ್ಚಿಮದಿಂದ ನಮ್ಮ ದೇಶಕ್ಕೆ ಒಂದು ವಿಧವಾದ ಗಾಳಿ-ನನ್ನ ದೃಷ್ಟಿಯಲ್ಲಿ ವಿಷಪೂರಿತವಾದ ಗಾಳಿ-ಬರುತ್ತದೆ. ಟಾಲ್‌ಸ್ಟಾಯ್ ಜೀವನದಂಥ ಚೆಂದವಾದ ಹವೆಯೂ ಬರುವುದುಂಟು ; ಆದರೆ, ಅದು ಪ್ರತ್ಯೇಕವಾದ ಸ್ಟೀಮರಿನಲ್ಲಿ ಸ್ವಲ್ಪವೇ ಬರುತ್ತದೆ. ಪ್ರತಿದಿನ ಒಂದಲ್ಲ ಒಂದು 'ಸ್ಟೀಮರ್' ಬೊಂಬಾಯಿ ಅಥವಾ ಕಲ್ಕತ್ತೆಗೆ ಬರುತ್ತದೆ. ಅದರಲ್ಲಿ ಬೇರೆ ವಿದೇಶಿ-ಸಾಮಾನುಗಳಂತೆ ಪರದೇಶಿ ಸಾಹಿತ್ಯವೂ ಬರುತ್ತದೆ. ಅವರ ವಿಚಾರ ಮನುಷ್ಯನನ್ನು ನಾಶಮಾಡುವಂಥವಾಗಿರುತ್ತದೆ ; ಸ್ವೇಚ್ಛಾಚಾರದತ್ತ ಕೊಂಡೊಯ್ಯುವಂಥದಾಗಿರುತ್ತದೆ........'ಕಾನ್ಷನ್ಸ್' ಎಂಬ ಶಬ್ದಕ್ಕೆ ಸಮಾನಾರ್ಥಕ ಶಬ್ದ ನಮ್ಮಲ್ಲಿ ಇಲ್ಲವೆಂದು ತಿಲಕ ಮಹಾರಾಜರು ಹೇಳಿದಾರೆ. ಪ್ರತಿಯೊಬ್ಬ ವ್ಯಕ್ತಿಗೂ 'ಕಾನ್ಷನ್ಸ್' ಇರುವುದೆಂಬುದನ್ನು ನಾವು ಒಪ್ಪುವುದಿಲ್ಲ. ಪಾಶ್ಚಾತ್ಯರು ಆ ಮಾತನ್ನು ಒಪ್ಪುತ್ತಾರೆ. ವ್ಯಭಿಚಾರಿಗಳಿಗೆ, ಲಂಪಟರಿಗೆ ಎಲ್ಲಿಯ 'ಕಾನ್ಷನ್ಸ್'? ಅಂತಲೆ ತಿಲಕರು 'ಕಾನ್ಷನ್ಸ್'ನ ಬುಡವನ್ನೇ ಅಲ್ಲಾಡಿಸಿಬಿಟ್ಟರು. ಅಂತರ್ನಾದ ಕೇಳಲು ಅಂತರ್-ಕರ್ಣ ಬೇಕು; ಅಂತರ್-ಚಕ್ಷುವೂ ಬೇಕು ; ಅದನ್ನು ಪ್ರಾಪ್ತಿಸಿಕೊಳ್ಳಲು ಸಂಯಮದ ಆವಶ್ಯಕತೆಯೂ ಇದೆ—ಎಂಬುದಾಗಿ ನಮ್ಮ ಋಷಿ-ಮುನಿಗಳು ಹೇಳಿದಾರೆ. ಅಂತಲೆ ಪಾತಂಜಲ ಯೋಗದರ್ಶನದಲ್ಲಿ ಯೋಗಾಭ್ಯಾಸಮಾಡುವವರಿಗೆ, ಆತ್ಮದರ್ಶನವನ್ನು ಅಪೇಕ್ಷಿಸುವವರಿಗೆ ಯಮ-ನಿಯಮದ ಪಾಲನೆ ಮಾಡುವುದನ್ನೇ ಮೊದಲನೆಯ ಪಾಠವಾಗಿ ತಿಳಿಸಿದಾರೆ. ಸಂಯಮದ ಹೊರತು ನನಗಾಗಲಿ, ನಿಮಗಾಗಲಿ, ಯಾರಿಗೇ ಆಗಲಿ ಬೇರೆ ಮಾರ್ಗವೇ ಇಲ್ಲ. ಟಾಲ್‌ಸ್ಟಾಯ್ ಅವರು ತಮ್ಮ ದೀರ್ಘ ಜೀವನದಲ್ಲಿ ಸಂಯಮಿಯಾಗಿದ್ದುಕೊಂಡು, ಇದನ್ನೇ

ತಿಳಿಸಿದಾರೆ. ನನ್ನ ಇಚ್ಛೆ, ಪರಮಾತ್ಮನಲ್ಲಿ ನನ್ನ ಪ್ರಾರ್ಥನೆ ಇದುವೆ: ಕಣ್ಣೆದಿರುಗಿರುವ ದೀಪವನ್ನು ನೋಡುವಷ್ಟೇ ಸ್ಪಷ್ಟವಾಗಿ ಈ ವಸ್ತುವನ್ನು ನಾವು ನೋಡುವಂತಾಗಲಿ ; ಎಲ್ಲರೂ ಒಟ್ಟಿಗೆ ಸೇರಿರುವ ಈ ಸಂದರ್ಭದಲ್ಲಿ, ಟಾಲ್‌ಸ್ಟಾಯ್ ಅವರ ಜೀವನದಿಂದ ಸಂಯಮದ ಪಾಠ ಕಲಿಯುವ ಸಂಕಲ್ಪ ತೆಗೆದುಕೊಂಡು, ಚದುರೋಣ.

ಸತ್ಯದ ಆರಾಧನೆಯನ್ನು ಬಿಡುವುದಿಲ್ಲವೆಂದು ನಿಶ್ಚಯಿಸಿರಿ, ಪ್ರಪಂಚದಲ್ಲಿ ಸತ್ಯದ ಸಿದ್ಧಿಗೆ ನಿಜವಾದ ಅಹಿಂಸಾ ಧರ್ಮಾಚರಣೆಯೇ ಸಾಧನ. ಅಹಿಂಸೆಯೆಂದರೆ ಪ್ರೇಮದ ಸಾಗರ. ಅದರಲ್ಲಿ ನಾವು ಮಿಂದೆವಾದರೆ, ಇಡೀ ಪ್ರಪಂಚವನ್ನು ಅದರಲ್ಲಿ ವಿಲೀನಗೊಳಿಸುವಷ್ಟು ಔದಾರ್ಯ ನಮ್ಮಲ್ಲಿ ಉಂಟಾಗುವುದು. ಇದು ಕಠಿಣವಾದರೂ, ಸಾಧ್ಯವಾದ ಕೆಲಸ. ಅಂತಲೆ ನಾವು ಪ್ರಾರಂಭದಲ್ಲಿ ಹೀಗೆ ಪ್ರಾರ್ಥನೆ ಮಾಡಿದೆವು—ಶಂಕರನಾಗಲಿ, ವಿಷ್ಣುವಾಗಿರಲಿ, ಬ್ರಹ್ಮನಾಗಿರಲಿ, ಇಂದ್ರನಾಗಿರಲಿ, ಬುದ್ಧನಾಗಿರಲಿ, ಸಿದ್ಧನಾಗಿರಲಿ—ಯಾವನು ರಾಗ-ದ್ವೇಷ ರಹಿತನಾಗಿರುವನೋ, ಕಾಮವನ್ನು ಜಯಿಸಿರುವನೋ, ಅಹಿಂಸಾ-ಪ್ರೇಮದ ಪ್ರತಿಮೆಯಾಗಿರುವನೋ ಆತನ ಮುಂದೆಯೇ ನಾವು ತಲೆ ಬಗ್ಗಿಸಿಯೇವು. ಕುಂಟು ಪ್ರಾಣಿಗಳನ್ನು ಕೊಲ್ಲದಿರುವುದರಲ್ಲಿಯೇ ಅಹಿಂಸೆ ಮುಕ್ತಾಯವಾಗದು. ಅದರೂ ಧರ್ಮವೆನಿಸೀತು ; ಆದರೆ ಪ್ರೇಮ ಅದಕ್ಕಿಂತಲೂ ಬಹಳ ಮುಂದೆ ಸಾಗಿದೆ. ಅದರ ದರ್ಶನ ಯಾರಿಗೆ ಆಗಿಲ್ಲವೋ ಅವರು ಕುಂಟು ಪ್ರಾಣಿಗಳನ್ನು ರಕ್ಷಿಸಿದ ಮಾತ್ರಕ್ಕೆ ಆಗುವುದೇನು, ಹೋಗುವುದೇನು ? ಭಗವಂತನ ಆಸ್ಥಾನದಲ್ಲಿ ಅದಕ್ಕೆ ಬೆಲೆ ಬಹಳ ಕಡಿಮೆ. ಮೂರನೆಯ ಮಾತು, 'ಬ್ರೆಡ್ ಲೇಬರ್'—ಯಜ್ಞ. ಶರೀರವನ್ನು ದಂಡಿಸಿ, ಪರಿಶ್ರಮಮಾಡಿದರೆಯೇ ನಮಗೆ ಉಣುವ ಅಧಿಕಾರ. ಪಾರಮಾರ್ಥಿಕ ದೃಷ್ಟಿಯಿಂದ ಮಾಡಿದ ಕಾರ್ಯವೇ ಯಜ್ಞ. ಪರಿಶ್ರಮ ಮಾಡಿದರೂ, ಸೇವೆಯ ಉದ್ದೇಶದಿಂದಲೇ ಜೀವಿಸಬೇಕು. ಲಂಪಟರಾಗಿರುವುದು, ಪ್ರಪಂಚದ ಭೋಗಗಳನ್ನು ಉಪಭೋಗಿಸುವುದು—ಅಷ್ಟೇ ಬಾಳುವೆಯಲ್ಲ. ಒಬ್ಬ ವ್ಯಾಯಾಮ ಪಟುವಾದ ತರುಣ, ಎಂಟು ಘಂಟೆ ಕಸರತ್ತುಮಾಡಿದರೆ, ಅದು 'ಬ್ರೆಡ್ ಲೇಬರ್' ಎನಿಸಿಕೊಳ್ಳುವುದಿಲ್ಲ. ಕಸರತ್ತು ಮಾಡುವುದನ್ನು, ಶರೀರ ಬಲಪಡಿಸಿಕೊಳ್ಳುವುದನ್ನು

ನಾನು ಉಪೇಕ್ಷಿಸುವುದಿಲ್ಲ. ಆದರೆ, ಟಾಲ್‌ಸ್ಟಾಯ್ ಹೇಳಿರುವ, ಗೀತೆಯ ಮೂರನೆಯ ಅಧ್ಯಾಯದಲ್ಲಿ ತಿಳಿಸಿರುವ ಯಜ್ಞ ಇದಲ್ಲ. ಜೀವನ ಇರುವುದು ಯಜ್ಞದ ಸಲುವಾಗಿ, ಸೇವೆಯ ಸಲುವಾಗಿ, ಈ ಭಾವನೆಯುಳ್ಳವನು ಭೋಗವನ್ನು ಕಡಿಮೆಮಾಡುತ್ತ ಹೋಗುವನು. ಈ ಆದರ್ಶ ಸಾಧನೆಯಲ್ಲಿಯೇ ಪುರುಷಾರ್ಥವಿದೆ. ಯಾರೂ ಆ ವಸ್ತುವನ್ನೂ ಪೂರ್ಣತಃ ಪ್ರಾಪ್ತಿಸಿಕೊಳ್ಳದೆ ಇರಬಹುದಾದರೂ ಅದು ದೂರ ದೂರವೇ ಸರಿಯುತ್ತಿರಬಹುದಾದರೂ, ಫರಹಾದನು ಶೀರಿಯ ಸಲುವಾಗಿ ಕಲ್ಲು ಒಡೆದಂತೆ, ನಾವೂ ಕಲ್ಲು ಒಡೆಯೋಣ. ಅಹಿಂಸೆಯೇ ನಮ್ಮ 'ಶೀರಿ'. ಅದರಲ್ಲಿ ನಮ್ಮ ಸ್ವರಾಜ್ಯವಂತೂ ಸೇರಿಯೇ ಇದೆ. ಜತೆಗೆ ಸರ್ವಸ್ವವೂ ಅದರಲ್ಲಿ ಅಡಗಿದೆ.*೧೮೬

ಟಾಲ್‌ಸ್ಟಾಯ್ ದೊಡ್ಡ ಯೋಧರಾಗಿದ್ದರು. ಆದರೆ ಯುದ್ಧ ಒಳ್ಳೆಯದಲ್ಲವೆಂಬ ಅರಿವು ಅವರಿಗೆ ಆದಾಗ, ಅದನ್ನು (ಯುದ್ಧ) ನಿರ್ನಾಮ ಮಾಡಲು ಪ್ರಯತ್ನ ಮಾಡುತ್ತ ಮಾಡುತ್ತಲೆ ಅಸು ನೀಗಿದರು. ಅವರು ಹೀಗೆ ಹೇಳಿದ್ದಾರೆ—"ಪ್ರಪಂಚದಲ್ಲಿ ಎಲ್ಲಕ್ಕಿಂತ ದೊಡ್ಡ ಶಕ್ತಿಯೆಂದರೆ, 'ಜನಮತ'. ಅದು ಸತ್ಯ ಹಾಗೂ ಅಹಿಂಸೆಯಿಂದಲೇ ಹುಟ್ಟುತ್ತದೆ.೧೮೭

ಜಾನ್ ರಸ್ಕಿನ್

ರಸ್ಕಿನ್ನರ "ಫೋರ್ಸ್ ಕ್ಲೇವಿಜೇರಾ" ಎಂಬ ಪುಸ್ತಕವನ್ನು ಬಹಳ ಆಸಕ್ತಿಯಿಂದ ಓದ ತೊಡಗಿ, ಹೀಗೆ ಹೇಳಿದರು– "ಈ ಪುಸ್ತಕವನ್ನು ಎಷ್ಟು ಬಾರಿ ಓದಿದರೂ, ಬೇಸರವೇ ಬರುವುದಿಲ್ಲ. ಇದರಲ್ಲಿ ಹೊಸಹೊಸ ವಿಷಯಗಳು ಹೊಳೆಯುತ್ತವೆ."

---

*ಮಹರ್ಷಿ ಟಾಲ್‌ಸ್ಟಾಯ್ ಅವರ ಜನ್ಮ-ಶತಾಬ್ದಿಯ ಸಂದರ್ಭದಲ್ಲಿ ಸತ್ಯಾಗ್ರಹಾಶ್ರಮದಲ್ಲಿ ಮಾಡಿದ ಭಾಷಣದ ಸಾರ.

ಶಿಕ್ಷಣದ ಆಧಾರದ ಬಗೆಗೆ ಹಲವು ವಿಚಾರ ಬಹಳ ಚೆಂದ ಕಂಡುದರಿಂದ ಆ ವಿಷಯದಲ್ಲಿ ಒಂದು ಸಣ್ಣ ಲೇಖನವನ್ನು ಬರೆದು ಆಶ್ರಮಕ್ಕೆ ಕಳುಹಿಸಿದರು. ನಾನು (ಮಹಾದೇವ ದೇಸಾಯಿ) ರಸ್ಕಿನ್ ಹಾಗೂ ಟಾಲ್‌ಸ್ಟಾಯ್ ಅವರ ನಡುವೆ ಒಂದು ಸಾಮ್ಯವನ್ನು ಸೂಚಿಸಿದೆ-ಟಾಲ್‌ಸ್ಟಾಯ್ ಅವರು ತಮ್ಮ ಕಲಾನಿಷ್ಠ ಜೀವನವನ್ನು ಬಿಟ್ಟು, ಸೇವಾನಿಷ್ಠ ಜೀವನವನ್ನು ಆರಂಭಿಸಿದರು. ಕಲಾ ಸಂಬಂಧದ ಪುಸ್ತಕ ಬರೆಯುವುದನ್ನು ಪೂರ್ಣವಾಗಿ ತೊರೆದು, ಮನೆವಾರ್ತೆಗೆ ಸಂಬಂಧಿಸಿದ ಪುಸ್ತಕಗಳನ್ನೂ ಕಥೆಗಳನ್ನು ಬರೆಯ ತೊಡಗಿದರು. ಅದರಿಂದ ಜನತೆಯ ಉನ್ನತಿ ಆಯಿತು. ರಸ್ಕಿನ್ನರ ಜೀವನದ ಮೊದಲ ಭಾಗವೂ ಕಲಾನಿಷ್ಠವಾದುದೇ ಆಗಿತ್ತು. ಆ 'ಕಲಾನಿಷ್ಠೆಯ ಕಾಲದಲ್ಲಿ 'ಪೈಂಟರ್ಸ್' 'ಸ್ಟೋನ್ಸ್ ಆಫ್ ವೆನಿಸ್' ಮೊದಲಾದ ಪುಸ್ತಕಗಳನ್ನು ಬರೆದರು. ಅದರ ತರುವಾಯ ಅವರಿಗೆ ಹೀಗೆ ಅನಿಸಿತು— "ಸೌಂದರ್ಯೋಪಾಸನೆಯೇನೋ ಒಳ್ಳೆಯದೆ. ಆದರೆ ಅಕ್ಕಪಕ್ಕದಲ್ಲಿ ದುಃಖ, ದಾರಿದ್ರ್ಯ, ಜಗಳ ಆವರಿಸಿದಾಗ ಸೌಂದರ್ಯದ ಆನಂದವನ್ನು ಸವಿಯುವುದು ಹೇಗೆ?" ಆದಕಾರಣ, ಅವರು ತಮ್ಮ ಲೇಖಣಿಯನ್ನು ಕಣ್ಣೀರು ಹಾಗೂ ರಕ್ತದಲ್ಲಿ ತೋಯಿಸಿ, "ಅನ್ ಟು ದಿಸ್ ಲಾಸ್ಟ್"— (ಸರ್ವೋದಯ) ಎಂಬ ಪುಸ್ತಕವನ್ನು ಬರೆದರು.

ಬಾಪೂ ಹೇಳಿದರು : ಈ ತುಲನೆ ಒಂದು ವಿಶಿಷ್ಟ ಪರಿಮಿತಿಯ ನಂತರ ಅನ್ವಯವಾಗುವುದಿಲ್ಲ. ಏಕೆಂದರೆ, ಟಾಲ್‌ಸ್ಟಾಯ್ ತಮ್ಮ ಕಲಾ ಜೀವನವನ್ನು ಅಂದರೆ ತನ್ನ ಹಿಂದಿನ ಜೀವನವನ್ನು ನಿಂದಿಸಿದರು; ನಿರಾಕರಿಸಿದರು. ರಸ್ಕಿನ್ 'ಅನ್ ಟು ದಿಸ್ ಲಾಸ್ಟ' ಹಾಗೂ 'ಫೋರ್ಸ್' ಪುಸ್ತಕಗಳನ್ನು ಬರೆದು ತಮ್ಮ ಕಲಾ ಜೀವನಕ್ಕೆ ಕಲಶವಿಟ್ಟರು.

ನಾನು (ಮಹಾದೇವ ದೇಸಾಯಿ) ಹೇಳಿದೆ-ಟಾಲ್‌ಸ್ಟಾಯ್ ಅವರು ಕ್ರಾಂತಿಕಾರಿಗಳಾಗಿದ್ದುದರಿಂದ ತಮ್ಮ ಜೀವನದಲ್ಲಿ ಪರಿವರ್ತನೆ ಮಾಡಿಕೊಂಡರು. ರಸ್ಕಿನ್ ವಿಚಾರ ನೀಡಿ, ತೆಪ್ಪಗೆ ಕುಳಿತರು.

ಬಾಪೂ—ಇದು ದೊಡ್ಡ ವ್ಯತ್ಯಾಸವಲ್ಲವೇ? ಟಾಲ್‌ಸ್ಟಾಯ್ ಅವರಂಥ ಜೀವನ ಪರಿವರ್ತನೆ ರಸ್ಕಿನರಲ್ಲಿ ಕಂಡು ಬರುವುದಿಲ್ಲ.

ವಲ್ಲಭಭಾಯಿ ಹೇಳಿದರು--"ಇಂದು ವಿಲಾಯತಿಯಲ್ಲಿ ರಸ್ಕಿನ್ನನ

ಹೆಸರನ್ನು ನಿಜಕ್ಕೂ ಯಾರೂ ಹೇಳಿಕೊಳ್ಳುವುದಿಲ್ಲವಲ್ಲವೆ?"

ಬಾಪೂ- ಹೌದು. ಯಾರೂ ಅವರ ಹೆಸರು ತೆಗೆದುಕೊಳ್ಳುವುದಿಲ್ಲ. ಆದರೆ, ರಸ್ಕಿನರನ್ನು ಮರೆಯುವುದೂ ಶಕ್ಯವಿಲ್ಲ. ಅವರ ಕಾಲ ಬರುತ್ತಿದೆ. ರಸ್ಕಿನ್ನರ ಹೆಸರನ್ನು ಕೇಳದವರು, ಅವರ ಬಗೆಗೆ ಉಪೇಕ್ಷೆ ತೋರಿದವರು ಅವರ ಕಡೆಗೆ ಮುಖ ಮಾಡಬೇಕಾದ ಕಾಲ ಬರುತ್ತಿದೆ.೧೮೮

ಜಾನ್ ರಸ್ಕಿನ್ ಉತ್ತಮ ರೀತಿಯ ಲೇಖಕರು, ಅಧ್ಯಾಪಕರು ಹಾಗೂ ಧರ್ಮಜ್ಞರು. ೧೮೮೦ ರ ಸುಮಾರಿಗೆ ಅವರು ತೀರಿಕೊಂಡರು. ಅವರ ಪುಸ್ತಕವೊಂದು ನನ್ನ ಮೇಲೆ ಗಹನವಾದ ಪ್ರಭಾವ ಬೀರಿತು. ಅದರಲ್ಲಿ ಸೂಚಿಸಿದ ಮಾರ್ಗದಲ್ಲಿ ಒಂದೇ ಕ್ಷಣದಲ್ಲಿ ನಾನು ಮಹತ್ವಪೂರ್ಣ ಪರಿವರ್ತನೆ ಮಾಡಿಕೊಂಡೆ. ಈ ಮಾತು ಬಹುಮಂದಿ ಆಶ್ರಮವಾಸಿಗಳಿಗೆ ತಿಳಿದಿರಲಿಕ್ಕೆ ಸಾಕು. ಅವರು ೧೮೭೧ ರಲ್ಲಿ ಕೇವಲ ಕೂಲಿಗಾರರನ್ನು ಗಮನದಲ್ಲಿಟ್ಟುಕೊಂಡು ಒಂದು ಮಾಸ ಪತ್ರಿಕೆಯನ್ನು ಹೊರಡಿಸಲು ಆರಂಭಿಸಿದರು. ಟಾಲ್‌ಸ್ಟಾಯರ ಯಾವುದೋ ಒಂದು ಕೃತಿಯಲ್ಲಿ ಆ ಪತ್ರಿಕೆಯ ಪ್ರಶಂಸೆಯನ್ನು ನಾನು ಓದಿದ್ದೆ. ಆದರೆ, ಆ ಪತ್ರಿಕೆಯ ಸಂಚಿಕೆಗಳನ್ನು ಸಂಗ್ರಹಿಸಲು ಇನ್ನೂ ಆಗಿಲ್ಲ. ಅವರ ಪ್ರವೃತ್ತಿ ಹಾಗೂ ರಚನಾತ್ಮಕ ಕಾರ್ಯದ ವಿಷಯಕವಾದ ಒಂದು ಪುಸ್ತಕವನ್ನು ಇಲ್ಲಿ ಓದಿದ್ದೆ. ಅದರಲ್ಲೂ ಆ ಪತ್ರಿಕೆಯ ಉಲ್ಲೇಖವಿತ್ತು. ಆ ಬಗ್ಗೆ ವಿಲಾಯತಿಯಲ್ಲಿದ್ದ ರಸ್ಕಿನ್ ಶಿಷ್ಯೆಳೊಬ್ಬಳಿಗೆ ಬರೆದೆ. ಆಕೆಯೇ ಈ ಪುಸ್ತಕದ ಲೇಖಿಕೆ. ಆಕೆ ಬಡವೆ, ಪುಸ್ತಕವನ್ನು ಹೇಗೆ ಕಳುಹಿಸಿಯಾಳು? ಮೂರ್ಖತನದಿಂದ ಅಥವಾ ಶುಷ್ಕ ವಿನಯದಿಂದ ಆಶ್ರಮದಿಂದ ಪುಸ್ತಕಕ್ಕಾಗಿ ಹಣ ತೆಗೆದುಕೊಳ್ಳುವಂತೆ ನೀನು ಬರೆಯಲಿಲ್ಲ. ಆ ಒಳ್ಳೆಯ ಮಹಿಳೆ ತನಗಿಂತ ಸಮರ್ಥರಾದವರಿಗೆ ನನ್ನ ಪತ್ರವನ್ನು ಕಳುಹಿಸಿದಳು. ಅವರು 'ಸ್ಪೆಕ್ಟೇಟರ್' ಪತ್ರಿಕೆಯ ಮಾಲಿಕರು. ಅವರನ್ನು ವಿಲಾಯಿತಿಯಲ್ಲಿ ನೋಡಿಯೂ ಇದ್ದೆ. ಅವರು ಪತ್ರಗಳನ್ನು ಪುಸ್ತಕದರೂಪದಲ್ಲಿ ನಾಲ್ಕು ಭಾಗಗಳಲ್ಲಿ ಮುದ್ರಿಸಿದ್ದಾರೆ. ಅವುಗಳನ್ನು ನನಗೆ ಕಳುಹಿಸಿದರು. ಅದರಲ್ಲಿ ಮೊದಲನೆಯ ಭಾಗವನ್ನು ಈಗ ಓದುತ್ತಿರುವೆನು. ಇವರ ವಿಚಾರಗಳು ಬಹಳ ಉತ್ತಮವಾದವು; ಬಹುತೇಕ

ನಮ್ಮ ವಿಚಾರಗಳೊಡನೆ ಕೂಡಿಕೊಳ್ಳುತ್ತವೆ. ತಿಳಿಯದವರು ನೀನು ಬರೆದಿರುವುದೆಲ್ಲವನ್ನೂ ಆಶ್ರಮದಲ್ಲಿ ನಾವು ಆಚರಿಸುತ್ತಿರುವುದೆಲ್ಲವನ್ನು— ರಸ್ಕಿನರ ಕೃತಿಯಿಂದಲೇ ಕದ್ದುಕೊಂಡಿರಬೇಕು ಎಂದು ಭಾವಿಸುವ ಮಟ್ಟಿಗೆ ಪರಸ್ಪರ ವಿಚಾರ—ಸಾಮ್ಯವಿದೆ. 'ಕದ್ದುಕೊಂಡುದು' ಎಂಬ ಶಬ್ದದ ಅರ್ಥ ಆಗಿರಲೇಬೇಕು. ಯಾವ ವಿಚಾರ ಅಥವಾ ಆಚಾರವನ್ನು ಯಾರಿಂದ ತೆಗೆದುಕೊಂಡಿರುತ್ತೇವೋ ಅವರ ಹೆಸರನ್ನು ಮುಚ್ಚಿಟ್ಟು, ಇದು ನಮ್ಮದೇ ಕೃತಿ ಎಂದು ಹೇಳಿದರೆ, ಅದು ಕದಿಯಲ್ಪಟ್ಟದು' ಎನಿಸಿಕೊಳ್ಳುತ್ತದೆ.

ರಸ್ಕಿನ್ನರು ಬಹಳವಾಗಿ ಬರೆದಿದ್ದಾರೆ. ಅದರಿಂದ ಈ ಬಾರಿಗೆ ಸ್ವಲ್ಪ ಮಾತ್ರ ತಿಳಿಸುವೆ. ಅಕ್ಷರಜ್ಞಾನ ಸುತರಾಂ ಇಲ್ಲದಿರುವುದಕ್ಕಿಂತ ಸ್ವಲ್ಪ ವಾದರೂ ಇರುವುದು ಒಳಿತು ಎಂಬ ಭಾವನೆಯಲ್ಲಿ ಗಂಭೀರ ದೋಷವಿದೆ ಎಂಬುದಾಗಿ ಅವರು ಹೇಳುತ್ತಾರೆ. ಯಾವುದೆಂದು ನಿಜ ವಾದುದೊ, ಯಾವುದು ಆತ್ಮಜ್ಞಾನವನ್ನು ನೀಡುವುದೋ ಅದೇ ಶಿಕ್ಷಣ; ಅದನ್ನೇ ಪಡೆದುಕೊಳ್ಳಬೇಕು-ಎಂಬುದಾಗಿ ಅವರು ಹೇಳುತ್ತಾರೆ. ಇನ್ನೂ ಅವರು ಹೇಳುವುದೇನೆಂದರೆ, ಈ ಪ್ರಪಂಚದಲ್ಲಿ ಮನುಷ್ಯ ಮಾತ್ರರಿಗೆ ಮೂರು ವಸ್ತು ಗಳ ಹಾಗೂ ಮೂರು ಗುಣಗಳ ಆವಶ್ಯಕತೆಯಿದೆ. ಅವುಗಳನ್ನು ಗಳಿಸದವ ನಿಗೆ ಜೀವನದ ಮಂತ್ರವೇ ತಿಳಿಯದು. ಆದಕಾರಣ, ಈ ಆರು ವಿಷಯ ಗಳು ಶಿಕ್ಷಣದ ಆಧಾರವಾಗಬೇಕು. ಹೀಗೆ ಮನುಷ್ಯ ಮಾತ್ರನಿಗೆ ಆತ ಬಾಲಕನಾಗಿರಲಿ; ಬಾಲಿಕೆಯಾಗಿರಲಿ ಬಾಲ್ಯದಿಂದಲೆ ಆರು ವಿಷಯಗಳು ತಿಳಿದಿರಬೇಕು : ಸ್ವಚ್ಛ ಗಾಳಿ, ಸ್ವಚ್ಛ ನೀರು ಹಾಗು ಸ್ವಚ್ಛ ಮಣ್ಣು ಇವು ಗಳ ಲಕ್ಷಣವೇನು, ಅವುಗಳನ್ನು ಇಟ್ಟುಕೊಳ್ಳುವುದು, ಉಪಯೋಗಿಸುವುದು ಹೇಗೆ—?....ಹಾಗೆಯೇ ಮೂರುಗುಣಗಳಲ್ಲಿ ಗುಣಜ್ಞತೆ, ಆಶೆ ಹಾಗೂ ಪ್ರೇಮಗಳನ್ನು ಸೇರಿಸಿದ್ದಾರೆ. ಸತ್ಯ ಮೊದಲಾದ ಗುಣಗಳಲ್ಲಿ ಗೌರವವಿಲ್ಲದ, ಒಳಿತನ್ನು ತಿಳಿದುಕೊಳ್ಳಲಾರದ, ಹೆಮ್ಮೆಯಿಂದ ಮೆರೆಯುವವರಿಗೆ ಆತ್ಮಾನಂದ ದೊರೆಯದು. ಹಾಗೆಯೇ ಯಾರಲ್ಲಿ ಆಶೀರ್ವಾದ ಇಲ್ಲವೋ ಅಂದರೆ ಭಗವಂತನ ನ್ಯಾಯದಲ್ಲಿ ಯಾರಿಗೆ ಸಂಶಯವಿದೆಯೋ, ಅವರ ಹೃದಯ ಎಂದಿಗೂ ಪ್ರಫುಲ್ಲಿತವಾಗಿರದು; ಹಾಗೂ ಯಾರಲ್ಲಿ ಪ್ರೇಮ ಅಂದರೆ ಅಹಿಂಸೆ ಇಲ್ಲವೋ, ಯಾರು ಜೀವಮಾತ್ರದ್ದನ್ನು ತನ್ನ

ಕುಟುಂಬದವರೆಂದು ಭಾವಿಸುವುದಿಲ್ಲವೋ ಅವರಿಗೆ ಜೀವಿಸುವ ಮಂತ್ರ ಎಂದಿಗೂ ಸಿದ್ಧಿಸದು.

ಈ ವಿಷಯದಲ್ಲಿ ರಸ್ಕಿನ್ನರು ತಮ್ಮ ಚಮತ್ಕಾರವಾದ ಭಾಷೆಯಲ್ಲಿ ವಿಸ್ತಾರವಾಗಿ ಬರೆದಿದ್ದಾರೆ. ಅದನ್ನು ಬೇರೊಂದು ವೇಳೆ ಸಮಾಜ ಅರಿತುಕೊಳ್ಳಲು ಯೋಗ್ಯವಾದ ರೀತಿಯಲ್ಲಿ, ತಿಳಿಸಬಲ್ಲೆನಾದರೂ ಒಳಿತು. ಇಂದು ಇಷ್ಟರಿಂದಲೇ ತೃಪ್ತಿಪಟ್ಟುಕೊಳ್ಳುವೆನು. ಇದರ ಜತೆಗೆ ಇನ್ನೂ ಒಂದು ಮಾತನ್ನು ಹೇಳಿಬಿಡುವೆನು-ಯಾವುದನ್ನು ನಾವು ಗ್ರಾಮೀಣ ಭಾಷೆಯಲ್ಲಿ ವಿಚಾರ ಮಾಡುತ್ತಿರುವೆವೋ ಯಾವುದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿರುವೆವೋ, ಹೆಚ್ಚುಕಡಿಮೆ ಅದೆಲ್ಲವನ್ನು ರಸ್ಕಿನ್ನರು ತಮ್ಮ ಪ್ರೌಢ ಹಾಗೂ ವಿಕಸಿತವಾದ ಭಾಷೆಯಲ್ಲಿ ಇಂಗ್ಲೀಷ್ ಜನರಿಗೆ ಅರ್ಥವಾಗುವ ರೀತಿಯಲ್ಲಿ ಮಂಡಿಸಿದ್ದಾರೆ. ಇಲ್ಲಿ ಎರಡು ಭಾಷೆಗಳ ತುಲನೆ ಮಾಡಿಲ್ಲ; ಇಬ್ಬರು ಭಾಷಾ ಶಾಸ್ತ್ರಿಗಳ ತುಲನೆ ಮಾಡಿದ್ದೇನೆ. ರಸ್ಕಿನ್ನರ ಭಾಷಾ ಶಾಸ್ತ್ರದ ಜ್ಞಾನಕ್ಕೂ ನನ್ನಂಥ ಮನುಷ್ಯನ ಭಾಷಾ-ಜ್ಞಾನಕ್ಕೂ ಎಣೆಯೆಲ್ಲಿ? ಆದರೆ, ಭಾಷಾ—ಮಾತ್ರದ ಪ್ರೇಮವೇ ವ್ಯಾಪಕವಾಗುವಂಥ ಕಾಲವೂ ಬರುವುದು. ಆಗ ರಸ್ಕಿನರಂಥ ಭಾಷಾ—ತಪಸ್ವಿಗಳು ಹುಟ್ಟಿಕೊಂಡು ರಸ್ಕಿನ್ನರು ಬರೆದಿರುವ ಪ್ರಭಾವಶಾಲಿಯಾದ ಇಂಗ್ಲೀಷಿನಷ್ಟೇ ಪ್ರಭಾವಶಾಲಿಯಾದ ಗುರುರಾತಿಯಲ್ಲಿ ಬರೆಯುವರು. ೧೪೯

ಲೂಯೀ ಮೌಂಟ್‌ಬೇಟನ್

ಮೌಂಟ್‌ಬೇಟನ್ ಗರ್ವನರ್ ಜನರಲ್ ಆಗುವರೆಂದರೆ, ಹಿಂದೂಸ್ಥಾನದ ಸೇವಕರು ಅಥವಾ ನೌಕರರು ಆಗುತ್ತಾರೆಂದೇ ಅರ್ಥ. ಮಕ್ಕಳನ್ನು ಪುಸಲಾಯಿಸುವ ಹಾಗೆ ಇದೂ ಒಂದು ಹೂಟ; ಇಂಗ್ಲೆಂಡಿನ ರಾಜಮನೆತನಕ್ಕೆ ಸೇರಿದ ಮೌಂಟ್‌ಬೇಟನ್ ನಿಮ್ಮ ನೌಕರರಾದಾರೆಯೆ? — ಇದು ಬರಿಯ ಮೋಸ—ಎಂಬುದಾಗಿ ನೀವು ಹೇಳಬಹುದು. ನಿಮ್ಮನ್ನು ಮೋಸಪಡಿಸಿ ಮೌಂಟ್ ಬೇಟನರಿಂದ ನಾನು ಇನಾಮು ಪಡೆಯಬೇಕಾದು

ದೇನೂ ಇಲ್ಲ. ಇಂದಿನವರೆಗೆ ಅವರೊಡನೆ ಹೋರಾಟ ನಡೆಸುತ್ತಲೇ ಬಂದಿರುವ ನಾನು ಅವರನ್ನು ಪುಸಲಾಯಿಸುವುದರಲ್ಲಿ ತೊಡಗಿದಾನೆಂದು ನೀವು ಹೇಳೀರಿ. ಜವಾಹರಲಾಲರು, ಸರದಾರರು, ರಾಜಾಜಿ ಅಂಥವರು ತಮ್ಮ ಕೀರ್ತಿಯನ್ನೇ ಕಳೆದುಕೊಂಡು, ಅವರ ಭಟ್ಟಂಗಿಗಳಾಗುವಷ್ಟು ಹುಚ್ಚರಾಗಿದ್ದಾರೆಂದು ಆ ಮಾತಿನ ಅರ್ಥ. ನಾನು ಆ ಮಾತನ್ನು ಒಪ್ಪುವುದಿಲ್ಲ. ನಾನು ಅಪೇಕ್ಷಿಸಿದ್ದುದು ಆಗಲಿಲ್ಲವೆಂದು ಎಷ್ಟೋ ಬಾರಿ ಹೇಳಿದೇನೆ. ಆದರೆ, ನಾನು ಪ್ರತಿಯೊಂದು ಮಾತಿಗೂ ಸರಳವಾದ ಅರ್ಥವನ್ನೇ ಮಾಡುವವ. ನಾವು ಮಾಡುವುದರಿಂದ ತಾನೆ ಮೌಂಟ್‌ಬೇಟನ್ ಗವರ್ನರ್ ಜನರಲ್ ಆಗುವುದು? ನಮಗೆ ಇಚ್ಛೆಯಿಲ್ಲದಿದ್ದರೆ, ಅವರು ಆಗುವ ಹಾಗೆಯೇ ಇಲ್ಲ. ಪಾಕಿಸ್ಥಾನವನ್ನು ಗಳಿಸಿದವರು ತಾವೇ ಎಂಬುದನ್ನು ಇಡೀ ಜಗತ್ತಿಗೆ ತಿಳಿಯಪಡಿಸುವ ಸಲುವಾಗಿ ತಾವು ಗವರ್ನರ್ ಜನರಲ್ ಆಗಬೇಕೆಂಬುದು ಜಿನ್ನಾ ಸಾಹೇಬರು ಯೋಚಿಸಿರಬಹುದು. ಆ ಬಗೆಗೆ ನಾವು ಹೊಟ್ಟೆಕಿಚ್ಚು ಪಡುವ ಅಥವಾ ಕೋಪಮಾಡಿಕೊಳ್ಳುವ ಕಾರಣವೇನಿದೆ? ಅವರು ಗವರ್ನರ್ ಜನರಲ್ ಆಗಿ, 'ಇಸ್ಲಾಮ್' ಎಂಬುದು ಏನು ಎಂಬುದನ್ನು ಇಡೀ ಪ್ರಪಂಚಕ್ಕೆ ತೋರಿಕೊಡಬೇಕಾಗಿದೆ. ಅವರು ಪಾಕಿಸ್ಥಾನದ ಸೇವಕರಾಗುವರೋ ಬಾದಶಾಹರಾಗುವರೋ ಎಂಬುದನ್ನು ಕಾದುನೋಡಬೇಕಾಗಿದೆ........

ಹಿಂದೂಸ್ಥಾನ-ಪಾಕಿಸ್ಥಾನಗಳೆರಡಕ್ಕೂ ಒಬ್ಬರೇ ಗವರ್ನರ್ ಜನರಲ್ಲರನ್ನು ನೇಮಿಸಿಕೊಳ್ಳಬೇಕೆಂದು ತೀರ್ಮಾನವಾಗಿತ್ತೆಂಬುದಾಗಿ ನನಗೆ ಪತ್ರಿಕೆಗಳ ಮೂಲಕ ತಿಳಿಯಿತು. ಆದರೆ, ಹಿಂದಿನಿಂದ ಜಿನ್ನಾ ಸಾಹೇಬರು ಆ ತೀರ್ಮಾನವನ್ನು ಅಲ್ಲಗಳೆದರು. ಇನ್ನು ಅವರು ಪಾಕಿಸ್ಥಾನದ ಗವರ್ನರ್ ಜನರಲ್ ಆಗುವುದನ್ನು ತಪ್ಪಿಸುವವರಾರು? ನನ್ನ ಅಭಿಪ್ರಾಯದಲ್ಲಿ ಅವರು ಮಾಡಿದುದು ಸರಿಯಲ್ಲ. ಮೊದಲು ಒಪ್ಪಿಕೊಂಡಿದ್ದರೆ, ಮೌಂಟ್‌ಬೇಟನ್ ಗವರ್ನರ್ ಜನರಲ್ ಆಗಲು ಅವಕಾಶ ಕೊಡಬಹುದಾಗಿತ್ತು. ಹಿಂದಿನಿಂದ ತೊಂದರೆ ಆಗಿದ್ದರೆ, ತೆಗೆಯಲೂ ಬಹುದಿತ್ತು. ಅಂತೂ ಈಗ ಜಿನ್ನಾ ಸಾಹೇಬರ ವತಿಯಿಂದ 'ಇಸ್ಲಾಮ್' ದ ಪರೀಕ್ಷೆ ಆಗಲಿದೆ. ಇಡೀ ಜಗತ್ತಿನ ಮುಂದೆ ಅವರು ಪಾಕೀಸ್ಥಾನದ ಗವರ್ನರ್ ಜನರಲ್ ಆಗುತ್ತಿ

ದಾರೆ. ಆದಕಾರಣ ಪಾಕೀಸ್ತಾನದ ಸುಗುಣಗಳೇ ಕಾಣಿಸಿಕೊಳ್ಳಬೇಕು. ಕಾಂಗ್ರೆಸ್ ಅಂತೂ ಸದಾ ಆಂಗ್ಲೇಯರೊಡನೆ ಹೋರಾಟ ನಡೆಸುತ್ತ ಬಂದಿದೆ. ಜವಾಹರಲಾಲರು ಸೀದಾ ಮನುಷ್ಯರು. ಆದರೆ ಸರದಾರರು ಸದಾ ಹೋರಾಡುವವರು. ಇವರನ್ನು ನೀವು ನಂಬಿಬಿಡುತ್ತೀರಿ ಎಂಬು ದಾಗಿ ಅವರು ನನ್ನೊಡನೆಯೇ ಜಗಳ ಆಡುತ್ತಿದ್ದರು. ಅಂಥವರೇ ಇವರ ಬಲೆಯಲ್ಲಿ ಬಿದ್ದರೆಂದರೆ, ನಮ್ಮ ನಿಮ್ಮ ಮಾತೇನು? ವೈಸರಾಯರು ಗವರ್ನರ್ ಜನರಲ್ ಆಗಿರಬಹುದು ಎಂದು ಅವರೇ ಒಪ್ಪುವಾಗ ನಾವು ಒಪ್ಪುವುದಕ್ಕೆ ಸಂಕೋಚವೇಕೆ? ಅವರು ಹಿಂದೂಸ್ಥಾನದ ಸೇವೆಮಾಡಲು ಗವರ್ನರ್ ಜನರಲ್ ಆಗುವರೋ ಅಥವಾ ಮೋಸಮಾಡುವುದಕ್ಕಾಗಿ ಆಗು ವರೋ ಎಂಬುದನ್ನು ನೋಡಬಹುದಲ್ಲ? ಅದರಿಂದ ಒಂದು ಹೊಸ ಅನು ಭವವೇ ದೊರೆಯುವುದು. ಆದಕಾರಣ ಇದರಲ್ಲಿ ದೂರದರ್ಶಿತ್ವವಿದೆ. ಇದರಲ್ಲಿ ನಾವು ಕಳೆದುಕೊಳ್ಳುವುದಂತೂ ಏನೂ ಇಲ್ಲ. ಕೊನೆಗೆ ಅವರು ಹೇಳಿದ ಮೇಲೆ ನಾವು ಡೊಮಿನಿಯನ್ ಸ್ಟೇಟಸ್ಸನ್ನೂ ಒಪ್ಪಿಕೊಂಡಿದೇವೆ. ಅವರು ಬಹಳ ದೊಡ್ಡ ಅಡ್ಮಿರಲ್; ಮಹಾಯೋಧ ಅವರನ್ನು ಇಟ್ಟು ಕೊಳ್ಳುವುದೇ ಲೇಸು. ಕೆಡುಕೇನಾದರೂ ಆದರೆ ಹೋರಾಡುವುದು ಇದ್ದೇ ಇದೆ.

* * * *

ನಾನು ವೈಸರಾಯರನ್ನು ಭೆಟ್ಟಿಯಾಗಲು ಹೋಗಿದ್ದಾಗ, ಎಲಿಜ ಬೆತ್‌ಳೊಡನೆ ಲಗ್ನ ನಿಶ್ಚಯವಾಗಿರುವ ಹುಡುಗ ನನ್ನ ಹುಡುಗನ ಹಾಗೆಯೇ ಇರುವುದಾಗಿಯೂ, ನಾನು ಅವರಿಗೆ ಆಶೀರ್ವಾದ ಪತ್ರವೊಂದನ್ನು ಬರೆಯ ಬೇಕೆಂದೂ ಹೇಳಿದರು. ಮೊನ್ನೆ ವೈಸ್‌ರಾಯರ ಮಗಳು ನನ್ನ ಕಡೆಗೆ ಬಂದಾಗ ಒಂದು ಆಶೀರ್ವಾದ ಪತ್ರ ಬರೆದು ಆಕೆಯ ಕೈಯಲ್ಲಿ ಕಳುಹಿಸಿ ಕೊಟ್ಟೆ. ಎಷ್ಟು ಸರಳ ಹೃದಯದ ಹುಡುಗಿ ಆಕೆ! ಪ್ರಾರ್ಥನೆಯ ಕಾಲ ದಲ್ಲಿ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಹೇಳಿದರೆ, ಹಾಗೆ ಮಾಡದೆ ನಮ್ಮ ಜತೆಯಲ್ಲಿ ಜಮಖಾನೆಯ ಮೇಲೆಯೇ ಕುಳಿತಳು. ಅಲ್ಲದೆ, ಚಕ್ರವರ್ತಿ ಗಳಿಗೆ ಪುತ್ರ ಸಂತಾನ ಇಲ್ಲದಿರುವುದರಿಂದ, ಲಗ್ನ ನಿಶ್ಚಯವಾಗಿರುವ ಹುಡುಗಿಯೇ ರಾಣಿಯಾಗುವಳೆಂದು ಸಂಜೆ ಅಮೃತಕೌರರು ಹೇಳಿದರು.

ವೈಸ್‌ರಾಯರಿಗೂ ಗಂಡು ಮಕ್ಕಳಿಲ್ಲ. ವೈಸರಾಯರು ಕೆಟ್ಟವರಾಗಿದ್ದರೆ, ನಾನು ಆಶೀರ್ವಾದ ಪತ್ರ ಬರೆದು ಕಳುಹಿಸುತ್ತಿದ್ದೆನೆ? ಅವರನ್ನು ನಾನು ಕೆಟ್ಟವರೆಂದು ಭಾವಿಸುವುದಿಲ್ಲ. ಅವರಿಗೆ ಬದಲು ಜವಾಹರಲಾಲರು ಅಥವಾ ಸರದಾರರು ಗವರ್ನರ್ ಜನರಲ್ ಅವರ ಕೈಯಲ್ಲಿ ಯಾವುದೇ ರೀತಿಯ ಅಧಿಕಾರವಿರುವುದಿಲ್ಲ. ಜವಾಹರಲಾಲರು ಮತ್ತು ಅವರು ಮಂತ್ರಿಮಂಡಲ ಹೇಳಿದುದನ್ನೇ ಅವರು ಮಾಡಬೇಕಾಗುವುದು. ಕೇವಲ ಸಹಿ ಹಾಕುವುದೇ ಅವರ ಕೆಲಸ.

ಆದರೆ, ಮೌಂಟ್‌ಬೇಟನರು ದೊಡ್ಡ ಮನುಷ್ಯರೇ ಆದರೂ ಆಂಗ್ಲೇಯರು 'ಕಿಡಿಕೇಡಿ' ತನವನ್ನೇ ಮಾಡುವರು ಎಂಬ ಭಾವನೆ ನಮ್ಮಲ್ಲಿ ಬೇರೂರಿದೆ. ಆದಕಾರಣ, ಮೌಂಟ್‌ಬೇಟನರು ತಮ್ಮ ಸೌಜನ್ಯ ಹಾಗೂ ನ್ಯಾಯ-ನಿಷ್ಠೆಯನ್ನು ಸಿದ್ಧಪಡಿಸಬೇಕಾಗುವುದು. ಅವರು ನ್ಯಾಯಮಾಡಲಿಕ್ಕಾಗಿಯೇ ಇಲ್ಲಿಗೆ ಬಂದಿದಾರೆಂಬ ವಿಶ್ವಾಸ ನನಗಿದೆ. ೧೯೦

ಲೇಡಿ ಮೌಂಟ್‌ಬೇಟನ್

ಸತಿ ಮೌಂಟ್‌ಬೇಟನ್ ದಯೆಯ ದೇವಿಯೇ ಆಗಿದಾರೆ. ಆಕೆ ಸದಾ ಈ ಉಪಖಂಡದ ಎರಡೂ ಭಾಗಗಳಲ್ಲಿ ಪ್ರವಾಸ ಮಾಡುತ್ತಾರೆ; ಬೇರೆ ಬೇರೆ ಶಿಬಿರಗಳಲ್ಲಿ ನಿರಾಶ್ರಿತರನ್ನು ಭೆಟ್ಟಿಯಾಗುತ್ತಾರೆ; ರೋಗಿಗಳನ್ನು, ದುಃಖಿತರನ್ನು ವಿಚಾರಿಸಿಕೊಳ್ಳುತ್ತಾರೆ. ಹೀಗೆ ಮಾಡಿ, ಅವರಿಗೆ ಎಷ್ಟು ಧೈರ್ಯ ನೀಡಲು ಸಾಧ್ಯವೋ ಅಷ್ಟನ್ನೂ ನೀಡುತ್ತಾರೆ. ೧೯೧

ರಷ್‌ಬ್ರೂಕ್ ವಿಲಿಯಮ್ಸ್

ಓರ್ವ ಪತ್ರಲೇಖಕರು "ಬಾಂಬೆ ಕ್ರಾನಿಕಲ್" ಪತ್ರಿಕೆಯಿಂದ ಈ 'ಕಂಸ' ವನ್ನು ಕತ್ತರಿಸಿ ಕಳುಹಿಸಿ ಕೊಟ್ಟಿದಾರೆ :—

ಶ್ರೀ ರಷ್‌ಬ್ರೂಕ್ ವಿಲಿಯಮ್ಸ್ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಒಂದು ಲೇಖನ ಬರೆದು, ಹೀಗೆ ಹೇಳಿದಾರೆ :—ಕಳೆದ ವರ್ಷ ಕೊನೆಯ ತಿಂಗಳಲ್ಲಿ ಕಾಂಗ್ರೆಸ್ಸಿನ ಬಲ-ಪಕ್ಷದ ಮುಖಂಡರೊಬ್ಬರು, ಪ್ರಾಂತ ಸರಕಾರಗಳ ಮಾದರಿಯಲ್ಲಿಯೇ ಕೇಂದ್ರ ಸರ್ಕಾರದ ಸಂಬಂಧ ದಲ್ಲಿಯೂ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗುವಂಥ ಸಲಹೆಯನ್ನು ಸರಕಾರಕ್ಕೆ ನೀಡುವ ನಿಶ್ಚಿತ ಧೋರಣೆಯನ್ನು ಅನುಸರಿಸುತ್ತ ಬಂದಿದಾರೆ. ಅದರ ಸಲುವಾಗಿ ಕಾಂಗ್ರೆಸ್ ತನ್ನ ಶಕ್ತಿಯನ್ನು ಲೆಕ್ಕಹಾಕಿಕೊಳ್ಳಬೇಕಾಗಿ ಬಂದಿತು. ಲೀಗಿನ ಪ್ರತಾಪದಿಂದ, ಮುಸಲ್ಮಾನರ ಬೆಂಬಲವಂತೂ ಕಾಂಗ್ರೆಸ್ಸಿಗೆ ಸಿಕ್ಕುವ ಹಾಕಿಲ್ಲ. ಅವರ ಬೆಂಬಲವಿಲ್ಲದೆ, ಹಲವು ಹೊಸ ಮಿತ್ರರು ದೊರೆಯದೆ, ಕೇಂದ್ರದಲ್ಲಿ ಸರಕಾರ ರಚಿಸುವುದು ಅಸಂಭವ. ಇದೇ ಕಾರಣದಿಂದ ಕಾಂಗ್ರೆಸ್ ತನ್ನ ಗಮನವನ್ನೆಲ್ಲ ದೇಶೀಯ ಸಂಸ್ಥಾನ ಗಳ ಕಡೆಗೆ ಕೇಂದ್ರೀಕರಿಸುವುದು ಆವಶ್ಯಕವೆನಿಸಿತು. ಕಾಂಗ್ರೆಸ್ಸಿನ ಕಾರ್ಯ ಕ್ರಮದಲ್ಲಿ ಸಹಾನುಭೂತಿಯಿದ್ದು, ತನಗೆ ಬೆಂಬಲ ನೀಡುವ ಪ್ರತಿನಿಧಿ ಗಳನ್ನು ಆ ಸಂಸ್ಥಾನಗಳಿಂದ ಜತೆಗೂಡಿಸಿಕೊಳ್ಳುವುದೇ ಹಾಗೆ ಮಾಡಿ ಮುದರ ಉದ್ದೇಶ.

ಶ್ರೀ ರಷ್‌ಬ್ರೂಕ್ ವಿಲಿಯಮ್ಸ್ ಭಾರತದ ಹಳೆಯ ಶತ್ರು. ಆ ಸರಕಾರದ ಕಾಲದಲ್ಲಿ ಹಿಂದೂಸ್ಥಾನ ಸರಕಾರದ ವಾರ್ಷಿಕ ಪುಸ್ತಕವಾದ “ ಇಂಡಿಯನ್ ಇಯರ್ ಬುಕ್ ” ಎಂಬುದನ್ನು ಅವರು ಸಂಪಾದಿಸಿದ್ದರು. ಅದರಲ್ಲಿ ಅವರು ಕಪೋಲಕಲ್ಪಿತವಾದ ಎಷ್ಟೋ ಮಾತುಗಳನ್ನು ಬರೆ ದಿದ್ದರು. . ಬಿಟ್ಟುಬಿಡಲು ಆಗದಂಥ ಘಟನೆಗಳನ್ನು ಉಲ್ಲೇಖಿಸುವಾಗ, ಅವುಗಳಿಗೆ ತಮ್ಮದೇ ಆದ ‘ ಬಣ್ಣ ’ ಕೊಟ್ಟರು. ಪತ್ರಿಕೆಗಳಲ್ಲಿ ಪ್ರಕಟ ವಾಗಿರುವ ವರದಿ ನಿಜವಾಗಿದ್ದಲ್ಲಿ, ಅವರು ‘ ಮ್ಯಾಂಚೆಸ್ಟರ್ ಗಾರ್ಡಿಯನ್ ’ ಪತ್ರಿಕೆಯಲ್ಲಿ ಪುನಃ ತಮ್ಮ ಹಳೆಯ ‘ ವೇಷ ’ ವನ್ನು ತೋರಿದಾರೆಂದು ಹೇಳಬೇಕಾಗುವುದು. ೧೯೩೨

ಎಮಿಲಿ ಹಾಬ್ ಹೌಸ್

ಕುಮಾರಿ ಎಮಿಲಿ ಹಾಬ್ ಹೌಸ್ ಮೃತರಾದರೆಂದು ವರ್ತಮಾನ ಪತ್ರಿಕೆಗಳ ಮೂಲಕ ನಮಗೆ ತಿಳಿದುಬಂದಿದೆ. ಆಕೆ ಬಹಳ ಸಭ್ಯ ಹಾಗೂ ಧೀರ ಮಹಿಳೆ. ಆಕೆ ಪುರಸ್ಕಾರದ ವಿಚಾರವನ್ನೇ ಇಟ್ಟುಕೊಳ್ಳದೆ ಸೇವೆ ಮಾಡುತ್ತಿದ್ದಳು. ಆಕೆಯ ಸೇವೆಯೆಂದರೆ, ಭಗವಂತನಿಗೆ ಅರ್ಪಿತವಾದ, ಮಾನವ ಸಮಾಜ ಸೇವೆ. ಆಕೆ ಆಂಗ್ಲೇಯ ಸತ್ಕುಲ ಪ್ರಸೂತೆ. ತನ್ನ ದೇಶವನ್ನು ಆಕೆ ಪ್ರೀತಿಸುತ್ತಿದ್ದುದರಿಂದಲೇ, ಅದು ಮಾಡುವ ಯಾವುದೇ ಅನ್ಯಾಯವನ್ನು ಸಹಿಸುವುದು ಆಕೆಯಿಂದ ಆಗುತ್ತಿರಲಿಲ್ಲ. ಆಕೆ ಬೋಯರ್ ಯುದ್ಧದ ಘೋರ ಅತ್ಯಾಚಾರವನ್ನು ಅರಿತುಕೊಂಡರು. ಆ ಯುದ್ಧವನ್ನು ಕೆರಳಿಸುವುದರಲ್ಲಿ ಇಂಗ್ಲೆಂಡ್ ಭಾರಿ ತಪ್ಪು ಮಾಡಿದ್ದಿತೆಂಬುದು ಅವರು ಭಾವಿಸಿದ್ದರು. ಇಂಗ್ಲೆಂಡ್ ಆ ಯುದ್ಧದ ಹುಚ್ಚನ್ನು ತಲೆಗೆ ವಿಶೇಷವಾಗಿ ಹಚ್ಚಿಕೊಂಡಿದ್ದ ಸಮಯದಲ್ಲಿ ಆಕೆ ಯುದ್ಧವನ್ನು ಅತೀವ ಕಟು-ಭಾಷೆಯಲ್ಲಿ ನಿಂದಿಸಿದರು. ಅವರು ದಕ್ಷಿಣ ಆಫ್ರಿಕಾಕ್ಕೆ ಹೋದರು; ಅಲ್ಲಿ ಶಿಬಿರ-ಕಾರಾಗಾರಗಳನ್ನು ಸ್ಥಾಪಿಸಿ ಅಲ್ಲಿಗೆ ಪರಾಜಿತ ರಾದ ಮಕ್ಕಳು ಮರಿಗಳನ್ನು ಬಲಾತ್ಕಾರದಿಂದ ತಂದಿರಿಸುವ ಪಾಶವಿಕ ಕೃತಿಯನ್ನು ಉಗ್ರವಾಗಿ ವಿರೋಧಿಸಿದರು. ಯುದ್ಧದಲ್ಲಿ ಗೆಲ್ಲಲು ಆ ಶಿಬಿರ-ಕಾರಾಗಾರಗಳು ಆವಶ್ಯಕವೆಂದು ಲಾರ್ಡ್ ಕಿಚನರ್ ಭಾವಿಸಿದ್ದರು. ವಿಕಂ ಸ್ಟೀಡ್ ಇಂಗ್ಲೀಷರ ಪರಾಜಯಕ್ಕಾಗಿ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿದುದು ಆಗಲೇ. ಎಮಿಲಿ ಹಾಬ್ ಹೌಸ್, ದುರ್ಬಲರಾಗಿದ್ದರೂ ಶಾರೀರಿಕ ತೊಂದರೆಯನ್ನು ಸ್ವಲ್ಪವೂ ಲೆಕ್ಕಿಸದೆ ದಕ್ಷಿಣ ಆಫ್ರಿಕಾಕ್ಕೆ ಪುನಃ ಹೋಗಿ, ಅಪಮಾನ ಹಾಗೂ ದುಂಡಾವರ್ತಿಯನ್ನು ಮೈಮೇಲೆ ತಂದುಕೊಂಡರು. ಅಲ್ಲಿ ಅವರನ್ನು ಬಂಧಿಸಿ, ವಾಪಸು ಕಳುಹಿಸಿದರು. ಅದೆಲ್ಲವನ್ನೂ ಆಕೆ ಧೀರ ಮಹಿಳೆಯಂತೆ ಸಹಿಸಿದರು. ಬೋಯರ್ ಜನರಿಗೆ ಧೈರ್ಯ ಹೇಳಿ, ಎಂದಿಗೂ ನಿರಾಶರಾಗಬಾರದೆಂದು ತಿಳಿಸಿದರು. ಇಂಗ್ಲೆಂಡ್ ಮದೋನ್ಮತ್ತವಾಗಿದ್ದರೂ, ಇಂಗ್ಲೆಂಡಿನ ಅನೇಕ ಸ್ತ್ರೀ-ಪುರುಷರಿಗೆ ಬೋಯರರ ಬಗೆಗೆ ಸಹಾನುಭೂತಿ ಇರುವುದಾಗಿಯೂ, ಒಂದಲ್ಲ

ಒಂದು ದಿನ ಅವರ ಮಾತಿಗೆ ಪುರಸ್ಕಾರ ದೊರೆಯುವುದೆಂದೂ ಅವರಿಗೆ (ಬೋಯರರಿಗೆ) ತಿಳಿಸಿದರು. ಹಾಗೆಯೇ ಆಯಿತು. ಸರ್ ಹೆನ್ರಿ ಕ್ಯಾಂಪ್‌ಬೆಲ್ ಬ್ಯಾನರ್‌ಮನ್ ಮಹಾಚುನಾವಣೆಯಲ್ಲಿ ದೊಡ್ಡ ಬಹುಮತ ದಿಂದ ಲಿಬಿರಲ್ ಪಕ್ಷದ ನಾಯಕರಾಗಿ ಚುನಾಯಿತರಾದರು; ಯುದ್ಧ ದಲ್ಲಿ ಕಷ್ಟ ಅನುಭವಿಸಿದ್ದ ಬೋಯರ್ ಜನರಿಗೆ ಆಗಿದ್ದ ಹಾನಿಯನ್ನು ಶಕ್ಯವಿದ್ದಷ್ಟು ತುಂಬಿಕೊಡಲಾಯಿತು. ಯುದ್ಧ ಮುಗಿದಮೇಲೆ, ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಜಾರಿಯಲ್ಲಿದ್ದಾಗ ಕುಮಾರಿ ಹಾಬ್‌ಹೌಸ್‌ರ ಪರಿಚಯ ಮಾಡಿಕೊಳ್ಳುವ ಸೌಭಾಗ್ಯ ನನಗೆ ದೊರೆಯಿತು. ಪರಿಚಯ ವಾಗಿ ಆರಂಭವಾದುದು ಕ್ರಮೇಣ ಜೀವನ ಪರ್ಯಂತದ ಮೈತ್ರಿಯಾಗಿ ಬೆಳೆಯಿತು. ಭಾರತೀಯರಿಗೂ, ದಕ್ಷಿಣ ಆಫ್ರಿಕಾದ ಸರಕಾರಕ್ಕೂ ೧೯೧೪ರಲ್ಲಿ ನಡೆದ ಸಂಧಾನದಲ್ಲಿ, ಆಕೆ ವಹಿಸಿದ ಪಾತ್ರ ಸಾಮಾನ್ಯ ವಾದುದೇನೂ ಅಲ್ಲ. ಆಕೆ ಆಗ ಜನರಲ್ ಬೋಥಾ ಅವರ ಅತಿಥಿಗಳಾಗಿ ದ್ದರು. ಆಗ ಜನರಲ್ ಬೋಥಾ ನಾನು ಹಲವು ಬಾರಿ ಮಂಡಿಸಿದ ಪರ ಸ್ಪರ 'ಭೆಟ್ಟಿ'ಯ ಸೂಚನೆಯನ್ನು ಬದಿಗೊತ್ತಿ, ಪ್ರತಿಸಲವೂ 'ಗೃಹ ಸಚಿವರ' ಮುಂದೆ ನನ್ನ ಮಾತನ್ನು ಮಂಡಿಸಬೇಕೆಂದು ಹೇಳುತ್ತಿದ್ದರು. ಆದರೆ ಕುಮಾರಿ ಹಾಬ್‌ಹೌಸ್, ನನ್ನನ್ನು ಭೆಟ್ಟಿಯಾಗಬೇಕೆಂದು ಜನರಲ್ ಬೋಥಾ ಅವರನ್ನು ಆಗ್ರಹಪಡಿಸಿದರು. ಅಂತಲೆ ಕೇಪ್‌ಟೌನಿನಲ್ಲಿ ಜನ ರಲ್ ಸಾಹೇಬರ ನಿವಾಸ ಸ್ಥಾನವನ್ನು ಜನರಲ್ ಮತ್ತು ಅವರ ಪತ್ನಿ, ಅವರು ಮತ್ತು ನಾನು ಮಾತುಕತೆಗಾಗಿ ಕಲೆಯುವ ವ್ಯವಸ್ಥೆ ಮಾಡಿಸಿದರು. ಅವರ ಹೆಸರು ತಕ್ಕೊಂಡರೆ ಸಾಕು, ಬೋಯರ್ ಜನರಲ್ಲಿ ವಿಶ್ವಾಸ ಬೇರೂರುತ್ತಿತ್ತು; ಅವರ ತಮ್ಮ ಎಲ್ಲ ಪ್ರಭಾವವನ್ನು ಭಾರತೀಯ ಪ್ರಕರ ಣಕ್ಕೆ ಹಚ್ಚಿ, ನನ್ನ ಮಾರ್ಗವನ್ನು ಸರಳಗೊಳಿಸಿದರು. ನಾನು ಹಿಂದೂ ಸ್ಥಾನಕ್ಕೆ ಬಂದಾಗ—ಆಗ ಇಲ್ಲಿ ರೌಲೆಟ್ ಆಕ್ಟ್ ಆಂದೋಲನ ಸಾಗಿತ್ತು— ಅವರು ನನಗೆ ಹೀಗೆ ಪತ್ರ ಬರೆದಿದ್ದರು. "ಗಲ್ಲು ಏರುವುದಲ್ಲದಿದ್ದರೆ, ಕಾರಾಗೃಹದಲ್ಲಿ ಜೀವನವನ್ನು ಕೊಣೆಗಾಣಿಸಬೇಕಾಗಿ ಬಂದರೂ—ಅದರ ಚಿಂತೆ ನನಗಿಲ್ಲ". ಅವರಲ್ಲಿ ಅಂಥ ತ್ಯಾಗ ಶಕ್ತಿ ಪರಿಪೂರ್ಣವಾಗಿತ್ತು. ಯಾವುದೇ ಆಂದೋಲನವಾಗಲಿ, ಅದರ ಪೋಷಕರ ಬಲಿದಾನದ ಹೊರತು

ಸಫಲವಾಗದೆಂಬುದು ಅವರ ಅಚಲ ವಿಶ್ವಾಸವಾಗಿತ್ತು. ಕಳೆದ ವರ್ಷ ತಾನೆ ನನಗೆ ಹೀಗೆ ಬರೆದಿದ್ದರು—"ದಕ್ಷಿಣ ಆಫ್ರಿಕಾದ ಭಾರತೀಯರ ಪರವಾಗಿ ನನ್ನ ಮಿತ್ರರಾದ ಹಾರ್ಟ್‌ಜೋಗರೊಡನೆ ಪತ್ರ ವ್ಯವಹಾರ ನಡೆಸಿದ್ದೇನೆ. ಅವರ ಮೇಲೆ ನೀವು ಕೋಪಮಾಡಿಕೊಳ್ಳಬೇಡಿ; ಅವರಿಂದ ನೀವು ಏನು ಅಪೇಕ್ಷಿಸುವಿರೆಂಬುದನ್ನು ನನಗೆ ತಿಳಿಸಿರಿ"—ಎಂಬುದಾಗಿಯೂ ಆಕೆ ಬರೆದಿದ್ದರು.

ಈ ಆಂಗ್ಲ ಮಹಿಳೆಯನ್ನು ಭಾರತೀಯ ಮಹಿಳೆಯರು ಸ್ಮರಿಸಿಕೊಳ್ಳಬೇಕು. ಆಕೆ ವಿವಾಹವನ್ನೇ ಮಾಡಿಕೊಳ್ಳಲಿಲ್ಲ. ಆಕೆಯದು ಸ್ಫಟಿಕದಷ್ಟು ಸ್ವಚ್ಛ ಜೀವನ. ಭಗವಂತನ ಸೇವೆಗಾಗಿ ಆತ್ಮಾರ್ಪಣ ಮಾಡಿಕೊಂಡಿದ್ದ ಮಹಿಳೆ, ಆಕೆ. ಆಕೆಯ ಆರೋಗ್ಯ ತೀರ ಕೆಟ್ಟಿತ್ತು. ಪಾರ್ಶ್ವವಾಯುವಿನಿಂದ ನರಳುತ್ತಿದ್ದರು. ಆದರೂ, ಆಕೆಯ ಆ ದುರ್ಬಲ, ರೋಗಗ್ರಸ್ತ ಶರೀರದೊಳಗೆ, ರಾಜರು–ಸಾಮ್ರಾಟರ ಸಶಸ್ತ್ರ ಸೇನೆಯನ್ನು ಪ್ರತಿಭಟಿಸಬಲ್ಲ 'ಆತ್ಮ' ದೇದೀಪ್ಯಮಾನವಾಗಿತ್ತು. ಅವರು ಮನುಷ್ಯಮಾತ್ರರಿಗೆ ಹೆದರುತ್ತಿರಲಿಲ್ಲ; ಅವರು ಹೆದರುತ್ತಿದ್ದುದು ಭಗವಂತನಿಗೆ ಮಾತ್ರ. ೧೯೩೩

ಸ್ಯಾಮ್ಯುಯಲ್ ಹೋರ್

ಸ್ಯಾಮ್ಯುಯಲ್ ಹೋರರ ಭಾಷಣದ ಮಾತುಗಳನ್ನು ಪುನಃ ಓದಿ ಹೇಳಿದಾಗ, ಬಾಪೂ ಹೀಗೆಂದರು—

ಇವರ ಮಾತು ನನಗೆ ಒಳಿತೆನಿಸುತ್ತದೆ. ಇವರಿಗೆ ಮಧ್ಯಸ್ಥಗಾರರ ಆವಶ್ಯಕತೆಯೇ ಇಲ್ಲ; ಕಾರಣ ಇವರಿಗೆ ವಿಶ್ವಸ್ಥರಾದವರು ಯಾರೂ ಇಲ್ಲ. ಇಂಥವರೊಡನೆ ಹೋರಾಡುವುದರಲ್ಲೇ ಸ್ವಾರಸ್ಯ. ಇಂಥವರಿಂದಲೂ ಒಳಿತಾದೀತು. ಸ್ಯಾಂಕಿ ಅವರಿಗಿಂತ ಇವರು ಸಾವಿರ ಪಾಲು ಮೇಲು. ಅವರದು ಮನವೊಂದು, ಮಾತೊಂದು. ಇವರದು ಮನ-ಮಾತುಗಳೆರಡೂ ಒಂದು. ಒಮ್ಮೆ ಅವರನ್ನು ಹೀಗೆ ಕೇಳಿದೆ—"ಇಲ್ಲಿರುವ ಇಷ್ಟು ಮಂದಿಯಲ್ಲಿ ಯಾರೊಬ್ಬರ ಶಕ್ತಿಯಲ್ಲೂ ನಿಮಗೆ ನಂಬಿಕೆಯಿಲ್ಲವಷ್ಟೆ?" ಅವರು

ಹೇಳಿದರು—

"ಹೃದಯ ಬಿಚ್ಚಿ ಹೇಳಬೇಕೆಂದರೆ, ನನಗೆ ಯಾರ ಶಕ್ತಿಯಲ್ಲೂ ವಿಶ್ವಾಸವಿಲ್ಲವೆಂಬುದು ದಿಟ".

ಅದೇ ವಿಷಯಕ್ಕೆ 'ನಿಮ್ಮ ಪ್ರಾಮಾಣಿಕತೆ ನನಗೆ ಬಹಳ ಒಪ್ಪುತ್ತದೆ'—ಎಂದು ಹೇಳಿ ಅವರನ್ನು ಅಭಿನಂದಿಸಿದ್ದೆ.

ಪ್ರೀವಾ 'ಟೈಮ್ಸ್' ಪತ್ರಿಕೆಯಲ್ಲಿ ಹೋರರಿಗೆ ಕೊಟ್ಟಿರುವ ಉತ್ತರವನ್ನು ಕುರಿತು ಬಾಪೂ ಹೇಳಿದರು—

ಅದು ಬಹಳ ಗೌರವಪೂರ್ಣ ಪತ್ರ. 'ಟೈಮ್ಸ್' ಪತ್ರಿಕೆಗೂ ಸಹ ಸಾಮ್ಯುಯಲ್ ಹೋರರ ವರ್ಣನೆ ಸರಿತೋರಿಲ್ಲವೆಂಬುದು ವ್ಯಕ್ತವಾಗುತ್ತದೆ. ಇವರು ಲಜ್ಜಾಹೀನರಂತೆ ಕಾಣುತ್ತಾರೆ. ಪ್ರಾಮಾಣಿಕರೇನೋ ಸರಿ ; ಆದರೆ ಅವರ ಪ್ರಾಮಾಣಿಕತೆಯೂ ಲಜ್ಜಾಹೀನವಾದುದು. ತಮಗೆ ಯಾವ ಭಾರತೀಯನ ಬುದ್ಧಿ ಅಥವಾ ಶಕ್ತಿಯಲ್ಲೂ ವಿಶ್ವಾಸವಿಲ್ಲವೆಂದು ಹೇಳಿರುವುದೇ ಈ ಮಾತಿಗೆ (ಅವರ ಪ್ರಾಮಾಣಿಕತೆ ಲಜ್ಜಾಹೀನವಾದುದು ಎಂಬುದಕ್ಕೆ) ಸಾಕ್ಷಿ. ೧೯೪

ಸರ್ ಸ್ಯಾಮ್ಯುಯಲ್ ಹೋರರನ್ನು ಅನೇಕ ಬಾರಿ ಭೆಟ್ಟಿಯಾಗಿದ್ದೆ. ಅವರು ನನ್ನೊಡನೆ ತೆರೆದ ಹೃದಯದಿಂದ ಮಾತನಾಡುತ್ತಿದ್ದರೆಂದು ನಾನು ಹೇಳಲೇಬೇಕು. ನನ್ನೊಡನೆ ಒಂದು ಮಾತು, ಇನ್ನೊಬ್ಬರೊಡನೆಯೂ ಇನ್ನೊಂದು ಮಾತು–ಹೀಗೆ ಅವರೆಂದಿಗೂ ಆಡುತ್ತಿರಲಿಲ್ಲ. ಎಲ್ಲರೊಡನೆಯೂ ಒಂದೇ ಮಾತು. ಅವರು ಸ್ಪಷ್ಟವಾಗಿ ಹೀಗೆ ಹೇಳುತ್ತಿದ್ದರು— "ಅಧಿಕಾರ (ಸತ್ತೆ) ನಮ್ಮ ಕೈಯಲ್ಲಿದೆ. ನೀವು ಸಲಹೆ ಕೊಡಬಹುದು. ಅದನ್ನು ಜಾರಿಗೆ ತರುವುದು, ಬಿಡುವುದು ನಮಗೆ ಸೇರಿದುದು. ಅದನ್ನು ನೀವು ನಮಗೇ ಬಿಡಬೇಕು. ನಾನು ಹೇಳಿದೆ—'ಸ್ವಾತಂತ್ರ್ಯವೇನೋ ಬಂದಾಗ ಬರುತ್ತದೆ. ಆದರೆ, ಬರಲಿರುವ ಸ್ವಾತಂತ್ರ್ಯದ 'ನೋಟ' (ಪ್ರಕಾಶ) ವಾದರೂ ನಿಮ್ಮ ಕೃತಿಯಲ್ಲಿ ಕಾಣಿಸಿಕೊಳ್ಳಬೇಕು. ಕಾನೂನು ಹೇಗಾದರೂ ಇರಲಿ, ನಮ್ಮ ಕೆಲಸಗಳ ಸಂಬಂಧದಲ್ಲಿ ನಮ್ಮ ಸಲಹೆಯಂತೆ ನಡೆಯುವ ಸಂಪ್ರದಾಯ ಬೆಳೆದು ಬರಬೇಕು. ಘನಶ್ಯಾಮದಾಸ ಹಾಗೂ

ಪುರುಷೋತ್ತಮ ದಾಸರು ನಮ್ಮ ಅರ್ಥಶಾಸ್ತ್ರಿಗಳು. ಅರ್ಥಶಾಸ್ತ್ರದ ವಿಷಯದಲ್ಲಿ ಅವರೇ ನಮ್ಮ ಪ್ರತಿನಿಧಿಗಳು. ಭಾರತದ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅವರ ಸಲಹೆಯಂತೆ ನಡೆಯಿರಿ". ಅವರು ಹೇಳಿದರು—
" ಇದು ಆಗುವ ಮಾತೇ ಅಲ್ಲ". ೧೯೫

ಭಾಗ ೨

ಭಾರತ ಸಾವಿತ್ರೀ

ಊರ್ಧ್ವಬಾಹುರ್ವಿರೋಮ್ಯೇಷ ನ ಚಕಶ್ಚಿಚ್ಛೃಣೋತಿ ಮೇ ।
ಧರ್ಮಾದರ್ಥಶ್ಚ ಕಾಮಶ್ಚ ಸಧರ್ಮಃ ಕಿಂ ನ ಸೇವ್ಯತೇ ॥

"ನಾನು ಕೈಎತ್ತಿ ಕೂಗಿ ಹೇಳುತ್ತೇನೆ: ಆದರೆ, ನನ್ನ ಮಾತನ್ನು ಯಾರೂ ಕೇಳುವುದೇ ಇಲ್ಲ. ಧರ್ಮದಲ್ಲಿಯೇ ಅರ್ಥ-ಕಾಮ ಅಡಗಿದೆ. ಇಷ್ಟು ಸರಳವಾದ ಧರ್ಮವನ್ನೂ ಜನ ಅದೇಕೆ ಸೇವಿಸುವುದಿಲ್ಲವೋ ?"

ಬಾಪೂಜಿ ಅಣೆ ಕಳೆದ ಶನಿವಾರ ಕೆಲವು ನಿಮಿಷಗಳ ಮಟ್ಟಿಗೆ ನನ್ನನ್ನು ಭೇಟಿಮಾಡಲು ಬಂದಿದ್ದರು. ನಾವು ಕೂಡಿ ಕೆಲಸ ಮಾಡುತ್ತಿರಲಿ ಅಥವಾ ತೋರಿಕೆಗೆ ವಿರುದ್ಧ ದಿಶೆಯಲ್ಲಿ ಸಾಗುತ್ತಿರಲಿ--ಬಾಪೂಜಿ ಅಣೆ ನನ್ನ ಬಗೆಗೆ ಸದಾ ಪ್ರೇಮ ಭಾವವನ್ನೇ ಇಟ್ಟುಕೊಂಡಿದಾರೆ. ಅಂತಲೇ ಸಮಯ ಸಿಕ್ಕಾಗಲೆಲ್ಲ ಬಂದು ಕುಶಲ ಪ್ರಶ್ನೆ ಕೇಳುತ್ತಾರೆ; ವಿಚಾರ-ವಿನಿಮಯ ಮಾಡುತ್ತಾರೆ; ಆಗಾಗ ತಮ್ಮಲ್ಲಿ ತುಂಬಿ ತುಳುಕುತ್ತಿರುವ ಶ್ಲೋಕ-ಭಂಡಾರದ ಮಾದರಿಯನ್ನು ಸ್ವಲ್ಪ ತೋರಿಸಿಯೇ ಬಿಡುತ್ತಾರೆ. ದಿಲ್ಲಿಯಲ್ಲಿ ನನ್ನನ್ನು ಕಾಣಲು ಬಂದಾಗ, ನಾನು ಕಾಂಗ್ರೆಸ್ಸಿನಿಂದ ಹೊರ ಬರುವುದನ್ನು ತೋರಿಕೆಗೆ ವಿರೋಧಿಸಿದರೂ, ವಸ್ತುತಃ ಆ ಬಗೆಗೆ ನನ್ನನ್ನು ಅಭಿನಂದಿಸಿದರೆಂದೇ ಹೇಳಬೇಕು.

"ಕಾಂಗ್ರೆಸ್ಸನ್ನೇ ಆಗಲಿ, ಯಾರನ್ನೇ ಆಗಲಿ ತಾವು ಕುಪಿತಗೊಳಿಸಬಾರದು. ತಾವು ತಮ್ಮ ದಾರಿ ಹಿಡಿದರಾಯಿತು. ತಾವು ಆಂಗ್ಲೇಯರ ವಿಷಯದಲ್ಲಿ ಬರೆದಿರುವುದನ್ನು ನಾನು ನೋಡಿದೇನೆ. ಅವರಂತೂ ಆ ಮಾತನ್ನು ಕೇಳುವವರಲ್ಲ. ಆದರೆ, ಅದನ್ನು ಕಟ್ಟಿಕೊಂಡು ತಮಗೇನು ? ತಾವು ಯಾವುದನ್ನು ಧರ್ಮವೆಂದು ಭಾವಿಸುತ್ತೀರೋ ಅದನ್ನು ಎಲ್ಲರಿಗೂ ತಿಳಿಸುವುದಷ್ಟೇ ತಮ್ಮ ಕೆಲಸ. ವಿಷಮ ಪ್ರಸಂಗದಲ್ಲಿ ಕಾಂಗ್ರೆಸ್ಸು ಕೂಡ ತಮ್ಮ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲವಲ್ಲವೆ? ಸ್ವತಃ ವ್ಯಾಸರ ಮಾತನ್ನೇ ಯಾರೂ ಕೇಳಿಲಿಲ್ಲವೆಂದಮೇಲೆ, ಇನ್ನುಳಿದವರ ಮಾತೇನು ?

ಮಹಾಭಾರತದಂಥ ಗ್ರಂಥವನ್ನು ಬರೆದು, ಕೊನೆಗೆ ಅವರೊಂದು ಶ್ಲೋಕವನ್ನು ಬರೆದಿದಾರೆ. ಅದು 'ಭಾರತ ಸಾವಿತ್ರೀ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ."—ಎಂಬುದಾಗಿ ಹೇಳಿ, ಮೇಲೆ ಕಾಣಿಸಿದ ಶ್ಲೋಕವನ್ನು ಒಪ್ಪಿಸಿದರು. ಆ ಶ್ಲೋಕ ಹೇಳಿ ನನ್ನ ಶ್ರದ್ಧೆಯನ್ನು ದೃಢಪಡಿಸಿದುದಲ್ಲದೆ, ನಾನು ಆಯ್ಕೆಮಾಡಿಕೊಂಡಿರುವ ಮಾರ್ಗ ದುರ್ಗಮವಾದುದು ಎಂಬುದಾಗಿಯೂ ತಿಳಿಸಿದರು.೧

ವಿರಕ್ತಮನದ ಮುಸಲ್ಮಾನ್

ಖ್ವಾಜಾ ಅಬ್ದುಲ್ ಮಜೀದ್ ನನ್ನೊಡನೆ "ಪ್ರೇಮಕಲಹ" ಆಡಲು ಬಂದಿದ್ದರು. ಅವರು ಅಲೀಗಢ ವಿಶ್ವವಿದ್ಯಾಲಯದ ಧರ್ಮದರ್ಶಿಗಳು. ಅವರಲ್ಲಿ ಸಾಕಷ್ಟು ಭಾರಿ ಆಸ್ತಿ ಇದ್ದರೂ, ಅವರದು 'ವಿರಕ್ತಮನ'. ನಾನು ಅಲ್ಲಿಗೆ ಹೋದಾಗಲೆಲ್ಲ ಅವರಲ್ಲಿಯೇ ಊಟ ಮಾಡುತ್ತಿದ್ದೆ. ಆ ಕಾಲಕ್ಕೆ ಸ್ವಾಮಿ ಸತ್ಯದೇವರು (ಪರಿವ್ರಾಜಕ) ನನ್ನೊಡನೆ ಇರುತ್ತಿದ್ದರು. ಅವರು ಹಿಮಾಲಯದ ಯಾತ್ರೆ ಮಾಡಿದ್ದರು. ಇಂದು ಅವರಿಗೆ ಕಣ್ಣೇ ಹೋಗಿಬಿಟ್ಟಿದೆ. ಆ ಕಾಲದಲ್ಲಿ ಅವರು ಬಹಳ ಕೆಲಸ ಮಾಡುತ್ತಿದ್ದರು. ಅವರು ನನಗೆ ಹೀಗೆ ಹೇಳಿದರು: "ನಾನು ನಿನ್ನೊಡನೆ ತಿರುಗಾಡಲು ಸಿದ್ಧ. ಆದರೆ, ನೀನು ಮುಸಲ್ಮಾನರೊಡನೆಯೂ ಊಟಮಾಡುತ್ತೀಯೆ. ಅದು ಮಾತ್ರ ನನ್ನಿಂದಾಗದು". ಆ ಮಾತು ಕೇಳಿ ಖ್ವಾಜಾ ಸಾಹೇಬರು ಹೇಳಿದರು: "ಅವರ ಧರ್ಮ ಹಾಗೆ ಹೇಳುವುದಾದರೆ, ಅವರ ಸಲುವಾಗಿ ಬೇರೆ ವ್ಯವಸ್ಥೆಯನ್ನೇ ಮಾಡುವೆನು". "ಈ ಸ್ವಾಮಿ ಗಾಂಧೀ ಜತೆಯಲ್ಲಿ ಬಂದಿದಾನೆ. ಆದರೂ ನನ್ನೊಡನೆ ಏಕೆ ಉಣಲೊಲ್ಲ?"—ಎಂಬುದಾಗಿ ಖ್ವಾಜಾ ಸಾಹೇಬರು ಮನಸ್ಸು ಚಿಕ್ಕದು ಮಾಡಿಕೊಳ್ಳಲಿಲ್ಲ. ಹಿಂದೂ-ಮುಸಲ್ಮಾನರ ಅಧ್ಯಕ್ಷರು. ಆ ಕಾಲದಲ್ಲಿ ಅಲೀಗಢದಿಂದ ಹೊರಬಿದ್ದ ರಾಷ್ಟ್ರೀಯ ಭಾವನೆಯುಳ್ಳ ಮುಸಲ್ಮಾನ ಬಾಲಕರು ಇಂದು ಜಾಮಿಯಾದಲ್ಲಿ ಒಳ್ಳೊಳ್ಳೆ ವಿದ್ಯಾರ್ಥಿಗಳೂ, ಕರ್ಮಚಾರಿಗಳೂ ಆಗಿದಾರೆ. ಇವರೆಲ್ಲ ಸಹರಾ

ಮರುಭೂಮಿಯಲ್ಲಿ 'ದ್ವೀಪ' ಇದ್ದಹಾಗೆ. ಖ್ವಾಜಾ ಸಾಹೇಬರು ಎಂಥವರೆಂದರೆ, ಯಾರಾದರೂ ಅವರಿಗೆ ಒಂದು ಏಟು ಕೊಟ್ಟರೂ, ಅವರ ಬಾಯಿಂದ ಅಪಶಬ್ದ (ಬೈಗುಳ) ಹೊರಡುವುದಿಲ್ಲ. ಇಂಥ ಒಳ್ಳೆಯ ಜನ ಕಡಿಮೆಯೇ ಇದ್ದಾರು. ಆದರೂ ನಾವು ನಮ್ಮತನವನ್ನು ಉಳಿಸಿಕೊಳ್ಳಲೇ ಬೇಕು.೨

ಅರ್ಧ ಸತ್ಯಾಗ್ರಹಿ

ನನ್ನ ಬಲಗಡೆ ಖ್ವಾಜಾ ಸಾಹೇಬರು ಕುಳಿತಿರುವುದು ನಿಮಗೆ ಕಾಣುತ್ತಿದೆಯಷ್ಟೆ. ಹಿಂದೊಮ್ಮೆ ಇವರ ಬಗೆಗೆ ನಾನೊಂದು ಮಾತು ಹೇಳಿದ್ದೆ. ಸ್ವಾಮಿ ಸತ್ಯದೇವರ ಜತೆಯಲ್ಲಿ ನಾನು ಇವರ ಮನೆಗೆ ಹೋಗಿದ್ದಾಗ ಅವರು (ಸತ್ಯದೇವರು) ಮುಸಲ್ಮಾನರ ಕೈಯಿಂದ ನೀರು ಕುಡಿಯುವುದಕ್ಕೂ ನಿರಾಕರಿಸಿದ ವಿಷಯವನ್ನು ತಿಳಿಸಿದ್ದೆ. ಆಗಲೂ ಖ್ವಾಜಾ ಸಾಹೇಬರು ಅನ್ಯಥಾ ಭಾವಿಸದೆ ಉದಾರ ಸ್ವಾಗತ ನೀಡಿದರು. ಆಗ ಇವರು ಅಲೀಗಢ ವಿಶ್ವವಿದ್ಯಾಲಯದ 'ಧರ್ಮದರ್ಶಿತ್ವ' ವನ್ನು ಬಿಟ್ಟುಕೊಟ್ಟರು. ನನಗೆ ನೆನಪಿರುವ ಮಟ್ಟಿಗೆ ನಾನು ಅಲ್ಲಿಗೆ ಹೋದಾಗ 'ಲೀಗ್' ಮೀಟಿಂಗ್ (ಸಭೆ) ನಡೆಯುತ್ತಿತ್ತು. 'ಇಲ್ಲಿಯೂ ಯಾರಾದರೂ ಸತ್ಯಾಗ್ರಹಿಗಳು ಸಿಕ್ಕಬಹುದೇ? '—ಎಂದು ಕೇಳಿದೆ. ಮೌ. ಮೊಹಮ್ಮದ್ ಅಲೀ ಹಾಗೂ ಮೌ. ಶೌಕತ್ ಅಲೀ ಆಗ ದಿಗ್ಬಂಧನಕ್ಕೆ ಒಳಗಾಗಿದ್ದರು. ಅವರ ಬಂಧನದ ದೆಸೆಯಿಂದ ಎಲ್ಲರೂ ದಿಗ್ಭ್ರಾಂತರಾಗಿದ್ದರು. ಆಗ ಖ್ವಾಜಾ ಸಾಹೇಬರು "ಇಲ್ಲಿ ನಿಮಗೆ ಎರಡೂವರೆ ಮಂದಿ ಸತ್ಯಾಗ್ರಹಿಗಳು ಸಿಕ್ಕುತ್ತಾರೆ"—ಎಂದು ನನಗೆ ಹೇಳಿದರು. ಅವರಲ್ಲಿ ಒಬ್ಬರು ಶ್ವೇಬ್ ಕುರೇಶಿ—ಸಾಕಷ್ಟು ಪ್ರಖ್ಯಾತರು; ದಿಟ್ಟತರುಣರು. ಎರಡನೆಯವರೂ—ಅಲ್ಲಿ ಹಾಜರಿದ್ದರು—ಪರಿಪಕ್ವ ಸತ್ಯಾಗ್ರಹಿಗಳೇ. ಒಮ್ಮೆ ಮಂದಿ ಅವರನ್ನು ಚೆನ್ನಾಗಿ ಥಳಿಸಿದರು; ಮೇಲೆ ಎರಡು ಕಡೆ ಗಾಯವಾಯಿತು. ಆದರೂ ಅವರು ಶಾಂತವಾಗಿಯೇ ಇದ್ದರು. ಹೊಡೆದವರಿಗೆ ತಿರುಗಿ ಬಾರಿಸುವ ಶಕ್ತಿಯಿದ್ದರೂ, ಹೊಡೆತ

ವನ್ನು ಸಹಿಸಿಕೊಂಡು, ಏಟಿಗೆ ಏಟು ಕೊಡಲಿಲ್ಲ. ಅವರಿಬ್ಬರ ಪರಿಚಯ ಮಾಡಿಕೊಟ್ಟಮೇಲೆ, ಖ್ವಾಜಾ ಸಾಹೇಬರು ತಮ್ಮನ್ನು 'ಅರ್ಧ ಸತ್ಯಾಗ್ರಹಿ' ಎಂದು ಹೇಳಿಕೊಂಡರು. ಆಗಿನಿಂದ ಖ್ವಾಜಾ ಸಾಹೇಬರು ನನ್ನ ಸ್ವಂತ ಸಹೋದರನಂತೆಯೇ ಆಗಿಬಿಟ್ಟಿದ್ದಾರೆ.೩

ಖಾನ್ ಅಬ್ದುಲ್ ಗಫಾರ್ ಖಾನರೊಡನೆ

ಖಾನ ಸಾಹೇಬರಿಗೆ ಅಹಿಂಸೆಯಲ್ಲಿ ವಿಶ್ವಾಸವಿದೆ. ಅಂತಲೆ ಎಷ್ಟು ಹೆಚ್ಚು ಕಾಲ ಸಾಧ್ಯವೋ ಅಷ್ಟು ಹೆಚ್ಚು ಕಾಲ ನಾನು ಖುದಾಯಿ ಖಿದ್‌ಮತ್‌ಗಾರರೊಡನೆ ಇರಬೇಕೆಂದು ಅವರು ಬಯಸಿದರು. ನನಗಂತೂ ಅಲ್ಲಿಗೆ ಹೋಗಲು ಯಾವ ಪ್ರಲೋಭನೆಯ ಆವಶ್ಯಕತೆಯೂ ಇರಲಿಲ್ಲ. ಏಕೆಂದರೆ, ನಾನೇ ಅವರ ಪರಿಚಯ ಮಾಡಿಕೊಳ್ಳಲು ಉತ್ಸುಕನಾಗಿದ್ದೆ. ಹಾಗೂ ಅವರ ಹೃದಯವನ್ನು ಪ್ರವೇಶಿಸಲು ಬಯಸಿದ್ದೆ. ಈಗಲೂ ಹಾಗೆ ಮಾಡಲು ನನ್ನಿಂದ ಆಗಿದೆಯೋ ಇಲ್ಲವೋ ನನಗೆ ತಿಳಿಯದು. ಹೇಗೂ ಪ್ರಯತ್ನವನ್ನಂತೂ ಮಾಡಿದೇನೆ.

ಆದರೆ, ಇದನ್ನು ಯಾವ ರೀತಿ ಮತ್ತು ಎಷ್ಟರಮಟ್ಟಿಗೆ ಮಾಡಿರುವೆನೆಂಬುದನ್ನು ತಿಳಿಸುವ ಮೊದಲು, ಖಾನ್ ಸಾಹೇಬರ ಆತಿಥ್ಯದ ಬಗೆಗೆ ಒಂದು ಮಾತು ಹೇಳಲೇಬೇಕು. ನನ್ನ ಇಡೀ ಪ್ರವಾಸದಲ್ಲಿ ನನಗೆ ಎಷ್ಟು ಸೌಕರ್ಯ ಒದಗಿಸಿಕೊಡಲು ಶಕ್ಯವೋ ಅಷ್ಟೂ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ಚಿಂತೆ ಅವರಿಗೆ ಇತ್ತು. ನನಗೆ ಯಾವುದೇ ರೀತಿಯ ತೊಂದರೆ ಅಥವಾ ಕೊರತೆ ಆಗದಂತೆ ನೋಡಿಕೊಳ್ಳಲು ಅವರು ಸಕಲ ಪ್ರಯತ್ನವನ್ನೂ ಮಾಡಿದರು. ನನ್ನ ಆವಶ್ಯಕತೆಗಳನ್ನೆಲ್ಲ ಮೊದಲೇ ಅಂದಾಜುಮಾಡಿಕೊಂಡು ಬಿಡುತ್ತಿದ್ದರು. ಅವರು ಮಾಡಿದ ಯಾವುದರಲ್ಲಿಯೇ ' ತೋರಿಕೆ ' ಏನೇನೂ ಇರಲಿಲ್ಲ; ಎಲ್ಲವೂ ಅವರ ಪಾಲಿಗೆ ಸ್ವಾಭಾವಿಕವಾಗಿಯೇ ಇತ್ತು. ಅವರು ಮಾಡಿದುದನ್ನೆಲ್ಲ ಹೃತ್ಪೂರ್ವಕವಾಗಿಯೇ ಮಾಡಿದರು. ಕುಹಕ ಅಥವಾ ಬೂಟಾಟಿಕೆ ಎಂಬುದು ಅವರಲ್ಲಿ ಇಲ್ಲವೇ ಇಲ್ಲ; ತೋರಿಕೆ

ಯಿಂದಲಂತೂ ಅವರು ತೀರ ದೂರವಾಗಿದಾರೆ. ಆದಕಾರಣ, ಅವರು ಮಾಡುವ ಚಿಂತೆ ಅಹಿತವೆನಿಸುವುದೂ ಇಲ್ಲ; ಅದರಿಂದ ನನ್ನ ಕೆಲಸಕ್ಕೆ ಅಡಚಣೆ ಆಗುವುದೂ ಇಲ್ಲ. ತಕ್ಷಶಿಲೆಯಲ್ಲಿ ನಾವು ಒಬ್ಬರನ್ನೊಬ್ಬರು ಅಗಲಿದಾಗ, ನಮ್ಮ ಕಣ್ಣುಗಳಲ್ಲಿ ನೀರು ತುಂಬಿ ಬಂದುದಕ್ಕೆ ಇದುವೇ ಕಾರಣ. 'ವಿಯೋಗ' ಕಷ್ಟದಾಯಕವೇ ಆಗಿತ್ತು; ಮುಂದಿನ ಮಾರ್ಚ್ ತಿಂಗಳಲ್ಲೇ ಬಹುಶಃ ಪುನಃ ಭೆಟ್ಟಿಯಾದೇವೆಂಬ ಆಶೆಯಿಂದಲೇ ಒಬ್ಬರನ್ನೊಬ್ಬರು ಅಗಲಿದೆವು. ಸರಹದ್ದು ಪ್ರಾಂತದಲ್ಲಿ ನಾನು ಮೇಲಿಂದ ಮೇಲೆ ಬಂದು ಇರಬಹುದಾದಂಥ ಒಂದು ಸ್ಥಳ ಏರ್ಪಡಬೇಕಾದುದು ಆವಶ್ಯಕ. ಏಕೆಂದರೆ, ಭಾರತದ ಉಳಿದ ಭಾಗ ನಿಜವಾದ ಅಹಿಂಸೆಯನ್ನು ಆಕರ್ಷಿಸುವುದರಲ್ಲಿ ಒಂದು ವೇಳೆ ವಿಫಲವೇ ಆದರೂ, ಸರಹದ್ದು ಪ್ರಾಂತದ ಅಗ್ನಿಪರೀಕ್ಷೆಯಲ್ಲಿ ಗೆದ್ದು ಬರುವುದೆಂದು ನಿರೀಕ್ಷಿಸಲು ಸಾಕಷ್ಟು ಅವಕಾಶವಿದೆ. ಇದರ ಕಾರಣವೂ ಸ್ಪಷ್ಟವಾಗಿಯೇ ಇದೆ. ಬಾದಶಹ ಖಾನರ ಅನುಯಾಯಿಗಳು—ಅವರ ಸಂಖ್ಯೆ ಲಕ್ಷಕ್ಕೂ ಮೀರಿದೆಯೆಂದು ತಿಳಿಸಲಾಗಿದೆ—ಅವರ ಆಜ್ಞೆಯನ್ನು ಸ್ವ-ಇಚ್ಛೆಯಿಂದ ಪಾಲನೆ ಮಾಡು ತ್ತಾರೆ. ಅವರು ಹೇಳಿದಂತೆ ನಡೆಯುತ್ತಾರೆ; ಅವರು ಹಾಕಿದ ಗೆರೆ ಯನ್ನು ಎಂದೂ ದಾಟುವುದಿಲ್ಲ. ಆದರೆ, ಖುದಾಯಿ ಖದ್‌ಮತ್‌ಗಾರರು ತಮ್ಮ ನಾಯಕರಲ್ಲಿ ಇಷ್ಟೊಂದು ಶ್ರದ್ಧೆ-ನಿಷ್ಠೆ ಇಟ್ಟುಕೊಂಡಿದ್ದರೂ, ರಚನಾ ತ್ಮಕ ಅಹಿಂಸೆಯ ಪರೀಕ್ಷೆಯಲ್ಲಿ ಪೂರ್ಣವಾಗಿ ಉತ್ತೀರ್ಣರಾಗುವರೋ ಇಲ್ಲವೋ ಎಂಬುದನ್ನು ಇನ್ನೂ ಕಾದುನೋಡಬೇಕಾಗಿದೆ.

ಬೇರೆ ಬೇರೆ ಕೇಂದ್ರಗಳಲ್ಲಿ ನಾನು ಎಲ್ಲ ಖುದಾಯಿ ಖದ್‌ಮತ್ ಗಾರರನ್ನು ಕುರಿತು ಭಾಷಣ ಮಾಡುವ ಬದಲು, ಅವರ ನಾಯಕರುಗಳನ್ನು ಮಾತ್ರ ಉದ್ದೇಶಿಸಿ ಮಾತನಾಡಬೇಕೆಂದು ಖಾನ್‌ಸಾಹೇಬರು ಮತ್ತು ನಾನು ಮೊದಲೇ ನಿಶ್ಚಯಿಸಿಕೊಂಡಿದ್ದೆವು. ನನ್ನ ಶಕ್ತಿ ಕಮ್ಮಿ ಆಗುವುದು ತಪ್ಪಿ, ಅದರ ಉಪಯೋಗ ಆದಷ್ಟು ಹೆಚ್ಚು ವಿವೇಕಪೂರ್ಣವಾಗಿ ಆಗ ಲೆಂದು ಹಾಗೆ ಮಾಡಿದೆವು. ಪರಿಣಾಮ ನಿರೀಕ್ಷಿಸಿದಂತೆಯೇ ಆಯಿತು. ಐದು ವಾರಗಳೊಳಗೆ ನಾವು ಎಲ್ಲ ಕೇಂದ್ರಗಳಿಗೂ ಹೋಗಿಬಂದೆವು; ಪ್ರತಿ ಯೊಂದು ಕೇಂದ್ರದಲ್ಲೂ ಒಂದು ಘಂಟೆ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು

ಕಾಲದವರೆಗೆ ಮಾತುಕತೆ ಆಡಿದೆವು. ನನ್ನ ಪಾಲಿಗೆ ತಾವು ಬಹಳ ಯೋಗ್ಯ ಹಾಗೂ ವಿಶ್ವಾಸಯೋಗ್ಯ ಭಾಷಾಂತರಕಾರರೆಂಬುದನ್ನು ಖಾನ್ ಸಾಹೇಬರು ಸಿದ್ಧಪಡಿಸಿ ತೋರಿಸಿದರು. ನಾನು ಏನೆಲ್ಲ ಹೇಳುತ್ತಿದ್ದೆನೋ ಅದರಲ್ಲಿ ಅವರಿಗೆ ವಿಶ್ವಾಸವಿತ್ತು ; ಆದಕಾರಣ ನನ್ನ ಮಾತನ್ನು ತಮ್ಮ ಭಾಷೆಯಲ್ಲಿ ಅನುವಾದ ಮಾಡಲು ಅವರು ತಮ್ಮ ಶಕ್ತಿಯನ್ನೆಲ್ಲ ಉಪಯೋಗ ಸುತ್ತಿದ್ದರು. ಅವರೊಬ್ಬ ಹುಟ್ಟು ವಾಙ್ಮಿ; ಬಹಳ ಅಮೋಘವಾದ ಹಾಗೂ ಪ್ರಭಾವಶಾಲಿಯಾದ ರೀತಿಯಲ್ಲಿ ಮಾತನಾಡುತ್ತಾರೆ.

ಶ್ರದ್ಧಾಳು ಮುಸಲ್ಮಾನ

ಮಿಸ್ ಮ್ಯೂರಿಯಲ್ ಲೆಸ್ಟರ್ (' ಚಕ್ರಗೋಷ್ಠಿ ' ಯ ಸಮಯದಲ್ಲಿ ಈಸ್ಟ್ ಎಂಡ್ (ಲಂಡನ್) ನಲ್ಲಿ ನಾನು ಆಕೆಯೊಡನೆ ಇಳಿದುಕೊಂಡಿದ್ದೆ. ಇದನ್ನು ಬರೆಯುತ್ತಿರುವ ಸಮಯದಲ್ಲಿ ಆಕೆ ಸರಹದ್ದು ಪ್ರಾಂತದಲ್ಲಿ ಇದ್ದಾರೆ). ಬಾದಶಹ ಖಾನರನ್ನು ಭೇಟಿಯಾಗಿ, ಅವರ ಬಗೆಗೆ ಹೀಗೆ ಬರೆದಿದಾರೆ :—

" ಇದೀಗ ನಾನು ಬಾದಶಹ ಖಾನರನ್ನು ಅರಿತುಕೊಳ್ಳತೊಡಗಿದೇನೆ. ಅದ್ಭುತ ವ್ಯಕ್ತಿಗಳನ್ನು ಭೇಟಿಯಾಗುವ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನನ್ನ ಜೀವನದಲ್ಲಿ ಇಂಥ ಗೌರವ ಇನ್ನೆಲ್ಲಿಯೂ ಸಿಕ್ಕುವ ಸಂಭವವಿಲ್ಲ. ಅವರು ಹೊಸ ' ಒಡಂಬಡಿಕೆ ' (ಟೆಸ್ಟಮೆಂಟ್) ಯ ರಾಜರೂ ಆಗಿದಾರೆ. ಆವರು ಅದೆಷ್ಟು ಶ್ರೇಷ್ಠ ಸಂತರು ! ತಮ್ಮ ಮೂಲಕ ಅವರ ಪರಿಚಯ ಮಾಡಿಕೊಳ್ಳಲು ಸಾಧ್ಯವಾಯಿತು. ಅದಕ್ಕಾಗಿ ತಮಗೆ ಧನ್ಯವಾದಗಳು "

" ನಾಳೆ ಅವರು ನಮ್ಮನ್ನು ಉತ್ತಮಂಜಾಗೆ ಕರೆದುಕೊಂಡು ಹೋಗ ಲಿದಾರೆ. ಮೀರಾಳನ್ನ ಪುನಃ ನೋಡಲು ಬಹಳ ಆನಂದವಾಗುವುದು ".

ಇದು ಸಮತೂಕ ಬುದ್ಧಿಯಿಲ್ಲದವರ ಬಾಯಿಂದ ಹೊರಟ ಅತಿಶ ಯೋಕ್ತಿ ಎಂಬುದಾಗಿ ನನಗೆ ಅನಿಸಿದ್ದರೆ, ವ್ಯಕ್ತಿಗತ ರೂಪದಲ್ಲಿ ಮಾಡಿರುವ

ಈ ಪ್ರಶಂಸೆಯನ್ನು ನಾನು ಎಂದಿಗೂ ಪ್ರಕಟಿಸುತ್ತಿರಲಿಲ್ಲ. ತಾವು ಯಾರನ್ನು ಭೇಟಿಯಾಗುತ್ತಾರೋ, ಅವರಲ್ಲಿರುವ ಸದ್ಗುಣಗಳ ಕಡೆಗೇ ಮ್ಯೂರಿಯಲ್ ಲೆಸ್ಟರರ ಗಮನ ಥಕ್ಕನೆ ಹರಿಯುವುದೆಂಬುದು ದಿಟ. ಅದೇನೂ ಕೆಟ್ಟುದಲ್ಲ, ಒಳ್ಳೆಯ ಗುಣವೇ. ದೋಷರಹಿತರಾಗಿರುವವರು ಯಾರೂ ಇಲ್ಲ. ಕೊನೆಗೆ ಭಗವಂತನಿಗೆ ಹೆದರಿ ನಡೆಯುವ ಸಂತರೂ ಸಹ ಅದರಿಂದ ಮುಕ್ತರಾಗಿಲ್ಲ. ತಮ್ಮಲ್ಲಿ ದೋಷವೇನೂ ಇಲ್ಲದಿರುವುದರಿಂದ ಅವರು 'ಸಂತರಾಗಿಲ್ಲ; ತಮ್ಮಲ್ಲಿ ದೋಷವಿದೆಯೆಂಬುದನ್ನು ಅರಿತವರಾಗಿರುವುದರಿಂದ, ಅದನ್ನು ಮುಚ್ಚಿಡದೆ ಇರುವುದರಿಂದ ಹಾಗೂ ಅದರಿಂದ ಮುಕ್ತರಾಗಿ ಒಳ್ಳೆಯವರಾಗಲು ಸದಾ ಸಿದ್ಧರಾಗಿರುವುದರಿಂದ ಅವರು 'ಸಂತ' ರಾಗಿದಾರೆ. ಖಾನ್ ಸಾಹೇಬರೂ ಅಂಥವರೇ. ಖುದಾಯಿಖಿತ್ಮತ್‌ಗಾರ್ ಎಂದು ಕರೆಸಿಕೊಳ್ಳುವುದರಲ್ಲೇ ಅವರಿಗೆ ಹೆಮ್ಮೆ. ಅವರೊಬ್ಬ ಶ್ರದ್ಧಾಳು ಮುಸಲ್ಮಾನರು. ವ್ರತೋಪವಾಸ-ನಮಾಜ ಮಾಡುವುದನ್ನು ಎಂದಿಗೂ ತಪ್ಪುವುದಿಲ್ಲ. ಕೊರಾನಿಗೆ ಅವರು ಮಾಡುವ ವ್ಯಾಖ್ಯೆಗಿಂತ ಉದಾರವಾದ ವ್ಯಾಖ್ಯೆಯನ್ನು ನಾ ಬೇರೆ ಕಾಣೆ.*

ಖಾನ್‌ಸಾಹೇಬರ ಅಹಿಂಸೆ

ಎಲ್ಲೆಲ್ಲೂ 'ಶುದ್ಧ ಅಹಿಂಸೆ' ಯ ದಹನ ತಾನೇ ತಾನಾಗಿ ವಿಜೃಂಭಿಸಿರುವಾಗ, ಖಾನ್‌ಸಾಹೇಬರ ಜೀವಿತ-ಜಾಗೃತ ಅಹಿಂಸೆ ಸ್ಥಿರವಾಗಿ ಉಳಿದಿದೆ. ಈ ಮಾತು ನಮ್ಮ ಪಾಲಿಗೆ ದೀವಿಗೆಯ ಪ್ರಕಾಶ ಇದ್ದ ಹಾಗೆ. ಖಾನ್‌ಸಾಹೇಬರ 'ನಿವೇದನೆ' ಮನನ ಯೋಗ್ಯವಾಗಿದೆ. ಖಾನ್ ಸಾಹೇಬರಿಗೆ ಒಪ್ಪುವಂಥದೇ ಅದು. ಖಾನ್‌ಸಾಹೇಬರು ಪಠಾಣರು. ಪಠಾಣರು ಕತ್ತಿ-ಬಂದೂಕುಗಳೊಡನೆಯೇ ಜನ್ಮ ತಾಳಿದಾರೆ—ಎಂದು ಹೇಳಬಹುದಾಗಿದೆ.

ರೌಲೆಟ್ ಆಕ್ಟ್ ಸಂಬಂಧದ ಹೋರಾಟದ ಸಮಯದಲ್ಲಿ ಖುದಾಯಿಖಿದ್‌ಮತ್‌ಗಾರರು ಸಮರಸನ್ನದ್ಧರಾಗಿ ನಿಂತಾಗ, ಖಾನ್‌ಸಾಹೇಬರು

ಅವರಿಂದ ಶಸ್ತ್ರತ್ಯಾಗ ಮಾಡಿಸಿದರು. ಸರಕಾರದೊಡನೆ ಹೋರಾಟವನ್ನೋ ಮಾಡಬೇಕಾಗಿಯೇ ಇತ್ತು ; ಆದರೆ, ಖಾನ್‌ಸಾಹೇಬರ ನಿಜವಾದ ಅಹಿಂಸೆಯ ಪರೀಕ್ಷಾ-ಪ್ರಯೋಗ ಬೇರೆ ಕಡೆಯಲ್ಲೂ ಆಯಿತು. ಪಠಾಣರಲ್ಲಿ ಸೇಡು ತೀರಿಸಿಕೊಳ್ಳುವ ಕ್ರಮ ಅತ್ಯುಗ್ರವಾಗಿದೆ. ಒಂದು ಸಂಸಾರ ಅಥವಾ ಮನೆತನದಲ್ಲಿ ಕೊಲೆಯಾದರೆ, ಮರು-ಕೊಲೆಯಿಂದಲೇ ಅದರ ಸೇಡು ತೀರಿಸಿಕೊಳ್ಳಬೇಕಾಗುತ್ತದೆ. ಒಂದು ಬಾರಿ ಕೊಲೆಯ ಸೇಡು ತೀರಿಸಿಕೊಂಡಮೇಲೆ, ಪುನಃ ಅದರ ಸೇಡು ತೀರಿಸಿಕೊಳ್ಳಬೇಕಾಗುತ್ತದೆ. ಹೀಗೆ, ಪೀಳಿಗೆ-ಪೀಳಿಗೆಯ ಮೇಲಿನ ರಕ್ತದಾಹ ತೀರಿಸಿಕೊಳ್ಳುವ ಕ್ರಮಕ್ಕೆ ಕೊನೆಯೇ ಇರುತಿರಲಿಲ್ಲ. ಹಿಂಸೆಯ ಪರಿಮಿತಿಯೂ ಅದೇ ; ಹಿಂಸೆಯ 'ದಿವಾಳಿತನ' ವೂ ಅದೇ. ಕಾರಣ, ಆ ರೀತಿ ರಕ್ತದಾಹ ತೀರಿಸಿಕೊಳ್ಳುತ್ತ ಹೋಗುತ್ತಿದ್ದುದರಿಂದ ಮನೆ-ಮನೆತನಗಳೇ ನಾಶವಾಗುತ್ತಿದ್ದವು. ಖಾನ್ ಸಾಹೇಬರು ಪಠಾಣರ ಆ ವಿನಾಶವನ್ನು ಕಂಡರು ; ಅಹಿಂಸೆಯಲ್ಲೇ 'ಕಲ್ಯಾಣ' ವನ್ನೂ ಕಂಡುಕೊಂಡರು. ಅವರಿಗೆ ಹೀಗೆ ಅನಿಸಿತು: "ಕೊಲೆಯ ಸೇಡುತೀರಿಸಿಕೊಳ್ಳಬಾರದು ಎಂಬ ಮಾತನ್ನಷ್ಟೇ ಅಲ್ಲ, ಕೊಲೆ ಮಾಡುವುದನ್ನೇ ಮರೆತುಬಿಡಬೇಕು ಎಂಬ ಮಾತನ್ನು ನಾನು ಮಂದಿಗೆ ಮನವರಿಕೆ ಮಾಡಿಕೊಡಬಲ್ಲೆನಾದರೆ, ಪರಸ್ಪರ ಸೇಡು ತೀರಿಸಿಕೊಳ್ಳುವುದು ನಿಂತುಹೋಗುವುದು. ಆಗ ನಾವು ಬದುಕಿ ಬಾಳಬಲ್ಲೆವು ; ಬಾಳನ್ನು ಸಫಲಗೊಳಿಸಿಯೂ ಕೊಳ್ಳಬಲ್ಲೆವು". ಅದು ನಗದು ವ್ಯಾಪಾರ. ಅವರ ಅನುಯಾಯಿಗಳು ಅದನ್ನು ಅನುಷ್ಠಾನಕ್ಕೆ ತಂದರು. ಇದೀಗ ರಕ್ತದಾಹ (ಕೊಲೆಯ ಸೇಡು) ತೀರಿಸಿಕೊಳ್ಳುವುದನ್ನೇ ಮರೆತುಬಿಟ್ಟಿರುವ ಖುದಾಯಿ ಖಿದ್‌ಮತ್‌ಗಾರರನ್ನು ನಾವು ನೋಡಬಹುದಾಗಿದೆ. ಇದನ್ನು ಶಕ್ತಿಶಾಲಿಗಳ ಅಹಿಂಸೆ ಅಥವಾ ನಿಜವಾದ ಅಹಿಂಸೆ ಎನ್ನಬಹುದು.

ಖಾನ್ ಸಾಹೇಬರು ಕಾಂಗ್ರೆಸ್ಸಿನಲ್ಲಿಯೇ ಉಳಿದುಕೊಂಡಿದ್ದರೆ, ಅವರ ಬಾಳ ಕಾರ್ಯವೇ ಬೂದಿಪಾಲಾಗಿ ಬಿಡುತ್ತಿತ್ತು. "ನೀವು ಯುದ್ಧಕ್ಕೆ ಸೇರಿರಿ. ಸೇಡು ತೀರಿಸಿಕೊಳ್ಳಬಾರದೆಂಬ ಕಟ್ಟಳೆ ಕಳಚಿ ಬಿದ್ದಿತೆಂದು ಭಾವಿಸಿರಿ"—ಎಂಬುದಾಗಿ ಅವರು ಪಠಾಣರಿಗೆ ಯಾವ ಮುಖದಿಂದ ಹೇಳಬೇಕು? ಅಂಥ ಭಾಷೆ ಪಠಾಣರಿಗೆ ಅರ್ಥವಾಗುವುದೇ ಇಲ್ಲ.

ಅವರು ಫಕ್ಕನೆ ಹೀಗೆಯೇ ಉತ್ತರ ಕೊಟ್ಟಾರು—‘ ಈಗ ಜರ್ಮನಿ ಸೇಡು ತೀರಿಸಿಕೊಳ್ಳುತ್ತಿದೆ; ಇಂಗ್ಲೆಂಡ್ ಎದುರಿಸುತ್ತಿದೆ. ಅದು ಸೋತು ಹೋದರೆ, ಪುನಃ ಯುದ್ಧದ ಸಿದ್ಧತೆ ಮಾಡಿಯೇ ಮಾಡುವುದು. ಆದ ಕಾರಣ, ಈ ಯುದ್ಧಕ್ಕೂ ಕೊಲೆಯ ಸೇಡನ್ನು ಕೊಲೆಯಿಂದಲೇ ತೀರಿಸಿ ಕೊಳ್ಳುವ ನಮ್ಮ ಕ್ರಮಕ್ಕೂ ಎಳ್ಳಷ್ಟೂ ವ್ಯತ್ಯಾಸವಿಲ್ಲ’. ಅಂಥ ವಾದದ ಮುಂದೆ ಖಾನ್‌ಸಾಹೇಬರ ನಾಲಿಗೆ ಬಂದಾಗಲೇ ಬೇಕಷ್ಟೆ? ಅಂತಲೆ ಅವರು ತಮ್ಮ ಕಾರ್ಯವನ್ನೇ ನಡೆಸಿಕೊಂಡು ಹೋಗಲು ಇಚ್ಛಿಸಿ, ಕಾಂಗ್ರೆಸ್ಸಿನಿಂದ ಹೊರಬರುವ ತೀರ್ಮಾನ ಮಾಡಿದರು. ಅಹಿಂಸೆಯ ಸಂದೇಶವನ್ನು ಮಂದಿಗೆ ಮುಟ್ಟಿಸುವುದರಲ್ಲಿ ಖಾನಸಾಹೇಬರಿಗೆ ಎಷ್ಟರ ಮಟ್ಟಿನ ಯಶಸ್ಸು ದೊರೆತಿದೆ ಎಂಬುದು ನನಗೆ ತಿಳಿಯದು. ಇಷ್ಟು ಮಾತ್ರ ಬಲ್ಲೆ—ಅಹಿಂಸೆಯಲ್ಲಿ ಖಾನ ಸಾಹೇಬರಿಗೆ ಇರುವ ಶ್ರದ್ಧೆ ಕೇವಲ ಬುದ್ಧಿಪೂರ್ವಕವಾದುದಲ್ಲ; ಹೃದಯಾಂತರಾಳದಿಂದ ಹುಟ್ಟಿ ಬಂದುದು. ಅಂತಲೇ ಅದು ಸದಾ ಕಾಲಕ್ಕೂ ಸ್ಥಿರವಾಗಿ ಉಳಿದಿದೆ. ತಮ್ಮ ಶಿಷ್ಯರು ತಾವು ಕೊಟ್ಟ ಶಿಕ್ಷಣಕ್ಕೆ ಎಲ್ಲಿಯವರೆಗೆ ಅಂಟಿಕೊಂಡಿರುವರೆಂಬುದನ್ನು ಸ್ವತಃ ಖಾನ ಸಾಹೇಬರೂ ಹೇಳಲಾರರು. ಆ ಮಾತಿನ ಚಿಂತೆ ಅವರಿಗೆ ಇಲ್ಲವೂ ಇಲ್ಲ. ತಮ್ಮ ಕರ್ತವ್ಯವನ್ನು ನೆರವೇರಿಸುವುದಷ್ಟೇ ಅವರಿಗೆ ಬೇಕಾಗಿದೆ. ಫಲವನ್ನು ಪರಮಾತ್ಮನಿಗೆ ಒಪ್ಪಿಸಿಬಿಟ್ಟಿದಾರೆ. ಅವರ ಅಹಿಂಸೆಯ ಆಧಾರವೆಂದರೆ, ಕುರಾನ್ ಶರೀಫ್. ಖಾನ್‌ಸಾಹೇಬರು ಅಪ್ಪಟ ಮುಸಲ್ಮಾನರು. ಅವರು ನನ್ನೊಡನೆ ಸುಮಾರು ಒಂದು ವರುಷ ಕಾಲ ಇದ್ದರು. ರೋಗಗ್ರಸ್ತರಾಗಿ ದ್ದಾಗಲೂ ಅವರು ನಮಾಜ್ ಮಾಡುವುದನ್ನಾಗಲಿ, ವ್ರತೋಪವಾಸ ಮಾಡು ವುದನ್ನಾಗಲಿ ತಪ್ಪಿಸಲಿಲ್ಲ. ಬೇರೆ ಧರ್ಮಗಳ ಬಗೆಗೆ ಅವರಿಗೆ ಪೂರ್ಣ ಆದರವಿದೆ. ಅವರು ಸ್ವಲ್ಪ ಗೀತೆಯ ಅಭ್ಯಾಸವನ್ನೂ ಮಾಡಿದಾರೆ. ಯಾವಾಗಲೂ ಅವರು ಓದುವುದು ಬಹಳ ಕಡಿಮೆ; ಆದರೆ, ಓದಿದುದರಲ್ಲಿ, ಕೇಳಿದುದರಲ್ಲಿ ಅನುಷ್ಠಾನ ಯೋಗ್ಯವಾದ ಅಂಶವೇನಾದರೂ ಇದ್ದರೆ, ಅದನ್ನು ಸಾವಕಾಶ ಮಾಡದೆ ಅನುಷ್ಠಾನಕ್ಕೆ ತಂದು ಬಿಡುತ್ತಾರೆ. ದೀರ್ಘ ವಾದ ವಾದ-ವಿವಾದಗಳಲ್ಲಿ ಅವರು ಸಿಲುಕಿಕೊಳ್ಳುವುದಿಲ್ಲ. ಸ್ವಲ್ಪ ಅರ್ಥ ವಾಯಿತೋ–ಕೂಡಲೇ ‘ ಹೌದು ’ ಅಥವಾ ‘ ಇಲ್ಲ ’ ಎಂದು ಹೇಳಿ ಬಿಡ

ಬಲ್ಲವರಾಗಿದ್ದಾರೆ. ಖಾನ್ ಸಾಹೇಬರಿಗೆ ಸ್ಪಷ್ಟ ಸಫಲತೆ ಪ್ರಾಪ್ತವಾದರೆ, ಅದರಿಂದ ಎಷ್ಟೆಷ್ಟೋ ತೊಡಕುಗಳು ಬಗೆಹರಿದಾವು. ಈಗಂತೂ ಏನು ಹೇಳಲಿಕ್ಕೂ ಬರುವುದಿಲ್ಲ. ಕುಂಬಾರ ಚಕ್ರದ ಮೇಲೆ ಮಣ್ಣು ಇಟ್ಟು ದಾಗಿದೆ-ಮಡಿಕೆಯೇ ಇಳಿಯುವುದೋ, ಹೂಜಿಯೇ ಇಳಿವುದೋ ಎಂಬು ದನ್ನು ಭಗವಂತನೇ ಬಲ್ಲ.೬

ಖಾನ್‌ಸಾಹೇಬರ ಕೀರ್ತಿಯ ಆಧಾರ

'ಅಸೋಸಿಯೇಟೆಡ್ ಪ್ರೆಸ್ 'ಬಾದಶಹ ಖಾನರ ವಿಷಯದಲ್ಲಿ ಕೆಳಗೆ ಕಾಣಿಸಿದ ಸುದ್ದಿಯನ್ನು ಪ್ರಕಟಿಸಿದೆ :—

"ಸರಹದ್ದು ಪ್ರಾಂತದ ಪ್ರಾಂತೀಯ ಕಾಂಗ್ರೆಸ್ ಸಮಿತಿ ಕೆಳಗೆ ಕಾಣಿಸಿದ ನಿರ್ಣಯವನ್ನು ಅಂಗೀಕರಿಸಿದೆ :

'ದೇಶದ ಅನೇಕ ವರ್ತಮಾನ ಪತ್ರಿಕೆಗಳಲ್ಲಿ ಪಠಾಣರ ವಿರುದ್ಧ ವಾಗಿಯೂ ನಿರ್ವಿವಾದ ನಾಯಕರಾದ ಖಾನ್ ಅಬ್ದುಲ್ ಗಫ್ಫಾರ್ ಖಾನರ ವಿರುದ್ಧವಾಗಿಯೂ, ಖುದಾಯಿ ಖಿದ್‌ಮತ್‌ಗಾರ್ ಆಂದೋಲನದ ವಿರುದ್ಧವಾಗಿಯೂ ಮಾಡಲ್ಪಡುತ್ತಿರುವ ಪ್ರಚಾರದ ಬಗೆಗೆ ನಾವು ಜನತೆ ಯನ್ನು ಎಚ್ಚರಿಸ ಬಯಸುತ್ತೇವೆ. 'ಸರಹದ್ದು ಪ್ರಾಂತದ ಕಾರ್ಯಕರ್ತರಲ್ಲಿ ಒಡಕು ಹುಟ್ಟಿಕೊಂಡಿದೆ; ಒಳಬಣಗಳು ತಮ್ಮ ಅಮಂಗಳಕರ ರೂಪವನ್ನು ತೋರ ತೊಡಗಿವೆ'—ಎಂದು ಪರ್ಯಾಯವಾಗಿ ಸೂಚಿಸಲಾಗಿದೆ. ಆದರೆ, ಈವರೆಗೆ ಒಬ್ಬನೇ ಒಬ್ಬ ಖುದಾಯಿ ಖಿದ್‌ಮತ್‌ಗಾರನೂ ರಾಜಿನಾಮೆ ಕೊಟ್ಟಿಲ್ಲ. ಅವರೆಲ್ಲರೂ ಖಾನ್ ಅಬ್ದುಲ್ ಗಫ್ಫಾರ್ ಖಾನರ ನೇತೃತ್ವ ದಲ್ಲಿ ಅಭೇದ್ಯ ದಲದೋಪಾದಿಯಲ್ಲಿ ಸಂಘಟಿತರಾಗಿದ್ದಾರೆ. ಒಡಕಿಗೆ ಸಂಬಂಧಿಸಿದ ಈ ದಂತಕಥೆಗಳೆಲ್ಲ ಹಲವು ಸ್ವಾರ್ಥಿ ಹಾಗೂ ಅಧಿಕಾರ ಲೋಲುಪ ವ್ಯಕ್ತಿಗಳ ಕಲ್ಪನೆಯ 'ಸೃಷ್ಟಿ' ಮಾತ್ರ. ಹೀಗೆ ಮಾಡಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬಹುದೆಂದು ಅವರು ಭಾವಿಸಿದ್ದಾರೆ; ಈ ಎಲ್ಲ ಪ್ರಚಾರಕ್ಕೆ ಸರಕಾರದ ಪ್ರೇರಣೆಯಂತೂ ಇದ್ದೇ ಇದೆ; ಆದರೆ ಸರಹದ್ದು

ಪ್ರಾಂತದ ಜನತೆಯಲ್ಲಿ ಈ ಮಂದಿಗೆ ಸಂಗಾತಿಗಳಾರೂ ಇಲ್ಲ. ಅಧಿಕಾರ ಸ್ವೀಕಾರದ ಮಾತು ದೂರವೇ ಉಳಿಯಿತು ; ಇಂದು ಭಾರತದಲ್ಲಿ ಆಂಗ್ಲ-ಸರಕಾರದೊಡನೆ ನಮಗೆ ಯಾವ ಗೊಡವೆ ಗೋಜೂ ಇರುವಂತಿಲ್ಲ—ಎಂಬ ಮಾತನ್ನೂ ಸರಹದ್ದು ಪ್ರಾಂತದ ಪ್ರತಿಯೊಬ್ಬ ರಾಷ್ಟ್ರವಾದಿಯೂ ಒಳಿತಾಗಿ ಅರಿತಿದಾನೆ. ಹಿಂದೂಸ್ಥಾನದ ಇತರ ಭಾಗಗಳಲ್ಲಿ ಪಾರ್ಲಿಮೆಂಟರಿ ಕಾರ್ಯಕ್ರಮಕ್ಕೆ-ಏನೇ ಆಕರ್ಷಣೆಯಿರಲಿ, ಸರಹದ್ದು ಪ್ರಾಂತದಲ್ಲಿ ಅದಕ್ಕೆ ಎಂದಿಗೂ ಸ್ಥಾನವಿಲ್ಲ.

ಖಾನ್ ಅಬ್ದುಲ್ ಗಫ್ಫಾರ್ ಖಾನರು ಹಳ್ಳಿಗಳಲ್ಲಿ ಆಂತರಿಕ ಸುವ್ಯವಸ್ಥೆ ಹಾಗೂ ಅನ್ನ-ವಸ್ತ್ರದ ಸ್ವಾವಲಂಬನೆಯ ಸಂಬಂಧದಲ್ಲಿ ಮಾಡಿರುವ ಶಾಂತ, ಪಾರಮಾರ್ಥಿಕ ರಚನಾತ್ಮಕ ಕಾರ್ಯದಿಂದಾಗಿ ಅಲ್ಲಿಯ ಜನತೆಯಲ್ಲಿ ವಿಶೇಷವಾಗಿ ಬಡಜನತೆಯಲ್ಲಿ ಅವರ ಜನಪ್ರಿಯತೆ ಇನ್ನೂ ಹೆಚ್ಚಿದೆ. ಅವರು ಸರಹದ್ದು ಪ್ರಾಂತದ ಅಕ್ಕಪಕ್ಕದ ಜನಸಮೂಹದಲ್ಲಿಯೂ ಐಕ್ಯತೆ ಮತ್ತು ಶಾಂತಿಯ ಸಂದೇಶವನ್ನು ಮುಟ್ಟಿಸುವ ಕನಸು ಕಾಣುತ್ತಿದಾರೆ.

“ ಮುಂಬರುವ ಸಂಕಟ ಸಮಯದಲ್ಲಿ ಜನತೆಯ ನಿಜವಾದ ಸೇವೆ ಮಾಡಬಲ್ಲ ಶಾಂತ ಹಾಗೂ ಅಹಿಂಸಕ ಸೇನೆಯೊಂದನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಅವರು ತಮ್ಮ ಸರ್ವಶಕ್ತಿಯನ್ನೂ ಧಾರೆ ಎರೆದಿದ್ದಾರೆ. ಕೋಟ್ಯಂತರ ರೂಪಾಯಿ ಖರ್ಚುಮಾಡಿಯೂ ಯಾವ ಕಾರ್ಯವನ್ನು ಸ್ಥಾಪಿಸುವುದರಲ್ಲಿ ಸರಕಾರ ವಿಫಲವಾಗಿದೆಯೋ, ಅದನ್ನು ಅವರು ಜನತೆಯ ಶುದ್ಧ ಐಚ್ಛಿಕ ಸಹಾಯದ ಮೂಲಕ ಸ್ಥಾಪಿಸುವ ಪ್ರಯತ್ನಮಾಡಿ, ಸಹಾನುಭೂತಿ ಹಾಗೂ ಸಹಕಾರ ಪಡೆಯಲು ಅಧಿಕಾರ ಸಂಪಾದಿಸಿದಾರೆ. ಗಡಿಪ್ರಾಂತದ ಜನ ಅವರ ಕರೆಗೆ ಸರಿಸರಿಯಾಗಿ ಓಗೊಡುವರೆಂದೂ, ದೇಶದ ನಿಜವಾದ ಹಿತಬಯಸುವ ಎಲ್ಲ ವರ್ತಮಾನ ಪತ್ರಿಕೆಗಳು ಹಾಗೂ ಪತ್ರಿಕಾಕರ್ತರು ಎಲ್ಲ ಪೂರ್ವಗ್ರಹವನ್ನೂ ಬಿಟ್ಟು, ಅವರ ಈ ಕಾರ್ಯದಲ್ಲಿ ಆಸಕ್ತಿ ವಹಿಸುವರೆಂದೂ ಆಶಿಸುತ್ತೇವೆ.”

ಸರಹದ್ದು ಪ್ರಾಂತೀಯ ಕಾಂಗ್ರೆಸ್ ಸಮಿತಿ ಈ ನಿರ್ಣಯವನ್ನು ಅಂಗೀಕರಿಸಿ ಅದನ್ನು ಬಿನ್ನಹದ ರೂಪದಲ್ಲಿ ಪ್ರಕಟಿಸುವುದು ಸೂಕ್ತವಾಗಿಯೇ ಇದೆ. ಆದರೆ, ಬಾದಶಹಖಾನರ ಕೀರ್ತಿ ಸರಹದ್ದು ಪ್ರಾಂತೀಯ

ಸಮಿತಿಯ ಈ ನಿರ್ಣಯಕ್ಕಿಂತ ಎಷ್ಟೋ ಮಿಗಿಲಾದ ಬಲಯುತ ಆಧಾರದ ಮೇಲೆ ಅವಲಂಬಿತವಾಗಿದೆ. ಕಾಲು ಶತಮಾನಕ್ಕೂ ಮಿಕ್ಕ ಅವರು ಮಾಡಿರುವ ನಿಸ್ವಾರ್ಥ ಜನಸೇವೆ ಹಾಗೂ ಅದರ ಫಲವಾಗಿ ಪ್ರಾಪ್ತವಾಗಿರುವ ಜನಪ್ರಿಯತೆಯೇ ಅವರ ಕೀರ್ತಿಯ ಆಧಾರ. ತಮ್ಮ ನಿಂದಕರ ಎಲ್ಲ ಕುಚೇಷ್ಟೆಗಳನ್ನೂ ಎದುರಿಸಿ, ಖಾನಸಾಹೇಬರು ಇದುವರೆಗಿನ ಎಲ್ಲ ಅಗ್ನಿ ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿದಾರೆ. ಮುಂದೆಯೂ ಪುನಃ ಪರೀಕ್ಷಾ ಕಾಲ ಬಂದಿತೆಂದರೆ ಮೊದಲಿನ ಹಾಗೆಯೇ ತಮ್ಮ ಜನಪ್ರಿಯತೆಯನ್ನು ಅವರು ತೋರಗೊಡುವರೆಂಬುದರಲ್ಲಿ ನನಗೆ ಎಳ್ಳಿನಿತೂ ಸಂಶಯವಿಲ್ಲ.೭

'ಬಾ' ಅವರ ಬಂಧನ

ಇಂದು (೩೧-೩-೩೨) 'ಲೀಡರ್' ಪತ್ರಿಕೆಯ "ಲಂಡನ್ ಪತ್ರ" ಚೆನ್ನಾಗಿತ್ತು. ಸಾಧಾರಣವಾಗಿ ಪೋಲಕ್ ಮೃದುವಾದ ಮಾತುಗಳಲ್ಲಿಯೇ ಬರೆಯುತ್ತಾರೆ. ಆದರೆ ಈ ಬಾರಿ ಹಿಂದೂಸ್ತಾನದ ಘಟನೆಗಳ ಬಗೆಗೆ ಸಾಕಷ್ಟು ಕಾವಿನಿಂದಲೇ ಬರೆದಿದ್ದಾರೆ. ಬಾ ಅನ್ನು 'ಸಿ' ತರಗತಿ ಕೈದಿಯಾಗಿ ಮಾಡಿ, ಹಿಂದಿನಿಂದ 'ಎ' ತರಗತಿ ಕೈದಿಯನ್ನಾಗಿ ಮಾಡಿದುದು–ಕರಾಚಿಯಲ್ಲಿ ೮೦ ವರುಷ ವಯಸ್ಸಿನ ಮಹಿಳೆಯೋರ್ವಳನ್ನು ಬಂಧಿಸಿದುದು– ಈ ವಿಷಯಗಳ ಮೇಲೆ ಚೆಂದವಾಗಿ ಬರೆದಿದ್ದಾರೆ. ಬಾ ಗಾಂಧೀಜೀ ಪತ್ನಿ ಎಂಬ ಕಾರಣದಿಂದ ಆಕೆಯನ್ನು 'ಸಿ' ತರಗತಿಯಿಂದ 'ಎ' ತರಗತಿಗೆ ವರ್ಗಾಯಿಸಲಾಯಿತು. ೬೦ ವರುಷ ಬೇರೆ ಯಾರಾದರೂ ಮಹಿಳೆಯಾಗಿದ್ದರೆ, ಆಕೆಗೆ ಸಿಕ್ಕುತ್ತಿದ್ದುದು 'ಸಿ' ತರಗತಿ ತಾನೆ ? ಅವರ ಈ ವಾದ ಚೆನ್ನಾಗಿದೆ. ಆದರೆ ಸ್ಯಾಮ್ಯುಯಲ್ ಹೋರ್ ಅವರ ವಿಷಯದಲ್ಲಿ ಅವರು ಬರೆದಿರುವ ಮಾತು ಎಲ್ಲಕ್ಕಿಂತ ಸೊಗಸಾಗಿದೆ. ಹಿಂದೂಸ್ಥಾನದಲ್ಲಿ ಇಂಥ ಘಟನೆಗಳೆಲ್ಲ ನಡೆಯುತ್ತಿರುವಾಗ, ಅತ್ತ ಸ್ಯಾಮ್ಯುಯಲ್ ಹೋರರು 'ಸ್ಕೇಟಿಂಗ್' ಆಡುವುದರಲ್ಲಿ ನಿರತರಾಗಿದ್ದಾರೆ. ಕಾರವಾನ್ ಹಾಗೂ ಬೊಗಳುವ ನಾಯಿಗಳ ಉಪಮಾನ ಇದಕ್ಕೆ–ಅನ್ವಯಿಸದಿರಬಹುದಾದರೂ, ಸುಧಾರಿಸಲು ಶಕ್ಯವೇ

ಆಗದಷ್ಟು ಇಲ್ಲಿಯ ಕಾರವಾನ್ ಮುಂಬರಿಯದ ಹಾಗೆ ನಾಯಿಗಳು ಬೊಗಳುತ್ತಲೇ ಇದ್ದುಬಿಡದ ಹಾಗೆ ನೋಡಿಕೊಳ್ಳಬೇಕಾಗುವುದು—ಹೀಗೆ ಹೇಳಿ, ಹೋರರಿಗೆ ಎಚ್ಚರಿಕೆ ಕೊಟ್ಟದ್ದಾರೆ.

ಬಾಪೂ ಸರಿ- ಇದು ಫಿರೋಜ್‌ಶಾಹ್ ಮೆಹ್ತಾ ಅವರ ಮಾತಿನಂತಾಯಿತು. ಅವರಿಗೆ ದಕ್ಷಿಣ ಆಫ್ರಿಕಾದ ಹೋರಾಟದ ಚಿಂತೆ ಏನೇನೂ ಇರಲಿಲ್ಲ. ಆದರೆ, ಬಾ ಅನ್ನು ಬಂಧಿಸಿದ ಸುದ್ದಿ ಕೇಳಿದಾಗ ಅವರು ಕಿಡಿಕಿಡಿಯಾಗಿ, ಪ್ರಸಿದ್ಧವಾದ 'ಟೌನ್ ಹಾಲ್' ಭಾಷಣ ಮಾಡಿದರು. ಪೋಲಕರಿಗೂ ಬಾ ವಿಷಯ ಸಹಿಸಲಿಕ್ಕಾಗದೆ, ಹೀಗೆ ಬರೆದಿದ್ದಾರೆ. ವಲ್ಲಭಭಾಯಿ: ಬಾ ವಿಷಯ ಯಾರಿಗಾದರೂ ಚುಚ್ಚುವಂಥದೆ. ಬಾ ಆದರೋ ಅಹಿಂಸೆಯ ಮೂರ್ತಿ. ಇಂಥ ಅಹಿಂಸೆಯ ಮುದ್ರೆಯನ್ನು ನಾನು ಬೇರಾವ ಸ್ತ್ರೀಯ ಮುಖದಲ್ಲೂ ಕಂಡಿಲ್ಲ. ಆಕೆಯ ಅಪಾರ ನಮ್ರತೆ, ಸರಳತೆ ಯಾರನ್ನಾದರೂ ಅಚ್ಚರಿಗೊಳಿಸುವಂಥದು.

ಬಾಪೂ: ಸರಿಯಾದ ಮಾತೇ ವಲ್ಲಭಭಾಯಿ. ಆದರೆ, 'ಬಾ'ಳ ಧೈರ್ಯ ಹಾಗೂ ಪರಾಕ್ರಮವೇ ಆಕೆಯ ಎಲ್ಲಕ್ಕಿಂತ ದೊಡ್ಡ ಗುಣವೆಂದು ನನಗೆ ತೋರುತ್ತದೆ. ಆಕೆ ಹಠಮಾಡಬಹುದು; ಕೋಪಮಾಡಬಹುದು, ಹೊಟ್ಟೆಕಿಚ್ಚು ಪಡಬಹುದು. ಇದೆಲ್ಲವೂ ದಿಟ. ಆದರೂ ದಕ್ಷಿಣ ಆಫ್ರಿಕಾದಿಂದ ಹಿಡಿದು ಇಲ್ಲಿಯವರೆಗಿನ ಆಕೆಯ ಕರ್ತವ್ಯ ಪಾಲನೆಯನ್ನು ನೋಡಿದರೆ ಆಕೆಯ ಧೈರ್ಯ-ಪರಾಕ್ರಮವೇ ಎದ್ದುಕಾಣುತ್ತದೆ.ಳ

'ಬಾ' ಸ್ಮರಣೆ

ಬಾಪೂಗೆ ಆಯಾಸ ಇನ್ನು ಇದ್ದೇ ಇವೆ. 'ಬಾ'ಳ ಸ್ಮರಣೆ ಅವರಿಗೆ ದುಃಖವನ್ನು ಉಂಟುಮಾಡುತ್ತಲೆ ಇರುತ್ತದೆ. ಇಂದು ಪುನಃ ಹೇಳುತ್ತಿದ್ದರು:—

'ಬಾ'ಳ ಮರಣ ಭವ್ಯವಾಗಿತ್ತು. ಆ ಬಗೆಗೆ ನನಗೆ ಬಹಳ ಸಂತೊಷ,

ದುಃಖ, ನನ್ನ ಸ್ವಾರ್ಥಕ್ಕೆ ಸಂಬಂಧಿಸಿದುದು. ಅರವತ್ತೆರಡು ವರುಷಗಳ ಸಾಹಚರ್ಯದ ನಂತರ, ಆಕೆಯ ಸಂಗ ಭಂಗವಾದುದು ಮನಸ್ಸನ್ನು ಚುಚ್ಚುತ್ತದೆ. ಎಷ್ಟೇ ಪ್ರಯತ್ನಿಸಿದರೂ ಆಕೆಯ ನೆನಪು ಇಂದಿಗೂ ಮನಸ್ಸಿನಿಂದ ದೂರವಾಗದು.೯

ಬಾ ಸ್ಮಾರಕ

ಸಂಜೆ ತಿರುಗಾಟದ ಸಮಯದಲ್ಲಿ ಬಾಪೂ ಕನೂ ಗಾಂಧಿಯೊಡನೆ ಬಾ ಸ್ಮಾರಕಕ್ಕಾಗಿ ಹಣ ಕೂಡಿಸುವ ವಿಚಾರ ಕುರಿತು ಮಾತನಾಡುತ್ತಿದ್ದರು. ಬರುವ ಬಾಪೂ ಜಯಂತಿಯ ವೇಳೆಗೆ ೭೫ ಲಕ್ಷ ರೂಪಾಯಿ ಸಂಗ್ರಹಿಸುವ ವಿಷಯ ಮೊದಲೇ ತೀರ್ಮಾನವಾಗಿತ್ತು. ಆ ವಿಷಯವಾಗಿಯೇ ಕನೂ ಕೇಳುತ್ತಿದ್ದರು. ಬಾಪೂ ಹೇಳಿದರು—

"ಎರಡೂ ನಿಧಿಗಳನ್ನು ಒಟ್ಟುಗೂಡಿಸಿಬಿಡಿ. ಬಾ ನನ್ನೊಳಗೆ ಅಂತರ್ಗತವಾಗಿಯೇ ಬಿಟ್ಟಿದ್ದಳು. ತನ್ನ ಪತಿಯ ತೊಡೆಯ ಮೇಲೆ ಈ ರೀತಿ ಪ್ರಾಣ ಬಿಟ್ಟ ಸ್ತ್ರೀ ಬೇರೆ ಯಾರುಂಟು? ಕೊನೆಯ ಘಳಿಗೆಯಲ್ಲಿ ಆಕೆ ನನ್ನನ್ನು ಕರೆದಳು. ಆಗ ಆಕೆ ಹೊರಟು ಹೋಗುವಳೆಂದು ನಾನು ಭಾವಿಸಿರಲಿಲ್ಲ. ಅಂದು ನಾನು ಅಡ್ಡಾಡಲು ಹೋಗಿದಿದ್ದುದೂ ಪೆನಿಸಿಲಿನ್ ದೆಸೆಯಿಂದಲೇ ನಾನು ಅಡ್ಡಾಡಲಿಕ್ಕೆ ಹೋಗದೆ ನಿಂತೆ. ಮೃತ್ಯು ಶಯ್ಯೆಯಲ್ಲಿ ಮಲಗಿರುವವರಿಗೆ 'ಇಂಜೆಕ್ಷನ್' ಕೊಡುವುದೆಂದರೇನು? 'ಬಾ'ಳ ಬಳಿ ಕುಳಿತಾಗ ಆಕೆಯ ಕಥೆ ಇನ್ನು ಮುಗಿಯಿತೆಂದು ನನಗೆ ಅನಿಸಿತು. ಬಾ ಹೆಸರಿನಲ್ಲಿ ವಿಶ್ವವಿದ್ಯಾಲಯ ತೆರೆಯುವುದು ನಿರರ್ಥಕವೆಂದು ನನ್ನ ಭಾವನೆ. ವಿಶ್ವವಿದ್ಯಾಲಯದಲ್ಲಿ ಆಕೆಗೆ ಅಭಿರುಚಿ ಏನಿತ್ತು? ಚರಖಾ ಮೊದಲಾದುವುಗಳಲ್ಲಾದರೆ ಆಕೆಗೆ ಆಸಕ್ತಿ ಇತ್ತು. ಈ ನಿಧಿಯನ್ನು ನಮ್ಮಿಬ್ಬರ ಹೆಸರಿನಲ್ಲಿ ಕೂಡಿಸಿದರೆ, ಮುಂದಿಯ ಮೇಲೆ ಭಾರಬೀಳದು. ನನ್ನ ಜಯಂತಿಯಲ್ಲಿ 'ಬಾ'ಳ ಪಾಲು ಸದಾ ಇದ್ದೇ ಇದೆ. ಈ ನಿಧಿಯನ್ನು ಚರಖಾ ಹಾಗೂ ಗ್ರಾಮೋದ್ಯೋಗಕ್ಕಾಗಿ ಬಳಸಲಾಗುವುದು.೧೦

ಬಾ ಮತ್ತು ರಾಜಕೋಟೆಯ ಹೋರಾಟ

ರಾಜಕೋಟೆಯ ಹೋರಾಟದಲ್ಲಿ ಬಾ ಭಾಗವಹಿಸಿದ ಬಗೆಗೆ ಏನೂ ಬರೆಯಬಾರದೆಂಬುದೇ ನನ್ನ ಉದ್ದೇಶವಾಗಿತ್ತು. ಆದರೆ ಆಕೆ ಆ ಹೋರಾಟದಲ್ಲಿ ಭಾಗವಹಿಸಿದ ಬಗೆಗೆ ಆಗಿರುವ ಹಲವೊಂದು ಟೀಕೆಗಳಿಗೆ ಉತ್ತರ ಕೊಡುವುದು ಆವಶ್ಯಕವೆನಿಸುತ್ತದೆ. ಬಾ ಆ ಹೋರಾಟದಲ್ಲಿ ಪಾಲುಗೊಳ್ಳಬೇಕೆಂಬ ಮಾತು ನನಗೆ ಹೊಳೆದೇ ಇರಲಿಲ್ಲ. ಅಂಥ ಕಷ್ಟಗಳನ್ನು ಎದುರಿಸಲು ಆಕೆ ತೀರ ಇಳಿವಯಸ್ಸಿನಾಕೆಯಾಗಿದ್ದುದೇ ಅದಕ್ಕೆ ಮುಖ್ಯ ಕಾರಣ. ಈ ಮಾತು ಎಷ್ಟೋ ವಿಚಿತ್ರವೆಂದು ತೋರಲೊಲ್ಲದೇಕೆ; ಟೀಕಾಕಾರರು ನನ್ನ ಈ ಮಾತಿನಲ್ಲಿ ವಿಶ್ವಾಸವಿಡಲೇಬೇಕು.—ಬಾ ಅವಿದ್ಯಾವಂತಳೇ ಆಗಿದ್ದರೂ, ತನ್ನ ಮನಸ್ಸಿಗೆ ಬಂದುದನ್ನು ಮಾಡುವ ಸ್ವಾತಂತ್ರ್ಯ ಆಕೆಗೆ ಎಷ್ಟೋ ವರುಷಗಳಿಂದ ಇದ್ದೇ ಇದೆ. ದಕ್ಷಿಣ ಆಫ್ರಿಕಾದಲ್ಲೇನು, ಭಾರತದಲ್ಲೇನು, ಆಕೆ ಭಾಗವಹಿಸಿದ ಎಲ್ಲ ಹೊರಾಟಗಳಲ್ಲಿಯೂ ಸ್ವಯಂಪ್ರೇರಿತಳಾಗಿ, ಆಂತರಿಕ ಭಾವನೆಯಿಂದಲೇ ಭಾಗವಹಿಸಿದಾಳೆ. ಈ ಬಾರಿಯೂ ಹಾಗೆಯೇ ಆಯಿತು. ಮಣಿಬೆನ್ ಬಂಧಿತಳಾದ ಸುದ್ದಿಯನ್ನು ಕೇಳಿದಾಗ, ಆಕೆಗೆ ತೆಪ್ಪಗೆ ಕೂಡುವುದಾಗಲಿಲ್ಲ. ಹೋರಾಟದಲ್ಲಿ ಭಾಗವಹಿಸಲು ನನ್ನ ಅನುಮತಿ ಕೇಳಿದಳು. ನಾನು ಹೇಳಿದೆ— "ನೀನಿನ್ನೂ ಬಹಳ ನಿರ್ಬಲಳಿರುವಿ". ದಿಲ್ಲಿಯಲ್ಲಿ ಕೆಲವೇ ದಿನಗಳ ಕೆಳಗೆ ಆಕೆ ಬಚ್ಚಲುಮನೆಯಲ್ಲಿ ಜ್ಞಾನ ತಪ್ಪಿದ್ದಳು. ಆಗ ದೇವದಾಸ ಚಿತ್ತಸ್ಥೈರ್ಯದಿಂದ ಆಕೆಯನ್ನು ನೋಡಿಕೊಳ್ಳದೆ ಹೋಗಿದ್ದರೆ, ಅದೇ ಕಾಲಕ್ಕೆ ಸ್ವರ್ಗ ಮುಟ್ಟಿರುತ್ತಿದ್ದಳೇನೋ? ಆದರೆ ಬಾ ಉತ್ತರವಿತ್ತಳು.—"ನನಗೆ ಶರೀರದ ಚಿಂತೆ ಇಲ್ಲ" ಆಮೇಲೆ ಸರದಾರರನ್ನು ವಿಚಾರಿಸಿದೆ. ಅವರು ಅನುಮತಿ ಕೊಡಲು ಸುತರಾಂ ಸಿದ್ಧರಾಗಿರಲಿಲ್ಲ.

ಆಕೆಯ ಮೈಬೆವರಿತು. ರೆಸಿಡೆಂಟರ ಸೂಚನೆಯ ಪ್ರಕಾರ ಠಾಕೂರ ಸಾಹೇಬರು ವಚನಭಂಗ ಮಾಡಿದುದರಿಂದ ನನಗಾಗಿದ್ದ ಕ್ಲೇಶವನ್ನು ಆಕೆ ಕಂಡಿದ್ದಳು. ಅಲ್ಲದೆ ಆಕೆ ರಾಜಕೋಟೆಯ ಹೆಣ್ಣುಮಗಳು. ತನ್ನ ಅಂತರ್ವಾಣಿಗೆ ಕಿವಿಗೊಟ್ಟಳು. ರಾಜಕೋಟೆಯ ಹೆಣ್ಣುಮಕ್ಕಳು ರಾಜ್ಯದ

ಸ್ತ್ರೀಪುರುಷರ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತಿರುವಾಗ ತಾನು ತೆಪ್ಪಗೆ ಕುಳಿತಿರಲು ಅಳವೆ ?೧೧

ಕೀರ್ತಿಶೇಷ ಮಗನ್‌ಲಾಲ್

ಅಂದು ಗಾಂಧೀಜೀ ಅವರ ಮೌನದ ದಿನ. ಗಾಂಧೀಜೀ ಕೂಡಲೇ ಮಗನ್‌ಲಾಲರ ಮನೆಗೆ ಹೋಗಿ ಬಾಲಕರನ್ನು ತೊಡೆಯಮೇಲೆ ಕೂಡಿಸಿಕೊಂಡರು. ಇಡೀ ಆಶ್ರಮ ಸುದ್ದಿ ಕೇಳಿ ವಿಹ್ವಲವಾಯಿತು. ಆದರೆ, ಎಲ್ಲರೂ ಒಂದು ಕಡೆ ಕಲೆಯಬೇಕಾಗಿಲ್ಲ; ನಡೆಯುತ್ತಿರುವ ಕೆಲಸಗಳನ್ನು ನಿಲ್ಲಿಸಬೇಕಾಗಿಯೂ ಇಲ್ಲ-ಎಂಬುದಾಗಿ ಆಜ್ಞೆ ಆಯಿತು! ದೃಢವ್ರತ ಕರ್ಮವೀರನ ಮರಣದ ಬಗೆಗೆ ಶೋಕಾಚರಣೆ ಕೆಲಸಮಾಡುವುದರ ಮೂಲಕವೇ ಆಗಬೇಕಷ್ಟೆ. ಶಾಲೆ ಮೊದಲಾದವನ್ನು ಬಂದು ಮಾಡುವ ಮನಸ್ಸು ಅನೇಕರಿಗಿತ್ತು. ಆದರೆ, ಆ ಧೈರ್ಯ ಯಾರಿಗೆ ಬರಬೇಕು ?

ಮಗನ್‌ಲಾಲರ ಧರ್ಮಪತ್ನಿ ಶ್ರೀಮತಿ ಸಂತೋಕ ಬಹನ್ ಹೇಗೋ ಮಾಡಿ ತಮ್ಮ ದುಃಖವನ್ನು ದಮನಮಾಡಿಕೊಂಡರು. ಬಾಪೂ, ಮನೆಯಲ್ಲಿ ಕುಳಿತಿರುವಾಗ ದುಃಖ ಪ್ರದರ್ಶನ ಮಾಡುವುದು ಹೇಗೆ? ಅಲ್ಲದೆ, ಬಾಪೂ ಒಂದೇ ಸಮನೆ, ಮಗನಲಾಲರು ಇದ್ದಿದ್ದರೆ ಇಂಥ ಪ್ರಸಂಗಗಳಲ್ಲಿ ಏನು ಮಾಡುತ್ತಿದ್ದರು ಎಂಬುದನ್ನೆ ಹೇಳುತ್ತಿದ್ದರು. ಮಗನಲಾಲರ ಮಗನಂತೂ ನನ್ನಂಥ ದೊಡ್ಡವರಿಗಿಂತಲೂ ಹೆಚ್ಚಿನ ಸಾಹಸವನ್ನೆ ತೋರಿದ. ಸಾಯಂಕಾಲ ಎಂದಿನಂತೆ ಪ್ರಾರ್ಥನೆಯ ವೇಳೆಗೆ ಎಲ್ಲರೂ ಕಲೆತರು. ಪಂಡಿತರು ಗಂಭೀರ ಸ್ವರದಲ್ಲಿ ಹಾಡಿದರು :

ಉಜ್ವಲ ಯಶಸ್ಸಿನಿಂದ ಕೀರ್ತಿಶೇಷರಾದ ಮಗನ್‌ಲಾಲರ ವಿಷಯಕ್ಕೆ ಭಜನೆ ತುಂಬಾ ಒಪ್ಪುತ್ತಿತ್ತು. ಆದರೆ ಅವರನ್ನು ಕಳೆದುಕೊಂಡು ಹೇಳವರಾದ ನಮಗೆ ಭರವಸೆಯನ್ನು ಯಾರು ಕೊಡಬೇಕು ? ಕುಲ-ದೀಪಕನಾದ ಹಿರಿಯ ಮಗ ತೀರಿಕೊಂಡಾಗ, ಇತರ ಮಕ್ಕಳನ್ನು ತೊಡೆಯ ಮೇಲೆ ಕೂಡಿಸಿಕೊಂಡು, ಎದೆಯನ್ನು ವಜ್ರಸಮಾನವಾಗಿಸಿಕೊಂಡು, ಅವರಿಗೆ

ಅಭಯ ನೀಡುವ ತಂದೆಯೋಪಾದಿಯಲ್ಲಿ, ಗಾಂಧೀಜೀ ಪ್ರಾರ್ಥನೆಯ
ನಂತರ ನಮಗೆ ಆಶ್ವಾಸನ ನೀಡಿದರು. ಇಪ್ಪತ್ತು ನಾಲ್ಕು ವರುಷಗಳ
ಸಂಬಂಧವನ್ನು ಕ್ರೂರ ಜವರಾಯ ಕಡಿದುಬಿಟ್ಟ. ಹಿಂದೆಂದೂ ಆಗದಂಥ
ಆಘಾತ ಆಯಿತು. ಆದರೂ ಎದೆ ಗಟ್ಟಿಮಾಡಿಕೊಂಡು, ವಿಯೋಗ ವ್ಯಥೆ
ಯನ್ನು ಹಗುರ ಮಾಡಿಕೊಳ್ಳಲಿಕ್ಕಾಗಿಯೇ ಎಂಬಂತೆ ಗಾಂಧೀಜೀ ಹಲ
ವೊಂದು ಉದ್ಗಾರ ತೆಗೆದರು.[೧೨]

ಹತ್ತಿರದಲ್ಲೂ ದೂರದಲ್ಲೂ ಇರುವ ಅನೇಕ ಮಿತ್ರರು ನನ್ನ ಅತ್ಯಂತ
ಕಠಿಣ ಪರೀಕ್ಷೆಯ ಸಂದರ್ಭದಲ್ಲಿ ಮಧುರವಾದ ಸಂದೇಶಗಳನ್ನು ಕಳುಹಿಸಿ
ನನ್ನನ್ನು ಅನುಗ್ರಹೀತನನ್ನಾಗಿ ಮಾಡಿದಾರೆ. ನನ್ನ ಮೂರ್ಖತನವೇ ಸರಿ–
ಅಂತೂ ಮಗನ್‌ಲಾಲರು ನನಗಿಂತ ಮೊದಲು ಸಾಯುವರೆಂದು ನಾನು
ಎಂದೂ ಯೋಚಿಸಿರಲಿಲ್ಲ. ವ್ಯಕ್ತಿಗಳ, ಸಂಸ್ಥೆಗಳ ಹಾಗೂ ಕಾಂಗ್ರೆಸ್
ಸಮಿತಿಗಳ ತಾರು ಹಾಗೂ ಪತ್ರಗಳಿಂದ ನನಗೆ ಬಹಳ ಅಭಯ ದೊರೆತಿದೆ.
ಎಲ್ಲರಿಗೂ ನಾನು ಇಷ್ಟು ಭರವಸೆ ಕೊಡುವೆ :— ನನ್ನ ಮೇಲೆ ತೋರಿರುವ
ಅಪಾರ ಪ್ರೀತಿಗೂ, ನನ್ನೊಡನೆ ತಾವು ಮಾನ್ಯಮಾಡಿದ ಯಾವ ಆದರ್ಶ
ಗಳ ಸಲುವಾಗಿ ಮಗನ್‌ಲಾಲರು ತಮ್ಮನ್ನು ತಾವೇ ಬಲಿಕೊಟ್ಟರೋ ಆ
ಆದರ್ಶಗಳಿಗೆ ಪಾತ್ರನಾಗಲು ಪ್ರಯತ್ನಿಸುವೆನು.[೧೩]

ಸಂತೋಕ ಬಹನ್ ಜೀವಂತಳಾಗಿದ್ದರೂ, ರೂಖೀಬಹನ್ ಅತೀವ
ವಯಸ್ಸಿನಿಂದ ಮಗನ್‌ಲಾಲರ ಕೈಯಲ್ಲೇ ಬೆಳೆದಳೆಂಬುದು ನಿಮಗೆ ತಿಳಿದಿರ
ಕ್ಕಿಲ್ಲ. ಆಕೆ ಬದುಕುವ ಆಸೆ ಸಹ ಇರಲಿಲ್ಲ. ಉಸಿರಾಡುವುದಕ್ಕೂ ಆಕೆಗೆ
ಕಷ್ಟವಾಗುತ್ತಿತ್ತು. ಈ ಹುಡುಗಿಗೆ ಮಗನ್‌ಲಾಲರೇ ಸ್ನಾನಮಾಡಿಸು
ತ್ತಿದ್ದರು; ತಲೆಬಾಚುತ್ತಿದ್ದರು; ಹತ್ತಿರ ಕೂಡಿಸಿಕೊಂಡು ಉಣಿಸು
ತ್ತಿದ್ದರು. ಬೇರೆ ಮಕ್ಕಳನ್ನೂ ಆರೈಕೆ ಮಾಡುತ್ತಿದ್ದರು. ಮತ್ತೆ ಆಶ್ರ
ಮದ ಕೆಲಸವನ್ನೂ ಎಲ್ಲರಿಗಿಂತ ಹೆಚ್ಚಾಗಿ ಮಾಡುತ್ತಿದ್ದವರೂ ಅವರೇ.
ಅತ್ಯಂತ ಸುಂದರವಾದ ತೋಟವನ್ನು ಮಾಡಿದ್ದರು; ಫೀನಿಕ್ಸ್‌ನಲ್ಲಿ ಮೊದ
ಲನೆಯ ಗುಲಾಬಿ ಗಿಡವನ್ನು ನಾಟಿವರು ಅವರೇ. ಫೀನಿಕ್ಸ್‌ನ ಗಟ್ಟಿ ನೆಲದ

ಮೇಲೆ ಅವರ ಗುಂಡ್ಲಲಿ ಪೆಟ್ಟುಬಿದ್ದಾಗ, ಭೂಮಿ ನಡುಗಿದಂತೆ ತೋ
ತ್ತಿತ್ತು. ಮುಗನಲಾಲರು ಮಾಡಿದುದನ್ನು ನೀವೆಲ್ಲರೂ ಮಾಡಬಲ್ಲಿರಿ.
ಮಾತನ್ನು ಆಡುವಾಗ ನಾನು ಮುಗನ್‌ಲಾಲರ ಮಹಾನ್ ಕಲಾ
ಯನ್ನಾಗಲಿ, ಅವರ ವಿದ್ವತ್ತನ್ನಾಗಲಿ ಪ್ರಸ್ತಾಪಿಸಿಲ್ಲ. ಅವರಲ್ಲಿ ಅ
ವಿಶ್ವಾಸವಿತ್ತು. ತನ್ನ ಕೆಲಸದಲ್ಲಿ ಶ್ರದ್ಧೆಯಿತ್ತು. ಭಗವಂತ ಅವ
ಬಲಯುತವಾದ ಶಕ್ತಿಯನ್ನು ಕೊಟ್ಟಿದ್ದ. ಆದರೆ ಅವರ ಶರೀರ ಅಪ್ರವ
ಹೊರೆಯಿಂದ, ಅವರ ತಪಶ್ಚರ್ಯೆಯಿಂದ ಕೊನೆ ಕೊನೆಗೆ ನಿರ್ಬಲವಾ
ಹೋಗಿತ್ತು. ಆದರೆ, ಮುಗನ್‌ಲಾಲರು ತಮ್ಮ ಅಲ್ಪಾಯುಷ್ಯದಲ್ಲೇ ನೂ
ವರುಷಗಳಲ್ಲಿ ಅಥವಾ ನೂರಾರು ವರುಷಗಳಲ್ಲಿ ಮಾಡಬಹುದಾದ
ಕೆಲಸವನ್ನು ಮಾಡಿದರೆಂದು ನಾನು ಹೇಳಬಲ್ಲೆ. ಮುಗನ್‌ಲಾಲರ ಉ
ಹರಣೆಯನ್ನು ನಿಮ್ಮ ಮುಂದೆ ಇಡಲು ಕಾರಣವಿಷ್ಟೆ: ನಿಮಗೆ ಅ
ಪರಿಚಯವಿತ್ತು. ಅವರ ಪ್ರೇಮಭಾವದ ದೆಸೆಯಿಂದಲೇ ನಿಮಗೆ ಅಪ್ರವ
ಸಂಬಂಧ ಉಂಟಾಯಿತು. ಮುಗನ್‌ಲಾಲರನ್ನು ಸ್ಮರಿಸಿಕೊಳ್ಳುವಾಗಲ
ನೀವು ನಿಸ್ಸಹಾಯಕರಾದಿರಿ ಅಥವಾ ಕತ್ತಲೆಯಲ್ಲಿದೀರಿ ಎಂಬುದ
ಮಾತ್ರ ಭಾವಿಸಿಕೊಳ್ಳಬೇಡಿ. ನಿಮಗೆ ಸಹಜವಾಗಿಯೇ ಸಿಕ್ಕಿರ
ಸೌಕರ್ಯಗಳು ಈ ದೇಶದಲ್ಲಿ ಲಕ್ಷ ಮಂದಿಯಲ್ಲೊಬ್ಬರು ಸಿಕ್ಕಿರಲಿಕ್ಕಿಲ್ಲವೆಂ
ನನ್ನ ಭಾವನೆ.೧೪

ಗೋಖಲೆಯುವರ ಪುಣ್ಯ ಸ್ಮರಣೆ

ಗೋಖಲೆ ಅವರ ಪುಣ್ಯತಿಥಿಯ ಸಂದರ್ಭದಲ್ಲಿ ಆ ಸ್ವರ್ಗ
ಭಾಷಣ ಹಾಗೂ ಲೇಖನಗಳನ್ನು ಗುಜರಾತಿಗೆ ಅನುವಾದಿಸಿ ಪ್ರಕಟಿ
ವಿಚಾರ ಮೊಟ್ಟಮೊದಲು ನನ್ನ ಮನಸ್ಸಿನಲ್ಲಿಯೇ ಹುಟ್ಟಿತ್ತು. ಆದಕಾ
ಅದರ ಮೊದಲನೆಯ ಭಾಗದ ಪ್ರಸ್ತಾವನೆಯ ಹೆಚ್ಚಿನ ಅಂಶವನ್ನು ನಾ
ಬರೆಯುವುದು ಉಚಿತವೆನಿಸಿತ್ತು. ಪ್ರತಿವರ್ಷ ಗೋಖಲೆ ಅವರ ಪುಣ್ಯ
ಯನ್ನು ಆಚರಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದೇನೆ. ಭಜನೆ, ಕೀತ

ತ್ತಿತ್ತು—ಅನಂತರ ಸಭಾ ವಿಸರ್ಜನೆ ಇದು ಪ್ರತಿ ವರ್ಷವೂ ನಡೆಯು
ಅದರಿಂದ ಕಾಲಕ್ಷೇಪ ಆಗುವುದಾದರೂ ವಾಸ್ತವಿಕ ಲಾಭವೇನೂ
ಲ್ಲವು. ಆದಕಾರಣ, ಭಾಷಣಗಳಿಗಿಂತ ಹೆಚ್ಚಾಗಿ ಕೆಲಸಕ್ಕೆ ಮಹತ್ವ
ನ ಹಾಗೂ ಇಂಥ ಲೇಖನಗಳಿಂದ ಜನ ಸಾಮಾನ್ಯಕ್ಕೆ ನಿಜಸ್ವ
ಾಗುವಂತೆ ಮಾಡುವ ದೃಷ್ಟಿಯಿಂದ ಕಳೆದ ವರ್ಷ ಕೃತ್ಯ—ಶಿಥಿಲು
ಾಪಕರು ಮಾತೃಭಾಷೆಯಲ್ಲಿ ಯಾವುದಾದರೊಂದು ಉಪಯುಕ್ತ
ಪುಸ್ತಕವನ್ನು ಪ್ರಕಟಿಸುವ ನಿಶ್ಚಯ ಮಾಡಿದರು. ಪುಸ್ತಕವನ್ನು
ಮಾಡುವುದಕ್ಕೆ ಸಾವಕಾಶವೇನೂ ಆಗಲಿಲ್ಲ. ಸ್ವಾಭಾವಿಕವಾಗಿ
ರಿಯ ಗೋಖಲೆ ಅವರ ಭಾಷಣಗಳ ಸಂಗ್ರಹವೇ ಮೊದಲ ಪುಸ್ತಕ
ಆಯ್ಕೆಯಾಯಿತು..........

ಸ್ವರ್ಗೀಯ ಗೋಖಲೆ ಅವರ ಬಗೆಗೆ ಮೂರು-ನಾಲ್ಕು ಮಾತು ಬರೆ
ವೇ ವಾಸ್ತವಿಕ ಪ್ರಸ್ತಾವನೆ ಆದೀತು. ಆದರೆ, ಗುರುವಿನ ವಿಷಯ
ಶಿಷ್ಯನಾದವನು ಏನು ಬರೆಯಬೇಕು? ಹೇಗೆ ಬರೆಯಬೇಕು? ಅತ
ಏನಾದರೂ ಬರೆದರೆ, ಅದು ಒಂದು ರೀತಿಯಲ್ಲಿ ಧೃಷ್ಟತೆಯೇ
ಸುದಲ್ಲ? ಗುರುವಿನಲ್ಲಿ ತನ್ನನ್ನು ತಾನು ಸಮಾವೇಶಗೊಳಿಸಿಕೊಳ್ಳು
ೇ ನಿಜವಾದ ಶಿಷ್ಯ: ಅಂದರೆ, ಶಿಷ್ಯ ಎಂದಿಗೂ ಟೀಕಾಕಾರನಾಗಲಾರ
ಕ ಕಾಣುವ ಭಕ್ತಿ ನಿಜವಾದ ಭಕ್ತಿಯಲ್ಲ. ಗುಣ-ದೋಷಗಳ
ಕ್ಕರಣೆ (ವಿಭಜನ) ಮಾಡಲು ಅಸಮರ್ಥನಾದ ಶಿಷ್ಯ ಮಾಡಿದ ಗುರು
ನೆಯನ್ನು ಸಾಮಾನ್ಯ ಜನ ಒಪ್ಪದಿದ್ದರೆ, ಅವರ ಮೇಲೆ ಕುಪಿತನಾಗುವ
ಾರ ಅತನಿಗೆ ಇರಲಿಕ್ಕಿಲ್ಲ. ಶಿಷ್ಯನ ಆಚರಣೆಯಿಂದಲೇ ಗುರುವಿನ ಟೀಕೆ
ತ್ತದೆ. ರಾಜನೈತಿಕ ವಿಷಯಗಳಲ್ಲಿ ಗೋಖಲೆ ಅವರು ನನ್ನ ಗುರುಗ
ು ಎಷ್ಟೋ ಬಾರಿ ಹೇಳಿದ್ದೇನೆ. ಆದಕಾರಣ ಅವರ ವಿಷಯದಲ್ಲಿ
ಯಲು ನಾನು ಅಸಮರ್ಥ ಎಂದು ಭಾವಿಸಿದ್ದೇನೆ. ನಾನು ಎಷ್ಟೇ
ದರೂ ಅದು ಕಡಿಮೆಯೇ ಅನಿಸುವುದು. ನನ್ನ ಅಭಿಪ್ರಾಯದಲ್ಲಿ ಗುರು—
ಸಂಬಂಧವೆಂಬುದು ಶುದ್ಧ ಆಧ್ಯಾತ್ಮಿಕ ಸಂಬಂಧ. ಅದು ಅಂಕ
ತ ನಿಯಮದಂತೆ ನಡೆಯುವುದಿಲ್ಲ. ಎಷ್ಟೋ ವೇಳೆ ನಮಗೆ ತಿಳಿಯ
ೇ ಆ ಸಂಬಂಧ ಬೆಳೆಯುತ್ತದೆ. ಅದು ಬೆಳೆಯುವುದಕ್ಕೆ ಕ್ಷಣಕಾಲ

ಕ್ಕಿಂತ ಹೆಚ್ಚು ಬೇಕಾಗಿಲ್ಲ. ಆದರೆ, ಅದು ಒಮ್ಮೆ ಬೆಳೆಯಿತೆಂದರೆ, ಮತ್ತೆ ಬೆಳೆಯುವುದೇ ಇಲ್ಲ.

೧೮೯೬ ರಲ್ಲಿ ಮೊಟ್ಟಮೊದಲು ನಮ್ಮಿಬ್ಬರಲ್ಲಿ ಈ ಸಂಬಂಧ ಬೆಳೆಯಿತು. ಅದಕ್ಕೆ ಮೊದಲು ನನಗೆ ಅವರ ವಿಷಯ ತಿಳಿದಿರಲಿಲ್ಲ; ಅವರಿಗೆ ನನ್ನ ವಿಷಯ ತಿಳಿದಿರಲಿಲ್ಲ. ಅದೇ ಕಾಲಕ್ಕೆ ನನಗೆ ಗುರುವಿನ ಗುರು ಲೋಕಮಾನ್ಯ ತಿಲಕರು, ಸರ್ ಫಿರೋಜಾಶಾಹಮೆಹ್ತಾ, ನ್ಯಾಯಮೂರ್ತಿ ಬದ್ರುದ್ದೀನ್ ತಯಬ್ಜಿ, ಡಾ॥ ಭಂಡಾರಕರ ಹಾಗೂ ಬಂಗಾಳ ಮದ್ರಾಸು ಪ್ರಾಂತಗಳ ಇನ್ನೂ ಅನೇಕ ನಾಯಕರ ದರ್ಶನಭಾಗ್ಯ ದೊರೆಯಿತು. ಆಗ ನಾನಿನ್ನೂ ನವತರುಣ; ಎಲ್ಲರೂ ನನ್ನ ಮೇಲೆ ಪ್ರೇಮವೃಷ್ಟಿ ಸುರಿಸಿದರು. ಒಟ್ಟಿಗೇ ಎಲ್ಲರ ದರ್ಶನ ದೊರೆತ ಆ ಪ್ರಸಂಗವನ್ನು ನಾನು ಎಂದಿಗೂ ಮರೆಯಲಾರೆ; ಆದರೆ ಗೋಖಲೆ ಅವರನ್ನು ಭೆಟ್ಟಿಯಾದಾಗ ನನ್ನ ಹೃದಯಕ್ಕೆ ದೊರೆತಷ್ಟು ತಂಪು ಬೇರೆಯವರನ್ನು ಬೆಟ್ಟಿಯಾದಾಗ ದೊರೆಯಲಿಲ್ಲ. ಗೋಖಲೆ ಅವರು ಬೇರೆಯವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೇಮ-ವೃಷ್ಟಿ ಸುರಿಸಿದಂತೆ ನನಗೆ ನೆನಪಿಲ್ಲ. ತುಲನಾತ್ಮಕವಾಗಿ ಹೇಳುವುದಾದರೆ, ಡಾ॥ ಭಂಡಾರಕರರು ನನ್ನ ಮೇಲೆ ತೋರಿಸಿದ ಅನುರಾಗವನ್ನು ಬೇರೆ ಯಾರೂ ತೋರಲಿಲ್ಲ. ಈಗ ನಾನು ಸಾರ್ವಜನಿಕ ಕಾರ್ಯದಿಂದ ಅಲಿಪ್ತನಾಗಿದ್ದರೂ, ನಿಮ್ಮ ಸಲುವಾಗಿ ನಿಮ್ಮ ವಿಷಯವನ್ನು ಪರ್ಯಾಲೋಚಿಸಲು ಸೇರಲಿರುವ ಸಭೆಗೆ ಅಧ್ಯಕ್ಷನಾಗಲು ಒಪ್ಪಿಕೊಳ್ಳುತ್ತೇನೆ.” ಎಂಬುದಾಗಿ ಅವರು ಹೇಳಿದರು. ಆದರೂ ಪ್ರೇಮಪಾಶದಿಂದ ನನ್ನನ್ನು ಬಂಧಿಸಿದವರೆಂದರೆ ಗೋಖಲೆ ಅವರೇ. ಆಗ ನನಗೆ ಆ ವಿಷಯದ ಅರಿವು ಏನೇನೂ ಆಗಿರಲಿಲ್ಲ. ಆದರೆ, ೧೯೦೨ ರ ಕಲಕತ್ತೆ–ಕಾಂಗ್ರೆಸ್‌ದಲ್ಲಿ ನನ್ನ ಶಿಷ್ಯವೃತ್ತಿಯ ಪೂರ್ಣ ಅರಿವು-ಅನುಭವ ನನಗಾಯಿತು. ಆ ಸಂದರ್ಭದಲ್ಲಿ ಮೇಲೆ ತಿಳಿಸಿದ ನಾಯಕರಲ್ಲಿ ಅನೇಕರ ದರ್ಶನಭಾಗ್ಯ ಪುನಃ ನನಗೆ ಲಭಿಸಿತು. ಆದರೆ, ನನ್ನ ನೆನಪು ಒಳಿತಾಗಿ ಉಳಿದಿದ್ದುದು ಗೋಖಲೆ ಅವರಿಗೆ ಮಾತ್ರವೇ ನನ್ನನ್ನು ನೋಡುತ್ತಲೇ ಕೈಹಿಡಿದುಕೊಂಡರು. ಮನೆಗೆ ಎಳೆದುಕೊಂಡುಹೋದರು. ವಿಷಯ-ನಿಯಾಮಕ ಸಮಿತಿಯಲ್ಲಿ ನನ್ನ ಸೂಚನೆ ಚರ್ಚೆಗೆ ಬರಲಿಕ್ಕಿಲ್ಲೆಂಬ ಭಯ ನನಗಿತ್ತು. ನಿರ್ಣಯಗಳ ಚರ್ಚೆ ಆರಂ

ಭವಾಯಿತು; ಮುಗಿದೂಹೋಯಿತು. ಆದರೂ ದಕ್ಷಿಣ ಆಫ್ರಿಕಾಕ್ಕೆ ಸಂಬಂಧಿಸಿದ ಪ್ರಶ್ನೆಯೊಂದನ್ನು ಮಂಡಿಸುವ ಉದ್ದೇಶ ನನಗಿದೆ ಎಂದು ಹೇಳುವ ಧೈರ್ಯ ನನಗೆ ಕೊನೆಯವರೆಗೂ ಬರಲಿಲ್ಲ. ನನಗಾಗಿ ರಾತ್ರಿ ಯಾರು ಸಭೆಯಲ್ಲಿ ಕುಳಿತಿದ್ದಾರು! ನಾಯಕರು ಬೇಗ ಬೇಗ ಕೆಲಸ ಮುಗಿಸಲು ಆತುರರಾಗಿದ್ದರು. ಅವರು ಎಲ್ಲಿ ಎದ್ದು ಹೋಗಿಬಿಡುವರೋ ಎಂಬ ಭಯ, ನಡುಕ ನನಗೆ. ಗೋಖಲೆ ಅವರಿಗೆ ನೆನಪು ಮಾಡುವ ಧೈರ್ಯವೂ ನನಗೆ ಬರಲಿಲ್ಲ. ಅಷ್ಟರಲ್ಲಿ ಅವರೇ ಹೇಳಿದರು :—ಶ್ರೀ ಗಾಂಧಿಯವರು ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಯ ಸಂಬಂಧದಲ್ಲಿ ಒಂದು ನಿರ್ಣಯವನ್ನು ಮಾಡಿಸಲು ಬಯಸುತ್ತಾರೆ. ಅದರ ಮೇಲೂ ಅಗತ್ಯವಾಗಿ ಚರ್ಚೆಯಾಗಲಿ" ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ರಾಷ್ಟ್ರಸಭೆಯ ಸಂಬಂಧದಲ್ಲಿ ಅದೇ ನನ್ನ ಪ್ರಥಮ ಅನುಭವ. ಆದಕಾರಣ, ಅಲ್ಲಿ ಸ್ವೀಕೃತವಾಗುವ ನಿರ್ಣಯಗಳಿಗೆ ಬಹಳ ಮಹತ್ವವಿದೆಯೆಂದು ನಾನು ಭಾವಿಸಿದ್ದೆ. ಅನಂತರವೂ ಎಷ್ಟೋ ಬಾರಿ ಅವರ ದರ್ಶನಾವಕಾಶ ನನಗೆ ದೊರೆಯಿತು. ಆ ಒಂದೊಂದು ಸಂದರ್ಭವೂ ಪವಿತ್ರವಾದುದೇ. ಆದರೆ ಯಾವುದನ್ನು ನಾನು ಅವರ ಮಹಾಮಂತ್ರವೆಂದು ಭಾವಿಸಿದ್ದೇನೆಯೋ ಅದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಿ, ಈ ಪ್ರಸ್ತಾವನೆಯನ್ನು ಮುಗಿಸುವುದೇ ಉತ್ತಮ.

ಈ ಕಠಿನ-ಕಲಿಕಾಲದಲ್ಲಿ ಶುದ್ಧ ಧರ್ಮವೃತ್ತಿ ಕಂಡುಬರುವುದು ಕೆಲವೇ ಮಂದಿಯಲ್ಲಿ ಋಷಿ, ಮುನಿ, ಸಾಧು ಮೊದಲಾದ ಹೆಸರುಗಳನ್ನು ಇಟ್ಟುಕೊಂಡು ತಿರುಗಾಡುವವರಲ್ಲಿ ಈ ವೃತ್ತಿ ಕಂಡುಬರುವುದೇ ಇಲ್ಲ. ಇಂದು ಅವರು ಧರ್ಮರಕ್ಷಕರ ಸ್ಥಾನದಿಂದ ಚ್ಯುತರಾಗುತ್ತಿರುವುದು ಎಲ್ಲರಿಗೂ ಕಂಡುಬರುತ್ತಿದೆ. ಭಕ್ತ ಶಿರೋಮಣಿ, ಗುಜರಾತಿ ಕವಿ ನರಸಿಂಹ ಮೆಹ್ತಾ ಅವರ ಚೆಂದವಾದ ಒಂದೇ ಒಂದು ವಾಕ್ಯದಲ್ಲಿ ಧರ್ಮದ ಪೂರ್ಣ ವ್ಯಾಖ್ಯೆಯನ್ನು ಕಾಣಬಹುದು :—

"ಜ್ಯಾ ಲಗೀ ಆತಮಾ ತತ್ವ ಚೋನ್ಯೋ ನಹೀ, ತ್ಯಾ ಲಗೀ ಸಾಧನಾ ಸರ್ವ ಝೂಟೀ"

ಅಂದರೆ, ಆತ್ಮ ತತ್ವದ ಅರಿವು ಆಗುವವರೆಗೆ, ಎಲ್ಲ ಸಾಧನೆಗಳು ನಿರರ್ಥಕ. ಈ ವಚನ ಅವರ ಅನುಭವ ಸಾಗರದ ಮಂಥನದಿಂದ ಹೊರ

ಬಿದ್ದ ರತ್ನ. ಮಹಾ ತಪಸ್ವಿ ಹಾಗೂ ಯೋಗಿಗಳಲ್ಲೂ ಸಹ ನಿಜವಾದ ಧರ್ಮವೃತ್ತಿ ಇದ್ದೇ ಇರುವುದೆಂಬ ನಿಯಮವೇನಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಗೋಖಲೆ ಅವರಿಗೆ ಆತ್ಮ ತತ್ವದ ಉತ್ತಮ ಜ್ಞಾನ ಇದ್ದಿತೆಂಬುವುದರಲ್ಲಿ ನನಗೆ ಎಳ್ಳನಿತೂ ಸಂದೇಹವಿಲ್ಲ. ಅವರು ಧಾರ್ಮಿಕ ಆಡಂಬರದಿಂದ ದೂರವಾಗಿದ್ದರೂ ಅವರ ಸಂಪೂರ್ಣ ಜೀವನ ಧರ್ಮ ಮಯವಾಗಿತ್ತು. ಬೇರೆ ಬೇರೆ ಯುಗಗಳಲ್ಲಿ ಮೋಕ್ಷ ತೋರುವ ಪ್ರವೃತ್ತಿ ಗಳು ಕಾಣಿಸಿಕೊಂಡಿವೆ. ಧರ್ಮ ಬಂಧನ ಸಡಿಲವಾದಾಗಲೆಲ್ಲ ಯಾವುದಾದ ರೊಂದು ವಿಶೇಷ ಪ್ರವೃತ್ತಿ ಕಾಣಿಸಿಕೊಂಡು, ಧರ್ಮ ಜಾಗೃತಿಯನ್ನು ಪ್ರಚೋದಿಸುತ್ತದೆ. ಆ ವಿಶೇಷ ಪ್ರವೃತ್ತಿ ಆಯಾ ಕಾಲ-ಪರಸ್ಥಿತಿಗೆ ಅನು ಗುಣಯಾಗಿ, ಬೇರೆ ಬೇರೆ ರೀತಿದಾಗಿರುತ್ತದೆ. ಇಂದು ನಾವು ರಾಜ ಕೀಯ ವಿಷಯಗಳಲ್ಲಿ ಇಳಿಮುಖರಾಗಿದೇವೆ. ಏಕಾಂಗಿ ದೃಷ್ಟಿಯಿಂದ ವಿಚಾರಮಾಡಿದರೆ, ರಾಜಕೀಯ ಸುಧಾರಣೆಯಿಂದಲೇ ಇತರ ವಿಷಯ ಗಳಲ್ಲೂ ನಾವು ಮೇಲೇರಬಹುದೇನೊ ಎನಿಸುತ್ತದೆ. ಒಂದು ರೀತಿಯಲ್ಲಿ ಅದು ನಿಜವೇ. ರಾಜನೈತಿಕ ಸ್ಥಿತಿಯಲ್ಲಿ ಸುಧಾರಣೆಯಾಗದೆ, ಉನ್ನತಿ ಅಸಂಭವ. ಆದರೆ, ರಾಜನೈತಿಕ ಸ್ಥಿತಿಯಲ್ಲಿ ಪರಿವರ್ತನೆ ಆದಮಾತ್ರ ದಿಂದಲೇ ಉನ್ನತಿ ಆಗದು. ಪರಿವರ್ತನೆಯ ಸಾಧನಗಳು ದೂಷಿತವೂ, ಘೃಣಿತವೂ ಆಗಿದ್ದಲ್ಲಿ, ಉನ್ನತಿಗೆ ಬದಲು ಅವನತಿ ಆಗುವ ಸಂಭವವೇ ಹೆಚ್ಚು. ಶುದ್ಧ ಹಾಗೂ ಪವಿತ್ರ ಸಾಧನಗಳಿಂದ ಆಗುವ ಪರಿವರ್ತನೆಯೇ ನಮ್ಮನ್ನು ಉಚ್ಚಮಾರ್ಗದಲ್ಲಿ ಕೊಂಡೊಯ್ಯಬಲ್ಲದು. ಸಾರ್ವಜನಿಕ ಕಾರ್ಯ ಗಳಲ್ಲಿ ತೊಡಗಿದೊಡನೆಯೇ ಗೋಖಲೆ ಅವರಿಗೆ ಈ ತತ್ವದ ಅರಿವಾಯಿತು. ಅದನ್ನು ಅವರು ಕಾರ್ಯದಲ್ಲೂ ಪರಿಣತಗೊಳಿಸಿದರು. ರಾಜ ನೀತಿಗೆ ಆಧ್ಯಾತ್ಮಿಕ ಸ್ವರೂಪ ಕೊಟ್ಟುದಾದರೆ, ಅದೇ (ನಮ್ಮನ್ನು) ಮೋಕ್ಷ ಮಾರ್ಗ ದಲ್ಲಿ ಕೊಂಡೊಯ್ಯುವಂಥದಾಗುವುದು—ಎಂಬ ಭವ್ಯವಿಚಾರವನ್ನು ಅವರು ಭಾರತ-ಸೇವಕ ಸಂಘ ಹಾಗೂ ಜನತೆಯ ಮುಂದೆ ಇಟ್ಟಿದ್ದರೆಂಬು ದನ್ನು ಎಲ್ಲರೂ ಬಲ್ಲರು. ನಮ್ಮ ರಾಜನೈತಿಕ ಕಾರ್ಯಗಳಿಗೆ ಧರ್ಮ ವೃತ್ತಿಯ ಸಹಾಯ ದೊರೆಯುವವರೆಗೆ, ಅವು ರಸವೀಹಿನವಾಗಿಯೇ ಇರುವುವು—ಎಂಬ ಮಾತನ್ನು ಅವರು ಸ್ಪಷ್ಟಪಡಿಸಿದ್ದರು. ಗೋಖಲೆ

ಆವರ ನಿಧನದ ಸಂದರ್ಭದಲ್ಲಿ " ಟೈಮ್ಸ್ ಆಫ್ ಇಂಡಿಯಾ " ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟವಾಗಿತ್ತು. ಆ ಲೇಖನದ ಲೇಖಕರು ರಾಜನೈತಿಕ ಸನ್ಯಾಸಿಗಳನ್ನು ಸೃಷ್ಟಿಸಬೇಕೆಂಬ ಗೋಖಲೆ ಅವರ ಪ್ರಯತ್ನ ಯಶಸ್ವಿಯಾಗುವ ಬಗೆಗೆ ಅವಿಶ್ವಾಸವನ್ನು ವ್ಯಕ್ತಪಡಿಸಿ, ಅವರ ಸ್ಮಾರಕವೆನಿಸಿದ್ದ ಭಾರತ ಸೇವಕ ಸಂಘದ ಗಮನವನ್ನು ಆ ಮಾತಿನತ್ತ ಸೆಳೆದಿದ್ದರು. ನನ್ನ ಅಭಿಪ್ರಾಯದಲ್ಲಿ ಇಂದು ರಾಜನೈತಿಕ ಸನ್ಯಾಸಿಗಳೇ ಸನ್ಯಾಸಾಶ್ರಮದ ಗೌರವವನ್ನು ಹೆಚ್ಚಿಸಬಲ್ಲರು. ಬೇರೆ ಕಾವಿವಸ್ತ್ರದಾರಿ ಸಂನ್ಯಾಸಿಗಳು ಅದರ ಅಪಕೀರ್ತಿಗಷ್ಟೇ ಕಾರಣವಾದಾರು. ಶುದ್ಧ ಧರ್ಮಮಾರ್ಗದಲ್ಲಿ ನಡೆಯುವ ಯಾವನೇ ಭಾರತೀಯನಾಗಲಿ, ರಾಜನೈತಿಕ ಕಾರ್ಯದಿಂದ ಅಲಿಪ್ತನಾಗಿರುವುದು ಕಠಿಣ. ಇದೇ ಮಾತನ್ನು ನಾನು ಬೇರೊಂದು ರೀತಿಯಲ್ಲಿ ಅಂಗೀಕರಿಸದಿರಲಾರೆ. ಅಲ್ಲದೆ, ಇಂದಿನ ರಾಜ್ಯವ್ಯವಸ್ಥೆಯ ಜಾಲದಲ್ಲಿ ನಾವು ಎಷ್ಟರಮಟ್ಟಿಗೆ ಸಿಲುಕಿಕೊಂಡಿದೇವೆಂದರೆ, ರಾಜನೀತಿಯಿಂದ ಅಲಿಪ್ತರಾಗಿದ್ದು, ಲೋಕಸೇವೆ ಮಾಡುವುದು ಅಸಂಭವವೇ ಆಗಿದೆ. ಹಿಂದಿನ ಕಾಲದಲ್ಲಿ ರೈತನಿಗೆ ತನ್ನ ದೇಶದ ಅಧಿಕಾರಿಯಾರು ಎಂಬುದು ಸಹ ತಿಳಿದಿರದಿದ್ದರೂ, ತನ್ನ ಜೀವನ ಯಾತ್ರೆಯನ್ನು ಒಳಿತಾಗಿ ನಡೆಸಿಕೊಂಡು ಹೋಗುತ್ತಿದ್ದ. ಆದರೆ, ಇಂದು ಹಾಗೆ ಮಾಡಲಾರ. ಇಂಥ ಸ್ಥಿತಿಯಲ್ಲಿ ಆತನ ಧರ್ಮಾಚರಣೆ ರಾಜನೈತಿಕ ಪರಿಸ್ಥಿತಿಗೆ ಅನುಸಾರವಾಗಿಯೇ ನಡೆಯಬೇಕು. ನಮ್ಮ ಸಾಧುಗಳು, ಋಷಿಗಳು, ಮುನಿಗಳು, ಮೌಲ್ವಿಗಳು ಹಾಗೂ ಪಾದರಿಗಳು ಈ ಉಚ್ಚತತ್ವವನ್ನು ಅಂಗೀಕರಿಸಿದರೆ, ಎಲ್ಲಿ ನೋಡಿದರಲ್ಲಿ ಭಾರತ ಸೇವಕ ಸಂಘಗಳೇ ಕಂಡುಬರುವವು ; ಹಾಗೂ ಇಂದು ಜನಕ್ಕೆ ಅರುಚಿಕರವಾಗಿ ತೋರುವ ರಾಜಕೀಯ ಚರ್ಚೆ ಪವಿತ್ರ ಹಾಗೂ ಪ್ರಿಯವೆನಿಸುವಷ್ಟು ವ್ಯಾಪಕವಾಗಿ ಧರ್ಮವೃತ್ತಿ ಬೆಳೆಯುವುದು. ಪುನಃ ಭಾರತೀಯರು ಧಾರ್ಮಿಕ ಸಾಮ್ರಾಜ್ಯವನ್ನು ಉಪಭೋಗಿಸುವರು. ಭಾರತದ ಬಂಧನ ಕ್ಷಣಮಾತ್ರದಲ್ಲಿ ದೂರವಾಗುವುದು. ಹಾಗೂ ಪ್ರಾಚೀನ ಕವಿಯೊಬ್ಬ ತನ್ನ ಅಮರವಾಣಿಯಲ್ಲಿ ವರ್ಣಿಸಿರುವಂಥ ಸ್ಥಿತಿಯ ದರ್ಶನವಾಗುವುದು. ಆತ ಹೀಗೆ ಹೇಳಿದಾನೆ : " ಉಕ್ಕಿನಿಂದ ಕತ್ತಿಯನ್ನಲ್ಲ, ನೇಗಿಲಿನ 'ಗುಳ' ಮಾಡಲಾಗುವುದು. ಸಿಂಹ-ಕುರಿಗಳು ಜತೆಜತೆಯಲ್ಲಿ

ವಿಹರಿಸುವುದು. ಅಂಥ ಸ್ಥಿತಿಯನ್ನು ಉಂಟುಮಾಡುವ ಪ್ರವೃತ್ತಿಯೇ ಗುರುವರ ಗೋಖಲೆ ಅವರ ಜೀವನ ಮಂತ್ರವಾಗಿತ್ತು. ಅದೇ ಮಂತ್ರ ಅವರ ಭಾಷಣಗಳ ಪ್ರತಿಯೊಂದು ಮಾತಿನಲ್ಲೂ ಕಂಡುಬರುವುದು ಎಂಬುದಾಗಿ ನನ್ನ ನಂಬಿಕೆ.*

ಗೋಖಲೆಯವರ ಸಂದೇಶ

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ ।
ಯತ್ತಪಸ್ಯಸಿ ಕೌಂತೇಯ ! ತತ್ಕುರುಷ್ವ ಮದರ್ಪಣಂ ॥

ಶ್ರೀ ಕೃಷ್ಣ ಅರ್ಜುನನಿಗೆ ಕೊಟ್ಟ ಉಪದೇಶವನ್ನೇ ಭಾರತಮಾತೆ ಮಹಾತ್ಮ ಗೋಖಲೆ ಅವರಿಗೆ ಕೊಟ್ಟಳು. ಹಾಗೂ ಅವರು ತಮ್ಮ ಆಚರಣೆಯಿಂದ ಅದನ್ನು ಪಾಲಿಸಿದರು. ಎಂಬುದಾಗಿ ಕಂಡುಬರುತ್ತದೆ. ಅವರ ಎಲ್ಲ ಕಾರ್ಯ, ಉಪಭೋಗ, ತ್ಯಾಗ ಹಾಗೂ ತಪಸ್ಯೆ ಭಾರತಮಾತೆಯ ಚರಣಗಳಲ್ಲಿಯೇ ಅರ್ಪಿತವಾಯಿತು.

ದೇಶಕ್ಕಾಗಿಯೇ ಜನ್ಮತಾಳಿದ ಆ ಮಹಾತ್ಮ ತನ್ನ ದೇಶಬಂಧುಗಳಿಗೆ ನೀಡಿದ ಸಂದೇಶವಾದರೂ ಏನು? ತಮ್ಮ ಅಂತಿಮ ಕಾಲದಲ್ಲಿ ಉಪಸ್ಥಿತರಿದ್ದ ಭಾರತ ಸೇವಕ ಸಂಘದ ಸದಸ್ಯರಿಗೆ ಅವರು ಈ ಕೆಳಗಿನ ಮಾತನ್ನು ಹೇಳಿದರು:—

"ನೀವು ಜೀವನ ಚರಿತ್ರೆ ಬರೆಯುತ್ತ ಕೊಡಬೇಡಿರಿ. ನನ್ನ ಮೂರ್ತಿ (ವಿಗ್ರಹ) ಮಾಡುವುದರಲ್ಲಿ ಕಾಲಕಳೆಯಬೇಡಿರಿ. ನೀವು ಭಾರತದ ನಿಜವಾದ ಸೇವಕರಾದಲ್ಲಿ, ನಿಮ್ಮ ಸಿದ್ಧಾಂತಗಳಿಗೆ ಅನುಗುಣವಾಗಿ ನಡೆದಂತೆ ಅಂದರೆ ಭಾರತದ ಸೇವೆ ಮಾಡುವುದರಲ್ಲೇ ನಿಮ್ಮ ಆಯುಷ್ಯವನ್ನು ಕಳೆದಂತೆ ಆಗುವುದು".

---

*ಸ್ವರ್ಗೀಯ ಗೋಖಲೆ ಅವರ ಕಳೆದ ಪುಣ್ಯತಿಥಿಯ ಸಂದರ್ಭದಲ್ಲಿ ಪ್ರಕಟವಾದ ಅವರ ಭಾಷಣ ಹಾಗೂ ಲೇಖನಗಳ ಗುಜರಾತಿ ಸಂಗ್ರಹದ ಭೂಮಿಗೆ.

ಸೇವೆಯ ಸಂಬಂಧದಲ್ಲಿ ಅವರ ಆಂತರಿಕ ವಿಚಾರವೇನಿತ್ತೆಂಬುದನ್ನೂ ನಾನು ಬಲ್ಲೆ. ರಾಷ್ಟ್ರೀಯ ಸಭೆಯ ಕಾರ್ಯ ಸಂಚಾಲನೆ, ಭಾಷಣ ಹಾಗೂ ಲೇಖನಗಳ ಮೂಲಕ ಜನತೆಗೆ ದೇಶದ ನಿಜವಾದ ಅರಿವು ಮಾಡಿಕೊಡುವುದು, ಪ್ರತಿಯೊಬ್ಬ ಭಾರತೀಯನ ಅಕ್ಷರಸ್ಥರನ್ನಾಗಿ ಮಾಡುವ ಪ್ರಯತ್ನ ಮಾಡುವುದು ಇದೆಲ್ಲವೂ ಸೇವೆಯೇ. ಆದರೆ, ಯಾವ ಉದ್ದೇಶ ಹಾಗೂ ಪ್ರಣಾಲಿಯಿಂದ ಸೇವೆ ಮಾಡಬೇಕು ಎಂಬುದೇ ಪ್ರಶ್ನೆ. ಆ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಮೇಲಿನ ವಾಕ್ಯದಿಂದ ವ್ಯಕ್ತವಾಗುತ್ತದೆ. ತಮ್ಮ ಸಭೆಯ ನಿಯಮಾವಳಿಯನ್ನು ರಚಿಸುವಾಗ ಅವರು ಹೀಗೆ ಬರೆದಿದ್ದಾರೆ:—"ಭಾರತದ ರಾಜನೈತಿಕ ಜೀವನವನ್ನು ಧಾರ್ಮಿಕವಾಗಿಸುವುದೇ ಸದಸ್ಯರ ಕರ್ತವ್ಯ. ಆ ಒಂದೇ ವಾಕ್ಯದಲ್ಲಿ ಸರ್ವಸ್ವವೂ ಅಡಗಿದೆ. ಅವರದು ಧಾರ್ಮಿಕ ಜೀವನ ತಾವು ಮಾಡಿದ ಎಲ್ಲ ಕೆಲಸವನ್ನು ಅವರು ಧರ್ಮಭಾವನೆಯ ಪ್ರೇರಣೆಯಿಂದಲೇ ಮಾಡಿದರೆಂದು ನನಗೆ ಅನಿಸುತ್ತದೆ. ಇಪ್ಪತ್ತು ವರುಷಗಳ ಹಿಂದಿನ ಅವರ ಹಲವೊಂದು ಉದ್ಗಾರ ಅಥವಾ ಕಥನಗಳು ನಾಸ್ತಿಕರ ಉದ್ಗಾರ ಕಥನಗಳಂತೆ ಭಾಸವಾಗುತ್ತವೆ. ಒಮ್ಮೆ ಅವರು ಹೀಗೆ ಹೇಳಿದ್ದರು—"ರಾನಡೆ ಅವರಲ್ಲಿ ಇದ್ದ ಶ್ರದ್ಧೆ (ನಂಬಿಕೆ) ನನ್ನಲ್ಲಿಯೂ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಆದರೆ, ಆ ಸಮಯದಲ್ಲೂ ಅವರ ಕಾರ್ಯಗಳ ಮೂಲದಲ್ಲಿ ಧರ್ಮಬುದ್ಧಿ ಇದ್ದೇ ಇತ್ತು. ಯಾರ ಆಚರಣೆ ಸಾಧುಗಳ ಆಚರಣೆಯಂತೆಯೇ ಇರುವುದೋ ಯಾರ ವೃತ್ತಿ ನಿರ್ಮಲವಾಗಿರುವುದೋ, ಯಾರು ಸತ್ಯದ ಮೂರ್ತಿಗಳಾಗಿರುವರೋ, ನಮ್ರರಾಗಿರುವರೋ ಸರ್ವಥಾ ಅಹಂಕಾರವನ್ನು ಬಿಟ್ಟಿರುವರೋ ಅವರು ನಿಸ್ಸಂದೇಹವಾಗಿ ಧರ್ಮಾತ್ಮರು. ಗೋಖಲೆ ಇದೇ ಶ್ರೇಣಿಯ ಮಹಾತ್ಮರು. ಅವರೊಡನೆ ನನ್ನ ಸುಮಾರು ಇಪ್ಪತ್ತು ವರುಷಗಳ ಸಹವಾಸದ ಅನುಭವದ ಮೇಲಿಂದ ಈ ಮಾತನ್ನು ಹೇಳುತ್ತಿರುವೆ.

ಗೋಖಲೆಯವರ ಹಿಂದೂತ್ವ

ಹಿಂದೂ-ಮುಸಲ್ಮಾನರ ಪ್ರಶ್ನೆಯನ್ನು ಅವರು ಧಾರ್ಮಿಕ ದೃಷ್ಟಿಯಿಂದಲೇ ನೋಡುತ್ತಿದ್ದರು. ಒಮ್ಮೆ ತನ್ನನ್ನು ಹಿಂದೂ ಎಂದು ಕರೆದುಕೊಳ್ಳುವ ಓರ್ವಮನುಷ್ಯ ಅವರ ಬಳಿಗೆ ಬಂದು, ಮುಸಲ್ಮಾನರು ನೀಚರು, ಹಿಂದೂಗಳು ಉಚ್ಚರು ಎಂಬುದಾಗಿ ಹೇಳತೊಡಗಿದ. ಮಹಾತ್ಮಾ ಗೋಖಲೆ ಅವರನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಳ್ಳಲು ಶಕ್ಯವಾಗದಿರಲು, ನಿಮ್ಮಲ್ಲಿ ಹಿಂದೂ ಎಂಬ ಅಭಿಮಾನ ಎಳ್ಳಷ್ಟೂ ಇಲ್ಲ ಎಂಬದಾಗಿ ಅವರನ್ನು ಆಕ್ಷೇಪಿಸಿದ. ಗೋಖಲೆ ಅವರು ಹುಬ್ಬು ಏರಿಸಿ, ಹೃದಯಭೇದಕವಾದ ದನಿಯಲ್ಲಿ ಹೀಗೆ ನುಡಿದರು—"ನೀವು ಹೇಳುವಂತೆ ಮಾಡುವುದರಲ್ಲೇ ಹಿಂದೂತ್ವ ಇರುವುದಾದರೆ, ನಾನು ಹಿಂದುವೇ ಅಲ್ಲ. ನಿಮ್ಮ ದಾರಿಯನ್ನು ಹಿಡಿಯಿರಿ."

ಗೋಖಲೆಯವರ ನಿರ್ಭಯತೆ

ಮಹಾತ್ಮ ಗೋಖಲೆ ಅವರಲ್ಲಿ ನಿರ್ಭಯತೆಯ ಗುಣ ಬಹಳವಾಗಿತ್ತು. ಪ್ರಾಯಶಃ ಧರ್ಮನಿಷ್ಠೆಯಲ್ಲಿ ಆ ಗುಣದ ಸ್ಥಾನ ಸರ್ವೋಚ್ಚವಾದುದು. ಲೆಫ್ಟಿನೆಂಟ್ ರೈಂಡ್‌ರ ಕೊಲೆಯನಂತರ ಪುಣೆಯಲ್ಲಿ ಕೋಲಾಹಲ ಎದ್ದಿತ್ತು. ಆ ಕಾಲಕ್ಕೆ ಗೋಖಲೆ ಇಂಗ್ಲೆಂಡಿನಲ್ಲಿದ್ದರು. ಪುಣೆಯವರ ಪರವಾಗಿ ಅಲ್ಲಿ ಅವರು ಮಾಡಿದ ಭಾಷಣಗಳು ಜಗತ್‌ಪ್ರಸಿದ್ಧವಾಗಿವೆ. ಆ ಭಾಷಣಗಳಲ್ಲಿ ಅವರು ಮುಂದೆ ರುಜುವಾತು ಪಡಿಸಲು ಆಗದಂಥ ಹಲವು ಅಂಶಗಳನ್ನು ಹೇಳಿದ್ದರು. ಕೆಲವೇ ದಿನಗಳನಂತರ ಭಾರತಕ್ಕೆ ಮರಳಿದರು. ತಮ್ಮ ಭಾಷಣಗಳಲ್ಲಿ ತಾವು ಆಂಗ್ಲ ಸಿಪಾಯಿಗಳ ಮೇಲೆ ಹೊರಿಸಿದ್ದ ಆಪಾದನೆಗಳಿಗಾಗಿ ಅವರು ಕ್ಷಮಾಪಣೆ ಬೇಡಿದರು. ಹಾಗೆ ಕ್ಷಮಾಪಣೆ ಕೇಳಿದುದರಿಂದ ಇಲ್ಲಿಯ ಅನೇಕಮಂದಿ ಅವರ ಮೇಲೆ ಕೋಪಮಾಡಿದರು. ಎಷ್ಟೋ ಮಂದಿ ಸಾರ್ವಜನಿಕ ಕಾರ್ಯದಿಂದ ನಿವೃತ್ತ

ರಾಗುವಂತೆಯೂ ಅವರಿಗೆ ಸಲಹೆ ಕೊಟ್ಟರು. ಎಷ್ಟೋಮಂದಿ ತಿಳಿಗೇಡಿಗಳು ಅವರ ಮೇಲೆ ಹೇಡಿತನದ ಆರೋಪಣೆ ಹೊರಿಸುವುದಕ್ಕೂ ಹಿಂದೆ ಮುಂದೆ ನೋಡಲಿಲ್ಲ. ಅದೆಲ್ಲಕ್ಕು ಅವರು ಗಂಭೀರ-ಮಧುರಭಾಷೆಯಲ್ಲೇ ಉತ್ತರವಿತ್ತರು : 'ದೇಶಸೇವೆಯ ಕಾರ್ಯವನ್ನು ನಾನು ಯಾರ ಆಜ್ಞೆಯಿಂದಲೂ ಕೈಗೊಂಡಿಲ್ಲ; ಅದನ್ನು ಯಾರ ಆಜ್ಞೆಯಿಂದಲೂ ಬಿಡುವುದೂ ಇಲ್ಲ. ನನ್ನ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ನಾನು ಜನರ ಪಕ್ಷದಲ್ಲಿರಲು ಯೋಗ್ಯನೆನಿಸಿದರೆ ಒಳಿತು; ಒಂದುವೇಳೆ ಆ ಅದೃಷ್ಟ ನನಗಿಲ್ಲದಿದ್ದರೆ ಅದನ್ನೂ ಒಳ್ಳೆಯದೆಂದೇ ಭಾವಿಸುವೆನು." ಕೆಲಸ ಮಾಡುವುದು ತಮ್ಮ ಧರ್ಮವೆಂದು ಅವರು ಭಾವಿಸಿದ್ದರು. ನನಗೆ ತಿಳಿದಮಟ್ಟಿಗೆ ತಮ್ಮ ಕಾರ್ಯದಿಂದ ಜನರ ಮೇಲೆ ಏನು ಪ್ರಭಾವ ಬಿದ್ದೀತು ಎಂಬುದಾಗಿ ಸ್ವಾರ್ಥದೃಷ್ಟಿಯಿಂದ ಅವರು ಎಂದೂ ವಿಚಾರಮಾಡಿದವರಲ್ಲ. ದೇಶದ ಸಲುವಾಗಿ ಗಲ್ಲನ್ನು ಏರಬೇಕಾದ ಪ್ರಸಂಗ ಬಂದರೂ ನಿಶ್ಚಲಚಿತ್ತದಿಂದ ನಗನಗುತ್ತ ಹಾಗೆ ಮಾಡುವ ಶಕ್ತಿ ಅವರಲ್ಲಿದ್ದಿತೆಂದು ನನ್ನ ನಂಬಿಕೆ. ಅನೇಕ ಬಾರಿ ಅವರಿಗೆ ಒದಗಿದ ಸ್ಥಿತಿಯನ್ನು ನೆನಸಿಕೊಂಡರೆ, ಅದಕ್ಕಿಂತ ಗಲ್ಲು ಏರುವುದೇ ಸುಲಭವಾಗಿರುತ್ತಿತ್ತೇನೋ ಅನಿಸುತ್ತದೆ. ಅನೇಕವೇಳೆ ಅವರು ಎಷ್ಟೋ ವಿಕಟ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತು; ಆದರೂ ಅವರು ಇಟ್ಟ ಹೆಜ್ಜೆಯನ್ನು ಹಿಂದೆಗೆಯಲಿಲ್ಲ.

ಗೋಖಲೆಯವರ ಧಾರ್ಮಿಕ ವೃತ್ತಿ

ಗೋಖಲೆಯವರ ಚರಿತ್ರೆಯಿಂದ ನಾವು ಗ್ರಹಿಸಲು ಯೋಗ್ಯವಾದ ಅಂಶವೇನಾದರೂ ಇದ್ದರೆ, ಅದು ಅವರ ಧರ್ಮವೃತ್ತಿಯೆ. ಅದನ್ನು ಅನುಸರಿಸುವುದೇ ಉಚಿತ. ನಾವೆಲ್ಲರೂ ಹಿರಿಯ ವ್ಯವಸ್ಥಾಪಕ ಸಮಿತಿಯ ಸದಸ್ಯರಾಗುವುದು ಶಕ್ಯವಿಲ್ಲ. ಅದರ ಸದಸ್ಯರಾಗಿ ಬಿಡುವುದರಿಂದಲೇ ದೇಶಸೇವೆ ಆಗುತ್ತದೆ ಎಂದೂ ಅಲ್ಲ, ನಾವೆಲ್ಲರೂ ಪಬ್ಲಿಕ್ ಸರ್ವಿಸ್ ಕಮಿಶನ್ ರದಸ್ಯರಾಗುವಂತೆಯೂ ಇಲ್ಲ. ಅದರ ಸದಸ್ಯರಾದವರೆಲ್ಲರೂ

ದೇಶಭಕ್ತರಾಗಿಬಿಡುವುದೂ ಇಲ್ಲ. ನಾವೆಲ್ಲರೂ ಅವರಷ್ಟು ವಿದ್ವಾಂಸರಾಗುವುದೂ ಶಕ್ಯವಿಲ್ಲ. ವಿದ್ವಾಂಸರಾದ ಮಾತ್ರಕ್ಕೆ ದೇಶಸೇವೆ ಆಗಿಬಿಡುವುದೂ ಇಲ್ಲ. ಆದರೆ, ನಿರ್ಭಯತೆ, ಸತ್ಯ, ಧೈರ್ಯ, ನಮ್ರತೆ, ನ್ಯಾಯಶೀಲತೆ, ಸರಳತೆ ಹಾಗೂ ಅಧ್ಯವಸಾಯ ಮೊದಲಾದ ಗುಣಗಳನ್ನು ಬೆಳೆಸಿಕೊಂಡು, ಅವನ್ನು ದೇಶಕ್ಕಾಗಿ ಅರ್ಪಣೆಮಾಡುವುದು ಎಲ್ಲರಿಗೂ ಸಾಧ್ಯ. ಅದೇ ಧರ್ಮಭಾವ. ರಾಜನೈತಿಕ ಜೀವನವನ್ನು ಧರ್ಮಮಯಗೊಳಿಸುವುದೆಂಬ ಮಾತಿಗೆ ಇದೇ ಅರ್ಥ. ಮೇಲೆ ಹೇಳಿದ ಮಾತಿಗೆ ಅನುಗುಣವಾಗಿ ನಡೆಯುವವರಿಗೆ ಸದಾ 'ಮಾರ್ಗ' ಹೊಳೆದೇ ಹೊಳೆಯುತ್ತದೆ. ಆತನೇ ಮಹಾತ್ಮಾ ಗೋಖಲೆ ಅವರ ಸಂಪತ್ತಿಗೆ ಉತ್ತರಾಧಿಕಾರಿಯಾಗುವನು. ಈ ಪ್ರಕಾರದ ನಿಷ್ಠೆಯಿಂದ ಕೆಲಸ ಮಾಡುವಾತನಿಗೆ ಇನ್ನೂ ಯಾವ ಯಾವ ಗುಣಗಳು ಬೇಕೋ ಅವೆಲ್ಲವೂ ದೊರೆಯುವುವು. ಇದು ಭಗವಂತನ ವಚನ. ಮಹಾತ್ಮಾ ಗೋಖಲೆ ಅವರ ಚರಿತ್ರೆ ಇದಕ್ಕೆ ಜ್ವಲಂತ ಪ್ರಮಾಣ.೧೫

ಲೋಕಮಾನ್ಯರ ಉತ್ತಮೋತ್ತಮ ಶಿಷ್ಯ

ನನಗೊಂದು ಅನಾಮಧೇಯ ಪತ್ರ ಬಂದಿದೆ. ಅದರಲ್ಲಿ ಲೇಖಕರು ನನ್ನನ್ನು ಪ್ರಶಂಸೆಮಾಡಿ, ಹೀಗೆ ಬರೆದಿದ್ದಾರೆ: "ನೀವು ಕೈಗೊಂಡಿರುವ ಕಾರ್ಯ ಲೋಕಮಾನ್ಯರಿಗೆ ಬಹಳ ಪ್ರಿಯವಾಗಿತ್ತು. ಅವರ ಆತ್ಮವೇ ನಿಮ್ಮಲ್ಲಿ ವಿರಾಜಿಸುವಂತೆ ತೋರುತ್ತದೆ. ನಿಮ್ಮ ಸಾಹಸವನ್ನು ಮಾತ್ರ ಬಿಡಬೇಡಿ, ಕೆಲಸ ಮಾಡುತ್ತ ಹೋಗಿ: ಸ್ವರಾಜ್ಯ ನಿಮ್ಮದೇ. ಆದರೆ, ನೀವು ನಿಮ್ಮನ್ನು ಗೋಖಲೆ ಅವರ ಶಿಷ್ಯ ಎಂದು ಏಕೆ ಕರೆದುಕೊಂಡಿದ್ದೀರಿ? ಹಾಗೆ ಮಾಡಿ ನಿಮಗೆ ನೀವೇ ಅಗೌರವ ಮಾಡಿಕೊಂಡಿದೀರಿ".

ಲೇಖಕರು ಅನಾಮಕ ಪತ್ರ ಬರೆಯುವ ಪದ್ಧತಿಯನ್ನು ಬಿಟ್ಟುಬಿಟ್ಟರೆ ಒಳಿತು. ನಾವು ನಿಜವಾಗಿ ಸ್ವರಾಜ್ಯ ಕಾರ್ಯದಲ್ಲಿ ತತ್ಪರರಾಗಿದ್ದರೆ, ಹೇಡಿತನವನ್ನು ಬಿಟ್ಟು, ಸಾಹಸಿಗಳಂತೆ ನಮ್ಮ ಅಭಿಪ್ರಾಯವನ್ನು ವ್ಯಕ್ತ

ಪಡಿಸುವುದು ಉಚಿತ. ಈ ಪತ್ರ ಸಾರ್ವಜನಿಕ ದೃಷ್ಟಿಯಿಂದ ಮಹತ್ವ ಪೂರ್ಣವಾಗಿರುವುದರಿಂದ, ಅದಕ್ಕೆ ಉತ್ತರಕೊಡುವುದು ಅವಶ್ಯಕವೆಂದು ತೋರುತ್ತದೆ. ನಾನು ಲೋಕಮಾನ್ಯರ ಅನುಯಾಯಿ ಅಲ್ಲ. ಕೋಟ್ಯಂತರ ದೇಶವಾಸಿಗಳಂತೆ ನಾನೂ ಅವರ ದೃಢ ಸಾಹಸ, ಅಸೀಮ ಪಾಂಡಿತ್ಯ ಹಾಗೂ ಅಗಾಧ ದೇಶಪ್ರೇಮವನ್ನು ಹೃತ್ಪೂರ್ವಕವಾಗಿ ಪ್ರಶಂಸಿಸುವೆ. ಅವರ ಪವಿತ್ರ ಹಾಗೂ ನಿಃಸ್ವಾರ್ಥ ಜೀವನದ ಬಗೆಗಂತೂ ನನಗೆ ಅತೀವ ಆದರ. ಈಗಿನ ಸಮಾಜದ ಮಂದಿಯ ಪೈಕಿ ಎಲ್ಲರಿಗಿಂತ ಹೆಚ್ಚಾಗಿ ಜನರ ದೃಷ್ಟಿಯನ್ನು ತಮ್ಮ ಕಡೆಗೆ ಸೆಳೆದುಕೊಂಡಿರುವ ವ್ಯಕ್ತಿ ಅವರೇ. ಅವರು ನಮ್ಮ ಹೃದಯದಲ್ಲಿ ಸ್ವರಾಜ್ಯದ ಬೀಜಾವಾಪನೆ ಮಾಡಿದಾರೆ. ಈಗಿನ ಶಾಸನದ ದೋಷಗಳನ್ನು ಲೋಕಮಾನ್ಯರು ತಿಳಿದುಕೊಂಡಿದ್ದಷ್ಟು ಒಳಿತಾಗಿ ಬೇರೆ ಯಾರೂ ತಿಳಿದುಕೊಂಡಿರಲಾರರು. ಅವರ ಸಂದೇಶವನ್ನು ಭಾರತದ ಪ್ರತಿಯೊಂದು ಗುಡಿಸಲಿಗೂ ಮುಟ್ಟಿಸಲು ನಾನು ಬಯಸುತ್ತೇನೆ. ಹಾಗೂ ಅವರ ಉತ್ತಮೋತ್ತಮ ಶಿಷ್ಯರಲ್ಲಿ ಒಬ್ಬನಂತೆ ಅವರ ಸಂದೇಶವನ್ನು ಪ್ರಸಾರಮಾಡುವ ಪ್ರಯತ್ನ ನಡೆಸಿದ್ದೇನೆ. ಆದರೆ ಅವರ ಹಾಗೂ ನನ್ನ ಮಾರ್ಗದಲ್ಲಿ ಅಂತರವಿದೆ. ಈ ತನಕ ಮಹಾರಾಷ್ಟ್ರದ ಹಲವು ನಾಯಕರು ನನ್ನೊಡನೆ ಒಮ್ಮತರಾಗದಿರಲು ಅದೇ ಕಾರಣ. ಆದರೆ, ಲೋಕಮಾನ್ಯರಿಗೆ ನನ್ನ ಮಾರ್ಗದಲ್ಲಿ ಅವಿಶ್ವಾಸ ಇದ್ದಿರಲಿಕ್ಕಿಲ್ಲವೆಂದು ನನ್ನ ದೃಢ ಅಭಿಪ್ರಾಯ. ನನ್ನಲ್ಲಿ ಅವರಿಗೆ ದೃಢವಿಶ್ವಾಸ. ಮೃತ್ಯುವಿಗೆ ಹತ್ತು ದಿನ ಮೊದಲು, ತಮ್ಮ ಅನೇಕ ಮಿತ್ರರ ಎದುರಿನಲ್ಲಿ ಅವರು ನನಗೆ ಹೀಗೆ ಹೇಳಿದ್ದರು. “ನಿಮ್ಮ ವಿಧಾನ (ಉಪಾಯ) ಎಲ್ಲಕ್ಕಿಂತ ಚೆನ್ನಾಗಿದೆ. ಜನರಿಗೆ ತಿಳಿಹೇಳಿ ಅವರನ್ನು ನಿಮ್ಮ ಕಡೆಗೆ ಒಲಿಸಿಕೊಳ್ಳಬೇಕಷ್ಟೆ”. ಆದರೆ ಜನ ಅದನ್ನು ಅರ್ಥಮಾಡಿಕೊಳ್ಳಬಲ್ಲರೆ—ಎಂಬ ಸಂದೇಹ ಅವರಿಗಿತ್ತು. ಆದರೆ, ನನಗೆ ಬೇರಾವ ಉಪಾಯವೂ ತಿಳಿಯದು. ಪರೀಕ್ಷೆಯ ಸಮಯದಲ್ಲಿ ದೇಶ ತಾನು ಅಹಿಂಸಾತ್ಮಕ ಅಸಹಯೋಗದ ತತ್ವ ಅರಿತುಕೊಂಡಿರುವುದನ್ನು ಸಿದ್ಧಪಡಿಸಬೇಕು. ನನಗೆ ನನ್ನ ಇತರ ಅನರ್ಹತೆಯ ಅರಿವೂ ಇದೆ. ನನ್ನಲ್ಲಿ ಪಾಂಡಿತ್ಯವಿಲ್ಲ. ಅವರಲ್ಲಿದ್ದಷ್ಟು ಸಂಘಟನಾ ಶಕ್ತಿಯೂ ಇಲ್ಲ. ಕಾರ್ಯ ಸಂಚಾಲನೆಗೆ ಶಿಷ್ಯರೂ

ಇಲ್ಲ. ಅಲ್ಲದೆ ಇಪ್ಪತ್ತು ವರುಷಗಳ ಕಾಲ ವಿದೇಶದಲ್ಲಿದ್ದುದರಿಂದ ಭಾರತದ ಬಗೆಗೆ ಲೋಕಮಾನ್ಯರಿಗೆ ಇದ್ದಷ್ಟು ಅನುಭವವೂ ನನಗಿಲ್ಲ. ದೇಶಪ್ರೇಮ ಮತ್ತು ಸ್ವರಾಜ್ಯ ಈ ಎರಡು ವಿಷಯಗಳಲ್ಲಿ ಮಾತ್ರ ನಮ್ಮಲ್ಲಿ ಸಮಾನತೆ ಇತ್ತು. ಇಬ್ಬರ ಹೃದಯದಲ್ಲೂ ಆ ಭಾವನೆ ಏಕರೀತಿಯಾಗಿ ನೆಲೆಸಿತ್ತು. ಆದಕಾರಣ, ಲೋಕಮಾನ್ಯರ ಬಗೆಗೆ ನನ್ನ ಹೃದಯದಲ್ಲಿ ಆದರ-ಗೌರವ ಬೇರೆ ಯಾರಿಗಿಂತಲೂ ಕಡಿಮೆ ಇಲ್ಲ ವೆಂದು ಅನಾಮಕ ಪತ್ರಲೇಖಕರಿಗೆ ತಿಳಿಸಬಯಸುತ್ತೇನೆ; ಹಾಗೂ ಸ್ವರಾಜ್ಯದ ವಿಷಯವನ್ನು ಪ್ರತಿಪಾದಿಸುವುದರಲ್ಲಿ ಅವರ ಉತ್ತಮೋತ್ತಮ ಶಿಷ್ಯರೊಡನೆ ಮುಂಬರಿಯುತ್ತೇನೆ. ಭಾರತಕ್ಕೆ ಆದಷ್ಟು ಬೇಗ ಸ್ವರಾಜ್ಯ ಸಿಕ್ಕಬೇಕೆಂಬುದೇ ಅವರ ನಿಜವಾದ ಉಪಾಸನೆ ಆಗಿತ್ತು. ಆದರಿಂದ ಮಾತ್ರವೇ ಅವರ ಆತ್ಮಕ್ಕೆ ಶಾಂತಿ ಸಿಕ್ಕೀತು.೧೬

'ಕಾಯಿದೇ ಆಜಂ ಜಿನ್ನಾ ಜಿಂದಾಬಾದ್'

ಜಿನ್ನಾ ಸಾಹೇಬರು 'ಮುಕ್ತಿ ದಿನ'ದ ಘೋಷಣೆ ಮಾಡಿದ ದಿನವೇ ಗುಲ್ಬರ್ಗದ ಮುಸಲ್ಮಾನರ ಕಡೆಯಿಂದ, ನನಗೆ ಈ ತಂತಿ ಬಂದಿತು: "ನ ಜಾತ್ ದಿವಸ್ ಕಾ ಮುಬಾರಕ್ ಬಾದ್, ಕಾಯಿದೇ ಆಜಂ ಜಿನ್ನಾ ಜಿಂದಾಬಾದ್". ನನ್ನನ್ನು ರೇಗಿಸಬೇಕೆಂಬ ಉದ್ದೇಶದಿಂದಲೆ ಆ ತಂತಿ ಯನ್ನು ಕಳುಹಿಸಿರಬೇಕು. ಆದರೆ ತಮ್ಮ ತಂತಿಯ ಉದ್ದೇಶ ನೆರವೇರಲಿ ಲ್ಲವೆಂಬುದು, ಪಾಪ, ತಂತಿ ಕಳುಹಿಸಿದವರಿಗೆ ಏನು ಗೊತ್ತು? ಆ ತಂತಿ ಸಿಕ್ಕಿದ ದಿನ "ಕಾಯಿದೇ ಆಜಂ ಜಿನ್ನಾ ಅವರು ಬಹುಕಾಲ ಬದುಕಲಿ"— ಎಂಬ ಅವರ ಪ್ರಾರ್ಥನೆಯಲ್ಲಿ ನಾನೂ ಭಾಗಿಯಾದೆ. ಕಾಯಿದೆ ಆಜಂ ನಮ್ಮ ಹಳೆಯ ಒಡನಾಡಿಗಳು. ಇಂದು ಅವರಿಗೂ ನಮಗೂ ಕೆಲವು ವಿಷಯಗಳಲ್ಲಿ ಕೂಡಿಬರುತ್ತಿಲ್ಲವೆಂದ ಮಾತ್ರಕ್ಕೆ ಏನಾಯಿತು? ಅವರ ಬಗೆಗೆ ನನ್ನ ಸದ್ಭಾವದಲ್ಲಿ ಏನೂ ವ್ಯತ್ಯಾಸವಾಗುವಂತಿಲ್ಲ.

ಅಲ್ಲದೆ, ಕಾಯಿದೇ ಆಜಂ ಅಭಿವಂದನೆಗೆ ಯೋಗ್ಯವಾದಂಥ ವಿಶೇಷ

ಕಾರ್ಯವೊಂದನ್ನು ಮಾಡಿದ್ದಾರೆ. ಈದ್ ದಿನದಂದು ಅವರು ಮಾಡಿದ ಸೊಗಸಾದ ಭಾಷಣದ ಬಗೆಗೆ ಅವರಿಗೆ ಅಭಿನಂದನೆಯ ತಂತಿಯನ್ನು ಕಳುಹಿಸಲು ನನಗೆ ಸಂತೋಷವೆನಿಸಿತು. ಈಗ ಅವರು ಅಭಿವಂದನೆಗೆ ಇನ್ನೂ ಹೆಚ್ಚು ಹಕ್ಕುದಾರರಾಗಿದ್ದಾರೆ : ಕಾರಣ, ಅವರು ಕಾಂಗ್ರೆಸ್ ನೀತಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳೊಡನೆ ಸಂಧಾನ ನಡೆಸುತ್ತಿದ್ದಾರೆ. ಹೀಗೆ ಅವರು ಮುಸ್ಲಿಮ್ ಲೀಗನ್ನು ಸಾಂಪ್ರದಾಯಿಕ ಸಿಕ್ಕಿನಿಂದ ಹೊರ ತಂದು ಅದಕ್ಕೆ ರಾಷ್ಟ್ರೀಯ ಸ್ವರೂಪ ಕೊಡುತ್ತಿದ್ದಾರೆ. ಅವರ ಈ ಕ್ರಮ ಪೂರ್ಣವಾಗಿ ಉಚಿತವಾದುದು ಎಂದು ನನ್ನ ಭಾವನೆ. ಮದ್ರಾಸಿನ ಜಸ್ಟಿಸ್ ಪಾರ್ಟಿ ಹಾಗೂ ಡಾ· ಅಂಬೇಡ್ಕರರ ಪಕ್ಷ ಮೊದಲೇ ಜಿನ್ನಾ ಸಾಹೇಬರೊಡನೆ ಕೂಡಿಕೊಂಡಿರುವುದನ್ನು ನಾನು ಬಲ್ಲೆ. ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಸಾವರಕರರು ಶೀಘ್ರದಲ್ಲೇ ಜಿನ್ನಾ ಸಾಹೇಬರನ್ನು ಭೇಟಿಯಾಗಲಿರುವರೆಂದು ಪತ್ರಿಕೆಗಳಲ್ಲಿ ಸುದ್ದಿ· ಬಹುಮಂದಿ ಕಾಂಗ್ರೆಸೇತರ ಹಿಂದೂಗಳು ತಮ್ಮ ಬಗೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿರುವುದಾಗಿ ಜಿನ್ನಾ ಸಾಹೇಬರೇ ಜನತೆಗೆ ತಿಳಿಸಿದ್ದಾರೆ. ಹೀಗಾಗುವುದು ಪೂರ್ಣವಾಗಿ ಲಾಭದಾಯಕವಾದುದು ಎಂದು ನನ್ನ ಭಾವನೆ. ನಮ್ಮ ದೇಶದಲ್ಲಿ ಎರಡೇ ಎರಡು ದೊಡ್ಡ ಪಕ್ಷಗಳು– ಒಂದು ಕಾಂಗ್ರೆಸಿಗರ ಪಕ್ಷ, ಇನ್ನೊಂದು ಕಾಂಗ್ರೆಸೇತರರಪಕ್ಷ. ಕಾಂಗ್ರೆಸ್ ವಿರೋಧಿಗಳು ಎಂಬ ಮಾತು ಹೆಚ್ಚು ಒಪ್ಪುವುದಾದರೆ–ಕಾಂಗ್ರೆಸ್ ವಿರೋಧಿಗಳ ಪಕ್ಷ–ಇರುವುದಕ್ಕಿಂತ ಒಳ್ಳೆಯ ವಿಷಯ ಇನ್ನಾವುದು ? ಜಿನ್ನಾ ಸಾಹೇಬರ ಕೃಪೆಯಿಂದ ಅಲ್ಪ ಸಂಖ್ಯಾತ ಜಾತಿ ಎಂಬ ಶಬ್ದಕ್ಕೆ ಹೊಸ ಮತ್ತು ಒಳ್ಳೆಯ ಅರ್ಥ ಹೊರಡುತ್ತಿದೆ. ಕಾಂಗ್ರೆಸ್ಸಿಗರ ಬಹುಮತ ಸವರ್ಣ ಹಿಂದೂಗಳು, ಅವರ್ಣ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಪಾರಸಿಗಳು ಹಾಗೂ ಯೆಹೂದಿಗಳು ಕೂಡಿಯೇ ಆಗಿದೆ. ಹೀಗೆ ಇದು ಒಂದು ವಿಶಿಷ್ಟ ಅಭಿಪ್ರಾಯವುಳ್ಳ ಎಲ್ಲ ವರ್ಗಗಳ ಕೂಡಿರುವ ಬಹುಮತ. ಈಗ ಏರ್ಪಡುತ್ತಿರುವ ಹೊಸ ಪಕ್ಷ ಒಂದು ವಿಶಿಷ್ಟ ಅಭಿಪ್ರಾಯವನ್ನು ಇಟ್ಟುಕೊಂಡಿರುವವರ ಪಕ್ಷ. ಮತದಾರರು ಮನಸ್ಸು ಮಾಡಿದರೆ ಇವರದು ಎಂದಾದರೂ ಬಹುಮತ ಪಕ್ಷವಾಗಬಹುದು. ಹೀಗೆ ಬೇರೆ ಬೇರೆ ಪಕ್ಷಗಳು ಒಂದಾಗುವುದನ್ನು ನಾವೆಲ್ಲರೂ ಸ್ವಾಗತಿಸಬೇ

ಕಾದುದೇ. ಕಾಯಿದೇ ಆಜಂ ಅವರು ಇಂಥ ಕೂಡಿಕೆಯನ್ನು ಸಾಧಿಸ ಬಲ್ಲರಾದರೆ, ಇಡೀ ಹಿಂದೂಸ್ತಾನ "ಕಾಯಿದೇ ಆಜಂ ಜಿನ್ನಾ ಯುಗ-ಯುಗಗಳ ವರೆಗೆ ಜೀವಿಸಲಿ"-ಎಂಬುದಾಗಿ ಕೂಗುಹಾಕೀತು. ಏಕೆಂದರೆ ಆಗಲೀಗ ಇಡೀ ರಾಷ್ಟ್ರ ಯಾವುದಕ್ಕಾಗಿ ಹಾತೊರೆಯುತ್ತಿದೆಯೋ ಅಂಥ ಸ್ಥಾಯಿಯಾದ ಸಜೀವವಾದ ಏಕತೆಯನ್ನು ಅವರು ಸ್ಥಾಪಿಸಿದಂತಾಗು ವುದು.೧೭

ಪೂರ್ಣಸ್ಥಿತಪ್ರಜ್ಞನಾಗಲು ಪ್ರಯತ್ನ

ಸಹೋದರರೊಬ್ಬರು ನನಗೆ ಉಗ್ರವಾದ ಪತ್ರವೊಂದನ್ನು ಬರೆದಿದ್ದಾರೆ. ಅದರ ಆಶಯ ಹೀಗಿದೆ :—

ನೀವು ಇನ್ನೂ ಹುಚ್ಚರಾಗಿಯೇ ಇರಬಯಸುವಿರಾ? ಇನ್ನು ಕೆಲವೇ ದಿನಗಳಲ್ಲಿ ಈ ಪ್ರಪಂಚದಿಂದ ತೆರಳಲಿರುವ ನೀವು ಇನ್ನಾದರೂ ಪಾಠ ಕಲಿಯಬಾರದೆ? 'ಎಲ್ಲರೂ ಕತ್ತಿಹಿಡಿಯಬೇಕು; ಶಿಪಾಯಿಗಳಾಗಬೇಕು. ಸ್ವಸಂರಕ್ಷಣೆ ಮಾಡಿಕೊಳ್ಳಬೇಕು'-ಎಂಬುದಾಗಿ ಪುರುಷೋತ್ತಮದಾಸರು ಹೇಳಿದರೆ, ನಿಮಗೇಕೆ ಜೀವ ಚುರುಚುರು ಅನಿಸಬೇಕು? ನೀವಾದರೋ ಗೀತೆ ಓದುವವರು. ಈ ದ್ವಂದ್ವಗಳಿಂದ ಪಾರಾಗಬೇಕು. ಮಾತುಮಾತಿಗೆ ಕುಗ್ಗುವ ಅಥವಾ ಹಿಗ್ಗುವ ಹವ್ಯಾಸವನ್ನು ಬಿಟ್ಟುಬಿಡಬೇಕು. ನೀರಿನಲ್ಲಿ ಮುಳುಗುತ್ತಿರುವಾಗಲೂ ತನ್ನನ್ನು ಕುಟುಕಿದ ಚೇಳನ್ನು ಬದುಕಿಸಲು ಪ್ರಯತ್ನಿಸುವ ಭೋಳೆಸ್ವಭಾವದ ಸಾಧು-ಬಾಬನ ಕಥೆಯನ್ನು ನೆನಪಿಗೆ ತರುವಂಥದು, ನಿಮ್ಮ ಮಾತು. ಅಹಿಂಸೆಯ ಹಾಡು ಹಾಡವೆ ಇರುವುದು ನಿಮ್ಮಿಂದ ಆಗದಿದ್ದರೆ, ಕನಿಷ್ಟಪಕ್ಷ ಬೇರೆ ಮಾರ್ಗದಲ್ಲಿ ಹೋಗ ಬಯಸುವವರಿಗಾದರೂ ಹೋಗಲಿಕ್ಕೆ ಬಿಡಿ. ಅವರ ಮಾರ್ಗದಲ್ಲೇಕೆ ಅಡ್ಡಿಬರುತ್ತೀರಿ?

ನಾನು ಸ್ಥಿತಪ್ರಜ್ಞನಾಗಿ ಇರಬಲ್ಲೆನಾದರೆ, ನನ್ನ ಆಯುಷ್ಯ ನೂರಿಪ್ಪತ್ತೈದು ವರ್ಷಗಳಿಗೆ ಒಂದು ವರ್ಷವೂ ಕಡಿಮೆ ಬೀಳದು. ನಾವೆಲ್ಲರೂ ಸ್ಥಿತಪ್ರಜ್ಞರಾದರೆ ನಮ್ಮಲ್ಲಿ ಯಾರೊಬ್ಬರೂ ೧೨೫ ವರುಷಗಳಿಗಿಂತ

ಸ್ವಲ್ಪವೂ ಕಡಿಮೆ ಜೀವಿಸಬೇಕಾದ ಕಾರಣವಿಲ್ಲ. ಭಗವಂತ ಇಚ್ಛಿಸಿದರೆ ಇಂದೇ ನನ್ನನ್ನು ಕೊಂಡೊಯ್ಯಬಹುದು. ಆದರೆ ನಾನು ಈಗಿಂದೀಗಲೇ ಹೋಗುವವನಲ್ಲ. ನಾನು ಇನ್ನೂ ಬದುಕಿರಬೇಕಾದರೆ, ಕೆಲಸ ಮಾಡಬೇಕಾಗಿದೆ. ಪುರುಷೋತ್ತಮದಾಸ ಟಂಡನರು ನನ್ನ ಹಳೆಯ ಒಡನಾಡಿಗಳು. ನಾವು ಎಷ್ಟೋ ವರುಷಗಳಿಂದ ಕೂಡಿ ಕೆಲಸಮಾಡುತ್ತ ಬಂದಿದ್ದೇವೆ. ನನ್ನ ಹಾಗೆಯೇ ಅವರೂ ಭಗವಂತನ ಭಕ್ತರು. ಅವರು ಈ ರೀತಿ ಮಾತನಾಡುತ್ತಿರುವರೆಂದು ಕೇಳಿದಾಗ ನನಗೆ ದುಃಖವಾಯಿತು. ನಾವು ಮೂವತ್ತು ವರುಷಗಳು ಮಿಕ್ಕು ಯಾವುದನ್ನು ಕಲಿತಿದೇವೋ, ಯಾವುದರ ಸಾಧನೆಯನ್ನು ಮಾಡಿದೇವೋ ಅದನ್ನು ಈ ರೀತಿ ನಿರರ್ಥಕಗೊಳಿಸಬೇಕೇ ಎಂದು ನನಗೆ ಅನಿಸಿತು. ಕತ್ತಿಯಿಂದ ರಕ್ಷಣೆ ಮಾಡಿಕೊಳ್ಳುವ ಮಾತನ್ನೇನೋ ಆಡುತ್ತೇವೆ. ಆದರೆ ರಕ್ಷಣೆಯಿಂದ ಮುಂದೆ ಸಾಗಿ ಪ್ರಹಾರ ಮಾಡದಿರುವ ಒಬ್ಬನಾದರೂ ವ್ಯಕ್ತಿಯನ್ನು ಈ ವರೆಗೆ ನಾನು ಪ್ರಪಂಚದಲ್ಲಿ ನೋಡಿಲ್ಲ. ರಕ್ಷಣೆಯ ಗರ್ಭದಲ್ಲೇ ಪ್ರಹಾರ ಅಡಗಿದೆ. ಇನ್ನು ನನ್ನ ಮನಸ್ಸಿಗೆ ನೋವಾದ ವಿಷಯ. ನಾನು ಪೂರ್ಣ ಸ್ಥಿತಪ್ರಜ್ಞನಾಗಿದ್ದರೆ, ನನಗೆ ನೋವಾಗುತ್ತಿರಲಿಲ್ಲ. ಈಗಲೂ ಮನನೋಯಿಸಿಕೊಳ್ಳದಿರಲು ಪ್ರಯತ್ನ ಸಾಗಿಸಿದೇನೆ. ಆ ದಿಶೆಯಲ್ಲಿ ದಿನದಿನಕ್ಕೆ ಸ್ವಲ್ಪಸ್ವಲ್ಪ ಮುಂದೆ ಸಾಗುತ್ತಿದೇನೆ. ಹಾಗಿಲ್ಲದಿದ್ದರೆ, ಪ್ರತಿದಿನ ನಾನು ಗೀತೆಯ ಸ್ಥಿತಪ್ರಜ್ಞನ ಶ್ಲೋಕಗಳನ್ನು ಹೇಳುವುದು ಡಂಬಾಚಾರವೇ ಆದೀತು. ಆದರೆ ಆ ಶ್ಲೋಕಗಳನ್ನು ಹೇಳಿದ ಮಾತ್ರಕ್ಕೆ ಒಂದೇ ದಿನದಲ್ಲಿ ಯಾವನೇ ವ್ಯಕ್ತಿ ಸ್ಥಿತಪ್ರಜ್ಞನಾಗಿಬಿಡುವುದೂ ಇಲ್ಲ.೧೮

ಶಠಂ ಪತಿಶಾಠ್ಯಂ

ಈ ಬೆಳಗ್ಗೆ ನಾನು ಮೌನ ಆಚರಿಸುತ್ತಿದ್ದಾಗ ಶ್ರೀ ಪುರುಷೋತ್ತಮ ದಾಸ ಟಂಡನರು ಬಂದರು. ಪ್ರತಿಯೊಬ್ಬ ಸ್ತ್ರಿ-ಪುರುಷರೂ ಶಸ್ತ್ರಧಾರಿಗಳಾಗಿ ಸ್ವರಕ್ಷಣೆ ಮಾಡಿಕೊಳ್ಳಬೇಕು ಎಂಬುದಾಗಿ ಟಂಡನರು ಹೇಳಿದು

ದನ್ನು ಕೇಳಿ ನನಗೆ ಎಷ್ಟು ಕೆಟ್ಟದೆನಿಸಿತೆಂಬುದನ್ನು ನಿಮಗೆ ತಿಳಿಸಿಯೇ ಇದೇನೆ. ಗೀತೆಯನ್ನು ಓದುತ್ತಿದ್ದರೂ ನಿಮಗೆ ಹೀಗೇಕೆ ಕೆಟ್ಟದೆನಿಸಬೇಕು-ಎಂಬುದಾಗಿ ಒಬ್ಬ ಪತ್ರ ಲೇಖಕರು ಕೇಳಿಯೇ ಬಿಟ್ಟರು. ಟಂಡನರು 'ಶಠಂ ಪ್ರತಿಶಾಠ್ಯಂ'—ಸಿದ್ಧಾಂತವನ್ನು ಒಪ್ಪುವವರೆಂದೂ ಆ ಪತ್ರದಿಂದ ವ್ಯಕ್ತವಾಗುತ್ತಿತ್ತು. ಆ ಬಗೆಗೆ ಟಂಡನರನ್ನು ಪ್ರಶ್ನಿಸಿದೆ. ಆ ಅಂಶವನ್ನು ಸ್ಪಷ್ಟೀಕರಿಸುತ್ತ ಟಂಡನರು ಹೇಳಿದರು—"ನಾನು 'ಶಠಂ ಪ್ರತಿಶಾಠ್ಯಂ' ಸಿದ್ಧಾಂತವನ್ನು ಒಪ್ಪುವುದಿಲ್ಲ. ಆದರೆ, ಸ್ವರಕ್ಷಣೆಗಾಗಿ ಶಸ್ತ್ರಧಾರಿಯಾಗುವುದು ಆವಶ್ಯಕ ಎಂಬುದನ್ನು ಒಪ್ಪುತ್ತೇನೆ. ಗೀತೆಯೂ ಇದನ್ನೇ ಬೋಧಿಸುತ್ತದೆ".

ಆಗ ನಾನು ಟಂಡನ್ನರಿಗೆ ಹೇಳಿದೆ—"ನೀವು 'ಶಠಂ ಪ್ರತಿಶಾಠ್ಯಂ' ಸಿದ್ಧಾಂತವನ್ನು ಒಪ್ಪುವವರಲ್ಲವೆಂದಾದರೂ ಆತನಿಗೆ ಬರೆದು ತಿಳಿಸಿಬಿಡಿ; ಅಂದರೆ ಆತನ ಭ್ರಮೆ ದೂರವಾದೀತು"... ....ಇನ್ನು ಸ್ವರಕ್ಷಣೆಯ ಸಲುವಾಗಿ ಹಿಂಸೆಮಾಡಬಹುದೆಂದು ಗೀತೆಯಲ್ಲಿ ಹೇಳಿದೆ ಎಂಬದನ್ನು ನಾನು ಒಪ್ಪುವುದಿಲ್ಲ. ಗೀತೆಗೆ ನಾನು ಮಾಡುವ ಅರ್ಥವೇ ಬೇರೆ. ನನಗೆ ತಿಳಿದ ಮಟ್ಟಿಗೆ ಗೀತೆ ಹಾಗೆ ಬೋಧಿಸದು. ಗೀತೆಯಲ್ಲಾಗಲಿ, ಬೇರೆ ಯಾವುದೇ ಸಂಸ್ಕೃತ ಗ್ರಂಥದಲ್ಲಾಗಲಿ ಅಂಥ ಮಾತು ಬರೆದಿದ್ದರೆ, ಅದನ್ನು ಧರ್ಮಶಾಸ್ತ್ರವೆಂದು ಒಪ್ಪುವುದಕ್ಕೆ ನಾನು ಸಿದ್ಧನಾಗಿಲ್ಲ. ಸಂಸ್ಕೃತದಲ್ಲಿ ಬರೆದು ಬಿಟ್ಟಮಾತ್ರಕ್ಕೆ ಯಾವ ವಾಕ್ಯವೂ ಶಾಸ್ತ್ರವಾಕ್ಯವಾಗುವುದಿಲ್ಲ.

ಟಂಡನರು ಹೇಳಿದರು—"ಬಹಳ ತೊಂದರೆ ಕೊಡುವ, ಹೊಲದ ಪೈರನ್ನು ಹಾಳುಮಾಡುವ ಕೋತಿಗಳನ್ನು ಕೊಲ್ಲಬಹುದೆಂದು ನೀವು ಬರೆದಿದ್ದಿರಿ. ಆದರೆ, ನಾನು ಯಾವುದೇ ಪ್ರಾಣಿಯನ್ನು ಕಡೆಗೆ ಇರುವೆಯನ್ನೂ ಕೂಡ ಕೊಲ್ಲುವುದನ್ನು ಒಪ್ಪುವುದಿಲ್ಲ. ಆದರೂ ಬೇಸಾಯದ ಮಾತು ಬೇರೆ; ಮನುಷ್ಯ-ಮನುಷ್ಯರ ಸಂಬಂಧದ ಮಾತು ಬೇರೆ".

ಟಂಡನರು ಮತ್ತೂ ಹೇಳಿದರು—"'ಶಠಂ ಪ್ರತಿಶಾಠ್ಯಂ' ಅಂದರೆ, ಒಂದು ಹಲ್ಲಿಗೆ ಬದಲಾಗಿ ಎರಡು ಹಲ್ಲು ಮುರಿಯಬೇಕು ಎಂಬುದಾಗಿಯೂ ನಾವು ಹೇಳುವುದಿಲ್ಲ. ಒಂದು ಹಲ್ಲಿಗೆ ಬದಲಾಗಿ ಒಂದು ಹಲ್ಲು, ಒಂದು ಏಟು-ಎಂಬ ಮಾತನ್ನು ನಾವು ಆಡುವುದಿಲ್ಲ. ಆದರೆ, ಕೈಯಲ್ಲಿ ಶಸ್ತ್ರ

ಹಿಡಿಯದಿದ್ದರೆ, ನಮ್ಮ ಶಕ್ತಿಯನ್ನು ತೋರದಿದ್ದರೆ ಸ್ವರಕ್ಷಣೆ ಹೇಗೆ ಆದೀತು ?"

ಆ ಬಗೆಗೆ ನನ್ನ ಉತ್ತರವಿದು : ಸ್ವರಕ್ಷಣೆಯನ್ನು ಆಗತ್ಯವಾಗಿ ಮಾಡಿಕೊಳ್ಳಬೇಕು. ಆದರೆ ಯಾವ ರೀತಿ? ಯಾರಾದರೂ ನನ್ನ ಬಳಿಗೆ ಬಂದು, 'ರಾಮನಾಮ ಹೇಳುತ್ತೀಯೋ ಇಲ್ಲವೋ? ಹೇಳುವುದಿಲ್ಲ ವಾದರೆ, ಇತ್ತನೋಡು ಕತ್ತಿ!' ಎಂಬುದಾಗಿ ಹೇಳುವರೆನ್ನಿ. ಆಗ ನಾನು ಹೀಗೆ ಹೇಳುವೆ—ನಾನು ಪ್ರತಿಕ್ಷಣವೂ ರಾಮಜಪ ಮಾಡುವವನೇ ಆದರೆ, ಕತ್ತಿ ತೋರಿಸಿ ರಾಮನಾಮ ಹೇಳೆಂದರೆ ಸಾವನ್ನೇ ಅಪ್ಪಬೇಕಾಗಿ ಬಂದರೂ ಆ ಮಾತಿಗೆ ನಾನು ಮಣಿಯುವವನಲ್ಲ. ಆ ರೀತಿ ಸ್ವರಕ್ಷಣೆಗಾಗಿ ಅಸು ನೀಗುವೆನು. ಹಾಗೆ ನೋಡಿದರೆ ಕುರಾನಿನ ವಚನ (ಕಲ್ಮಾ) ಓದಿದರೂ ನನ್ನ ಧರ್ಮವೇನೂ ನಷ್ಟವಾಗುವುದಿಲ್ಲ. 'ಅಲ್ಲಾ ಒಬ್ಬನೇ : ಆತನ ದೂತ ಪೈಗಂಬರ್ ಮೊಹಮ್ಮದ್ ಒಬ್ಬನೇ'—ಎಂಬುದಾಗಿ ಶುದ್ಧ ಅರಬ್ಬಿಯಲ್ಲಿ ಹೇಳಿದರೆ ತಾನೆ ಏನು? ಹಾಗೆ ಹೇಳುವುದರಲ್ಲಿ ಪಾಪವೇನೂ ಇಲ್ಲ. ಅಷ್ಟು ಮಾತ್ರದಿಂದಲೇ ಅವರು ನನ್ನನ್ನು ಮುಸಲ್ಮಾನ ಎಂದು ಒಪ್ಪಲು ಸಿದ್ಧವಾಗಿದ್ದರೆ, ಅದನ್ನು ನಾನು ಹೆಮ್ಮೆಯ ವಿಷಯವೆಂದೇ ಭಾವಿಸುತ್ತೇನೆ. ಆದರೂ ಕತ್ತಿ ತೋರಿಸಿ, ಕಲ್ಮಾ ಓದಿಸಲು ಬಂದರೆ ನಾನು ಎಂದಿಗೂ ಓದುವುದಿಲ್ಲ. ಪ್ರಾಣತೆತ್ತು ಸ್ವರಕ್ಷಣೆ ಮಾಡಿಕೊಳ್ಳುವೆನು. ಈ ಸಾಹಸವನ್ನು ತೋರಲಿಕ್ಕಾಗಿಯೇ ನಾನು ಬದುಕಬೇಕೆಂದಿರುವುದು. ಇದನ್ನು ಬಿಟ್ಟು ಬೇರೆ ರೀತಿಯಿಂದ ಬದುಕಲು ನನಗೆ ಇಷ್ಟವಿಲ್ಲ.೧೯

ಮಹಾಕಾವ್ಯಗಳಿಗಿಂತ ಮಹಾನ್ ವ್ಯಕ್ತಿ

ತಾವು (ಡಾ. ಕಗಾವಾ)* ಶಾಂತಿನಿಕೇತನವನ್ನು ನೋಡದೆಯೇ ಹೊರಟು ಹೋಗುವುದೆಂದರೇನು ?

*ಜಪಾನ್ ದೇಶದ ಒಬ್ಬ ದೊಡ್ಡ ವಿದ್ವಾಂಸರು. ೧೯೩೯ರಲ್ಲಿ ಗಾಂಧೀಜೀಯನ್ನು ಕಾಣಲು ಬಂದಿದ್ದರು.

ಕಗಾವಾ: ನಾನು ಕವಿಯ ಕಾವ್ಯಗಳನ್ನು ಓದಿದ್ದೇನೆ. ಅವು ನನಗೆ ಬಹಳ ಪ್ರಿಯ.

ಗಾಂಧೀಜೀ: ಆದರೆ. ಕವಿ ತಮಗೆ 'ಪ್ರಿಯ' ರಲ್ಲವೇನು?
ಕಗಾವಾ: ದಿನವೂ ಗೀತಾಂಜಲಿಯನ್ನು ಓದುವಾಗ ನಮಗೆ ಕವಿಯ ಸಾನ್ನಿಧ್ಯದ ಅನುಭವ ಆಗದೇನು? ನಿಜ, ಕವಿ ತಮ್ಮ ಕಾವ್ಯಗಳಿಗಿಂತ ದೊಡ್ಡವರಿರಬಹುದು.

ಗಾಂಧೀಜೀ: ಎಷ್ಟೋ ವೇಳೆ ಸತ್ಯ ಆ ಮಾತಿಗೆ ವಿರುದ್ಧವಾಗಿಯೇ ಇರುತ್ತದೆ. ಆದರೆ ರವೀಂದ್ರನಾಥ ಟಾಗೋರರ ಬಗೆಗೆ ಹೇಳುವುದಾದರೆ, ಅವರು ತಮ್ಮ ಮಹಾಕಾವ್ಯಗಳಿಗಿಂತ ಮಹಾನ್ ವ್ಯಕ್ತಿ. ಈಗ ಇನ್ನೊಂದು ಪ್ರಶ್ನೆ–ತಮ್ಮ ಪ್ರವಾಸ ಕಾರ್ಯಕ್ರಮದಲ್ಲಿ ಪುದುಚೇರಿ* ಸೇರಿದೆಯೋ ಇಲ್ಲವೋ ತಾವು ಅರ್ವಾಚೀನ ಭಾರತದ ಅಧ್ಯಯನ ಮಾಡಬಯಸುವುದಾದರೆ ಶಾಂತಿ ನಿಕೇತನ ಹಾಗೂ ಅರವಿಂದ ಆಶ್ರಮಗಳನ್ನು ನೋಡಲೇಬೇಕು.೨೦

ಒಂದು ತೀರ್ಥಯಾತ್ರೆ

ಶಾಂತಿನಿಕೇತನಕ್ಕೆ ಹೋದುದು ನನ್ನ ಪಾಲಿಗೆ ತೀರ್ಥಯಾತ್ರೆ ಯಂತಿತ್ತು. ಅಲ್ಲಿಗೆ ಹೋಗುವ ಇಚ್ಛೆ ನನಗೆ ಬಹಳ ದಿನಗಳಿಂದ ಇತ್ತು. ಆದರೆ ಆ ಅವಕಾಶ ಮಲಕಂದಾಕ್ಕೆ ಹೋಗುವಾಗಲೇ ದೊರೆಯಿತು. ನನ್ನ ಪಾಲಿಗೆ ಶಾಂತಿನಿಕೇತನ ಹೊಸತಲ್ಲ. ೧೯೧೫ ರಲ್ಲಿ ಅದರ ರೂಪ–ರೇಖೆ ರಚಿತವಾಗುತ್ತಿದ್ದಾಗ, ನಾನು ಅಲ್ಲಿಯೇ ಇದ್ದೆ. ಅದರ ನಿರ್ಮಾಣ ಕ್ರಮ ನಿಂತು ಹೋಗಿದೆಯೆಂದು ಈ ಮಾತಿನ ಅರ್ಥವಲ್ಲ. ಸ್ವತಃ ಗುರುದೇವರೇ ವಿಕಸಿತರಾಗುತ್ತಿದ್ದಾರೆ. ವೃದ್ಧಾಪ್ಯ ಬಂದಿದ್ದರೂ, ಅವರ ಮನಸ್ಸಿನ ಸ್ಥಿತಿ ಸ್ಥಾಪಕತ್ವದಲ್ಲಿ ಏನೂ ವ್ಯತ್ಯಾಸವಾಗಿಲ್ಲ. ಆದಕಾರಣ, ಎಲ್ಲಿಯವರೆಗೆ ಗುರು ದೇವರ ಭಾವನೆಗಳ ನೆಳಲು ಇರುವುದೋ ಅಲ್ಲಿಯವರೆಗೆ ಶಾಂತಿ ನಿಕೇತನದ ಬೆಳವಣಿಗೆ ನಿಲ್ಲುವುದಿಲ್ಲ. ಅಲ್ಲಿರುವ ಒಬ್ಬೊಬ್ಬ ವ್ಯಕ್ತಿಗೂ ಗುರುದೇವರಲ್ಲಿರುವ

---

*ಯೋಗಿ ಅರವಿಂದರ ಆಶ್ರಮ.

ಶ್ರದ್ಧೆ ಸಹಜವಾದುದು; ಅಂತಲೇ ಉತ್ಕರ್ಷಕಾರಕವಾದುದು. ನನ್ನನ್ನಂತೂ ಅದು ಖಂಡಿತವಾಗಿ ಮೇಲೆತ್ತಿದೆ. ಕೃತಜ್ಞತಾ ಭಾವವುಳ್ಳ ಅವರ ಶಿಷ್ಯರು ಹಾಗೂ ಅಧ್ಯಾಪಕರು ಅವರಿಗೆ ಕೊಟ್ಟಿರುವ 'ಗುರುದೇವ' ಎಂಬ ಪದವಿಯಿಂದ ಶಾಂತಿನಿಕೇತನದಲ್ಲಿ ಅವರ ಸ್ಥಾನವೇನೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ತಮ್ಮ ಸ್ಥಾನ ಹಾಗೂ ಅಲ್ಲಿಯ ಸಮೂಹದಲ್ಲಿ ನಿಮಗ್ನರಾಗಿ ತಮ್ಮನ್ನು ತಾವು ಮರೆತುಬಿಡುವುದರಿಂದಲೇ ಅವರಿಗೆ ಆ ಸ್ಥಾನ ಸಿಕ್ಕಿದೆ. ತಮ್ಮ ಪ್ರಿಯತಮ ಕೃತಿ ಎನಿಸಿದ 'ವಿಶ್ವಭಾರತಿ'ಯ ಸಲುವಾಗಿಯೇ ಅವರು ಬದುಕಿರುವುದಾಗಿ ನನಗೆ ಅನಿಸಿದೆ. ವಿಶ್ವಭಾರತಿ ಬೆಳೆದು ಬೆಳಗಬೇಕು. ಅದರ ಭವಿಷ್ಯದ ಬಗೆಗೆ ಚಿಂತೆಯೇ ಇರದಂತೆ ಆಗಬೇಕು-ಎಂಬುದು ಅವರ ಆಸೆ. ಆ ವಿಷಯದಲ್ಲಿ ಅವರು ನನ್ನೊಡನೆ ದೀರ್ಘಕಾಲ ಮಾತನಾಡಿದರು. ಅಷ್ಟಾದರೂ ಅವರಿಗೆ ಸಾಕಾಗಲಿಲ್ಲ. ನಾವು ಬೀಳ್ಕೊಡುವಾಗ ಕೆಳಗೆ ಕಾಣಸಿದ ಅತ್ಯಮೂಲ್ಯವಾದ ಪತ್ರವೊಂದನ್ನು ನನಗೆ ಕೊಟ್ಟರು :—

ಪ್ರಿಯ ಮಹಾತ್ಮಾಜೀ

ನೀವು ಈ ಬೆಳಗ್ಗೆ ತಾನೆ ವಿಶ್ವಭಾರತಿ ಕೇಂದ್ರದ ವಿಹಂಗಮ-ಅವಲೋಕನ ಮಾಡಿದೀರಿ. ಇದರ ಇತಿಮಿತಿಯ ಬಗೆಗೆ ನಿಮಗೆ ಏನು ಕಲ್ಪನೆಯಿದೆಯೋ ನನಗೆ ತಿಳಿಯದು. ಈಗಿನ ರೂಪದಲ್ಲಿ ಈ ಸಂಸ್ಥೆ ರಾಷ್ಟ್ರೀಯವಾಗಿದ್ದರೂ, ಆಂತರ್ಯ ಭಾವನೆಯ ದೃಷ್ಟಿಯಿಂದ ಇದು ಸಾರ್ವದೇಶಿಕ, ಅಂತರರಾಷ್ಟ್ರೀಯ ಸಂಸ್ಥೆ. ಇದು ತನ್ನ ಸಾಧನೆಗೆ ಅನುಸಾರವಾಗಿ, ಶಕ್ತಿಗೆ ಅನುಗುಣವಾಗಿ ಉಳಿದ ಜಗತ್ತಿಗೆ ಭಾರತದ ಸಂಸ್ಕೃತಿಯ ಆತಿಥ್ಯವನ್ನು ನೀಡುವುದು.

ಒಂದು ಗಂಭೀರವಾದ ಸಂದರ್ಭದಲ್ಲಿ ಈ ಸಂಸ್ಥೆಯನ್ನು ಮುರಿದು ಬೀಳದಂತೆ ರಕ್ಷಿಸಿದಿರಿ; ತನ್ನ ಕಾಲಿನಮೇಲೆ ತಾನು ನಿಲ್ಲಲು ನೆರವು ನೀಡಿದಿರಿ. ಈ ಸ್ನೇಹಪೂರ್ಣ ಕಾರ್ಯಕ್ಕಾಗಿ ನಿಮಗೆ ನಾವು ಸದಾ ಆಭಾರಿಗಳು.

ಇನ್ನು, ನೀವು ಶಾಂತಿನಿಕೇತನವನ್ನು ಬಿಟ್ಟು ತೆರಳುವ ಮುನ್ನ, ನಿಮ್ಮಲ್ಲಿ ನನ್ನದೊಂದು ಒತ್ತಾಯಪೂರ್ವಕವಾದ ವಿನಂತಿ:—ಈ ಸಂಸ್ಥೆಯನ್ನು ನೀವು ಒಂದು ರಾಷ್ಟ್ರೀಯ ಸಂಪತ್ತು ಎಂದು ಭಾವಿಸುವುದಾದರೆ, ಇದನ್ನು ನಿಮ್ಮ ಸಂರಕ್ಷಣೆಗೆ ಒಳಪಡಿಸಿಕೊಂಡು, ಸ್ಥಾಯೀ ಸಂಸ್ಥೆಯನ್ನಾಗಿ

ಮಾಡಿ. ವಿಶ್ವಭಾರತಿ ನನ್ನ ಜೀವನದ ಸರ್ವೋತ್ತಮ ರತ್ನಗಳಿಂದ ಕೂಡಿದ ನೌಕೆಯಂತಿದೆ. ತನ್ನ ರಕ್ಷಣೆಗಾಗಿ ದೇಶವಾಸಿಗಳಿಂದ ವಿಶೇಷ ರೀತಿಯ ಪಾಲನೆ–ಪೋಷಣೆಯನ್ನು ನೀರಿಕ್ಷಿಸುವ ಅಧಿಕಾರ ಈ ಸಂಸ್ಥೆಗೆ ಇರುವುದಾಗಿ ನಾನು ನಂಬಿದ್ದೇನೆ.

ಪ್ರೇಮ ಪೂರ್ವಕ,

ರವೀಂದ್ರನಾಥ ಟಾಗೂರ್

ಈ ಸಂಸ್ಥೆಯನ್ನು ಸಂರಕ್ಷಿಸುವುದಕ್ಕೆ ನಾನಾರು? ಇದು ಪ್ರಾಮಾಣಿಕ ಆತ್ಮವೊಂದರ ಕೃತಿಯಾಗಿರುವುದರಿಂದ ಭಗವಂತನೇ ಇದನ್ನು ಸಂರಕ್ಷಿಸುವನು. ಇದೇನೂ ತೋರಿಕೆಯ ವಸ್ತುವಲ್ಲ. ಗುರುದೇವರು ಸ್ವತಃ ಸಾರ್ವದೇಶಿಕ, ಅಂತರರಾಷ್ಟ್ರೀಯ ವ್ಯಕ್ತಿ; ಏಕೆಂದರೆ ಅವರು ನಿಜವಾದ ಅರ್ಥದಲ್ಲಿ ರಾಷ್ಟ್ರೀಯ ವ್ಯಕ್ತಿ. ಅಂತಲೇ ಅವರ ಎಲ್ಲ ಕೃತಿಗಳೂ ಸಾರ್ವದೇಶಿಕ; ವಿಶ್ವಭಾರತಿ ಅವುಗಳಲ್ಲಿ ಅತಿ ಶ್ರೇಷ್ಠ. ಆರ್ಥಿಕ ಹೊರೆಗೆ ಸಂಬಂಧಪಟ್ಟಂತೆ ಈ ಸಂಸ್ಥೆಯ ಭವಿಷ್ಯದ ಬಗೆಗೆ ಗುರುದೇವರಿಗೆ ಸ್ವಲ್ಪವೂ ಚಿಂತೆ ಇರದಂತೆ ಮಾಡಬೇಕೆಂಬುದರಲ್ಲಿ ನನಗೆ ಎಳ್ಳನಿತೂ ಸಂಶಯವಿಲ್ಲ. ಅವರ ಹೃದಯ ಸ್ಪರ್ಶಿಯಾದ ಬಿನ್ನಹಕ್ಕೆ ಉತ್ತರವಾಗಿ ಏನ್ನೆಲ್ಲ ಸಹಾಯ ಮಾಡುವ ಯೋಗ್ಯತೆ ನನಗಿದೆಯೋ ಅಷ್ಟನ್ನೂ ಮಾಡುವುದಾಗಿ ಅವರಿಗೆ ಮಾತು ಕೊಟ್ಟಿದ್ದೇನೆ.೨೧

ಚಿಂತೆಯ ಧರ್ಮದರ್ಶಿ

ದೀನಬಂಧು–ಆಂಡ್ರೂಸ್–ಸ್ಮಾರಕ ಹಾಗೂ ಗುರುದೇವ–ಸ್ಮಾರಕ–ಎರಡೂ ಏಕಾರ್ಥಸೂಚಕ ಶಬ್ದಗಳು. ಗುರುದೇವರು ದೀನಬಂಧು–ಸ್ಮಾರಕವನ್ನು ಆರಂಭಿಸಿದರು; ಆದರೆ ಆ ನಿಧಿ ಪೂರ್ಣವಾಗುವುದರೊಳಗೆಯೇ ಅವರೂ ದೀನಬಂಧುಗಳ ದಾರಿ ಹಿಡಿದರು. ಅದರಿಂದಾಗಿ ಈಗ ದೀನಬಂಧುಗಳ ಸ್ಮಾರಕ ಗುರುದೇವರ ಸ್ಮಾರಕವೂ ಆಗಿದೆ. ಸ್ಮಾರಕದ ಉದ್ದೇಶ ಆ ಎರಡು ಮಹಾನ್ ಆತ್ಮಗಳಿಗೆ ಅನುಗುಣವಾಗಿಯೇ ಇದೆ. ಶಾಂತಿನಿಕೇತನ, ವಿಶ್ವಭಾರತಿ ಹಾಗೂ ಶ್ರೀನಿಕೇತನಗಳ ಸಮೃದ್ಧಿ ಹಾಗೂ

ರಕ್ಷಣೆಯೇ ಆ ಉದ್ದೇಶ. ಆ ಮೂರು ಸಂಸ್ಥೆಗಳು ವಾಸ್ತವವಾಗಿ ಒಂದೇ ಇದು ಲಕ್ಷದಷ್ಟು ಸಣ್ಣ ಪ್ರಮಾಣದ ನಿಧಿ, ಧನಿಕರು ವಿದ್ಯಾರ್ಥಿಗಳು ಅಥವಾ ಕೂಲಿಗಾರರ ಕಡೆಯಿಂದ ಈ ವರೆಗೆ ಕೂಡಿಲ್ಲವೆಂಬುದು ದುಃಖ ಹಾಗೂ ನಾಚಿಕೆಗೇಡಿನ ಮಾತು. ಬೇರೆ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಿಂದ ಪ್ರಾಪ್ತವಾಗದ ಕೀರ್ತಿ-ಪ್ರತಿಷ್ಠೆ ಹಿಂದೂಸ್ತಾನಕ್ಕೆ ಗುರುದೇವರು ಹಾಗೂ ಅವರ ಸಂಸ್ಥೆಯ ದೆಸೆಯಿಂದ ಪ್ರಾಪ್ತವಾಗಿದೆಯೆಂಬುದನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆ. ಚೀಣದ ಸೇನಾಧ್ಯಕ್ಷ ಚಾಂಗ್-ಕೈ-ಷೇಕರ ಹಾಗೂ ಶ್ರೀಮತಿ ಚಾಂಗ್-ಕೈ-ಷೇಕ್ ಇವರು ಭಾರಿ ನಿಧಿಯನ್ನು ಅರ್ಪಿಸುವಂಥ ಪ್ರಭಾವವನ್ನು ಅವರ ಮೇಲೆ ಬೀರಿದುದು ಶಾಂತಿನಿಕೇತನವೇ. ಶಾಂತಿನಿಕೇತನದಲ್ಲಿ ನಡೆಯುತ್ತಿರುವ ಕೆಲಸವನ್ನು ನೋಡಿದರೆ, ಅಲ್ಲಿ ಆಗುತ್ತಿರುವ ಖರ್ಚು ಏನೇನೂ ಅಲ್ಲ. ಅದಕ್ಕೆ ಕಾರಣವಿಷ್ಟೆ : ಅಲ್ಲಿ ಪೂರ್ಣವೇತನವಿಲ್ಲದ ಕಾರ್ಯಕರ್ತರಲ್ಲದವರೂ ತಮಗೆ ಬೇಕಾದುದಕ್ಕಿಂತ ಕಡಿಮೆ ಪಗಾರ ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ. ಬಾಕಿ ಉಳಿದಿರುವ ಸ್ಮಾರಕದ ಹಣ. ಬೇಗನೇ ಸಂಗ್ರಹವಾದೀತೆಂದೂ ಧನ ಸಂಗ್ರಹಕ್ಕಾಗಿ ನಾನು ಪ್ರವಾಸ ಮಾಡಬೇಕಾದ ಆವಶ್ಯಕತೆ ಉಂಟಾಗಲಾರದೆಂದೂ ಆಶಿಸುತ್ತೇನೆ. ಸ್ಮಾರಕ ಹಣವನ್ನು ಭರ್ತಿಮಾಡಲು ನಾನು ಮಾತುಕೊಟ್ಟಿದ್ದೇನೆ. ಗುರುದೇವರು ಮೃತ್ಯು-ಶಯ್ಯೆಯಲ್ಲಿದ್ದಾಗ, ನಾನು ಅವರಿಗೆ ಬರೆದ ಕೊನೆಯ ಪತ್ರದಲ್ಲಿ 'ಭಗವಂತನ ಇಚ್ಛೆಯಿದ್ದರೆ, ದೀನಬಂಧು-ಸ್ಮಾರಕದ ಪೂರ್ಣ ಮೊಬಲಗನ್ನು ವಸೂಲು ಮಾಡುವೆನು'—ಎಂಬುದಾಗಿ ಬರೆದಿದ್ದೆ. ದೀನಬಂಧುಗಳನ್ನು ಹಗಲೂ-ರಾತ್ರೆ ಶಾಂತಿನಿಕೇತನದ ಆರ್ಥಿಕ ಸ್ಥಿತಿಯ ಚಿಂತೆ ಕಾಡಿಸುತ್ತಿತ್ತು. ಅವರು ಆ ಚಿಂತೆಗೆ ನನ್ನನ್ನು 'ಧರ್ಮದರ್ಶಿ'ಯಾಗಿ ಮಾಡಿ ಹೋಗಿದ್ದಾರೆ. ಹಿಂದೂಸ್ತಾನ ಹಾಗೂ ಮಾನವತೆಯ ಈ ಇಬ್ಬರು ಸೇವಕರ ಕರೆಯನ್ನು ನಾನು ಎಷ್ಟು ಮಾತ್ರಕ್ಕೂ ಕಡೆಗಣಿಸಲಾರೆ. ಈ ಇಬ್ಬರು ಮಹಾ ಪುರುಷರ ಬಗೆಗೆ ಯಾರ ಮನಸ್ಸಿನಲ್ಲಿ ಗೌರವವಿದೆಯೋ ಗುರುದೇವರ ಸಜೀವ ಕೃತಿಯ ಮೌಲ್ಯವನ್ನು ಯಾರು ಅರಿತಿರುವರೋ ಅಂಥವರು ಸ್ವಇಚ್ಛೆಯಿಂದ ನಾನು ವಹಿಸಿಕೊಂಡಿರುವ ಈ ಹೊಣೆಗಾರಿಕೆಯನ್ನು ನಿರ್ವಹಿಸಲು ನನಗೆ ಸಹಾಯ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.೨೨

ಮನಸ್ಸಾಕ್ಷಿ

ನೀವು ತಿಲಕರ ಪ್ರಸಿದ್ಧ ಪುಸ್ತಕವಾದ 'ಗೀತಾ ರಹಸ್ಯ'ದ ಹೆಸರನ್ನು ಕೇಳಿರಬೇಕು. ಪಾರಾಯಣ ಮಾಡಬಹುದಾದಷ್ಟು ಜ್ಞಾನ ಅದರಲ್ಲಿ ತುಂಬಿದೆ. ಅದನ್ನು ನಾನು ಯರವಾಡಾ ಜೈಲಿನಲ್ಲಿ ಓದಿದ್ದೆ. ಅವರು ಬರೆದಿರುವ ಎಲ್ಲ ವಿಷಯಗಳನ್ನು ನಾನು ಒಪ್ಪುತ್ತೇನೆಂದಲ್ಲ. ಆದರೆ, ತಿಲಕರು ಬಹಳ ದೊಡ್ಡ ವಿದ್ವಾಂಸರು; ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ್ದರು ಎಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನಾನು ಅವರ ಆ ಗೀತೆಯನ್ನು ಓದಿ ಬಹಳ ಕಾಲವಾಯಿತು. ಆದಕಾರಣ, ಅವರ ನಿರ್ದಿಷ್ಟವಾದ ಮಾತುಗಳು ನೆನಪಿಲ್ಲ. ಆದರೆ, ಅವರ ಬರಹದ ಭಾವಾರ್ಥವನ್ನು ತಿಳಿಸಬಲ್ಲೆ. ಅದು ಬಹಳ ಸರಿ ಎಂಬುದಾಗಿಯೂ ನನಗೆ ಅನಿಸುತ್ತದೆ.

ಅವರು ಒಂದು ಕಡೆ ಹೀಗೆ ಹೇಳಿದ್ದಾರೆ— "ಆಂಗ್ಲ ಭಾಷೆಯಲ್ಲಿ ಮನಸ್ಸಾಕ್ಷಿ ಎಂಬುದಕ್ಕೆ 'ಕಾನ್ಷನ್ಸ್' (conscience) ಎಂಬ ಮಾತು ಸರಿಯಾಗಿದೆ. ಆದರೆ, ನಾವು ಕಾನ್ಷನ್ಸ್‌ಗೆ ಅನುಸಾರವಾಗಿ ನಡೆಯುತ್ತೇವೆ ಎಂದು ಹೇಳಿದಾಗ ಮನಸ್ಸಾಕ್ಷಿಯ ವಾಣಿಯಂತೆ ನಡೆಯುತ್ತೇವೆ ಎಂಬುದಾಗಿ ಅರ್ಥವಾಗುವುದಿಲ್ಲ. ನಮ್ಮ ವೈದಿಕ ಧರ್ಮಕ್ಕೆ ಅನುಗುಣವಾಗಿ ಕಾನ್ಷನ್ಸ್ ಜಡ-ಚೇತನ; ಆದರೆ ಅನೇಕರ 'ಕಾನ್ಷನ್ಸ್' ಸುಪ್ತವಾಗಿರುತ್ತದೆ, ಅಂದರೆ ಅವರ ಮನಸ್ಸಾಕ್ಷಿ ಅಪ್ರಬುದ್ಧ ಸ್ಥಿತಿಯಲ್ಲಿರುತ್ತದೆ. ಆ ಸ್ಥಿತಿಯಲ್ಲಿ ಅದನ್ನು 'ಕಾನ್ಷನ್ಸ್' ಅನ್ನುವುದು ಹೇಗೆ ? ನಮ್ಮ ಧರ್ಮಕ್ಕೆ ಅನುಸಾರವಾಗಿ ಯಮ-ನಿಯಮದ ಪಾಲನೆ ಹಾಗೂ ಇನ್ನೂ ಅನೇಕ ಸಾಧನೆ ಮಾಡಿದ ಮನಸಾಕ್ಷಿಯ ಜಾಗೃತವಾಗುತ್ತದೆ. ತಿಲಕರ ಆ ಮಾತನ್ನು ನಾನು ಅರಗಿಸಿಕೊಂಡಿದ್ದೇನೆ. ನಾವು ಸೇವಿಸುವ ಆಹಾರದಲ್ಲಿ ಯಾವುದು ರಕ್ತಗತವಾಗುವುದೋ ಅದೇ ಸಾರ್ಥಕವೆನಿಸುವುದು. ಹಾಗೆಯೇ ಶಾಸ್ತ್ರದಲ್ಲಿಯ ಯಾವ ವಿಷಯವನ್ನು (ವಸ್ತು) ನಾವು ಅರಗಿಸಿಕೊಳ್ಳುವೆವೋ ಅದೇ ಸಾರ್ಥಕ. ತಿಲಕರ ಆ ಮಾತನ್ನು ನಾನು ಅರಗಿಸಿಕೊಂಡಿದ್ದೇನೆ; ಅದರ ಮೂಲಕ ಯಾವ ವಾಣಿ ಮನಸ್ಸಾಕ್ಷಿಯದು, ಯಾವುದು ಅಲ್ಲ ಎಂಬುದನ್ನು ಗುರುತಿಸಬಲ್ಲೆ.೨೨

ತಾರಾಬಹನಳ ಉಯಿಲು

ಬಹಳ ಮಟ್ಟಿಗೆ, ವಿಲಾಯತಿಯಿಂದ ಬರುವ ಪ್ರತಿ ಟಪಾಲಿನಲ್ಲಿ ನನಗೆ ಸ್ವರ್ಗೀಯ ತಾರಾಬಹನ್ ನೆಂಟರಿಷ್ಟರು—ಮಿತ್ರರು ಬರೆದ ಪತ್ರಗಳು ಇರುತ್ತವೆ. ಆ ಪತ್ರಗಳಲ್ಲಿ ಆಕೆಯ ಅನೇಕ ಗುಣಗಳ ವರ್ಣನೆ ಇರುತ್ತದೆ. ಕೆಲವು ಸಜ್ಜನರು ಸ್ವ. ತಾರಾಬಹನ್ ತಮಗೆ ಮಾಡಿದ ಅನೇಕ ಉಪಕಾರಗಳನ್ನು ವರ್ಣಿಸುತ್ತಾರೆ. ಕೆಲವರು ಆಕೆ 'ನಮಗೆ ಇಂತಿಂತಹ ಸಹಾಯ ಮಾಡಲು ವಚನ ಕೊಟ್ಟಿದ್ದರು' ಎಂದು ಬರೆಯುತ್ತಾರೆ. ಕೆಲವರು ಆಕೆ ಬಿಟ್ಟುಹೋದ ಅನೇಕ 'ಉಯಿಲು'ಗಳ ಉಲ್ಲೇಖನವನ್ನೂ ಮಾಡುತ್ತಾರೆ. ಆ ಪತ್ರವ್ಯವಹಾರಗಳಿಗೆ ಮಹಾದೇವ ದೇಸಾಯಿ ಅವರು ಸಾಧ್ಯವಾದಷ್ಟು ವಿವರಣಾತ್ಮಕವಾದ ಮಾಹಿತಿ ಕೊಡಲು ಪ್ರಯತ್ನಿಸುತ್ತಾರೆ. ಆದರೂ ಸಂಬಂಧಪಟ್ಟವರೆಲ್ಲರ ಸಲುವಾಗಿ ಒಂದು ವಿಚಾರವನ್ನು ನಾನು ಪ್ರಕಟಿಸುವುದು ಆವಶ್ಯಕ. ತಾರಾಬಹನ್ ತನ್ನ ಶೋಚನೀಯ ಮೃತ್ಯುವಿಗೆ ಸ್ವಲ್ಪಕಾಲ ಮುಂಚೆ ನನ್ನ ಹೆಸರಿಗೆ ಬರೆದಿದ್ದ 'ಉಯಿಲು' ಕಾನೂನು ಬಲ್ಲ ಮಿತ್ರರ ಅಭಿಪ್ರಾಯದಂತೆ, ಭಾರತೀಯ ಉಯಿಲು–ಕಾನೂನಿನ ಪ್ರಕಾರ 'ಸಿಂಧು' ವಾಗುವುದಿಲ್ಲ. ಒಂದುವೇಳೆ ಅದು ಸಿಂಧುವೆಂದು ಸಿದ್ಧವಾದರೂ, ಆಕೆಯ ನೆಂಟರಿಷ್ಟರ–ಮಿತ್ರರ ಒಪ್ಪಿಗೆಯಿಲ್ಲದೆ ಆಕೆಯ ಸಂಪತ್ತನ್ನು ಭಾರತದಲ್ಲಿ ಗ್ರಾಮೋದ್ಯೋಗಗಳಿಗೆ (ಆ ಕೆಲಸ ಆಕೆಗೆ ಬಹಳ ಪ್ರಿಯವಾಗಿತ್ತು; ಅದಕ್ಕಾಗಿ ದಾಸಿಯಂತೆ ದುಡಿದು, ದುಡಿದು ವಿರೋಚಿತ ಮೃತ್ಯುವಿಗೆ ಈಡಾದಳು.) ಬಳಸಲು ನನಗೆ ಎಳ್ಳಷ್ಟು ಇಷ್ಟವಿಲ್ಲ. ತಾನು ಜೀವಂತಳಿದ್ದಾಗ ಆಕೆ ಯಾವ ರೀತಿಯಲ್ಲೂ ವಿನಿಯೋಗ ಮಾಡದ ಆಕೆಯ ಸಂಪತ್ತೆಲ್ಲವೂ ನನ್ನ ಕೈಹತ್ತುವ ಸಂಭವ ಬಹಳ ಕಡಿಮೆ. ಒಂದುವೇಳೆ ಹಾಗೆ ಆದರೂ, ಅದಕ್ಕೆ ಕೈಹಚ್ಚುವ ಮುನ್ನ, ಆಕೆ ಪಶ್ಚಿಮ ದೇಶದಲ್ಲಿ ಕೊಟ್ಟಿದ್ದ ಮಾತು–ಭರವಸೆಯನ್ನೆಲ್ಲ ಪರೀಕ್ಷಿಸಿ, ಅದನ್ನು ನೆರವೇರಿಸಲು ಪ್ರಯತ್ನಿಸುವೆನು.

ಬ್ಯಾಂಕಿನ ಹೆಸರಿಗೆ ಆಕೆ ಕೊಟ್ಟ ಅನೇಕ ಚೆಕ್ಕುಗಳೂ ನನ್ನ ಬಳಿ

ಬಿದ್ದಿವೆ. ಅವುಗಳ ವಿಲೇವಾರಿಯೂ ಇನ್ನೂ ಆಗಿಲ್ಲ. ಆಕೆಯ ಕುಟುಂಬದ ಸಹೋದರ-ಸಹೋದರಿಯರ ಪೈಕಿ—ಅವರ ಸಂಖ್ಯೆ ಬಹಳ ದೊಡ್ಡದಿರುವಂತೆ ಕಾಣುತ್ತದೆ—ಬಹಳ ಹತ್ತಿರದವರಿಗೆ ನನ್ನದೊಂದು ಸಲಹೆ: ಅವರು ಆ ಸಂಬಂಧದಲ್ಲಿ ರಾಜ್ಯದ ಕಡೆಯಿಂದ ಶಾಸನಸಮ್ಮತವಾದ ಅಧಿಕಾರಪತ್ರ ಪಡೆದುಕೊಂಡು ಅದನ್ನು ನನಗೆ ಕಳುಹಿಸಿಕೊಡಿರಿ, ಅಂದರೆ ನಾನೂ ಕುಮಾರಿ ಮೇರಿ ಬಾರ್ ಅವರೂ ನಮ್ಮಲ್ಲಿರುವ ತಾರಾಬಹೆನಳ ವಸ್ತುಗಳನ್ನು ಅವರಿಗೆ ಒಪ್ಪಿಸಲು ಅನುಕೂಲವಾಗುತ್ತದೆ. ನನ್ನಲ್ಲಿ ವಿಲೇವಾರಿಯಾಗದ ಚೆಕ್ಕುಗಳು ಬಿದ್ದಿವೆ; ಮೇರಿ ಬಾರಳಲ್ಲಿ ಆಕೆಯ ಹಲವು ಸಣ್ಣಪುಟ್ಟ ಒಡವೆಗಳಿವೆ.

ಹಿಂದೂಸ್ಥಾನಕ್ಕೆ ಬಂದಮೇಲೆ ಆಕೆ ತನ್ನ ಆವಶ್ಯತೆಗಳನ್ನು ಬಹಳ ಕಡಿಮೆ ಮಾಡಿಕೊಂಡಳು; ಆದಕಾರಣ ಅಂಥ ಬೆಲೆ ಬರುವ ವಸ್ತುವಾವುದೂ ಉಳಿದಿರಲಿಕ್ಕಿಲ್ಲ. ತನ್ನ ಜೀವನ ಕಾಲದಲ್ಲಿ ಸಿಕ್ಕಿದುದನ್ನೆಲ್ಲ ಆಕೆ ಗ್ರಾಮ ಸೇವೆಗೆಂದು ನನಗೆ ಕೊಟ್ಟುಬಿಟ್ಟಳು. ಆ ಸ್ವರ್ಗೀಯ ಉಪಕಾರಿಣಿ ದೇವಿಯ ಬಗೆಗೆ ನನ್ನಲ್ಲಿರುವ ಮಾಹಿತಿ ಇಷ್ಟು: ಆಕೆಯ ಸಂಬಂಧೀಕರಿಗೆ ಇಷ್ಟು ಮಾಹಿತಿ ಸಾಕಾದೀತೆಂದು ಆಶಿಸುತ್ತೇನೆ.೨೪

‘ಸಾಖೀಗೋಪಾಲ್’

ಮೊದಲಿಗೆ ಎಂ. ಎಲ್. ಸಿ., ವಕೀಲ್–ಇತ್ಯಾದಿ ಆಗಿದ್ದ ಪಂ. ಗೋಪಬಂಧು ದಾಸರು ಅತ್ಯಂತ ತ್ಯಾಗಿಗಳಾದ ನಾಯಕರು. ಅವರೂ ಅವರ ಗುಂಪಿನವರೂ ಅನ್ನ-ಸಾರಿನಿಂದಲೇ ಕಾಲ ಹಾಕುತ್ತಿರುವುದಾಗಿಯೂ ತುಪ್ಪದ ಮುಖ ನೋಡುವುದೇ ಇಲ್ಲವೆಂದೂ ಅವರಿಂದಲೇ ನನಗೆ ತಿಳಿಯಿತು. ಅಸಹಕಾರ ಮಾಡಿದಮೇಲೆ ಕಾರ್ಯಕರ್ತರು ತಮ್ಮ ಆವಶ್ಯಕತೆಗಳನ್ನು ಎಷ್ಟು ಕಡಿಮೆ ಮಾಡಿಕೊಂಡಿದ್ದಾರೆಂದರೆ, ಹತ್ತು ರೂಪಾಯಿ ರೊಕ್ಕದಿಂದಲೇ ಜೀವನ ನಿರ್ವಾಹ ಮಾಡಿಕೊಳ್ಳುತ್ತಾರೆ. ಇಂಥ ಅದಮ್ಯ, ಉತ್ಸಾಹ ಕಾರ್ಯಕರ್ತರ ಮೂಲಕ ಸ್ವರಾಜ್ಯ ಇದೇ ವರುಷ ಬರುವುದೆಂಬುದರಲ್ಲಿ ನನಗೆ

ಸಂಶಯವೇ ಇಲ್ಲ. ಪಂ. ಗೋಪಬಂಧು ದಾಸರ ಒಂದು ಪಾಠಶಾಲೆ 'ಸಾಖೀ-ಗೋಪಾಲ್' ಎಂಬಲ್ಲಿದೆ. ಇದೊಂದು ಲತಾಗೃಹದ ಪಾಠಶಾಲೆ. ನೋಡಲು ಯೋಗ್ಯವಾದುದು. ನಾನು ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಡನೆ ಒಂದು ದಿನವನ್ನು ಸಂತೋಷದಿಂದ ಕಳೆದೆ. ಬಯಲು ಶಿಕ್ಷಣ ಪದ್ಧತಿಯಲ್ಲಿ ಇದೊಂದು ಒಳ್ಳೆಯ ಪ್ರಯೋಗ. ಅಲ್ಲಿಯ ಹಲವು ವಿದ್ಯಾರ್ಥಿಗಳು ಗಟ್ಟಿಗರಾದ ಜಟ್ಟಿಗಳು.೨೫

'ಶುಭ ಶಕುನ'

ಬಾ ಹೇಳತೊಡಗಿದರು—"ನೋಡಿ, ಮಹದೇವರು ಹೋದರು. ಬ್ರಾಹ್ಮಣನ ಮೃತ್ಯು ಅಪಶಕುನವಲ್ಲವೆ? ಇಷ್ಟು ದೊಡ್ಡ ಶಕ್ತಿಯೊಡನೆ ಬಾಪೂ ಹೊಡೆದಾಡುತ್ತಿದಾರಲ್ಲ, ಅವರು ಹೇಗೆ ಗೆದ್ದಾರು?" ಆ ಮಾತು ಕೇಳಿ ಬಾಪೂ ಹೇಳಿದರು—"ನಾನು ಇದನ್ನು ಶುಭ-ಶಕುನ ಎಂದು ಭಾವಿಸುವೆ. ಶುದ್ಧತಮ ಬಲಿದಾನದ ಪರಿಣಾಮ ಅಶುಭವೆಂದಿಗೂ ಆಗಲಿಕ್ಕಿಲ್ಲ".೨೬

ನನ್ನ ಅತಿರಿಕ್ತ ಶರೀರ

ಸಂಜೆ ಮಹಾದೇವ ಭಾಯಿ ಅವರ ಸಮಾಧಿ-ಸ್ಥಾನದಿಂದ ಹಿಂತಿರುಗಿ ಬರುವಾಗ ಬಾಪು ಹೇಳಿದರು—

ಇಲ್ಲಿಗೆ ಬರುವುದು ನನ್ನ ಪಾಲಿಗೆ ಬಹಳ ಶಾಂತಿದಾಯಕ. ಅದರಿಂದ ಪಡೆದುಕೊಳ್ಳಬೇಕಾದ ಪ್ರೇರಣೆಯನ್ನು ನಾನು ಪಡೆದುಕೊಳ್ಳುವೆ.

ನಾನು ಹೇಳಿದೆ—ಈಗ ನೀವು ಮಹಾದೇವ ಭಾಯಿ ಅವರಿಂದ ಪ್ರೇರಣೆ ಪಡೆಯುತ್ತೀರಿ. ಒಂದು ಕಾಲಕ್ಕೆ ನಿಮ್ಮಿಂದಲೇ ಅವರು ಪ್ರೇರಣೆ ಪಡೆಯುತ್ತಿದ್ದರು. ಬಾಪೂ ನುಡಿದರು—

ಏಕಾಗಬಾರದು? ಪ್ರೇರಣೆಯನ್ನು ಮಗುವಿನಿಂದಲೂ ಪಡೆದುಕೊಳ್ಳಬಹುದು. ಮಗು ಹೊರಟುಹೋಗಿದ್ದರೆತಾನೆ ಏನು? ಅದರ ಸ್ಮರಣೆ ಇಪ್ಪತ್ತುನಾಲ್ಕು ಘಂಟೆಗಳ ಕಾಲ ಇದ್ದೇ ಇರುತ್ತದೆ. ರಾಜಾಜಿ ಹೇಳಿರುವುದು ಪೂರಾ ಸರಿ. ಮಹಾದೇವರು ನನ್ನ ಅತಿರಿಕ್ತ ಶರೀರ. ನಾನು ಅವರನ್ನು ಎಷ್ಟು ಬಾರಿ ಮ್ಯಾಕ್ಸ್‌ವೆಲ್‌ರ ಬಳಿಗೆ, ಬೇರೆಯವರ ಬಳಿಗೆ ಕಳುಹಿಸಿಲ್ಲ? ಅವರಿಗೆ ಏನಾದರೂ ಕೆಲಸ ವಹಿಸಿದರೆ ಮಾಡಿಯೇ ಮಾಡುವರೆಂಬ ವಿಶ್ವಾಸ ನನಗೆ.೨೭

ಎಲ್ಲವೂ ಮಹಾದೇವರ ಕೆಲಸ

ಬೆಳಿಗ್ಗೆ ಅಡ್ಡಾಡುವ ಸಮಯದಲ್ಲಿ ಬಾಪೂ ಹೇಳಿದರು—

ಮಹಾದೇವರು ನನಗೆ ಉತ್ತರಾಧಿಕಾರಿ ಆಗಬೇಕಿತ್ತು. ಆದರೆ ಈಗ ನಾನೇ ಅವರಿಗೆ ಉತ್ತರಾಧಿಕಾರಿಯಾಗಬೇಕಾಗಿ ಬಂದಿದೆ. ನಾನು ಮಹಾದೇವರ ಸಮಾಧಿಯ ಬಳಿಗೆ ಹೋಗುವುದು ಮೀರಾಬೇನಳಿಗೆ ಕೆಟ್ಟೆನಿಸುತ್ತದೆ. ಆದರೆ ನನ್ನ ಪಾಲಿಗೆ ಅದು ತೀರ ಸ್ವಾಭಾವಿಕವಾಗಿಬಿಟ್ಟಿದೆ. ಹೋಗದಿದ್ದರೆ ನನಗೆ ಜೀವ ಚುರುಚುರು ಎನಿಸುತ್ತದೆ. ನಾನು ಅಲ್ಲಿ ಹೋಗಿ ಮಾಡುವುದೇನೂ ಇಲ್ಲ. ಬಹಳ ಹೊತ್ತು ಅಲ್ಲಿ ಕೂಡುವುದೂ ಇಲ್ಲ. ಆದರೆ, ಹೋಗಿ ಬರುವುದರಿಂದಲೇ ನನಗೆ ತೃಪ್ತಿ. ನಾನು ಬದುಕಿದ್ದರೆ ಆಗಾಖಾನರಿಂದ ಈ ಭೂಮಿಯನ್ನು ಕೇಳಿ ತಕ್ಕೊಳ್ಳುವೆನು. ಅವರು ಕೊಡದೆಯೂ ಇರಬಹುದು. ಆದರೆ ಎಂದಾದರೊಂದು ದಿನ ಹಿಂದೂಸ್ತಾನ ಸ್ವತಂತ್ರವಾಗಿಯೇ ತೀರುವುದು. ಆಗ ಇದು ಯಾತ್ರಾಸ್ಥಾನವಾಗುವುದು. ನಾನು ಅಲ್ಲಿಗೆ ಹೋಗುವುದು ಮಹಾದೇವರ ಕೆಲಸ.೨೮

ಸೂಕ್ಷ್ಮಗ್ರಾಹಿ

ಸಂಜೆ ಅಡ್ಡಾಡುವ ವೇಳೆಯಲ್ಲಿ ಇಂಗ್ಲಿಷ್ ತಿಳಿಯದವರ ಮಾತು ನಡೆದಿತ್ತು. ಚರ್ಚೆಯನ್ನು ಮಿರಾಬೆನ್ ಆರಂಭಿಸಿದರು. "ಜಮನಾಲಾಲರಿಗೂ ಇಂಗ್ಲಿಷ್ ಬರುತ್ತಿರಲಿಲ್ಲ. ಆದರೆ ತಮ್ಮ ಕೆಲಸವನ್ನು ಅವರು ಸ್ವತಃ ಮಾಡಿಕೊಳ್ಳುತ್ತಿದ್ದರು"—ಎಂಬುದಾಗಿ ನಾನು ಹೇಳಿದೆ. ಬಾಪೂ ಹೀಗೆಂದರು—

"ಆದರೆ, ಜಮನಾಲಾಲರಿಗೆ ಇಂಗ್ಲಿಷ್ ಮಾತನಾಡಿದರೆ ಗೊತ್ತಾಗುತ್ತಿತ್ತು. ಇಂಗ್ಲೀಷಿನಲ್ಲಿ ನಿರ್ಣಯ ಮೊದಲಾದುವು ಬಂದರೆ ಒಂದೂ ಬಿಡದೆ ಅರ್ಥಮಾಡಿಕೊಳ್ಳುತ್ತಿದ್ದರು. ಅವರಿಗೆ ವ್ಯಾಕರಣ ಬರದಿದ್ದರೂ, ಶಬ್ದಪ್ರಯೋಗ ಸರಿಯಾಗಿ ತಿಳಿದಿತ್ತು. ಅದರಿಂದಾಗಿ ತಮ್ಮ ಭಾಷಣ ಮೊದಲಾದುವುಗಳ ಭಾಷಾಂತರವನ್ನು ತಿದ್ದುತ್ತಲೂ ಇದ್ದರು. ಅವರಂಥ ಸೂಕ್ಷ್ಮಗ್ರಾಹಿಗಳು ಸಿಕ್ಕುವುದು ಅಪರೂಪ. ಕಾರ್ಯ-ಸಮಿತಿಯಲ್ಲಿ ಅವರು ಯಾವುದೇ ವಿಷಯವನ್ನು ಬಿಡುತ್ತಿರಲಿಲ್ಲ. ಅವರು ಬುದ್ಧಿಶಾಲಿಗಳೂ ಆಗಿದ್ದರು; ವ್ಯವಹಾರ ಕುಶಲರೂ ಆಗಿದ್ದರು. ತಮ್ಮ ಸ್ಥಾನದಲ್ಲಿ ಅವರು ಅದ್ವಿತೀಯರು". ೨೯

'ಟ್ರಸ್ಟೀಷಿಪ್ ಮಾದರಿ'

ನಾನು ಹೇಳಿದೆ—"ನಮ್ಮ ಬಳಿ 'ಟ್ರಸ್ಟೀಷಿಪ್' ಮಾದರಿ ಯಾವುದಾದರೂ ಇದ್ದರೆ, ಅದು ಜಮನಾಲಾಲರದು. ಅವರ ಅನೇಕ ವಸ್ತುಗಳು ಸೇವಾಕಾರ್ಯಕ್ಕೆ ಉಪಯೋಗವಾಗುತ್ತಿದ್ದವು. ಎಷ್ಟೋ ಆಸ್ತಿಯನ್ನು ದಾನಮಾಡಿಯೂ ಬಿಟ್ಟರು. ಆದರೂ ತಾನು ಕೊಡುತ್ತಿದ್ದೇನೆ, ದಾನ ಮಾಡುತ್ತಿದ್ದೇನೆ—ಎಂಬ ಭಾವನೆ ಅವರಿಗೆ ಇರುತ್ತಿತ್ತು". ಬಾಪೂ ಹೇಳಿದರು—

ಜಮನಾಲಾಲರು ಮಹಾ ಪ್ರಯತ್ನವನ್ನೇನೋ ಮಾಡಿದರು. ಆದರೆ,

ಪೂರ್ಣ ರೀತಿಯಲ್ಲಿ ಟ್ರಸ್ಟೀಗಳಾಗಲು ಅವರಿಂದ ಆಗಲಿಲ್ಲ. ಅದು ಅವರ ಅಪೂರ್ಣತೆಯ ಪರಿಣಾಮ.೩೦

ಜಮನಾಲಾಲರ ಕೀರ್ತಿ ಅಮರ

ಗಾಂಧೀಜೀ ಬರುತ್ತಲೇ, ಜಮನಾಲಾಲರ ತಲೆಯ ಮೇಲೆ ಕೈಯಿಟ್ಟರು. ಜಮನಾಲಾಲರ ಪತ್ನಿಯಾದ ಶ್ರೀಮತಿ ಜಾನಕೀದೇವಿ ಕಕ್ಕಾಬಿಕ್ಕಿಯಾಗಿದ್ದರು. ಗಾಂಧೀಜೀ ಅವರನ್ನು ನೋಡುತ್ತಲೆ ಅವರು ಆಶಾ-ತರಂಗಗಳಲ್ಲಿ ತೇಲಾಡತೊಡಗಿದರು—

"ಬಾಪೂಜಿ ! ಓ, ಬಾಪೂಜಿ ! ನೀವು ಸನಿಹದಲ್ಲಿರುವಾಗ ಇವರು ಸಾಯುವುದಿಲ್ಲ. ಇವರ ಸ್ಥಿತಿ ಕೆಟ್ಟ ತಕ್ಷಣವೇ ನಾನೇಕೆ ನಿಮಗೆ ಸುದ್ದಿ ಕಳುಹಿಸಲಿಲ್ಲವೋ? ಇವರನ್ನು ಬದುಕಿಸಿ. ಇವರನ್ನು ಬದುಕಿಸಲಾರಿರಾ?—" ಗಾಂಧೀಜೀ ನುಡಿದರು—

ಜಾನಕೀ, ಈಗ ನೀನು ಅಳತಕ್ಕದ್ದಲ್ಲ. ನೀನೂ ನಗಬೇಕು. ಮಕ್ಕಳನ್ನೂ ನಗಿಸಬೇಕು. ಜಮನಾಲಾಲರು ಜೀವಂತರಾಗಿಯೇ ಇದ್ದಾರೆ. ಯಾರ ಕೀರ್ತಿ ಅಮರವಾಗಿದೆಯೋ, ಅವರಿಗೆ ಮೃತ್ಯುವೆಲ್ಲಿಯದು? ಅವರ ಮಾರ್ಗಾನುಸರಣೆಯಿಂದ ನೀನು ವಿಮುಖಳಾದಾಗ ಮಾತ್ರ ಅವರು ಮರಣ ಹೊಂದುವರು. ಜಮನಾಲಾಲರು ಪರಮಾರ್ಥ ಜೀವನವನ್ನೇ ನಡೆಸಿದರು. ನಿನ್ನಂಥ ಸಾಧ್ವಿ ಸ್ತ್ರೀ ಅವರಿಗೆ ಸಿಕ್ಕಮೇಲೆ, ಅಳುವುದೇನು ಬಂತು? ಅವರು ತಮ್ಮ ಹೆಗಲಿನ ಮೇಲೆ ಹೊತ್ತುಕೊಂಡಿದ್ದ ಕಾರ್ಯವನ್ನು ಈಗ ನೀನು ನಿರ್ವಹಿಸಬೇಕು. ಅದೇ ಧ್ಯೇಯಕ್ಕಾಗಿ ಸಂಪೂರ್ಣವಾಗಿ ಆತ್ಮಸಮರ್ಪಣೆ ಮಾಡಿಕೊಂಡುಬಿಡು. ಜಮನಾಲಾಲರು ಜೀವಂತರಾಗಿಯೇ ಇದ್ದಾರೆಂದು ಭಾವಿಸು. ಸಾವಿತ್ರಿ ತನ್ನ ತಪಸ್ಸಿನಿಂದ ಮೃತನಾಗಿದ್ದ ಸತ್ಯವಾನನನ್ನು ಪುನಃ ಬದುಕಿಸಿದುದು ನಿನಗೆ ಗೊತ್ತು. ಶರೀರ ನಾಶವಾಗತಕ್ಕದ್ದೆ. ಸಾವಿತ್ರಿ ತನ್ನ ತಪಸ್ಸಿನಿಂದ ಸತ್ಯವಾನನ ತಪಸ್ಸನ್ನು ಸದಾಕಾಲಕ್ಕೂ ಅಮರವಾಗುವಂತೆ ಮಾಡಿದ್ದಳು. ಸಾವಿತ್ರಿ-ಸತ್ಯವಾನರ ಕಥೆಯ ನಿಜ

ವಾದ ಅರ್ಥವನ್ನು ನೀನೂ ನಿನ್ನ ತಪಸ್ಸಿನಿಂದ ನಿನ್ನ ಪತಿಯ ಯಶಸ್ಸನ್ನು ಜಾಗೃತವಾಗಿರಿಸಿದರೆ, ಜಮನಾಲಾಲರು ಜೀವಂತರಾಗಿರುವರೆಂದೇ ನಾವು ಭಾವಿಸಬಹುದು.

"ಬಾಪೂಜಿ ! ನಾನೇನೋ ಆತ್ಮಾರ್ಪಣಕ್ಕೆ ಸಿದ್ಧ. ಆದರೆ, ನನ್ನ ಶಕ್ತಿ ಎಷ್ಟರದು ? ನನ್ನ ತಪಸ್ಸು ಎಷ್ಟರದು? ಅವರ ಕಾರ್ಯವನ್ನು ಹೇಗೆ ನಡೆಸಲಿ ? ಅವರ ತಪಸ್ಸನ್ನು ಹೇಗೆ ಜಾಗೃತವಾಗಿರಿಸಲಿ ? ಇವರನ್ನು ಬದುಕಿಸ ಲಾರಿರಾ ? ಇವರು ಸತ್ತೇ ಹೋದರೇನು ? ಇನ್ನು ಮಾತನಾಡುವುದಿಲ್ಲವೆ? "

" ನಾನು ನಿನಗೆ ಸುಳ್ಳು ಧೈರ್ಯಕೊಡಲು ಬಂದಿಲ್ಲ. ಜಮನಾಲಾಲರ ಶರೀರ ಸತ್ತುಹೋಯಿತು. ಆದರೆ ನಿಜವಾದ ಜಮನಾಲಾಲರು ಬದುಕಿ ದ್ದಾರೆ. ಮುಂದೆಯ ಅವರನ್ನು ಜೀವಂತರಾಗಿಸುವುದು ನಮ್ಮ ಕೆಲಸ.೪೧

ಸರೋಜಿನೀ ದೇವಿಯವರ ಪ್ರತಿಭೆ

ಅಮೆರಿಕ ಹಲವೊಂದು ಮಿತ್ರರಿಂದ ನನಗೆ ಪತ್ರಗಳು ಬರುತ್ತಲೇ ಇರುತ್ತವೆ. ಅವುಗಳಲ್ಲಿ ಸರೋಜಿನೀ ದೇವಿಯವರ ಕಾರ್ಯದ ಪ್ರಶಂಸೆಯೂ ಇರುತ್ತದೆ. ಮಿತ್ರರು ಹೀಗೆ ಬರೆಯುತ್ತಾರೆ :–" ಸರೋಜಿನೀ ದೇವಿ ಅಮೆರಿಕದಲ್ಲಿ ಬಹಳ ಮಹತ್ವದ ಕೆಲಸ ಮಾಡುತ್ತಿದ್ದಾರೆ. ತಮಗೆ ಈಶ್ವರ ದತ್ತವಾದ ಪ್ರತಿಭೆಯನ್ನು ಈ ದೇಶದ ಸಲುವಾಗಿ ಪೂರ್ಣ ರೀತಿಯಿಂದ ಉಪಯೋಗಿಸುತ್ತಿದ್ದಾರೆ. ಇವರು ಅಮೆರಿಕದ ಮಂದಿಯ ಮನಸ್ಸನ್ನು ಒಲಿಸಿ ಕೊಂಡಿರುವುದರಲ್ಲಿ ಸಂಶಯವೇ ಇಲ್ಲ. ಕೆನಡಾದ ಓರ್ವ ಸಹೋದರಿಯು ಒಂದು ಉದ್ದವಾದ ಪತ್ರದಲ್ಲಿ ಹಲವು ಅನುಭವಗಳನ್ನು ಬರೆದು ಕಳುಹಿಸಿ ದ್ದಾರೆ. ಆದರಿಂದ ಹಲವು ಮಾತುಗಳನ್ನು ಕೆಳಗೆ ಕಾಣಿಸಿದ್ದೇನೆ :—

"ಸರೋಜಿನೀ ದೇವಿಯವರು ಸ್ವಲ್ಪಕಾಲ ನನ್ನ ಅತಿಥಿಗಳಾಗಿದ್ದರು. ತಮ್ಮ ಆ ಸಖಿ ಹಾಗೂ ಪ್ರತಿನಿಧಿಯನ್ನು ಭೆಟ್ಟಿಯಾದುದು ನನ್ನ ಮಹಾ ಭಾಗ್ಯ. ನಾನು ಸ್ವತಃ ಓರ್ವ ಸ್ತ್ರೀ. ಆಕೆಯೂ ಸ್ತ್ರೀ. ಜತೆಗೆ ಅವರು ಕವಯತ್ರಿಯೂ, ಸುಧಾರಕಳೂ ಆಗಿರುವುದರಿಂದ ಆಕೆ ನನ್ನ ಹೃದಯ

ವನ್ನೂ ಇನ್ನೂ ಸೂರೆಗೊಂಡಿದ್ದಾರೆ. ಆಕೆಯ ಆತ್ಮದ ಪ್ರಭಾವ ನನ್ನ ಮೇಲೆ ಬಹಳವಾಗಿ ಆಗಿದೆ. ಇಷ್ಟು ದಿನಗಳಾದ ಮೇಲೂ ಆಕೆಯ ಭೆಟ್ಟಿಯ ಮಾತುಕತೆ ನನ್ನ ಹೃದಯದಲ್ಲಿ ಅಚ್ಚಳಿಯದೆ ಉಳಿದಿದೆ. ಯಾವ ಚರ್ಚಿನಲ್ಲಿ ಸರೋಜಿನಿ ದೇವಿಯವರು ಭಾಷಣ ಮಾಡಿದ್ದರೋ ಆ ಚರ್ಚು ಜನರಿಂದ ತುಂಬಿ ತುಳುಕಿಹೋಗಿತ್ತು. ಅವರ ಜ್ಞಾನ, ಅನುಭವ, ಕಾವ್ಯಶಕ್ತಿ, ಕೋಕಿಲಕಂಠ, ವಿನೋದ ಹಾಗೂ ಆಂಗ್ಲ ಭಾಷೆಯ ಮೇಲೆ ಅವರ ಪ್ರಭುತ್ವ—ಈ ಬಗೆಗೆ ನಾನು ಹೇಳಲಾರೆ. ಅವರ ಭಾಷಣದ ಪ್ರವಾಹ ಸಾಗಿದ್ದಂತೆ ಜನ ಆಶ್ಚರ್ಯಚಕಿತರಾಗುತ್ತಿದ್ದರು. ಕೊನೆಗೆ ಅವರ ಗುಣ ಗಳ ಬಗೆಗೆ ಮುಗ್ಧರೇ ಆಗಿಹೋಗುತ್ತಿದ್ದರು. ಅವರ ನಮ್ಮ ಮುಂದೆ ಇಟ್ಟ ಯಾವುದೇ ಸಮಸ್ಯೆಗೆ ನಾವು ಉತ್ತರಕೊಡಲಾಗಲಿಲ್ಲ. ನನ್ನ ಬಳಿ ವ್ಯಾಪಾರ-ಕುಶಲರಾದ ವ್ಯಾಪಾರಿಯೊಬ್ಬರು ಕುಳಿತ್ತಿದ್ದಾರೆ. ಅವರು ಸಮಾಧಿಸ್ತರಾದಂತೆ ಕುಳಿತು ಅವರ ಭಾಷಣವನ್ನು ಕೇಳಿದರು. ಕೇಳಿದ ಪ್ರಶ್ನೆಗಳಿಗೆ ಸರೋಜಿನೀ ದೇವಿಯವರು ಸರಿಯಾದ ಉತ್ತರ ಕೊಟ್ಟರು. ಮಧ್ಯೆ ಮಧ್ಯೆ ಅವರು ವಿನೋದದ ಚಟಾಕಿ ಹಾರಿಸುತ್ತಿದ್ದ ಬಗೆಯನ್ನು ಕಂಡು ಆ ವ್ಯಾಪಾರಿ ಮಹಾಶಯನಿಗೆ ಮಾತನಾಡದಿರಲು ಸಾಧ್ಯವೇ ಆಗ ಲಿಲ್ಲ. ಅವರು ಹೀಗೆ ಹೇಳಿದರು: "ಇಂಥ ಶಕ್ತಿಯನ್ನು ನಾನು ಬೇರಾವ ಸ್ತ್ರೀಯರಲ್ಲೂ ನೋಡಿಲ್ಲ. ನಿಜವನ್ನೇ ಹೇಳುವುದಾದರೆ, ಯಾವ ಪುರು ಷನೂ ಇವರನ್ನು ಎದುರಿಸಿ ನಿಲ್ಲಲಾರರು. ಈಗಿನ ಭಾರತದ ವಿಷಯದಲ್ಲಿ ಅವರು ಹೇಳಿದ ವಿಷಯವೆಲ್ಲವೂ ಬಹಳ ಪ್ರಭಾವಶಾಲಿಯಾಗಿತ್ತು. ಅವರು ನಮ್ಮ ನ್ಯಾಯಪ್ರಿಯತೆಯನ್ನು ಜಾಗೃತಗೊಳಿಸಿದರು. ನಮ್ಮ ಹೃದಯವನ್ನು ಕರಗಿಸಿಬಿಟ್ಟರು. ಆ ಕೂಡಲೇ ನಮ್ಮಲ್ಲಿರುವಂಥ ರಾಜ್ಯ ತಂತ್ರವೇ ನಿಮ್ಮಲ್ಲಿಯೂ ಇರಬೇಕು ಎಂದು ನಮಗೆ ಅನಿಸಿತು. ಭಗವಂತ ಸರೋಜಿನೀ ದೇವಿಯವರಿಗೆ ಅನೇಕ ವಿಧವಾದ ಶಕ್ತಿಯನ್ನು ಅನುಗ್ರಹಿಸಿ ದ್ದಾನೆ. ಅವರನ್ನು ಭೋಜನದ ಸಮಯದಲ್ಲಿ, ಸಮ್ಮೇಳನದ ಸಮಯ ದಲ್ಲಿ, ಸಾಮಾನ್ಯ ಮಾತುಕತೆಯ ಸಮಯದಲ್ಲಿ ಅಥವಾ ಇನ್ನಾವುದಾದರೂ ಕೆಲಸಕ್ಕಾಗಿ ಭೆಟ್ಟಿಯಾದರೆ, ಅವರ ಪ್ರತಿಭೆ ಹೊರಸೂಸುತ್ತಿತ್ತು. ಅವರ ಉತ್ಸಾಹಕ್ಕೆ ಪಾರವೇ ಇಲ್ಲ. ಅನೇಕ ಆಹ್ವಾನಪತ್ರಗಳು ಬಂದಿವೆ.

ಒಂದೇ ದಿನ ಅನೇಕ ಕಡೆಗಳಿಗೆ ಹೋಗುತ್ತಾರೆ. ಆದರೂ ಆಕೆ ದಣಿದಿರುವಂತೆ ಕಾಣುವುದೇ ಇಲ್ಲ. ಆಕೆಯಲ್ಲಿ ಅಕ್ಷಯ (ಶಕ್ತಿ) ಪಾತ್ರೆ ಏನಾದರೂ ಇದೆಯೇನೋ ಅನಿಸುತ್ತದೆ. ಲೋಕಪ್ರಿಯತೆಯಿಂದ ಆಕೆ ಉಬ್ಬಿಹೋಗುವುದಿಲ್ಲ. ಇಲ್ಲಿಯ ಸುಂದರವಾದ ವಸ್ತುಗಳೆಲ್ಲವೂ ಆಕೆಗೆ ಹಿಡಿಸಿವೆ. ಅವರು ಮಕ್ಕಳನ್ನು ಪ್ರೀತಿಸುತ್ತಾರೆ. ಚೆಂದವಾದ ಹೂ ಅವರ ಮನವನ್ನು ಸೂರೆಗೊಳ್ಳುತ್ತದೆ. ಆದರೂ ಆಕೆ ಭವಿಷ್ಯವನ್ನು ಮರೆಯುವುದಿಲ್ಲ. ಅಂದರೆ, ಸ್ತ್ರೀ ಜಾತಿಯಲ್ಲಿರುವ ದೌರ್ಬಲ್ಯ, ಪ್ರಶಂಸೆ ಮಾಡಿಬಿಟ್ಟರೆ ತಮ್ಮನ್ನು ತಾವೇ ಮರೆತುಹೋಗುವುದು— ಇಂಥದು ನನಗೆ ಸರೋಜಿನೀ ದೇವಿಯವರಲ್ಲಿ ಕಂಡುಬರಲಿಲ್ಲ."

ಆ ಸಹೋದರಿ ಸರೋಜಿನೀದೇವಿಯವರ ಶಕ್ತಿಯ ಬಗೆಗೆ ಮಾಡಿರುವ ವರ್ಣನೆಯಲ್ಲಿ ಅತಿಶಯೋಕ್ತಿ ಇದೆಯೆಂದು ನನಗೆ ಅನಿಸುವುದಿಲ್ಲ. ವಸ್ತುಸ್ಥಿತಿಯನ್ನು ಕ್ಷಣಮಾತ್ರದಲ್ಲಿ ಅರಿತುಕೊಳ್ಳುವ ಅಪೂರ್ವ ಶಕ್ತಿ ಸರೋಜಿನೀ ಅವರಲ್ಲಿದೆ. ಅವರಿಗೆ ತಮ್ಮ ಪರಿಮಿತಿಯು ಗೊತ್ತು. ಅರ್ಥಶಾಸ್ತ್ರಜ್ಞರ ಹಾಗೂ ರಾಜನೀತಿಜ್ಞರ ಜಟಿಲತೆಯಲ್ಲಿ ಅವರು ಎಂದೂ ಸಿಕ್ಕಿಕೊಳ್ಳುವುದಿಲ್ಲ. ಅಂಥ ಜ್ಞಾನ ತಮಗಿದೆಯೆಂದು ಅವರು ಹೇಳಿಕೊಳ್ಳುವುದೂ ಇಲ್ಲ; ಆಡಂಬರ ತೋರುವುದೂ ಇಲ್ಲ. ಸಾಧಾರಣ ಮನುಷ್ಯನಲ್ಲಿ ಇರುವಷ್ಟೇ ಜ್ಞಾನದ ಬಲದಿಂದ ಅವರು ಬಹಳ ಚಾತುರ್ಯದಿಂದ ಕೆಲಸ ಮಾಡಿಬಿಡುತ್ತಾರೆ ; ಎದುರಾಳಿ ಅವರನ್ನು ತೊಡಕಿನಲ್ಲಿ ಸಿಕ್ಕಿಸಲು ಆಗುವುದೇ ಇಲ್ಲ. ಪ್ರತಿಯಾಗಿ ಅವರಿಂದ ದೊರೆತುದನ್ನು ಗ್ರಹಿಸಿ, ತನಗೆ ಸರ್ವಸ್ವವು ಸಿಕ್ಕಿತೆಂಬಂತೆ ತೃಪ್ತನಾಗಿಬಿಡುತ್ತಾನೆ.೩೨

ಜಯಪ್ರಕಾಶರ ಬಂಧನ

ಶ್ರೀ ಜಯಪ್ರಕಾಶ ನಾರಾಯಣರ ಬಂಧನ ದುರದೃಷ್ಟಕರವಾದ ಘಟನೆ. ಅವರು ಸಾಧಾರಣ ಕಾರ್ಯಕರ್ತರೇನಲ್ಲ. ಅವರು ಸಮಾಜವಾದದ ಮಹಾನ್ ವಿಶೇಷಜ್ಞರು. ಪಾಶ್ಚಾತ್ಯ ಸಮಾಜವಾದದ ಬಗೆಗೆ ಅವರಿಗೆ

ಇರುವಷ್ಟು ಜ್ಞಾನ ಹಿಂದೂಸ್ಥಾನದಲ್ಲಿ ಬೇರೆ ಯಾರಿಗೂ ಇಲ್ಲವೆಂದು ಹೇಳ ಬಹುದು. ಅವರು ಚತುರ ಯೋಧರೂ ಹೌದು. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಸರ್ವಸ್ವವನ್ನೂ ತ್ಯಾಗಮಾಡಿದ್ದಾರೆ. ಅವರು ಅಖಂಡ ಉದ್ಯೋಗ ಶೀಲರು. ಅವರ ಕಷ್ಟ ಸಹಿಷ್ಣುತೆ ಅತುಲ್ಯವಾದುದು. ಅವರ ಯಾವ ಭಾಷಣ ಕಾನೂನಿನ ಹಿಡಿತಕ್ಕೆ ಸಿಕ್ಕಿತೋ ನನಗೆ ತಿಳಿಯದು. ೧೨೪ 'ಎ' ಅಥವಾ ಭಾರತ ರಕ್ಷಣಾ ಕಾನೂನಿನ ಅತೀವ ಕೃತ್ರಿಮವಾದ 'ಕಲಮು' ಗಳನ್ನು 'ಅನುಕೂಲ ವ್ಯಕ್ತಿ'ಗಳ ಬಂಧನದ ಉದ್ದೇಶಕ್ಕೆ ಬಳಸುವುದಾದರೆ ಅಧಿಕಾರಿಗಳಿಗೆ ಬೇಡವಾದ ಯಾವನೇ ವ್ಯಕ್ತಿ ಕಾನೂನಿನ ಯಂತ್ರದಲ್ಲಿ ಸಿಲುಕಿಕೊಳ್ಳಬಹುದು. ಸರಕಾರ ಇಚ್ಛಿಸಿದರೆ, ಹೋರಾಟವನ್ನು ತಡ ಮಾಡದೆಯೇ ಆರಂಭಿಸಬಹುದೆಂದು ನಾನು ಮೊದಲೇ ಹೇಳಿದ್ದೇನೆ. ಹಾಗೆ ಮಾಡುವ ಪೂರ್ಣಹಕ್ಕು ಸರಕಾರಕ್ಕೆ ಇದೆ. ಆದರೆ, ಹೋರಾಟ ಶುದ್ಧ ಅಹಿಂಸಾತ್ಮಕವಾಗಿ ಇರುವವರೆಗೆ ಅದು ತನ್ನ ಉಚಿತ ಹಾದಿಯಲ್ಲಿ ನಡೆದು ಕೊಂಡು ಹೋಗಲು ಅವಕಾಶ ಕೊಡಲ್ಪಡುವುದೆಂದು ನಾನು ದೃಢವಾಗಿ ನಂಬಿದ್ದೇನೆ. ಏನೇ ಆಗಲಿ, ಭ್ರಮ-ಜಾಲಕ್ಕೆ ಅನುವುಗೊಡಬಾರದು. ಶ್ರೀ ಜಯಪ್ರಕಾಶ ನಾರಾಯಣರ ಮೇಲೆ ಹಿಂಸೆಯ ಆರೋಪ ಇರವು ದಾದರೆ, ಅದನ್ನು ಸಿದ್ಧಪಡಿಸಬೇಕು. ನಿಜವಾದ ಮಾತೆಂದರೆ, ಈ ಬಂಧನದ ದೆಸೆಯಿಂದ ಬ್ರಿಟಿಷ್ ಸರಕಾರದ ದಮನ ನೀತಿಯನ್ನು ಅನುಸರಿಸಲು ಬಯ ಸುವುದೆಂದು ಮುಂದಿಗೆ ಅನಿಸುತ್ತಿದೆ. ಇಂಥ ಸ್ಥಿತಿಯಿಂದ ಇತಿಹಾಸದ ಪುನಃ ರಾವೃತ್ತಿಯೇ ಆಗುವುದು. ಹಿಂದೆ ಸವಿನಯ ಶಾಸನಭಂಗ ಆಂದೋಲನದ ಸಮಯದಲ್ಲಿ ಸರಕಾರ ಅಲೀ–ಬಂಧುಗಳನ್ನು ಬಂಧಿಸಿ ದಮನ ನೀತಿಯನ್ನು ಆರಂಭಿಸಿತು. ಈ ಬಂಧನ ಪೂರ್ವನಿಶ್ಚಿತ ಕಾರ್ಯಕ್ರಮಕ್ಕೆ ಅನುಗುಣವಾಗಿ ನಡೆದಿದೆಯೋ ಅಥವಾ ಯಾವನೊಬ್ಬ ಅತ್ಯುತ್ಸಾಹಿ ಅಧಿಕಾರಿಯ ಅತಿ ಕೃತಿಯೋ ತಿಳಿಯದು. ಇದು ಯಾವನೋ ಅಧಿಕಾರಿಯ ದೋಷವಾಗಿದ್ದರೆ ಇದನ್ನು ಸರಿಪಡಿಸಬೇಕು.೩೩

ವಿರೋಚಿತ ಹೇಳಿಕೆ*

ಶ್ರೀ ಜಯಪ್ರಕಾಶ ನಾರಾಯಣರು ತಾವು ಕೋರ್ಟಿನಲ್ಲಿ ಕೊಟ್ಟಿರುವ ಹೇಳಿಕೆಯ ಒಂದು ಪ್ರತಿಯನ್ನು ನನಗೆ ಕಳುಹಿಸಿದಾರೆ. ಈ ಹೇಳಿಕೆ ಅವರಿಗೆ ತಕ್ಕುದಾಗಿದೆ; ವಿರೋಚಿತವಾಗಿದೆ; ಸಂಕ್ಷಿಪ್ತವಾಗಿದೆ; ಅವರೇ ಸ್ವತಃ ಹೇಳಿರುವಂತೆ, ದೇಶಪ್ರೇಮಕ್ಕಾಗಿ ಅವರಿಗೆ ಶಿಕ್ಷೆ ಆಗುತ್ತಿರುವುದು ದುರುದೃಷ್ಟಕರ ಬಲಿದಾನ. ಲಕ್ಷಾಂತರ ಮಂದಿ ವಿಚಾರ ಮಾಡುವುದನ್ನೇ, ಸಹಸ್ರಾರು ಮಂದಿ ಖಾಸಗಿ ಮಾತುಕತೆಯಲ್ಲಿ ಹೇಳುವುದನ್ನೇ ಶ್ರೀ ಜಯಪ್ರಕಾಶರು ಸಾರ್ವಜನಿಕವಾಗಿ ಯುದ್ಧದ ಸಾಮಾನು ಸಿದ್ಧಗೊಳಿಸುತ್ತಿರುವವರ ಸಮ್ಮುಖದಲ್ಲಿ ಹೇಳಿದಾರಷ್ಟೆ. ಅವರ ಮಾತಿನ ಪ್ರಭಾವ ಕಾಣಿಸಿಕೊಂಡು, ಮೇಲಿಂದ ಮೇಲೆ ಅದರ ಪುನಶ್ಚರಣವಾದರೆ ಸರಕಾರಕ್ಕೆ ತ್ರಾಸವಾದೀತೆಂಬ ಮಾತು ಸರಿ. ಆದರೆ ಹಾಗೆ ತ್ರಸ್ತಗೊಂಡು ಯಾವನೇ ದೇಶಭಕ್ತನಿಗೆ ಸ್ವತಂತ್ರ ವಿಚಾರ ಮಾಡಿದ ಬಗ್ಗೆ ಶಿಕ್ಷೆ ವಿಧಿಸುವ ಬದಲು ಭಾರತದೊಡನೆ ಹೇಗೆ ವ್ಯವಹರಿಸಬೇಕೆಂಬುದನ್ನು ಸರಕಾರ ಯೋಚಿಸಬೇಕು.

ಹೇಳಿಕೆಯ ಕೊನೆಯ ಭಾಗದಲ್ಲಿ ಹೇಳಿಕೆ ಕೊಟ್ಟವರ ಅಗಾಧ ಮಾನವೀಯತೆಯನ್ನು ಕಾಣಬಹುದಾಗಿದೆ: ಅವರ ಹೃದಯದಲ್ಲಿ ಕಶ್ಮಲವೆಂಬುದಿಲ್ಲ. ಸಾಮ್ರಾಜ್ಯವಾದ ಹಾಗೂ ನಾಜೀವಾದವನ್ನು ನಾಶಗೊಳಿಸುವುದೇ ಅವರ ಉದ್ದೇಶ. ಆಂಗ್ಲೇಯರು ಅಥವಾ ಜರ್ಮನರೊಡನೆ ಅವರದೇನೂ ಜಗಳವಿಲ್ಲ. ಇಂಗ್ಲೆಂಡ್ ಸಾಮ್ರಾಜ್ಯವಾದವನ್ನು ತೊರೆದುಬಿಟ್ಟರೆ ಭಾರತದವರು ಮಾತ್ರವಲ್ಲ, ಇಡೀ ಪ್ರಪಂಚದ ಸ್ವಾತಂತ್ರ್ಯಪ್ರೇಮಿಗಳಾದ ಜನ ನಾಜೀವಾದದ ಸೋಲಿಗಾಗಿಯೂ, ಸ್ವಾತಂತ್ರ್ಯ ಹಾಗೂ ಜನತಂತ್ರದ ಗೆಲುವಿಗಾಗಿಯೂ ಪೂರ್ಣಪ್ರಯತ್ನ ಮಾಡುವರು—ಎಂಬದಾಗಿ ಅವರು ಸತ್ಯವನ್ನೇ ನುಡಿದಿದ್ದಾರೆ.೩೪

---

* ೧೯೪೦ ರಲ್ಲಿ ಬಂಧಿತರಾದಾಗ ಕೊಟ್ಟ ಹೇಳಿಕೆ.

ಮುಳ್ಳಿನ ಕಿರೀಟ*

ಕಾಂಗ್ರೆಸ್ ಅಧ್ಯಕ್ಷಸ್ಥಾನ ಈಗ ಹೂವಿನ ಕೋಮಲ ಗುಚ್ಛವಾಗಿ ಉಳಿದಿಲ್ಲ. ಹೂವಿನ ದಲಗಳು ದಿನದಿನಕ್ಕೆ ಉದುರಿ ಹೋಗುತ್ತದೆ; ಮುಳ್ಳುಗಳು ಮೊಳಕೆಯಾಗುತ್ತವೆ. ಈಗ ಈ ಮುಳ್ಳಿನ ಕಿರೀಟವನ್ನು ಯಾರು ಧರಿಸುವರೋ? ತಂದೆಯೋ, ಮಗನೋ? ನೂರಾರು ಹೋರಾಟಗಳನ್ನು ನಡೆಸಿರುವ ಹೋರಾಟಗಾರ ಮೋತೀಲಾಲರೋ, ಸಂಯಮ–ನಿಯಮಗಳಿಂದ ಪಕ್ವವಾಗಿರುವ, ತನ್ನ ಯೋಗ್ಯತೆ ಹಾಗೂ ಮಹತ್ವದಿಂದ ದೇಶದಯುವಕರ ಹೃದಯವನ್ನು ಗೆದ್ದಿರುವ ಸೈನಿಕ ಜವಾಹರಲಾಲರೋ? ಶ್ರೀಯುತ ವಲ್ಲಭಭಾಯಿ ಪಟೇಲರ ಹೆಸರು ಸ್ವಾಭಾವಿಕವಾಗಿಯೇ ಎಲ್ಲರ ತುಟಿಯ ಮೇಲಿದೆ. ಪಂಡಿತರು (ಮೋತಿಲಾಲರು) ಒಂದು ವ್ಯಕ್ತಿಗತ ಪತ್ರದಲ್ಲಿ ಹೀಗೆ ಬರೆದಿದ್ದಾರೆ:— ಸರದಾರ ವಲ್ಲಭಭಾಯಿ ಅವರ ವೀರತ್ವವನ್ನು ಅನುಲಕ್ಷಿಸಿ, ಈ ಬಾರಿ ಅವರನ್ನೇ ಅಧ್ಯಕ್ಷರನ್ನಾಗಿ ಆರಿಸಬೇಕು.; ತನ್ಮೂಲಕ ಅವರಲ್ಲಿ ಇಡೀ ರಾಷ್ಟ್ರಕ್ಕೆ ವಿಶ್ವಾಸವಿದೆಯೆಂಬುದನ್ನು ಸರಕಾರಕ್ಕೆ ತೋರಿಸಿಕೊಡಬೇಕು. "ಅವರು ಹೇಳುವುದೇನೋ ಸರಿ, ಆದರೆ ಈಗ ಶ್ರೀ ವಲ್ಲಭಭಾಯಿ ಅವರ ವಿಚಾರ ಮಾಡುವ ಹಾಗೆಯೇ ಇಲ್ಲ. ಅವರಿಗೆ ಕೈಮೇಲೆ ಬೇಕಾದಷ್ಟು ಕೆಲಸವಿದೆ; ಈಗ ಅವರು ಬಾರಡೋಲಿಯನ್ನು ಬಿಟ್ಟು ಬೇರೆ ಕಡೆ ಗಮನ ಕೊಡುವ ಹಾಗೆಯೇ ಇಲ್ಲ. ಅಲ್ಲದೆ, ಡಿಸೆಂಬರ್ ಬರುವ ಮೊದಲೇ ಸರಕಾರದ ಜೈಲುಗಳಲ್ಲೊಂದಕ್ಕೆ ಅವರು ಅತಿಥಿಗಳಾಗಿ ಹೋಗುವ ಸಂಭವವೂ ಇದೆ. ಈ ಮುಳ್ಳಿನ ಕಿರೀಟ ಪಂಡಿತ ಜವಾಹರಲಾಲರಿಗೇ ದೊರೆಯಬೇಕೆಂಬುದು ನನ್ನ ಅಭಿಪ್ರಾಯ. ಭವಿಷ್ಯ ದೇಶದ ಯುವಕರ ಕೈಯಲ್ಲೇ ಇರಬೇಕು. ಆದರೆ, ಹಲವಾರು ಬಿರುಗಾಳಿ ಏಳಬಹುದೆಂಬ ಭೀತಿ ಇರುವ ಮುಂದಿನ ವರ್ಷ ಕಾಂಗ್ರೆಸ್ ಹರಿಗೋಲನ್ನು ಪಂ. ಮೋತಿಲಾಲರ ಕೈಗೇ ಕೊಡಬೇಕೆಂಬುದು ಬಂಗಾಳದ ಇಚ್ಛೆಯಾಗಿದೆ. ನಮ್ಮಲ್ಲಿ ಒಳ ಜಗಳವಿದೆ; ನಾಲ್ಕಾಕಡೆ ಎಷ್ಟು ಶಕ್ತಿ ಶಾಲಿಗಳೋ ಅಷ್ಟೇ ನೀತಿ-ನಿಯಮಗಳ ಪರಿವೆಯಿಲ್ಲದ

* ೧೯೨೮ ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಕುರಿತು ಬರೆದುದು.

ವರೂ ಆದ ಶತ್ರುಗಳು ನಮ್ಮನ್ನು ಮುತ್ತಿದ್ದಾರೆ. ಇಂಥ ಸಮಯದಲ್ಲಿ ಬಂಗಾಳಕ್ಕೆ ಹಿರಿಯರ-ವೃದ್ಧರ ಆವಶ್ಯಕತೆಯಿದೆ. ಅವರು ಗಂಭೀರ ಸಮಯ ದಲ್ಲಿ ಅಲ್ಲಿಯ ಸ್ಥಿತಿಯನ್ನು ಸಂಭಾಳಿಸಿದಂಥವರೂ ಆಗಿರಬೇಕು. ಮುಂದೆ ಇಡೀ ಹಿಂದೂಸ್ಥಾನಕ್ಕೆ ಸುಖದ ಸಮಯ ಬರುವಂತಿಲ್ಲವಾದರೆ, ಬಂಗಾಳ ಕ್ಕಂತೂ ಬರುವ ಸಂಭವ ಇಲ್ಲವೇ ಇಲ್ಲ. ಪಂ. ಮೋತೀಲಾಲರೇ ಈ ಮುಳ್ಳಿನ ಕಿರೀಟವನ್ನು ಏಕೆ ಧರಿಸಬೇಕೆಂಬುದಕ್ಕೆ ಸಾವಿರ ಕಾರಣಗಳಿವೆ: ಅವರು ವೀರರು, ಉದಾರರು; ಅವರಲ್ಲಿ ಎಲ್ಲ ಪಕ್ಷಗಳವರಿಗೆ ವಿಶ್ವಾಸವಿದೆ; ಅವರನ್ನು ಮುಸಲ್ಮಾನರು ತಮ್ಮ ಸ್ನೇಹಿತರೆಂದು ಭಾವಿಸುತ್ತಾರೆ. ಅವರ ವಿರೋಧಿಗಳೂ ಅವರನ್ನು ಗೌರವಿಸುತ್ತಾರೆ. ತಮ್ಮ ಬಲವಾದ ವಾದದಿಂದ ಬಹುತೇಕ ವಿರೋಧಿಗಳನ್ನು ತಮ್ಮ ಅಭಿಪ್ರಾಯಕ್ಕೆ ಒಲಿಸಿಕೊಳ್ಳಬಲ್ಲ ಶಕ್ತಿಯುಳ್ಳವ ರಾಗಿದ್ದಾರೆ.೩೫

ವಿಠಲಭಾಯಿಯವರ ಔದಾರ್ಯ

ಓದುಗರಿಗೆ ಸಂತೋಷದ ಸುದ್ದಿಯೊಂದನ್ನು ತಿಳಿಸದೆ ಇದ್ದುದಕ್ಕಾಗಿ ನನಗೆ ದುಃಖವಾಗುತ್ತದೆ. ಅದು ಶ್ರೀಯುತ ವಿಠಲ್‌ಭಾಯಿ ಪಟೇಲರಿಗೂ ನನಗೂ ನಡೆದ, ಕೆಳಗೆ ಕಾಣಿಸಿದ ಪತ್ರವ್ಯವಹಾರದಿಂದ ವ್ಯಕ್ತವಾಗುತ್ತದೆ.

ಆರ್ಯಭವನ
ಸ್ಯಾಂಡ್‌ಹರ್ಸ್ಟ್ ರೋಡ್
ಬೊಂಬಾಯಿ
೧೦, ಮೇ, ೧೯೨೬

(೧)

ಪ್ರಿಯ ಮಹಾತ್ಮಾಜೀ,

ನಾನು ಲೆಜಿಸ್ಲೇಟಿವ್ ಅಸೆಂಬ್ಲಿಯ ಅಧ್ಯಕ್ಷ ಪದವಿಯನ್ನು ಒಪ್ಪಿ ಕೊಂಡಾಗ, ನನ್ನ ಸಂಬಳದಲ್ಲಿ ಉಳಿಯುವ ಹಣವನ್ನು ಯಾವುದಾದ ರೊಂದು ರಾಷ್ಟ್ರೋಪಕಾರದ ಕಾರ್ಯಕ್ಕೆ ಉಪಯೋಗಿಸಬೇಕೆಂದು ಮನಸ್ಸಿ

ನಲ್ಲಿಯೇ ನಿಶ್ಚಯಿಸಿಕೊಂಡಿದ್ದೆ. ಅನೇಕ ಕಾರಣಗಳಿಂದ, ಮೊದಲ ಆರು ತಿಂಗಳುಗಳಲ್ಲಿ ಹೇಳಿಕೊಳ್ಳುವಷ್ಟು ಮೊಬಲಗನ್ನು ಉಳಿತಾಯ ಮಾಡಲು ಆಗಲಿಲ್ಲ. ಹಿಂದಿನ ತಿಂಗಳಿಂದ ನಾನು ಕಷ್ಟ-ಕಾರ್ಪಣ್ಯವನ್ನು ದಾಟಿ ಭಾರಿ ಮೊಬಲಗನ್ನು ಉಳಿತಾಯ ಮಾಡಲು ಸಾಧ್ಯವಾಗಿದೆಯೆಂದು ತಿಳಿಸಲು ಸಂತೋಷವಾಗುತ್ತದೆ. ನನಗೆ ತಿಂಗಳಿಗೆ ಸರಾಸರಿ ರೂ. ೨೦೦೦ ಬೇಕಾಗುತ್ತದೆ. ಆದಾಯದ ತೆರಿಗೆ ಕೊಟ್ಟಮೇಲೆ ನನ್ನ ತಿಂಗಳ ಸಂಬಳ ರೂ. ೩,೬೨೫. ಆದಕಾರಣ, ಹಿಂದಿನ ತಿಂಗಳಿಂದ ಆರಂಭಿಸಿ, ಪ್ರತಿತಿಂಗಳೂ ರೂ. ೧,೬೨೫ ಪ್ರತ್ಯೇಕವಾಗಿರಿಸಲು ಬಯಸಿದೇನೆ. ಅದನ್ನು ತಾವು ಯಾವ ಕಾರ್ಯಕ್ಕೇ ಆಗಲಿ, ಇಷ್ಟಬಂದಂತೆ ಉಪಯೋಗಿಸಬಹುದು. ಈ ವಿಷಯದಲ್ಲಿ ನನಗೂ ಹಲವೊಂದು ವಿಚಾರವಿದೆ. ಸಮಯಾನುಸಾರ ಆ ಬಗೆಗೆ ತಮ್ಮೊಡನೆ ಚರ್ಚಿಸುವೆನು. ಆದರೆ ಆ ವಿಚಾರಗಳಲ್ಲಿ ತಮ್ಮ ಅಭಿಪ್ರಾಯ ನನ್ನ ಅಭಿಪ್ರಾಯದೊಡನೆ ಕೂಡಲಿ, ಕೂಡದಿರಲಿ—ಹಣವಂತೂ ತಮ್ಮ ವಶದಲ್ಲಿಯೇ ಇರುವುದು. ಇದರೊಡನೆ ಏಪ್ರಿಲ್ ತಿಂಗಳ ಸಂಬಳದ ಬಾಬ್ತು ರೂ. ೧೬೨೫ ಕಳುಹಿಸುತ್ತಿರುವೆ.

ಈ ಜವಾಬುದಾರಿಯನ್ನು ತಾವು ಒಪ್ಪದಿರಲಾರಿರೆಂದು ನಾನು ನಂಬಿದ್ದೇನೆ.

ತಮ್ಮವ

ವಿ. ಜೆ. ಪಟೇಲ್

ಸುಖ್‌ಡೇಲ್

ಸಿಮ್ಲಾ, ೩೧ ಮೇ, ೧೯೨೬

ಪ್ರಿಯ ಮಹಾತ್ಮಾಜೀ,

ಇದರೊಡನೆ ರೂ. ೪೩೨೫ ಕ್ಕೆ ಚೆಕ್ ಕಳುಹಿಸುತ್ತಿರುವೆನು. ಇದರಲ್ಲಿ ರೂ. ೧೬೨೫ ನನ್ನ ಮೇ ತಿಂಗಳ ಸಂಬಳದ ಪಾಲು. ರೂ. ೨೭೦೦ ಬೊಂಬಾಯಿ ಕಾರ್ಪೊರೇಷನ್ನಿನ ನನ್ನ ಅಧ್ಯಕ್ಷ ಸ್ಥಾನದ ಅವಧಿ ಮುಗಿದ ಮೇಲೆ ನನಗೆ ಅರ್ಪಿಸಲಿಕ್ಕೆಂದು ನನ್ನ ಸಹೋದ್ಯೋಗಿಗಳು ಕೂಡಿಸಿದ್ದ ರೂ. ೫೦೦೦ ನಿಧಿಯಲ್ಲಿ ಉಳಿದುದು. ಕೊನೆಯಬಾರಿ ಸಾಬರಮತಿಯಲ್ಲಿ ತಮ್ಮನ್ನು ಭೆಟ್ಟಿಯಾಗಿದ್ದಾಗ ಈ ಹಣವನ್ನು ಸಾಧಾರಣವಾಗಿ ನನಗೆ ಸೂಕ್ತವೆಂದು ತೋರುವ ಸ್ವರಾಜ್ಯಪಕ್ಷದ ಅಥವಾ ಬೊಂಬಾಯಿ ರಾಷ್ಟ್ರೀಯ

ಪೌರಸಭಾ ಪಕ್ಷದ ಕಾರ್ಯಗಳಿಗಾಗಿ ಖರ್ಚು ಮಾಡಲು ನಿಶ್ಚಯಿಸಿರುವುದಾಗಿ ತಮಗೆ ತಿಳಿಸಿದ್ದೆ. ಈಗ ನನ್ನ ವೇತನದ ಉಳಿತಾಯ ಮೊಬಲಗಿನ ನಿಧಿಗೆ ಸೇರಿಸಬೇಕೆಂದು ಈ ಹಣವನ್ನು ಕಳುಹಿಸುತ್ತಿರುವೆನು.

ತಮ್ಮವ

ವಿ. ಜೆ. ಪಟೇಲ್

ಶ್ರೀ ವಿಠಲಭಾಯಿ ಅವರ ಇಚ್ಛೆಯ ಪ್ರಕಾರವೇ ಈ ಪತ್ರ ವ್ಯವಹಾರವನ್ನು ಇದುವರೆಗೆ ಪ್ರಕಟಿಸಲಿಲ್ಲ. ಚುನಾವಣೆಯ ಕಾಲದಲ್ಲಿ ಇದನ್ನು ಪ್ರಕಟಿಸುವುದು ಅವರಿಗೆ ಸಂಕೋಚವೆನಿಸಿತು. ಚುನಾವಣೆಯ ನಂತರವೂ ಕಳೆದ ವಾರವೇ ಪ್ರಕಟನೆಗೆ ಅವರ ಒಪ್ಪಿಗೆ ಸಿಕ್ಕಿತು. ಅದರಿಂದ ಸಾರ್ವಜನಿಕ ಹಿತ ಆಗುವಂತಿದ್ದರೆ, ಅವರ ಸಂಕೋಚಕ್ಕೆ ನಾನು ಪ್ರೋತ್ಸಾಹವನ್ನೇ ಕೊಡುತ್ತಿದ್ದೆ. ಜನ ತಮ್ಮ ಉದಾಹರಣೆಯನ್ನು ಅನುಸರಿಸಲೆಂಬುದು ವಿಠಲಭಾಯಿ ಅವರ ಆಸೆ. ಯಾವುದೇ ಕಾರಣದಿಂದ ಹಿಂದೂಸ್ಥಾನದ ಸ್ಥಿತಿಗತಿಗೆ ಸಲ್ಲದ ಭಾರಿ ಪ್ರಮಾಣದ ಸಂಬಳವನ್ನು ತೆಗೆದುಕೊಳ್ಳಲೇ ಬೇಕಾಗಿ ಬಂದರೆ, ಅದರದೊಂದು ಗಣನೀಯವಾದ ಪಾಲನ್ನು ಸಾರ್ವಜನಿಕ ಕಾರ್ಯಕ್ಕಾಗಿ ತೆಗೆದಿರಿಸಬಹುದು. ಭಾರಿ ಸಂಬಳ ತೆಗೆದುಕೊಳ್ಳುವ ಎಷ್ಟೋ ಮಂದಿ ತಮ್ಮ ಆದಾಯವನ್ನು ವ್ಯಕ್ತಿಗತ ಸುಖ-ಭೋಗಕ್ಕೆ ಬಳಸದೆ, ಸಾರ್ವಜನಿಕ ಸೇವೆಗೆ ಉಪಯೋಗಿಸುವುದನ್ನು ನಾನು ನೋಡಿದೇನೆ. ಆದರೆ, ಖರ್ಚನ್ನು ಅವರು ತಮ್ಮ ಇಚ್ಛೆಗೆ ಅನುಗುಣವಾಗಿಯೇ ಮಾಡುತ್ತಾರೆ. ವಿಠಲಭಾಯಿ ಅವರು, ಹೇಳಿ-ಕೇಳಿ ಪ್ರತಿಷ್ಠಿತರಾದ ವ್ಯಕ್ತಿಯೊಬ್ಬರು ನೋಡಿಕೊಳ್ಳುವಂಥ ಇಂಥ ಚಂದಾ ಹಣದ ವಿಶೇಷ ನಿಧಿಯೊಂದನ್ನು ಸ್ಥಾಪಿಸಲು ಬಯಸುತ್ತಾರೆ. ಇಂಥ ಉದ್ದೇಶ ಸಫಲವಾಗಬೇಕಾದರೆ, ಟ್ರಸ್ಟೀಮಂಡಲ ರಾಷ್ಟ್ರೀಯವಾಗಬೇಕು; ಅದರಲ್ಲಿ ಸಮಾನ ಕಾರ್ಯಕ್ರಮವೊಂದನ್ನು ಒಪ್ಪುವ ಎಲ್ಲ ಪಕ್ಷಗಳ ಪ್ರತಿನಿಧಿಗಳು ಇರಬೇಕು. ಆದಕಾರಣ, ಈ ಸೂಚನೆಯನ್ನು ಒಪ್ಪುವವರು ತಮ್ಮ ಟೀಕೆ ಸಲಹೆಗಳನ್ನು ಕೊಡಬೇಕೆಂದು ಕೋರುತ್ತೇನೆ. ನಿಧಿಯ ಯಾವತ್ತು ಜವಾಬುದಾರಿಯನ್ನು ಹೊತ್ತುಕೊಳ್ಳಲು ಅಥವಾ ಯಾವ ಕಾರ್ಯಗಳಿಗಾಗಿ ನಾನು ನನ್ನ ಜೀವನ ಸಮರ್ಪಣೆ ಮಾಡಿರುವೆನೋ ಆ ಕಾರ್ಯಗಳಿಗೆ

ಮಾತ್ರವೇ ನಿಧಿಯನ್ನು ಉಪಯೋಗಿಸಲು ನನಗೆ ಇಚ್ಛೆಯಿಲ್ಲ. ಸಹಾಯ ಮಾಡಲು ಸಿದ್ಧರಾಗಿರುವವರೆಲ್ಲರ ಸಹಕಾರವನ್ನು ಪಡೆದುಕೊಂಡರೆಯೇ, ವಿಠಲಭಾಯಿ ಅವರ ಮಹಾ ದಾನದ ಉದ್ದೇಶವನ್ನು ನೆರವೇರಿಸಲು ಸಾಧ್ಯವಾದೀತೆಂಬುದನ್ನು ನಾನು ಬಲ್ಲೆ.೩೬

ಸ್ವಾರ್ಥ ಪರೋಪಕಾರಗಳ ಸಮನ್ವಯ

ಸೇಠ್ ಶಿವನಾರಾಯಣರ ಇಬ್ಬರು ಮಕ್ಕಳಾದ ರಾಮೇಶ್ವರದಾಸ್ ಹಾಗೂ ಘನಶ್ಯಾಮದಾಸರ ಅಭ್ಯಾಸದ ಅಭಿರುಚಿಯಿಂದಾಗಿ ಈ ಸಂಸ್ಥೆ* ಹುಟ್ಟಿಕೊಂಡಿತು. ತಮ್ಮ ಮಕ್ಕಳು ಮಾತ್ರ ಓದುವಂತಾಗಿ, ಗ್ರಾಮದ ಇತರ ಬಾಲಕರಿಗೆ ಶಿಕ್ಷಣದ ಲಾಭ ದೊರೆಯದಿರುವುದು ಸೇಠರಿಗೆ ಸರಿಕಾಣ ಲಿಲ್ಲ. ೫ ರೂಪಾಯಿ ಸಂಬಳದ ಮೇಲೆ ಒಬ್ಬರು ಉಪಾಧ್ಯಾಯರನ್ನು ನೇಮಿಸಿ, ಬಿರ್ಲಾ ಪಾಠಶಾಲೆಯನ್ನು ತೆರೆದರು. ಅದೇ ಬೀಜದಿಂದ ಮೊಳ ಕೆಯೊಡೆದ ಪಾಠಶಾಲೆ ಇಂದು ಮಹಾವೃಕ್ಷವಾಗಿ ಬೆಳೆದಿದೆ. ಸ್ವಾರ್ಥದೊ ಡನೆ ಪರೋಪಕಾರವನ್ನು ಸಮನ್ವಯಗೊಳಿಸುವ ಕಲೆ ಬಿರ್ಲಾ-ಬಂಧುಗಳಿಗೆ ಸ್ವಭಾವಜನ್ಯವಾಗಿ ಸಿದ್ಧಿಸಿದೆ. ಅವರು ಶಿಕ್ಷಣ, ಆರೋಗ್ಯ ಮೊದಲಾದ ವಿಷಯಗಳಲ್ಲಿ ಅತೀವ ಆಸಕ್ತಿ ವಹಿಸಿ, ಬುದ್ಧಿ ಹಾಗೂ ಗಮನವನ್ನು ಕೊಟ್ಟು ಸಂಸ್ಥೆಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ.೩೭

ಸುಭಾಷ್ ಬಾಬೂ ಅವರ ಮಾರ್ಗ

ಪ್ರಶ್ನೆ:—ಕಾಂಗ್ರೆಸ್ಸಿನ ಸತ್ತಾಧಿಕಾರಿ ನಾಯಕರ-ಅವರಲ್ಲಿ ನೀವೂ ಸೇರಿದೀರಿ-ಮನೋವೃತ್ತಿ ಸುಧಾರಣಾವಾದಿ ಹಾಗೂ ಸೌಮ್ಯ- ಎಂಬು ದಾಗಿ ಸುಭಾಷ್ ಬಾಬೂಗಳು ಹೇಳುವುದು ಸರಿಯಲ್ಲವೆ?

---

*ರಾಜಾಸ್ಥಾನದಲ್ಲಿರುವ ಪಿಲಾನಿ ಶಿಕ್ಷಣ ಸಂಸ್ಥೆ.

ಉತ್ತರ :— ಧಾರಾಳವಾಗಿ ಸರಿ. ದಾದಾಭಾಯಿ ನವರೋಜಿ ಅವರು ದೊಡ್ಡ ಸುಧಾರಣಾವಾದಿಗಳೇ ಆಗಿದ್ದರು. ಗೋಖಲೆ ಅವರು ಸೌಮ್ಯ ಪಕ್ಷದ ದೊಡ್ಡ ಪ್ರತಿನಿಧಿಗಳೇ ಆಗಿದ್ದರು. ಹಾಗೆಯೇ ಬೊಂಬಾಯಿ ಪ್ರಾಂತದ ಕಿರೀಟ-ರಹಿತ ಚಕ್ರವರ್ತಿ ಫಿರೋಜ್ ಷಹಾ ಮೆಹ್ತಾ ಹಾಗೂ ಸುರೇಂದ್ರನಾಥ ಬ್ಯಾನರ್ಜಿ ಅವರೂ ಸೌಮ್ಯರೇ ಆಗಿದ್ದರು. ತಮ್ಮ ಕಾಲದಲ್ಲಿ ರಾಷ್ಟ್ರಕ್ಕಾಗಿ ಹೋರಾಡತಕ್ಕವರು ಅವರೇ ಆಗಿದ್ದರು. ನಾವು ಅವರ ಉತ್ತರಾಧಿಕಾರಿಗಳೇ. ಅವರು ಇರದೆ ಇದ್ದಿದ್ದರೆ, ನಾವೂ ಇರುತ್ತಿರಲಿಲ್ಲ. ಸುಭಾಷ್ ಬಾಬುಗಳು ಮುಂದೋಡುವ ಆತುರದಲ್ಲಿ ಒಂದು ವಿಷಯವನ್ನು ಮರೆತು ಬಿಡುತ್ತಾರೆ—ನನ್ನಂಥವರು ಸುಧಾರಣವಾದಿಗಳೂ, ಸೌಮ್ಯರು ಆಗಿದ್ದರೂ, ದೇಶಭಕ್ತಿಯಲ್ಲಿ ಅವರೊಡನೆ ಸ್ಪರ್ಧಿಸಬಲ್ಲೆವು. ಆದರೆ, ಅವರಿಗೆ ನಾನು ಹೀಗೆ ಹೇಳಿದ್ದೇನೆ—"ನೀವು ಇನ್ನೂ ಯುವಕರು; ನಿಮ್ಮಲ್ಲಿ ಯೌವನದ ಉತ್ಸಾಹ ಇರಬೇಕಾದುದೇ ಸರಿ." ನಾನಾಗಲಿ, ಯಾರೇ ಆಗಲಿ-ಅವರನ್ನು ಕೈಹಿಡಿದು ನಿಲ್ಲಿಸಿಲ್ಲ; ಹಾಗೇ ಅವರನ್ನು ಕೈಹಿಡಿದು ನಿಲ್ಲಿಸುವುದು ಯಾರಿಂದಲೂ ಸಾಧ್ಯವೂ ಅಲ್ಲ. ಅವರ ದೂರದರ್ಶಿತ್ವವೇ ಅವರನ್ನು ತಡೆದು ನಿಲ್ಲಿಸಿದೆ. ಆ ದೃಷ್ಟಿಯಿಂದ ಅವರೂ ನನ್ನಷ್ಟೇ ಸುಧಾರಣಾವಾದಿಗಳು ಹಾಗೂ ಸೌಮ್ಯರು. ವ್ಯತ್ಯಾಸ ಇಷ್ಟೆ—ನಾನು ಅನುಭವಿ. ಆದುದರಿಂದ ಅವರಲ್ಲಿರುವ ಗುಣಗಳನ್ನು ಅರಿತಿದ್ದೇನೆ; ಯೌವನದ ಉತ್ಸಾಹದಲ್ಲಿ ಅವರಿಗೆ ಅವು ಕಾಣುವುದಿಲ್ಲ. ಸುಭಾಷ್ ಬಾಬುಗಳ ಹಾಗೂ ನನ್ನ ದೃಷ್ಟಿಕೋಣ ಬೇರೆ ಬೇರೆಯಾಗಿದ್ದರೂ, ಅವರ ಮೇಲೆ ಕಾಂಗ್ರೆಸ್ಸಿನ ಪ್ರತಿಬಂಧಕವಿದ್ದರೂ, ಶಾಂತ ಯುದ್ಧದಲ್ಲಿ ಅವರು ತಮ್ಮ ವೈಶಿಷ್ಟ್ಯವನ್ನು ತೋರಿದಲ್ಲಿ ನಾನು ಅವರನ್ನು ಹಿಂಬಾಲಿಸಿ ನಡೆಯುವುದನ್ನು ಲೇಖಕರು ಕಾಣುವರು. ನಾನು ಮುಂದೆ ಹೊರಟರೆ ಅವರು ಹಿಂಬಾಲಿಸಿ ಬರುವರೆಂಬ ಭರವಸೆಯೂ ನನಗಿದೆ. ಆದರೆ, ನಮ್ಮ ಸಮಾನ ಧ್ಯೇಯವನ್ನು ಇನ್ನೊಂದು ಹೋರಾಟವಿಲ್ಲದೆಯೇ ನಾವು ಸಾಧಿಸಿಕೊಳ್ಳಲು ಸಾಧ್ಯವಾದೀತೆಂಬ ಆಶೆಯಿಂದಲೇ ನಾನು ಜೀವಿಸಬೇಕಾಗಿದೆ.

ವರ್ಧಾಕ್ಕೆ ವಾಪಸು ಬರುವಾಗ ನವಯುವಕನೊಬ್ಬನು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸುಭಾಷ್ ಬಾಬುಗಳ ಬಂಧನದ ವಿಷಯಕ್ಕೆ ಗಮನವನ್ನೇ ಕೊಡಲಿಲ್ಲವೆಂದು ಪ್ರಶ್ನಿಸಿದನು. ಅಂದು ಸೋಮವಾರವಾಗಿದ್ದು, ನನ್ನ

ಮೌನ ನಡೆದಿದ್ದುದರಿಂದ, ನಾನು ಯಾವ ಉತ್ತರವನ್ನೂ ಕೊಡಲಿಲ್ಲ. ಆದರೆ, ನವಯುವಕನ ಆ ಪ್ರಶ್ನೆ ನನಗೆ ಸರಿಯೆಂದು ತೋರಿತು. ಅದನ್ನು ಗಮನದಲ್ಲಿಟ್ಟುಕೊಂಡೆ. ಆ ನವಯುವಕ ನಾಗಪುರ ನಿಲ್ದಾಣದಲ್ಲಿ ಕೇಳಿದ ಪ್ರಶ್ನೆಯನ್ನೇ ಸಹಸ್ರಾರು ಮಂದಿ ಅಲ್ಲದಿದ್ದರೆ ನೂರಾರು ಮಂದಿಯಾದರೂ ತಮ್ಮ ಮನಸ್ಸಿನಲ್ಲಿ ಕೇಳಿಕೊಳ್ಳುತ್ತಿರುವರೆಂಬುದರಲ್ಲಿ ಸಂಶಯವೇ ಇಲ್ಲ. ಅದು ಸರಿಯಾದ ಮಾತೂ ಹೌದು. ಸುಭಾಷ್ ಬಾಬುಗಳು ಎರಡುಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ತಮ್ಮ ಜೀವನದಲ್ಲಿ ದೊಡ್ಡ ಆತ್ಮಬಲಿದಾನ ಮಾಡಿದ್ದಾರೆ. ಅವರೊಬ್ಬ ಆಜನ್ಮ ನಾಯಕರು. ಆದರೆ, ಈ ಗುಣಗಳು ಅವರಲ್ಲಿ ಇರುವುದರಿಂದ ಕಾರ್ಯಸಮಿತಿ ಅವರ ಬಂಧನದ ವಿರುದ್ಧ ಸೊಲ್ಲೆತ್ತಬೇಕಾಗಿದ್ದಿತೆನ್ನುವುದು ಸರಿಯಲ್ಲ. ಅಂದ ಹಾಗೆ— ಗುಣ-ದೋಷ ವಿಚಾರ ಮಾಡಿದಮೇಲೆ ಯಾವುದೇ ಬಂಧನ ನಿಂದಾಯೋಗ್ಯವೆಂದು ಅನಿಸಿದರೆ, ಕಾರ್ಯಸಮಿತಿ ನಿಜಕ್ಕೂ ಅತ್ತ ಗಮನ ಹರಿಸುವುದು. ಆದರೆ, ಸುಭಾಷ್ ಬಾಬುಗಳು ಕಾಂಗ್ರೆಸ್ಸಿನ ಅನುಮತಿಯಿಂದ ಸರಕಾರದ ಕಾನೂನನ್ನು ಮುರಿಯಲಿಲ್ಲ. ಆದರೆ ಸ್ವತಃ ಕಾರ್ಯಸಮಿತಿಯ ಆಜ್ಞೆಯನ್ನು—ಸ್ಪಷ್ಟವಾಗಿ ಘೋಷಣೆ ಮಾಡಿ, ಎದೆ ಮುಂದೆ ಮಾಡಿ ಉಲ್ಲಂಘಿಸಿದ್ದಾರೆ. ಈ ಕ್ಷಣದಲ್ಲಿ ಅವರು ಬೇರೆ ಬೇರೆ ಅಂಶಗಳ ಮೇಲೆ ಹೋರಾಟ ಆರಂಭಿಸಲು ಕಾರ್ಯಸಮಿತಿಯ ಅನುಮತಿಯನ್ನು ಬೇಡಿದ್ದರೆ, ಕಾರ್ಯಸಮಿತಿ ಅನುಮತಿ ಕೊಡುತ್ತಿದ್ದಿಲ್ಲವೆಂದೇ ನನ್ನ ಭಾವನೆ. ಸುಭಾಷ್ ಬಾಬುಗಳು ಎತ್ತಿರುವ ಪ್ರಶ್ನೆಗಿಂತ ಹೆಚ್ಚು ಮಹತ್ವದ ನೂರಾರು ಪ್ರಶ್ನೆಗಳು ದೇಶದಲ್ಲಿ ಇದ್ದಾವು. ಆದರೆ, ದೇಶ ಇಂದು ಒಂದೇ ಪ್ರಶ್ನೆಯ ಮೇಲೆ—ಅಂದರೆ ಸ್ವಾತಂತ್ರ್ಯದ ಪ್ರಶ್ನೆಯಮೇಲೆ ತನ್ನ ಗಮನವೆಲ್ಲವನ್ನೂ ಕೇಂದ್ರೀಕರಿಸಿದೆ. ಪ್ರಸಂಗ ಬಂದಾಗ, ಆ ಸಂಬಂಧದಲ್ಲಿ ಸತ್ಯಾಗ್ರಹವನ್ನು ಆರಂಭಿಸಲು ಸಿದ್ಧತೆಯೂ ಸಾಗಿದೆ. ಆದಕಾರಣ, ಸುಭಾಷ್ ಬಾಬುಗಳು ಇಟ್ಟ ಹೆಜ್ಜೆಯ ಬಗೆಗೆ ಕಾರ್ಯಸಮಿತಿ ಏನಾದರೂ ಕ್ರಮ ತೆಗೆದುಕೊಳ್ಳುವುದಿದ್ದರೆ, ಅವರ ಕೃತಿಯ ಬಗೆಗೆ ತನ್ನ ಅಸಮ್ಮತಿಯನ್ನು ಸೂಚಿಸಬೇಕಾಗಿದ್ದಿತಷ್ಟೆ. ಆದರೆ ಕಾರ್ಯಸಮಿತಿ ಹಾಗೆ ಮಾಡುವುದು ಅನುಚಿತ. ನಾನೂ ಆ ನವಯುವಕನ ಪ್ರಶ್ನೆಗೆ ಉತ್ತರ ಕೊಡದೆಯೇ ಇದ್ದುಬಿಡಬಹುದಾಗಿತ್ತು.

ಆದರೆ ಈ ಬಂಧನದ ವಿಷಯವನ್ನು ಸರಿಯಾದ ರೂಪದಲ್ಲಿ ಜನತೆಯ ಮುಂದಿಡುವುದರಲ್ಲಿ ಹಾನಿಯೇನೂ ಇಲ್ಲವೆಂದು ನನಗೆ ಅನಿಸಿತು. ಶ್ರೀ ಸುಭಾಷ್‌ರಂಥ ದೊಡ್ಡ ವ್ಯಕ್ತಿಗಳ ಬಂಧನ ಅಂತಿಂಥ ಮಾತಲ್ಲ. ಆದರೆ, ಸುಭಾಷ್‌ಬಾಬುಗಳು ತಮ್ಮ ಯುದ್ಧದ ಯೋಜನೆಯನ್ನು ಒಳಿತಾಗಿ ವಿಚಾರ ಮಾಡಿ, ಸಾಹಸಪೂರ್ವಕವಾಗಿಯೇ ರೂಪಿಸಿದ್ದಾರೆ. ತಮ್ಮ ಮಾರ್ಗ ಸರ್ವೋತ್ತಮವಾದುದೆಂದು ಅವರ ಭಾವನೆ. ಕಾರ್ಯಸಮಿತಿ ತಪ್ಪು ಹಾದಿ ಹಿಡಿದಿದೆ, 'ಮೀನ–ಮೇಷ ಎಣಿಸುವ ನೀತಿಯಿಂದ ಒಳಿತಾಗುವುದಿಲ್ಲ–ಎಂದು ಅವರು ಪ್ರಾಮಾಣಿಕವಾಗಿ ನಂಬಿದಾರೆ. ಕಾರ್ಯಸಮಿತಿ ಮಾಡಲಾರದೆ ಹೋದುದನ್ನು ತಾವು ಮಾಡಿ ತೋರಿಸುವುದಾಗಿ ಅವರು ನನಗೆ ಚೊಕ್ಕ ಮಾತಿನಲ್ಲಿ ಹೇಳಿದ್ದರು.

ಅವರ ತಾಳ್ಮೆ ಮೀರಿತ್ತು, ವಿಳಂಬವನ್ನು ಸಹಿಸುವುದು ಅವರಿಂದ ಆಗುತ್ತಿರಲಿಲ್ಲ. ಅವರ ಯೋಜನೆಯ ಪರಿಣಾಮವಾಗಿ ನನ್ನ ಜೀವಮಾನದಲ್ಲಿಯೇ ಸ್ವರಾಜ್ಯ ಸಿಕ್ಕಿದರೆ ಎಲ್ಲರಿಗಿಂತ ಮೊದಲು ನಾನೇ ಅಭಿನಂದನೆಯ ತಂತಿ ಕಳುಹಿಸುವುದಾಗಿ ಅವರಿಗೆ ಹೇಳಿದ್ದೆ. ಅವರು ಆರಂಭಿಸಿದ ಯುದ್ಧದ ದೆಸೆಯಿಂದ ನನ್ನ ವಿಚಾರವೂ ಅವರ ವಿಚಾರದಂತೆಯೇ ಪರಿವರ್ತನೆ ಆದಲ್ಲಿ ತೆರೆದ ಹೃದಯದಿಂದ ಅವರ ನೇತೃತ್ವ ಘೋಷಣೆ ಮಾಡಿ, ಒಬ್ಬ ಸೈನಿಕನಂತೆ ಅವರನ್ನು ಕೂಡಿಕೊಳ್ಳುವುದಾಗಿಯೂ ತಿಳಿಸಿದ್ದೆ. ಆ ಮಾತಿನ ಜತೆಗೆ ಅವರು ತಪ್ಪು ಹಾದಿ ಹಿಡಿದಿದ್ದಾರೆಂಬ ಎಚ್ಚರಿಕೆಯನ್ನು ಕೊಟ್ಟಿದ್ದೆ.

ಆದರೆ, ನನ್ನ ಮಾತಿಗೆ ಅಂಥ ಮಹತ್ವವೇನೂ ಇಲ್ಲ. ಒಂದು ಮಾರ್ಗವನ್ನು ಸರಿ ಎಂಬುದಾಗಿ ಸುಭಾಷ್‌ಬಾಬುಗಳು ಭಾವಿಸಿರುವವರೆಗೆ, ಕಾಂಗ್ರೆಸ್ಸಿಗೆ ಅದು ಒಪ್ಪಿಗೆ ಇರಲಿ, ಇಲ್ಲದಿರಲಿ–ಆ ಮಾರ್ಗವನ್ನು ಪಟ್ಟಾಗಿ ಹಿಡಿಯುವ ಅಧಿಕಾರ ಅವರಿಗಿದೆ; ಅದು ಅವರ ಧರ್ಮವೂ ಹೌದು. ಅವರು ಕಾಂಗ್ರೆಸ್ಸಿನಿಂದ ಪೂರ್ಣವಾಗಿ ಹೊರ ಬೀಳುವುದೇ ಸರಿಯೆಂದು ನಾನು ಅವರಿಗೆ ತಿಳಿಸಿದೆ. ಆದರೆ, ನನ್ನ ಅಭಿಪ್ರಾಯ ಅವರಿಗೆ ಸರಿ ಕಾಣಲಿಲ್ಲ. ಇಷ್ಟೆಲ್ಲ ಆದಮೇಲೂ ಅವರ ಪ್ರಯತ್ನ ಸಫಲವಾಗಿ ಹಿಂದೂಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿದರೆ, ಅವರು ಕಾಂಗ್ರೆಸ್ಸಿನ ಮೇಲೆ ಬಂಡಾಯವೆದ್ದುದು ಸರಿಯೆಂದೇ ಸಿದ್ಧವಾಗುವುದು; ಆಗ ಕಾಂಗ್ರೆಸ್ ಅವರ ಬಂಡಾಯವನ್ನು

ಮನ್ನಿಸುವುದಲ್ಲದೆ, ದೇಶವಿಮೋಚಕರೆಂದು ಅವರನ್ನು ಸ್ವಾಗತಿಸುವುದು.

ಸತ್ಯಾಗ್ರಹ ಯುದ್ಧದಲ್ಲಿ ಆಗ್ರಹಮಾಡಿ ಜೈಲಿಗೆ ಹೋಗುವುದು ಪ್ರಶಂಸನೀಯವೆನಿಸಿದೆ. ಆದಕಾರಣ, ದೇಶದ ಸಾಮಾನ್ಯ ಶಾಸನವನ್ನು ಉಲ್ಲಂಘಿಸಿ ಬಂಧನಕ್ಕೊಳಗಾದರೆ, ಅದರ ವಿರುದ್ಧ ಸೊಲ್ಲೆತ್ತುವಂತಿಲ್ಲ. ತದ್ವಿರುದ್ಧವಾಗಿ, ಬಂಧನಕ್ಕೊಳಗಾದಮೇಲೆ, ಸವಿನಯ ಶಾಸನಭಂಗಮಾಡಿದವರಿಗೆ ಧನ್ಯವಾದ ಅರ್ಪಿಸಿ, ಇತರ ಕಾಂಗ್ರೆಸ್ಸಿಗರು ಅವರನ್ನು ಅನುಸರಿಸುವಂತೆ ಆಹ್ವಾನಿಸುವ ಪದ್ಧತಿ ನಡೆದು ಬಂದಿದೆ. ಆದರೆ, ಸುಭಾಷ್‌ಬಾಬುಗಳ ವಿಷಯದಲ್ಲಿ ಕಾರ್ಯಸಮಿತಿ ಹಾಗೆ ಮಾಡಲಿಕ್ಕೆ ಬರುತ್ತಿರಲಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ. ದೇಶದಲ್ಲಿ ಇಂದು ಅಲ್ಲಲ್ಲಿ ಆಗುತ್ತಿರುವ ಬಂಧನಗಳ ಬಗೆಗೂ—ಅನೇಕ ಪ್ರಮುಖ ಕಾಂಗ್ರೆಸ್ಸಿಗರೂ ಬಂಧನಕ್ಕೆ ಒಳಗಾಗುತ್ತಿದ್ದಾರೆ–ಕಾರ್ಯಸಮಿತಿ ಯಾವ ಕ್ರಮವನ್ನೂ ತಕ್ಕೊಂಡಿಲ್ಲವೆಂಬುದನ್ನು ಇಲ್ಲಿ ತಿಳಿಸಬಯಸುವೆ. ಕಾರ್ಯಸಮಿತಿಗೆ ಇದರಿಂದ ಆಘಾತವಾಗಿಲ್ಲವೆಂದಲ್ಲ; ಆದರೆ, ಜೀವನ-ಸಂಗ್ರಾಮದಲ್ಲಿ ಪ್ರತಿಯೊಂದು ಅನ್ಯಾಯವನ್ನು ಮೌನವಾಗಿ ಸಹಿಸುವುದು ಆಗಾಗ ಧರ್ಮವೇ ಆಗುತ್ತದೆ. ಅದರಿಂದ ಮಹಾ ಶಕ್ತಿಯೂ ಹುಟ್ಟುತ್ತದೆ. ೩೮

ಏನೇ ಆಗಿರಲಿ, ಹೇಡಿಗಳಂತೂ ಅಲ್ಲ

ನಾನು ಲಾಲಾ ಲಜಪತರಾಯರನ್ನು ಹೇಡಿ ಎಂಬುದಾಗಿ ಹೇಳಿದೆನೆಂದು ಯಾರೋ ಸುದ್ದಿ ಕಳುಹಿಸಿದ್ದಾರಂತೆ. ಲಾಲಾಜೀ ಏನೇ ಆಗಿರಲಿ, ಹೇಡಿಗಳಂತೂ ಅಲ್ಲ. ನನ್ನ ಭಾಷಣದ ಪೂರ್ವಾಪರ ಸಂಬಂಧವನ್ನು ನೋಡಿದರೆ, ಲಾಲಾಜೀ ಮುಸಲ್ಮಾನರ ವಿರೋಧಿಗಳು ಎಂಬ ಆರೋಪವನ್ನು ನಾನು ಅಲ್ಲಗಳೆಯುತ್ತಿದ್ದೇನೆಂಬುದು ಗೊತ್ತಾಗುತ್ತದೆ. ಆ ಸಮಯದಲ್ಲಿ ನಾನು ಹೇಳಿದುದೇನೆಂದರೆ, ಲಾಲಾಜೀ ಸದಾ ಸಂಶಯಾತ್ಮರಾಗಿರುತ್ತಾರೆ; ಮುಸಲ್ಮಾನರ ಉದ್ದೇಶದ ಬಗೆಗೆ ಅವರಿಗೆ ಬಹಳ ಸಂಶಯ. ಆದರೂ ಅವರು ಹೃತ್ಪೂರ್ವಕವಾಗಿ ಬಯಸುತ್ತಾರೆ. ಲಾಲಾಜೀ ಅವರ ಬಗೆಗೆ ನನಗೆ

ತುಂಬಾ ಗೌರವ. ಅವರು ಧೈರ್ಯಶಾಲಿ ಆತ್ಮತ್ಯಾಗಿಗಳು, ಉದಾರ ಸತ್ಯನಿಷ್ಠರು ಹಾಗೂ ದೈವಭೀರುಗಳು–ಎಂಬುದಾಗಿ ನನ್ನ ಭಾವನೆ. ಅವರ ಸ್ವದೇಶ ಪ್ರೇಮ ಶುದ್ಧವಾದುದು. ಅವರ ಹಾಗೆ ಮತ್ತು ಅವರಷ್ಟು ದೇಶದ ಸೇವೆ ಮಾಡಿರುವವರು ಬಹಳ ಕಡಿಮೆ. ಇಂಥ ವ್ಯಕ್ತಿಗಳ ವಿಷಯದಲ್ಲಿ ಅವರಿಗೆ ದುರುದ್ದೇಶವಿರುವುದಾಗಿ ಸಂಶಯಪಡುವುದಾದರೆ, ಅಲೀ ಬಂಧುಗಳ ಮೇಲೆ ಸಂಶಯಪಟ್ಟು ನಿರಾಶರಾದ ಹಾಗೆಯೇ ಈಗಲೂ ಹಿಂದೂ ಮುಸ್ಲಿಂ ಐಕ್ಯತೆಯ ಬಗೆಗೆ ನಿರಾಶರಾಗಬೇಕಾಗುವುದು. ನಾವೆಲ್ಲರೂ ಅಪೂರ್ಣರು; ಒಬ್ಬರೊಬ್ಬರ ಬಗೆಗೆ ನಮ್ಮಲ್ಲಿ ಕೆಟ್ಟ ಅಭಿಪ್ರಾಯ ಮೂಡಿದೆ. ಹಿಂದೂಗಳು, ಮುಸಲ್ಮಾನರು ಹೇಗೆ ಇದೇವೆಯೋ, ಹಾಗೆಯೇ ನಮ್ಮನ್ನು) ಕಂಡುಕೊಳ್ಳೋಣ. ಹಿಂದೂ–ಮುಸ್ಲಿಂ ಐಕ್ಯತೆಯನ್ನು ತಮ್ಮ ಧರ್ಮವೆಂದು ಭಾವಿಸುವವರು, ತಮ್ಮಲ್ಲಿರುವ ಸಾಧನೆಗಳಿಂದಲೇ ಅದನ್ನು ಸಾಧಿಸಲು ಪ್ರಯತ್ನಿಸಬೇಕು. ತನ್ನ ಆಯುಧವನ್ನು ಕೆಟ್ಟದೆನ್ನುವ ಕೆಲಸಗಾರ ತಾನೇ ಕೆಟ್ಟವ. ಕರ್ನಲ್ ಮ್ಯಾಡಕ್ ತಾವು ಸಾಧಾರಣ ಚಾಕುವಿನಿಂದಲೇ ಒಮ್ಮೆ ದೊಡ್ಡ ಆಪೇರಷನ್ ಮಾಡಿದ್ದುದಾಗಿ ಹೇಳಿದರು; ಆಗ ಅವರ ಬಳಿ ಬೇರೆ ಯಾವುದೂ ಆಯುಧ ಇರಲಿಲ್ಲವಂತೆ. ಕುದಿಯುತ್ತಿರುವ ನೀರು ಬಿಟ್ಟು ಜೀವ-ಜಂತು ವಿನಾಶಕ ಔಷಧಿಯೂ ಯಾವುದೂ ಇರಲಿಲ್ಲವಂತೆ. ಅಂತೂ ಧೈರ್ಯದಿಂದ ಕೆಲಸ ಮಾಡಿದರು. ರೋಗಿಯೂ ಉಳಿದುಕೊಂಡ. ನಾವೂ ಒಬ್ಬರಲ್ಲೊಬ್ಬರು ವಿಶ್ವಾಸವಿಟ್ಟರೆ, ನೆಮ್ಮದಿಯಾಗಿ ಇರುವೆವು. ಬಾಯಿಮಾತಿನಲ್ಲಿ ಪರಸ್ಪರ ವಿಶ್ವಾಸ ವ್ಯಕ್ತಪಡಿಸಿ, ಹೃದಯದಲ್ಲಿ ವಿಶ್ವಾಸಕ್ಕೆ ಸ್ಥಾನವೇ ಇರದಿದ್ದರೆ, ಅದು ವಿಶ್ವಾಸ ಅಲ್ಲವೇ ಅಲ್ಲ. ಅದು ನಿಜಕ್ಕೂ ಹೇಡಿತನ. ಹೇಡಿಗಳಿಗಾಗಲಿ, ಹೇಡಿ-ಧೈರ್ಯಶಾಲಿಗಳಿಗಾಗಲಿ ಮೈತ್ರಿ ಬೆಳೆಯುವುದು ಶಕ್ಯವೇ ಇಲ್ಲ.೩೯

ಈರ್ವರೂ ಹಿಂದೂ ಮುಸಲ್ಮಾನ ಐಕ್ಯತೆಯ ವಿರೋಧಿಗಳಲ್ಲ*

ಹಿಂದೂ ಮಹಾಸಭೆಯ ಉತ್ಸಾಹಶಾಲಿ ಸದಸ್ಯರೊಬ್ಬರು "ಯಂಗ್ ಇಂಡಿಯಾ" ಅಥವಾ 'ನವಜೀವನ' ದಲ್ಲಿ ಉತ್ತರಿಸಬೇಕೆಂದು ನನಗೆ ಹದಿನೈದು ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಇನ್ನೊಬ್ಬ ಮಹನೀಯರು ಇದೇ ಪ್ರಶ್ನೆಗಳ ಮಾದರಿಯಲ್ಲಿ ಇದೇ ವಿಷಯದ ಮೇಲೆ ನನ್ನೊಡನೆ ಚರ್ಚಿಸಿದ್ದಾರೆ. ಆ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಲು ನಾನು ಬಯಸುವುದಿಲ್ಲ; ಆದರೆ ಅದರಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡದಿರುವ ಧೈರ್ಯವನ್ನೂ ಮಾಡಲಾರೆ; ಏಕೆಂದರೆ ಆ ಪ್ರಶ್ನೆಗಳ ಮೂಲಕ ಪಂಡಿತ ಮದನ ಮೋಹನ ಮಾಲವೀಯಜೀ ಹಾಗೂ ಲಾಲಾಜೀ ಅವರ ಮೇಲೆ ವರ್ತಮಾನ ಪತ್ರಿಕೆಗಳಲ್ಲಿ ಆಗುತ್ತಿರುವ ಆಕ್ರಮಣದತ್ತ ನನ್ನ ಗಮನವನ್ನು ಸೆಳೆಯಲಾಗಿದೆ. ನನ್ನನ್ನು ಕೇಳಿರುವ ಪ್ರಶ್ನೆಗಳಿವು :—

"ಅವರ ಸುದುದ್ದೇಶದ ಬಗೆಗೆ ನಿಮಗೆ ಅನುಮಾನವಿದೆಯೆ? ಅವರು ನೇರವಾಗಿ ಅಥವಾ ಬೇರೆ ರೀತಿಯಲ್ಲಿ ಹಿಂದೂ-ಮುಸ್ಲಿಮ್ ಐಕ್ಯತೆಯ ವಿರೋಧಿಗಳೆಂದು ಭಾವಿಸುವಿರಾ? ಅವರು ತಿಳಿದೂ ತಿಳಿದೂ ದೇಶಕ್ಕೆ ಯಾವುದಾದರೂ ರೀತಿಯಲ್ಲಿ ಹಾನಿ ಉಂಟುಮಾಡಿಯಾರೆಂದು ನಿಮಗೆ ಅನಿಸುತ್ತದೆಯೆ?"

ಈ ದೇಶಭಕ್ತರಾದ ವೀರರಮೇಲೆ ಈ ರೀತಿ ಆಕ್ರಮಣ ಆಗುವುದನ್ನು ನಾನು ಅನೇಕ ಬಾರಿ ನೋಡಿದ್ದೇನೆ. ನನ್ನ ಬಹುಮಂದಿ ಮುಸಲ್ಮಾನ ಮಿತ್ರರಿಗೆ ಈ ಇಬ್ಬರು ಪ್ರಸಿದ್ಧ ಸಾರ್ವಜನಿಕ ಕಾರ್ಯಕರ್ತರ ಬಗೆಗೆ ಸಂಪೂರ್ಣ ಅವಿಶ್ವಾಸ ಇರುವುದನ್ನೂ ನಾನು ಬಲ್ಲೆ. ಆದರೆ ಅನೇಕ ವಿಷಯಗಳಲ್ಲಿ ಅವರೊಡನೆ ನಾನು ಎಷ್ಟೇ ಮತಭೇದ ಹೊಂದಿರಲೊಲ್ಲೆನೇಕೆ, ಅವರಿಬ್ಬರಲ್ಲಿ ಯಾರಮೇಲೂ ನಾನು ಅವಿಶ್ವಾಸ ಇಡಲಾರೆ. ಮುಸಲ್ಮಾನರು ಮಾಲವೀಯಜೀ ಹಾಗೂ ಲಾಲಾಜೀ ಅವರ ಮೇಲೆ ಆಕ್ಷೇಪಣೆ ಮಾಡುತ್ತಿರು

---

* ಪಂಡಿತ ಮದನಮೋಹನ ಮಾಲವೀಯರು ಮತ್ತು ಲಾಲಾಜೀ.

ವಂತೆಯೇ ಹಿಂದೂಗಳೂ ಸುಪ್ರಸಿದ್ಧರಾದ ಮುಸಲ್ಮಾನರ ಮೇಲೆ ಆಕ್ಷೇಪಣೆ ಮಾಡುತ್ತಿರುವುದನ್ನು ನಾನು ಕಂಡಿದ್ದೇನೆ. ಆದರೆ ಅವುಗಳ ಪೈಕಿ ಯಾವುದೇ ಪಕ್ಷದ ಆಕ್ಷೇಪಣೆಯನ್ನು ನಾನು ನಂಬಲಾರೆ, ; ಹಾಗೂ ನನ್ನ ಅಭಿಪ್ರಾಯವನ್ನು ಯಾವುದೇ ಪಕ್ಷಕ್ಕೂ-ಮನವರಿಕೆ ಮಾಡಿಕೊಡಲು ಆಗಿಲ್ಲ. ಮಾಲವೀಯಾಜೀ ಲಾಲಾಜೀ ಇಬ್ಬರೂ ಕಟಿಬದ್ಧರಾದ ದೇಶಸೇವಕರು. ಇಬ್ಬರೂ ಬಹು ದಿನಗಳಿಂದ ದೇಶಕ್ಕೆ ಪ್ರಶಂಸನೀಯವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅವರೊಡನೆ ಮನಬಿಚ್ಚಿ ಮಾತನಾಡುವ ಸೌಭಾಗ್ಯ ನನಗೆ ಸಿಕ್ಕಿದೆ, ಆದರೆ ಯಾವೊಂದು ಸಂದರ್ಭದಲ್ಲೂ ಅವರು ಮುಸಲ್ಮಾನ ವಿರೋಧಿಗಳಾಗಿ ನನಗೆ ಕಂಡುಬರಲಿಲ್ಲ. ಆದರೆ ಮುಸಲ್ಮಾನ ನಾಯಕರ ಬಗೆಗೆ ಅವರಿಗೆ ಅವಿಶ್ವಾಸವೇ ಇಲ್ಲವೆಂದಲ್ಲ. ಆದರೆ ಈ ಬಹಳ ಕಠಿಣವಾದ ಹಾಗೂ ಸೂಕ್ಷ್ಮವಾದ ಪ್ರಶ್ನೆಯ ಪರಿಹಾರದ ಬಗೆಗೆ ನಾವೆಲ್ಲರೂ ಏಕಾಭಿಪ್ರಾಯ ಹೊಂದಿದ್ದೇವೆ. ಐಕ್ಯತೆಯ ಆವಶ್ಯಕತೆಯ ಬಗೆಗೆ ಅವರಿಗೆ ಸ್ವಲ್ಪವೂ ಸಂಶಯವಿಲ್ಲ. ತಮ್ಮ ವಿಚಾರಕ್ಕೆ ಅನುಗುಣವಾಗಿ ಅದರ ಸಲುವಾಗಿ ಅವರು ಪ್ರಯತ್ನವನ್ನೂ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಮುಖಂಡರ ಉದ್ದೇಶದ ಬಗೆಗೆ ಸಂಶಯ ಪಡುವುದರಿಂದಲೇ ಐಕ್ಯತೆ ಆಗುವ ಬಗೆಗೆ ಸಂಶಯ ವ್ಯಕ್ತಪಡಿಸಿದಂತೆ ಆಗುವುದು. ನಾವು ಸಂಧಿ ಮಾಡಿಕೊಂಡ ದಿನ—ಒಂದಲ್ಲ ಒಂದು ದಿನ ಮಾಡಿಕೊಳ್ಳಲೇಬೇಕಾಗುವುದು—ಮುಸಲ್ಮಾನರ ಮೇಲೆ ಮೌಲಾನಾ ಅಬುಲ್ ಕಲಾಮ್ ಆಜಾದರ ಹಾಗೂ ಹಕೀಮ ಸಾಹೇಬರ ಮಾತಿನ ಪ್ರಭಾವ ಹೇಗೆ ಬೀಳುವುದೋ ಹಾಗೆಯೇ ಇವರ ಮಾತಿನ ಪ್ರಭಾವ ಹಿಂದೂ ಸಮಾಜದ ಮೇಲೆ ಬೀಳುವುದು.೪೦

ಲಾಲಾಜೀಗೆ ಲಾಠೀಪ್ರಹಾರ*

ನಾನು ಲಾಲಾ ಲಜಪತರಾಯರಿಗೆ ತಂತಿಯ ಮೂಲಕ ಧನ್ಯವಾದ ಕೊಟ್ಟು, ಅವರ ದೇಹಸ್ಥಿತಿಯನ್ನು ವಿಚಾರಿಸಿದ್ದೆ. ಅದಕ್ಕೆ ಉತ್ತರವಾಗಿ ತಕ್ಷಣವೇ ಲಾಲಾಜೀ ಅವರೂ ತಂತಿಯನ್ನು ಕಳುಹಿಸಿದರು. ಈಗಿನವರಲ್ಲಿ ಬಹುಮಂದಿ ಇನ್ನೂ ಹರೆಯದವರಾಗಿದ್ದಾಗಲೇ ಲಾಲಾಜೀ ಅವರು "ಪಂಜಾಬ್ ಕೇಸರಿ" ಎಂಬ ಹೆಸರನ್ನು ಪಡೆದಿದ್ದರು. ಅವರ ಪರವಾಗಿ ಅಥವಾ ವಿರೋಧವಾಗಿ ಯಾರು ಏನೇ ಹೇಳಲಿ, ಇಂದಿಗೂ ಅವರು ಪಂಜಾಬಿನ ಎಲ್ಲರಿಗಿಂತ ದೊಡ್ಡ ನಿರ್ವಿವಾದ ನಾಯಕರು. ಇಡೀ ಭಾರತವರ್ಷದಲ್ಲಿ ಅತೀವ ಜನಪ್ರಿಯರೂ ಗೌರವಾನ್ವಿತರೂ ಆದ ನಾಯಕರಲ್ಲಿ ಒಬ್ಬರು ಅವರು ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ಯೂರೋಪಿನಲ್ಲೂ ಅವರ ಹೆಸರು ಪ್ರಸಿದ್ಧವಾಗಿದೆ. ಮನಸ್ಸಿನಲ್ಲಿರುವುದನ್ನು ಕೂಡಲೇ ಸ್ಪಷ್ಟವಾಗಿ ಹೇಳಿಬಿಡುವಂಥ ಹಲವೇ ಮಂದಿಯಲ್ಲಿ ಇವರೊಬ್ಬರು.

ಆದರೆ, ಲಾಲಾಜೀ ತಮ್ಮ ರೂಢಿಗೆ ಬಲಿಯಾಗಿದ್ದರು. ಯಾವುದನ್ನೂ ಮನಸ್ಸಿನಲ್ಲಿ ಮುಚ್ಚಿಟ್ಟುಕೊಳ್ಳಲು ಅವರಿಂದ ಆಗುತ್ತಿರಲಿಲ್ಲ. ಮನಸ್ಸಿಗೆ ಬಂದ ವಿಚಾರವನ್ನು ಹೇಳಿಯೇಬಿಡುತ್ತಿದ್ದರು. ಆದಕಾರಣ, 'ಲಾಲಾಜೀ ಅವರಿಗೆ ಏಟು' ಎಂಬ ಶೀರ್ಷಿಕೆಯನ್ನೂ, ಅದರ ವಿವರಗಳನ್ನೂ ಓದಿದಾಗ ನನ್ನ ಬಾಯಿಂದ 'ಶಹಬಾಶ್' ಎಂಬ ಶಬ್ದ ಹೊರಟಿತು. ಇನ್ನು ನಮಗೆ ಸ್ವರಾಜ್ಯ ಸಿಕ್ಕುವುದು ಸಾವಕಾಶವಾಗಲಿಕ್ಕಿಲ್ಲ. ಏಕೆಂದರೆ, ನಮ್ಮ ಕ್ರಾಂತಿ ಹಿಂಸಾತ್ಮಕವಾದುದಾಗಿರಲಿ ಅಥವಾ ಅಹಿಂಸಾತ್ಮಕವಾದುದಾಗಿರಲಿ, ಸ್ವತಂತ್ರವಾಗುವ ಮೊದಲು ನಾವು ಸಾಯುವ ಕಲೆಯನ್ನು ಕಲಿಯಬೇಕು. ಅದಲ್ಲದೇ ಪ್ರಚಂಡ ಪ್ರಯತ್ನ ಸಾಗಿದಲ್ಲದೆ ಅಹಿಂಸಾತ್ಮಕ ಒತ್ತಾಯಕ್ಕೂ ಶಾಸಕರು ಸೊಪ್ಪು ಹಾಕುವುದಿಲ್ಲ. ಆದರ್ಶ ಹಾಗೂ ಸಂಪೂರ್ಣ

---

*ಸೈಮನ್ ಆಯೋಗ ಲಾಹೋರಿಗೆ ಬಂದಾಗ ಅದಕ್ಕೆ ವಿರೋಧ ಪ್ರಕಟಿಸಲು ಹೊರಡಿಸಿದ್ದ ಮೆರವಣಿಗೆಯ ನಾಯಕತ್ವವನ್ನು ಲಾಲಾಜಿ ಅವರು ವಹಿಸಿದ್ದರು. ಪೊಲೀಸರು ಅವರ ಮೇಲೆ ಲಾಠೀ ಪ್ರಹಾರ ಮಾಡಿದ್ದರು.

ಅಹಿಂಸೆಯ ಮುಂದೆ ಶಾಸಕರ ವೃತ್ತಿ ಸಂಪೂರ್ಣವಾಗಿ ಬದಲಾಗುವ ಸಂಭವವೂ ಇದೆ. ಆದರ್ಶ ಹಾಗೂ ಸಂಪೂರ್ಣ ಕಾರ್ಯಕ್ರಮ ರಚಿಸ ಬಹುದಾದರೂ, ಅದನ್ನು ಸಂಪೂರ್ಣವಾಗಿ ಆದರ್ಶಯುತವಾಗಿ ಅನುಸರಿಸು ವುದು ಈಗಲೇ ಶಕ್ಯವಾಗಲಿಕ್ಕಿಲ್ಲ. ಆದಕಾರಣ ನಾಯಕರ ಮೇಲೆ ಪ್ರಹಾರ ಅಥವಾ ಗೋಲಿಬಾರು ಆಗುವುದು ಎಲ್ಲಕ್ಕಿಂತ ಸುಲಭವಾದ ಮಾತು ಇದುವರೆಗೆ ಅಪರಿಚಿತ ವ್ಯಕ್ತಿಗಳು ನೋವು ಅಥವ ಸಾವಿಗೆ ಗುರಿ ಯಾದಾರೆ. ಹಲವು ಮಂದಿಯ ಮೇಲೆ ಗೋಳಿಬಾರು ಆದರೆ, ದೇಶದ ಗಮನ ಎಷ್ಟರ ಮಟ್ಟಿಗೆ ಆಕರ್ಷಿತವಾಗುವುದೋ ಅದಕ್ಕಿಂತ ಹೆಚ್ಚಾಗಿ ಲಾಲಾಜೀ ಅವರ ಮೇಲೆ ಪ್ರಹಾರವಾದರೆ ಆಗುತ್ತದೆ. ಲಾಲಾಜೀ ಹಾಗೂ ಇತರ ನಾಯಕರ ಮೇಲೆ ಪ್ರಹಾರವಾದುದರಿಂದ ಹಿಂದೂಸ್ಥಾನದ ರಾಜ ನೀತಿಜ್ಞರು ವಿಚಾರದಲ್ಲಿ ಮುಳುಗಿದ್ದಾರೆ. ಸರಕಾರದ ಶಾಂತಿಯೂ ಭಂಗವಾಗಲಿಕ್ಕೆ ಸಾಕು.೪೧

ಮತಭೇದ ಎಷ್ಟೇ ಇದ್ದರೂ ಪ್ರೇಮಭಾವ ಕುಂದಬಾರದು

ಲೋಕಮಾನ್ಯರ ಈ ಜನ್ಮಭೂಮಿ ಇಡೀ ಭಾರತಕ್ಕೆ ತೀರ್ಥಕ್ಷೇತ್ರ-ಎಂಬುದಾಗಿ ಗಾಂಧೀಜಿ ತಿಳಿಸಿದರು. ಶ್ರೀ ಸಾವರಕರರೂ ಇಲ್ಲಿಯವರೇ ಎಂಬುದನ್ನು ನೆನಪು ಮಾಡಿಕೊಟ್ಟು, ಅವರೊಡನೆ ತಮ್ಮ ಪರಿಚಯ, ಇಂಗ್ಲೆಂಡಿನಲ್ಲಿ ನಡೆದ ಮಾತುಕತೆ, ಅವರ ಸ್ವಾರ್ಥತ್ಯಾಗ ಹಾಗೂ ದೇಶ ಸೇವೆಯ ಬಗೆಗೆ ಪ್ರಸ್ತಾವ ಮಾಡಿ, ಅವರೊಡನೆ ತೀವ್ರ ಭಿನ್ನಾಭಿಪ್ರಾಯ ವಿದ್ದರೂ, ಸ್ನೇಹ ಮೊದಲಿನಂತೆಯೇ ನಡೆದುಬಂದಿದೆಯೆಂದು ತಿಳಿಸಿದರು. "ಮತಭೇದ ಎಷ್ಟೇ ಇದ್ದರೂ, ಪ್ರೇಮಭಾವ ನಡೆದುಕೊಂಡೇ ಬರಬೇಕು. ಹಾಗಾಗದಿದ್ದರೆ ನಾನು ನನ್ನ ಪತ್ನಿಗೂ ಶತ್ರುವಾಗಬೇಕಾದೀತು. ಮತ ಭೇದವೇ ಇರದ ಯಾವ ಇಬ್ಬರು ವ್ಯಕ್ತಿಗಳು ಈ ಪ್ರಪಂಚದಲ್ಲಿ ಇರುವು ದನ್ನು ನಾ ಕಾಣೆ. ಗೀತೆಯ ಸಮದೃಷ್ಟಿಯನ್ನು ಒಪ್ಪುವ ನಾನು ತಾಯಿ-

ತಂದೆ ಸಹೋದರ-ಸಹೋದರಿ! ಅಥವಾ ಪತ್ನಿಯೊಡನೆ ಯಾವ ಪ್ರೇಮ ಇಟ್ಟುಕೊಂಡಿರುವೆನೋ ಅಷ್ಟನ್ನೇ ಮತ-ಭೇದ ಇರುವವರೊಡನೆಯೂ ಇಟ್ಟುಕೊಳ್ಳುವ ಪ್ರಯತ್ನವನ್ನು ನನ್ನ ಜೀವನದಲ್ಲಿ ನಡೆಸಿದೇನೆ."

ಸಭೆಗೆ ಹೋಗುವ ಮುನ್ನ ಗಾಂಧೀಜೀ ಗಡೀಪಾರು ಶಿಕ್ಷೆಯ ತಪಶ್ಚರ್ಯೆ ಮಾಡಿ ಮನೆಗೆ ಹಿಂತಿರುಗಿದ್ದ ಸಾವರಕರರ ಮನೆಗೆ ಹೋಗಿ ಅವರನ್ನು ಭೆಟ್ಟಿಯಾದರು. ೫-೧೦ ನಿಮಿಷಗಳಲ್ಲಿ ಎಷ್ಟು ಮಾತನಾಡಲು ಸಾಧ್ಯ? ಅಸ್ಪೃಶ್ಯತೆ ಹಾಗೂ ಶುದ್ಧಿಯ ಸಂಬಂಧದಲ್ಲಿ ಅವರ ವಿಚಾರಗಳಿಗೆ ವಿರೋಧ ಸ್ವರೂಪ ಕೊಡುವ ಅಂಶ ಗಾಂಧೀಜೀ ಅವರಿಗೆ ತಿಳಿಯಿತ್ತು ಇನ್ನೂ ಹೆಚ್ಚಿನ ಚರ್ಚೆಗಾಗಿ ಪತ್ರವ್ಯವಹಾರ ಮಾಡುವಂತೆ ಸಾವರಕರರನು. ಆಗ್ರಹಪಡಿಸಿದರು :—

"ಸತ್ಯದ ಪ್ರೇಮಿಯಾಗಿ, ಸತ್ಯದ ಸಲುವಾಗಿ ಹೋರಾಡುವವನಾಗಿ ನಿಮ್ಮಲ್ಲಿ ನನಗೆ ಎಷ್ಟು ಗೌರವ ಇದೆಯೆಂಬುದು ನಿಮಗೆ ಗೊತ್ತು. ಇಷ್ಟಕ್ಕೂ ನಮ್ಮಿಬ್ಬರ ಉದ್ದೇಶ ಒಂದೇ. ಆದಕಾರಣ ಯಾವ ಯಾವ ವಿಷಯಗಳಲ್ಲಿ ಚರ್ಚೆಮಾಡಲು ಬಯಸುವಿರೋ ಆ ಬಗೆಗೆ ಧಾರಾಳವಾಗಿ ಪತ್ರವ್ಯವಹಾರ ನಡೆಸಿರಿ. ನೀವು ಹಾಗೆ ಅಪೇಕ್ಷಿಸುವುದಾದರೆ ಶುದ್ಧಿ, ಖಾದೀ ಮೊದಲಾದ ವಿಷಯಗಳ ಬಗೆಗೆ ಸ್ಪಷ್ಟೀಕರಣ ನೀಡಲು ಎರಡು ಮೂರು ದಿನ ಅವಕಾಶ ಮಾಡಿಕೊಂಡು ರತ್ನಗಿರಿಗೆ ಬಂದು ನಿಮ್ಮೊಡನೆ ತಂಗಲಿಕ್ಕೂ ನಾನು ಸಿದ್ಧ."

ಶ್ರೀ ಸಾವರಕರರು "ನಿಮ್ಮಂಥ 'ಮುಕ್ತ'ರನ್ನು 'ಬಂಧಿತ'ರನ್ನಾಗಿ ಮಾಡುವುದು ನನಗೆ ಸೇರದು"—ಎಂಬುದಾಗಿ ಹೇಳಿ ಪತ್ರವ್ಯವಹಾ ಮಾಡುವ ಸಲಹೆಯನ್ನು ಸಂತೋಷದಿಂದ ಸ್ವೀಕರಿಸಿದರು.೪೨

ಪೋಲಕ್ ದಂಪತಿಗಳು

ಅವರು (ಪೋಲಕ್) ಶೀಘ್ರ ಕೋಪಿಷ್ಟರು. ಅವರೂ, ಶ್ರೀಮತಿ ಪೋಲಿಕರೂ ಮೊದಲಿಂದಲೇ ಸ್ನೇಹಿತರಾಗಿದ್ದರು. ಎಥಿಕಲ್ ಸೊಸೈಟಿ

ಸದಸ್ಯರಾದಾಗಿನಿಂದ ಅವರಲ್ಲಿ ಸಖ್ಯ ಬೆಳೆಯಿತು, ಕೊನೆಗೆ ನಾನು ಇಬ್ಬರಿಗೂ ಮದುವೆ ಮಾಡಿಸಿದೆ. ಸ್ವಲ್ಪ ಹಣ ಕೂಡಿಹಾಕಿಕೊಂಡು ಮದುವೆ ಮಾಡಿಕೊಳ್ಳಬೇಕೆಂಬ ವಿಚಾರ ಪೋಲಕರಿಗೆ ಇತ್ತು. "ಇದು ಕೆಲಸಕ್ಕೆ ಬಾರದ ವಿಚಾರ. ನಿಮಗೆ ಹಣದ ಆವಶ್ಯಕತೆ ಉಂಟಾದರೆ, ನಾನು ಇಲ್ಲವೆ?" ಎಂದು ನಾನು ಅವರಿಗೆ ಹೇಳಿದೆ. ಪೋಲಕರದು ಪ್ರೇಮ ಸಂಬಂಧ.೪೩

ಸಾಮಾನ್ಯ ಟಾಮಿಯೂ ನಮಗಿಂತ ದೊಡ್ಡವ

ಎಲ್ಲರಿಗಿಂತ ಸ್ಪಷ್ಟವಾಗಿ ಮಾತನಾಡುವವರೆಂದರೆ ಬಾಲ್ಡ್‌ವಿನ್* ಅವರು. 'ಇಂಗ್ಲಿಷರ ರಾಜ್ಯದಿಂದ (ಶಾಸನ) ನಮಗೆ ಸ್ವಲ್ಪವೂ ಒಳಿತಾಗಿಲ್ಲಸೆಂಬುದು ನನ್ನ ವಾದ'—ಎಂಬುದಾಗಿ ಅವರಿಗೆ ಹೇಳಿದೆ. "ನಮ್ಮವರು ಹಿಂದೂಸ್ಥಾನದಲ್ಲಿ ಮಾಡಿರುವ ಕೆಲಸದ ಬಗೆಗೆ ನನಗೆ ಹೆಮ್ಮೆ', ಎಂಬುದಾಗಿ ಅವರು ಹೇಳಿದರು. ಅದರಲ್ಲಿ ಅಚ್ಚರಿಯೇನು? ಒಬ್ಬ ಸಾಮಾನ್ಯ ಟಾಮಿ (ಸಿಪಾಯಿ) ಯೂ ನಮಗಿಂತ ದೊಡ್ಡವ ಎಂಬುದಾಗಿ ಅವರು ನಂಬಿದ್ದರು.೪೪

ತಾರುಣ್ಯದ ಉದ್ಯಮಶೀಲತೆಯುಳ್ಳ ವೃದ್ಧ

ತಾರುಣ್ಯದ ಉದ್ಯಮ-ಶೀಲತೆ ಇರುವ ಅನೇಕ ವೃದ್ಧರನ್ನು ನಾವು ಬಲ್ಲೆವು; ಹಾಗೆಯೇ ತರುಣರಾಗಿದ್ದರೂ, ಉದ್ಯಮದ ದೃಷ್ಟಿಯಿಂದ ವೃದ್ಧರಂತೆ ಶಿಥಿಲರಾಗಿರುವ ಅನೇಕ ನವತರುಣರನ್ನೂ ನಾವು ಕಂಡಿದ್ದೇವೆ.

---

*ಇಂಗ್ಲೆಂಡಿನ ಮುಖ್ಯಮಂತ್ರಿಯಾಗಿದ್ದರು.

ವಿದುಷಿ ಆನಿ ಬೆಸೆಂಟ್† ವೃದ್ಧೆಯಾಗಿದ್ದರೂ ತರುಣರಂತೆ ಕೆಲಸ ಮಾಡ ತ್ತಾರೆ. ಸಂಯಮದಲ್ಲಿ ಅವರಿಗೆ ಸರಿಗಟ್ಟಬಲ್ಲವರು ಅಪರೂಪ. ಉತ್ಸಾಹ ದಲ್ಲೂ ಅವರು ಯಾರಿಗೂ ಕಡಿಮೆಯಿಲ್ಲ.೪೫

ಎಲ್ಲವೂ ಧರ್ಮದ ಹೆಸರಿನಲ್ಲಿಯೇ

ಬರ್ನಾರ್ಡ್ ಷಾ* ಆಂಗ್ಲೇಯರನ್ನು 'ಉಚ್ಚ'ರೆಂದು ಭಾವಿಸು ತ್ತಾರೆ. ಅವರಷ್ಟು ಸುಂದರರು ಇನ್ನಾರು ಎಂಬುದಾಗಿ ಇಂಗ್ಲೀಷರು ಭಾವಿಸುತ್ತಾರೆ. ಅವರು ಒಳ್ಳೆಯ ವಿನೋದಪ್ರಿಯರು; ಹೀಗೆ ಹೇಳು ತ್ತಾರೆ: ಇಂಗ್ಲೀಷರು ತಪ್ಪನ್ನೇ ಮಾಡುವುದಿಲ್ಲ; ಅವರು ಧರ್ಮದ ಸಲು ವಾಗಿಯೇ ಎಲ್ಲವನ್ನೂ ಮಾಡುತ್ತಾರೆ; ಧರ್ಮದ ಸಲುವಾಗಿಯೇ ಯುದ್ಧ ಮಾಡುತ್ತಾರೆ. ಅವರು ಲೂಟಿಮಾಡಿದರೂ ಧರ್ಮದ ಹೆಸರಿನಲ್ಲಿಯೇ ಮಾಡುತ್ತಾರೆ—ಏಕೆಂದರೆ ಯಾರ ಬಳಿಯಲ್ಲೇ ಆಗಲಿ, ಹೆಚ್ಚು ಹಣ ಏಕೆ ಇರಬೇಕು? ಅವರು ನಮ್ಮನ್ನು ಗುಲಾಮರನ್ನಾಗಿ ಮಾಡುವುದೂ ಧರ್ಮದ ಹೆಸರಿನಲ್ಲಿಯೇ—ನಮ್ಮನ್ನು ಒಳ್ಳೆಯವರನ್ನಾಗಿ ಮಾಡುವ ಸಲುವಾಗಿ. ರಾಜನನ್ನು ಅವರು ಕೊಲೆಮಾಡುವುದೂ ಧರ್ಮದ ಸಲುವಾಗಿ—ಅರ್ಥಾತ್ ಜನಮತ'ದ ಸಲುವಾಗಿ. ಅವರು ಎಲ್ಲ ಕೆಲಸವನ್ನೂ ಧರ್ಮದ ಹೆಸರಿ ನಲ್ಲಿಯೇ ಮಾಡುತ್ತಾರೆ!೪೬

---

† ಬ್ರಹ್ಮ ವಿದ್ಯಾ ಸಮಾಜದ ಸ್ಥಾಪಕರಲ್ಲೊಬ್ಬರು, ಭಾರತಪ್ರೇಮಿ.

* ಇಂಗ್ಲೆಂಡಿನ ಪ್ರಸಿದ್ಧ ನಾಟಕಕಾರ

ಟಿಪ್ಪಣಿ

ಹಕೀಂ ಅಜಮಲ್ ಖಾನ್ (ಪುಟ ೩)

ಹಿಂದೂ–ಮುಸ್ಲಿಂ ಐಕ್ಯತೆಯ ಉದ್ಯಮಕ್ಕೆ ಅನುಪಮವಾದ ಶಕ್ತಿಯನ್ನು ಒದಗಿಸಿದವರು. ದೆಹಲಿಯಲ್ಲಿ ೧೯೧೧ರಲ್ಲಿ ನಡೆದ ರಾಷ್ಟ್ರಮಹಾ ಸಭೆಗೆ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ೧೯೨೧ ಅಹಮದಾಬಾದಿನಲ್ಲಿ ನಡೆದ ಅಧಿವೇಶನಕ್ಕೆ ಚಿತ್ತರಂಜನದಾಸರು ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಆದರೆ ದಾಸರು ಬಂಧಿಸಲಟ್ಟಿದ್ದರಿಂದ ಹಕೀಂ ಅಜಮಾಲ್‌ಖಾನರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು. ದೆಹಲಿಯಲ್ಲಿರುವ ತಿಬ್ಬಿ (ಯುನಾನಿ) ಕಾಲೇಜ್ ಮತ್ತು ಜಾಮಿಯ ಮಿಲಿಯಾ ವಿದ್ಯಾಸಂಸ್ಥೆಗಳ ಸಂಸ್ಥಾಪಕರು.

ಡಾ. ಅನ್ಸಾರಿ (ಪುಟ ೭)

ಖಿಲಾಫತ್ ಆಂದೋಲನದಲ್ಲಿ ಮುಖ್ಯ ಪಾತ್ರವನ್ನು ವಹಿಸಿದರು. ಪ್ರಸಿದ್ಧ ಶಸ್ತ್ರ ವೈದ್ಯರು. ೧೯೨೭ ರಲ್ಲಿ ಮದರಾಸಿನ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು.

೧೯೨೪ ರಲ್ಲಿ ಗಾಂಧೀಜೀಯವರು ಕೋಮುವಾರು ಸೌಹಾರ್ದಕ್ಕಾಗಿ ೨೧ ದಿನಗಳ ಉಪವಾಸವನ್ನು ದೆಹಲಿಯಲ್ಲಿ ಇವರ ಮನೆಯಲ್ಲೇ ಆಚರಿಸಿದರು.

ಅಲೀ ಬಂಧುಗಳು (ಪುಟ ೧೩)

ಮೌಲಾನಾ ಶೌಕತ್ ಅಲೀ 'ದೊಡ್ಡಅಣ್ಣ'ನವರೆಂದು, ಪ್ರಸಿದ್ಧರಾಗಿದ್ದರು. ದೊಡ್ಡ ಆಕಾರ, 'ಏಳು ಅಡಿ ಎತ್ತರ, ಮೂರು ಅಡಿ ಅಗಲ'ವೆಂದು ಅವರ ತಮ್ಮನೇ ವಿನೋದ ಮಾಡುತ್ತಿದ್ದರು. ೧೯೧೪ ರಲ್ಲಿ ಮಹಾಯುದ್ಧ ಆರಂಭವಾದಾಗ ಈರ್ವರೂ ಸರಕಾರದಿಂದ ಬಂಧಿಸಲ್ಪಟ್ಟರು, 'ದೊಡ್ಡ'ಅಣ್ಣ 'ಹಮದರ್ದ್' ಎನ್ನುವ ಉರ್ದು ದೈನ ಪತ್ರಿಕೆಯ ಸಂಪಾದಕರು–ಮಹಮದ್‌ಅಲೀ ಕಾಮ್ರೇಡ್ (Comrade) ಎನ್ನುವ ಇಂಗ್ಲಿಷ್ ವಾರ ಪತ್ರಿಕೆಯ ಸಂಪಾದಕರು. ಅವರು ಲೇಖನಗಳಿಂದ ಸರ್ಕಾರದ ಆಗ್ರಹಕ್ಕೆ ಗುರಿಯಾದರು. ೧೯೧೯ ಡಿಸೆಂಬರ್, ಅಮೃತಸರದ ಕಾಂಗ್ರೆಸ್ ಅಧಿವೇಶನದ ವೇಳೆಗೆ ಬಿಡುಗಡೆಯಾದರು. ನೇರವಾಗಿ ಅಮೃತಸರಕ್ಕೆ ಬಂದರು. ಅದೇ ಕಾಂಗ್ರೆಸ್ಸಿನೊಂದಿಗೆ ಅವರ ಪ್ರಥಮ ಸಂಪರ್ಕ.

ದೊಡ್ಡ ಅಣ್ಣನೂ ಗಾಂಧೀಜೀಯವರೂ ಹಿಂದೂ ಮುಸ್ಲಿಂ ಐಕ್ಯತೆಯ ಸಂದೇ ಶವನ್ನುಸಾರುತ್ತ ಭಾರತಾದ್ಯಂತ ಸಂಚಾರ ಮಾಡಿದರು.

ಮೌಲಾನಾ ಮುಹಮ್ಮದ್ ಅಲೀ ಅವರು ಆಕ್ಸಫರ್ಡ್ ವಿಶ್ವವಿದ್ಯಾನಿಲಯ ಪದವೀಧರರು, ಉಗ್ರವಾದಿಗಳು. ೧೯೨೩ ರಲ್ಲಿ ಕಾಕಿನಾಡಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದರು.

೧೯೨೮ ವರೆಗೂ ಕಾಂಗ್ರೆಸ್ಸಿನೊಂದಿಗೆ ಕೆಲಸಮಾಡಿ ಅನಂತರ ಭಿನ್ನಾಭಿಪ್ರಾಯ ತಾಳಿ ದೂರವಾದರು.

ಶ್ರೀನಿವಾಸಯ್ಯಂಗಾರ್ (ಪುಟ. ೧೭)

ಮದರಾಸಿನಲ್ಲಿ ಪ್ರಸಿದ್ಧರಾದ ವಕೀಲರು. ಕಾಂಗ್ರೆಸ್ ಸಂಸ್ಥೆ ಶಾಸನ ಸಭಾ ಪ್ರವೇಶಕ್ಕೆ ಅನುಮತಿಯಿತ್ತಾಗ, ಐಯ್ಯಂಗಾರ್ಯರು ಮದರಾಸ್ ಪ್ರಾಂತದಲ್ಲಿ ಮುಂದಾಳುಗಳಾಗಿ ಜಸ್ಟಿಸ್ ಪಕ್ಷಕ್ಕೆ ಸೋಲುಂಟಾಗುವಂತೆ ಮಾಡಿ ಕಾಂಗ್ರೆಸ್ಸನ್ನು ಬಲಪಡಿಸಿದರು. ತ್ಯಾಗಮೂರ್ತಿಗಳು. ಗೌಹಾತಿ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದರು. (೧೯೨೬) ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಬಹಳ ಶ್ರಮಿಸಿದರು.

ಎಸ್. ರಂಗಸ್ವಾಮಿ ಅಯ್ಯಂಗಾರ್ (ಪುಟ. ೧೮)

ಹಿಂದೂ ಪತ್ರಿಕೆಯ ಕಸ್ತೂರಿ ರಂಗಅಯ್ಯಂಗಾರ್ಯರ ಸೋದರರ ಮಕ್ಕಳು. ಉತ್ತಮ ಬರೆಹಗಾರರು. ಹಿಂದೂ ಪತ್ರಿಕೆಯ ಇವರ ಸಂಪಾದಕೀಯ ಲೇಖನಗಳು ಬಹಳ ಪ್ರಸಿದ್ಧವಾಗಿದ್ದವು ; ಅಕಾಲ ಮೃತ್ಯುವಿಗೆ ತುತ್ತಾದರು.

ಅರುಣಾ ಆಸಫ್ ಅಲೀ (ಪುಟ. ೧೮)

೧೯೪೨ರ ಆಂದೋಲನದಲ್ಲಿ ಎಲ್ಲವನ್ನು ತ್ಯಾಗಮಾಡಿ ಗುಪ್ತವಾಗಿ ಕಾಂಗ್ರೆಸ್ ಕೆಲಸವನ್ನು ಬಹಳ ದಿಟ್ಟತನದಿಂದ ನಡೆಸಿದ ವೀರಾಗ್ರಣಿ.

ಡಾ. ಮೊಹಮ್ಮದ್ ಇಕ್ಬಾಲ್ (ಪುಟ. ೧೮)

ಉರ್ದು ರಾಷ್ಟ್ರಕವಿಯೆಂದು ಹೆಸರು ಗಳಿಸಿದವರು. “ ಹಿಂದುಸ್ತಾನ್ ಹಮಾರಾ ” ಎನ್ನುವ ಗೀತವನ್ನು ಬರೆದವರು. ಪಾಕಿಸ್ತಾನದ ವಾದವನ್ನು ಸಮರ್ಥಿಸಿ ಅದಕ್ಕೆ ಹಿನ್ನೆಲೆಯನ್ನು ಒದಗಿಸಿದರು.

ಜೆ. ಸಿ. ಕುಮಾರಪ್ಪ (ಪುಟ. ೧೯)

ತಮಿಳು ನಾಡಿನಲ್ಲಿ ಉತ್ತಮ ಕ್ರೈಸ್ತ ಕುಟುಂಬದಲ್ಲಿ ಜನ್ಮತಾಳಿದವರು. ಕಾರ್ನೀಲಿಯಸ್ ಎಂಬ ಹೆಸರನ್ನಿಟ್ಟುಕೊಂಡಿದ್ದರು. ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ವಾಣಿಜ್ಯ ಮುಂತಾದ ವಿಷಯಗಳಲ್ಲಿ ಪ್ರೌಢಶಿಕ್ಷಣವನ್ನು ಪಡೆದು ಒಳ್ಳೆಯ ಸಂಪಾದನೆಯನ್ನು ಮಾಡುತ್ತಿದ್ದರು ಗಾಂಧೀಜೀಯವರ ಪ್ರಭಾವಕ್ಕೆ ಒಳಗಾಗಿ ಎಲ್ಲವನ್ನೂ ತ್ಯಾಗಮಾಡಿ, ಭಾರತೀಯ ಹೆಸರನ್ನು ಸ್ವೀಕರಿಸಿ, ಗಾಂಧೀಜೀಯವರ ಆಶ್ರಮವನ್ನು ಸೇರಿ ಅವರ ಮುಖ್ಯ ಶಿಷ್ಯರಲ್ಲಿ ಒಬ್ಬರಾದರು. ಗ್ರಾಮೋದ್ಯೋಗ ಸಂಘದ ಸಂಚಾಲಕರಾಗಿ ಗಾಂಧೀಜೀಯವರ ತತ್ತ್ವಕ್ಕನುಗುಣವಾದ ಅರ್ಥಶಾಸ್ತ್ರವನ್ನು ಪ್ರತಿಪಾದಿಸುವಂತಹ ಹಲವಾರು ವಿಚಾರಪೂರ್ಣವಾದ ಗ್ರಂಥಗಳನ್ನು ರಚಿಸಿದರು. ೧೯೬೦ ಜನವರಿ ೩೦ ದಿನಾಂಕ (ಗಾಂಧೀಜೀಯವರು ದೇಹಾಂತವಾದ ದಿನ) ಮದರಾಸಿನಲ್ಲಿ ವಿಧಿವಶರಾದರು.

ವೆಂಕಟಕೃಷ್ಣಯ್ಯ (ಪುಟ. ೨೦)

“ಮೈಸೂರಿನ ವೃದ್ಧಪಿತಾಮಹ”ರೆಂದು ಪ್ರಸಿದ್ಧರಾದವರು. ಮೈಸೂರು ಸಾರ್ವಜನಿಕ ಜೀವನಕ್ಕೆ ಆದ್ಯ ಪ್ರವರ್ತಕರಲ್ಲೊಬ್ಬರು. ಅನೇಕ ವರ್ಷಗಳ ಉಪಾಧ್ಯಾಯ ವೃತ್ತಿಯಲ್ಲಿದ್ದು, ಅನಂತರ ವೃತ್ತಪತ್ರಿಕೆಗಳನ್ನು ನಡೆಯಿಸಿದರು.

ಕೇಳ್ಕರ್ (ಪುಟ ೨೧)

ಲೋಕಮಾನ್ಯ ತಿಲಕರ ತರುವಾಯ ಅವರ ಪ್ರಸಿದ್ಧ ‘ಕೇಸರೀ ಪತ್ರಿಕೆಯನ್ನು ನಡೆಸಿದರು. ಆ ಕಾಲದಲ್ಲಿದ್ದ ದೇಶೀ ರಾಜ್ಯಗಳಲ್ಲಿ ಆಗಬೇಕಾಗಿದ್ದ ರಾಜಕೀಯ ಸುಧಾರಣೆಗಳ ಬಗ್ಗೆ ಬಹಳ ಶ್ರಮಿಸಿದರು. ಉತ್ತಮ ಮರಾಠಿ ಲೇಖಕರು–ಹಾಗೂ ಖಂಡಿತವಾದಿಗಳು.

ಕೆಳಪ್ಪನ್ (ಪುಟ ೨೩)

ಗಾಂಧೀಜೀಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ, ವಿಶೇಷವಾಗಿ ಹರಿಜನೋದ್ಧಾರಕ್ಕಾಗಿ, ಅನೇಕ ವರ್ಷಗಳು ಶ್ರಮಿಸಿದ, ಶ್ರಮಿಸುತ್ತಿರುವ ಕೇರಳದ ಹಿರಿಯ ಸರ್ವೋದಯ ಕಾರ್ಯಕರ್ತರಲ್ಲೊಬ್ಬರು.

ಧರ್ಮಾನಂದ ಕೌಸಾಂಬಿ (ಪುಟ ೨೪)

ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಪಾಲೀ ಭಾಷೆಯ ಪ್ರಾಧ್ಯಾಪಕರ

ರಾಗಿದ್ದರು. ಭಾರತಕ್ಕೆ ಬಂದಮೇಲೆ ಗಾಂಧೀಜೀಯವರ ಅನುಯಾಯಿಗಳಾಗಿ ಸೇವೆಸಲ್ಲಿಸಿದರೂ ತಮ್ಮ ಜನ್ಮಸ್ಥಳವಾದ ಗೋವಾದಲ್ಲಿ ಕೆಲವು ಶಾಲೆಗಳ ಮೇಲ್ವಿಚಾರಣೆ ಮಾಡುತ್ತಿದ್ದರು. ಕಾರ್ಮಿಕ ಸಂಘಗಳ ಕಾರ್ಯಗಳಲ್ಲಿ ಆಸಕ್ತಿ ವಹಿಸಿದ್ದರು. ಪ್ರೌಢ ವಿದ್ವಾಂಸರು. ಆದರೂ ಎಲೆಯ ಮರೆಯ ಕಾಯಿಯಂತೆ ತಮ್ಮ ಬಾಳನ್ನು ನಡೆಸುತ್ತ, ಕೊನೆಗೆ ಪ್ರಾಯೋಪವೇಶ ಮಾಡಿದರು.

ಖಾನ್ ಅಬ್ದುಲ್ ಗಫಾರ್ ಖಾನ್ (ಪುಟ. ೨೬)

ಗಡಿನಾಡಿನ ಗಾಂಧೀಯೆಂದು ಪ್ರಸಿದ್ಧರಾದವರು. ಇವರಿಗೆ ಅಹಿಂಸೆಯಲ್ಲಿ ಅನನ್ಯ ಶ್ರದ್ಧೆಯಿತ್ತು. ಹಿಂಸಾ ಪ್ರವರ್ತಕರೆಂದು ಹೆಸರು ಪಡೆದಿದ್ದ ಗಡಿನಾಡಿನ ಸಹಸ್ರಾರು ಮಂದಿ ಬಂಧುಗಳನ್ನೂ—"ಖುದಾಯೀ ಖಿದ್ಮತ್‌ಗಾರ್" (ದೇವರ ಸೇವಕರು) ಎಂಬ ಪಡೆಯಲ್ಲಿ ಸೇರಿಸಿದ್ದರು. ಭಾರತ ಇಬ್ಭಾಗವಾದ ಮೇಲೆ ಪಾಕೀಸ್ಥಾನದಲ್ಲಿಯೇ ಉಳಿದರು. ಹಿಂದೂಸ್ಥಾನಕ್ಕೆ ಅವರ ಪ್ರತ್ಯಕ್ಷ ಸೇವೆ ತಪ್ಪಿದಂತಾಗಿದೆ.

ಕಸ್ತೂರ ಬಾ ಗಾಂಧೀ (ಪುಟ. ೨೮)

ಕಸ್ತೂರ ಬಾ ಅವರು ಗಾಂಧೀಜಿಯವರಿಗಿಂತಲೂ ಕೆಲವೇ ತಿಂಗಳುಗಳು ವಯಸ್ಸಿನಲ್ಲಿ ಕಿರಿಯವರು. ರೋಗಗ್ರಸ್ತರಾಗಿ ಸೆರೆಮನೆಯಲ್ಲಿ (ಆಗಖಾನರ ಅರಮನೆ) ಗಾಂಧೀಯವರ ಸಮ್ಮುಖದಲ್ಲಿ ೧೯೪೪ ಫೆಬ್ರುವರಿ ೨೨ ದಿನಾಂಕ (ಶಿವರಾತ್ರಿ) ಸ್ವರ್ಗಸ್ಥರಾದರು. ಅಗ ಅವರಿಗೆ ೭೫ ವಯಸ್ಸು. ಅವರ ಸ್ಮಾರಕಾರ್ಥ ೭೫ ಲಕ್ಷ ರೂಪಾಯಿ ನಿಧಿಯನ್ನು ಕೂಡಿಸಬೇಕೆಂದು ನಿವೇದನ ಮಾಡಿದ್ದಕ್ಕೆ ೧೨೦ ಲಕ್ಷ ಶೇಖರವಾಯಿತು. ಈ ರಾಷ್ಟ್ರೀಯ ಸ್ಮಾರಕ ನಿಧಿಯ ಹಣದಿಂದ ಭಾರತೀಯ ಮಹಿಳೆಯರ ಅಭ್ಯುದಯಕ್ಕಾಗಿ ಅನೇಕ ಕಾರ್ಯಗಳು ನಡೆಯುತ್ತಿವೆ.

ಮಗನ್‌ಲಾಲ್ ಕುಶಾಲಚಂದ್ ಗಾಂಧೀ (ಪುಟ. ೩೨)

ಹಳ್ಳಿಗಳಲ್ಲಿ ಸುತ್ತುತ್ತಿದ್ದ ರಾಟೆಗಳಿಗೂ, ಈಗಿರುವ ಸುಧಾರಿತ ಬಗೆಬಗೆಯ ಚರಖಾಗಳಿಗೂ ಅರ್ಥಾರ್ಥ ಸಂಬಂಧವಿಲ್ಲ. ಈ ಪ್ರಗತಿಗೆ ಗಾಂಧೀಜೀಯವರೇ ಮೂಲಕಾರಣರಾದರೂ ಮಗನಲಾಲರೇ ಚರಖಾಶಾಸ್ತ್ರದ ನಿಪುಣರಾಗಿದ್ದರು ಮತ್ತು ಯಾಂತ್ರಿಕ ಸುಧಾರಣೆಗಳನ್ನು ಮಾಡುವ ಕುಶಲತೆಯೂ ನಿಷ್ಠೆಯೂ ಅವರಲ್ಲಿತ್ತು. ಅಖಿಲ ಭಾರತ ನೂಲುವವರ ಸಂಘ (ಇದೇ ಅನಂತರ ಚರಖಾ ಸಂಘವೆಂದು

ರೂಪತಾಳಿತು) ಸ್ಥಾಪಿಸಿ, ಇದರ ಕೆಲಸ ಶಾಸ್ತ್ರೀಯವಾಗಿ ನಡೆಯಿಸಿದ ಯಶಸ್ಸು ಮಗನಲಾಲರದು.

ಹೀರಾಲಾಲ್ ಗಾಂಧೀ (ಪುಟ. ೪೦)

ಗಾಂಧೀಜೀಯವರ ಹಿರಿಯ ಮಗ. ತಂದೆಯ ವಿರುದ್ಧ ಪ್ರಚಾರಮಾಡಿ, ಸ್ವಲ್ಪಕಾಲ ಮುಸಲ್ಮಾನನಾದ. ದುರಾಚಾರಿಯಾಗಿದ್ದ, ಈತನ ನಡೆವಳಿಕೆಯಿಂದ ಕಸ್ತೂರ ಬಾ ಅವರಿಗೆ ಆದ ವ್ಯಥೆ ಅಷ್ಟಿಷ್ಟಲ್ಲ.

ಸತೀಶಚಂದ್ರ ದಾಸಗುಪ್ತ ಪುಟ. ೪೩

ಬಂಗಾಳದಲ್ಲಿರುವ "ಖಾದೀ ಪ್ರತಿಷ್ಠಾನ್"ದ ಸ್ಥಾಪಕರು. ಖಾದಿ ಶಾಸ್ತ್ರ ಗೋ ಮತ್ತು ಆಹಾರ ಶಾಸ್ತ್ರದ ಬಗೆಗೆ ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ.

ಅಮೃತಲಾಲ್ ವಿ. ಠಕ್ಕರ್ (ಪುಟ. ೫೯)

ಠಕ್ಕರ್ ಬಾಪಾ ಸೇವಾ ಧರ್ಮದ ಪ್ರತೀಕರಾಗಿದ್ದರು. ಆದಿವಾಸಿಗಳ ಸೇವೆಯನ್ನು ಕೈಗೊಂಡ ಭಾರತೀಯರಲ್ಲಿ ಮೊದಲಿಗರು. ಕಸ್ತೂರ ಬಾ ನಿಧಿಯ ಧರ್ಮದರ್ಶಿಗಳಾಗಿದ್ದರು.

ಅಬ್ಬಾಸ್ ತೈಯುಬ್ಜಿ (ಪುಟ ೭೮)

ಬರೋಡಾದಲ್ಲಿ ನ್ಯಾಯಮೂರ್ತಿಯಾಗಿದ್ದು ನಿವೃತ್ತರಾದರು. ೧೯೧೯ ರಲ್ಲಿ ಪಂಜಾಬಿನಲ್ಲಿ ನಡೆದ ಅತ್ಯಾಚಾರಗಳ ಪರಿಶೀಲನೆಗೆ ಕಾಂಗ್ರೆಸ್ ನೇಮಿಸಿದ ಸಮಿತಿಯಲ್ಲಿ ಸದಸ್ಯರಾದರು. ಬಹಳ ಸರಳವಾದ ಜೀವನವನ್ನು ನಡೆಸುತ್ತ, ಗಾಂಧೀಜೀಯವರ ಶ್ರದ್ಧಾವಂತ ಅನುಯಾಯಿಗಳಾದರು. ಬದರುದ್ದೀನ ತೈಯುಬ್ಜಿಯ ಕುಮಾರರು.

ಬದರುದ್ದೀನ್ ತೈಯುಬ್ಜಿ (ಪುಟ. ೮೦)

ಕಾಂಗ್ರೆಸ್ಸಿನ ಆರಂಭ ಕಾಲದಲ್ಲಿ ಅದರಲ್ಲಿ ಪಾಲುಗೊಂಡ ಹಿರಿಯ ದೇಶಭಕ್ತರು. ಮುಂಬಯಿಯಲ್ಲಿ ನ್ಯಾಯಮೂರ್ತಿಯಾಗಿದ್ದು ನಿವೃತ್ತರಾದರು. ೧೮೮೭ ರಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರು.

ಮಹಾದೇವ ದೇಸಾಯಿ (ಪುಟ. ೧೦೩)

೧೯೪೨ ಆಗಸ್ಟ್ ೯ನೇ ದಿನಾಂಕ ಗಾಂಧೀಜೀಯೊಡನೆ ಮಹಾದೇವ ದೇಸಾಯಿ ಬಂದಿಸಲ್ಪಟ್ಟು ಆಗಖಾನರ ಅರಮನೆಯಲ್ಲಿ ಒಂದು ವಾರದೊಳಗೆ ಹೃದಯ

ಸ್ಥಂಭನದಿಂದ ಮೃತರಾದರು. ಅಗ ಅವರ ವಯಸ್ಸು ೫೨. ಗಾಂಧೀಜೀಯವರ ಅಂತ್ಯಕ್ರಿಯೆಗಳನ್ನು ನೆರವೇರಿಸಿದರು.

ಬೊಂಬಾಯಿ ಎಲ್ಫಿನ್‌ಸ್ಟನ್ ಕಾಲೇಜಿನ ಪದವೀಧರರು. ಬೊಂಬಾಯಿ ಸರಕಾರದ ಭಾಷಾಂತರ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಆ ಸಮಯದಲ್ಲೆ ಎಲ್.ಎಲ್.ಬಿ. ಪರೀಕ್ಷೆ ವ್ಯಾಸಂಗಮಾಡಿ ತೇರ್ಗಡೆಯಾದರು. ಎರಡು ಮೂರು ವರ್ಷ ಅಹಮದಾಬಾದಿನಲ್ಲಿ ವಕೀಲಿವೃತ್ತಿಯನ್ನು ನಡೆಸಿದರು. ಇದು ಅವರಿಗೆ ಒಗ್ಗದೆ ಬೊಂಬಾಯಿ ಪ್ರಾಂತೀಯ ಸಹಕಾರ ಬ್ಯಾಂಕಿನಲ್ಲಿ ಸಹಕಾರ ಶಾಖೆಯ ಇನ್ಸ್‌ಪೆಕ್ಟರಾಗಿ ಸೇರಿದರು. ೧೯೧೬ರಲ್ಲಿ ಗಾಂಧೀಜೀಯವರ ಪ್ರಭಾವಕ್ಕೆ ಒಳಗಾಗಿ ಸಾಬರಮತಿ ಆಶ್ರಮವನ್ನು ಸೇರಿದರು. ಅವರ ಆಪ್ತಕಾರ್ಯದರ್ಶಿಗಳಾದರು. "ಯಂಗ್ ಇಂಡಿಯ" ಮತ್ತು "ನವಜೀವನ್" ವಾರ ಪತ್ರಿಕೆಗಳ ಸಂಪಾದಕತ್ವದಲ್ಲಿ ನೆರವಾದರು. ೧೯೨೦ರಲ್ಲಿ ಮೋತಿಲಾಲ್ ನೆಹರೂ ಅವರ ಇಚ್ಛೆಯ ಮೇರೆಗೆ ಅಲಹಾಬಾದಿನಲ್ಲಿ ಅರಂಭಿಸಿದ್ದ "ಇಂಡಿಪೆಂಡೆಂಟ್" ಪತ್ರಿಕೆಯ ಸಂಪಾದಕರಾದರು. ಸರಕಾರದ ಆಗ್ರಹಕ್ಕೆ ಗುರಿಯಾಗಿ ಸೆರೆಮನೆಗೆ ಹೋದರು. ಮತ್ತೆ ಗಾಂಧೀಜೀಯವರ ಬಳಿ ಸೇರಿ ತಮ್ಮ ಕೊನೆಯ ಕಾಲದವರೆಗೆ ಅವರ ಸೇವೆಯಲ್ಲಿಯೇ ನಿರತರಾಗಿದ್ದರು.

ಜಯರಾಮ್‌ದಾಸ್ ದೌಲತ್‌ರಾಮ್ (ಪುಟ, ೧೦೪)

ಸಿಂಧು ಪ್ರಾಂತದ (ಪಾಕಿಸ್ತಾನ್ ನಿರ್ಮಾಣಕ್ಕೆ ಪೂರ್ವದಲ್ಲಿ) ಕಾಂಗ್ರೆಸ್ ನಾಯಕರಾಗಿದ್ದರು. ೧೯೨೧ರಲ್ಲಿ ಪರದೇಶೀವಸ್ತ್ರದ ಬಹಿಷ್ಕಾರದ ಕೆಲಸವನ್ನು ಬಹಳ ದಕ್ಷತೆಯಿಂದ ಮುಂಬಯಿಯಿಂದ ನಡೆಸಿದರು. ಕಾಂಗ್ರೆಸ್ ಕಾರ್ಯಸಮಿತಿಯ ಸದಸ್ಯರಾಗಿದ್ದರು. ಸ್ವಾತಂತ್ರ್ಯ ತರುವಾಯ ಕೆಲವು ಕಾಲ ಅಸ್ಸಾಮಿನ ಗವರ್ನರಾಗಿದ್ದರು. ಈಗ ಗಾಂಧೀ ಕೃತಿಗಳ ಸಂಕಲನ ಸಮಿತಿಗೆ ಪ್ರಧಾನ ಸಂಪಾದಕರಾಗಿದಾರೆ.

ಗುಲ್ಜಾರಿಲಾಲ್ ನಂದಾ (ಪುಟ. ೧೦೫)

ಅಹಮದಾಬಾದ್ ಗಿರಣಿ ಕಾರ್ಮಿಕರ ಸಂಘದಲ್ಲಿ ಕಾರ್ಯಕರ್ತರಾಗಿ ಗಾಂಧೀಜೀಯವರ ಸಲಹೆಯ ಮೇರೆಗೆ ಈ ಸಂಘದ ಮೂಲಕ ಕಾರ್ಮಿಕರ ಹಾಗೂ ಸಾರ್ವಜನಿಕ ಸೇವೆಯನ್ನು ಉತ್ತಮ ರೀತಿಯಲ್ಲಿ ಸಲ್ಲಿಸಿದರು. ಈಗ (೧೯೬೧) ಭಾರತ ಸರಕಾರದಲ್ಲಿ ಯೋಜನಾ ಮಂತ್ರಿಯಾಗಿದ್ದಾರೆ.

ದಾದಾಭಾಯಿ ನವರೋಜಿ (ಪುಟ. ೧೦೫)

ಭಾರತದ ಅಧುನಿಕ ರಾಜಕೀಯಕ್ಕೆ ಇವರನ್ನು ಭೀಷ್ಮ ಪಿತಾಮಹರೆಂದು

ಹೇಳಬಹುದು. ಗಾಂಧೀಜೀಯವರು ತಮ್ಮ ದಕ್ಷಿಣ ಆಫ್ರಿಕದ ಹೋರಾಟದಲ್ಲಿ ಇವರಿಂದ ಬಹಳ ನೆರವನ್ನೂ ಸ್ಫೂರ್ತಿಯನ್ನೂ ಪಡೆದರು. ಮೂರು ಸಲ ಕಾಂಗ್ರೆಸ್ ಅಧಿವೇಶನಗಳ ಅಧ್ಯಕ್ಷರಾದರು. ಕಲ್ಕತ್ತಾ ೧೮೮೬, ಲಾಹೋರ್ ೧೮೯೩, ಮತ್ತು ಕಲ್ಕತ್ತಾ ೧೯.೬೦ ನಮ್ಮ ರಾಜಕೀಯ ಧ್ಯೇಯ ಸ್ವರಾಜ್ಯವೆಂದು ೧೯೦೬ ರಲ್ಲೇ ಸಾರಿದರು.

ವಿಠಲ್‌ಭಾಯಿ ಪಟೇಲ್ (ಪುಟ. ೧೨೨)

ಸರದಾರ್ ವಲ್ಲಭಾಯಿ ಅವರು ಅಣ್ಣಂದಿರು. ಮುಂಬಯಿಯಲ್ಲಿ ಬ್ಯಾರಿಸರಾಗಿದ್ದರು. ೧೯೧೮ ರಿಂದ ಕಾಂಗ್ರೆಸ್ ರಾಜಕೀಯದಲ್ಲಿ ಮುಖ್ಯ ಪಾತ್ರವಹಿಸಿದರು. ೧೯೧೯ ರಲ್ಲಿ ಇಂಗ್ಲೆಂಡಿಗೆ ತೆರಳಿದ ಕಾಂಗ್ರೆಸ್ ನಿಯೋಗಕ್ಕೆ ಮುಖ್ಯಸ್ಥರಾಗಿ ಕಾಂಗ್ರೆಸ್ ನಿಲುವನ್ನು ಬಹಳ ದಿಟ್ಟತನದಿಂದ ಪ್ರತಿಪಾದಿಸಿದರು. ೧೯೨೪ ಸ್ವರಾಜ್ಯ ಪಕ್ಷ ಸ್ಥಾಪಿತವಾದಾಗ ಶಾಸನ ಸಭೆಗಳ ಬಹಿಷ್ಕಾರವನ್ನೇ ಮಾಡಿ—ಕಾಂಗ್ರೆಸ್ಸಿನವರು ಚುನಾವಣೆಗೆ ನಿಂತು ಶಾಸನ ಸಭೆಗಳನ್ನು ಪ್ರವೇಶಿಸಿ ಸರಕಾರವನ್ನು ಎದುರಿಸಬೇಕೆಂದು ಸ್ವರಾಜ್ಯ ಪಕ್ಷದವಾದ—ಅದರಲ್ಲಿ ಮುಖ್ಯ ಪಾತ್ರವಹಿಸಿ ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾಗಿ ಚುನಾಯಿತರಾದರು. ಬಹಳ ಚತುರತೆಯಿಂದ ತಮ್ಮ ಅಧಿಕಾರವನ್ನು ನಡೆಯಿಸಿದರು. ಶಾಸನ ಸಭಾ ಗೌರವವನ್ನು ಪಾಲಿಸಿದರೂ. ತಮ್ಮ ವೇತನದ ಒಂದು ಪಾಲನ್ನು ಗಾಂಧೀಜೀಯವರಿಗೆ ಸಾರ್ವಜನಿಕ ಕಾರ್ಯಕ್ಕಾಗಿ ದಾನ ಮಾಡಿದರು. ಗಾಂಧೀಜೀಯವರಲ್ಲಿ ಅನನ್ಯ ಗೌರವವಿದ್ದಾಗ್ಯೂ, ಅವರನ್ನು ದಿಟ್ಟತನದಿಂದ ನೇತಾಜೀ ಸುಭಾಷರಂತೆ ಎದುರಿಸುತ್ತಿದ್ದರು.

ನಾಗೇಶ್ವರರಾವ್ ಪಂತುಲು (ಪುಟ. ೧೨೪)

ಆಂಧ್ರದೇಶದ ನಾಯಕರು. "ಆಂಧ್ರಪತ್ರಿಕೆ" ದೈನಿಕ ತೆಲುಗು ಪತ್ರಿಕೆಯ ಸ್ಥಾಪಕರು. ಉದಾರಿಗಳು. ಆಂಧ್ರದೇಶದಲ್ಲಿ ಅನೇಕ ಸಾರ್ವಜನಿಕಕಾರ್ಯಗಳಿಗೆ ನೆರವನ್ನು ನೀಡುತ್ತಿದ್ದರು.

ಜಮುನಾಲಾಲ್ ಬಜಾಜ್ (ಪುಟ. ೧೨೪)

೧೯೨೦ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಾಗತಾಧ್ಯಕ್ಷರಾಗಿದ್ದರು. ಅಸಹಕಾರ ನಿರ್ಣಯಾನುಸಾರ ಈ ವಣಿಕ ಶ್ರೇಷ್ಠರು ತಮ್ಮ "ರಾವ್‌ಬಹದ್ದೂರ್" ಬಿರುದನ್ನು ವಾಪಸ್ಸು ಕೊಟ್ಟು ಗಾಂಧೀಯವರ ಅನುಯಾಯಿಯಾದರು. ವೀರದಾನಿಗಳು. ಕಾಂಗ್ರೆಸ್ ಕಾರ್ಯಸಮಿತಿಯಲ್ಲಿ ಸದಸ್ಯರಾಗಿ

ಅನೇಕ ವರ್ಷ ಸೇವೆ ಸಲ್ಲಿಸಿದರು. ೧೯೨೦ರಲ್ಲಿ ಗಾಂಧೀಜೀಯವರು ಸಾಬರಮತಿ ಆಶ್ರಮಕ್ಕೆ ಹಿಂತಿರುಗುವುದಿಲ್ಲವೆಂದು ಪ್ರತಿಜ್ಞೆಕೈಕೊಂಡಾಗ ಅವರಿಗೆ ತಮ್ಮ ಸ್ವಂತ ಗ್ರಾಮದಲ್ಲಿ (ಸೇಗಾಂ) ಆಶ್ರಮನಿರ್ಮಾಣಕ್ಕೆ ಅವಕಾಶಮಾಡಿಕೊಟ್ಟರು. ಅದಕ್ಕೆ ಸೇವಾಗ್ರಾಮವೆಂದು ಹೆಸರಾಯಿತು. ಗಾಂಧೀಜೀಯ ಐದನೆಯ ಮಗನೆಂದು ಹೆಸರುಳ್ಳವರಾದರು.

ಸರ್ ಸುರೇಂದ್ರನಾಥ ಬ್ಯಾನರ್ಜಿ (ಪುಟ. ೧೩೫)

ಹಿರಿಯ ರಾಜಕಾರಣಿಗಳಲ್ಲೊಬ್ಬರು. ಐ.ಸಿ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೂ ಪದವಿಯನ್ನು ತ್ಯಾಗಮಾಡಿ ಸಾರ್ವಜನಿಕ ಸೇವೆಯಲ್ಲಿ ತೊಡಗಿದರು. ಎರಡು ಸಲ ಕಾಂಗ್ರೆಸ್ ಅಧಿವೇಶನಗಳ ಅಧ್ಯಕ್ಷರಾಗಿದ್ದರು. (ಪುಣೆ ೧೮೯೫ ಅಹಮದಾಬಾದ್ ೧೯೦೨) ಪ್ರಸಿದ್ಧ ವಾಗ್ಮಿಗಳು, ಗಾಂಧೀಜೀಯವರ ಅಸಹಕಾರ ಚಳುವಳಿ ಆಗುವ ವೇಳೆಗೆ ಅವರು ಉಗ್ರರಾಜಕೀಯದಿಂದ ದೂರವಾಗಿದ್ದರು.

ಬಾಬು ಭಗವಾನ್‌ದಾಸ್ (ಪುಟ. ೧೪೧)

ಕಾಶೀ ನಿವಾಸಿಗಳು. ಅನೀ ಬೆಸೆಂಟರೊಂದಿಗೆ ಥಿಯೊಸಾಫಿಕಲ್ ಸೊಸೈಟಿಯ. ಅನೇಕ ಪುಸ್ತಕಗಳನ್ನು ರಚಿಸಿದರು. ಪ್ರೌಢ ವಿದ್ವಾಂಸರು. ಸರ್ವ ಮತ ಸಮಾನತ್ವದಲ್ಲಿ ಗಾಢ ಶ್ರದ್ಧೆಯುಳ್ಳವರು. ಭಾರತರತ್ನ ಬಿರುದಾಂಕಿತರು.

ಭನ್ಸಾಲಿ (ಪುಟ. ೧೪೨)

೧೯೪೨ ಆಂದೋಲನದ ಸಮಯದಲ್ಲಿ ಸರಕಾರದ ದಬ್ಬಾಳಿಕೆಯನ್ನು ವಿರೋಧಿಸಿ ೬೨ ದಿನಗಳ ಉಪವಾಸವನ್ನು ಮಾಡಿದ ವಿರಾಗ್ರಣಿಗಳು. ದೊಡ್ಡ ವಿದ್ವಾಂಸರು—ಹಾಗೂ ಸಾಧಕರು. ಲಂಡನಿನಲ್ಲಿ ವಿದ್ಯಾಭ್ಯಾಸ ಪಡೆದು ಪ್ರಾಧ್ಯಾಪಕರಾಗಿದ್ದರು. ಸಾಬರಮತಿ ಆಶ್ರಮಕ್ಕೆ ಸೇರಿದರು. ಹಿಮಾಲಯದಲ್ಲಿ ತಪಸ್ಸಿಗೆ ಹೋಗಿ—ಅನೇಕ ವರ್ಷ ಮೌನವ್ರತವನ್ನಾಚರಿಸಿದರು.

ಹಜರತ್ ಮೊಹಾನಿ (ಪುಟ. ೧೫೯)

೧೯೧೯ ಖಿಲಾಫತ್ ಅಂದೋಲನದಲ್ಲಿ ಪ್ರಮುಖ ಪಾತ್ರವಹಿಸಿದವರು. ೧೯೨೧ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತದ ಧ್ಯೇಯ ಪೂರ್ಣ ಸ್ವರಾಜ್ಯವಾಗಿರಬೇಕೆಂದು ವಾದಿಸಿದವರು.

ಮಹಾದೇವ ಗೋವಿಂದ ರಾನಡೆ (ಪುಟ. ೧೬೨)

ನ್ಯಾಯಮೂರ್ತಿಗಳಾಗಿದ್ದರೂ ಪುಣೆಯ ಸಾರ್ವಜನಿಕ ಕಾರ್ಯಗಳಿಗೆ ಉತ್ತೇಜನವನ್ನೂ ಸ್ಫೂರ್ತಿಯನ್ನು ಕೊಟ್ಟವರು. ಗೋಖಲೆಯವರ ಗುರುಗಳು. ಸಮಾಜ ಸುಧಾರಕರು. ಇತಿಹಾಸವೇತ್ತರು.

ದಿಲೀಪ್‌ಕುಮಾರ್ ರಾಯ್ (ಪುಟ. ೧೬೩)

ಬಂಗಾಳಿ ಸುಪ್ರಸಿದ್ಧ ನಾಟಕ ಕರ್ತರಾದ ದ್ವಿಜೇಂದ್ರಲಾಲ್ ರಾಯರ ಕುಮಾರರು. ಅರವಿಂದಘೋಷರ ಶಿಷ್ಯರು. ಉತ್ತಮ ಕಲಾವಿದರು ಹಾಗೂ ಆಧ್ಯಾತ್ಮ ಸಾಧಕರು.

ಪ್ರಫುಲ್ಲ ಚಂದ್ರರಾಯ್ (ಪುಟ. ೧೬೪)

ಪ್ರಸಿದ್ಧ ರಸಾಯನ ಶಾಸ್ತ್ರವೇತ್ತರು ಹಾಗೂ ದೇಶಭಕ್ತರು. ಬಂಗಾಳದಲ್ಲಿ ಅನೇಕ ಸ್ವದೇಶೀ ಉದ್ಯಮಗಳಿಗೆ ಸ್ಫೂರ್ತಿ ಕೊಟ್ಟವರು. ಗಾಂಧೀಜೀಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಬಹಳ ಶ್ರದ್ಧೆ ವಹಿಸಿದರು.

ಗಣೇಶ ಶಂಕರ ವಿದ್ಯಾರ್ಥಿ (ಪುಟ. ೧೨೮)

ಉತ್ತರ ಪ್ರದೇಶದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ೧೯೩೧ ರಲ್ಲಿ ಕಾನ್‌ಪುರದಲ್ಲಿ ಹಿಂದೂ–ಮುಸಲ್ಮಾನರಲ್ಲಿ ಘರ್ಷಣೆ ಉಂಟಾಯಿತು. ನಿರ್ಭಯರಾಗಿ ಗಲಭೆ ಆಗುತ್ತಿದ್ದ ಸ್ಥಳಗಳಿಗೆ ಹೋಗಿ ಶಾಂತಿಯನ್ನು ನೆಲೆಗೊಳಿಸಲು ಯತ್ನಿಸಿದರು. ದುರಾತ್ಮರು ಯಾರೋ ಅವರನ್ನು ಕೊಂದು ಹಾಕಿದರು. ನಾಲ್ಕು ದಿನಗಳಾದ ಮೇಲೆ ಅವರ ಶವ ಸಿಕ್ಕಿತು. ಆ ಸಂದರ್ಭದಲ್ಲಿಯೇ ಗಾಂಧೀಜೀಯವರು ಈ ಲೇಖನವನ್ನು ಬರೆದುದು.

ಶ್ರೀನಿವಾಸಶಾಸ್ತ್ರೀ (ಪುಟ. ೨೦)

ಗಾಂಧೀಜೀ ಮತ್ತು ಶ್ರೀನಿವಾಸಶಾಸ್ತ್ರೀ ಇಬ್ಬರೂ ಗೋಖಲೆಯವರ ಶಿಷ್ಯಂದಿರು. ಆದರೆ ಶಾಸ್ತ್ರಿಗಳು ಬ್ರಿಟಿಷ್ ಚಕ್ರಾಧಿಪತ್ಯದ ಸನ್ಮಾನಗಳನ್ನು ಪಡೆದರು. ಗಾಂಧೀಜೀಯವರ ಚಳುವಳಿಯನ್ನು ಕಟುವಾಗಿ ಟೀಕಿಸಿದರೂ ರಾಜಕೀಯವಾಗಿ ಎಷ್ಟು ಭಿನ್ನಾಭಿಪ್ರಾಯವಿದ್ದರೂ ಪರಸ್ಪರ “ಪ್ರಿಯ ಸಹೋದರ” ಎಂತಲೇ ಒಬ್ಬರನ್ನೊಬ್ಬರು ಸಂಬೋಧಿಸುತ್ತಿದ್ದರು. ೧೯೨೪ ರಲ್ಲಿ ಪುಣೆಯಲ್ಲಿ ಗಾಂಧೀಜೀಯವರಿಗೆ ಶಸ್ತ್ರಚಿಕಿತ್ಸೆ ಆಗಬೇಕಾಗಿದ್ದಾಗ ಅವರು ಶಾಸ್ತ್ರಿಗಳಿಗೆ

ಹೇಳಿ ಕಳುಹಿಸಿದರು. ಗಾಂಧೀಜೀಯವರ ಆತ್ಮಕಥೆಯ ಇಂಗ್ಲಿಷ್ ಭಾಷಾಂತರ ವನ್ನು ಪರಿಶೋಧಿಸಿ ಕೊಟ್ಟವರು (ಮಹಾದೇವ್ ದೇಸಾಯಿ ಪ್ರಾರ್ಥನೆಯಂತೆ ಶಾಸ್ತ್ರಿಯವರು. ಗಾಂಧೀಜೀಯವರಿಗೂ ಶಾಸ್ತ್ರೀಯವರಿಗೂ ಪರಸ್ಪರವಿದ್ದ ಪ್ರೀತ್ಯಾ ದರಗಳು ಅನುಪಮವಾದುವು.

ಸಿ. ಎಫ್. ಆಂಡ್ರೂಸ್ (ಪುಟ. ೨೦೮)

"ದೀನಬಂಧು" ಆಂಡ್ರೂಸ್ ಕ್ರೈಸ್ತಪಾದರಿಗಳಾಗಿ ದೆಹಲಿಯ ಸೆಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಅನೇಕ ವರ್ಷಗಳಿದ್ದರು. ಅನಂತರ ಈ ಕಾರ್ಯಕ್ಕೆ ತಿಲಾಂಜಲಿಕೊಟ್ಟು ಶಾಂತಿನಿಕೇತನಕ್ಕೆ ಸೇರಿದರು. ಗುರುದೇವರಾದ ಟಾಗೋರರೂ ಹಾಗೂ ಗಾಂಧೀಜೀಯವರೂ ಅವರಮೇಲೆ ಬಹಳ ಪ್ರಭಾವ ಬೀರಿದರು. ಭಾರತೀ ಯರು ಹೊರದೇಶಗಳಿಗೆ ವಲಸೆಹೋಗಿ ಅಲ್ಲಿ ಪಡುತ್ತಿದ್ದ ಕಷ್ಟಗಳನ್ನು ನಿವಾರಿಸಲು ಆಂಡ್ರೂಸರು ಬಹಳ ಶ್ರಮವಹಿಸಿದರು. ಭಾರತೀಯರೊಂದಿಗೆ, ಸಂಪೂರ್ಣ ವಾಗಿ ಬೆರೆತು ಬಹಳ ಜನಪ್ರಿಯರಾದರು. "ದೀನಬಂಧು" ಎಂಬುದು ಅವರಿಗೆ ಅನ್ವರ್ಥನಾಮವಾಯಿತು.

ನಿವೇದನ

ವಿಷಯ ಮೂಲಸೂಚಿ

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ
೧	vii	(ಯಂಗ್ ಇಂಡಿಯಾ, ೧೭-೧೧-೧೯೨೧)
೨	vii	(ಯಂಗ್ ಇಂಡಿಯಾ, ೧೭-೧೧-೧೯೨೧)
೩	viii	(ಯಂಗ್ ಇಂಡಿಯಾ, ೧೬-೬-೧೯೨೬)
೪	viii	(ಯಂಗ್ ಇಂಡಿಯಾ, ೧೧-೧೧-೧೯೨೮)
೫	viii	(ಹರಿಜನ, ೯-೮-೧೯೪೨)
೬	viii	(ಆತ್ಮಕಥೆ)
೭	viii	(ಯಂಗ್ ಇಂಡಿಯಾ, ೪-೬-೧೯೨೫)
೮	ix	(ಆತ್ಮಕಥೆ)
೯	ix	(ಆತ್ಮಕಥೆ)
೧೦	x	(ಯಂಗ್ ಇಂಡಿಯಾ, ೨-೩-೧೯೨೨)
೧೧	x	(ಯಂಗ್ ಇಂಡಿಯಾ, ೨-೩-೧೯೨೨)
೧೨	x	(ಹರಿಜನ, ೨೯-೮-೧೯೩೬)
೧೩	xi	(ಮಂಗಳ ಪ್ರಭಾತ)
೧೪	xi	(ಯಂಗ್ ಇಂಡಿಯಾ, ೪-೧೨-೧೯೨೪)
೧೫	xi	(ಹರಿಜನ, ೪-೪-೧೯೨೯)
೧೬	xi	(ಯಂಗ್ ಇಂಡಿಯಾ, ೪-೧೨-೧೯೨೪)
೧೭	xi	(ಯಂಗ್ ಇಂಡಿಯಾ, ೩-೪-೧೯೨೪
೧೮	xi	(ಯಂಗ್ ಇಂಡಿಯಾ, ೩-೪-೧೯೨೪)
೧೯	xii	(ಯಂಗ್ ಇಂಡಿಯಾ, ೩-೧೨-೧೯೨೬)
೨೦	xii	(ಹರಿಜನ, ೨೮-೩-೧೯೩೬),
೨೧	xii	(ಹರಿಜನ, ೧-೫-೧೯೩೭)
೨೨	xiii	(ಹರಿಜನ, ೧-೫-೧೯೩೭)

ಸೂಚೀ ಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ
೨೩	xiii	(ಹರಿಜನ, ೨-೩-೧೯೪೦)
೨೪	xiv	(ಹರಿಜನ, ೧-೫-೧೯೩೭)
೨೫	xiv	(ಹರಿಜನ, ೧-೫-೧೯೩೭)
೨೬	xv	(ಹರಿಜನ, ೧೩-೫-೧೯೩೯)
೨೭	xv	(ಹರಿಜನ, ೧೫-೭-೧೯೩೫)
೨೮	xv	(ಯಂಗ್ ಇಂಡಿಯಾ, ೧೨-೬-೧೯೨೪)
೨೯	xv	(ಯಂಗ್ ಇಂಡಿಯಾ, ೧೦-೧೦-೧೯೩೯)
೩೦	xvi	(ಬಾಂಬೆ ಕ್ರಾನಿಕಲ್, ೯-೮-೧೯೨೧)

ನನ್ನ ಸಮಕಾಲೀನರು

ವಿಷಯಮೂಲ ಸೂಚೀ

ಭಾಗ-೧

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೧	೫	ಹಿಂದೀ ನವಜೀವನ :	೫-೧-೧೯೨೮
೨	೬	ಪ್ರಾರ್ಥನಾ ಪ್ರವಚನ :	೧೩-೯-೧೯೪೭
೩	೬	”	೨೯-೧೨-೧೯೪೭
೪	೮	ಹಿಂದೀ ನವಜೀವನ :	೨೧-೭-೧೯೨೭
೫	೧೦	ಹರಿಜನಸೇವಕ :	೧೬-೫-೧೯೩೬
೬	೧೨	ಹಿಂದೀ ನವಜೀವನ :	೨೩-೧೧-೧೯೨೪
೭	೧೨	ಚೋರಸಾದಿನಿಂದ ಬರೆದ ಒಂದು ಪತ್ರದಿಂದ :	೨೮-೫-೧೯೩೫
೮	೧೩	ಪ್ರಾರ್ಥನಾಪ್ರವಚನ :	೨೯-೧೦-೧೯೪೭
೯	೧೪	ಹಿಂದೀ ನವಜೀವನ :	೧-೬-೧೯೨೪
೧೦	೧೫	ಮಹಾದೇವ ದೇಸಾಯಿ ದಿನಚರಿ :	೪-೭-೧೯೩೨
೧೧	೧೬	ಹರಿಜನಸೇವಕ :	೧೭-೧೨-೧೯೩೮
೧೨	೧೬	ಹರಿಜನಸೇವಕ :	೧೦-೮-೧೯೪೦
೧೩	೧೮	ಹಿಂದೀ ನವಜೀವನ :	೧೬-೯-೧೯೨೬
೧೪	೧೮	”	೨೮-೧೦-೧೯೨೬
೧೫	೧೮	ಪ್ರಾರ್ಥನಾ ಪ್ರವಚನ :	೩೦-೯-೧೯೪೭
೧೬	೧೯	ಪ್ರಾರ್ಥನಾ ಪ್ರವಚನ :	೩೦-೯-೧೯೩೧
೧೭	೨೦	ಹಿಂದೀ ನವಜೀವನ :	೬-೮-೧೯೩೧
೧೮	೨೧	ಹರಿಜನಸೇವಕ :	೧೯-೧-೧೯೩೪
೧೯	೨೩	”	೪-೧-೧೯೪೮
೨೦	೨೩	ಮಹಾದೇವ ದೇಸಾಯಿ ದಿನಚರಿ ಭಾಗ ೧,	೫-೧೧-೧೯೩೨

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೨೧	೨೬	ಪ್ರಾರ್ಥನಾ ಪ್ರವಚನ :	೫-೬-೧೯೪೭
೨೨	೨೭	" ದೋ ಖುದಾಯಿ ಖಿದ್‌ಮತ್‌ಗಾರ್ " ಪುಸ್ತಕದ ಭೂಮಿಕೆ	
೨೩	೨೮	ಹರಿಜನಸೇವಕ :	೧೯-೧೧-೧೯೩೮
೨೪	೨೮	ಪ್ರಾರ್ಥನಾ ಪ್ರವಚನ :	೧೧-೬-೧೯೪೭
೨೫	೨೮	"	೧೭-೬-೧೯೪೭
೨೬	೨೯	ಹಿಂದೀ ನವಜೀವನ :	೧-೧೨-೧೯೨೭
೨೭	೨೯	ಬಾಪೂ ಕೀ ಕಾರವಾಸ್‌ಕಹಾನೀ :	೨-೩-೧೯೪೪
೨೮	೩೨	ಹಮಾರೀ ಬಾ :	ಪುಟ-೨೭
೨೯	೩೨	" :	೧೮-೨-೪೫
೩೦	೩೮	ಮಹಾದೇವ ದೇಸಾಯಿ ದಿನಚರಿ :	ಭಾಗ-೧
೩೧	೩೯	ಹರಿಜನಸೇವಕ :	೧೫-೫-೧೯೪೧
೩೨	೪೦	ಪ್ರಾರ್ಥನಾ ಪ್ರವಚನ :	೧೬-೧೦-೧೯೪೮
೩೩	೪೧	ಹಿಂದೀ ನವಜೀವನ :	೧೯-೬-೧೯೨೫
೩೪	೪೧	ಮಹಾದೇವ ದೇಸಾಯಿ ದಿನಚರಿ :	೧೫-೬-೧೯೩೨
೩೫	೪೨	" :	೧೧-೧೦-೧೯೩೧
೩೬	೪೨	ಹಮಾರೀ ಬಾ :	೧೫-೩-೧೯೩೪
೩೭	೪೩	ಹಿಂದೀ ನವಜೀವನ :	೧೯-೫-೧೯೩೫
೩೮	೪೪	ಮಹಾದೇವ ದೇಸಾಯಿ ದಿನಚರಿ :	೨-೧೨-೧೯೩೨
೩೯	೪೫	ಹರಿಜನಸೇವಕ :	೧-೫-೧೯೪೨
೪೦	೫೨	ಇಂಡಿಯನ್ ಒಪಿನಿಯನ್ :	೧೯೧೨
೪೧	೫೩	೧೯೧೨ ರಲ್ಲಿ ಕಿಂಬರ್ಲಿ ಸಮಾರಂಭದ ಭಾಷಣದಿಂದ	
೪೨	೫೫	೧೯೧೭ ರಲ್ಲಿ ಉಮರೇಡದಲ್ಲಿ 'ಗೋಖಲೆ ಪುಸ್ತಕ ಭಂಡಾರ' ಉದ್ಘಾಟನಾ ಭಾಷಣದಿಂದ	
೪೩	೫೭	ಯಂಗ್ ಇಂಡಿಯಾ :	ಪುಟ ೯೦೫
೪೪	೫೯	ಹರಿಜನಸೇವಕ :	೯-೩-೧೯೩೪

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೪೫	೬೦	ಹರಿಜನಸೇವಕ :	೨೧-೧೦-೧೯೩೬
೪೬	೬೦	”	೯-೧೨-೧೯೩೯
೪೭	೬೦	ಮಹಾದೇವ ದೇಸಾಯಿ ದಿನಚರಿ :	ಭಾಗ-೧
೪೮	೬೧	ಹರಿಜನಸೇವಕ :	೩೦-೩-೧೯೪೦
೪೯	೬೨	”	೧೨-೮-೧೯೪೧
೫೦	೬೨	”	೧೨-೮-೧೯೪೧
೫೧	೬೪	”	೧೯-೫-೧೯೪೬
೫೨	೬೭	ಯಂಗ್ ಇಂಡಿಯಾ :	೪-೮-೧೯೨೦
೫೩	೭೦	ಹಿಂದೀ ನವಜೀವನ :	೬-೮-೧೯೨೨
೫೪	೭೫	ಪ್ರಾರ್ಥನಾ ಪ್ರವಚನ :	೧-೬-೧೯೪೭
೫೫	೭೮	ಹರಿಜನಸೇವಕ :	೨೩-೫-೧೯೩೬
೫೬	೮೦	”	೨೦-೮-೧೯೩೬
೫೭	೮೦	ಹಿಂದೀ ನವಜೀವನ :	೧೨-೧೧-೧೯೩೧
೫೮	೮೧	ಹರಿಜನಸೇವಕ :	೨೮-೬-೧೯೪೨
೫೯	೮೪	ಹಿಂದೀ ನವಜೀವನ :	೧೮-೬-೧೯೨೫
೬೦	೮೯	”	೨೫-೬-೧೯೨೫
೬೧	೯೪	”	೨೫-೬-೧೯೨೫
೬೨	೯೯	”	೨-೭-೧೯೨೫
೬೩	೧೦೦	”	೯-೭-೧೯೨೫
೬೪	೧೦೧	ಹರಿಜನಸೇವಕ :	೨೩-೧೧-೧೯೩೫
೬೫	೧೦೧	”	೧೨-೫-೧೯೪೬
೬೬	೧೦೨	೧೫-೮-೪೨ ರಂದು ಆಗಾಖಾನ್ ಅರಮನೆಯಿಂದ ಕಳಿಸಿದ ತಂತಿ	
೬೭	೧೦೨	ಬಾಪೂ ಕೀ ಕಾರವಾಸ್ ಕಹಾನಿ	
೬೮	೧೦೨	ಹರಿಜನಸೇವಕ :	೧೩-೮-೧೯೪೬
೬೯	೧೦೩	”	೧೮-೮-೧೯೪೬

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೭೦	೧೦೩	ಹರಿಜನಸೇವಕ	೧೮_೮_೧೯೪೬
೭೧	೧೦೪	”	೮-೬-೧೯೪೬
೭೨	೧೦೫	”	೮-೬-೧೯೪೬
೭೩	೧೦೬	ಮಹಾದೇವ ದೇಸಾಯಿ ದಿನಚರಿ	
೭೪	೧೦೭	ಹಿಂದೀ ನವಜೀವನ :	೬-೮-೧೯೨೫
೭೫	೧೦೮	ಹರಿಜನಸೇವಕ :	೭-೬-೧೯೩೯
೭೬	೧೦೮	”	೨೫-೧೧-೧೯೩೯
೭೭	೧೧೦	ಹಿಂದೀ ನವಜೀವನ	೧-೮-೧೯೨೬
೭೮	೧೧೦	”	೧-೮-೧೯೨೬
೭೯	೧೧೦	ವಿದ್ಯಾರ್ಥಿಗಳೊಡನೆ :	ಪುಟ ೨೦೩
೮೦	೧೧೧	ಹರಿಜನಸೇವಕ :	೩-೬-೧೯೩೯
೮೧	೧೧೧	ಹರಿಜನ :	೨೫-೧-೧೯೪೨
೮೨	೧೧೨	ಪ್ರಾರ್ಥನಾ ಪ್ರವಚನ :	೧-೪-೧೯೪೭
೮೩	೧೧೨	”	೨೯-೪-೧೯೪೭
೮೪	೧೧೨	”	೨೯-೪-೧೯೪೭
೮೫	೧೧೩	”	೨೧-೧-೧೯೪೮
೮೬	೧೧೩	ನೆಹರೂ ಯುವರ್ ನೇಬರ್ ಪ್ರಾಕ್ಕಥನದಿಂದ	
೮೭	೧೧೪	ಕೋಯಿ ಶಿಖಾಯತ್ ನಹಿ	ಪುಟ ೭೩
೮೮	೧೧೪	”	
೮೯	೧೧೪	ಮೋತಿಲಾಲರ ಮರಣದ ಬಗೆಗೆ ಕೊಟ್ಟ ಸಂದೇಶ	
೯೦	೧೧೬	ಪ್ರಾರ್ಥನಾಪ್ರವಚನ :	೨೦-೬-೧೯೪೬
೯೧	೧೧೬	ಹಿಂದೀ ನವಜೀವನ :	೧೫-೮-೧೯೪೭
೯೨	೧೧೭	”	೧೩-೬-೧೯೨೯
೯೩	೧೧೭	ವಿಜಯೀ ಬಾರಡೋಲಿ ;	ಪುಟ ೩೨೫
೯೪	೧೧೭	”	ಪುಟ ೪೨೬
೯೫	೧೧೯	ಹಿಂದೀ ನವಜೀವನ :	೧೩-೩-೧೯೩೦

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೯೬	೧೧೯	ಹಿಂದೀ ನವಜೀವನ	೧೪-೫-೧೯೩೧
೯೭	೧೨೦	ಮಹಾದೇವ ದೇಸಾಯಿ ದಿನಚರಿ :	೨೮-೮-೧೯೩೨
೯೮	೧೨೦	"	೨೮-೮-೧೯೩೨
೯೯	೧೨೦	"	೨೨-೧೦-೧೯೩೨
೧೦೦	೧೨೧	ಪ್ರಾರ್ಥನಾ ಪ್ರವಚನ :	೧೩-೧-೧೯೪೮
೧೦೧	೧೨೧	"	೧೫-೧-೧೯೪೮
೧೦೨	೧೨೨	ಹಿಂದೀ ನವಜೀವನ :	೨೫-೪-೧೯೨೯
೧೦೩	೧೨೩	ಹರಿಜನಸೇವಕ :	೧೦-೧೧-೧೯೩೩
೧೦೪	೧೨೩	ವಿದ್ಯಾರ್ಥಿಗಳೊಡನೆ :	ಪುಟ-೧೨೭
೧೦೫	೧೨೪	ಹರಿಜನಸೇವಕ :	೧೨-೧-೧೯೩೪
೧೦೬	೧೨೫	"	೧೫-೨-೧೯೪೨
೧೦೭	೧೩೪	ಸೇವಾಗ್ರಾಮ :	೨೮-೩-೧೯೪೭
೧೦೮	೧೩೫	ಸಮಾಜ ಸೇವಕ	
೧೦೯	೧೩೬	ಹಿಂದೀ ನವಜೀವನ :	೨೦-೮-೧೯೨೫
೧೧೦	೧೩೮	ನೇತಾಜೀ_ಜೀವನ ಮತ್ತು ಕೃತಿಯಿಂದ	
೧೧೧	೧೪೦	ಪ್ರಾರ್ಥನಾ ಪ್ರವಚನ :	೨-೧೧-೧೯೪೭
೧೧೨	೧೪೧	"	೨೩-೧-೧೯೪೮
೧೧೩	೧೪೨	ಹಿಂದೀ ನವಜೀವನ :	೨೫-೧೨-೧೯೨೭
೧೧೪	೧೪೩	ಬಾಪೂಕೀ ಕಾರವಾಸ್ ಕಹಾನಿ :	೨೪-೧೧-೧೯೪೨
೧೧೫	೧೪೩	"	೨೪-೧೧-೧೯೪೨
೧೧೬	೧೪೩	ಹಿಂದೀ ನವಜೀವನ	೨೬-೫-೧೯೨೭
೧೧೭	೧೪೪	ಹರಿಜನಸೇವಕ :	೨-೩-೧೯೪೦
೧೧೮	೧೪೫	"	೩-೩-೧೯೪೬
೧೧೯	೧೪೫	ವಿಶೇಷ ಕಾಂಗ್ರೆಸ್ ಅಧಿವೇಶನದ ಭಾಷಣದಿಂದ	೧೫-೯-೧೯೨೦
೧೨೦	೧೪೬	ಯಂಗ್ ಇಂಡಿಯಾ :	೧೬-೩-೧೯೨೧

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೧೨೧	೧೪೬	ಯಂಗ್ ಇಂಡಿಯಾ	೧-೬-೧೯೨೪
೧೨೨	೧೪೮	ಹಿಂದೀ ನವಜೀವನ :	೧೬-೩-೧೯೪೧
೧೨೩	೧೪೮	ಮಹಾದೇವ ದೇಸಾಯಿ ದಿನಚರಿ :	೨೭-೫-೧೯೩೨
೧೨೪	೧೪೮	ವಿದ್ಯಾರ್ಥಿಗಳೊಡನೆ :	ಪುಟ. ೨೯೨
೧೨೫	೧೫೦	ಹರಿಜನ ಸೇವಕ :	೨೧-೧-೧೯೪೨
೧೨೬	೧೫೨	"	೮-೧೨-೧೯೪೬
೧೨೭	೧೫೨	ಪ್ರಾರ್ಥನಾ ಪ್ರವಚನ:	೧೫-೧೦-೧೯೪೭
೧೨೮	೧೫೨	ಬಾಪೂ ಪತ್ರಗಳು :	ಪುಟ-೫
೧೨೯	೧೫೩	ಬಾಪೂಕೀ ಕಾರವಾಸ್ ಕಹಾನಿ :	೨೪-೯-೧೯೪೨
೧೩೦	೧೫೩	"	೩೦-೯-೧೯೪೨
೧೩೧	೧೫೪	"	೨೬-೧೧-೧೯೪೨
೧೩೨	೧೫೪	"	೧೩-೩-೧೯೪೪
೧೩೩	೧೫೪	ಪ್ರಾರ್ಥನಾ ಪ್ರವಚನ :	೧೦-೧೨-೧೯೪೭
೧೩೪	೧೫೫	ಹಿಂದೀ ನವಜೀವನ :	೩೦-೧-೧೯೨೧
೧೩೫	೧೫೫	"	೨೫-೧೨-೧೯೨೧
೧೩೬	೧೫೯	ಮಹಾದೇವ ದೇಸಾಯಿ ದಿನಚರಿ :	೪-೮-೧೯೩೨
೧೩೭	೧೬೦	ಯಂಗ್ ಇಂಡಿಯಾ ಭಾಗ ೧	೭೩೩
೧೩೮	೧೬೦	"	೭೩೩
೧೩೯	೧೬೦	ಮಹಾದೇವ ದೇಸಾಯಿ ದಿನಚರಿ :	೧೫-೧೧-೧೯೩೨
೧೪೦	೧೬೧	ಹರಿಜನಸೇವಕ :	೧೦-೨-೧೯೪೬
೧೪೧	೧೬೧	ದೇಶಪೂಜ್ಯ ಶ್ರೀ ರಾಜೇಂದ್ರ ಪ್ರಸಾದ್ ಪುಸ್ತಕದಿಂದ	
೧೪೨	೧೬೧	ರಾಷ್ಟ್ರವಾಣಿ	೩-೧೨-೧೯೪೫
೧೪೩	೧೬೧	"	೩-೧೨-೧೯೪೫
೧೪೪	೧೬೨	ಹರಿಜನಸೇವಕ :	೨೭-೯-೧೯೩೫
೧೪೫	೧೬೩	ಹಿಂದೀ ನವಜೀವನ :	೪-೫-೧೯೨೪
೧೪೬	೧೬೩	ಪ್ರಾರ್ಥನಾ ಪ್ರವಚನ :	೧೮-೧೦-೧೯೪೭

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೧೪೭	೧೬೪	ಪ್ರಾರ್ಥನಾ ಪ್ರವಚನ :	೨೯-೧೦-೧೯೪೭
೧೪೮	೧೬೫	ಹಿಂದೀ ನವಜೀವನ	
೧೪೯	೧೬೮	”	೯-೭-೧೯೨೫
೧೫೦	೧೭೧	”	೩೦-೧೧-೧೯೨೪
೧೫೧	೧೭೨	”	೧೧-೧೨-೧೯೨೧
೧೫೨	೧೭೫	”	೨೨-೧೧-೧೯೨೮
೧೫೩	೧೭೬	೨೭-೧೨-೩೩ರಂದು ಮಾಡಿದ ಭಾಷಣದಿಂದ	
೧೫೪	೧೭೬	ಹರಿಜನಸೇವಕ :	೨೩-೧೧-೧೯೩೪
೧೫೫	೧೭೭	ಪ್ರಾರ್ಥನಾ ಪ್ರವಚನ :	೧೮-೧೧-೧೯೩೧
೧೫೬	೧೭೮	ಹಿಂದೀ ನವಜೀವನ :	೯-೪-೧೯೩೧
೧೫೭	೧೭೯	ಹರಿಜನಸೇವಕ :	೧೪-೭-೧೯೩೯
೧೫೮	೧೮೧	”	೩-೩-೧೯೪೬
೧೫೯	೧೮೨	”	೩-೩-೧೯೪೬
೧೬೦	೧೮೪	ಮಹಾದೇವ ದೇಸಾಯಿ ದಿನಚರಿ :	೧-೭-೧೯೩೩
೧೬೧	೧೮೪	ಹಿಂದೀ ನವಜೀವನ :	೧-೬-೧೯೨೪
೧೬೨	೧೮೬	”	೨೩-೧೨-೧೯೨೬
೧೬೩	೧೯೦	”	೬-೧-೧೯೨೭
೧೬೪	೧೯೫	”	೬-೧-೧೯೨೭
೧೬೫	೧೯೮	”	೧೬-೧-೧೯೨೭
೧೬೬	೨೦೦	”	೩೧-೩-೧೯೨೭
೧೬೭	೨೦೦	”	೨೧-೧-೧೯೪೨
೧೬೮	೨೦೧	ಯಂಗ್ ಇಂಡಿಯಾ :	೨೫-೫-೧೯೨೧
೧೬೯	೨೦೧	ವಿದ್ಯಾರ್ಥಿಗಳೊಡನೆ	
೧೭೦	೨೦೨	ಹರಿಜನಸೇವಕ :	೨೧-೪-೧೯೪೬
೧೭೧	೨೦೩	ಹಿಂದೀ ನವಜೀವನ :	೩೦-೪-೧೯೩೧
೧೭೨	೨೦೫	”	೧೫-೭-೧೯೨೬

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೧೭೩	೨೦೬	ಹರಿಜನಸೇವಕ :	೧೮-೧-೧೯೪೨
೧೭೪	೨೦೭	ಮಹಾದೇವ ದೇಸಾಯಿ ದಿನಚರಿ :	೧೯-೭-೧೯೩೨
೧೭೫	೨೦೮	ಪ್ರಾರ್ಥನಾ ಪ್ರವಚನ :	೨೦-೭-೧೯೪೭
೧೭೬	೨೦೯	ಹಿಂದೀ ನವಜೀವನ :	೪-೨-೧೯೨೬
೧೭೭	೨೦೯	ಹರಿಜನಸೇವಕ :	೩೦-೩-೧೯೪೦
೧೭೮	೨೧೦	”	೧೩-೪-೧೯೪೦
೧೭೯	೨೧೧	ದೀನಬಂಧು ಆಂಡ್ರೂಸ್ :	ಪುಟ ೧೦೨
೧೮೦	೨೧೨	ಹರಿಜನ ಸೇವಕ :	೧೫-೬-೧೯೪೦
೧೮೧	೨೧೨	ಪ್ರಾರ್ಥನಾ ಪ್ರವಚನ :	೫-೪-೧೯೪೭
೧೮೨	೨೧೩	”	೧೦-೬-೧೯೪೭
೧೮೩	೨೧೬	”	೨೮-೯-೧೯೪೭
೧೮೪	೨೧೭	ನನ್ನ ಜೈಲಿನ ಅನುಭವಗಳು ಮ. ಗಾಂಧೀ	
೧೮೫	೨೧೭	ಯಂಗ್ ಇಂಡಿಯಾ :	ಪುಟ ೨೦೭
೧೮೬	೨೨೮	ಹಿಂದೀ ನವಜೀವನ :	೨೦-೯-೧೯೨೮
೧೮೭	೨೨೮	ಪ್ರಾರ್ಥನಾ ಪ್ರವಚನ .	೧೦-೬-೧೯೪೭
೧೮೮	೨೩೦	ಮಹಾದೇವ ದೇಸಾಯಿ ದಿನಚರಿ :	೨೮-೩-೧೯೩೨
೧೮೯	೨೩೨	ಯರವಾಡಾ ಮಂದಿರ :	
೧೯೦	೨೩೫	ಪ್ರಾರ್ಥನಾಪ್ರವಚನ :	೧೨-೭-೧೯೪೭
೧೯೧	೨೩೫	”	೮-೧೧-೧೯೪೭
೧೯೨	೨೩೬	ಹರಿಜನಸೇವಕ :	೧೧ ೩-೧೯೩೯
೧೯೩	೨೩೯	ಹಿಂದೀ ನವಜೀವನ :	೨೨-೭-೧೯೨೬
೧೯೪	೨೪೦	ಮಹಾದೇವ ದೇಸಾಯಿ ದಿನಚರಿ :	೩-೫-೧೯೩೨
೧೯೫	೨೪೧	ಬಾಪೂಕೀ ಕಾರವಾಸ್ ಕಹಾನಿ :	೩-೧೨-೧೯೪೨

ಭಾಗ–೨

೧	೨೪೬	ಹರಿಜನಸೇವಕ :	೧೩-೭-೧೯೪೦
೨	೨೪೭	ಪ್ರಾರ್ಥನಾ ಪ್ರವಚನ :	೬-೪-೧೯೪೭

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೩	೨೪೮	ಪ್ರಾರ್ಥನಾ ಪ್ರವಚನ :	೧೨-೬-೧೯೪೭
೪	೨೫೦	ಹರಿಜನಸೇವಕ :	೧೯-೧೧-೧೯೩೮
೫	೨೫೧	”	೨೮-೧-೧೯೩೯
೬	೨೫೪	”	೨೦-೭-೧೯೪೦
೭	೨೫೬	”	೫-೭-೧೯೪೨
೮	೨೫೭	ಮಹಾದೇವ ದೇಸಾಯಿ ದಿನಚರಿ :	೩೧-೩-೧೯೪೨
೯	೨೫೮	ಬಾಪೂಕೀ ಕಾರವಾಸ್‌ಕಹಾನಿ :	೨೭-೨-೧೯೪೪
೧೦	೨೫೮	”	೪-೩-೧೯೪೪
೧೧	೨೬೦	ಹಮಾರೀ ಬಾ	
೧೨	೨೬೧	ಹಿಂದೀ ನವಜೀವನ :	೩-೫-೧೯೨೮
೧೩	೨೬೧	”	೧೩-೫-೧೯೨೮
೧೪	೨೬೪	ಮಹಾದೇವ ದೇಸಾಯಿ ದಿನಚರಿ :	೮-೭-೧೯೩೨
೧೫	೨೭೨	ಮಹಾತ್ಮಾ ಗಾಂಧೀ, ರಾಮಚಂದ್ರಶರ್ಮರ ಪುಸ್ತಕದಿಂದ	
೧೬	೨೭೪	ಯಂಗ್ ಇಂಡಿಯಾ	ಪುಟ—೯೦೫
೧೭	೨೭೬	ಹರಿಜನ ಸೇವಕ :	೨೦-೧-೪೦
೧೮	೨೭೭	ಪ್ರಾರ್ಥನಾ ಪ್ರವಚನ :	೧೩-೬-೧೯೪೭
೧೯	೨೭೯	”	೧೬-೬-೧೯೪೭
೨೦	೨೮೦	ಹರಿಜನಸೇವಕ :	೨೮-೧-೧೯೩೯
೨೧	೨೮೨	”	೨-೩-೧೯೨೦
೨೨	೨೮೩	”	೨೬-೪-೧೯೪೨
೨೩	೨೮೪	ಪ್ರಾರ್ಥನಾ ಪ್ರವಚನ :	೧-೬-೧೯೪೭
೨೪	೨೮೬	ಹರಿಜನಸೇವಕ :	೨೬-೯-೧೯೩೬
೨೫	೨೮೭	”	೨೬-೯-೧೯೩೬
೨೬	೨೮೭	ಬಾಪೂಕೀ ಕಾರವಾಸ್ ಕಹಾನೀ :	೨೮-೮-೧೯೨೮
೨೭	೩೮೮	”	೧೮-೯-೧೯೪೨

ಸೂಚೀಸಂಖ್ಯೆ	ಪುಟ ಸಂಖ್ಯೆ	ವಿಷಯಮೂಲ	
೨೮	೨೮೮	ಬಾಪೂಕೀ ಕಾರವಾಸ್ ಕಹಾನೀ	೧೮-೯-೧೯೪೨
೨೯	೨೮೯	”	೨೬-೯-೧೯೪೨
೩೦	೨೯೦	”	೩-೧೨-೧೯೪೨
೩೧	೨೯೧	ಜಮುನಾಲಾಲಜೀ	ಪುಟ. ೧೦
೩೨	೨೯೪	ಹಿಂದೀ ನವಜೀವನ :	೩೧-೩-೧೯೨೯
೩೩	೨೯೪	ಹರಿಜನಸೇವಕ :	೨೩-೩-೧೯೪೦
೩೪	೨೯೬	”	೨೦-೩-೧೯೪೦
೩೫	೨೯೮	ಹಿಂದೀ ನವಜೀವನ :	೨೬-೮-೧೯೨೮
೩೬	೩೦೦	”	೧೭-೩-೧೯೨೭
೩೭	೩೦೧	ಹರಿಜನಸೇವಕ :	೨೭-೭-೧೯೪೦
೩೮	೩೦೫	”	೧೩-೭-೧೯೪೦
೩೯	೩೦೬	ಹಿಂದೀ ನವಜೀವನ :	೧೪-೧೨-೧೯೩೪
೪೦	೩೦೬	”	೧೭-೧೨-೧೯೨೫
೪೧	೩೧೦	ಹರಿಜನಸೇವಕ :	೮-೧೧-೧೯೩೧
೪೨	೩೧೧	ಹಿಂದೀ ನವಜೀವನ :	೧೭-೩-೧೯೨೭
೪೩	೩೧೨	ಬಾಪೂಕೀ ಕಾರ್‌ವಾಸ್ ಕಹಾನಿ :	೧೯-೯-೧೯೪೨
೪೪	೩೧೨	ಮಹಾದೇವ ದೇಸಾಯಿ ದಿನಚರಿ :	೪-೭-೧೯೩೨
೪೫	೩೧೩	ಹಿಂದೀ ನವಜೀವನ :	೭-೩-೧೯೩೯
೪೬	೩೧೩	ಪ್ರಾರ್ಥನಾ ಪ್ರವಚನ:	೮-೭-೧೯೪೨

A few Navajivan Publications in English

1.	Homage to the Departed	Rs. 2-50
2.	Mahadev Desai's Diary Part (I)	Rs. 5-00
3.	Mahatma Gandhi—The Last Phase-1	Rs. 20-00
4.	,, ,, (II)	Rs. 20-00
5.	Gandhi Wields the weapon of Moral-Power—Jene Sharp	Rs. 5-00
6.	Anecdotes From Bapu's Life	0-40
7.	At the Feet of Bapu	4-00
8.	Bapu as I Saw Him	2-50
9.	Bapu My Mother	0-50

NAVAJIVAN PUBLISHING HOUSE

AHMEDABAD-14